ಕರ್ನಾಟಕ ಸರ್ಕಾರ

ಪದವಿ ಪೂರ್ವ ಶಿಕ್ಷಣ ಇಲಾಖೆ

18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 012

# ಲೆಕ್ಕಶಾಸ್ತ್ರ

## ಲಾಭಕ್ಕಲ್ಲದ ಸಂಸ್ಥೆಯ ಮತ್ತು ಪಾಲುದಾರಿಕೆಯ ಲೆಕ್ಕಬರಹ

## ದ್ವಿತೀಯ ಪಿ.ಯು.ಸಿ. ಪಠ್ಯಪುಸ್ತಕ–1

# ACCOUNTANCY

## Not-for-Profit Organisation and Partnership Accounts

## Textbook for II PUC-1

NATIONAL COUNCIL OF EDUCATIONAL RESEARCH AND TRAINING

ISBN 81-7450-640-3

*First Edition*
January 2007 Pausa 1928

**Reprinted**
October 2007 Kartika 1929
February 2009 Magha 1930
January 2010 Magha 1931
January 2011 Magha 1932
February 2012 Magha 1933
December 2013 Pausa 1935
April 2015 Chaithra 1937
December 2015 Pausa 1937

**PD 60T HE**

© **National Council of Educational Research and Training, 2007**

Printed on 80 GSM paper with NCERT watermark

Published at the Publication Division by the Secretary, National Council of Educational Research and Training, Sri Aurobindo Marg, New Delhi 110 016 and printed at Anand Brother, C-146,Naraina Industrial Area, Phase I, New Delhi 110 28

ALL RIGHTS RESERVED

* No part of this publication may be reproduced, stored in a retrieval system or transmitted, in any form or by any means, electronic, mechanical, photocopying, recording or otherwise without the prior permission of the publisher.
* This book is sold subject to the condition that it shall not, by way of trade, be lent, re-sold, hired out or binding or cover other than that in which it is published.
* The correct price of this publication is the price printed on this page. Any revised price indicated by a rubber stamp or bya sticker or by any other means is incorrect and should be unacceptable.

OFFICES OF THE PUBLICATION DIVISION, NCERT

NCERT Campus
Sri Aurobindo Marg
New Delhi - 110 016 Phone : 011-26562708

108, 100 Fort Road
Hosdakere Halli Extension
Banashankari III Stage
Bangalore 560 085 Phone : 080-26725740

Navjivan Trust Building
P.O. Navjivan
Ahmedabad 380 014 Phone : 079-27541446

CWC Campus
Opp. Dhankal Bus Stop
Panihati
Kolkata 700 144 Phone: 033-25530454

CWC Complex
Mallgaon
Guwahati 781 021 Phone : 0361-2674869

**Publication Team**

| | | |
|---|---|---|
| Head. Publication Department | : | Dinesh Kumar |
| Chief Editor | : | Shveta Uppal |
| Chief Business Manager | : | Gautam Ganguly |
| Chief Production Officer (I/C) | : | Arun Chitkara |
| Assistant Editor | : | Gobind Ram |
| Production Assistant | : | Rajesh Pippal |

**Cover**
Shweta Rao

# ನಿರ್ದೇಶಕರ ಸಂದೇಶ

ಆತ್ಮೀಯ ವಿದ್ಯಾರ್ಥಿಗಳೇ,

ಪ್ರತಿ ವಿದ್ಯಾರ್ಥಿಯು ಮಹತ್ತರವಾದ ಕನಸು ಕಾಣಲು ಹಾಗೂ ಆ ಕನಸುಗಳನ್ನು ಸಾಕಾರಗೊಳಿಸಿಕೊಂಡು ಎತ್ತರದ ಸ್ಥಾನಕ್ಕೇರಲು ಮತ್ತು ಜೀವನದ ಸವಾಲುಗಳನ್ನು ಯಶಸ್ವಿಯಾಗಿ ನಿಭಾಯಿಸಲು ಸಮರ್ಥನಾಗುವಂತೆ ಮಾಡಲು ಅಗತ್ಯವಾದ ಎಲ್ಲಾ ಸಾಧನಗಳನ್ನು ಪೂರೈಸಲು ಕರ್ನಾಟಕದ ಪದವಿ ಪೂರ್ವ ಶಿಕ್ಷಣ ಇಲಾಖೆಯು ಶ್ರಮಿಸುತ್ತಿದೆ. ಈ ಹಿನ್ನೆಲೆಯಲ್ಲಿ **"ವ್ಯಕ್ತಿ ತಾನು ಸ್ವಾವಲಂಬಿಯಾಗಲು ಸಮರ್ಥನಾಗುವಂತೆ ಮಾಡುವುದೇ ನಿಜವಾದ ಶಿಕ್ಷಣ"** ಎಂಬ ಸ್ವಾಮಿ ವಿವೇಕಾನಂದರ ಮಾತು ಸೂಕ್ತವಾಗಿದೆ.

ಈ ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿರುವ ವಿಷಯಗಳು ಮುಂದಿನ ಹಂತದ ಅಧ್ಯಯನಕ್ಕೆ ನಿಮ್ಮನ್ನು ಸಜ್ಜುಗೊಳಿಸುವ ಉದ್ದೇಶದಿಂದ ರಚಿಸಲಾಗಿದೆ.

ನಿಮ್ಮ ವಿದ್ಯಾಭ್ಯಾಸದ ಪಯಣವು ಸುಗಮವಾಗಿ ಸಾಗಿ, ನೀವು ರಾಷ್ಟ್ರದ ಜವಾಬ್ದಾರಿಯುತ ಪ್ರಜೆಯಾಗಿ ಹೊರಹೊಮ್ಮಿ, ಸಮಾಜದ ಏಳಿಗೆಗಾಗಿ ಕಾಣಿಕೆಯನ್ನು ಹಿಂತಿರುಗಿಸುವ ಸ್ಥಾನದಲ್ಲಿ ನಿಮ್ಮನ್ನು ನೋಡಲು ಇಚ್ಛಿಸುತ್ತೇನೆ.

ಶುಭಾಶಯಗಳೊಂದಿಗೆ,

**ಶ್ರೀಮತಿ ಸಿ. ಶಿಖಾ,** ಭಾ.ಆ.ಸೇ.,
ನಿರ್ದೇಶಕರು
ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.

# ದ್ವಿತೀಯ ಪಿ.ಯು.ಸಿ. ಲೆಕ್ಕಶಾಸ್ತ್ರ ಪಠ್ಯ ಪುಸ್ತಕ ಅನುವಾದ ಸಮಿತಿ

**ಗೌರವಾಧ್ಯಕ್ಷರು :** **ಶ್ರೀಮತಿ ಸಿ. ಶಿಖಾ,** ಭಾ.ಆ.ಸೇ.,
ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.

**ಅಧ್ಯಕ್ಷರು :** **ಶ್ರೀ ಜೆ.ಎಸ್. ಪೂಜೇರಿ,** ಪ್ರಾಚಾರ್ಯರು,
ಬಾಲಕರ ಸರಕಾರಿ ಪದವಿ ಪೂರ್ವ ಕಾಲೇಜು, ವಿಜಯಪುರ.

**ಸಂಚಾಲಕರು :** **ಶ್ರೀ ರಾಜಶೇಖರ್ ವಿ.,** ಪ್ರಾಚಾರ್ಯರು,
ಸರಕಾರಿ ಪದವಿ ಪೂರ್ವ ಕಾಲೇಜು, ಡಿ.ಜೆ. ಹಳ್ಳಿ, ಬೆಂಗಳೂರು.

**ಸದಸ್ಯರು :** **ಶ್ರೀ ನಾಗರಾಜ ವಿ. ಕಾಗಲಕರ್,** ಪ್ರಾಚಾರ್ಯರು,
ಸರಕಾರಿ ಪದವಿ ಪೂರ್ವ ಕಾಲೇಜು, ಟಿ.ಕೆ. ರಸ್ತೆ, ಹಳೇನಗರ, ಭದ್ರಾವತಿ, ಜಿಲ್ಲೆ: ಶಿವಮೊಗ್ಗ

**ಶ್ರೀ ಕೆ.ಎ. ಉಪ್ಪಾರ,** ಪ್ರಾಚಾರ್ಯರು,
ಸರಕಾರಿ ಪದವಿ ಪೂರ್ವ ಕಾಲೇಜು, ಲಚ್ಯಾಣ, ತಾ: ಇಂಡಿ, ಜಿಲ್ಲಾ: ವಿಜಯಪುರ

**ಶ್ರೀ ಬಿ.ಆರ್. ಗೊಡ್ಡಾಳೆ,** ಪ್ರಾಚಾರ್ಯರು,
ಎಸ್.ಆರ್.ಎ. ಪದವಿ ಪೂರ್ವ ಕಾಲೇಜು, ಬನಹಟ್ಟಿ, ತಾ: ಜಮಖಂಡಿ, ಜಿಲ್ಲಾ: ಬಾಗಲಕೋಟೆ

**ಶ್ರೀ ಎಚ್.ಜಿ. ಡಂಬಳಕರ,** ಪ್ರಾಚಾರ್ಯರು
ಜೆ.ಎ.ಪದವಿ ಪೂರ್ವ ಕಾಲೇಜು, ಅಥಣಿ, ಜಿಲ್ಲೆ: ಬೆಳಗಾವಿ

**ಶ್ರೀ ಎಸ್.ಬಿ. ಸಾತಲಗಾಂವ,** ಆಯ್ಕೆ ಶ್ರೇಣಿ ಉಪನ್ಯಾಸಕರು,
ಕೆ.ಎಲ್.ಇ. ಸಂಸ್ಥೆಯ ಎಸ್.ಸಿ.ಪಿ. ಪ.ಪೂ. ಕಾಲೇಜು, ಮಹಾಲಿಂಗಪುರ, ತಾ: ಮುಧೋಳ, ಜಿಲ್ಲೆ: ಬಾಗಲಕೋಟೆ.

**ಶ್ರೀ ಎಂ.ಎಸ್. ಹಾಲಭಾವಿ,** ಆಯ್ಕೆ ಶ್ರೇಣಿ ಉಪನ್ಯಾಸಕರು,
ಶ್ರೀ ಫ.ಶೀ. ಪ.ಪೂ. ಕಾಲೇಜು ಸುರೇಬಾನ, ತಾ: ರಾಮದುರ್ಗ, ಜಿಲ್ಲೆ: ಬೆಳಗಾವಿ

**ಶ್ರೀ ಪ್ರಭಾಕರ ರೆಡ್ಡಿ ಕೆ.** ಆಯ್ಕೆ ಶ್ರೇಣಿ ಉಪನ್ಯಾಸಕರು,
ಸರಕಾರಿ ಪದವಿ ಪೂರ್ವ ಕಾಲೇಜು, ಪೀಣ್ಯ, ಬೆಂಗಳೂರು.

**ಶ್ರೀ ಎಲ್.ಜಿ. ಕುಂಬಾರ,** ಆಯ್ಕೆ ಶ್ರೇಣಿ ಉಪನ್ಯಾಸಕರು,
ಬಾಲಕರ ಸರಕಾರಿ ಪದವಿ ಪೂರ್ವ ಕಾಲೇಜು, ವಿಜಯಪುರ.

**ಶ್ರೀ ಜಿ.ಸಿ. ಗೋಪಾಲ ರೆಡ್ಡಿ,** ಆಯ್ಕೆ ಶ್ರೇಣಿ ಉಪನ್ಯಾಸಕರು,
ಮುರಳಿ ಪ.ಪೂ. ಕಾಲೇಜು, ನೆಲಮಂಗಲ, ಜಿಲ್ಲೆ: ಬೆಂಗಳೂರು ಗ್ರಾಮಾಂತರ.

**ಶ್ರೀ ಕೆ.ಎನ್. ಮಂಜುನಾಥ ಭಟ್,** ಆಯ್ಕೆ ಶ್ರೇಣಿ ಉಪನ್ಯಾಸಕರು,
ಎಂ.ಇ.ಎಸ್. ಎಸ್.ಎಸ್.ಎಂ. ಪ.ಪೂ. ಕಾಲೇಜು, ಚಿಕ್ಕಮಗಳೂರು.

**ಶ್ರೀ ಸಿ.ಹೆಚ್. ಗೌಡರ,** ಆಯ್ಕೆ ಶ್ರೇಣಿ ಉಪನ್ಯಾಸಕರು,
ಎಂ.ಹೆಚ್. ಮೆಣಸಗಿ ಸ್ವತಂತ್ರ ಪ.ಪೂ. ಕಾಲೇಜು, ಕೆರೂರು, ತಾ: ಬದಾಮಿ, ಜಿಲ್ಲೆ: ಬಾಗಲಕೋಟೆ.

**ಶ್ರೀ ಕೃಷ್ಣಮೂರ್ತಿ ಜಿ.,** ಆಯ್ಕೆ ಶ್ರೇಣಿ ಉಪನ್ಯಾಸಕರು,
ಸರಕಾರಿ ಪದವಿ ಪೂರ್ವ ಕಾಲೇಜು, ನಾಗವಲ್ಲಿ, ಜಿಲ್ಲೆ: ತುಮಕೂರು.

**ಶ್ರೀ ಮಲ್ಲಿಕಾರ್ಜುನ ಕೆ.ಎ.,** ಆಯ್ಕೆ ಶ್ರೇಣಿ ಉಪನ್ಯಾಸಕರು,
ಸರಕಾರಿ ಪ.ಪೂ. ಕಾಲೇಜು, ದಂಡಿನದಿಬ್ಬ, ತಾ: ಮಧುಗಿರಿ, ಜಿಲ್ಲೆ: ತುಮಕೂರು.

**ಶ್ರೀ ಬಸಪ್ಪ ನಾಗೋಲಿ,** ಆಯ್ಕೆ ಶ್ರೇಣಿ ಉಪನ್ಯಾಸಕರು,
ಶ್ರೀಮತಿ ಎಂ.ಎನ್.ಎಂ. ಬಾಲಕಿಯರ ಸರಕಾರಿ ಪ.ಪೂ. ಕಾಲೇಜು, ಗಂಗಾವತಿ, ಜಿಲ್ಲೆ: ಕೊಪ್ಪಳ.

**ಡಾ॥ ಎಸ್. ಶಿವರಾಜ್,** ಆಯ್ಕೆ ಶ್ರೇಣಿ ಉಪನ್ಯಾಸಕರು,
ಸರಕಾರಿ ಪ.ಪೂ. ಕಾಲೇಜು, ಜವಳಗೇರಾ, ತಾ: ಸಿಂಧನೂರ, ಜಿಲ್ಲೆ: ರಾಯಚೂರ

**ಶ್ರೀ ಪ್ರಕಾಶ್ ಎಸ್.,** ಆಯ್ಕೆ ಶ್ರೇಣಿ ಉಪನ್ಯಾಸಕರು,
ಸರಕಾರಿ ಪ.ಪೂ. ಕಾಲೇಜು, ತ್ಯಾಮಗೊಂಡ್ಲು, ಜಿಲ್ಲೆ: ಬೆಂಗಳೂರು ಗ್ರಾಮಾಂತರ.

**ಶ್ರೀ ಮಹಾಬಲೇಶ್ವರ ತುಂಗಾ,** ಹಿರಿಯ ಉಪನ್ಯಾಸಕರು,
ವಿಜಯ ಪ.ಪೂ. ಕಾಲೇಜು, ಜಯನಗರ, 4ನೇ ಹಂತ, ಬೆಂಗಳೂರು.

**ಶ್ರೀ ವ್ಹಿ.ಎಲ್. ಕಾಮಕರ,** ಹಿರಿಯ ಉಪನ್ಯಾಸಕರು,
ಸರಕಾರಿ ಸ್ವತಂತ್ರ ಪ.ಪೂ. ಕಾಲೇಜು, ನೇಸರಗಿ, ತಾ: ಬೈಲಹೊಂಗಲ, ಜಿಲ್ಲೆ: ಬೆಳಗಾವಿ

**ಶ್ರೀ ಯು.ಎಸ್. ಶಿಂದೆ,** ಹಿರಿಯ ಉಪನ್ಯಾಸಕರು,
ಆರ್.ಡಿ. ಪದವಿ ಪೂರ್ವ ಕಾಲೇಜು, ಚಿಕ್ಕೋಡಿ, ಜಿಲ್ಲಾ: ಬೆಳಗಾವಿ

## ಪರಿಶೀಲನಾ ಸಮಿತಿ

**ಅಧ್ಯಕ್ಷರು** : **ಡಾ॥ ಎಂ.ಆರ್. ಸೊಲ್ಲಾಪುರ,** ನಿರ್ದೇಶಕರು,
ಪಿ.ಜಿ.ಡಿ.ಎಂ.ಎಸ್. ಮತ್ತು ರೀಸರ್ಚ್ ಸೆಂಟರ್, ಎಸ್.ಐ.ಟಿ., ಬಿ.ಎಚ್. ರಸ್ತೆ,
ತುಮಕೂರು.

**ಸದಸ್ಯರು** : **ಡಾ॥ ಎಸ್.ಓ. ಹಲಸಗಿ,** ಸಹ ಪ್ರಾಧ್ಯಾಪಕರು,
ಎಸ್.ಎಂ.ಎ.ಟಿ. ಶಿವಾನಂದ ಕಾಲೇಜು, ಕಾಗವಾಡ, ತಾ: ಅಥಣಿ, ಜಿಲ್ಲೆ: ಬೆಳಗಾವಿ

**ಡಾ॥ ಆರ್.ಎಂ. ಪಾಟೀಲ,** ಸಹ ಪ್ರಾಧ್ಯಾಪಕರು,
ಜಿ.ಪಿ.ಪೋರವಾಲ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಸಿಂದಗಿ, ಜಿಲ್ಲೆ: ವಿಜಯಪುರ

**ಡಾ॥ ವೈ.ಜಿ. ಬಾಳಿಗಟ್ಟಿ,** ಸಹಾಯಕ ಪ್ರಾಧ್ಯಾಪಕರು ಹಾಗೂ ಪ್ರಾಚಾರ್ಯರು,
ಬಿ.ಎಂ.ಪಿ ವಾಣಿಜ್ಯ ಮಹಾವಿದ್ಯಾಲಯ, ಬೈಲಹೊಂಗಲ, ಜಿಲ್ಲೆ: ಬೆಳಗಾವಿ

## ಸಹಕಾರ

**ಶ್ರೀ ವೈ.ಹೆಚ್. ಇಲ್ಲಾಳ,** ಜಂಟಿ ನಿರ್ದೇಶಕರು (ಶೈಕ್ಷಣಿಕ), ಪ.ಪೂ.ಶಿ.ಇಲಾಖೆ, ಬೆಂಗಳೂರು.

**ಶ್ರೀ ಅಶೋಕ ಕುಮಾರ್,** ಉಪನಿರ್ದೇಶಕರು (ಶೈಕ್ಷಣಿಕ), ಪ.ಪೂ.ಶಿ.ಇಲಾಖೆ, ಬೆಂಗಳೂರು.

**ಶ್ರೀ ಮಹಮ್ಮದ್ ಜಿಯಾವುಲ್ಲಾ ಖಾನ್,** ಸಹಾಯಕ ನಿರ್ದೇಶಕರು (ಶೈಕ್ಷಣಿಕ), ಪ.ಪೂ.ಶಿ.ಇಲಾಖೆ, ಬೆಂಗಳೂರು.

**ಡಾ॥ ಶ್ರೀನಾಥ್,** ಶಾಖಾಧಿಕಾರಿಗಳು (ಶೈಕ್ಷಣಿಕ), ಪ.ಪೂ.ಶಿ.ಇಲಾಖೆ, ಬೆಂಗಳೂರು.

## ACKNOWLEDGEMENT By
### Department of Pre-University Education, Bangalore

The Department of Pre-university Education, Bangalore with immense pleasure acknowledges the efforts of National Council of Educational Research and Training and its Textbook Development Committee, Honourable Chairperson, Chief Advisor, Member and Member co-ordinators for giving us a valuable textbook for Accountancy for XI Standard (II P.U.C.) of Karnataka Commerce stream students.

The Department offers special thanks to the Authors of the Accountancy Book who have created a valuable Textbook with their innovative knowledge, thereby the book becomes relevant to present day needs.

The Deparatment gratefully acknowledges the contributions of all those experts who have contributed directly or indirectly to make the book more valuable and useful to the students and teachers.

# Foreword

The *National Curriculum Framework* (NCF), 2005, recommends that children's life at school must be linked to their life outside the school. This principle marks a departure from the legacy of bookish learning which continues to shape our system and causes a gap between the school, home and community. The syllabi and textbooks developed on the basis of NCF signify an attempt to implement this basic idea. They also attempt to discourage rote learning and the maintenance of sharp boundaries between different subject areas. We hope these measures will take us significantly further in the direction of a child-centred system of education outlined in the *National Policy on Educatio*n (1986).

The success of this effort depends on the steps that school principals and teachers will take to encourage children to reflect on their own learning and to pursue imaginative activities and questions. We must recognise that, given space, time and freedom, children generate new knowledge by engaging with the information passed on to them by adults. Treating the prescribed textbook as the sole basis of examination is one of the key reasons why other resources and sites of learning are ignored. Inculcating creativity and initiative is possible if we perceive and treat children as participants in learning, not as receivers of a fixed body of knowledge.

These aims imply considerable change in school routines and mode of functioning. Flexibility in the daily time-table is as necessary as rigour in implementing the annual calendar so that the required number of teaching days are actually devoted to teaching. The methods used for teaching and evaluation will also determine how effective this textbook proves for making children's life at school a happy experience, rather than a source of stress or boredom. Syllabus designers have tried to address the problem of curricular burden by restructuring and reorienting knowledge at different stages with greater consideration for child psychology and the time available for teaching. The textbook attempts to enhance this endeavour by giving higher priority and space to opportunities for contemplation and wondering, discussion in small groups, and activities requiring hands-on experience.

The National Council of Educational Research and Training (NCERT) appreciates the hard work done by the textbook development committee responsible for this book. We wish to thank the Chairperson of the advisory group in Social Sciences Professor Hari Vasudevan and the Chief Advisor for this book, Professor R.K. Grover, (Retd.) Director, School of Management Studies (IGNOU), New Delhi for guiding the work of this committee. Several teachers contributed to the development of this textbook; we are grateful to their principals for making this possible. We are indebted to the institutions and organisations which have generously permitted us to draw upon their resources, material and personnel. We are especially grateful to the members of the National Monitoring Committee, appointed by the Department of Secondary and Higher Education, Ministry of Human Resource Development under the Chairpersonship of Professor Mrinal Miri and Professor G.P. Deshpande, for their valuable time and contribution. As an organisation committed to the systemic reform and continuous improvement in the quality of its products, NCERT welcomes comments and suggestions which will enable us to undertake further revision and refinement.

Director
National Council of Educational
Research and Training

New Delhi
20 November 2006

# Textbook Development Committee

**Chairperson, Advisory Committee for Textbooks in Social Sciences at Senior Secondary Level**

Hari Vasudevan, Professor, Department of History, University of Calcutta, Kolkata

**Chief Advisor**

R. K. Grover, Professor, (Retd.), School of Management Studies, IGNOU, New Delhi

**Members**

D. K. Vaid, *Professor,* Department of Education in Social Sciences and Humanities, NCERT, New Delhi

Deepak Sehgal, *Reader,* Deen Dayal Upadhaya College, Delhi University

H.V. Jhamb, Reader, Khalsa College, Delhi University, Delhi

N. K. Kakar, *Director,* Maharaja Aggarsen Institute of Management, Rohini, New Delhi

Obul Reddy, *Professor,* Department of Commerce, Osmania University, Hyderabad, Andhra Pradesh

Rajesh Bansal, PGT (*Commerce*), Rohatagi A.V. Senior Secondary School, Nai Sarak, New Delhi

Savita Shangari, PGT (*Commerce*), Gyan Bharati School, Saket, New Delhi

S. C. Hussain, Professor, Department of Commerce, Jamia Millia Islamia, New Delhi

S. S. Sehrawat, Assistant Commissioner, Kendriya Vidyalaya Sangathan, Chandigarh

Sudhir Sapra, PGT (*Commerce*), Kendriya Vidyalaya, Sultanpur, U.P.

Vanita Tripathi, Lecturer, Department of Commerce, Delhi School of Economics, Delhi

**Member-coordinator**

Shipra Vaidya, *Professor,* Department of Education in Social Sciences, NCERT, New Delhi.

# Acknowledgements

The National Council of Educational Research and Training acknowledges the valuable contributions of the Textbook Development Committee which took considerable pains in the development and review of manuscript as well.

Special thanks are due to Savita Sinha, Professor and Head, Department of Education in Social Sciences, NCERT for her support, during the development of this book.

The Council acknowledges the efforts of Computer Incharge, Dinesh Kumar; D.T.P. Operator, Narender Kr. Verma and Girish Goyal; Proof Readers, Achal Kumar.

The contribution of APC-Office, administration of DESS, Publication Department and Secretariat of NCERT in bringing out this book are also duly acknowledged.

## ಪಠ್ಯಾಂಶಗಳು Contents

### ಭಾಗ – 1 Part - 1


| ಅಧ್ಯಾಯ | ಪಠ್ಯಾಂಶ | ಪುಟ ಸಂಖ್ಯೆ |
|---|---|---|
| **ಅಧ್ಯಾಯ –1** | **ಲಾಭಕ್ಕಲ್ಲದ ಸಂಸ್ಥೆಯ ಲೆಕ್ಕಬರಹ**<br>**Accounting for Not - For - Profit Organisation** | **1 - 70** |
| 1.1. | ಲಾಭಕ್ಕಲ್ಲದ ಸಂಸ್ಥೆಗಳ ಅರ್ಥ ಮತ್ತು ಗುಣಲಕ್ಷಣಗಳು<br>Meaning and characteristics of Not-for-profit organisation | 1 |
| 1.2. | ಲಾಭಕ್ಕಲ್ಲದ ಸಂಸ್ಥೆಗಳ ಲೆಕ್ಕಬರಹದ ದಾಖಲೆಗಳು<br>Accounting Records of Not-for-profit Organisations | 2 |
| 1.3. | ಆಯ–ವ್ಯಯ ಖಾತೆ Receipt and payment account | 3 |
| 1.4 | ಆದಾಯ–ವೆಚ್ಚ ಖಾತೆ Income and Expenditure Account | 13 |
| 1.5 | ಅಢಾವೆ ಪತ್ರಿಕೆ Balance Sheet | 18 |
| 1.6 | ಕೆಲವು ವಿಶಿಷ್ಟ ಅಂಶಗಳು Some Peculiar Items | 23 |
| 1.7 | ತಾಳೆಪಟ್ಟಿ ಆಧರಿಸಿದ ಆದಾಯ–ವೆಚ್ಚ ಖಾತೆ<br>Income and Expenditure Account based on Trial Balance | 42 |
| 1.8 | ಪ್ರಾಸಂಗಿಕ ವ್ಯಾಪಾರಿ ಚಟುವಟಿಕೆಗಳು Incidental Trade Activities | 45 |
| **ಅಧ್ಯಾಯ –2** | **ಪಾಲುದಾರಿಕೆಯ ಲೆಕ್ಕಬರಹ ಮೂಲ ಪರಿಕಲ್ಪನೆಗಳು**<br>**Accounting for Partnership Basic Concepts** | **71 - 126** |
| 2.1 | ಪಾಲುದಾರಿಕೆಯ ಸ್ವರೂಪ Nature of Partnership | **71** |
| 2.2 | ಪಾಲುದಾರಿಕೆಯ ಕರಾರು ಪತ್ರ Partnership Deed | **73** |
| 2.3 | ಪಾಲುದಾರಿಕೆ ಲೆಕ್ಕ ಪತ್ರಗಳ ವಿಶೇಷ ಅಂಶಗಳು<br>Special Aspects of Partnership Accounts | **75** |
| 2.4 | ಪಾಲುದಾರರ ಬಂಡವಾಳ ಖಾತೆಗಳ ನಿರ್ವಹಣೆ<br>Maintenance of Capital Accounts of Partners | **76** |
| 2.5 | ಪಾಲುದಾರರಲ್ಲಿ ಲಾಭದ ವಿತರಣೆ<br>Distribution of Profits among Partners | **81** |
| 2.6 | ಪಾಲುದಾರನಿಗೆ ಲಾಭದಲ್ಲಿ ಖಾತರಿ Guarantee of Profit to a Partner | **97** |
| 2.7 | ಹಿಂದಿನ ಹೊಂದಾಣಿಕೆಗಳು Past Adjustments | **101** |
| 2.8 | ಅಂತಿಮ ಖಾತೆಗಳು Final Accounts | **104** |
| **ಅಧ್ಯಾಯ –3** | **ಪಾಲುದಾರಿಕೆ ಸಂಸ್ಥೆಯ ಪುನರ್‌ರಚನೆ – ಪಾಲುದಾರನ ಪ್ರವೇಶ**<br>**Reconstitution of a Partnership Firm - Admission of a Partner** | **127 - 199** |
| 3.1 | ಪಾಲುದಾರಿಕೆ ಸಂಸ್ಥೆ ಪುನರ್‌ರಚನೆಯ ವಿಧಾನಗಳು<br>Modes of Reconstitution of Partnership Firm | 127 |

| | | |
|---|---|---|
| 3.2 | ಹೊಸ ಪಾಲುದಾರನ ಪ್ರವೇಶ Admission of a new Partner | 128 |
| 3.3 | ಹೊಸ ಲಾಭ ಹಂಚಿಕೆ ಅನುಪಾತ New Profit Sharing Ratio | 129 |
| 3.4 | ತ್ಯಾಗದ ಅನುಪಾತ Sacrificing Ratio | 132 |
| 3.5 | ಕೀರ್ತಿಮೌಲ್ಯ Goodwill | 135 |
| 3.6 | ಸಂಚಿತಗೊಂಡ ಲಾಭ ಮತ್ತು ನಷ್ಟಗಳ ಹೊಂದಾಣಿಕೆ Adjustment for Accumulated Profits and Losses | 162 |
| 3.7 | ಆಸ್ತಿಗಳ ಪುನರ್ ಮೌಲ್ಯ ಮತ್ತು ಜವಾಬ್ದಾರಿಗಳ ಪುನರ್‌ನಿರ್ಧರಣೆ: Revaluation of Assets and Reassessment of Liabilities | 163 |
| 3.8 | ಬಂಡವಾಳದ ಹೊಂದಾಣಿಕೆ Adjustment of Capital | 170 |
| 3.9 | ಅಸ್ತಿತ್ವದಲ್ಲಿರುವ ಪಾಲುಗಾರರ ಲಾಭ ಹಂಚಿಕೆಯ ಅನುಪಾತದಲ್ಲಿ ಬದಲಾವಣೆ Change in Profit Sharing Ratio among the existing Partners | 184 |
| **ಅಧ್ಯಾಯ –4** | **ಪಾಲುದಾರಿಕೆ ಸಂಸ್ಥೆಯ ಪುನರ್‌ರಚನೆ–ಪಾಲುದಾರನ ನಿವೃತ್ತಿ / ನಿಧನ Reconstitution of a Partnership Firm-Retirement/Death of a Partner** | **200-259** |
| 4.1 | ನಿವೃತ್ತ/ನಿಧನ ಹೊಂದಿದ ಪಾಲುದಾರನಿಗೆ ಪಾವತಿಸಬೇಕಾದ ಮೊತ್ತವನ್ನು ಕಂಡು ಹಿಡಿಯುವುದು Ascertaining the amount due to Retiring/Deceased Partner | 200 |
| 4.2 | ಹೊಸ ಲಾಭ ಹಂಚಿಕೆಯ ಅನುಪಾತ New Profit Sharing Ratio | 201 |
| 4.3 | ಗಳಿಕೆ ಅನುಪಾತ Gaining Ratio | 203 |
| 4.4 | ಕೀರ್ತಿ ಮೌಲ್ಯದ ಪರಿಗಣನೆ Treatment of Goodwill | 208 |
| 4.5 | ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಪುನರ್ ಮೌಲ್ಯಮಾಪನಕ್ಕಾಗಿ ಹೊಂದಾಣಿಕೆ Adjustment for Revaluation of Assets and Liabilities | 219 |
| 4.6 | ಸಂಚಿತ ಲಾಭ – ನಷ್ಟಗಳ ಹೊಂದಾಣಿಕೆ Adjustment of Accumulated Profits and Losses | 222 |
| 4.7 | ನಿವೃತ್ತ ಪಾಲುದಾರನಿಗೆ ನೀಡಬೇಕಾದ ಬಾಕಿ ಮೊತ್ತವನ್ನು ಚುಕ್ತಾ ಗೊಳಿಸುವುದು: Disposal of Amount Due to Retiring Partner | 223 |
| 4.8 | ಪಾಲುದಾರರ ಬಂಡವಾಳದ ಹೊಂದಾಣಿಕೆ Adjustment of Partners' Capital | 233 |
| 4.9 | ಪಾಲುದಾರನ ನಿಧನ Death of a Partner | 241 |
| **ಅಧ್ಯಾಯ –5** | **ಪಾಲುದಾರಿಕೆ ಸಂಸ್ಥೆಯ ವಿಸರ್ಜನೆ Dissolution of Partnership Firm** | **260-299** |
| 5.1 | ಪಾಲುದಾರಿಕೆಯ ವಿಸರ್ಜನೆ Dissolution of Partnership | 260 |
| 5.2 | ಸಂಸ್ಥೆಯ ವಿಸರ್ಜನೆ Dissolution of a Firm | 261 |
| 5.3 | ಲೆಕ್ಕಗಳನ್ನು ಇತ್ಯರ್ಥಪಡಿಸುವುದು Settlement of Accounts | 263 |
| 5.4 | ಲೆಕ್ಕಬರಹದ ಪರಿಗಣನೆ Accounting Treatment | 264 |

# ಲಾಭಕ್ಕಲ್ಲದ ಸಂಸ್ಥೆಯ ಲೆಕ್ಕಬರಹ
# Accounting for Not - For - Profit Organisation

**1**

**ಕಲಿಕಾ ಉದ್ದೇಶಗಳು**
**(Learning Objectives)**

ಈ ಅಧ್ಯಾಯವನ್ನು ಅಭ್ಯಸಿಸಿದ ನಂತರ ನೀವು ಏನನ್ನು ತಿಳಿಯುತ್ತೀರೆಂದರೆ:

- ಲಾಭಕ್ಕಲ್ಲದ ಸಂಸ್ಥೆಗಳ ಲೆಕ್ಕಬರಹ ದಾಖಲೆಗಳ ಅವಶ್ಯಕತೆ ಮತ್ತು ಸ್ವರೂಪ.
- ಲಾಭಕ್ಕಲ್ಲದ ಸಂಸ್ಥೆಗಳು ತಯಾರಿಸುವ ಮುಖ್ಯ ಹಣಕಾಸಿನ ತಃಖ್ತೆಗಳನ್ನು ಪಟ್ಟಿ ಮಾಡುವುದು.
- ಆಯ–ವ್ಯಯ ಖಾತೆ ಮತ್ತು ಆದಾಯ–ವೆಚ್ಚ ಖಾತೆಯನ್ನು ತಯಾರಿಸುವುದು,
- ಆಯ–ವ್ಯಯ ಖಾತೆ ಮತ್ತು ಆದಾಯ–ವೆಚ್ಚ ಖಾತೆಗಳ ನಡುವಿನ ವ್ಯತ್ಯಾಸಗಳು.
- ಆಯ–ವ್ಯಯದ ಕೆಲವು ವಿಶೇಷ ಅಂಶಗಳಾದ ಸದಸ್ಯರ ವಂತಿಗೆಗಳು, ವಿಶೇಷ ನಿಧಿಗಳು, ದೇಣಿಗೆಗಳು, ಕೊಡುಗೆಗಳು, ಮೃತ್ಯುಲೇಖದಾನ ಹಳೆಯ ಸ್ಥಿರ ಆಸ್ತಿಗಳ ಮಾರಾಟ, ಇತ್ಯಾದಿ ಅಂಶಗಳ ಪರಿಗಣನೆ.

ಕೆಲವು ಸಂಸ್ಥೆಗಳು ತಮ್ಮ ಸದಸ್ಯರಿಗೆ ಮತ್ತು ಸಮಾಜಕ್ಕೆ ಸೇವೆ ಸಲ್ಲಿಸಲು ಸ್ಥಾಪಿಸಲ್ಪಡುತ್ತವೆ. ಅಂತಹ ಸಂಸ್ಥೆಗಳು ಕ್ಲಬ್‌ಗಳು, ಧರ್ಮದತ್ತಿ ಸಂಸ್ಥೆಗಳು, ಶಾಲೆಗಳು, ಧಾರ್ಮಿಕ ಸಂಸ್ಥೆಗಳು, ವ್ಯಾಪಾರಿ ಸಂಘಟನೆಗಳು, ಸಮಾಜಕಲ್ಯಾಣ ಸೊಸೈಟಿಗಳು ಹಾಗೂ ಕಲೆ ಮತ್ತು ಸಂಸ್ಕೃತಿ ಅಭಿವೃದ್ಧಿಪಡಿಸುವ ಸಂಸ್ಥೆಗಳನ್ನು ಒಳಗೊಂಡಿವೆ. ಈ ಸಂಸ್ಥೆಗಳ ಮುಖ್ಯ ಉದ್ದೇಶ ವ್ಯವಹಾರದಲ್ಲಿದ್ದಂತೆ ಲಾಭಗಳಿಸುವುದಾಗಿರದೇ ಸೇವೆಯನ್ನು ಸಲ್ಲಿಸುವುದಾಗಿದೆ. ಸಾಮಾನ್ಯವಾಗಿ, ಈ ಸಂಸ್ಥೆಗಳು ಯಾವುದೇ ವ್ಯವಹಾರದ ಚಟುವಟಿಕೆಯನ್ನು ನಡೆಸುವುದಿಲ್ಲ ಮತ್ತು ತಮ್ಮ ಸದಸ್ಯರಿಗೆ ಹಾಗೂ ಸಮಾಜಕ್ಕೆ ಸಂಪೂರ್ಣವಾಗಿ ಲೆಕ್ಕ ನೀಡುವಂತಹ ಟ್ರಸ್ಟಿಗಳಿಂದ ನಿರ್ವಹಿಸಲ್ಪಡುತ್ತವೆ. ಸಂಗ್ರಹಿಸಿದ ನಿಧಿಗಳನ್ನು ಸಂಸ್ಥೆಯ ಧ್ಯೇಯಗಳನ್ನು ಈಡೇರಿಸಲು ಬಳಸುತ್ತವೆ. ಆದ್ದರಿಂದ, ಇವುಗಳೂ ಸಹ ಸೂಕ್ತವಾದ ಲೆಕ್ಕದ ಪುಸ್ತಕಗಳನ್ನು ಇಡುವ ಮತ್ತು ಪ್ರತಿ ಲೆಕ್ಕದ ಅವಧಿ (ಸಾಮಾನ್ಯವಾಗಿ ಒಂದು ಹಣಕಾಸಿನ ವರ್ಷ) ಅಂತ್ಯದಲ್ಲಿ ಹಣಕಾಸಿನ ತಃಖ್ತೆಗಳಾದಂತಹ ಆಯ_ವ್ಯಯ ಖಾತೆ, ಆದಾಯ–ವೆಚ್ಚದ ಖಾತೆ ಮತ್ತು ಅಢಾವೆ ಪತ್ರಿಕೆಯನ್ನು ತಯಾರಿಸಬೇಕಾಗುತ್ತದೆ.

ಕಾನೂನಿನ ಅವಶ್ಯಕತೆಯನ್ನು ಪೂರೈಸುವುದಕ್ಕಾಗಿ ಮತ್ತು ಇವುಗಳು ವ್ಯವಹಾರಿ ಸಂಸ್ಥೆಗಳ ಸ್ವರೂಪಕ್ಕಿಂತ ಭಿನ್ನವಾಗಿರುವುದರಿಂದ ಆದಾಯ ಮತ್ತು ವೆಚ್ಚಗಳ ಬಾಬುಗಳನ್ನು ತಿಳಿಯಲು ಇದು ಸಹಾಯಕವಾಗಿದೆ. ಈ ಅಧ್ಯಾಯದಲ್ಲಿ ಲಾಭಕ್ಕಲ್ಲದ ಸಂಸ್ಥೆಗಳ ಲೆಕ್ಕಬರಹದ ಅಂಶಗಳನ್ನು ನಾವು ತಿಳಿಯೋಣ.

### 1.1. ಲಾಭಕ್ಕಲ್ಲದ ಸಂಸ್ಥೆಗಳ ಅರ್ಥ ಮತ್ತು ಗುಣಲಕ್ಷಣಗಳು: Meaning and characteristics of Not-for-profit organisation:

ಲಾಭಕ್ಕಲ್ಲದ ಸಂಸ್ಥೆ ಎಂದರೆ ಸಮಾಜ ಕಲ್ಯಾಣಕ್ಕಾಗಿ ಮತ್ತು ಲಾಭದ ಉದ್ದೇಶವಿಲ್ಲದೆ ಕಾರ್ಯನಿರ್ವಹಿಸಲು ಸ್ಥಾಪಿತವಾದ ಧರ್ಮದತ್ತಿ ಸಂಸ್ಥೆಯಾಗಿದೆ. ಇವುಗಳ ಮುಖ್ಯ ಗುರಿ ನಿರ್ದಿಷ್ಟ ಗುಂಪಿಗೆ ಅಥವಾ ಸಮಾಜದಲ್ಲಿರುವ ಎಲ್ಲರಿಗೂ ಸೇವೆಸಲ್ಲಿಸುವುದಾಗಿದೆ. ಸಾಮಾನ್ಯವಾಗಿ, ಅವುಗಳು ಸರಕುಗಳ ಉತ್ಪಾದನೆ, ಖರೀದಿ ಅಥವಾ ಮಾರಾಟ ಮಾಡುವುದಿಲ್ಲ ಮತ್ತು ಉದ್ದರಿ ವಹಿವಾಟುಗಳನ್ನು ನಡೆಸುವುದಿಲ್ಲ. ಆದ್ದರಿಂದ

ಅವುಗಳು ವ್ಯಾಪಾರಿ ಸಂಸ್ಥೆಗಳು ಇಡುವ ಹಾಗೆ ಹಲವು ಲೆಕ್ಕದ ಪುಸ್ತಕಗಳು ಮತ್ತು ವ್ಯಾಪಾರಿ ಮತ್ತು ಲಾಭ–ನಷ್ಟದ ಖಾತೆಗಳನ್ನು ಇರಿಸುವದು ಅವಶ್ಯಕವಾಗಿರುವುದಿಲ್ಲ. ಈ ಸಂಸ್ಥೆಗಳು ಸಂಗ್ರಹಿಸುವ ನಿಧಿಯನ್ನು ಬಂಡವಾಳದ ನಿಧಿಗೆ ಅಥವಾ ಸಾಮಾನ್ಯ ನಿಧಿಗೆ ಜಮಾ ಮಾಡುತ್ತವೆ. ಸಾಮಾನ್ಯವಾಗಿ, ಸದಸ್ಯರ ವಂತಿಗೆಗಳು, ಅನುದಾನಗಳು ಮತ್ತು ಹೂಡಿಕೆಗಳಿಂದ ಬರುವ ಆದಾಯಗಳು ಅವುಗಳ ಮುಖ್ಯ ಆದಾಯದ ಮೂಲಗಳಾಗಿರುತ್ತವೆ. ಕಾನೂನಿನ ಅಗತ್ಯತೆ ಮತ್ತು ಅವುಗಳ ನಿಧಿಗಳ ಬಳಕೆಯ ಮೇಲೆ ನಿಯಂತ್ರಣ ಹೊಂದಲು ದಾಖಲೆಗಳನ್ನು ಇಡುವುದು ಇವುಗಳ ಮುಖ್ಯ ಉದ್ದೇಶವಾಗಿದೆ. ಪ್ರತಿ ಲೆಕ್ಕಬರಹ ವರ್ಷದ ಅಂತ್ಯದಲ್ಲಿ (ಸಾಮಾನ್ಯವಾಗಿ ಹಣಕಾಸಿನ ವರ್ಷ) ಹಣಕಾಸಿನ ತಃಖ್ತೆಗಳನ್ನು ತಯಾರಿಸಬೇಕಾಗುತ್ತದೆ. ಅವುಗಳ ಆದಾಯ ಮತ್ತು ವೆಚ್ಚಗಳು ಮತ್ತು ಹಣಕಾಸಿನ ಸ್ಥಿತಿಗತಿಯನ್ನು ಕಂಡುಹಿಡಿಯಬೇಕಾಗುತ್ತದೆ ಮತ್ತು ಕಾನೂನಾತ್ಮಕ ಅಧಿಕಾರ ಹೊಂದಿರುವ ಸೊಸೈಟಿಗಳ ನೊಂದಣಾಧಿಕಾರಿಗಳಿಗೆ ಸಲ್ಲಿಸಬೇಕಾಗುತ್ತದೆ.

**ಈ ಸಂಸ್ಥೆಗಳ ಮುಖ್ಯ ಗುಣಲಕ್ಷಣಗಳು:**

1. ಈ ಸಂಸ್ಥೆಗಳು ನಿರ್ದಿಷ್ಟ ವರ್ಗ ಅಥವಾ ಎಲ್ಲ ಸಾರ್ವಜನಿಕರಿಗೆ ಶಿಕ್ಷಣ, ಆರೋಗ್ಯ, ಮನರಂಜನೆ, ಕ್ರೀಡೆ ಮತ್ತು ಇತರೆ ಸೇವೆಗಳನ್ನು ಯಾವುದೇ ಜಾತಿ, ಧರ್ಮ ಮತ್ತು ವರ್ಣಗಳ ಪರಿಗಣನೆಯಿಲ್ಲದೆ ಸೇವೆ ಸಲ್ಲಿಸಲು ಸ್ಥಾಪಿಸಲ್ಪಡುತ್ತವೆ. ಉಚಿತವಾಗಿ ಅಥವಾ ಕಡಿಮೆ ವೆಚ್ಚದಲ್ಲಿ ಮತ್ತು ಲಾಭಗಳಿಕೆ ಇಲ್ಲದೆ ಸೇವೆಗಳನ್ನು ನೀಡುವುದು ಇವುಗಳ ಮುಖ್ಯ ಉದ್ದೇಶವಾಗಿದೆ.
2. ಇವುಗಳು ಧರ್ಮದತ್ತಿ ಟ್ರಸ್ಟ್‌ಗಳು, ಸೊಸೈಟಿಗಳಾಗಿ ಸಂಘಟಿಸಲ್ಪಟ್ಟಿರುತ್ತವೆ ಮತ್ತು ಇವುಗಳ ವಂತಿಗೆದಾರರನ್ನು ಸದಸ್ಯರು ಎಂದು ಕರೆಯಲಾಗುತ್ತದೆ.
3. ಇವುಗಳ ವಹಿವಾಟುಗಳು ಸಾಮಾನ್ಯವಾಗಿ ಸದಸ್ಯರಿಂದ ಆಯ್ಕೆಯಾದ ವ್ಯವಸ್ಥಾಪಕ/ನಿರ್ವಾಹಕ ಸಮಿತಿಯಿಂದ ನಿರ್ವಹಿಸಲ್ಪಡುತ್ತವೆ.
4. ಈ ಸಂಸ್ಥೆಗಳ ಮುಖ್ಯ ಆದಾಯದ ಮೂಲಗಳು:

   (i) ಸದಸ್ಯರಿಂದ ವಂತಿಗೆಗಳು (ii) ದೇಣಿಗೆಗಳು (iii) ಮೃತ್ಯಲೇಖದಾನ

   (iv) ಅನುದಾನಗಳು (v) ಹೂಡಿಕೆಗಳಿಂದ ಆದಾಯ, ಇತರೆ
5. ಈ ಸಂಸ್ಥೆಗಳು ಹಲವು ಮೂಲಗಳಿಂದ ಸಂಗ್ರಹಿಸಿದ ನಿಧಿಗಳನ್ನು ಬಂಡವಾಳ ನಿಧಿ ಅಥವಾ ಸಾಮಾನ್ಯ ನಿಧಿಗೆ ಜಮಾ ಮಾಡುತ್ತವೆ.
6. ವೆಚ್ಚಗಳಿಗಿಂತ ಅಧಿಕವಾದ ಆದಾಯ ಮಿಗತೆ(surplus)ಯನ್ನು ಸದಸ್ಯರಿಗೆ ಹಂಚಿಕೆ ಮಾಡುವುದಿಲ್ಲ ಇದನ್ನು ಬಂಡವಾಳ ನಿಧಿಗೆ ಕೂಡಿಸಲಾಗುತ್ತದೆ.
7. ಲಾಭಕ್ಕಲ್ಲದ ಸಂಸ್ಥೆಗಳು ಸಮಾಜ ಕಲ್ಯಾಣಕ್ಕೆ ನೀಡಿದ ಕೊಡುಗೆಗಳಿಂದ ತಮ್ಮ ಘನತೆಯನ್ನು ಗಳಿಸುತ್ತವೆಯೇ ಹೊರತು ಗ್ರಾಹಕರ ಅಥವಾ ಮಾಲೀಕರ ತೃಪ್ತಿಯಿಂದ ಗಳಿಸುವುದಿಲ್ಲ.
8. ಈ ಸಂಸ್ಥೆಗಳು ಪೂರೈಸುವ ಲೆಕ್ಕಬರಹದ ಮಾಹಿತಿಗಳು ಸದ್ಯದ ಮತ್ತು ಭಾವಿ ವಂತಿಗೆದಾರರಿಗಾಗಿರುತ್ತವೆ ಮತ್ತು ಇವು ಕಾನೂನಿನ ಆಗತ್ಯತೆಯನ್ನು ಪೂರೈಸುತ್ತವೆ.

## 1.2. ಲಾಭಕ್ಕಲ್ಲದ ಸಂಸ್ಥೆಗಳ ಲೆಕ್ಕಬರಹದ ದಾಖಲೆಗಳು:

## Accounting Records of Not-for-profit Organisations:

ಈ ಮೊದಲೇ ತಿಳಿಸಿದಂತೆ, ಸಾಮಾನ್ಯವಾಗಿ ಈ ಸಂಸ್ಥೆಗಳು ಯಾವುದೇ ವ್ಯಾಪಾರಿ ಅಥವಾ ವ್ಯವಹಾರದ ಚಟುವಟಿಕೆಗಳಲ್ಲಿ ತೊಡಗಿರುವುದಿಲ್ಲ. ಸದಸ್ಯರ ವಂತಿಗೆಗಳು, ದೇಣಿಗೆಗಳು, ಸರ್ಕಾರದಿಂದ ಧನ ಸಹಾಯ ಮತ್ತು ಹೂಡಿಕೆಯಿಂದ ಬಂದ ಆದಾಯಗಳು ಇವುಗಳ ಮುಖ್ಯ ಆದಾಯದ ಮೂಲಗಳಾಗಿರುತ್ತವೆ. ಹೆಚ್ಚಿನ ವಹಿವಾಟುಗಳು ನಗದಿನಲ್ಲಿ ಅಥವಾ ಬ್ಯಾಂಕ್ ಮೂಲಕವಾಗಿರುತ್ತವೆ. ಈ ಸಂಸ್ಥೆಗಳು ಸಮರ್ಪಕ ಲೆಕ್ಕ ಬರಹದ ದಾಖಲೆಗಳನ್ನು ಇಡುವುದು ಮತ್ತು ಅವುಗಳ ನಿಧಿಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವುದರ ಮೇಲೆ ನಿಯಂತ್ರಣ ಹೊಂದಿರುವುದು ಕಾನೂನಿನ ಪ್ರಕಾರ ಅವಶ್ಯಕವಾಗಿದೆ. ಇವುಗಳು ಸಾಮಾನ್ಯವಾಗಿ, ನಗದು ಸ್ವೀಕೃತಿ ಮತ್ತು ನಗದು ಪಾವತಿಗಳನ್ನು ದಾಖಲಿಸಲು

ನಗದು ಪುಸ್ತಕ ಇರಿಸುತ್ತವೆ. ಇವುಗಳು ಲೆಕ್ಕಬರಹ ವರ್ಷದ ಅಂತ್ಯದಲ್ಲಿ ಹಣಕಾಸಿನ ತಃಖ್ತೆಗಳನ್ನು ತಯಾರಿಸಲು ಅನುಕೂಲವಾಗುವಂತೆ ಎಲ್ಲಾ ಆದಾಯಗಳು, ಖರ್ಚುಗಳು, ಆಸ್ತಿಗಳು ಮತ್ತು ಜವಾಬ್ದಾರಿಗಳನ್ನು ಒಳಗೊಂಡ ಒಂದು ಖಾತೆ ಪುಸ್ತಕವನ್ನು ಇರಿಸುತ್ತವೆ, ಇವುಗಳ ಜೊತೆಯಲ್ಲಿ ಎಲ್ಲಾ ಸ್ಥಿರ ಆಸ್ತಿಗಳು ಮತ್ತು ವ್ಯಯವಾಗುವ ವಸ್ತುಗಳನ್ನು (Consumables) ದಾಖಲಿಸಲು ಒಂದು ದಾಸ್ತಾನು ಪುಸ್ತಕವನ್ನು ಇರಿಸುವುದು ಅವಶ್ಯಕವಾಗಿರುತ್ತದೆ.

ಇವುಗಳು ಯಾವುದೇ ಬಂಡವಾಳದ ಖಾತೆಯನ್ನು ಇರಿಸುವುದಿಲ್ಲ. ಬದಲಾಗಿ ವರ್ಷದಿಂದ ವರ್ಷಕ್ಕೆ ಸಂಚಿತವಾಗುವ ಮಿಗತೆಗಳು(surplus), ಅಜೀವ ಸದಸ್ಯತ್ವ ಶುಲ್ಕ, ದೇಣಿಗೆಗಳು, ಮೃತ್ಯುಲೇಖದಾನಗಳು, ಇತ್ಯಾದಿಗಳನ್ನು ದಾಖಲಿಸಲು ಸಾಮಾನ್ಯ ನಿಧಿ ಎಂದು ಕರೆಯಲ್ಪಡುವ ಬಂಡವಾಳ ನಿಧಿಯನ್ನು ಇರಿಸುತ್ತವೆ. ನಿಜಸ್ಥಿತಿಯಲ್ಲಿ, ಸದಸ್ಯರು ಮತ್ತು ಇತರ ದಾನಿಗಳು ನೀಡಿರುವ ನಿಧಿಗಳು ದುರುಪಯೋಗವಾಗುವುದನ್ನು ತಪ್ಪಿಸಲು ಅಥವಾ ಕಡಿಮೆಗೊಳಿಸಲು ಒಂದು ಸಮರ್ಪಕ ಲೆಕ್ಕಬರಹದ ಪದ್ಧತಿ ಅಪೇಕ್ಷಣೀಯವಾಗಿದೆ.

**ಅಂತಿಮ ಖಾತೆಗಳು ಅಥವಾ ಹಣಕಾಸಿನ ತಃಖ್ತೆಗಳು:** ಲಾಭಕ್ಕಲ್ಲದ ಸಂಸ್ಥೆಗಳು ಪ್ರತಿ ಲೆಕ್ಕದ ವರ್ಷದ ಅಂತ್ಯದಲ್ಲಿ ಅಂತಿಮ ತಃಖ್ತೆಗಳನ್ನು ತಯಾರಿಸುವುದು ಅವಶ್ಯಕವಾಗಿದೆ. ಈ ಸಂಸ್ಥೆಗಳು ಲಾಭಗಳಿಸದ ಸಂಸ್ಥೆಗಳಾಗಿರುವುದರಿಂದ ಇವುಗಳು ವ್ಯಾಪಾರಿ ಮತ್ತು ಲಾಭ–ನಷ್ಟದ ಖಾತೆಯನ್ನು ತಯಾರಿಸುವ ಅಗತ್ಯತೆ ಇರುವುದಿಲ್ಲ. ಆದರೆ, ಆ ವರ್ಷದಲ್ಲಿನ ವೆಚ್ಚಗಳನ್ನು ಭರಿಸಲು ಸಾಕಷ್ಟು ಆದಾಯಗಳು ಇವೆಯೋ ಅಥವಾ ಇಲ್ಲವೋ ಎಂಬುದನ್ನು ತಿಳಿಯುವುದು ಅವಶ್ಯಕವಾಗಿರುತ್ತದೆ. ಇದಲ್ಲದೆ ಸದಸ್ಯರು, ದಾನಿಗಳು ಮತ್ತು ವಂತಿಗೆದಾರರಿಗೆ ಹಾಗೂ ಸೊಸೈಟಿಗಳ ನೊಂದಾಣಾಧಿಕಾರಿಗಳಿಗೂ ಸಹ ಅವಶ್ಯಕವಾದ ಹಣಕಾಸಿನ ಮಾಹಿತಿಗಳನ್ನು ನೀಡುವುದು ಅವಶ್ಯಕವಾಗಿರುತ್ತದೆ. ಈ ಉದ್ದೇಶಕ್ಕಾಗಿ, ಲೆಕ್ಕಬರಹ ಅವಧಿಯ ಅಂತ್ಯದಲ್ಲಿ ಅವುಗಳ ಅಂತಿಮ ಖಾತೆಗಳನ್ನು ತಯಾರಿಸಬೇಕಾಗುತ್ತದೆ ಮತ್ತು ಈ ಮೊದಲೇ ತಿಳಿಸಿದಂತೆ ಸಾಮಾನ್ಯ ಲೆಕ್ಕಬರಹದ ತತ್ವಗಳನ್ನು ಸಂಪೂರ್ಣವಾಗಿ ಅನ್ವಯಿಸಬೇಕಾಗುತ್ತದೆ. ಲಾಭಕ್ಕಲ್ಲದ ಸಂಸ್ಥೆಗಳ ಅಂತಿಮ ಖಾತೆಗಳು ಈ ಕೆಳಗಿನವುಗಳನ್ನು ಒಳಗೊಂಡಿದೆ:

1. ಆಯ–ವ್ಯಯ ಖಾತೆ
2. ಆದಾಯ–ವೆಚ್ಚ ಖಾತೆ ಮತ್ತು
3. ಅಢಾವೆ ಪತ್ರಿಕೆ (ಸ್ಥಿತಿ ಪಟ್ಟಿ)

ಆಯ–ವ್ಯಯ ಖಾತೆಯು ನಗದು ಮತ್ತು ಬ್ಯಾಂಕ್ ವಹಿವಾಟುಗಳ ಸಾರಾಂಶವಾಗಿದ್ದು, ಇದು ಆದಾಯ–ವೆಚ್ಚ ಖಾತೆ ಮತ್ತು ಅಢಾವೆ ಪತ್ರಿಕೆಯನ್ನು ತಯಾರಿಸಲು ಸಹಾಯಕವಾಗಿದೆ. ಮೇಲಾಗಿ, ಆದಾಯ ವೆಚ್ಚ ಖಾತೆ ಮತ್ತು ಅಢಾವೆ ಪತ್ರಿಕೆಯ ಜೊತೆಯಲ್ಲಿ ಆಯ–ವ್ಯಯ ಖಾತೆಯನ್ನೂ ಸಹ ಸೊಸೈಟಿಗಳ ನೊಂದಣಾಧಿಕಾರಿಗಳಿಗೆ ಸಲ್ಲಿಸುವುದು ಕಾನೂನಿನ ಪ್ರಕಾರ ಅಗತ್ಯವಾಗಿದೆ.

ಆದಾಯ–ವೆಚ್ಚ ಖಾತೆಯು ಲಾಭ–ನಷ್ಟ ಖಾತೆಯ ಸಮಾನ ಲಕ್ಷಣಗಳನ್ನು ಹೊಂದಿದೆ. ಲಾಭಕ್ಕಲ್ಲದ ಸಂಸ್ಥೆಗಳು ಸಾಮಾನ್ಯವಾಗಿ ಆಯ–ವ್ಯಯ ಖಾತೆಯ ಸಹಾಯದಿಂದ ಆದಾಯ–ವೆಚ್ಚ ಖಾತೆ ಮತ್ತು ಅಢಾವೆ ಪತ್ರಿಕೆಯನ್ನು ತಯಾರಿಸುತ್ತವೆ. ಅಂದರೆ, ಅವುಗಳು ತಾಳೆಪಟ್ಟಿ ತಯಾರಿಸುವುದಿಲ್ಲವೆಂದಲ್ಲ. ಖಾತೆಗಳ ನಿಖರತೆಯನ್ನು ಪರಿಶೀಲಿಸಲು ಅವುಗಳೂ ಸಹ ತಾಳೆಪಟ್ಟಿಯನ್ನು ತಯಾರಿಸುತ್ತವೆ. ಇದು ಆಯ–ವ್ಯಯ ಖಾತೆ, ಆದಾಯ–ವೆಚ್ಚದ ಖಾತೆ ಮತ್ತು ಅಢಾವೆ ಪತ್ರಿಕೆಗಳನ್ನು ನಿಖರವಾಗಿ ತಯಾರಿಸಲು ಸಹಾಯಕವಾಗಿದೆ.

ವಾಸ್ತವದಲ್ಲಿ, ಒಂದು ಸಂಸ್ಥೆಯು ದ್ವಿ–ನಮೂದು ಪದ್ಧತಿಯನ್ನು ಅನುಸರಿಸುತ್ತಿದ್ದಲ್ಲಿ ಖಾತೆಗಳ ನಿಖರತೆಯನ್ನು ಪರಿಶೀಲಿಸಲು ತಾಳೆಪಟ್ಟಿಯನ್ನು ಕಡ್ಡಾಯವಾಗಿ ತಯಾರಿಸಲೇಬೇಕು. ಇದು ಆಯ–ವ್ಯಯ ಖಾತೆ, ಆದಾಯ–ವೆಚ್ಚ ಖಾತೆ ಮತ್ತು ಅಢಾವೆ ಪತ್ರಿಕೆಗಳನ್ನು ತಯಾರಿಸಲು ಸಹಾಯಕವಾಗಿದೆ.

## 1.3. ಆಯ–ವ್ಯಯ ಖಾತೆ: Receipt and payment account:

ಇದನ್ನು ಲೆಕ್ಕಬರಹ ವರ್ಷದ ಅಂತ್ಯದಲ್ಲಿ ನಗದು ಪುಸ್ತಕದಲ್ಲಿ ದಾಖಲಾಗಿರುವ ನಗದು ಸ್ವೀಕೃತಿಗಳು ಮತ್ತು ನಗದು ಪಾವತಿಗಳ ಆಧಾರದ ಮೇಲೆ ತಯಾರಿಸಲಾಗುತ್ತದೆ. ಇದು ಹಲವು ಶೀರ್ಷಿಕೆಯಡಿಯಲ್ಲಿನ ನಗದು ಮತ್ತು ಬ್ಯಾಂಕ್ ವಹಿವಾಟುಗಳ ಸಾರಾಂಶವಾಗಿದೆ. ಉದಾಹರಣೆಗೆ, ಸದಸ್ಯರಿಂದ ಬೇರೆ–ಬೇರೆ ದಿನಾಂಕಗಳಂದು ಸ್ವೀಕರಿಸಿದ ವಂತಿಗೆಗಳನ್ನು ನಗದು ಪುಸ್ತಕದ ಖರ್ಚು ಬದಿಯಲ್ಲಿ ತೋರಿಸಲಾಗುತ್ತದೆ ಮತ್ತು ಇವುಗಳನ್ನು ಆಯ–ವ್ಯಯ ಖಾತೆಯ

ಸ್ವೀಕೃತಿ(ಖರ್ಚಿನ) ಬದಿಯಲ್ಲಿ ಒಟ್ಟು ಮೊತ್ತದೊಂದಿಗೆ ಒಂದು ಅಂಶವಾಗಿ ತೋರಿಸಲಾಗುತ್ತದೆ. ಇದೇ ರೀತಿಯಲ್ಲಿ, ಕಾಲ ಕಾಲಕ್ಕೆ ಪಾವತಿಸಿದ ವೇತನ, ಬಾಡಿಗೆ, ವಿದ್ಯುತ್ ಶುಲ್ಕಗಳನ್ನು ನಗದು ಪುಸ್ತಕದ ಜಮೆ ಬದಿಯಲ್ಲಿ ದಾಖಲಿಸುತ್ತದೆ. ಆದರೆ, ಆ ವರ್ಷದಲ್ಲಿ ಪಾವತಿಸಿದ ಒಟ್ಟು ವೇತನ, ಒಟ್ಟು ಬಾಡಿಗೆ, ಒಟ್ಟು ವಿದ್ಯುತ್ ಶುಲ್ಕಗಳನ್ನು ಆಯ–ವ್ಯಯ ಖಾತೆಯ ಪಾವತಿ(ಜಮೆ) ಬದಿಯಲ್ಲಿ ತೋರಿಸಲಾಗುತ್ತದೆ. ಹೀಗೆ, ಚಾಲ್ತಿ ವರ್ಷಕ್ಕೆ, ಹಿಂದಿನ ವರ್ಷಕ್ಕೆ ಅಥವಾ ಮುಂದಿನ ವರ್ಷಕ್ಕೆ ಸಂಬಂಧಿಸಿದ ಬಂಡವಾಳ ಅಥವಾ ಕಂದಾಯ ಸ್ವರೂಪದ ಅಂಶಗಳನ್ನು ಆಯ–ವ್ಯಯ ಖಾತೆಯು ಸಾರಾಂಶ ರೂಪದಲ್ಲಿ ನೀಡುತ್ತದೆ. ಈ ಖಾತೆಯು ಸವಕಳಿಯಂತಹ ನಗದೇತರವಾದ ಯಾವುದೇ ಅಂಶಗಳನ್ನು ತೋರಿಸುವುದಿಲ್ಲ. ಆಯ–ವ್ಯಯ ಖಾತೆಯ ಸ್ವೀಕೃತಿ ಬದಿಯಲ್ಲಿನ ಪ್ರಾರಂಭಿಕ ಶಿಲ್ಕು ವರ್ಷದ ಪ್ರಾರಂಭದ ಕೈಯಲ್ಲಿನ ನಗದು/ ಬ್ಯಾಂಕಿನಲ್ಲಿನ ನಗದನ್ನು ಪ್ರತಿನಿಧಿಸುತ್ತದೆ. ಅಂತಿಮ ಶಿಲ್ಕು ವರ್ಷದ ಅಂತ್ಯದಲ್ಲಿನ ಕೈಯಲ್ಲಿನ ನಗದು ಮತ್ತು ಬ್ಯಾಂಕಿನಲ್ಲಿನ ನಗದನ್ನು ಪ್ರತಿನಿಧಿಸುತ್ತದೆ. ಈ ಶಿಲ್ಕನ್ನು ಜಮಾ ಬದಿಯಲ್ಲಿ ತೋರಿಸಲಾಗುತ್ತದೆ. ಅಂತ್ಯದಲ್ಲಿನ ಬ್ಯಾಂಕ್ ಮೀರೆಳೆತ(Overdraft) ವನ್ನು ಖರ್ಚಿನ ಬದಿಯಲ್ಲಿ ಕಡೆಯ ಅಂಶವಾಗಿ ತೋರಿಸಲಾಗುತ್ತದೆ. ಆಯ–ವ್ಯಯದ ಪ್ರತಿ ಅಂಶದ ಒಟ್ಟು ಮೊತ್ತವನ್ನು ಹೇಗೆ ಲೆಕ್ಕ ಹಾಕಲಾಗಿದೆ ಎಂಬುದನ್ನು ಉದಾಹರಣೆಯಲ್ಲಿ ನೀಡಿರುವ ನಗದು ಪುಸ್ತಕವನ್ನು ನಾವು ನೋಡೋಣ.

**ಉದಾಹರಣೆ – 1**

**ಗೋಲ್ಡನ್ ಕ್ರಿಕೆಟ್ ಕ್ಲಬ್**

**ಖರ್ಚು** **ನಗದು ಪುಸ್ತಕ (ಅಂಕಣಗಳ)** **ಜಮಾ**

| ದಿನಾಂಕ | ಸ್ವೀಕೃತಿಗಳು | ರೊ. ಪಾ | ಬ್ಯಾಂಕ್ ಮೊತ್ತ ₹ | ಕಛೇರಿ ಮೊತ್ತ ₹ | ದಿನಾಂಕ | ಪಾವತಿಗಳು | ರೊ ಪಾ | ಬ್ಯಾಂಕ್ ಮೊತ್ತ ₹ | ಕಛೇರಿ ಮೊತ್ತ ₹ |
|---|---|---|---|---|---|---|---|---|---|
| 2014 | | | | | 2014 | | | | |
| ಏಪ್ರಿಲ್ 1 | ಪ್ರಾರಂಭಿಕಶಿಲ್ಕು | | 35000 | 20,000 | ಏಪ್ರಿಲ್15 | ವಿಮಾ ಕಂತು | | 15,000 | – |
| ಏಪ್ರಿಲ್ 10 | ವಂತಿಗೆಗಳು | | 1,20,000 | – | ಮೇ 12 | ಮುದ್ರಣ ಮತ್ತು ಲೇಖನ ಸಾಮಗ್ರಿ | | 10,750 | – |
| ಏಪ್ರಿಲ್ 10 | ಪ್ರವೇಶ ಶುಲ್ಕ | | 13,000 | – | | | | | |
| ಮೇ 20 | ಅಜೀವ ಸದಸ್ಯತ್ವ ಶುಲ್ಕ | | 12,000 | – | ಮೇ 20 | ಅಂಚೆ ಮತ್ತು ಕೊರಿಯರ್ ಶುಲ್ಕ | | – | 430 |
| ಜೂನ್ 12 | ಲಾಕರ್ ಬಾಡಿಗೆ | | – | 42,000 | | | | | |
| ಜುಲೈ 23 | ಅಜೀವ ಸದಸ್ಯತ್ವ ಶುಲ್ಕ | | 8,000 | – | ಜೂನ್ 16 | ದೂರವಾಣಿ ಖರ್ಚುಗಳು | | – | 810 |
| ಆಗಸ್ಟ್ 20 | ಕಟ್ಟಡದ ದೇಣಿಗೆ | | 60,000 | – | | | | | |
| ಸೆಪ್ಟೆಂಬರ್ 13 | ವಂತಿಗೆಗಳು (2005–2006) | | 30,000 | – | ಜುಲೈ 10 | ಕೂಲಿ ಮತ್ತು ವೇತನ | | – | 22,000 |
| | | | | | ಜುಲೈ 15 | ಸುಂಕ ಮತ್ತು ತೆರಿಗೆಗಳು | | 17,000 | – |
| ಸೆಪ್ಟೆಂಬರ್ 13 | ವಂತಿಗೆಗಳು | | 45,000 | – | | | | | |
| ಸೆಪ್ಟೆಂಬರ್ 14 | ಪ್ರವೇಶ ಶುಲ್ಕಗಳು | | 10,000 | – | ಜುಲೈ 30 | ಸರ್ಕಾರಿ ಬಂಡವಾಳ ಪತ್ರಗಳು | | 1,00,000 | – |
| ನವೆಂಬರ್ 9 | ವಂತಿಗೆಗಳು | | 35,000 | – | ಆಗಸ್ಟ್ 13 | ಮುದ್ರಣ ಮತ್ತು ಲೇಖನ ಸಾಮಾಗ್ರಿಗಳು | | 15,000 | – |
| ನವೆಂಬರ್ 9 | ವಂತಿಗೆಗಳು (2009–2010) | | 10,000 | – | | | | | |
| | | | | | ಆಗಸ್ಟ್15 | ಅಂಚೆ ಮತ್ತು ಕೊರಿಯರ್ಸೇವೆಗಳು | | – | 480 |
| 2015 | | | | | | | | | |
| ಫೆಬ್ರವರಿ 7 | ವಂತಿಕೆಗಳು | | 25,000 | – | | | | | |
| ಮಾರ್ಚ್ 28 | ಸರ್ಕಾರಿ ಬಂಡವಾಳ ಪತ್ರಗಳ ಮೇಲಿನ ಬಡ್ಡಿ | | 18,000 | – | ಸೆಪ್ಟೆಂಬರ್ 10 | ಬೆಳಕು ವ್ಯವಸ್ಥೆ | | 12,250 | – |
| | | | | | ಸೆಪ್ಟೆಂಬರ್ 13 | ದೂರವಾಣಿ ಖರ್ಚುಗಳು | | – | 830 |

| | | | | | | | | | |
|---|---|---|---|---|---|---|---|---|---|
| | | | | | ಅಕ್ಟೋಬರ್ 1 | ಕೂಲಿ ಮತ್ತು ವೇತನ | | 10,000 | 12,000 |
| | | | | | ಅಕ್ಟೋಬರ್ 18 | ಮುದ್ರಣ ಮತ್ತು ಲೇಖನ ಸಾಮಾಗ್ರಿ | | 13,000 | – |
| | | | | | ಅಕ್ಟೋಬರ್ 31 | ಸರ್ಕಾರಿ ಬಂಡವಾಳ ಪತ್ರಗಳು | | 1,00,000 | – |
| | | | | | ಡಿಸೆಂಬರ್ 31 | ಕೂಲಿ ಮತ್ತು ವೇತನ | | 22,000 | – |
| | | | | | 2015 | | | | |
| | | | | | ಜನವರಿ 21 | ಕೊರಿಯರ್ ಖರ್ಚುಗಳು | | – | 240 |
| | | | | | ಫೆಬ್ರವರಿ 2 | ದೂರವಾಣಿ ಖರ್ಚುಗಳು | | – | 960 |
| | | | | | ಮಾರ್ಚ್ 10 | ಅಂಚೆ ಮತ್ತು ಕೊರಿಯರ್ ಶುಲ್ಕ | | – | 850 |
| | | | | | ಮಾರ್ಚ್ 27 | ಬೆಳಕಿನ ವೆಚ್ಚ | | 14,000 | – |
| | | | | | ಮಾರ್ಚ್ 27 | ಕೂಲಿ ಮತ್ತು ವೇತನ | | 22,000 | – |
| | | | | | ಮಾರ್ಚ್ 31 | ಅಂತಿಮ ಶಿಲ್ಕು | | 70,000 | 23,400 |
| | | | 4,21,000 | 62,000 | | | | 4,21,000 | 62,000 |

## ಭಾಗ – ಎ

### ಅಂಶಗಳ ಪ್ರಕಾರ ಅನೇಕ ಸ್ವೀಕೃತಿಗಳ ಒಟ್ಟು ಮೊತ್ತ

**ವಂತಿಗೆಗಳು (2014–2015)**

| ದಿನಾಂಕ | ಮೊತ್ತ ₹ |
|---|---|
| ಏಪ್ರಿಲ್10,2014 | 1,20,000 |
| ಸೆಪ್ಟೆಂಬರ್13,2014 | 45,000 |
| ನವೆಂಬರ್09,2014 | 35,000 |
| ಫೆಬ್ರವರಿ 07,2015 | 25,000 |
| **ಒಟ್ಟು** | **2,25,000** |

**ವಂತಿಗೆಗಳು (2013–2014)**

| ದಿನಾಂಕ | ಮೊತ್ತ ₹ |
|---|---|
| ಸೆಪ್ಟೆಂಬರ್13,2014 | 30,000 |
| **ಒಟ್ಟು** | **30,000** |

**ವಂತಿಗೆಗಳು**

| ದಿನಾಂಕ | ಮೊತ್ತ ₹ |
|---|---|
| ನವೆಂಬರ್09,2014 | 10,000 |
| **ಒಟ್ಟು** | **10,000** |

**ಪ್ರವೇಶ ಶುಲ್ಕಗಳು**

| ದಿನಾಂಕ | ಮೊತ್ತ ₹ |
|---|---|
| ಏಪ್ರಿಲ್ 10,2014 | 13,000 |
| ಸೆಪ್ಟೆಂಬರ್ 14,2014 | 10,000 |
| ಒಟ್ಟು | **23,000** |

**ಭದ್ರತಾ ಕಪಾಟು ಬಾಡಿಗೆ**

| ದಿನಾಂಕ | ಮೊತ್ತ ₹ |
|---|---|
| ಏಪ್ರಿಲ್ 12,2014 | 42,000 |
| ಒಟ್ಟು | **42,000** |

**ಅಜೀವ ಸದಸ್ಯತ್ವ ಶುಲ್ಕ**

| ದಿನಾಂಕ | ಮೊತ್ತ ₹ |
|---|---|
| ಮೇ 12,2014 | 12,000 |
| ಜುಲೈ 14,2014 | 8,000 |
| ಒಟ್ಟು | **20,000** |

**ಕಟ್ಟಡಗಳ ದೇಣಿಗೆ**

| ದಿನಾಂಕ | ಮೊತ್ತ ₹ |
|---|---|
| ಆಗಸ್ಟ್ 20,2014 | 60,000 |
| ಒಟ್ಟು | **60,000** |

**ಸರ್ಕಾರಿ ಬಂಡವಾಳ ಪತ್ರಗಳ ಮೇಲಿನ ಬಡ್ಡಿ**

| ದಿನಾಂಕ | ಮೊತ್ತ ₹ |
|---|---|
| ಮಾರ್ಚ್ 28,2015 | 18,000 |
| ಒಟ್ಟು | **18,000** |

**ಭಾಗ – ಬಿ**

## ಅಂಶಗಳ ಪ್ರಕಾರ ಅನೇಕ ಪಾವತಿಗಳ ಒಟ್ಟು ಮೊತ್ತ

**ವಿಮಾ ಕಂತು**

| ದಿನಾಂಕ | ಮೊತ್ತ ₹ |
|---|---|
| ಏಪ್ರಿಲ್ 15,2014 | 15,000 |
| ಒಟ್ಟು | **15,000** |

### ಮುದ್ರಣ ಮತ್ತು ಲೇಖನ ಸಾಮಾಗ್ರಿ

| ದಿನಾಂಕ | ಮೊತ್ತ ₹ |
|---|---|
| ಮೇ 12,2014 | 10,750 |
| ಆಗಸ್ಟ್ 13,2014 | 15,000 |
| ಅಕ್ಟೋಬರ್ 18,2014 | 13,000 |
| ಒಟ್ಟು | **38,750** |

### ಬೆಳಕಿನ ವ್ಯವಸ್ಥೆ ವೆಚ್ಚ

| ದಿನಾಂಕ | ಮೊತ್ತ ₹ |
|---|---|
| ಸೆಪ್ಟೆಂಬರ್ 10,2014 | 12,250 |
| ಮಾರ್ಚ್ 27,2015 | 14,000 |
| ಒಟ್ಟು | **26,250** |

### ದೂರವಾಣಿ ಖರ್ಚುಗಳು

| ದಿನಾಂಕ | ಮೊತ್ತ ₹ |
|---|---|
| ಜೂನ್ 16,2014 | 810 |
| ಸೆಪ್ಟೆಂಬರ್ 13,2014 | 830 |
| ಫೆಬ್ರವರಿ 18,2014 | 960 |
| ಒಟ್ಟು | **2,600** |

### ಸುಂಕ ಮತ್ತು ತೆರಿಗೆಗಳು

| ದಿನಾಂಕ | ಮೊತ್ತ ₹ |
|---|---|
| ಜುಲೈ 15,2014 | 17,000 |
| ಒಟ್ಟು | **17,000** |

### ಸರ್ಕಾರಿ ಬಂಡವಾಳ ಪತ್ರಗಳು

| ದಿನಾಂಕ | ಮೊತ್ತ ₹ |
|---|---|
| ಜುಲೈ 30,2014 | 1,00,000 |
| ಅಕ್ಟೋಬರ್ 31,2014 | 1.00,000 |
| ಒಟ್ಟು | **2,00,000** |

**ಕೂಲಿ ಮತ್ತು ವೇತನಗಳು**

| ದಿನಾಂಕ | ಮೊತ್ತ ₹ |
|---|---|
| ಜುಲೈ 10,2014 | 22,000 |
| ಅಕ್ಟೋಬರ್ 01,2014 | 22,000 |
| ಡಿಸೆಂಬರ್ 31,2014 | 22,000 |
| ಮಾರ್ಚ್ 30,2015 | 22,000 |
| **ಒಟ್ಟು** | **88,000** |

**ಅಂಚೆ ವೆಚ್ಚ ಮತ್ತು ಕೋರಿಯರ್ ಸೇವೆಗಳು**

| ದಿನಾಂಕ | ಮೊತ್ತ ₹ |
|---|---|
| ಮೇ 20,2014 | 430 |
| ಆಗಸ್ಟ್ 15,2014 | 480 |
| ಜನವರಿ 22,2015 | 240 |
| ಮಾರ್ಚ್ 10,2015 | 850 |
| **ಒಟ್ಟು** | **2,000** |

ಮೇಲಿನ ಮಾಹಿತಿಯನ್ನು ಖಾತೆ ಪುಸ್ತಕದಲ್ಲಿನ ಸಂಬಂಧಿಸಿದ ಖಾತೆಗಳಲ್ಲಿ ತೋರಿಸಬಹುದು. ಸ್ವೀಕೃತಿ ಮತ್ತು ಪಾವತಿಗಳ ಅಂಶಗಳ ವಿವರಣಾತ್ಮಕ ಪಟ್ಟಿಯನ್ನು ಚಿತ್ರ 1 ರಲ್ಲಿ ನೀಡಲಾಗಿದೆ.

| ಸ್ವೀಕೃತಿಗಳು | ಪಾವತಿಗಳು |
|---|---|
| 1. ದೇಣಿಗೆಗಳು<br>(ಎ) ಸಾಮಾನ್ಯ<br>(ಬಿ) ನಿಶ್ಚಿತ ಉದ್ದೇಶ<br>2. ಪ್ರವೇಶ ಶುಲ್ಕಗಳು<br>3. ಮೃತ್ಯುಲೇಖದಾನ<br>4. ಹೂಡಿಕೆಗಳ ಮಾರಾಟ<br>5. ಸ್ಥಿರ ಆಸ್ತಿಗಳ ಮಾರಾಟ<br>6. ಸದಸ್ಯರಿಂದ ವಂತಿಗೆಗಳು<br>7. ಅಜೀವ ಸದಸ್ಯತ್ವ ಶುಲ್ಕಗಳು<br>8. ಹಳೆಯ ದಿನಪತ್ರಿಕೆಗಳ ಮಾರಾಟ<br>9. ಹಳೆಯ ಕ್ರೀಡಾಸಾಮಗ್ರಿಗಳ ಮಾರಾಟ<br>10. ಸ್ಥಿರ ಠೇವಣಿಗಳ ಮೇಲಿನ ಬಡ್ಡಿ<br>11. ಹೂಡಿಕೆಗಳ ಮೇಲಿನ ಬಡ್ಡಿ/ಲಾಭಾಂಶ<br>12. ದತ್ತಿ ಪ್ರದರ್ಶನಗಳಿಂದ ಉತ್ಪತ್ತಿ<br>13. ಅಳಿದುಳಿದ ಆಸ್ತಿ ಮಾರಾಟ<br>14. ಅನುದಾನ<br>15. ವಿಶೇಷ ನಿಧಿ ಹೂಡಿಕೆಗಳ ಮೇಲಿನ ಬಡ್ಡಿ/ಲಾಭಾಂಶ<br>16. ಇತರೆ ಸ್ವೀಕೃತಿಗಳು | 1. ಸ್ಥಿರ ಆಸ್ತಿಗಳ ಖರೀದಿ<br>2. ಕ್ರೀಡಾ ಸಾಮಗ್ರಿಗಳ ಖರೀದಿ<br>3. ಬಂಡವಾಳ ಪತ್ರಗಳಲ್ಲಿ ಹೂಡಿಕೆ<br>4. ಮುದ್ರಣ ಮತ್ತು ಲೇಖನ ಸಾಮಾಗ್ರಿ<br>5. ಅಂಚೆ ಮತ್ತು ಕೊರಿಯರ್ ಖರ್ಚುಗಳು<br>6. ಜಾಹೀರಾತುಗಳು<br>7. ಕೂಲಿ ಮತ್ತು ವೇತನ<br>8. ಗೌರವಧನ<br>9. ದೂರವಾಣಿ ಖರ್ಚುಗಳು<br>10. ವಿದ್ಯುತ್ ಮತ್ತು ನೀರಿನ ಖರ್ಚುಗಳು<br>11. ದುರಸ್ತಿ ಮತ್ತು ನವೀಕರಣ<br>12. ಆಟದ ಮೈದಾನದ ನಿರ್ವಹಣೆ<br>13. ಪ್ರಯಾಣದ ಖರ್ಚುಗಳು<br>14. ನಿಯತಕಾಲಿಕೆಗಳಿಗೆ ವಂತಿಗೆ<br>15. ಲೆಕ್ಕ ಪರಿಶೋಧನಾ ಖರ್ಚುಗಳು<br>16. ಮನರಂಜನಾ ಖರ್ಚುಗಳು<br>17. ಪುರಸಭಾ ತೆರಿಗೆಗಳು<br>18. ದಾನ/ದತ್ತಿ<br>19. ವಿಮೆ |

**ಆಯ-ವ್ಯಯ ಖಾತೆಯ ನಮೂನೆಯನ್ನು ಈ ಕೆಳಗೆ ನೀಡಲಾಗಿದೆ**

**ಖರ್ಚು ..........................ಕ್ಕೆ ವರ್ಷಾಂತ್ಯವಾಗುವ ಆಯ-ವ್ಯಯ ಖಾತೆ ಜಮಾ**

| ಸ್ವೀಕೃತಿಗಳು | ಮೊತ್ತ ₹ | ಪಾವತಿಗಳು | ಮೊತ್ತ ₹ |
|---|---|---|---|
| ಹಿಂದಿನಿಂದ ಬಂದ ಶಿಲ್ಕು | | ಹಿಂದಿನಿಂದ ಬಂದ ಶಿಲ್ಕು(ಬ್ಯಾಂಕ್ಮೀರೆಳೆತ) | xxx |
| ಕೈಯಲ್ಲಿನ ನಗದು | xxx | ಕೂಲಿ ಮತ್ತು ವೇತನ | xxx |
| ಬ್ಯಾಂಕಿನಲ್ಲಿ ನಗದು | xxx | ಬಾಡಿಗೆ | xxx |
| ವಂತಿಗೆಗಳು | xxx | ಸುಂಕ ಮತ್ತು ತೆರಿಗೆಗಳು | xxx |
| ಸಾಮಾನ್ಯ ದೇಣಿಗೆಗಳು | xxx | ವಿಮೆ | xxx |
| ದಿನಪತ್ರಿಕೆಗಳು | xxx | ಮುದ್ರಣ ಮತ್ತು ಲೇಖನ ಸಾಮಾಗ್ರಿ | xxx |
| ನಿಯತಕಾಲಿಕಗಳು/ರದ್ದಿ ಕಾಗದ ಮಾರಾಟ | xxx | ಅಂಚೆ ಮತ್ತು ಕೊರಿಯರ್ ಖರ್ಚುಗಳು | xxx |
| ಹಳೆಯ ಕ್ರೀಡಾ ಸಾಮಗ್ರಿಗಳ ಮಾರಾಟ | xxx | | xxx |
| ಸ್ಥಿರ ಠೇವಣಿಗಳ ಮೇಲಿನ ಬಡ್ಡಿ | xxx | ಜಾಹೀರಾತುಗಳು | xxx |
| ಸಾಮಾನ್ಯ ಹೂಡಿಕೆ ಮೇಲಿನ ಬಡ್ಡಿ/ಲಾಭಾಂಶ | xxx | ಇತರೆ ಖರ್ಚುಗಳು | xxx |
| ಭದ್ರತಾ ಕಪಾಟು ಬಾಡಿಗೆ | xxx | ದೂರವಾಣಿ ಖರ್ಚುಗಳು | xxx |
| ಅಳಿದುಳಿದ ಆಸ್ತಿ ಮಾರಾಟ | xxx | ಮನರಂಜನೆ ಖರ್ಚುಗಳು | xxx |
| ದತ್ತಿ ಪ್ರದರ್ಶನಗಳಿಂದ ಉತ್ಪತ್ತಿ | xxx | ಲೆಕ್ಕ ಪರಿಶೋಧನಾ ಖರ್ಚುಗಳು | xxx |
| ಇತರೆ ಸ್ವೀಕೃತಿಗಳು | xxx | ಗೌರವಧನ | xxx |
| ಅನುದಾನ/ಸಹಾಯಧನ** | xxx | ದುರಸ್ತಿ ಮತ್ತು ನವೀಕರಣ | xxx |
| ಮೃತ್ಯುಲೇಖದಾನ | xxx | ಆಟದ ಮೈದಾನದ ನಿರ್ವಹಣೆ | xxx |
| ವಿಶೇಷ ದೇಣಿಗೆಗಳು | xxx | ಪ್ರಯಾಣ ಖರ್ಚುಗಳು | xxx |
| ಹೂಡಿಕೆಗಳ ಮಾರಾಟ | xxx | ದಿನಪತ್ರಿಕೆ ಮತ್ತು ನಿಯತಕಾಲಿಕಗಳು | xxx |
| ಸ್ಥಿರ ಆಸ್ತಿಗಳ ಮಾರಾಟ | xxx | ಆಸ್ತಿಗಳ ಖರೀದಿ | xxx |
| ಅಜೀವ ಸದಸ್ಯತ್ವ ಶುಲ್ಕಗಳು | xxx | ಹೂಡಿಕೆಗಳ ಖರೀದಿ | xxx |
| ಪ್ರವೇಶ ಶುಲ್ಕಗಳು | xxx | ಮುಂದುವರಿದ ಶಿಲ್ಕು: | xxx |
| ನಿಶ್ಚಿತ ಉದ್ದೇಶ ನಿಧಿಗಳ ಸ್ವೀಕೃತಿಗಳು | xxx | ಕೈಯಲ್ಲಿನ ನಗದು | xxx |
| ನಿಶ್ಚಿತ ನಿಧಿ ಹೂಡಿಕೆಗಳ ಮೇಲಿನ ಬಡ್ಡಿ | xxx | ಬ್ಯಾಂಕಿನಲ್ಲಿ ನಗದು* | xxx |
| ಮುಂದುವರಿದ ಶಿಲ್ಕು (ಬ್ಯಾಂಕ್ ಮೀರೆಳೆತ)* | xxx | | |
| | **XXXXX** | | **XXXXX** |

**ಚಿತ್ರ 1.1 ಆಯ-ವ್ಯಯ ಖಾತೆಯ ಮಾದರಿ**

* ಎರಡು ಮೊತ್ತಗಳಲ್ಲಿ ಒಂದು ಇರುತ್ತದೆ. ಅದು ಬ್ಯಾಂಕಿನಲ್ಲಿ ನಗದು ಅಥವಾ ಬ್ಯಾಂಕ್ ಮೀರೆಳೆತವಾಗಿರಬಹುದು, ಆದರೆ, ಎರಡೂ ಇರುವುದಿಲ್ಲ.

ಕಂದಾಯದ ಸ್ವೀಕೃತಿಗಳು (ಹಿಂದಿನ, ಚಾಲ್ತಿ ಮತ್ತು ಭವಿಷ್ಯದ ಅವಧಿಗಳ) ಹಾಗೂ ಬಂಡವಾಳದ ಸ್ವೀಕೃತಿಗಳ ಪಟ್ಟಿಯನ್ನು ಆಯ ವ್ಯಯ ಖಾತೆಯ ಸ್ವೀಕೃತಿ ಬದಿಯಲ್ಲಿ ಮತ್ತು ಇದೇ ರೀತಿ ಕಂದಾಯದ ಪಾವತಿಗಳು (ಹಿಂದಿನ, ಚಾಲ್ತಿ ಮತ್ತು ಭವಿಷ್ಯದ ಅವಧಿಗಳ) ಹಾಗೂ ಬಂಡವಾಳದ ಪಾವತಿಗಳನ್ನು ಆಯ-ವ್ಯಯ ಖಾತೆಯ ಪಾವತಿ ಬದಿಯಲಿ ಪಟ್ಟಿ ಮಾಡಿರುವುದನ್ನು ಗಮನಿಸಬಹುದು.

### 1.3.1 ಮುಖ್ಯ ಲಕ್ಷಣಗಳು: Sailent Features

1. ಇದು ನಗದು ಪುಸ್ತಕದ ಸಾರಾಂಶವಾಗಿದೆ, ಇದರ ನಮೂನೆಯು ಖರ್ಚು ಮತ್ತು ಜಮಾ ಬದಿಯೊಂದಿಗೆ ಸರಳ ನಗದು ಪುಸ್ತಕದ (ಸೋಡಿ ಮತ್ತು ಬ್ಯಾಂಕ್ ಅಂಕಣಗಳಿಲ್ಲಿದ) ನಮೂನೆಗೆ ಹೋಲುತ್ತದೆ. ಸ್ವೀಕೃತಿಗಳನ್ನು ಖರ್ಚು ಬದಿಯಲ್ಲಿ ಹಾಗೂ ಪಾವತಿಗಳನ್ನು ಜಮಾ ಬದಿಯಲ್ಲಿ ದಾಖಲಿಸಲಾಗುತ್ತದೆ.
2. ಇದು ಅವಧಿಯ ಪರಿಗಣನೆ ಇಲ್ಲದೆ ಎಲ್ಲಾ ಸ್ವೀಕೃತಿಗಳು ಮತ್ತು ಎಲ್ಲಾ ಪಾವತಿಗಳ ಒಟ್ಟು ಮೊತ್ತವನ್ನು ತೋರಿಸುತ್ತದೆ.

   ಉದಾಹರಣೆ:31 ಮಾರ್ಚ್ 2015ಕ್ಕೆ ವರ್ಷಾಂತ್ಯವಾಗುವ ಆಯ-ವ್ಯಯ ಖಾತೆಯಲ್ಲಿ 2014-15ರ ಅವಧಿಯಲ್ಲಿ ಸ್ವೀಕರಿಸಿದ ಒಟ್ಟು ವಂತಿಗೆಗಳು, 2013-14 ಮತ್ತು 2015-16 ನೇ ಸಾಲಿನ ವರ್ಷಗಳ ಮೊಬಲಗನ್ನು ಒಳಗೊಂಡು ದಾಖಲಿಸಲಾಗಿದೆ. ಅದೇ ರೀತಿ, 2014-15ನೇ ವರ್ಷದಲ್ಲಿ ಪಾವತಿಸಿದ ತೆರಿಗೆಗಳು,2013-14 ಮತ್ತು 2015-16ನೇ ವರ್ಷಗಳಿಗೆ ಸಂಬಂಧಿಸಿದ್ದರೂ ದಾಖಲಿಸಲಾಗಿದೆ.
3. ಇದು ಬಂಡವಾಳ ಸ್ವರೂಪದ ಮತ್ತು ಕಂದಾಯ ಸ್ವರೂಪದ ಎಲ್ಲಾ ಸ್ವೀಕೃತಿಗಳು ಮತ್ತು ಪಾವತಿಗಳನ್ನು ಒಳಗೊಂಡಿದೆ.
4. ನಗದಾಗಿ ಅಥವಾ ಬ್ಯಾಂಕ್ ಮೂಲಕ ಪಡೆದ ಸ್ವೀಕೃತಿ ಅಥವಾ ಮಾಡಿದ ಪಾವತಿಗಳ ತಾರತಮ್ಯ ಮಾಡುವುದಿಲ್ಲ, ಅರಂಭಿಕ ಶಿಲ್ಕು ಮತ್ತು ಅಂತಿಮ ಶಿಲ್ಕುಗಳನ್ನು ಹೊರತುಪಡಿಸಿ, ಪ್ರತಿಯೊಂದು ಸ್ವೀಕೃತಿ ಮತ್ತು ಪಾವತಿಯ ಒಟ್ಟು ಮೊತ್ತವನ್ನು ಈ ಖಾತೆಯಲ್ಲಿ ತೋರಿಸಲಾಗುತ್ತದೆ.
5. ನಗದೇತರ ಅಂಶಗಳಾದ ಸವಕಳಿ, ಬಾಕಿ ಖರ್ಚುಗಳು, ಬರತಕ್ಕ ಆದಾಯಗಳು, ಇತ್ಯಾದಿ ಅಂಶಗಳನ್ನು ಈ ಖಾತೆಯಲ್ಲಿ ತೋರಿಸುವುದಿಲ್ಲ.
6. ಈ ಖಾತೆಯು ಕೈಯಲ್ಲಿನ ನಗದು ಮತ್ತು ಬ್ಯಾಂಕಿನಲ್ಲಿನ ನಗದು (ಅಥವಾ ಮೀರೆಳೆತ) ಆರಂಭಿಕ ಶಿಲ್ಕನಿಂದ ಪ್ರಾರಂಭವಾಗುತ್ತದೆ ಮತ್ತು ಕೈಯಲ್ಲಿನ ನಗದು ಮತ್ತು ಬ್ಯಾಂಕ್‌ಲ್ಲಿನ ನಗದು ಅಥವಾ ಬ್ಯಾಂಕ್ ಮೀರೆಳೆತದ ವರ್ಷಾಂತ್ಯದ ಶಿಲ್ಕಿನೊಂದಿಗೆ ಅಂತ್ಯಗೊಳ್ಳುತ್ತದೆ. ವಾಸ್ತವದಲ್ಲಿ ಬ್ಯಾಂಕ್ ಮೀರೆಳೆತ ಇಲ್ಲದಿದ್ದಲ್ಲಿ, ಈ ಖಾತೆಯ ಅಂತಿಮ ಶಿಲ್ಕು (ಸ್ವೀಕೃತಿಗಳು ಮತ್ತು ಪಾವತಿಗಳ ಒಟ್ಟು ಮೊತ್ತಗಳ ನಡುವಿನ ವ್ಯತ್ಯಾಸ) ಸಾಮಾನ್ಯವಾಗಿ, ಕೈಯಲ್ಲಿನ ನಗದು ಮತ್ತು ಬ್ಯಾಂಕ್‌ನಲ್ಲಿನ ನಗದು ಖರ್ಚು ಶಿಲ್ಕು ತೋರಿಸುತ್ತದೆ.

### 1.3.2 ಆಯ-ವ್ಯಯ ಖಾತೆ ತಯಾರಿಕೆಯಲ್ಲಿನ ಹಂತಗಳು: Steps in the preparation of Receipt and Payment Account

1. ಕೈಯಲ್ಲಿನ ನಗದು ಮತ್ತು ಬ್ಯಾಂಕಿನಲ್ಲಿನ ನಗದಿನ ಪ್ರಾರಂಭಿಕ ಶಿಲ್ಕುಗಳನ್ನು ಖರ್ಚು ಬದಿಯಲ್ಲಿ ತೆಗೆದುಕೊಳ್ಳುವುದು. ವರ್ಷದ ಪ್ರಾರಂಭದಲ್ಲಿ ಒಂದು ವೇಳೆ ಬ್ಯಾಂಕಿನ ಮೀರೆಳೆತ ಇದ್ದಲ್ಲಿ ಅದನ್ನು ಈ ಖಾತೆಯ ಜಮಾ ಬದಿಯಲ್ಲಿ ತೆಗೆದುಕೊಳ್ಳಬೇಕು.
2. ಎಲ್ಲಾ ಸ್ವೀಕೃತಿಗಳ ಒಟ್ಟು ಮೊತ್ತವನ್ನು ಅವುಗಳ ಸ್ವರೂಪದ ತಾರತಮ್ಯವಿಲ್ಲದೆ(ಬಂಡವಾಳ ಅಥವಾ ಕಂದಾಯದ) ಹಿಂದಿನ, ಚಾಲ್ತಿ ಮತ್ತು ಮುಂದಿನ ಯಾವುದೇ ಅವಧಿಗಳಿಗೆ ಸಂಬಂಧಪಟ್ಟಿದ್ದರೂ ಖರ್ಚು ಬದಿಯಲ್ಲಿ ತೋರಿಸಬೇಕು.
3. ಎಲ್ಲಾ ಪಾವತಿಗಳ ಒಟ್ಟು ಮೊತ್ತವನ್ನು ಅವುಗಳ ಸ್ವರೂಪದ ತಾರತಮ್ಯವಿಲ್ಲದೆ(ಬಂಡವಾಳ ಅಥವಾ ಕಂದಾಯದ) ಹಿಂದಿನ, ಚಾಲ್ತಿ ಮತ್ತು ಮುಂದಿನ ಯಾವುದೇ ಅವಧಿಗಳಿಗೆ ಸಂಬಂಧಪಟ್ಟಿದ್ದರೂ ಜಮಾ ಬದಿಯಲ್ಲಿ ತೋರಿಸಬೇಕು.

4. ಯಾವುದೇ ಬರತಕ್ಕ ಆದಾಯಗಳು ಮತ್ತು ಕೊಡತಕ್ಕ ಪಾವತಿಗಳನ್ನು ಈ ಖಾತೆಯಲ್ಲಿ ದಾಖಲಿಸುವಂತಿಲ್ಲ ಏಕೆಂದರೆ, ಅವುಗಳು ನಗದಿನ ಒಳ ಹರಿವು ಅಥವಾ ಹೊರ ಹರಿವನ್ನು ಒಳಗೊಂಡಿರುವುದಿಲ್ಲ.
5. ಖಾತೆಯ ಖರ್ಚು ಬದಿಯ ಒಟ್ಟು ಮತ್ತು ಜಮಾ ಬದಿಯ ಒಟ್ಟು ಮೊತ್ತಗಳ ನಡುವಿನ ವ್ಯತ್ಯಾಸವನ್ನು ಕಂಡುಹಿಡಿದು ಜಮಾ ಬದಿಯಲ್ಲಿ ನಗದು ಅಥವಾ ಬ್ಯಾಂಕಿನ ಅಂತಿಮ ಶಿಲ್ಕಾಗಿ ತೋರಿಸುವುದು. ಒಂದು ವೇಳೆ, ಜಮಾ ಬದಿಯ ಒಟ್ಟು ಮೊತ್ತವು ಖರ್ಚು ಬದಿಯ ಒಟ್ಟು ಮೊತ್ತಕ್ಕಿಂತ ಅಧಿಕವಾಗಿದ್ದಲ್ಲಿ ಖರ್ಚು ಬದಿಯಲ್ಲಿ ಬ್ಯಾಂಕ್ ಮೀರೆಳೆತ ಎಂದು ತೋರಿಸಿ ಖಾತೆಯನ್ನು ಅಂತ್ಯಗೊಳಿಸಬೇಕು.

ಉದಾಹರಣೆ 1 ರಲ್ಲಿ ನೀಡಿರುವ ನಗದು ಪುಸ್ತಕದ ಅಂಶಗಳ ಈ ಕೆಳಗಿನ ಮಾಹಿತಿಯನ್ನು ಆಧರಿಸಿ, 2015 ಮಾರ್ಚ್ 31ರ ವರ್ಷಾಂತ್ಯದಲ್ಲಿ ಗೋಲ್ಡನ್ ಕ್ರಿಕೆಟ್ ಕ್ಲಬ್ ರವರ ಆಯ ವ್ಯಯ ಖಾತೆಯನ್ನು ಈ ಕೆಳಗಿನಂತೆ ತಯಾರಿಸಬಹುದು.

**ನಗದು ಪುಸ್ತಕದ ಸಾರಾಂಶ**

| ವಿವರಗಳು | | ಮೊತ್ತ ₹ |
|---|---|---|
| ಏಪ್ರಿಲ್1,2014 ರಂದು ಕೈಯಲ್ಲಿನ ನಗದು | | 20,000 |
| ಏಪ್ರಿಲ್1,2014 ರಂದು ಬ್ಯಾಂಕ್‌ನಲ್ಲಿನ ನಗದು | | 35,000 |
| ವಂತಿಗೆಗಳು: | | |
| 2013–14 | 30,000 | |
| 2014–15 | 2,25,000 | |
| 2015–16 | 10,000 | 2,65,000 |
| ಕಟ್ಟಡದ ದೇಣಿಗೆ | | 60.000 |
| ಪ್ರವೇಶ ಶುಲ್ಕಗಳು | | 23,000 |
| ಆಜೀವ ಸದಸ್ಯತ್ವ ಶುಲ್ಕ | | 20,000 |
| ಮುದ್ರಣ ಮತ್ತು ಲೇಖನ ಸಾಮಗ್ರಿಗಳು | | 38,750 |
| ಬೆಳಕಿನ ವ್ಯವಸ್ಥೆ ಖರ್ಚು | | 26,250 |
| ಸುಂಕ ಮತ್ತು ತೆರಿಗೆಗಳು | | 17,000 |
| ದೂರವಾಣಿ ಖರ್ಚುಗಳು | | 2,600 |
| ಅಂಚೆ ಮತ್ತು ಕೊರಿಯರ್ | | 2,000 |
| ಕೂಲಿ ಮತ್ತು ವೇತನ | | 88,000 |
| ವಿಮಾ ಕಂತು | | 15,000 |
| ಸರ್ಕಾರಿ ಬಂಡವಾಳ ಪತ್ರಗಳ ಮೇಲಿನ ಬಡ್ಡಿ | | 18,000 |
| ಭದ್ರತಾ ಕಪಾಟು ಬಾಡಿಗೆ | | 42,000 |
| ಸರ್ಕಾರಿ ಬಂಡವಾಳ ಪತ್ರಗಳ ಖರೀದಿ | | 2,00,000 |
| ಮಾರ್ಚ್31, 2015 ರಂದು ಕೈಯಲ್ಲಿನ ನಗದು | | 23,400 |
| ಮಾರ್ಚ್31, 2015 ರಂದು ಬ್ಯಾಂಕ್‌ನಲ್ಲಿನ ನಗದು | | 70,000 |

**ಖರ್ಚು ಮಾರ್ಚ್ 31, 2015 ಕ್ಕೆ ಅಂತ್ಯವಾಗುವ ಆಯ–ವ್ಯಯ ಖಾತೆ ಜಮಾ**

| ಆಯ | | ಮೊತ್ತ ₹ | ವ್ಯಯ | ಮೊತ್ತ ₹ |
|---|---|---|---|---|
| ಏಪ್ರಿಲ್1, 2014 ರಂದು ಕೈಯಲ್ಲಿನ ನಗದು | | 20,000 | ಮುದ್ರಣ ಮತ್ತು ಲೇಖನ ಸಾಮಾಗ್ರಿ | 38,750 |
| ಏಪ್ರಿಲ್1, 2014 ರಂದು ಬ್ಯಾಂಕ್‌ನಲ್ಲಿನಗದು | | 35,000 | ಬೆಳಕಿನ ವೆಚ್ಚ | 26,250 |
| ವಂತಿಕೆಗಳು: | | | ಸುಂಕ ಮತ್ತು ತೆರಿಗೆಗಳು | 17,000 |
| 2013–14 | 30,000 | | ದೂರವಾಣಿ ವೆಚ್ಚಗಳು | 2,600 |
| 2014–15 | 2,25,000 | | ಅಂಚೆ ಮತ್ತು ಕೊರಿಯರ್ | 2,000 |
| 2015–16 | 10,000 | 2,65,000 | ಕೂಲಿ ಮತ್ತು ವೇತನ | 88,000 |
| ಕಟ್ಟಡಗಳ ದೇಣಿಗೆ | | 60,000 | ವಿಮಾಕಂತು | 15,000 |
| ಪ್ರವೇಶ ಶುಲ್ಕಗಳು | | 23,000 | ಸರ್ಕಾರಿ ಬಂಡವಾಳ ಪತ್ರಗಳ ಖರೀದಿ | 2,00,000 |
| ಅಜೀವ ಸದಸ್ಯತ್ವ ಶುಲ್ಕ | | 20,000 | ಮಾರ್ಚ್31,2015 ರಂದು ಕೈಯಲ್ಲಿನ ನಗದು | 23,400 |
| ಸರ್ಕಾರಿ ಬಂಡವಾಳ ಪತ್ರಗಳ ಮೇಲಿನ ಬಡ್ಡಿ | | 18,000 | ಮಾರ್ಚ್31,2015 ರಂದು ಬ್ಯಾಂಕ್‌ನಲ್ಲಿನ ನಗದು | 70,000 |
| ಭದ್ರತಾ ಕಪಾಟು ಬಾಡಿಗೆ | | 42,000 | | |
| | | **4,83,000** | | **4,83,000** |

**ನಿದರ್ಶನ – 1**

ಈ ಕೆಳಗಿನ ವಿವರಗಳು ಸಿಲ್ವರ್ ಪಾಯಿಂಟ್‌ಗೆ ಸಂಬಂಧಿಸಿವೆ 31 ಮಾರ್ಚ್, 2015ರ ವರ್ಷಾಂತ್ಯಕ್ಕೆ ಆಯ–ವ್ಯಯ ಖಾತೆಯನ್ನು ತಯಾರಿಸಿ.

| ಆಯ | | ಮೊತ್ತ ₹ | ವ್ಯಯ | ಮೊತ್ತ ₹ |
|---|---|---|---|---|
| ಪ್ರಾರಂಭದ ನಗದು ಶಿಲ್ಕು | | 1,000 | ಹಳೆಯ ಕ್ರೀಡಾ ಸಾಮಗ್ರಿಗಳ ಮಾರಟ | 1,200 |
| ಪ್ರಾರಂಭದ ಬ್ಯಾಂಕ್ ಶಿಲ್ಕು | | 7,200 | ಪೆವಿಲಿಯನ್‌ಗೆ ದೇಣಿಗೆ ಸ್ವೀಕಾರ | 4,600 |
| ವಂತಿಕೆಗಳ ಸಂಗ್ರಹಣೆ: | | | ಬಾಡಿಗೆ ಪಾವತಿ | 3,000 |
| 2013–14 | 500 | | ಕ್ರೀಡಾ ಸಾಮಗ್ರಿಗಳ ಖರೀದಿ | 4,800 |
| 2014–15 | 7,600 | | ಉಪಾಹಾರ ಖರೀದಿ | 600 |
| 2015–16 | 900 | 9,000 | ಟೆನ್ನಿಸ್ ಮೈದಾನ ನಿರ್ವಹಣೆ ವೆಚ್ಚ | 2,000 |
| ಉಪಾಹಾರದ ಮಾರಟ | | 1,000 | ವೇತನ ಪಾವತಿ | 2,500 |
| ಪ್ರವೇಶ ಶುಲ್ಕ ಸ್ವೀಕರಿಸಿದ್ದು | | 1,000 | ಪಂದ್ಯಾವಳಿ ವೆಚ್ಚ | 2,400 |
| | | | ಪೀಠೋಪಕರಣ ಖರೀದಿ | 1,500 |
| | | | ಕಛೇರಿ ವೆಚ್ಚಗಳು | 1,200 |
| | | | ಕೈಯಲ್ಲಿನ ಅಂತಿಮ ನಗದು | 400 |

**ಸಿಲ್ವರ್ ಪಾಯಿಂಟ್ ಪುಸ್ತಕ**

**ಖರ್ಚು ಮಾರ್ಚ್ 31, 2015 ಕ್ಕೆ ಅಂತ್ಯವಾಗುವ ಆಯ–ವ್ಯಯ ಖಾತೆ ಜಮಾ**

| ಆಯ | | ಮೊತ್ತ ₹ | ವ್ಯಯ | ಮೊತ್ತ ₹ |
|---|---|---|---|---|
| ಹಿಂದಿನಿಂದ ಬಂದ ಶಿಲ್ಕು: | | | ಬಾಡಿಗೆ | 3,000 |
| ನಗದು | | 1,000 | ಕ್ರೀಡಾ ಸಾಮಗ್ರಿಗಳ ಖರೀದಿ | 4,800 |
| ಬ್ಯಾಂಕ್ | | 7,200 | ಉಪಾಹಾರ ಖರೀದಿ | 600 |
| ವಂತಿಗೆಗಳು: | | | ಟೆನ್ನಿಸ್ ಮೈದಾನ ನಿರ್ವಹಣೆ ವೆಚ್ಚ | 2,000 |
| 2013–2014 | 500 | | ವೇತನ | 2,500 |
| 2014–2015 | 7,600 | | ಪಂದ್ಯಾವಳಿ ವೆಚ್ಚ | 2,400 |
| 2015–2016 | 900 | 9,000 | ಪೀಠೋಪಕರಣ ಖರೀದಿ | 1,500 |
| ಉಪಾಹಾರ ಮಾರಟ | | 1,000 | ಕಛೇರಿ ವೆಚ್ಚಗಳು | 1,200 |
| ಪ್ರವೇಶ ಶುಲ್ಕಗಳು | | 1,000 | ಮುಂದುವರಿದ ಶಿಲ್ಕು | |
| ಹಳೆಯ ಕ್ರೀಡಾಸಾಮಗ್ರಿಗಳ ಮಾರಟ | | 1,200 | ನಗದು | 400 |
| ಪೆವಿಲಿಯನ್‌ಗೆ ದೇಣಿಗೆ ಸ್ವೀಕಾರ | | 4,600 | ಬ್ಯಾಂಕ್(ವ್ಯತ್ಯಾಸದ ಮೊತ್ತ) | 6,600 |
| | | **25,000** | | **25,000** |

## 1.4 ಆದಾಯ — ವೆಚ್ಚ ಖಾತೆ Income and Expenditure Account:

ಇದು ಲೆಕ್ಕ ಬರಹ ವರ್ಷದ ಆದಾಯ ಮತ್ತು ವೆಚ್ಚಗಳ ಸಾರಾಂಶವಾಗಿದೆ. ಇದು ವ್ಯವಹಾರಿ ಸಂಸ್ಥೆಗಳ ಗಳಿಕೆಯ ಆಧಾರದ ಮೇಲೆ ತಯಾರಿಸಿದ ಲಾಭ–ನಷ್ಟ ಖಾತೆಗೆ ಹೋಲುತ್ತದೆ. ಇದು ಕಂದಾಯದ ಅಂಶಗಳನ್ನು ಮಾತ್ರ ಒಳಗೊಂಡಿದ್ದು ಇದರ ಅಂತಿಮ ಶಿಲ್ಕು ಮಿಗತೆ ಅಥವಾ ಕೊರತೆಯಾಗಿರುತ್ತದೆ. ವ್ಯವಹಾರಿ ಸಂಸ್ಥೆಯ ಲಾಭ–ನಷ್ಟದ ಖಾತೆ ಯಾವ ಉದ್ದೇಶವನ್ನು ಪೂರೈಸುತ್ತದೆಯೋ, ಅದೇ ಉದ್ದೇಶವನ್ನು ಆದಾಯ–ವೆಚ್ಚದ ಖಾತೆ ಪೂರೈಸುತ್ತದೆ. ಚಾಲ್ತಿ ಅವಧಿಯ ಎಲ್ಲಾ ಕಂದಾಯದ ಅಂಶಗಳನ್ನು ಈ ಖಾತೆಯಲ್ಲಿ ತೋರಿಸಲಾಗುತ್ತದೆ. ವೆಚ್ಚ ಮತ್ತು ನಷ್ಟಗಳನ್ನು ವೆಚ್ಚ ಬದಿಯಲ್ಲಿ ಹಾಗೂ ಆದಾಯ ಮತ್ತು ಗಳಿಕೆಗಳನ್ನು ಆದಾಯ ಬದಿಯಲ್ಲಿ ತೋರಿಸಲಾಗುತ್ತದೆ. ಇದು ನಿವ್ವಳ ಕಾರ್ಯಾತ್ಮಕ ಫಲಿತಾಂಶ ಮಿಗತೆ (ವೆಚ್ಚಗಳನ್ನು ಮೀರಿದ ಆದಾಯ) ಅಥವಾ ಕೊರತೆ (ಆದಾಯವನ್ನು ಮೀರಿದ ವೆಚ್ಚ) ರೂಪದಲ್ಲಿ ತೋರಿಸುತ್ತದೆ. ಇದನ್ನು ಅಢಾವೆ ಪತ್ರಿಕೆಯಲ್ಲಿನ ಬಂಡವಾಳ ನಿಧಿಗೆ ವರ್ಗಾಯಿಸಲಾಗುತ್ತದೆ.

ಆಯ ವ್ಯಯ ಖಾತೆಯ ಜೊತೆಯೊಂದಿಗಿನ ಹೆಚ್ಚುವರಿ ಮಾಹಿತಿಗಳಾದ ಬಾಕಿ ಮತ್ತು ಮುಂಗಡ ವೆಚ್ಚಗಳು, ಸವಕಳಿ ಇತ್ಯಾದಿಗಳ ಸಹಾಯದಿಂದ ಗಳಿಕೆ(accrual) ಆಧಾರದ ಮೇಲೆ ಆದಾಯ ವೆಚ್ಚ ಖಾತೆ ತಯಾರಿಸಲಾಗುತ್ತದೆ. ಅದುದರಿಂದ, ಆಯ ಮತ್ತು ವ್ಯಯಗಳಲ್ಲಿ ತೋರಿಸಿರುವ ಹಲವು ಅಂಶಗಳನ್ನು ಹೊಂದಾಣಿಕೆ ಮಾಡುವುದು ಅವಶ್ಯಕವಾಗಿರುತ್ತದೆ. ಉದಾಹರಣೆಗೆ, ಉದಾಹರಣೆ 1ರಲ್ಲಿ ತೋರಿಸಿರುವಂತೆ ಆಯ ವ್ಯಯ ಖಾತೆ ಸ್ವೀಕೃತಿ ಬದಿಯಲ್ಲಿ ತೋರಿಸಿರುವ 2014–15ನೇ ಸಾಲಿನಲ್ಲಿ ಸ್ವೀಕರಿಸಿದ ವಂತಿಕೆಗಳ ಮೊತ್ತ ₹2,65,000 ಚಾಲ್ತಿ ಅವದಿಯ ಹೊರತಾದ ಅವದಿಯ ಸ್ವೀಕೃತಿಗಳನ್ನು ಒಳಗೊಂಡಿದೆ. ಆದರೆ 2014–15ನೇ ವರ್ಷದ ಆದಾಯ ವೆಚ್ಚದ ಖಾತೆಯಲ್ಲಿ, ಚಾಲ್ತಿ ವರ್ಷಕ್ಕೆ ಸಂಬಂಧಿಸಿದ ವಂತಿಕೆಯ ಮೊತ್ತ ₹2,25,000 ಮಾತ್ರ ತೋರಿಸಲಾಗುತ್ತದೆ.

### 1.4.1 ಆದಾಯ–ವೆಚ್ಚದ ಖಾತೆಯ ತಯಾರಿಕೆಯಲ್ಲಿನ ಹಂತಗಳು

ನೀಡಲಾದ ಆಯ–ವ್ಯಯ ಖಾತೆಯಿಂದ ಆದಾಯ ವೆಚ್ಚ ಖಾತೆ ತಯಾರಿಸುವಲ್ಲಿ ಈ ಕೆಳಗಿನ ಹಂತಗಳು ಸಹಾಯಕವಾಗಬಲ್ಲವು:

1. ಆಯ–ವ್ಯಯ ಖಾತೆಯನ್ನು ಸಂಪೂರ್ಣವಾಗಿ ಓದಿಕೊಳ್ಳುವುದು.
2. ಆರಂಭದ ಮತ್ತು ಅಂತಿಮ ನಗದು ಮತ್ತು ಬ್ಯಾಂಕು ಶಿಲ್ಕುಗಳು ಆದಾಯಗಳಲ್ಲದಿರುವುದದರಿಂದ, ಅವುಗಳನ್ನು ಹೊರತು ಪಡಿಸಬೇಕು.
3. ಬಂಡವಾಳ ಸ್ವೀಕೃತಿಗಳು ಮತ್ತು ಬಂಡವಾಳದ ಪಾವತಿಗಳನ್ನು ಆಢಾವೆ ಪತ್ರಿಕೆಯಲ್ಲಿ ತೊರಿಸುವುದರಿಂದ, ಅವುಗಳನ್ನು ಬಿಡಬೇಕು.
4. ಕಂದಾಯ ಸ್ವೀಕೃತಿಗಳನ್ನು ಮಾತ್ರ ಆದಾಯ ವೆಚ್ಚ ಖಾತೆಯ ಆದಾಯ ಬದಿಯಲ್ಲಿ ತೆಗೆದುಕೊಳ್ಳಬೇಕು. ಈ ಅಂಶಗಳಲ್ಲಿ ಕೆಲವು ಹಿಂದಿನ ವರ್ಷದ ಮತ್ತು ಮುಂದಿನ ವರ್ಷದ ಮೊತ್ತಗಳನ್ನು ಕಳೆದು ಮತ್ತು ಚಾಲ್ತಿ ವರ್ಷದ ಸ್ವೀಕರಿಸದೇ ಇರುವ ಮೊತ್ತಗಳನ್ನು ಕೂಡಿಸಿ ಹೊಂದಾಣಿಕೆ ಮಾಡುವುದು ಅವಶ್ಯಕವಾಗಿರುತ್ತದೆ.
5. ಕಂದಾಯ ವೆಚ್ಚಗಳಲ್ಲಿ ಹೆಚ್ಚುವರಿ ಮಾಹಿತಿಯಲ್ಲಿ ನೀಡಲಾಗಿರುವ ಮುಂಗಡ ಪಾವತಿ ಮತ್ತು ಬಾಕಿ ಇರುವ ಮೊತ್ತಗಳನ್ನು ಹೊಂದಾಣಿಕೆ ಮಾಡುವುದರೊಂದಿಗೆ ಆದಾಯ ವೆಚ್ಚ ಖಾತೆಯ ವೆಚ್ಚದ ಬದಿಯಲ್ಲಿ ತೆಗೆದುಕೊಳ್ಳಬೇಕು.
6. ಆಯ–ವ್ಯಯ ಖಾತೆಯಲ್ಲಿ ಕಾಣಿಸಿಕೊಳ್ಳದಿರುವ, ಈ ಕೆಳಗಿನ ಅಂಶಗಳನ್ನು ಪರಿಗಣಿಸಿ ಚಾಲ್ತಿವರ್ಷದ ಮಿಗತೆ/ಕೊರತೆಯನ್ನು ಕಂಡುಹಿಡಿಯುವುದು.

   (ಎ) ಸ್ಥಿರ ಆಸ್ತಿಗಳ ಮೇಲಿನ ಸವಕಳಿ

   (ಬಿ) ಸಂಶಾಯಾಸ್ಪದ ಸಾಲಗಳಿಗಾಗಿ ತೆಗೆದಿರಿಸುವಿಕೆ

   (ಸಿ) ಸ್ಥಿರ ಆಸ್ತಿಗಳ ಮಾರಾಟದಲ್ಲಿನ ಲಾಭ ಅಥವಾ ನಷ್ಟ.

ಉದಾಹರಣೆ 1ರಲ್ಲಿ ನೀಡಲಾಗಿರುವ ಆಯ–ವ್ಯಯ ಖಾತೆಯಿಂದ, ಆದಾಯ–ವೆಚ್ಚ ಖಾತೆಯನ್ನು ಹೇಗೆ ತಯಾರಿಸಬೇಕೆಂದು ನೀವು ಈಗ ಗಮನಿಸುತ್ತೀರಿ.

**ಖರ್ಚು** **ಮಾರ್ಚ್ 31, 2015 ಕ್ಕೆ ಅಂತ್ಯವಾಗುವ ಆದಾಯ–ವೆಚ್ಚ ಖಾತೆ** **ಜಮಾ**

| ವೆಚ್ಚ | ಮೊತ್ತ ₹ | ಆದಾಯ | ಮೊತ್ತ ₹ |
|---|---|---|---|
| ಮುದ್ರಣ ಮತ್ತು ಲೇಖನಸಾಮಗ್ರಿ | 38,750 | ವಂತಿಗೆಗಳು | 2,25,000 |
| ಬೆಳಕು ವೆಚ್ಚ | 26,250 | ಪ್ರವೇಶ ಶುಲ್ಕಗಳು | 23,000 |
| ಸುಂಕ ಮತ್ತು ತೆರಿಗೆಗಳು | 17,000 | ಸರ್ಕಾರಿ ಬಂಡವಾಳಪತ್ರಗಳಲ್ಲಿನ | |
| ದೂರವಾಣಿ ವೆಚ್ಚಗಳು | 2,600 | ಹೂಡಿಕೆಗಳ ಮೇಲಿನ ಬಡ್ಡಿ | 18,000 |
| ಅಂಚೆ ಮತ್ತು ಕೊರಿಯರ್ ವೆಚ್ಚಗಳು | 2,000 | ಭದ್ರತಾ ಕಪಾಟು ಬಾಡಿಗೆ | 42,000 |
| ಕೂಲಿ ಮತ್ತು ವೇತನ | 88,000 | | |
| ವಿಮಾ ಕಂತು | 15,000 | | |
| ಮಿಗತೆ (ವೆಚ್ಚಗಳನ್ನು ಮೀರಿದ ಆದಾಯ) | 1,18,400 | | |
| | **3,08,000** | | **3,08,000** |

**ಟಿಪ್ಪಣಿ:**

1. ಪ್ರಾರಂಭಿಕ ಮತ್ತು ಅಂತಿಮ ನಗದು/ಬ್ಯಾಂಕ್ ಶುಲ್ಕುಗಳನ್ನು ಹೊರತುಪಡಿಸಿದೆ.
2. ಸರ್ಕಾರಿ ಬಂಡವಾಳ ಪತ್ರಗಳ ಖರೀದಿಯು ಬಂಡವಾಳ ವೆಚ್ಚವಾಗಿರುವುದರಿಂದ ಹೊರತುಪಡಿಸಿದೆ.

3. 2013–14 ಮತ್ತು 2014–2015ನೇ ವರ್ಷಾವಧಿಯ ಸ್ವೀಕರಿಸಿದ ವಂತಿಗೆಗಳ ಮೊಬಲಗನ್ನು ಹೊರತುಪಡಿಸಿದೆ.
4. ಅಜೀವ ಸದಸ್ಯತ್ವ ಶುಲ್ಕ ಬಂಡವಾಳ ಸ್ವೀಕೃತಿ ಅಂಶವಾಗಿರುವುದರಿಂದ ಹೊರತುಪಡಿಸಿದೆ.
5. ಕಟ್ಟಡದ ದೇಣಿಗೆ ನಿಶ್ಚಿತ ಉದ್ದೇಶಕ್ಕಾಗಿರುವುದರಿಂದ ಹೊರತುಪಡಿಸಿದೆ.

**ನಿದರ್ಶನ – 2**

ಈ ಕೆಳಗೆ ನೀಡಿರುವ ಆಯ–ವ್ಯಯ ಖಾತೆಯಿಂದ, 31 ಮಾರ್ಚ್ 2014ರ ವರ್ಷಾಂತ್ಯಕ್ಕೆ ಕ್ಲೀನ್ ಡೆಲ್ಲಿ ಕ್ಲಬ್‌ನ ಆದಾಯ–ವೆಚ್ಚ ಖಾತೆಯನ್ನು ತಯಾರಿಸಿ.

**ಕ್ಲೀನ್ ಡೆಲ್ಲಿ ಕ್ಲಬ್ ರವರ ಪುಸ್ತಕ**

**ಖರ್ಚು ಮಾರ್ಚ್ 31,2014ವರ್ಷಕ್ಕೆ ಅಂತ್ಯವಾಗುವ ಆಯ–ವ್ಯಯ ಖಾತೆ ಜಮಾ**

| ಆಯ | ಮೊತ್ತ ₹ | ವ್ಯಯ | ಮೊತ್ತ ₹ |
|---|---|---|---|
| ಹಿಂದಿನಿಂದ ಬಂದ ಶಿಲ್ಕು (ಕೈಯಲ್ಲಿನ ನಗದು) | 3,200 | ವೇತನ | 1,500 |
| ವಂತಿಗೆಗಳು | 22,500 | ಬಾಡಿಗೆ | 800 |
| ಪ್ರವೇಶ ಶುಲ್ಕಗಳು | 1,250 | ವಿದ್ಯುತ್ ಶುಲ್ಕ | 3,500 |
| ದೇಣಿಗೆಗಳು | 2,500 | ತೆರಿಗೆಗಳು | 1,700 |
| ಹಾಲ್ ಬಾಡಿಗೆ | 750 | ಮುದ್ರಣ ಮತ್ತು ಲೇಖನ ಸಾಮಗ್ರಿ | 380 |
| ಹೂಡಿಕೆಗಳ ಮಾರಾಟ | 3,000 | ಇತರೆ ವೆಚ್ಚಗಳು | 920 |
| | | ಪುಸ್ತಕಗಳ ಖರೀದಿ | 7,500 |
| | | ಸರ್ಕಾರಿ ಬಾಂಡ್‌ಗಳ ಖರೀದಿ | 10,000 |
| | | ಬ್ಯಾಂಕಿನಲ್ಲಿ ಸ್ಥಿರ ಠೇವಣಿ (31.3.2014) | 5,000 |
| | | ಮುಂದುವರಿದ ಶಿಲ್ಕು : | |
| | | ಕೈಯಲ್ಲಿನ ನಗದು 400 | |
| | | ಬ್ಯಾಂಕಿನಲ್ಲಿನ ನಗದು 1,500 | 1,900 |
| | **33,200** | | **33,200** |

**ಪರಿಹಾರ:**

**ಕ್ಲೀನ್ ಡೆಲ್ಲಿ ಕ್ಲಬ್ ರವರ ಪುಸ್ತಕ**

**ಖರ್ಚು ಮಾರ್ಚ್ 31, 2014 ವರ್ಷಕ್ಕೆ ಅಂತ್ಯವಾಗುವ ಆದಾಯ–ವೆಚ್ಚ ಖಾತೆ ಜಮಾ**

| ವೆಚ್ಚ | ಮೊತ್ತ ₹ | ಆದಾಯ | ಮೊತ್ತ ₹ |
|---|---|---|---|
| ವೇತನ | 1,500 | ವಂತಿಗೆಗಳು | 22,500 |
| ಬಾಡಿಗೆ | 800 | ಪ್ರವೇಶ ಶುಲ್ಕಗಳು | 1,250 |
| ವಿದ್ಯುತ್ ಶುಲ್ಕ | 3,500 | ದೇಣಿಗೆಗಳು | 2,500 |
| ತೆರಿಗೆಗಳು | 1,700 | ಹಾಲ್ ಬಾಡಿಗೆ | 750 |
| ಮುದ್ರಣ ಮತ್ತು ಲೇಖನಸಾಮಗ್ರಿ | 380 | | |
| ಇತರೆ ವೆಚ್ಚಗಳು | 920 | | |
| ಮಿಗತೆ (ವೆಚ್ಚಗಳನ್ನು ಮೀರಿದ ಆದಾಯ) | 18,200 | | |
| | **27,000** | | **27,000** |

**ನಿದರ್ಶನ – 3**

ಈ ಕೆಳಗೆ ನೀಡಿರುವ ಮಾರ್ಚ್ 31, 2015ರ ವರ್ಷಾಂತ್ಯದ ಆಯ–ವ್ಯಯ ಖಾತೆಯಿಂದ, ಅದೇ ಅವಧಿಗೆ ನೇಗಿಸ್ ಕ್ಲಬ್ ನ ಆದಾಯ–ವೆಚ್ಚ ಖಾತೆಯನ್ನು ತಯಾರಿಸಿ.

**ನೇಗಿಸ್ ಕ್ಲಬ್ ರವರ ಪುಸ್ತಕ**

**ಖರ್ಚು ಮಾರ್ಚ್ 31, 2015 ವರ್ಷಕ್ಕೆ ಅಂತ್ಯವಾಗುವ ಆಯ–ವ್ಯಯ ಖಾತೆ ಜಮಾ**

| ಆಯ | | | ಮೊತ್ತ ₹ | ವ್ಯಯ | ಮೊತ್ತ ₹ |
|---|---|---|---|---|---|
| ಹಿಂದಿನಿಂದ ಬಂದ ಶಿಲ್ಕು (ಬ್ಯಾಂಕ್) | | | 25,000 | ಪೀಠೋಪಕರಣಗಳ ಖರೀದಿ(1.7.2014) | 5,000 |
| ವಂತಿಗೆಗಳು: | | | | ವೇತನಗಳು | 2,000 |
| | 2014 | 1,500 | | ದೂರವಾಣಿ ವೆಚ್ಚಗಳು | 300 |
| | 2015 | 10,000 | | ವಿದ್ಯುತ್ ಶುಲ್ಕಗಳು | 600 |
| | 2016 | 500 | 12,000 | ಅಂಚೆ ಮತ್ತು ಲೇಖನಸಾಮಗ್ರಿ | 150 |
| ದೇಣಿಗೆಗಳು | | | 2,000 | ಪುಸ್ತಕಗಳ ಖರೀದಿ | 2,500 |
| ಸಭಾಂಗಣ ಬಾಡಿಗೆ | | | 300 | ಮನರಂಜನೆ ವೆಚ್ಚಗಳು | 900 |
| ಬ್ಯಾಂಕ್ ಠೇವಣಿ ಮೇಲಿನ ಬಡ್ಡಿ | | | 450 | 5% ಸರ್ಕಾರಿಪತ್ರಗಳ ಖರೀದಿ (1.7.2014) | 8,000 |
| ಪ್ರವೇಶ ಶುಲ್ಕಗಳು | | | 1,000 | ಇತರೆ ವೆಚ್ಚಗಳು | 600 |
| | | | | ಮುಂದುವರಿದ ಶಿಲ್ಕು: ನಗದು | 300 |
| | | | | ಬ್ಯಾಂಕ್ | 20,400 |
| | | | **40,750** | | **40,750** |

ಈ ಕೆಳಗಿನ ಹೆಚ್ಚುವರಿ ಮಾಹಿತಿ ಲಭ್ಯವಿದೆ:

1. ಕೊಡತಕ್ಕ ವೇತನಗಳು ₹1,500
2. ಕೊಡತಕ್ಕ ಮನರಂಜನೆ ವೆಚ್ಚಗಳು ₹500
3. ಬರಬೇಕಾದ ಬ್ಯಾಂಕ್ ಬಡ್ಡಿ ₹150
4. ಗಳಿಸಲ್ಪಟ್ಟ ವಂತಿಗೆಗಳು ₹400
5. ಪ್ರವೇಶ ಶುಲ್ಕಗಳ ಶೇಕಡ 50ನ್ನು ಬಂಡವಾಳೀಕರಿಸಿ
6. ಪೀಠೋಪಕರಣಗಳ ಮೇಲೆ ವಾರ್ಷಿಕ ಶೇಕಡ 10 ಸವಕಳಿ ತೆಗೆಯಿರಿ.

**ಪರಿಹಾರ:**

**ನೇಗಿಸ್ ಕ್ಲಬ್ ರವರ ಪುಸ್ತಕ**

**ಖರ್ಚು ಮಾರ್ಚ್ 31,2015 ವರ್ಷಕ್ಕೆ ಅಂತ್ಯವಾಗುವ ಆದಾಯ–ವೆಚ್ಚ ಖಾತೆ ಜಮಾ**

| ವೆಚ್ಚ | | ಮೊತ್ತ ₹ | ಆದಾ ಯ | | ಮೊತ್ತ ₹ |
|---|---|---|---|---|---|
| ವೇತನ | 2,000 | | ವಂತಿಗೆಗಳು | | 10,400 |
| ಕೂಡಿಸಿ: ವೇತನ ಬಾಕಿ | 1,500 | 3,500 | ದೇಣಿಗೆಗಳು | | 2,000 |
| ದೂರವಾಣಿ ವೆಚ್ಚಗಳು | | 300 | ಪ್ರವೇಶ ಶುಲ್ಕಗಳು (1,000ದಲ್ಲಿ 50%) | | 500 |
| ವಿದ್ಯುತ್ ಶುಲ್ಕ | | 600 | ಬ್ಯಾಂಕ್ ಬಡ್ಡಿ | 450 | |
| ಅಂಚೆ ಮತ್ತು ಲೇಖನಸಾಮಗ್ರಿ | | 150 | ಕೂಡಿಸಿ: ಬಾಕಿಬಡ್ಡಿ | 150 | 600 |
| ಮನರಂಜನೆ ವೆಚ್ಚಗಳು | 900 | | ಹೂಡಿಕೆಗಳ ಮೇಲಿನ ಬಡ್ಡಿ | | 200 |
| ಕೂಡಿಸಿ: ಕೊಡತಕ್ಕ ವೆಚ್ಚಗಳು | 500 | 1,400 | ಸಭಾಂಗಣ ಬಾಡಿಗೆ | | 300 |
| ಇತರೆ ವೆಚ್ಚಗಳು | | 600 | | | |
| ಪೀಠೋಪಕರಣಗಳ ಮೇಲಿನ ಸವಕಳಿ | | 375 | | | |
| ಮಿಗತೆ (ವೆಚ್ಚಗಳನ್ನು ಮೀರಿದ ಆದಾಯ) | | 7,075 | | | |
| | | **14,000** | | | **14,000** |

### 1.4.2 ಆದಾಯ–ವೆಚ್ಚ ಖಾತೆ ಮತ್ತು ಆಯ–ವ್ಯಯ ಖಾತೆ ನಡುವಿನ ವ್ಯತ್ಯಾಸಗಳು.

ಆಯ–ವ್ಯಯ ಖಾತೆ ಮತ್ತು ಆದಾಯ–ವೆಚ್ಚ ಖಾತೆಗಳಿಗೆ ಸಂಬಂಧಿಸಿದ ಚರ್ಚೆಯನ್ನು ಆಧರಿಸಿ ಕೋಷ್ಟಕದ ರೂಪದಲ್ಲಿ ಆದಾಯ–ವೆಚ್ಚ ಖಾತೆ ಮತ್ತು ಆಯ–ವ್ಯಯ ಖಾತೆಗಳ ನಡುವಿನ ವ್ಯತ್ಯಾಸಗಳನ್ನು ಪಟ್ಟಿ ಮಾಡಲಾಗಿದೆ.

| ವ್ಯತ್ಯಾಸದ ಆಧಾರ | ಆದಾಯ–ವೆಚ್ಚ ಖಾತೆ | ಆಯ–ವ್ಯಯ ಖಾತೆ |
|---|---|---|
| ಸ್ವರೂಪ | ಇದು ಲಾಭ–ನಷ್ಟ ಖಾತೆಯ ತರಹ ಇದೆ. | ಇದು ನಗದು ಪುಸ್ತಕದ ಸಾರಾಂಶವಾಗಿದೆ. |
| ಅಂಶಗಳ ಸ್ವರೂಪ | ಇದು ಕಂದಾಯ ಸ್ವರೂಪದ ಆದಾಯ ಮತ್ತು ವೆಚ್ಚವನ್ನು ಮಾತ್ರ ದಾಖಲಿಸುತ್ತದೆ. | ಇದು ಕಂದಾಯ ಹಾಗೂ ಬಂಡವಾಳ ಸ್ವರೂಪದ ಸ್ವೀಕೃತಿ ಮತ್ತು ಪಾವತಿಗಳನ್ನು ದಾಖಲಿಸುತ್ತದೆ. |
| ಅವಧಿ | ಚಾಲ್ತಿ ಅವಧಿಯ ಆದಾಯ ಮತ್ತು ವೆಚ್ಚದ ಅಂಶಗಳಿಗೆ ಸಂಬಂಧಿಸಿದೆ. | ಹಿಂದಿನ ಮತ್ತು ಮುಂದಿನ ಅವಧಿಯ ಆಯ ಮತ್ತು ವ್ಯಯಗಳಿಗೂ ಸಹ ಸಂಬಂಧಿಸಿರಬಹುದು. |
| ಖರ್ಚು ಬದಿ | ಈ ಖಾತೆಯ ಖರ್ಚು ಬದಿಯಲ್ಲಿ ವೆಚ್ಚಗಳು ಮತ್ತು ನಷ್ಟಗಳನ್ನು ದಾಖಲಿಸಲಾಗುತ್ತದೆ. | ಈ ಖಾತೆಯ ಖರ್ಚು ಬದಿಯಲ್ಲಿ ಸ್ವೀಕೃತಿಗಳನ್ನು ದಾಖಲಿಸಲಾಗುತ್ತದೆ. |
| ಜಮಾ ಬದಿ | ಈ ಖಾತೆಯ ಜಮಾ ಬದಿಯಲ್ಲಿ ಆದಾಯ ಮತ್ತು ಗಳಿಕೆಗಳನ್ನು ದಾಖಲಿಸಲಾಗುತ್ತದೆ. | ಈ ಖಾತೆಯ ಜಮಾ ಬದಿಯಲ್ಲಿ ಪಾವತಿಗಳನ್ನು ದಾಖಲಿಸಲಾಗುತ್ತದೆ. |
| ಸವಕಳಿ | ಸವಕಳಿಯನ್ನು ಒಳಗೊಂಡಿರುತ್ತದೆ. | ಸವಕಳಿಯನ್ನು ಒಳಗೊಂಡಿರುವುದಿಲ್ಲ. |

| | | |
|---|---|---|
| ಪ್ರಾರಂಭಿಕ ಶಿಲ್ಕು | ಪ್ರಾರಂಭಿಕ ಶಿಲ್ಕು ಇರುವುದಿಲ್ಲ. | ಪ್ರಾರಂಭಿಕ ಶಿಲ್ಕು ಪ್ರಾರಂಭದ ಕೈಯಲ್ಲಿನ ನಗದು/ಬ್ಯಾಂಕಿನಲ್ಲಿನ ನಗದು ಅಥವಾ ಬ್ಯಾಂಕ್ ಮೀರೆಳೆತವನ್ನು ಪ್ರತಿನಿಧಿಸುತ್ತದೆ. |
| ಅಂತಿಮ ಶಿಲ್ಕು | ಅಂತಿಮ ಶಿಲ್ಕು ವೆಚ್ಚ ಮೀರಿದ ಆದಾಯ ಅಥವಾ ಆದಾಯ ಮೀರಿದ ವೆಚ್ಚವಾಗಿರಬಹುದು. | ಅಂತಿಮ ಶಿಲ್ಕು ಅಂತಿಮ ಕೈಯಲ್ಲಿನ ನಗದು/ಬ್ಯಾಂಕಿನಲ್ಲಿನ ನಗದು ಅಥವಾ ಬ್ಯಾಂಕ್ ಮೀರೆಳೆತವನ್ನು ಪ್ರತಿನಿಧಿಸುತ್ತದೆ. |

## 1.5 ಆಢಾವೆ ಪತ್ರಿಕೆ Balance Sheet

ಲಾಭಕ್ಕಲ್ಲದ ಸಂಸ್ಥೆಗಳು ತಮ್ಮ ಹಣಕಾಸಿನ ಸ್ಥಿತಿಯನ್ನು ಕಂಡುಹಿಡಿಯಲು ಆಢಾವೆ ಪತ್ರಿಕೆಯನ್ನು ತಯಾರಿಸುತ್ತವೆ. ವ್ಯವಹಾರ ಸಂಸ್ಥೆಗಳ ಮಾದರಿಯಲ್ಲಿಯೇ ತಮ್ಮ ಆಢಾವೆ ಪತ್ರಿಕೆಯನ್ನು ತಯಾರಿಸುತ್ತವೆ. ಇದು ವರ್ಷಾಂತ್ಯದಲ್ಲಿನ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ತೋರಿಸುತ್ತವೆ. ಆಸ್ತಿಗಳನ್ನು ಬಲ ಬದಿಯಲ್ಲಿ ಮತ್ತು ಹೊಣೆಗಾರಿಕೆಗಳನ್ನು ಎಡ ಬದಿಯಲ್ಲಿ ತೋರಿಸಲಾಗುತ್ತದೆ ಹಾಗೂ ಬಂಡವಾಳ ನಿಧಿ ಅಥವಾ ಸಾಮಾನ್ಯ ನಿಧಿಯನ್ನು ಬಂಡವಾಳದ ಸ್ಥಳದಲ್ಲಿ ತೋರಿಸಲಾಗುತ್ತದೆ. ಪರಿಸ್ಥಿತಿಗೆ ಅನುಗುಣವಾಗಿ ಆದಾಯ–ವೆಚ್ಚ ಖಾತೆ ಮಿಗತೆ ಅಥವ ಕೊರತೆಯನ್ನು ಬಂಡವಾಳ ನಿಧಿಗೆ ಕೂಡಿಸಲಾಗುತ್ತದೆ ಅಥವಾ ಕಳೆಯಲಾಗುತ್ತದೆ. ಬಂಡವಾಳದ ಅಂಶಗಳಾದ ಮೃತ್ಯುಲೇಖದಾನ, ಪ್ರವೇಶ ಶುಲ್ಕಗಳು ಮತ್ತು ಅಜೀವ ಸದಸ್ಯತ್ವ ಶುಲ್ಕಗಳನ್ನು ನೇರವಾಗಿ ಬಂಡವಾಳ ನಿಧಿಗೆ ಕೂಡಿಸುವುದು ಸಾಮಾನ್ಯ ಆಚರಣೆಯಾಗಿರುತ್ತದೆ.

ಬಂಡವಾಳ ನಿಧಿ ಅಥವಾ ಸಾಮಾನ್ಯ ನಿಧಿ ಹೊರತಾಗಿ ನಿಶ್ಚಿತ ಉದ್ದೇಶಗಳಿಗೆ ಅಥವಾ ವಂತಿಕೆದಾರರ/ ದಾನಿಗಳ ಅಪೇಕ್ಷೆಗಳನ್ನು ಪೂರೈಸಲು ಕಟ್ಟಡ ನಿಧಿ, ಕ್ರೀಡಾನಿಧಿ ಇತ್ಯಾದಿ ನಿಧಿಗಳನ್ನು ಸೃಷ್ಟಿಸಬೇಕಾಗಬಹುದು. ಇಂತಹ ನಿಧಿಗಳನ್ನು ಪ್ರತ್ಯೇಕವಾಗಿ ಆಢಾವೆ ಪತ್ರಿಕೆಯ ಹೊಣೆಗಾರಿಕೆಯ ಬದಿಯಲ್ಲಿ ತೋರಿಸಲಾಗುತ್ತದೆ.

ಕೆಲವು ಸಂದರ್ಭಗಳಲ್ಲಿ ವರ್ಷದ ಪ್ರಾರಂಭದಲ್ಲಿ ಬಂಡವಾಳ ನಿಧಿ/ಸಾಮಾನ್ಯ ನಿಧಿಯ ಪ್ರಾರಂಭಿಕ ಶಿಲ್ಕು ಕಂಡುಹಿಡಿಯಲು ಆಢಾವೆ ಪತ್ರಿಕೆಯನ್ನು ತಯಾರಿಸುವುದು ಅವಶ್ಯಕವಾಗಿರುತ್ತದೆ.

### 1.5.1 ಆಢಾವೆ ಪತ್ರಿಕೆ ತಯಾರಿಸುವುದು

ಆಢಾವೆ ಪತ್ರಿಕೆ ತಯಾರಿಸಲು ಈ ಕೆಳಗಿನ ಕ್ರಮವನ್ನು ಅನುಸರಿಸಲಾಗುತ್ತದೆ:

(1) ಪ್ರಾರಂಭಿಕ ಆಢಾವೆ ಪತ್ರಿಕೆಯಿಂದ ಬಂಡವಾಳ ನಿಧಿ/ ಸಾಮಾನ್ಯ ನಿಧಿಯನ್ನು ತೆಗೆದುಕೊಂಡು, ಆದಾಯ ವೆಚ್ಚ ಖಾತೆಯ ಮಿಗತೆಯನ್ನು ಕೂಡಿಸಬೇಕು. ಮುಂದುವರಿದು, ಪ್ರವೇಶ ಶುಲ್ಕಗಳು, ಮೃತ್ಯುಲೇಖದಾನ, ಅಜೀವ ಸದಸ್ಯತ್ವ ಶುಲ್ಕ, ಇತ್ಯಾದಿ ವರ್ಷಾವಧಿಯಲ್ಲಿನ ಸ್ವೀಕೃತಿಗಳನ್ನು ಕೂಡಿಸಬೇಕು.

(2) ಎಲ್ಲಾ ಸ್ಥಿರ ಆಸ್ತಿಗಳನ್ನು (ವರ್ಷಾವಾಧಿಯಲ್ಲಿ ಮಾರಾಟವಾಗದ/ತಿರಸ್ಕರಿಸದ/ನಾಶವಾಗದಿರುವ) ಸೇರ್ಪಡೆಗಳೊಂದಿಗೆ(ಆಯ ವ್ಯಯ ಖಾತೆಯಿಂದ) ಸವಕಳಿ ತೆಗೆದ ನಂತರ(ಆದಾಯ–ವೆಚ್ಚ ಖಾತೆಯ ಪ್ರಕಾರ) ಆಸ್ತಿಯ ಬದಿಯಲ್ಲಿ ತೋರಿಸುವುದು.

(3) ಆಯ–ವ್ಯಯ ಖಾತೆಯ ಸ್ವೀಕೃತಿ ಬದಿಯಲ್ಲಿನ ಅಂಶಗಳನ್ನು ಆದಾಯ–ವೆಚ್ಚ ಖಾತೆಯ ಆದಾಯದ ಬದಿಯೊಂದಿಗೆ ಹೊಲಿಕೆ ಮಾಡಿರಿ:

(ಎ) ಬಾಕಿಇದ್ದು ಸ್ವೀಕರಿಸದೇ ಇರುವ ವಂತಿಕೆಗಳು:

(ಬಿ) ಮುಂಗಡ ಸ್ವೀಕರಿಸಿದ ಆದಾಯಗಳು:

(ಸಿ) ವರ್ಷಾವಧಿಯಲ್ಲಿ ಮಾರಾಟ ಮಾಡಿದ ಸ್ಥಿರ ಆಸ್ತಿಗಳು:

(ಡಿ) ಬಂಡವಾಳೀಕರಿಸಿದ ಅಂಶಗಳಾದ (ನೇರವಾಗಿ ಆಢಾವೆ ಪತ್ರಿಕೆಗೆ ತೆಗೆದುಕೊಳ್ಳುವುದು) ಉದಾಹರಣೆಗೆ ಮೃತ್ಯುಲೇಖದಾನ, ನಿಶ್ಚಿತ ನಿಧಿಗಳ ಹೂಡಿಕೆಯ ಮೇಲಿನ ಬಡ್ಡಿ ಇತ್ಯಾದಿಗಳ ಮೊತ್ತವನ್ನು ಕಂಡುಹಿಡಿಯುವುದು.

(4) ಅದೇ ರೀತಿಯಲ್ಲಿ, ಆಯ–ವ್ಯಯ ಖಾತೆಯ ಪಾವತಿ ಬದಿಯಲ್ಲಿನ ಅಂಶಗಳನ್ನು ಆದಾಯ–ವೆಚ್ಚ ಖಾತೆಯ ವೆಚ್ಚದ ಬದಿಯೊಂದಿಗೆ ಹೋಲಿಕೆಮಾಡಿ:

(ಎ) ಕೊಡಬೇಕಾದ ಖರ್ಚುಗಳು;

(ಬಿ) ಮುಂಗಡಪಾವತಿಸಿದ ಖರ್ಚುಗಳು:

(ಸಿ) ವರ್ಷಾವಧಿಯಲ್ಲಿ ಖರೀದಿಸಿದ ಸ್ಥಿರ ಆಸ್ತಿಗಳು:

(ಡಿ) ಸ್ಥಿರ ಆಸ್ತಿಗಳ ಮೇಲಿನ ಸವಕಳಿ:

(ಇ) ಕೈಯಲ್ಲಿನ ಲೇಖನಸಾಮಗ್ರಿಗಳ ದಾಸ್ತಾನು ತರಹದ ವ್ಯಯವಾಗುವ ದಾಸ್ತಾನು:

(ಎಫ್) ಕೈಯಲ್ಲಿನ ಅಂತಿಮ ನಗದು ಮತ್ತು ಬ್ಯಾಂಕಿನಲ್ಲಿನ ನಗದು ಇತ್ಯಾದಿಗಳ ಮೊತ್ತಗಳು ಇದ್ದಲ್ಲಿ ಕಂಡುಹಿಡಿಯುವುದು:

ಅಢಾವೆ ಪತ್ರಿಕೆಯ ತಯಾರಿಕೆಯನ್ನು ಸಮರ್ಪಕವಾಗಿ ಅರ್ಥಮಾಡಿಕೊಳ್ಳಲು ಅಢಾವೆ ಪತ್ರಿಕೆಯ ಮಾದರಿಯನ್ನು ನೀಡಲಾಗಿದೆ.

**--------- ರಂದು ಇದ್ದಂತೆ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|
| **ಬಂಡವಾಳ ನಿಧಿ:** | | ಕೈಯಲ್ಲಿನ ನಗದು ಮತ್ತು/ಅಥವಾ ಬ್ಯಾಂಕಿನಲ್ಲಿ | |
| ಪ್ರಾರಂಭಿಕ ಶಿಲ್ಕು | — | ನಗದು | — |
| ಕೂಡಿಸು: ಮಿಗತೆ | | ಬರಬೇಕಾದ ಆದಾಯಗಳು | — |
| ಅಥವಾ | | ಮುಂಗಡ ಪಾವತಿಸಿದ ಖರ್ಚುಗಳು | — |
| ಕಳೆಯಿರಿ: ಕೊರತೆ | — | **ವ್ಯಯವಾಗುವ ಅಂಶಗಳ ದಾಸ್ತನು:** | |
| ಕೂಡಿಸು: ಚಾಲ್ತಿ ವರ್ಷದ ಬಂಡವಾಳೀಕರಿಸಿದ | | ಹಿಂದಿನ ಶಿಲ್ಕು | |
| ಆದಾಯಗಳು: | | ಕೂಡಿಸು: ಚಾಲ್ತಿ ಅವಧಿಯಲ್ಲಿನ ಖರೀದಿಗಳು | |
| ಮೃತ್ಯುಲೇಖದಾನ | — | ಕಳೆಯಿರಿ: ಅವಧಿಯಲ್ಲಿ ವ್ಯಯವಾದ ಮೌಲ್ಯ | — |
| ಪ್ರವೇಶ ಶುಲ್ಕಗಳು | — | **ಆಸ್ತಿಗಳು:** | |
| ಅಜೀವ ಸದಸ್ಯತ್ವ ಶುಲ್ಕಗಳು | — | ಹಿಂದಿನ ಶಿಲ್ಕು | — |
| ಅಂತಿಮ ಶಿಲ್ಕು | — | ಕೂಡಿಸು: ಚಾಲ್ತಿ ಅವಧಿಯಲ್ಲಿನ ಖರೀದಿಗಳು | |
| **ವಿಶೇಷ ನಿಧಿಗಳು/ದೇಣಿಗೆಗಳು:** | | ಕಳೆಯಿರಿ: ಮಾರಾಟ/ವಿಲೇವಾರಿ ಮಾಡಿದ | |
| ಹಿಂದಿನ ಶಿಲ್ಕು (ಯಾವುದಾದರು ಇದ್ದಲ್ಲಿ) | | ಆಸ್ತಿಯ ಪುಸ್ತಕದ ಮೌಲ್ಯ | |
| ಕೂಡಿಸು: ವರ್ಷವದಿಯಲ್ಲಿ ಸ್ವೀಕರಿಸಿದ ಅಂಶಗಳು | | ಅಂತಿಮ ಶಿಲ್ಕು | — |
| ಕೂಡಿಸು: ನಿಧಿಗಳು/ದೇಣಿಗೆಗಳ ಹೂಡಿಕೆಗಳ | | | |
| ಮೇಲೆ ಗಳಿಸಿದ ಆದಾಯ | | | |
| ಕಳೆಯಿರಿ: ನಿಧಿಗಳು/ದೇಣಿಗೆಗಳಿಂದ ಪಾವತಿಸಿದ | | | |
| ವೆಚ್ಚಗಳು | | | |
| ನಿವ್ವಳ ಶಿಲ್ಕು | — | | |
| ಖರೀದಿಗಳ ಅಥವಾ ಪೂರೈಕೆಗಳ ಧಣಿಗಳು | — | | |
| ಬ್ಯಾಂಕ್ ಮೀರೆಳೆತ | — | | |
| ಕೊಡಬೇಕಾದ ಖರ್ಚುಗಳು | — | | |
| ಮುಂಗಡ ಪಡೆದ ಆದಾಯ | — | | |
| | — | | — |

**ಚಿತ್ರ 1.2 ಮಾದರಿ ಅಢಾವೆ ಪತ್ರಿಕೆ**

**ನಿದರ್ಶನ 4:**

ಈ ಕೆಳಗಿನ ಆಯ–ವ್ಯಯ ಖಾತೆ  ಮತ್ತು ಹೆಚ್ಚುವರಿ ಮಾಹಿತಿಗಳು ಎಕ್ಸಲೆಂಟ್ ಕ್ರಿಕೆಟ್ ಕ್ಲಬ್‌ಗೆ ಸಂಬಂಧಿಸಿದ್ದು, 31 ಮಾರ್ಚ್ 2015ರ ವರ್ಷಾಂತ್ಯಕ್ಕೆ ಆದಾಯ–ವೆಚ್ಚ ಖಾತೆ ಮತ್ತು ಅದೇ ದಿನಾಂಕದಂದು  ಅಢಾವೆ ಪತ್ರಿಕೆಯನ್ನು ತಯಾರಿಸಿ.

**ಎಕ್ಸಲೆಂಟ್ ಕ್ರಿಕೆಟ್ ಕ್ಲಬ್ ರವರ ಪುಸ್ತಕ**

**ಖರ್ಚು** **ಮಾರ್ಚ್ 31, 2015 ವರ್ಷಕ್ಕೆ ಅಂತ್ಯವಾಗುವ ಆಯ–ವ್ಯಯ ಖಾತೆ** **ಜಮಾ**

| ಆಯ | ಮೊತ್ತ ₹ | ವ್ಯಯ | ಮೊತ್ತ ₹ |
|---|---|---|---|
| ಹಿಂದಿನಿಂದ ಬಂದ ಶಿಲ್ಕು (ಕೈಯಲ್ಲಿನ ನಗದು) | 18,000 | ಹಿಂದಿನಿಂದ ಬಂದ ಶಿಲ್ಕು (ಬ್ಯಾಂಕ್ ಮೀರೆಳೆತ) | 16,000 |
| ಸದಸ್ಯರ ವಂತಿಗೆಗಳು | 2,50,000 | ಮೈದಾನ ಮತ್ತು ಪೆವಿಲಿಯನ್ ನಿರ್ವಹಣೆ | 1,15,000 |
| ಸದಸ್ಯರ ದಾಖಲಾತಿ ಶುಲ್ಕ | 15,000 | ಪಂದ್ಯಾವಳಿ ವೆಚ್ಚಗಳು | 40,000 |
| ಹಳೆಯ ಕ್ರೀಡಾ ಸಾಮಗ್ರಿಗಳ ಮಾರಾಟ | 2,500 | ಸುಂಕ ಮತ್ತು ವಿಮೆ | 10,000 |
| ಮೈದಾನದ ಬಾಡಿಗೆ | 28,000 | ದೂರವಾಣಿ | 3,500 |
| ಪಂದ್ಯಾವಳಿ ವಂತಿಕೆಗಳು | 60,000 | ಅಂಚೆ ಮತ್ತು ಕೊರಿಯರ್ ವೆಚ್ಚಗಳು | 4,000 |
| ಅಜೀವ ಸದಸ್ಯತ್ವ ಶುಲ್ಕಗಳು | 20,000 | ಮುದ್ರಣ ಮತ್ತು ಲೇಖನ ಸಾಮಗ್ರಿ | 26,000 |
| ದೇಣಿಗೆಗಳು | 6,00,000 | ಇತರೆ ವೆಚ್ಚಗಳು | 4,400 |
| | | ಕಾರ್ಯದರ್ಶಿ ಗೌರವಧನ | 30,000 |
| | | ಹುಲ್ಲು ಬೀಜಗಳು | 2,600 |
| | | ಹೂಡಿಕೆಗಳು | 6,00,000 |
| | | ಕ್ರೀಡಾ ಸಾಮಗ್ರಿಗಳ ಖರೀದಿ | 68,000 |
| | | ಮುಂದು ವರಿದ ಶಿಲ್ಕು | 74,000 |
| | **9,93,500** | | **9,93,500** |

ವರ್ಷದ ಪ್ರಾರಂಭದಲ್ಲಿನ ಆಸ್ತಿಗಳು:

ಆಟದ ಮೈದಾನ ₹5,00,000

ಕೈಯಲ್ಲಿನ ನಗದು ₹18,000

ಕ್ರೀಡಾ ಸಾಮಗ್ರಿಗಳ ದಾಸ್ತನು ₹85,000

ಮುದ್ರಣ ಮತ್ತು ಲೇಖನ ಸಾಮಗ್ರಿಗಳು ₹11,000

ಬರತಕ್ಕ ವಂತಿಕೆಗಳು ₹28,000

ದೇಣಿಗೆಗಳು ಮತ್ತು ಪಂದ್ಯಾವಳಿ ಖಾತೆಯ ಮಿಗತೆಯನ್ನು ಶಾಶ್ವತ ಪೆವಿಲಿಯನ್ ನಿಧಿಗೆ ತೆಗೆದಿರಿಸುವುದು. 31 ಮಾರ್ಚ್ 2015 ರಂದು ₹42,000 ವಂತಿಗೆಗಳ ಬಾಕಿ. ಕ್ರೀಡಾ ಸಾಮಗ್ರಿಗಳಲ್ಲಿ ಶೇಕಡ ಐವತ್ತು ಮತ್ತು ಮುದ್ರಣ ಮತ್ತು ಲೇಖನ ಸಾಮಗ್ರಿಗಳಲ್ಲಿ ಶೇಕಡ ಮುವತ್ತು ಸವಕಳಿ ತೆಗೆಯಿರಿ.

**ಪರಿಹಾರ:**

**ಎಕ್ಸಲೆಂಟ್ ಕ್ರಿಕೆಟ್ ಕ್ಲಬ್ ರವರ ಪುಸ್ತಕ**

**ಖರ್ಚು ಮಾರ್ಚ್ 31, 2015ವರ್ಷಕ್ಕೆ ಅಂತ್ಯವಾಗುವ ಆದಾಯ–ವೆಚ್ಚ ಖಾತೆ ಜಮಾ**

| ವೆಚ್ಚ | | ಮೊತ್ತ ₹ | ಆದಾಯ | | ಮೊತ್ತ ₹ |
|---|---|---|---|---|---|
| ಮೈದಾನ ಮತ್ತು ಪೆವಲಿಯನ್ ನಿರ್ವಹಣೆ | | 1,15,000 | ವಂತಿಗೆಗಳು | 2,50,000 | |
| ಸುಂಕ ಮತ್ತು ವಿಮೆ | | 10,000 | ಕೂಡಿಸು: ಬರಬೇಕಾದ ಬಾಕಿ | | |
| ದೂರವಾಣಿ | | 3,500 | (ಅಂತಿಮ) | 42,000 | |
| ಅಂಚೆ ಮತ್ತು ಕೊರಿಯರ್ ವೆಚ್ಚಗಳು | | 4,000 | | 2,92,000 | |
| ಮುದ್ರಣ ಮತ್ತು ಲೇಖನ ಸಾಮಗ್ರಿ : | | | ಕಳೆಯಿರಿ: ಬರಬೇಕಾದ ಬಾಕಿ | | |
| | 26,000 | | (ಪ್ರಾರಂಭ) | 28,000 | 2,64,000 |
| ಕೂಡಿಸು: ಪ್ರಾರಂಭಿಕ ದಾಸ್ತನು | 11,000 | | ದಾಖಲಾತಿ ಶುಲ್ಕಗಳು | | 15,000 |
| | 37,000 | | ಹಳೆಯ ಕ್ರೀಡಾ ಸಾಮಗ್ರಿಗಳ ಮಾರಾಟ | | 2,500 |
| ಕಳೆಯಿರಿ: ಅಂತಿಮ ದಾಸ್ತನು | 25,900 | 11,100 | ಮೈದಾನದ ಬಾಡಿಗೆ | | 28,000 |
| ಇತರೆ ವೆಚ್ಚಗಳು | | 4,400 | | | |
| ಕಾರ್ಯದರ್ಶಿ ಗೌರವಧನ | | 30,000 | | | |
| ಹುಲ್ಲು ಬೀಜಗಳು | | 2,600 | | | |
| ಬಳಕೆಯಾದ ಕ್ರೀಡಾಸಾಮಗ್ರಿಗಳ: | | | | | |
| ಪ್ರಾರಂಭಿಕ ಶಿಲ್ಕು | 85,000 | | | | |
| ಕೂಡಿಸು: ಖರೀದಿಗಳು | 68,000 | | | | |
| | 1,53,000 | | | | |
| ಕಳೆಯಿರಿ: ಅಂತಿಮ ದಾಸ್ತನು | 76,500 | 76,500 | | | |
| ಮಿಗತೆ (ವೆಚ್ಚಗಳನ್ನು ಮೀರಿದ ಆದಾಯ) | | 52,400 | | | |
| | | **3,09,500** | | | **3,09,500** |

**ಟಿಪ್ಪಣಿ:** ಬಂಡವಾಳ ನಿಧಿಯ ಪ್ರಾರಂಭಿಕ ಶಿಲ್ಕು ಕೊಡದೇ ಇರುವುದರಿಂದ, ಅದನ್ನು ಪ್ರಾರಂಭಿಕ ಆಢಾವೆ ಪತ್ರಿಕೆಯನ್ನು ತಯಾರಿಸಿ ಕಂಡುಹಿಡಿಯಬೇಕಾಗಿದೆ.

**31 ಮಾರ್ಚ್ 2015ರಂದು ಇದ್ದಂತೆ ಎಕ್ಸಲೆಂಟ್ ಕ್ರಿಕೆಟ್ ಕ್ಲಬ್ ರವರ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|---|
| ಬಂಡವಾಳ ನಿಧಿ | 6,26,000 | | ಕೈಯಲ್ಲಿನ ನಗದು | 74,000 |
| ಕೂಡಿಸು: ಮಿಗತೆ | 52,400 | | ಬರಬೇಕಾದ ಬಾಕಿ ವಂತಿಕೆಗಳು | 42,000 |
| | 6,78,400 | | ಕ್ರೀಡಾ ಸಾಮಗ್ರಿಗಳ ದಾಸ್ತಾನು | 76,500 |
| ಕೂಡಿಸು: ಅಜೀವ ಸದಸ್ಯತ್ವ ಶುಲ್ಕ | 20,000 | 6,98,400 | ಮುದ್ರಣ ಮತ್ತು ಲೇಖನ ಸಾಮಗ್ರಿ | 25,900 |
| ಪೆವಲಿಯನ್ ನಿಧಿ: | | | ಹೂಡಿಕೆಗಳು | 6,00,000 |
| ಪಂದ್ಯಾವಳಿಯಿಂದ ಉಳಿಕೆ | 20,000 | | ಆಟದ ಮೈದಾನ | 5,00,000 |
| (₹60,000–40,000) | | | | |
| ದೇಣಿಗೆಗಳು | 6,00,000 | 6,20,000 | | |
| | | **13,18,400** | | **13,18,400** |

**31 ಮಾರ್ಚ್ 2015ರಂದು ಇದ್ದಂತೆ ಎಕ್ಸಲೆಂಟ್ ಕ್ರಿಕೆಟ್ ಕ್ಲಬ್ ರವರ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|
| ಬ್ಯಾಂಕ್ ಮೀರೆಳೆತ | 16,000 | ಕೈಯಲ್ಲಿನ ನಗದು | 18,000 |
| ಬಂಡವಾಳ/ ಸಾಮಾನ್ಯ ನಿಧಿ (ವ್ಯತ್ಯಾಸದ ಮೊತ್ತ) | 6,26,000 | ಬರಬೇಕಾದ ಬಾಕಿ ವಂತಿಕೆಗಳು | 28,000 |
| | | ಕ್ರೀಡಾ ಸಾಮಗ್ರಿಗಳ ದಾಸ್ತನು | 85,000 |
| | | ಮುದ್ರಣ ಮತ್ತು ಲೇಖನಸಾಮಗ್ರಿ | 11,000 |
| | | ಆಟದ ಮೈದಾನ | 5,00,000 |
| | **6,42,000** | | **6,42,000** |

**ನಿಮ್ಮ ತಿಳುವಳಿಕೆಯನ್ನು ಪರೀಕ್ಷಿಸಿಕೊಳ್ಳಿರಿ –I : Test Your Understanding -I**

**ಕೆಳಗಿನ ಹೇಳಿಕೆಗಳನ್ನು ಕಾರಣಗಳೊಂದಿಗೆ ಸರಿ ಅಥವಾ ತಪ್ಪು ಎಂದು ತಿಳಿಸಿ:**

(1) ಆಯ–ವ್ಯಯ ಖಾತೆಯು ಎಲ್ಲಾ ಬಂಡವಾಳಿಕರಿಸಿದ ಸ್ವೀಕೃತಿಗಳ ಮತ್ತು ಪವಾತಿಗಳ ಸಾರಾಂಶವಾಗಿದೆ.

(2) ಕ್ರೀಡಾ ನಿಧಿ ಇದ್ದಲ್ಲಿ, ಕ್ರೀಡಾ ಚಟುವಟಿಕೆಗಳಿಗೆ ಮಾಡಿದ ಖರ್ಚುಗಳನ್ನು ಆದಾಯ–ವೆಚ್ಚ ಖಾತೆಯ ಜಮಾ ಬದಿಯಲ್ಲಿ ತೋರಿಸಲಾಗುತ್ತದೆ.

(3) ಆದಾಯ–ವೆಚ್ಚ ಖಾತೆಯು ಜಮಾ ಶಿಲ್ಕು ಆದಾಯಗಳನ್ನು ಮೀರಿದ ವೆಚ್ಚಗಳನ್ನು ಸೂಚಿಸುತ್ತದೆ.

(4) ಸರ್ಕಾರ ಒದಗಿಸಿದ ನಿಧಿಗಳಿಂದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಕೊಟ್ಟಿದ್ದಲ್ಲಿ ಆದಾಯ–ವೆಚ್ಚ ಖಾತೆಯ ಖರ್ಚು ಬದಿಯಲ್ಲಿ ತೋರಿಸಲಾಗುತ್ತದೆ.

(5) ಆಯ–ವ್ಯಯ ಖಾತೆಯಲ್ಲಿ ಕಂದಾಯದ ಸ್ವೀಕೃತಿಗಳು ಮತ್ತು ಪಾವತಿಗಳನ್ನು ಮಾತ್ರ ದಾಖಲಿಸಲಾಗುತ್ತದೆ.

(6) ನಿಶ್ಚಿತ ಉದ್ದೇಶಗಳಿಗಾಗಿನ ದೇಣಿಗೆಗಳನ್ನು ಯಾವಾಗಲೂ ಬಂಡವಾಳೀಕರಿಸಲಾಗುತ್ತದೆ.

(7) ಪ್ರಾರಂಭಿಕ ಬಂಡವಾಳ ನಿಧಿ ಶಿಲ್ಕನ್ನು ನೀಡದೇ ಇದ್ದಾಗ ಪ್ರಾರಂಭಿಕ ಆಢಾವೆ ಪತ್ರಿಕೆಯನ್ನು ತಯಾರಿಸಲಾಗುತ್ತದೆ.

(8) ಆದಾಯ–ವೆಚ್ಚ ಖಾತೆ ಮಿಗತೆಯನ್ನು ಬಂಡವಾಳ/ ಸಾಮಾನ್ಯ ನಿಧಿಯಿಂದ ಕಳೆಯಲಾಗುತ್ತದೆ.

(9) ಆಯ–ವ್ಯಯ ಖಾತೆ, ಲಾಭ–ನಷ್ಟ ಖಾತೆಗೆ ಸಮಾನವಾಗಿರುತ್ತದೆ.

(10) ಆಯ–ವ್ಯಯ ಖಾತೆಯು ಬಂಡವಾಳ ಮತ್ತು ಕಂದಾಯ ಸ್ವೀಕೃತಿಗಳ ನಡುವೆ ವ್ಯತ್ಯಾಸಿಸುವುದಿಲ್ಲ.

## 1.6 ಕೆಲವು ವಿಶಿಷ್ಟ ಅಂಶಗಳು Some Peculiar Items

ಲಾಭಕ್ಕಲ್ಲದ ಸಂಸ್ಥೆಗಳ ಅಂತಿಮ ಖಾತೆಗಳನ್ನು ವ್ಯವಹಾರ ಸಂಸ್ಥೆಗಳಿಗೆ ಹೋಲುವ ಮಾದರಿಯಲ್ಲಿಯೇ ತಯಾರಿಸಲಾಗುತ್ತದೆ. ಹೀಗಿದ್ದರೂ, ಇಂತಹ ಸಂಸ್ಥೆಗಳ ಆದಾಯ ಮತ್ತು ವೆಚ್ಚದ ಕೆಲವು ಅಂಶಗಳು ಭಿನ್ನ ಸ್ವರೂಪದವುಗಳಾಗಿದ್ದು, ಅಂತಿಮ ಖಾತೆಗಳಲ್ಲಿ ಇವುಗಳ ಪರಿಗಣನೆಗೆ ವಿಶೇಷ ಗಮನ ನೀಡುವುದು ಅವಶ್ಯಕವಾಗಿದೆ. ಈ ತರಹದ ಸಂಸ್ಥೆಗಳಲ್ಲಿ ಇವುಗಳು ವಿಶಿಷ್ಟವಾದವುಗಳಾಗಿವೆ. ಕೆಲವು ವಿಶಿಷ್ಟತೆಯ ಅಂಶಗಳನ್ನು ಈ ಕೆಳಗೆ ವಿವರಿಸಲಾಗಿದೆ.

**ವಂತಿಗೆಗಳು (Subscriptions):** ಸದಸ್ಯರು ವಾರ್ಷಿಕವಾಗಿ ಪಾವತಿಸಿರುವ ಸದಸ್ಯತ್ವದ ಶುಲ್ಕಗಳು ವಂತಿಗೆಗಳಾಗಿವೆ. ಇವು ಈ ತರಹದ ಸಂಸ್ಥೆಗಳ ಮುಖ್ಯ ಆದಾಯದ ಮೂಲವಾಗಿವೆ. ಸದಸ್ಯರು ಪಾವತಿಸಿದ ವಂತಿಗೆಗಳನ್ನು ಸ್ವೀಕೃತಿಯಾಗಿ ಆಯ–ವ್ಯಯ ಖಾತೆಯಲ್ಲಿ ತೋರಿಸಲಾಗುತ್ತದೆ ಹಾಗೂ ಆದಾಯ–ವೆಚ್ಚ ಖಾತೆಯಲ್ಲಿ ಆದಾಯವಾಗಿ ತೋರಿಸಲಾಗುತ್ತದೆ. ವರ್ಷಾವಧಿಯಲ್ಲಿ ನೈಜವಾಗಿ ಸ್ವೀಕರಿಸಿದ ಒಟ್ಟು ವಂತಿಗೆಯ ಮೊತ್ತವನ್ನು ಆಯ–ವ್ಯಯ ಖಾತೆಯಲ್ಲಿ ತೋರಿಸಿರುವುದನ್ನು ಗಮನಿಸಬಹುದು. ಆದರೆ, ಚಾಲ್ತಿ ಅವಧಿಗೆ ಸಂಬಂಧಿಸಿದ ವಂತಿಗೆಯನ್ನು ಸ್ವೀಕರಿಸಿರಲಿ ಅಥವಾ ಸ್ವೀಕರಿಸದಿರಲಿ, ಆ ಮೊತ್ತವನ್ನು ಆದಾಯ–ವೆಚ್ಚ ಖಾತೆಯಲ್ಲಿ ತೋರಿಸಲಾಗುತ್ತದೆ.ಉದಾಹರಣೆಗೆ, 2014–15ರ ವರ್ಷಾವಧಿಯಲ್ಲಿ ₹20,000 ವಂತಿಗೆಗಳನ್ನು ಸ್ವೀಕರಿಸಿದ್ದು, ಅವುಗಳಲ್ಲಿ ₹3,000 2013–14ನೇ ವರ್ಷಕ್ಕೆ ಮತ್ತು ₹2,000 2015–16ನೇ ವರ್ಷಕ್ಕೆ ಸಂಬಂಧಿಸಿವೆ ಮತ್ತು 2014–15ನೇ ವರ್ಷಾಂತ್ಯದಲ್ಲಿ ₹6,000 ಇನ್ನೂ ಬರಬೇಕಾಗಿದೆ. ಈ ಪ್ರಕರಣದಲ್ಲಿ, ಆಯ–ವ್ಯಯ ಖಾತೆಯಲ್ಲಿ ₹20,000 ವಂತಿಗೆಯನ್ನು ಸ್ವೀಕೃತಿ ಎಂದು ತೋರಿಸಲಾಗಿದೆ. ಆದರೆ, ಆಯ–ವ್ಯಯ ಖಾತೆಯಲ್ಲಿ ₹21,000 ಮೊತ್ತವನ್ನು 2014–15ನೇ ವರ್ಷದಲ್ಲಿ ವಂತಿಕೆಯಿಂದ ಬಂದ ಆದಾಯ ಎಂದು ತೋರಿಸಲಾಗುತ್ತದೆ. ಈ ಲೆಕ್ಕಚಾರವನ್ನು ಕೆಳಗೆ ನೀಡಲಾಗಿದೆ:

| | ₹ |
|---|---|
| 2014–15ರಲ್ಲಿ ಸ್ವೀಕರಿಸಿದ ವಂತಿಗೆಗಳು | 20,000 |
| ಕಳೆಯಿರಿ: 2013–14ನೇ ವರ್ಷದ ವಂತಿಗೆಗಳು | 3,000 |
| | 17,000 |
| ಕಳೆಯಿರಿ: 2015–16ನೇ ವರ್ಷದ ವಂತಿಗೆಗಳು | 2,000 |
| | 15,000 |
| ಕೂಡಿಸು: 2014–15ನೇ ವರ್ಷದಲ್ಲಿ ಬರಬೇಕಾದ ವಂತಿಗೆಗಳು | 6,000 |
| 2014–15ನೇ ವರ್ಷದಲ್ಲಿನ ವಂತಿಗೆಗಳಿಂದ ಬಂದ ಆದಾಯ | **21,000** |

ಈ ಮೇಲಿನ ಆದಾಯ ಎಂದು ತೋರಿಸುವ ವಂತಿಗೆಗಳ ಮೊತ್ತವನ್ನು ವಂತಿಗೆ ಖಾತೆ ತಯಾರಿಸುವುದರ ಮೂಲಕವೂ ಸಹ ಈ ಕೆಳಗಿನಂತೆ ಕಂಡುಹಿಡಿಯಬಹುದಾಗಿದೆ.

**ಖರ್ಚು** **ವಂತಿಗೆಗಳ** **ಜಮಾ**

| ದಿನಾಂಕ | ವಿವರಗಳು | ರೋ. ಪಾ | ಮೊತ್ತ ₹ | ದಿನಾಂಕ | ವಿವರಗಳು | ರೋ. ಪಾ | ಮೊತ್ತ ₹ |
|---|---|---|---|---|---|---|---|
| | ಹಿಂದಿನಿಂದ ಬಂದ ಶಿಲ್ಕು (ಪ್ರಾರಂಭದಲ್ಲಿನ ಬಾಕಿ) | | 3,000 | | ಹಿಂದಿನಿಂದ ಬಂದ ಶಿಲ್ಕು (ಹಿಂದಿನ ವರ್ಷದಲ್ಲಿ ಮುಂಗಡವಾಗಿ ಸ್ವೀಕರಿಸಿದ್ದು) | | ಇಲ್ಲಾ |
| | ಆದಾಯ ವೆಚ್ಚ ಖಾತೆ (ವ್ಯತ್ಯಾಸದ ಮೊತ್ತ) | | 21,000 | | ನಗದು (ಸ್ವೀಕರಿಸಿದ ವಂತಿಕೆ) | | 20,000 |
| | ಮುಂದುವರಿದ ಶಿಲ್ಕು (ಮುಂಗಡವಾಗಿ ಸ್ವೀಕರಿಸಿದ್ದು) | | 2,000 | | ಮುಂದುವರಿದ ಶಿಲ್ಕು (ಅಂತ್ಯದಲ್ಲಿನ ಬಾಕಿ) | | 6.000 |
| | | | **26,000** | | | | **26,000** |

**ನಿದರ್ಶನ – 5**

31 ಮಾರ್ಚ್, 2015ರ ವರ್ಷಕ್ಕೆ ಅಂತ್ಯವಾಗುವ ಆಯ–ವ್ಯಯ ಖಾತೆಯ ಪ್ರಕಾರ ₹2,50,000 ವಂತಿಗೆಗಳನ್ನು ಸ್ವೀಕರಿಸಿದೆ. ಹೆಚ್ಚುವರಿ ಮಾಹಿತಿಯು ಈ ಕೆಳಗಿನಂತಿದೆ:

1. 1–4–2014ರಂದು ₹50,000 ವಂತಿಗೆಗಳು ಬಾಕಿ ಇದೆ.
2. 31–3–2015ರಂದು ₹35,000 ವಂತಿಗೆಗಳು ಬಾಕಿ ಇದೆ.
3. 1–4–2014ರಂದು ₹25,000 ವಂತಿಗೆಗಳನ್ನು ಮುಂಗಡವಾಗಿ ಸ್ವೀಕರಿಸಿದೆ.
4. 31–3–2015ರಂದು ₹30,000 ವಂತಿಗೆಗಳನ್ನು ಮುಂಗಡವಾಗಿ ಸ್ವೀಕರಿಸಿದೆ.

2014–15ನೇ ವರ್ಷಕ್ಕೆ ವಂತಿಗೆಗಳ ಆದಾಯದ ಮೊತ್ತವನ್ನು ಕಂಡುಹಿಡಿಯಿರಿ ಮತ್ತು ಅಢಾವೆ ಪತ್ರಿಕೆಯಲ್ಲಿ ಪ್ರಾರಂಭಿಕ ಮತ್ತು ಅಂತಿಮ ವಂತಿಗೆ ಅಂಶಗಳು ಹೇಗೆ ಗೋಚರಿಸುತ್ತವೆ ಎಂದು ತೋರಿಸಿ.

**ಪರಿಹಾರ:**

| ವಿವರಗಳು | ಮೊತ್ತ ₹ |
|---|---|
| ಆಯ–ವ್ಯಯ ಖಾತೆಯ ಪ್ರಕಾರ ಸ್ವೀಕರಿಸಿದ ವಂತಿಗೆಗಳು. | 2,50,000 |
| ಕೂಡಿಸು: 31.3.2015ರಂದು ಬಾಕಿ ಇರುವ ವಂತಿಗೆಗಳು. | 35,000 |
| ಕೂಡಿಸು: 01.4.2014ರಂದು ಮುಂಗಡವಾಗಿ ಸ್ವೀಕರಿಸಿದ ವಂತಿಗೆಗಳು. | 25,000 |
| | 3,10,000 |
| ಕಳೆಯಿರಿ: 1.4.2014ರಂದು ಬಾಕಿ ಇರುವ ವಂತಿಗೆಗಳು. | 50,000 |
| | 2,60,000 |
| ಕಳೆಯಿರಿ: 31.3.2015ರಂದು ಮುಂಗಡವಾಗಿ ಸ್ವೀಕರಿಸಿದ ವಂತಿಗೆಗಳು. | 30,000 |
| 2014–15ನೇ ವರ್ಷಕ್ಕೆ ವಂತಿಗೆಗಳ ಆದಾಯ | 2,30,000 |

ಬದಲಿಯಾಗಿ, ವಂತಿಗೆಗಳಿಂದ ಸ್ವೀಕರಿಸಿದ ಆದಾಯವನ್ನು ವಂತಿಗೆಗಳ ಖಾತೆಯನ್ನು ತಯಾರಿಸುವದರ ಮೂಲಕ ಈ ಕೆಳಗಿನಂತೆ ಕಂಡುಹಿಡಿಯಬಹುದಾಗಿದೆ.

**ಖರ್ಚು** **ವಂತಿಗೆಗಳ ಖಾತೆ** **ಜಮಾ**

| ದಿನಾಂಕ | ವಿವರಗಳು | ಖ ಪಾ | ಮೊತ್ತ ₹ | ದಿನಾಂಕ | ವಿವರಗಳು | ಖ ಪಾ | ಮೊತ್ತ ₹ |
|---|---|---|---|---|---|---|---|
| | ಹಿಂದಿನಿಂದ ಬಂದ ಶಿಲ್ಕು (ಬಾಕಿ) | | 50,000 | | ಹಿಂದಿನಿಂದ ಬಂದ ಶಿಲ್ಕು (ಮುಂಗಡ) | | 25,000 |
| | ಆದಾಯ–ವೆಚ್ಚ ಖಾತೆ (ವ್ಯತ್ಯಾಸದ ಮೊತ) | | 2,30,000 | | ಆಯ–ವ್ಯಯ ಖಾತೆ | | 2,50,000 |
| | ಮುಂದುವರಿದ ಶಿಲ್ಕು (ಮುಂಗಡ) | | 30,000 | | ಮುಂದುವರಿದ ಶಿಲ್ಕು (ಬಾಕಿ) | | 35,000 |
| | | | **3,10,000** | | | | **3,10,000** |

ಅಢಾವೆ ಪತ್ರಿಕೆಯಲ್ಲಿ ಪ್ರಾರಂಭಿಕ ಮತ್ತು ಅಂತಿಮ ವಂತಿಗೆ ಅಂಶಗಳನ್ನು ಕೆಳಗಿನಂತೆ ತೋರಿಸಬಹುದು:

**31 ಮಾರ್ಚ್ 2014ರಂದು ಇದ್ದಂತೆ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|
| * ಮುಂಗಡವಾಗಿ ಸ್ವೀಕರಿಸಿದ ವಂತಿಗೆಗಳು | 25,000 | * ವಂತಿಗೆಗಳ ಬಾಕಿ | 50,000 |

* ಸೂಕ್ತ ಮಾಹಿತಿ ಮಾತ್ರ

**31 ಮಾರ್ಚ್ 2015ರಂದು ಇದ್ದಂತೆ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|
| * ಮುಂಗಡವಾಗಿ ಸ್ವೀಕರಿಸಿದ ವಂತಿಗೆಗಳು | 30,000 | * ವಂತಿಗೆಗಳ ಬಾಕಿ | 35,000 |

* ಸೂಕ್ತ ಮಾಹಿತಿ ಮಾತ್ರ

**ನಿದರ್ಶನ – 6**

31 ಮಾರ್ಚ್ 2015ರ ವರ್ಷಾಂತ್ಯದ ಆಯ–ವ್ಯಯ ಖಾತೆಯಿಂದ ಸಂಗ್ರಹಿಸಿದ ವಿವರಗಳನ್ನು ಕೆಳಗೆ ಕೊಡಲಾಗಿದೆ:

| **ವಂತಿಗೆಗಳ ಸ್ವೀಕೃತಿ** | ₹ |
|---|---|
| 2013–14 | 2,500 |
| 2014–15 | 26,750 |
| 2015–16 | 1,000 |
| | **30,250** |

**ಹೆಚ್ಚುವರಿ ಮಾಹಿತಿ:**

ಒಟ್ಟು ಸದಸ್ಯರ ಸಂಖ್ಯೆ: 230.

ವಾರ್ಷಿಕ ಸದಸ್ಯತ್ವ ಶುಲ್ಕ: ₹125.

01 ಏಪ್ರಿಲ್, 2013ರಂದು ವಂತಿಗೆಗಳ ಬಾಕಿಗಳು: ₹2,750.

ವಂತಿಗೆಗಳ ಎಲ್ಲಾ ಸೂಕ್ತ ಅಂಶಗಳನ್ನು ಅಂದರೆ ಆದಾಯ, ಮುಂಗಡ, ಬಾಕಿಗಳು, ಇತ್ಯಾದಿಗಳನ್ನು ತೋರಿಸುವ ಒಂದು ಪಟ್ಟಿಯನ್ನು ತಯಾರಿಸಿ.

**ಪರಿಹಾರ:**

2014–15ನೇ ವರ್ಷಕ್ಕೆ ನಗದಾಗಿ ಸ್ವೀಕರಿಸಿದ/ಸ್ವೀಕರಿಸದ ವಂತಿಗೆಗಳ ಮೊತ್ತ ₹28,750 (ಅದು ₹125 × 230).

| ವಿವರಗಳು | ಮೊತ್ತ ₹ |
|---|---|
| ಆಯ ವ್ಯಯ ಖಾತೆಯ ಪ್ರಕಾರ ಸ್ವೀಕರಿಸಿದ ವಂತಿಗೆಗಳು. | 30,250 |
| ಕೂಡಿಸು: 31 ಮಾರ್ಚ್ 2014ರಂದು ಬಾಕಿಇರುವ ವಂತಿಗೆಗಳು. | 2,250 |
| ಕೂಡಿಸು: 01 ಏಪ್ರಿಲ್ 2013ರಂದು ಮುಂಗಡವಾಗು ಸ್ವೀಕರಿಸಿದ ವಂತಿಗೆಗಳು. | ಇಲ್ಲಾ |
| | 32,500 |
| ಕಳೆಯಿರಿ: 1 ಏಪ್ರಿಲ್2013ರಂದು ಬಾಕಿಇರುವ ವಂತಿಗೆಗಳು. | 2,750 |
| | 29,750 |
| ಕಳೆಯಿರಿ: 31 ಮಾರ್ಚ್2014ರಂದು ಮುಂಗಡವಾಗಿ ಸ್ವೀಕರಿಸಿದ ವಂತಿಗೆಗಳು. | 1,000 |
| 2014–15ನೇ ವರ್ಷಕ್ಕೆ ವಂತಿಗೆಗಳಿಂದ ಬಂದ ಆದಾಯ (125 × 230) | 28,750 |

**ಟಿಪ್ಪಣಿ:** 1–4–2014ರಂದು ಇದ್ದಂತೆ ಬಾಕಿ ಇರುವ ವಂತಿಗೆಗಳ ಮೊತ್ತವನ್ನು ಈ ಕೆಳಗಿನಂತೆ ಕಂಡುಹಿಡಿಯಲಾಗಿದೆ.

| ವಿವರಗಳು | ₹ | ₹ |
|---|---|---|
| 1–4–2014ರಂದು ಬಾಕಿ | 2,750 | |
| 2013–14ಕ್ಕೆ ಸ್ವೀಕರಿಸಿದ್ದು | 2,500 | 250 |
| 2014–15ರ ಬಾಕಿ (₹125 × 230) | 28,750 | |
| 2014–15ಕ್ಕೆ ಸ್ವೀಕರಿಸಿದ್ದು | 26,750 | 2,000 |
| 31–3–2015ರಂದು ಇದ್ದಂತೆ ಬಾಕಿ | | 2,250 |

**ನಿದರ್ಶನ: 7**

ಈ ಕೆಳಗಿನ ಆಯ–ವ್ಯಯ ಖಾತೆ ಮತ್ತು ಹೆಚ್ಚಿನ ಮಾಹಿತಿಯಿಂದ ವಂತಿಗೆ ಆದಾಯದ ಮೊತ್ತ ಕಂಡುಹಿಡಿದು, 31 ಮಾರ್ಚ್, 2015ರ ವರ್ಷಾಂತ್ಯದಲ್ಲಿ ಆದಾಯ–ವೆಚ್ಚ ಖಾತೆಯಲ್ಲಿ ಮತ್ತು ಅಥಾವೆ ಪತ್ರಿಕೆಯಲ್ಲಿ ಹೇಗೆ ಗೋಚರವಾಗುವುದೆಂದು ತೋರಿಸಿ.

**ಖರ್ಚು 31 ಮಾರ್ಚ್ 2015ರ ವರ್ಷಕ್ಕೆ ಅಂತ್ಯವಾಗುವ ಆಯ–ವ್ಯಯ ಖಾತೆ ಜಮಾ**

| ಸ್ವೀಕೃತಿಗಳು | | | ಮೊತ್ತ ₹ | ಪಾವತಿಗಳು | ಮೊತ್ತ ₹ |
|---|---|---|---|---|---|
| ವಂತಿಗೆಗಳು: | 2013–14 | 7,000 | | | |
| | 2014–15 | 30,000 | | | |
| | 2015–16 | 5,000 | 42,000 | | |

**ಹೆಚ್ಚುವರಿ ಮಾಹಿತಿ:**

1. 31 ಮಾರ್ಚ್ 2014ರಂದು ಬಾಕಿ ವಂತಿಗೆಗಳು ₹8,500
2. 31 ಮಾರ್ಚ್ 2015ರಂದು ಒಟ್ಟು ಬಾಕಿ ವಂತಿಗೆಗಳು ₹18,500
3. 31 ಮಾರ್ಚ್ 2014ರಂದು ಮುಂಗಡ ಸ್ವೀಕರಿಸಿದ ವಂತಿಗೆಗಳು ₹4,000

**ಪರಿಹಾರ:**

**ಖರ್ಚು 31 ಮಾರ್ಚ್ 2015ರ ವರ್ಷಾಂತ್ಯಕ್ಕೆ ಆದಾಯ–ವೆಚ್ಚದ ಖಾತೆ ಜಮಾ**

| ವೆಚ್ಚ | ಮೊತ್ತ ₹ | ಆದಾಯ | ಮೊತ್ತ ₹ |
|---|---|---|---|
| | | ವಂತಿಗೆಗಳು: 2014–15ಕ್ಕೆ ಸ್ವೀಕರಿಸಿದ್ದು | 30,000 |
| | | ಕೂಡಿಸಿ: 2014–15ಕ್ಕೆ ಬರಬೇಕಾದ ಬಾಕಿ | 17,000 |
| | | ಕೂಡಿಸಿ: 2014–15ಕ್ಕೆ ಮುಂಗಡ ಸ್ವೀಕರಿಸಿದ್ದು | 4,000 |
| | | | 51,000 |

**ಟಿಪ್ಪಣಿ:** 31–3–2013 ರಂದು ಒಟ್ಟು ₹18,500 ವಂತಿಗೆಗಳ ಮೊತ್ತ ಬಾಕಿ ಇದೆ. ಇದರಲ್ಲಿ 2013–14ಕ್ಕೆ ವಂತಿಗೆ ₹1,500 (₹8,500–₹7000) ಇನ್ನೂ ಬಾಕಿ ಇದೆ. 2014–15ಕ್ಕೆ ₹17,000 (₹18,500– ₹1,500) ವಂತಿಗೆಗಳು ಬಾಕಿ ಇವೆ.

**31 ಮಾರ್ಚ್ 2015ರಂದು ಇದ್ದಂತೆ ಅಢಾವೆ ಪತ್ರಿಕೆ (ಸಮಂಜಸವಾದ ಮಾಹಿತಿ)**

| ಹೊಣೆಗಾರಿಕೆಗಳು | ಮೊತ್ತ ₹ | ಆಸ್ತಿಗಳು | | ಮೊತ್ತ ₹ |
|---|---|---|---|---|
| * 2014–15ಕ್ಕೆ ಮುಂಗಡವಾಗಿ ಸ್ವೀಕರಿಸಿದ ವಂತಿಗೆಗಳು | 5,000 | * ವಂತಿಗೆಗಳ ಬಾಕಿ | | |
| | | 2013–14 | 1,500 | |
| | | 2014–15 | 17,000 | 18,500 |

* ಸೂಕ್ತ ಮಾಹಿತಿ ಮಾತ್ರ

**ನೀವೆ ಮಾಡಿ : Do it Yourself**

1. 2015ರ ವರ್ಷಾವಧಿಯಲ್ಲಿ ಹೆಲ್ತ್ ಕ್ಲಬ್ ಸ್ವೀಕರಿಸಿದ ವಂತಿಗೆಗಳು ಕೆಳಗಿನಂತಿವೆ.

| | ₹ |
|---|---|
| 2014 | 3,000 |
| 2015 | 96,000 |
| 2016 | 2,000 |
| | 1,01,000 |

31.12.2014ರಂದು ಬಾಕಿ ಇರುವ ವಂತಿಗೆಗಳು ₹ 5,000

31.12.2015ರಂದು ಬಾಕಿ ಇರುವ ವಂತಿಗೆಗಳು ₹ 12,000

2014ರಲ್ಲಿ 2015ರ ಮುಂಗಡ ಸ್ವೀಕರಿಸಿದ ವಂತಿಗೆಗಳು ₹ 5,000

ಆದಾಯ–ವೆಚ್ಚ ಖಾತೆಯ ಆದಾಯದ ಬದಿಯಲ್ಲಿ ತೋರಿಸಲಾಗುವ ವಂತಿಗೆಗಳ ಮೊತ್ತವನ್ನು ಕಂಡುಹಿಡಿಯಿರಿ.

2. 2015ರ ವರ್ಷಾವಧಿಯಲ್ಲಿ ₹80,000 ವಂತಿಗೆಗಳನ್ನು ಒಂದು ಕ್ರೀಡಾ ಕ್ಲಬ್ ಸ್ವೀಕರಿಸಿದೆ. ಇದರಲ್ಲಿ 2014ರ ವರ್ಷಾವಧಿಯ ₹3,000 ಮತ್ತು 2016ರ ವರ್ಷಾವಧಿಯ ₹6,000 ವಂತಿಗೆಗಳು ಸೇರಿಕೊಂಡಿವೆ. 31 ಮಾರ್ಚ2016 ರಂದು ₹12,000 ವಂತಿಗೆಗಳು ಬಾಕಿ ಇದ್ದು ಇನ್ನೂ ಸ್ವೀಕರಿಸಿರುವುದಿಲ್ಲ. ಆದಾಯ–ವೆಚ್ಚ ಖಾತೆಯಲ್ಲಿ ತೋರಿಸಲಾಗುವ ವಂತಿಗೆ ಆದಾಯದ ಮೊತ್ತವನ್ನು ಕಂಡುಹಿಡಿಯಿರಿ.
3. 31 ಡಿಸೆಂಬರ್ 2015ರ ವರ್ಷಾಂತ್ಯದಲ್ಲಿ ರಾಯಲ್ ಕ್ಲಬ್‌ನಿಂದ ಸ್ವೀಕರಿಸಿದ ವಂತಿಗೆಗಳು ಕೆಳಗಿನಂತಿವೆ:

| | ₹ |
|---|---|
| 2014 | 3,000 |
| 2015 | 93,000 |
| 2016 | 2,000 |
| | 98,000 |

ಕ್ಲಬ್ 500 ಸದಸ್ಯರನ್ನು ಹೊಂದಿದ್ದು, ಪ್ರತಿಯೊಬ್ಬರೂ ವಾರ್ಷಿಕವಾಗಿ ₹200ನ್ನು ಪಾವತಿಸುತ್ತಾರೆ. 31 ಮಾರ್ಚ್ 2016 ರಂದು ₹6,000 ವಂತಿಗೆಗಳು ಬಾಕಿ ಇವೆ. 31 ಮಾರ್ಚ್ 2016ರ ವರ್ಷಾಂತ್ಯದಲ್ಲಿನ ಆದಾಯ–ವೆಚ್ಚ ಖಾತೆಯಲ್ಲಿ ತೋರಿಸಲಾಗುವ ವಂತಿಗೆಗಳ ಮೊತ್ತವನ್ನು ಕಂಡುಹಿಡಿಯಿರಿ ಮತ್ತು ಆ ದಿನಾಂಕದಂದು ಅಢಾವೆ ಪತ್ರಿಕೆಯಲ್ಲಿ ಸಮಂಜಸವಾದ ಮಾಹಿತಿಯನ್ನು ತೋರಿಸಿರಿ.

**ದೇಣಿಗೆಗಳು (Donations):** ಇದು ಕೆಲವು ವ್ಯಕ್ತಿ ಅಥವಾ ಸಂಸ್ಥೆಗಳಿಂದ ನಗದು ಅಥವಾ ಸ್ವತ್ತುಗಳ ರೂಪದಲ್ಲಿ ಸ್ವೀಕರಿಸಿದ ಕೊಡುಗೆಯಾಗಿದೆ. ಇದನ್ನು ಆಯ–ವ್ಯಯ ಖಾತೆಯ ಸ್ವೀಕೃತಿಗಳ ಬದಿಯಲ್ಲಿ ತೋರಿಸಲಾಗುತ್ತದೆ. ದೇಣಿಗೆಯು ನಿಶ್ಚಿತ ಉದ್ದೇಶಕ್ಕಾಗಿರಬಹುದು ಅಥವಾ ಸಾಮಾನ್ಯ ಉದ್ದೇಶಕ್ಕಾಗಿರಬಹುದು.

1. **ನಿಶ್ಚಿತ ದೇಣಿಗೆಗಳು (Specific Donations):** ಸ್ವೀಕರಿಸಿದ ದೇಣಿಗೆಯು ನಿಶ್ಚಿತ ಉದ್ದೇಶಕ್ಕಾಗಿ ಬಳಸುವುದಾಗಿದ್ದರೆ ಅದನ್ನು ನಿಶ್ಚಿತ ದೇಣಿಗೆ ಎನ್ನುತ್ತೇವೆ. ನಿಶ್ಚಿತ ಉದ್ದೇಶವು ಇರುವ ಕಟ್ಟಡಗಳ ವಿಸ್ತರಣೆ, ಹೊಸ ಕಂಪ್ಯೂಟರ್ ಪ್ರಯೋಗಾಲಯ ನಿರ್ಮಾಣ, ಪುಸ್ತಕ ಬ್ಯಾಂಕ್ ನಿರ್ಮಾಣ, ಇತ್ಯಾದಿ, ನಿಶ್ಚಿತ ಉದ್ದೇಶಗಳಿಗಾಗಿರಬಹುದು. ಇಂತಹ ದೇಣಿಗೆಗಳ ಮೊತ್ತವು ದೊಡ್ಡ ಅಥವಾ ಚಿಕ್ಕ ಪ್ರಮಾಣದಲ್ಲಿದ್ದರೂ ಅವುಗಳನ್ನು ಬಂಡವಾಳೀಕರಿಸಿ, ಅಢಾವೆ ಪತ್ರಿಕೆಯ ಜವಾಬ್ದಾರಿ ಬದಿಯಲ್ಲಿ ತೋರಿಸಲಾಗುತ್ತದೆ. ಇದರ ಉದ್ದೇಶ ದೇಣಿಗೆ ಮೊತ್ತವನ್ನು ನಿಶ್ಚಿತ ಉದ್ದೇಶಕ್ಕೆ ಮಾತ್ರ ಬಳಸುವುದಾಗಿದೆ.

2. **ಸಾಮಾನ್ಯ ದೇಣಿಗೆಗಳು (General Donations):** ಈ ದೇಣಿಗೆಗಳನ್ನು ಸಂಸ್ಥೆಯ ಸಾಮಾನ್ಯ ಉದ್ದೇಶಗಳಿಗೆ ಬಳಸುವುದಾಗಿದೆ. ಇವುಗಳನ್ನು ಕಂದಾಯದ ಸ್ವೀಕೃತಿಗಳಾಗಿ ಪರಿಗಣಿಸಲಾಗುತ್ತದೆ. ಏಕೆಂದರೆ, ಇದು ನಿರಂತರ ಆದಾಯದ ಮೂಲವಾಗಿದೆ. ಅದ್ದರಿಂದ, ಇದನ್ನು ಚಾಲ್ತಿ ವರ್ಷದ ಆದಾಯ–ವೆಚ್ಚ ಖಾತೆಯ ಆದಾಯ ಬದಿಯಲ್ಲಿ ತೆಗೆದುಕೊಳ್ಳಲಾಗುತ್ತದೆ.

**ಮೃತ್ಯುಲೇಖದಾನ (Legacies):** ಇದು ಮೃತ ವ್ಯಕ್ತಿಯ ಮೃತ್ಯುಪತ್ರದ ಪ್ರಕಾರ ಸ್ವೀಕರಿಸಿದ ಮೊತ್ತವಾಗಿದೆ. ಇದನ್ನು ಆಯ–ವ್ಯಯ ಖಾತೆಯ ಸ್ವೀಕೃತಿಯ ಬದಿಯಲ್ಲಿ ತೋರಿಸಲಾಗುತ್ತದೆ ಮತ್ತು ಅಢಾವೆ ಪತ್ರಿಕೆಯಲ್ಲಿ ಬಂಡವಾಳ ನಿಧಿ/ಸಾಮಾನ್ಯ ನಿಧಿಗೆ ನೇರವಾಗಿ ಕೂಡಿಸಲಾಗುತ್ತದೆ. ಎಕೆಂದರೆ, ಇದು ನಿರಂತರತೆ ಸ್ವರೂಪದ್ದಾಗಿದೆ. ಹೀಗಿದ್ದರೂ, ಚಿಕ್ಕ ಪ್ರಮಾಣದ ಮೊತ್ತವನ್ನು ಆದಾಯವಾಗಿ ಪರಿಗಣಿಸಿ ಆದಾಯ–ವೆಚ್ಚ ಖಾತೆಯ ಆದಾಯದ ಬದಿಯಲ್ಲಿ ತೋರಿಸಲಾಗುತ್ತದೆ.

**ಅಜೀವ ಸದಸ್ಯತ್ವ ಶುಲ್ಕ (Life Membership Fees):** ಕೆಲವು ಸದಸ್ಯರು ಅವಧಿಯ ವಂತಿಕೆಗಳನ್ನು ಪಾವತಿಸುವುದಕ್ಕೆ ಬದಲಾಗಿ ಏಕಗಂಟಿನಲ್ಲಿ ಅಜೀವ ಸದಸ್ಯತ್ವ ಶುಲ್ಕವನ್ನು ಪಾವತಿಸುತ್ತಾರೆ. ಅಂತಹ ಮೊತ್ತವನ್ನು ಬಂಡವಾಳದ ಸ್ವೀಕೃತಿಯಾಗಿ ಪರಿಗಣಿಸಿ, ಬಂಡವಾಳ/ಸಾಮಾನ್ಯ ನಿಧಿಗೆ ನೇರವಾಗಿ ಜಮೆ ಮಾಡಲಾಗುತ್ತದೆ.

**ಪ್ರವೇಶ ಶುಲ್ಕಗಳು (Entrance Fees):** ಸದಸ್ಯರು ಸದಸ್ಯತ್ವವನ್ನು ಪಡೆಯಲು ಒಮ್ಮೆ ಮಾತ್ರ ಪಾವತಿಸುವ ದಾಖಲಾತಿ ಶುಲ್ಕವಾಗಿದೆ. ಕ್ಲಬ್‌ಗಳು ಮತ್ತು ಧಾರ್ಮಿಕ ಸಂಸ್ಥೆಗಳಲ್ಲಿ ನಿಯಮಿತವಾಗಿ ಮತ್ತು ಸಾಕಷ್ಟು ಹೆಚ್ಚಿನ ಪ್ರಮಾಣದಲ್ಲಿ ಪ್ರವೇಶ ಶುಲ್ಕದ ಮೊತ್ತ ಇರುವುದರಿಂದ ಇದ್ದನ್ನು ನಿರಂತರತೆ ಇರದ ಅಂಶವಾಗಿ ಪರಿಗಣಿಸಿ ನೇರವಾಗಿ ಬಂಡವಾಳ/ಸಾಮಾನ್ಯ ನಿಧಿಗೆ ಜಮೆ ಮಾಡಲಾಗುತ್ತದೆ. ಅದರೆ, ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಶುಲ್ಕವು ನಿರಂತರ ಆದಾಯವಾಗಿರುವುದರಿಂದ ಮತ್ತು ಚಿಕ್ಕ ಪ್ರಮಾಣದ ಮೊತ್ತವಾಗಿರುವುದರಿಂದ, ಸಾಂಪ್ರದಾಯಿಕವಾಗಿ ಕಂದಾಯ ಅಂಶವಾಗಿ ಪರಿಗಣಿಸುತ್ತೇವೆ. ಹೀಗಿದ್ದರೂ, ನಿರ್ಧಿಷ್ಟ ಸೂಚನೆ ಇಲ್ಲದಿರುವಾಗ, ಸಂಪೂರ್ಣ ಮೊತ್ತವನ್ನು ಬಂಡವಾಳದ ಸ್ವೀಕೃತಿಯಾಗಿ ಪರಿಗಣಿಸುವುದು ಸೂಕ್ತವಾಗಿರುತ್ತದೆ ಮತ್ತು ಸಂಪೂರ್ಣ ಮೊತ್ತವನ್ನು ನೇರವಾಗಿ ಬಂಡವಾಳ/ಸಾಮಾನ್ಯ ನಿಧಿಗೆ ಕೂಡಿಸಬೇಕು.

**ಹಳೆಯ ಆಸ್ತಿಗಳ ಮಾರಾಟ (Sale of Old Assets):** ಹಳೆಯ ಆಸ್ತಿಗಳ ಮಾರಾಟದಿಂದ ಬಂದ ಸ್ವೀಕೃತಿಗಳನ್ನು ಯಾವ ವರ್ಷದಲ್ಲಿ ಇವುಗಳನ್ನು ಮಾರಾಟ ಮಾಡಲಾಗಿದೆಯೋ, ಆ ವರ್ಷದ ಆಯ–ವ್ಯಯ ಖಾತೆಯಲ್ಲಿ ತೋರಿಸಲಾಗುತ್ತದೆ. ಅದರೆ, ಆಸ್ತಿಯ ಮಾರಾಟದ ಗಳಿಕೆ ಅಥವಾ ನಷ್ಟವನ್ನು ಆ ವರ್ಷದ ಆದಾಯ–ವೆಚ್ಚ ಖಾತೆಗೆ ತೆಗೆದುಕೊಳ್ಳಲಾಗುತ್ತದೆ. ಉದಾಹರಣೆಗೆ, ₹800 ಪುಸ್ತಕದ ಮೌಲ್ಯವಿರುವ ಪೀಠೋಪಕರಣಗಳನ್ನು ₹700ಕ್ಕೆ ಮಾರಾಟ ಮಾಡಿದಾಗ, ₹700 ಮೊತ್ತವನ್ನು ಆಯ–ವ್ಯಯ ಖಾತೆಯ ಸ್ವೀಕೃತಿಯಾಗಿ ತೋರಿಸಲಾಗುತ್ತದೆ ಮತ್ತು ಹಳೆಯ ಆಸ್ತಿಯ ಮಾರಾಟದ ₹100 ನಷ್ಟವನ್ನು ಆದಾಯ–ವೆಚ್ಚ ಖಾತೆಯ ವೆಚ್ಚದ ಬದಿಯಲ್ಲಿ ತೋರಿಸಲಾಗುತ್ತದೆ. ಪೀಠೋಪಕರಣಗಳನ್ನು ಅಢಾವೆ ಪತ್ರಿಕೆಯಲ್ಲಿ ತೋರಿಸುವುದರಿಂದ ₹800ನ್ನು ಪಿಠೋಪಕರಣಗಳ ಒಟ್ಟು ಪುಸ್ತಕ ಮೌಲ್ಯದಿಂದ ಕಳೆಯಲಾಗುತ್ತದೆ.

**ನಿಯತಕಾಲಿಕಗಳ ಮಾರಾಟ (Sale of Periodicals):** ಇದು ನಿರಂತರ ಸ್ವರೂಪದ ಅಂಶವಾಗಿರುವುದರಿಂದ ಆದಾಯ–ವೆಚ್ಚ ಖಾತೆಯ ಆದಾಯದ ಬದಿಯಲ್ಲಿ ತೋರಿಸಲಾಗುತ್ತದೆ.

**ಕ್ರೀಡಾ ಸಾಮಗ್ರಿಗಳ ಮಾರಾಟ (Sale of Sports Materials):** ಕ್ರೀಡಾ ಸಾಮಗ್ರಿಗಳ ಮಾರಾಟವು (ಉಪಯೋಗಿಸಿದ ಸಾಮಗ್ರಿಗಳಾದ ಹಳೆಯ ಬಾಲುಗಳು, ಬ್ಯಾಟುಗಳು, ನೆಟ್‌ಗಳು ಇತ್ಯಾದಿ) ಕ್ರೀಡಾ ಕ್ಲಬ್‌ಗಳ ನಿರಂತರ ಸ್ವರೂಪದ್ದಾಗಿರುತ್ತದೆ. ಇದನ್ನು ಸಾಮಾನ್ಯವಾಗಿ, ಆದಾಯ–ವೆಚ್ಚ ಖಾತೆಯ ಆದಾಯದ ಬದಿಯಲ್ಲಿ ತೋರಿಸಲಾಗುತ್ತದೆ.

**ಗೌರವಧನ ಪಾವತಿ (Payment of Honorarium):** ಇದು ಸಂಸ್ಥೆಯ ಸಾಮಾನ್ಯ ನೌಕರರಲ್ಲದ ವ್ಯಕ್ತಿಗಳಿಗೆ ಪಾವತಿಸುವ ಮೊತ್ತವಾಗಿದೆ. ಕ್ಲಬ್‌ಗಳಲ್ಲಿ ಪ್ರದರ್ಶನ ನೀಡುವ ಕಲಾವಿದರಿಗೆ ಮಾಡುವ ಪಾವತಿಯು ಗೌರವಧನಕ್ಕೆ ಉದಾಹರಣೆಯಾಗಿದೆ. ಈ ಗೌರವಧನದ ಪಾವತಿಯನ್ನು ಆದಾಯ ವೆಚ್ಚ–ಖಾತೆಯ ಖರ್ಚು ಬದಿಯಲ್ಲಿ ತೋರಿಸಲಾಗುತ್ತದೆ.

**ದತ್ತಿ ನಿಧಿ (Endowment Fund):** ಇದು ಮೃತ್ಯು ಪತ್ರ ಅಥವಾ ಕೊಡುಗೆಗಳಿಂದ ಸೃಷ್ಟಿಯಾದ ನಿಧಿಯಾಗಿದೆ. ಇವುಗಳ ಆದಾಯವು ನಿಶ್ಚಿತ ಉದ್ದೇಶಕ್ಕಾಗಿ ಮೀಸಲಾಗಿರುತ್ತದೆ. ಅದ್ದರಿಂದ, ಇದು ಬಂಡವಾಳ ಸ್ವೀಕೃತಿಯಾಗಿದ್ದು, ನಿಶ್ಚಿತ ಉದ್ದೇಶದ ನಿಧಿಯಾಗಿರುವುದರಿಂದ ಅಢಾವೆ ಪತ್ರಿಕೆಯ ಜವಾಬ್ದಾರಿ ಬದಿಯಲ್ಲಿ ಪ್ರತ್ಯೇಕವಾಗಿ ತೋರಿಸಲಾಗುತ್ತದೆ.

**ಸರ್ಕಾರದ ಅನುದಾನ (Government Grant):** ಶಾಲೆಗಳು, ಕಾಲೇಜುಗಳು, ಸಾರ್ವಜನಿಕ ಆಸ್ಪತ್ರೆ, ಇತ್ಯಾದಿಗಳು ತಮ್ಮ ಚಟುವಟಿಕೆಗಳಿಗೆ ಸರ್ಕಾರದ ಅನುದಾನವನ್ನು ಅವಲಂಬಿಸಿರುತ್ತವೆ. ನಿರಂತರ ಅನುದಾನಗಳು ನಿರ್ವಹಣೆಯ ಅನುದಾನಗಳಾಗಿರುವುದರಿಂದ ಕಂದಾಯದ ಸ್ವೀಕೃತಿಗಳಾಗಿದ್ದು (ಚಾಲ್ತಿ ವರ್ಷದ ಆದಾಯ) ಆದಾಯ–ವೆಚ್ಚ ಖಾತೆಗೆ ಜಮಾ ಮಾಡಲಾಗುತ್ತದೆ. ಹೀಗಿದ್ದರೂ, ಕಟ್ಟಡ ಅನುದಾನದಂತಹ ಅನುದಾನಗಳು ಬಂಡವಾಳ ಸ್ವೀಕೃತಿಯಾಗಿ ಪರಿಗಣಿಸುವುದರಿಂದ ಕಟ್ಟಡ ನಿಧಿ ಖಾತೆಗೆ ವರ್ಗಾಯಿಸಲಾಗುತ್ತದೆ. ಕೆಲವು ಲಾಭಕ್ಕಲ್ಲದ ಸಂಸ್ಥೆಗಳು ಸರ್ಕಾರಿ ಮತ್ತು ಸರ್ಕಾರಿ ಏಜೆನ್ಸಿಗಳಿಂದ ನಗದು ಸಹಾಯಧನ ಪಡೆಯುತ್ತವೆ. ಈ ಸಹಾಯಧನವೂ ಸಹ ಸ್ವೀಕರಿಸಿದ ವರ್ಷದ ಕಂದಾಯದ ಆದಾಯವಾಗಿ ಪರಿಗಣಿಸಲಾಗುತ್ತದೆ.

**ವಿಶೇಷ ನಿಧಿಗಳು (Special Funds):** ಲಾಭಕ್ಕಲ್ಲದ ಸಂಸ್ಥೆಗಳು ನಿಶ್ಚಿತ ಉದ್ದೇಶಕ್ಕೆ/ ಚಟುವಟಿಕೆಗಳಿಗೆ ವಿಶೇಷ ನಿಧಿಗಳನ್ನು ಸೃಷ್ಟಿಸುತ್ತವೆ. ಅವುಗಳೆಂದರೆ ಬಹುಮಾನ ನಿಧಿ, ಪಂದ್ಯಾವಳಿ ನಿಧಿ, ಕ್ರೀಡಾ ನಿಧಿ, ಇತ್ಯಾದಿ. ಇಂತಹ ನಿಧಿಗಳನ್ನು ಬಂಡವಾಳ ಪತ್ರಗಳಲ್ಲಿ ಹೂಡಿಕೆ ಮಾಡಲಾಗುತ್ತದೆ ಮತ್ತು ಅಂತಹ ಹೂಡಿಕೆಗಳಿಂದ ಗಳಿಸಿದ ಆದಾಯವನ್ನು ಆದಾಯ–ವೆಚ್ಚ ಖಾತೆಗೆ ಜಮಾ ಮಾಡದೇ, ಸಂಬಂಧಿಸಿದ ನಿಧಿಗಳಿಗೆ ಕೂಡಿಸಲಾಗುತ್ತದೆ. ಅದೇ ರೀತಿಯಲ್ಲಿ. ಅಂತಹ ಉದ್ದೇಶಗಳಿಗೆ ಮಾಡಿದ ಖರ್ಚುಗಳನ್ನು ವಿಶೇಷ ನಿಧಿಯಿಂದ ಕಳೆಯಲಾಗುತ್ತದೆ. ಉದಾಹರಣೆಗೆ, ಕ್ಲಬ್ ಒಂದು ಕ್ರೀಡಾ ಚಟುವಟಿಕೆಗೆ ವಿಶೇಷ ನಿಧಿಯನ್ನು ಇರಿಸಬಹುದು. ಈ ಸಂದರ್ಭದಲ್ಲಿ ಕ್ರೀಡಾ ನಿಧಿಯ ಹೂಡಿಕೆ ಮೇಲಿನ ಬಡ್ಡಿಯ ಆದಾಯವನ್ನು ಕ್ರೀಡಾ ನಿಧಿಗೆ ಕೂಡಿಸಲಾಗುತ್ತದೆ ಮತ್ತು ಕ್ರೀಡೆಗಳ ಎಲ್ಲಾ ವೆಚ್ಚಗಳನ್ನು ಕ್ರೀಡಾ ನಿಧಿಯಿಂದ ಕಳೆಯಲಾಗುತ್ತದೆ. ವಿಶೇಷ ನಿಧಿಗಳನ್ನು ಅಢಾವೆ ಪತ್ರಿಕೆಯ ಜವಾಬ್ದಾರಿಯ ಬದಿಯಲ್ಲಿ ತೋರಿಸಲಾಗುತ್ತದೆ, ಹೀಗಿದ್ದರೂ, ನಿಶ್ಚಿತ/ವಿಶೇಷ ನಿಧಿಯಲ್ಲಿ ಆದಾಯ ಮತ್ತು ಖರ್ಚುಗಳನ್ನು ಹೊಂದಾಣಿಕೆ ಮಾಡಿ ಋಣಾತ್ಮಕ ಶಿಲ್ಕು ಇದ್ದಲ್ಲಿ, ಅದನ್ನು ನಿರ್ದೇಶನದ ಪ್ರಕಾರ ಆದಾಯ–ವೆಚ್ಚ ಖಾತೆಯ ಖರ್ಚು ಬದಿಗೆ ವರ್ಗಾವಣೆ ಮಾಡಲಾಗುತ್ತದೆ. (ನಿದರ್ಶನ 8 ಮತ್ತು 9 ನೋಡಿ)

**ನಿದರ್ಶನ : 8**

ಒಂದು ಕ್ಲಬ್‌ನ ಹಣಕಾಸಿನ ಪಟ್ಟಿಗಳಲ್ಲಿನ ಕೆಳಗಿನ ಅಂಶಗಳೊಂದಿಗೆ ಹೇಗೆ ವ್ಯವಹರಿಸುತ್ತೀರಿ ಎಂದು ತೋರಿಸಿ:

| ವಿವರಗಳು | ಖರ್ಚು ಮೊತ್ತ ₹ | ಜಮಾ ಮೊತ್ತ ₹ |
|---|---|---|
| ಬಹುಮಾನ ನಿಧಿ | | 80,000 |
| ಬಹುಮಾನ ನಿಧಿ ಹೂಡಿಕೆ | 80,000 | |
| ಬಹುಮಾನ ನಿಧಿ ಹೂಡಿಕೆಗಳಿಂದ ಆದಾಯ | | 8,000 |
| ಬಹುಮಾನಗಳ ನೀಡಿಕೆ | 6,000 | |

**ಪರಿಹಾರ:**

**__________ ಇದ್ದಂತೆ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|---|
| ಬಹುಮಾನ ನಿಧಿ | 80,000 | | ಬಹುಮಾನ ನಿಧಿ ಹೂಡಿಕೆಗಳು | 80,000 |
| ಕೂಡಿಸಿ: ಹೂಡಿಕೆಗಳಿಂದ ಆದಾಯ | 8,000 | | | |
| | 88,000 | | | |
| ಕಳೆಯಿರಿ: ಬಹುಮಾನಗಳ ನೀಡಿಕೆ | 6,000 | 82,000 | | |

**ನಿದರ್ಶನ : 9**

(ಎ) ಲಾಭಕ್ಕಲ್ಲದ ಸಂಸ್ಥೆಯ ಹಣಕಾಸಿನ ಪಟ್ಟಿಗಳಲ್ಲಿ ಈ ಕೆಳಗಿನ ಮಾಹಿತಿಯನ್ನು ತೋರಿಸಿ:

| ವಿವರಗಳು | ಮೊತ್ತ ₹ |
|---|---|
| ಪಂದ್ಯದ ಖರ್ಚುಗಳು | 16,000 |
| ಪಂದ್ಯ ನಿಧಿ | 8,000 |
| ಪಂದ್ಯ ನಿಧಿಗೆ ದೇಣಿಗೆ | 5,000 |
| ಪಂದ್ಯದ ಟಿಕೆಟ್‌ಗಳ ಮಾರಾಟ | 7,000 |

(ಬಿ) ಪಂದ್ಯದ ವೆಚ್ಚಗಳು, ಇತರೆ ಅಂಶಗಳು ಸ್ಥಿರವಾಗಿದ್ದು, ಪಂದ್ಯದ ಖರ್ಚುಗಳು ₹6,000 ಏರಿಕೆಯಾದಾಗ ಪರಿಣಾಮ ಏನಾಗುತ್ತದೆ?

**ಪರಿಹಾರ: (ಎ)**

**-------- ರಂದು ಇದ್ದಂತೆ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|---|
| ಪಂದ್ಯ ನಿಧಿ | 8,000 | | | |
| ಕೂಡಿಸಿ: ದೇಣಿಗೆ (ನಿಶ್ಚಿತ) | 5,000 | | | |
| ಕೂಡಿಸಿ: ಪಂದ್ಯದ ಟಿಕೆಟ್‌ಗಳ ಮಾರಟ | 7,000 | | | |
| | 20,000 | | | |
| ಕಳೆಯಿರಿ: ಪಂದ್ಯದ ಖರ್ಚುಗಳು | 16,000 | 4,000 | | |
| | | **4,000** | | |

* ಸೂಕ್ತ ಮಾಹಿತಿ ಮಾತ್ರ

**(ಬಿ)**

ಪಂದ್ಯದ ಖರ್ಚುಗಳು ₹6,000 ಏರಿಕೆಯಾದಾಗ, ಪಂದ್ಯ ನಿಧಿಯ ನಿವ್ವಳ ಶಿಲ್ಕು ಋಣಾತ್ಮಕವಾಗುತ್ತದೆ. ಅಂದರೆ, ಖರ್ಚು, ಜಮಾಗಿಂತ ಅಧಿಕವಾದ ಪರಿಣಾಮ ₹2,000 ಖರ್ಚು ಶಿಲ್ಕನ್ನು ಆ ವರ್ಷದ ಆದಾಯ–ವೆಚ್ಚ ಖಾತೆಗೆ ಹಾಕಲಾಗುತ್ತದೆ.

**ನಿಮ್ಮ ತಿಳುವಳಿಕೆಯನ್ನು ಪರೀಕ್ಷಿಸಿಕೊಳ್ಳಿರಿ –II : Test Your Understanding -II**

**ಲಾಭಕ್ಕಲ್ಲದ ಸಂಸ್ಥೆಯಲ್ಲಿ ಕೆಳಗಿನ ಅಂಶಗಳನ್ನು ನೀವು ಹೇಗೆ ಪರಿಗಣಿಸುತ್ತೀರಿ?**

(1) ಪಂದ್ಯಾವಳಿ ನಿಧಿ ₹40,000, ಪಂದ್ಯಾವಳಿ ಖರ್ಚುಗಳು ₹14,000. ಪಂದ್ಯಾವಳಿಯಿಂದ ಬಂದ ಸ್ವೀಕೃತಿಗಳು ₹16,000.

(2) ಟೇಬಲ್ ಟೆನ್ನಿಸ್ ಪಂದ್ಯದ ಖರ್ಚುಗಳು ₹4,000

(3) ಬಹುಮಾನ ನಿಧಿ ₹22,000, ಬಹುಮಾನ ನಿಧಿ ಹೂಡಿಕೆಗಳ ಮೇಲಿನ ಬಡ್ಡಿ ₹3,000, ಬಹುಮಾನಗಳ ನೀಡಿಕೆ ₹5,000, ಬಹುಮಾನ ನಿಧಿ ಹೂಡಿಕೆಗಳು ₹18,000.

(4) ದತ್ತಿ ಪ್ರದರ್ಶನಗಳಿಂದ ಸ್ವೀಕೃತಿಗಳು ₹7,000, ದತ್ತಿ ಪ್ರದರ್ಶನದ ಮೇಲಿನ ಖರ್ಚುಗಳು ₹3,000.

**ನಿದರ್ಶನ : 10**

31 ಮಾರ್ಚ್ 2015ರ ವರ್ಷಾಂತ್ಯದ ಆಯ–ವ್ಯಯ ಖಾತೆಯ ಸಂಗ್ರಹ:

ಪಾವತಿಗಳು: ಲೇಖನ ಸಾಮಗ್ರಿಗಳು ₹23,000.

**ಹೆಚ್ಚುವರಿ ಮಾಹಿತಿ:**

| ವಿವರಗಳು | 1 ಏಪ್ರಿಲ್,2014 | 31 ಮಾರ್ಚ್,2015 |
|---|---|---|
| ಲೇಖನಸಾಮಗ್ರಿಗಳ ದಾಸ್ತಾನು | ₹4,000 | ₹3,000 |
| ಲೇಖನಸಾಮಗ್ರಿಗಳ ಧಣಿಗಳು | ₹9,000 | ₹2,500 |

**ಪರಿಹಾರ:**

| ವಿವರಗಳು | ಮೊತ್ತ ₹ |
|---|---|
| ಆಯ–ವ್ಯಯ ಖಾತೆಯ ಪ್ರಕಾರ ಲೇಖನಸಾಮಗ್ರಿಗಳ ಖರೀದಿಗೆ ಮಾಡಿದ ಪಾವತಿ | 23,000 |
| **ಕಳೆಯಿರಿ:** 2013–14ರ ಪಾವತಿ (ಪ್ರಾರಂಭದಲ್ಲಿನ ಧಣಿಗಳು) | 9,000 |
| 2014–15ನೇ ವರ್ಷಕ್ಕೆ ಮಾಡಿದ ಪಾವತಿ | 14,000 |
| **ಕೂಡಿಸು:** ಇನ್ನೂ ಪಾವತಿ ಮಾಡದೇ ಇರುವುದು (ಅಂದರೆ, ಅಂತ್ಯದಲ್ಲಿನ ಧನಿಗಳು) | 2,500 |
| 2014–15ನೇ ವರ್ಷದ ಲೇಖನಸಾಮಗ್ರಿ ಖರೀದಿ | 16,500 |
| **ಕೂಡಿಸು:** ಪ್ರಾರಂಭದಲ್ಲಿನ ದಾಸ್ತನು | 4,000 |
| 2014–15ನೇ ಸಾಲಿಗೆ ಲಭ್ಯವಾಗುವ ಲೇಖನಸಾಮಗ್ರಿ | 20,500 |
| ಕಳೆಯಿರಿ: ಅಂತ್ಯದಲ್ಲಿ ದಾಸ್ತಾನು | 3,000 |
| 2014–15ನೇ ಸಾಲಿನಲ್ಲಿ ಆದಾಯ–ವೆಚ್ಚ ಖಾತೆಯ ಖರ್ಚು ಬದಿಗೆ ತೆಗೆದುಕೊಳ್ಳಬೇಕಾದ ಬಳಕೆಯಾದ ಲೇಖನಸಾಮಗ್ರಿ | 17,500 |

**ಲೇಖನಸಾಮಗ್ರಿ(Stationery):** ಸಾಮಾನ್ಯವಾಗಿ ಲೇಖನಸಾಮಗ್ರಿಗಳಿಗೆ ಮಾಡುವ ಖರ್ಚುಗಳನ್ನು ಬಳಕೆಯಾಗುವ ಅಂಶಗಳೆಂದು ಆದಾಯ–ವೆಚ್ಚ ಖಾತೆಗೆ ಖರ್ಚು ಹಾಕಲಾಗುತ್ತದೆ. ಆದರೆ, ಲೇಖನಸಾಮಗ್ರಿಗಳ ದಾಸ್ತಾನು (ಪ್ರಾರಂಭಿಕ/ ಅಥವಾ ಅಂತಿಮ) ನೀಡಿದ್ದಲ್ಲಿ, ಲೇಖನಸಾಮಗ್ರಿಗಳ ಖರೀದಿಯಲ್ಲಿ ಅವಶ್ಯಕ ಹೊಂದಾಣಿಕೆ ಮಾಡುವ ವಿಧಾನವಾಗಿರುತ್ತದೆ. ಬಳಕೆಯಾದ ಲೇಖನಸಾಮಗ್ರಿಗಳನ್ನು ಲೆಕ್ಕಹಾಕಲಾಗುತ್ತದೆ ಮತ್ತು ಆ ಮೊತ್ತವನ್ನು ಆದಾಯ–ವೆಚ್ಚ ಖಾತೆಯಲ್ಲಿ ಹಾಗೂ ಇದರ ದಾಸ್ತಾನನ್ನು ಆಢಾವೆ ಪತ್ರಿಕೆಯಲ್ಲಿ ತೋರಿಸಲಾಗುತ್ತದೆ. ಉದಾಹರಣೆಗೆ, ಆಯ–ವ್ಯಯ ಖಾತೆಯು ಲೇಖನಸಾಮಗ್ರಿಗಳ ಪಾವತಿಯ ಮೊತ್ತ ₹40,000, ತೋರಿಸುತ್ತಿದೆ, ಪ್ರಾರಂಭಿಕ ಮತ್ತು ಅಂತಿಮ ಲೇಖನಸಾಮಗ್ರಿಗಳ ಮೊತ್ತ ₹12,000 ಮತ್ತು ₹15,000 ತೋರಿಸುತ್ತಿದೆ. ಲೇಖನಸಾಮಗ್ರಿಗಳ ವೆಚ್ಚದ ಮೊತ್ತವನ್ನು ಕೆಳಗಿನಂತೆ ಲೆಕ್ಕಹಾಕಲಾಗುತ್ತದೆ:

| | ₹ |
|---|---|
| ಲೇಖನಸಾಮಗ್ರಿ ಖರೀದಿಗಳು | 40,000 |
| ಕೂಡಿಸಿ: ಪ್ರಾರಂಭಿಕ ದಾಸ್ತಾನು | 12,000 |
| | 52,000 |
| ಕಳೆಯಿರಿ: ಅಂತಿಮ ದಾಸ್ತಾನು | 15,000 |
| | 37,000 |

ಲೇಖನಸಾಮಗ್ರಿಯನ್ನು ಸಹ ಉದ್ದರಿಯಲ್ಲಿ ಖರೀದಿಸಿದಾಗ, ನಿದರ್ಶನ 12ರಲ್ಲಿ ಕೊಟ್ಟಿರುವಂತೆ ಅದರ ಬಳಕೆಯ ಮೊತ್ತವನ್ನು ಲೆಕ್ಕಹಾಕಲಾಗುತ್ತದೆ.

**ನೀವೆ ಮಾಡಿ : Do it Yourself**

1. ಈ ಕೆಳಗಿನ ಮಾಹಿತಿಯಿಂದ 2014–15ನೇ ಸಾಲಿನಲ್ಲಿ ಬಳಕೆಯಾದ ಔಷಧಿಗಳ ವೆಚ್ಚವನ್ನು ಕಂಡುಹಿಡಿಯಿರಿ:

| ವಿವರಗಳು | ಮೊತ್ತ ₹ |
|---|---|
| ಔಷಧಿಗಳ ಖರೀದಿಯ ಪಾವತಿ | 3,70,000 |
| ಔಷಧಿ ಖರೀದಿಯ ಧಣಿಗಳು: | |
| 1.4.2014ರಂದು | 25,000 |
| 31.3.2015ರಂದು | 17,000 |
| ಔಷಧಿಗಳ ದಾಸ್ತನು: | |
| 1.4.2014ರಂದು | 62,000 |
| 31.3.2015ರಂದು | 54,000 |
| ಔಷಧಿಗಳ ಪೂರೈಕೆದಾರರಿಗೆ ಮುಂಗಡ | |
| 1.4.2014ರಂದು | 11,500 |
| 31.3.2015ರಂದು | 18,200 |

2. 31 ಮಾರ್ಚ್, 2014ರ ವರ್ಷಾಂತ್ಯದ ಆದಾಯ–ವೆಚ್ಚ ಖಾತೆಗೆ ಕ್ರೀಡಾಸಾಮಗ್ರಿಗಳ ಎಷ್ಟು ಮೊತ್ತವನ್ನು ವೆಚ್ಚವಾಗಿ ವರ್ಗಾವಣೆ ಮಾಡಲಾಗುತ್ತದೆ?

| ವಿವರಗಳು | ಮೊತ್ತ ₹ |
|---|---|
| 1 ಏಪ್ರಿಲ್,2014ರಂದು ಕ್ರೀಡಾಸಾಮಗ್ರಿಗಳ ದಾಸ್ತಾನು | 7,500 |
| 1 ಏಪ್ರಿಲ್,2014ರಂದು ಕ್ರೀಡಾಸಾಮಗ್ರಿಗಳ ಧಣಿಗಳು | 2,000 |
| 31 ಮಾರ್ಚ್, 2015ರಂದು ಕ್ರೀಡಾಸಾಮಗ್ರಿಗಳ ದಾಸ್ತಾನು | 6,200 |
| 2014–15ನೇ ವರ್ಷಾವಧಿಯಲ್ಲಿ ಕ್ರೀಡಾಸಾಮಗ್ರಿಗಳಿಗೆ ಪಾವತಿಸಿದ ಮೊತ್ತ | 17,000 |
| 31 ಮಾರ್ಚ್,2015ರಂದು ಕ್ರೀಡಾಸಾಮಗ್ರಿಗಳಿಗೆ ಮುಂಗಡ ಪಾವತಿ | 3,500 |
| 31 ಮಾರ್ಚ್, 2015ರಂದು ಕ್ರೀಡಾಸಾಮಗ್ರಿಗಳ ಧಣಿಗಳು | 1,200 |

**ನಿದರ್ಶನ: 11**

ಈ ಕೆಳಗಿನ ಆಯ–ವ್ಯಯ ಖಾತೆಯು 1 ಏಪ್ರಿಲ್, 2015 ರಿಂದ 31 ಮಾರ್ಚ್, 2016ರ ಅವಧಿಯ ಎಂಟರ್‌ಟೈನ್‌ಮೆಂಟ್ ಕ್ಲಬ್‌ರವರದ್ದಾಗಿದೆ.

**ಖರ್ಚು** **31 ಮಾರ್ಚ್, 2016ರ ವರ್ಷಕ್ಕೆ ಅಂತ್ಯವಾಗುವ ಆಯ–ವ್ಯಯ ಖಾತೆ** **ಜಮಾ**

| ಸ್ವೀಕೃತಿಗಳು | | ಮೊತ್ತ ₹ | ಪಾವತಿಗಳು | | ಮೊತ್ತ ₹ |
|---|---|---|---|---|---|
| ಹಿಂದಿನಿಂದ ಬಂದ ಶಿಲ್ಕು | | | ವೇತನಗಳು | | 24,000 |
| ನಗದು | 27,500 | | ವಿದ್ಯುತ್ ಬಿಲ್ | | 21,000 |
| ಬ್ಯಾಂಕ್ | 60,000 | 87,500 | ಉಪಾಹಾರ ಗೃಹಕ್ಕಾಗಿ ಆಹಾರ ಪದಾರ್ಥ | | 60,000 |
| ಸದಸ್ಯರ ವಂತಿಗೆಗಳು: | | | ದೂರವಾಣಿ ಬಿಲ್ | | 35,000 |
| 2014–2015 | 12,500 | | ನಿಯತಕಾಲಿಕಗಳಿಗಾಗಿ ವಂತಿಕೆಗಳು | | 14,500 |
| 2015–2016 | 1,00,000 | | ಮುದ್ರಣ ಮತ್ತು ಲೇಖನಸಾಮಗ್ರಿ | | 13,000 |
| 2016–2017 | 10,000 | 1,22,500 | ಕ್ರೀಡಾ ಖರ್ಚುಗಳು | | 50,000 |
| ಪೀಠೋಪಕರಣಗಳ ಮಾರಾಟ (ಪುಸ್ತಕದ ಮೌಲ್ಯ ₹.8,000) | | 10,000 | ಕಾರ್ಯದರ್ಶಿಯ ಗೌರವಧನ | | 30,000 |
| | | | 8% ಹೂಡಿಕೆಗಳು (31.3.2007) | | 1,00,000 |
| ಆಹಾರ ಪದಾರ್ಥಗಳ ಮಾರಾಟ | | 1,00,000 | ಮುಂದುವರಿದ ಶಿಲ್ಕು: | | |
| ಹಳೆಯ ನಿಯತಕಾಲಿಕಗಳು ಮತ್ತು | | | ನಗದು | 21,500 | |
| ದಿನಪತ್ರಿಕೆಗಳ ಮಾರಾಟ | | 3,200 | ಬ್ಯಾಂಕ್ | 45,000 | 66,500 |
| ಮದುವೆಗೆ ಬಳಸಿದ ಮೈದಾನದ ಬಾಡಿಗೆ | | 48,750 | | | |
| ಕ್ರೀಡಾ ನಿಧಿಗಾಗಿ ದೇಣಿಗೆ | | 25,000 | | | |
| ಭದ್ರತಾ ಕಪಾಟು ಬಾಡಿಗೆ | | 17,050 | | | |
| | | **4,14,000** | | | **4,14,000** |

**ಹೆಚ್ಚುವರಿ ಮಾಹಿತಿ:**

1. ಕ್ಲಬ್ 225 ಸದಸ್ಯರನ್ನು ಹೊಂದಿದೆ. ಪ್ರತಿಯೊಬ್ಬರು ₹500 ವಾರ್ಷಿಕ ವಂತಿಗೆ ಪಾವತಿಸುತ್ತರೆ. 31 ಮಾರ್ಚ 2016 ರಂದು ವಂತಿಕೆ ಬಾಕಿ ₹15,000 ಇದೆ.
2. 2015–2016ರ ವರ್ಷಕ್ಕೆ ₹2,000 ದೂರವಾಣಿ ಬಿಲ್ ಬಾಕಿ ಇದೆ.
3. 2014–2015ರ ವರ್ಷಕ್ಕೆ ₹3,050 ಮತ್ತು 2015–2016ಕ್ಕೆ ₹1,500 ಭದ್ರತಾ ಕಪಾಟು ಬಾಡಿಗೆ ಬಾಕಿ ಇದೆ.
4. 2015–2016ರ ವರ್ಷಕ್ಕೆ ₹4,000 ವೇತನ ಬಾಕಿ ಇದೆ.
5. 2015–2016ರ ವರ್ಷಕ್ಕೆ ಪ್ರಾರಂಭಿಕ ಮುದ್ರಣ ಮತ್ತು ಲೇಖನಸಾಮಗ್ರಿ ದಾಸ್ತಾನು ₹2,000 ಮತ್ತು ಅಂತ್ಯದ ಮುದ್ರಣ ಮತ್ತು ಲೇಖನಸಾಮಗ್ರಿ ದಾಸ್ತಾನು ₹3,000
6. 1 ಎಪ್ರಿಲ್, 2016 ರಂದು ಇತರೆ ಶಿಲ್ಕುಗಳು ಕೆಳಗಿನಂತಿವೆ:

| | ₹ |
|---|---|
| ಪೀಠೋಪಕರಣ | 1,00,000 |
| ಕಟ್ಟಡ | 6,50,000 |
| ಕ್ರೀಡಾ ನಿಧಿ | 15,000 |

7. 31 ಮಾರ್ಚ್ 2016ರ ವರ್ಷಾಂತ್ಯಕ್ಕೆ ಪೀಠೋಪಕರಣ ಮತ್ತು ಕಟ್ಟಡದ ಮೇಲೆ 12.5% ಮತ್ತು 5% ಕ್ರಮವಾಗಿ ಕ್ಷೀಣಿಸುವ ಶಿಲ್ಕು ಎಂದು ಊಹಿಸಿಕೊಂಡು ಸವಕಳಿ ತೆಗೆಯಿರಿ.

ಆದಾಯ–ವೆಚ್ಚ ಖಾತೆ ಮತ್ತು ಅದೇ ದಿನಾಂಕದಂದು ಅಢಾವೆ ಪತ್ರಿಕೆಯನ್ನು ತಯಾರಿಸಿ.

**ಪರಿಹಾರ:**

**ಎಂಟರ್‌ಟೈನ್‌ಮೆಂಟ್ ಕ್ಲಬ್‌ರವರ ಪುಸ್ತಕ**

**ಖರ್ಚು ಮಾರ್ಚ್ 31, 2016 ವರ್ಷಕ್ಕೆ ಅಂತ್ಯವಾಗುವ ಆದಾಯ–ವೆಚ್ಚ ಖಾತೆ ಜಮಾ**

| ವೆಚ್ಚ | | ಮೊತ್ತ ₹ | ಆದಾಯ | | ಮೊತ್ತ ₹ |
|---|---|---|---|---|---|
| ವೇತನ | 24,000 | | ವಂತಿಗೆಗಳು | 1,00,000 | |
| ಕೂಡಿಸಿ: ಬಾಕಿ | 4,000 | 28,000 | ಕೂಡಿಸಿ: ಬಾಕಿ | 12,500 | 1,12,500 |
| ವಿದ್ಯುತ್ ಬಿಲ್ | | 21,000 | ಹಳೆಯ ನಿಯತಕಾಲಿಕಗಳ ಮಾರಾಟ | | 3,200 |
| ದೂರವಾಣಿ ಬಿಲ್ | 35,000 | | ಪೀಠೋಪಕರಣಗಳ ಮಾರಾಟದ ಲಾಭ | | 2,000 |
| ಕೂಡಿಸಿ: ಬಾಕಿ | 2,000 | 37,000 | ಮದುವೆಗಾಗಿನ ಮೈದಾನದ ಬಾಡಿಗೆ | | 48,750 |
| ನಿಯತಕಾಲಿಕಗಳಿಗಾಗಿ ವಂತಿಗೆ | | 14,500 | ಭದ್ರತಾ ಕಪಾಟು ಬಾಡಿಗೆ | 17,050 | |
| ಮುದ್ರಣ ಮತ್ತು ಲೇಖನಸಾಮಗ್ರಿ | 13,000 | | ಕಳೆಯಿರಿ: ಪ್ರಾರಂಭಿಕ ಬಾಕಿ | 3,050 | |
| ಕೂಡಿಸಿ: ಪ್ರಾರಂಭಿಕ ದಾಸ್ತನು | 2,000 | | | 14,000 | |
| | 15,000 | | ಕೂಡಿಸಿ: ಅಂತಿಮ ಬಾಕಿ | 1,500 | 15,500 |
| ಕಳೆಯಿರಿ: ಅಂತಿಮ ದಾಸ್ತನು | 3,000 | 12,000 | ಆಹಾರ ಪದಾರ್ಥಗಳ ಮಾರಾಟ | 1,00,000 | |
| ಕಾರ್ಯದರ್ಶಿಯ ಗೌರವಧನ | | 30,000 | ಕಳೆಯಿರಿ: ಆಹಾರ ಬಳಕೆಯ ವೆಚ್ಚ | 60,000 | 40,000 |
| ಕ್ರೀಡೆಯ ಖರ್ಚುಗಳು | 50,000 | | | | |
| ಕಳೆಯಿರಿ: ಕ್ರೀಢಾ ನಿಧಿ | | | | | |
| ಪ್ರಾರಂಭಿಕ ಶಿಲ್ಕು | 15,000 | | | | |
| | 35,000 | | | | |
| ಕಳೆಯಿರಿ: ಕ್ರೀಡೆಗಳಿಗಾಗಿ ದೇಣಿಗೆ | 25,000 | 10,000 | | | |
| ಸವಕಳಿ: | | | | | |
| ಪೀಠೋಪಕರಣ | 11,500 | | | | |
| ಕಟ್ಟಡ | 32,500 | 44,000 | | | |
| ಮಿಗತೆ (ವೆಚ್ಚಗಳನ್ನು ಮೀರಿದ ಆದಾಯ) | | 25,450 | | | |
| | | **2,21,950** | | | **2,21,950** |

**31 ಮಾರ್ಚ್, 2015 ರಂದು ಇದ್ದಂತೆ ಎಂಟರ್‌ಟೈನ್‌ಮೆಂಟ್ ಕ್ಲಬ್‌ರವರ ಅಧಾವೆ ಪತ್ರಿಕೆ**

| ಹೊಣೆಗಾರಿಕೆಗಳು | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|
| ಕ್ರೀಡಾ ನಿಧಿ | 15,000 | ಕೈಯಲ್ಲಿನ ನಗದು | 27,500 |
| ಬಂಡವಾಳ/ ಸಾಮಾನ್ಯ ನಿಧಿ | 8,42,550 | ಬ್ಯಾಂಕಿನಲ್ಲಿ ನಗದು | 60,000 |
| (ವ್ಯತ್ಯಾಸದ ಮೊತ್ತ) | | ವಂತಿಗೆ ಬಾಕಿ | 15,000 |
| | | ಭದ್ರತಾ ಕಪಾಟು ಬಾಡಿಗೆ ಬಾಕಿ | 3,050 |
| | | ಮುದ್ರಣ ಮತ್ತು ಲೇಖನ ಸಾಮಗ್ರಿ | 2,000 |
| | | ಪೀಠೋಪಕರಣ | 1,00,000 |
| | | ಕಟ್ಟಡಗಳು | 6,50,000 |
| | **8,57,550** | | **8,57,550** |

**31 ಮಾರ್ಚ್, 2016 ರಂದು ಇದ್ದಂತೆ ಎಂಟರ್‌ಟೈನ್‌ಮೆಂಟ್ ಕ್ಲಬ್‌ರವರ ಅಧಾವೆ ಪತ್ರಿಕೆ**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | | ಮೊತ್ತ ₹ |
|---|---|---|---|---|---|
| ಮುಂಗಡ ಸ್ವೀಕರಿಸಿದ ವಂತಿಗೆಗಳು | | 10,000 | ಕೈಯಲ್ಲಿನ ನಗದು | | 21,500 |
| ದೂರವಾಣಿ ಬಿಲ್ ಬಾಕಿ | | 2,000 | ಬ್ಯಾಂಕಿನಲ್ಲಿ ನಗದು | | 45,000 |
| ವೇತನ ಬಾಕಿ | | 4,000 | ವಂತಿಗೆ ಬಾಕಿ | | 15,000 |
| ಬಂಡವಾಳ/ ಸಾಮಾನ್ಯ ನಿಧಿ | 8,42,550 | | (2015 ₹2,500 | | |
| ಕೂಡಿಸಿ: ಮಿಗತೆ | 25,450 | 8,68,000 | ಮತ್ತು 2016 ₹12,500) | | |
| | | | ಭದ್ರತಾ ಕಪಾಟು ಬಾಡಿಗೆ ಬಾಕಿ | | 1,500 |
| | | | ಮುದ್ರಣ ಮತ್ತು ಲೇಖನಸಾಮಗ್ರಿ | | 3,000 |
| | | | ಪೀಠೋಪಕರಣ | 1,00,000 | |
| | | | ಕಳೆಯಿರಿ: ಮಾರಾಟ | 8,000 | |
| | | | | 92,000 | |
| | | | ಕಳೆಯಿರಿ: ಸವಕಳಿ | 11,500 | 80,500 |
| | | | ಕಟ್ಟಡಗಳು | 6,50,000 | |
| | | | ಕಳೆಯಿರಿ: ಸವಕಳಿ | 32,500 | 6,17,500 |
| | | | ಹೂಡಿಕೆಗಳು | | 1,00,000 |
| | | **8,84,000** | | | **8,84,000** |

**ನಿದರ್ಶನ: 12**

ಈ ಕೆಳಗಿನ ಮಾಹಿತಿಗಳಿಂದ 31 ಮಾರ್ಚ್, 2015ರ ವರ್ಷಕ್ಕೆ ಅಂತ್ಯವಾಗುವ ಆದಾಯ–ವೆಚ್ಚ ಖಾತೆ ಮತ್ತು ಅಧಾವೆ ಪತ್ರಿಕೆಯನ್ನು ತಯಾರಿಸಿ.

**ಖರ್ಚು 31 ಮಾರ್ಚ್, 2015ರ ವರ್ಷಕ್ಕೆ ಅಂತ್ಯವಾಗುವ ಆಯ–ವ್ಯಯ ಖಾತೆ ಜಮಾ**

| ಸ್ವೀಕೃತಿಗಳು | | ಮೊತ್ತ ₹ | ಪಾವತಿಗಳು | | ಮೊತ್ತ ₹ |
|---|---|---|---|---|---|
| ಹಿಂದಿನಿಂದ ಬಂದ ಶಿಲ್ಕು | | 41,000 | ವೇತನಗಳು ಮತ್ತು ಕೂಲಿ: | | |
| ಸದಸ್ಯರ ವಂತಿಗೆಗಳು: | | | 2013–2014 | 4,800 | |
| 2014–2015 | 7,200 | | 2014–2015 | 83,200 | 88,000 |
| 2015–2016 | 3,37,600 | | ಇತರೆ ಖರ್ಚುಗಳು | | 37,000 |
| 2016–2017 | 12,000 | 3,56,800 | ನಿರಾಪೇಕ್ಷ ಭೂಮಿ | | 60,000 |
| ಪ್ರವೇಶ ಶುಲ್ಕಗಳು | | 16,000 | ಲೇಖನಸಾಮಗ್ರಿ | | 16,000 |
| ಭದ್ರತಾ ಕಪಾಟು ಬಾಡಿಗೆ | | 58,000 | ಸುಂಕಗಳು | | 24,000 |
| ಉಪಾಹಾರದಿಂದ ಕಂದಾಯ | | 48,000 | ಉಪಾಹಾರದ ಖರ್ಚುಗಳು | | 37,500 |
| ಹೂಡಿಕೆಗಳಿಂದ ಆದಾಯ | | 56,000 | ದೂರವಾಣಿ ವೆಚ್ಚಗಳು | | 4,000 |
| | | | ಹೂಡಿಕೆಗಳು | | 2,50,000 |
| | | | ಲೆಕ್ಕ ಪರಿಶೋಧನ ಶುಲ್ಕ | | 6,000 |
| | | | ಮುಂದುವರಿದ ಶಿಲ್ಕು | | 53,300 |
| | | **5,75,800** | | | **5,75,800** |

**ಈ ಕೆಳಗಿನ ಹೆಚ್ಚುವರಿ ಮಾಹಿತಿಯನ್ನು ನಿಮಗೆ ನೀಡಿದೆ:**

1. ₹1,800 ಸದಸ್ಯರನ್ನು ಹೊಂದಿದ್ದು, ಪ್ರತಿಯೊಬ್ಬರು ₹200 ವಾರ್ಷಿಕ ವಂತಿಗೆ ಪಾವತಿಸುತ್ತರೆ. 1 ಏಪ್ರಿಲ್, 2014 ರಂದು 2013–2014ರ ವಂತಿಗೆ ಬಾಕಿ ₹8,000
2. 31 ಮಾರ್ಚ್, 2015ರಂದು ಜೂನ್, 2015ರವರೆಗೆ ಮುಂಗಡ ಪಾವತಿಸಿದ ಕರಗಳು, ಪ್ರತಿ ವರ್ಷ ಪಾವತಿಸಿದ ವೆಚ್ಚ ₹24,000
3. 31 ಮಾರ್ಚ್, 2015ರಂದು ದೂರವಾಣಿ ಬಿಲ್ ಬಾಕಿ ₹1,400 ಇದೆ.
4. 31 ಮಾರ್ಚ್, 2014ರಂದು ಇತರೆ ಖರ್ಚುಗಳು ಬಾಕಿ ಒಟ್ಟು ₹2,800 ಇದೆ.
5. 31 ಮಾರ್ಚ್, 2014ರಂದು ಲೇಖನಸಾಮಗ್ರಿಗಳ ದಾಸ್ತಾನು ₹2,000, 31 ಮಾರ್ಚ್ 2015ರಂದು ₹3,600 ಇದೆ.
6. 31 ಮಾರ್ಚ್, 2014ರಂದು ಕಟ್ಟಡ ಮೌಲ್ಯ ₹4,00,000 ಇದ್ದು, ಇದರ ವಾರ್ಷಿಕ ಸವಕಳಿ 2.5%
7. 31 ಮಾರ್ಚ್, 2014ರಂದು ಹೂಡಿಕೆಗಳು ₹8,00,000 ರಷ್ಟು ಇವೆ.
8. 31 ಮಾರ್ಚ್, 2015ರಂದು ಈ ವರ್ಷದಲ್ಲಿ ಖರೀದಿ ಮಾಡಿದ ಹೂಡಿಕೆ ಮೇಲಿನ ಗಳಿಸಿದ ಆದಾಯದ ಮೊತ್ತ ₹1,500 ಇದೆ.

**ಪರಿಹಾರ:**

**ಖರ್ಚು** **ಮಾರ್ಚ್ 31, 2015 ವರ್ಷಕ್ಕೆ ಅಂತ್ಯವಾಗುವ ಆದಾಯ–ವೆಚ್ಚ ಖಾತೆ** **ಜಮಾ**

| ವೆಚ್ಚ | | ಮೊತ್ತ ₹ | ಆದಾಯ | | ಮೊತ್ತ ₹ |
|---|---|---|---|---|---|
| ವೇತನ ಮತ್ತು ಕೂಲಿ | | 83,200 | ವಂತಿಗೆಗಳು | | 3,60,000 |
| ಇತರೆ ಖರ್ಚುಗಳು | 37,000 | | ಪ್ರವೇಶ ಶುಲ್ಕಗಳು | | 16,000 |
| ಕಳೆಯಿರಿ: 31.3.2014ರಂದು ಬಾಕಿ | 2,800 | 34,200 | ಭದ್ರತಾ ಕಪಾಟು ಬಾಡಿಗೆ | | 58,000 |
| ಲೇಖನಸಾಮಗ್ರಿ: (ಬಳಕೆಯಾಗಿರುವುದು) | | | ಉಪಹಾರದಿಂದ ಆದಾಯ | 48,000 | |
| ಪ್ರಾರಂಭಿಕ ದಾಸ್ತಾನು | 2,000 | | ಕಳೆಯಿರಿ: ಉಪಹಾರದ | | |
| ಕೂಡಿಸಿ: ಖರೀದಿಗಳು | 16,000 | | ಖರ್ಚುಗಳು | 37,500 | 10,500 |
| | 18,000 | | ಹೂಡಿಕೆಗಳಿಂದ ಆದಾಯ | 56,000 | |
| ಕಳೆಯಿರಿ: ಅಂತಿಮ ದಾಸ್ತಾನು | 3,600 | 14,400 | ಕೂಡಿರಿ: ಚಾಲ್ತಿ ವರ್ಷದ | | |
| ಸುಂಕಗಳು | 24,000 | | ಹೂಡಿಕಗಳ ಮೇಲೆ | | |
| ಕಳೆಯಿರಿ: 2015–16ರ ಪಾವತಿ | 6,000 | | ಗಳಿಸಿದ ಆದಾಯ | 1,500 | 57,500 |
| | 18,000 | | | | |
| ಕೂಡಿಸಿ: 2014–15ರಲ್ಲಿ ಮುಂಗಡ | | | | | |
| ಪಾವತಿ | 6,000 | 24,000 | | | |
| ದೂರವಾಣಿ ಖರ್ಚುಗಳು | 4,000 | | | | |
| ಕೂಡಿಸಿ: ಬಾಕಿ | 1,400 | 5,400 | | | |
| ಲೆಕ್ಕ ಪರಿಶೋಧನೆ ಶುಲ್ಕ | | 6,000 | | | |
| ಕಟ್ಟಡ ಮೇಲಿನ ಸವಕಳಿ | | 10,000 | | | |
| ಮಿಗತೆ (ವೆಚ್ಚಗಳನ್ನು ಮೀರಿದ ಆದಾಯ) | | 3,24,800 | | | |
| | | **5,02,000** | | | **5,02,000** |

**31 ಮಾರ್ಚ್,2015 ರಂದು ಇದ್ದಂತೆ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|---|
| ದೂರವಾಣಿ ಖರ್ಚುಗಳ ಬಾಕಿ | | 1,400 | ನಗದು ಮತ್ತು ಬ್ಯಾಂಕ್ ಶಿಲ್ಕು | 53,300 |
| ಮುಂಗಡವಾಗಿ ಸ್ವೀಕರಿಸಿದ ವಂತಿಗೆ | | 12,000 | ವಂತಿಗೆ ಬಾಕಿ | 23,200 |
| ಸಾಮಾನ್ಯ ನಿಧಿ | 12,49,400 | | ಲೇಖನ ಸಾಮಗ್ರಿ ದಾಸ್ತಾನು | 3,600 |
| ಕೂಡಿಸಿ: ಮಿಗತೆ | 3,24,800 | 15,74,200 | ಮುಂಗಡ ಪಾವತಿಸಿದ ಸುಂಕಗಳು | 6,000 |

| | | | |
|---|---|---|---|
| | | ಹೂಡಿಕೆಗಳ ಮೇಲೆ ಗಳಿಸಿದ ಬಡ್ಡಿ | 1,500 |
| | | ಹೂಡಿಕೆಗಳು 8,00,000 | |
| | | ಹೆಚ್ಚಿನ ಸೇರ್ಪಡೆ 2,50,000 | 10,50,000 |
| | | ಕಟ್ಟಡ 4,00,000 | |
| | | ಕಳೆಯಿರಿ: ಸವಕಳಿ 10,000 | 3,90,000 |
| | | ಭೂಮಿ | 60,000 |
| | **15,87,600** | | **15,87,600** |

**31 ಮಾರ್ಚ್, 2014 ರಂದು ಇದ್ದಂತೆ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|
| ಇತರೆ ಖರ್ಚುಗಳ ಬಾಕಿ | 2,800 | ನಗದು ಮತ್ತು ಬ್ಯಾಂಕ್ ಶಿಲ್ಕು | 41,000 |
| ವೇತನ ಮತ್ತು ಕೂಲಿ ಬಾಕಿ | 4,800 | ವಂತಿಗೆ ಬಾಕಿ | 8,000 |
| ಸಾಮಾನ್ಯ ನಿಧಿ | 12,49,400 | ಲೇಖನಸಾಮಗ್ರಿ ದಾಸ್ತಾನು | 2,000 |
| (ವ್ಯತ್ಯಾಸದ ಮೊತ್ತ) | | ಮುಂಗಡ ಪಾವತಿಸಿದ ಸುಂಕಗಳು | 6,000 |
| | | ಹೂಡಿಕೆಗಳು | 8,00,000 |
| | | ಕಟ್ಟಡ | 4,00,000 |
| | **12,57,000** | | **12,57,000** |

**ಲೆಕ್ಕಚಾರದ ಟಿಪ್ಪಣಿ:**

**ಖರ್ಚು** **ವಂತಿಗೆ ಖಾತೆ** **ಜಮಾ**

| ದಿನಾಂಕ | ವಿವರಗಳು | ಖ ಪಾ | ಮೊತ್ತ ₹ | ದಿನಾಂಕ | ವಿವರಗಳು | ಖ ಪಾ | ಮೊತ್ತ ₹ |
|---|---|---|---|---|---|---|---|
| | ಪ್ರಾರಂಭಿಕ ಶಿಲ್ಕು ಅಥವಾ ಹಿಂದಿನಿಂದ ಬಂದ ಶಿಲ್ಕು (2013–14ರ ಬಾಕಿ) | | 8,000 | | ಸ್ವೀಕೃತಿ ಮತ್ತು ಪಾವತಿ | | 3,56,800 |
| | ಆದಾಯ ಮತ್ತು ವೆಚ್ಚ (1800 × 200) | | 3,60,000 | | ಮುಂದುವರಿದ ಶಿಲ್ಕು | | 23,200 |
| | ಮುಂದುವರಿದ ಶಿಲ್ಕು (2015–16ರ ಮುಂಗಡ) | | 12,000 | | | | |
| | | | **3,80,000** | | | | **3,80,000** |

**ನಿದರ್ಶನ: 13**

ಈ ಕೆಳಗಿನ ಆಯ–ವ್ಯಯ ಖಾತೆಯು, 31.3.2015ರಂದು ಫ್ರೆಂಡ್‌ಶಿಪ್ ಕ್ಲಬ್‌ನದ್ದಾಗಿದೆ.

**ಖರ್ಚು 31 ಮಾರ್ಚ್, 2015ರ ವರ್ಷಕ್ಕೆ ಅಂತ್ಯವಾಗುವ ಆಯ–ವ್ಯಯ ಖಾತೆ ಜಮಾ**

| ಸ್ವೀಕೃತಿಗಳು | | ಮೊತ್ತ ₹ | ಪಾವತಿಗಳು | ಮೊತ್ತ ₹ |
|---|---|---|---|---|
| ಪ್ರಾರಂಭಿಕ ಕೈಯಲ್ಲಿನ ನಗದು | | 10,000 | ವೇತನಗಳು | 20,000 |
| ಸದಸ್ಯರ ವಂತಿಗೆಗಳು: | | | ಲೇಖನಸಾಮಗ್ರಿ | 4,500 |
| 2013–2014 | 15,000 | | ಕರಗಳು ಮತ್ತು ತೆರಿಗೆಗಳು | 1,500 |
| 2014–2015 | 20,000 | | ದೂರವಾಣಿ ಖರ್ಚುಗಳು | 7,500 |
| 2015–2016 | 5,000 | 40,000 | ಮುಖ ಬೆಲೆಯ 8% ಸರ್ಕಾರಿ | |
| ಕ್ರೀಡೆಗಳಿಂದ ಲಾಭ | | 17,800 | ಬಂಡವಾಳ ಪತ್ರಗಳು | 25,000 |
| 8% ಸರ್ಕಾರಿ ಬಂಡವಾಳ ಪತ್ರಗಳ ಮೇಲಿನ | | | ಇತರೆ ಖರ್ಚುಗಳು | 500 |
| ಬಡ್ಡಿ | | 5,000 | ಕೊರಿಯರ್ ಸೇವಾ ಖರ್ಚುಗಳು | 300 |
| | | | ಅಂತಿಮ ಕೈಯಲ್ಲಿನ ನಗದು | 13,500 |
| | | **72,800** | | **72,800** |

**ಹೆಚ್ಚುವರಿ ಮಾಹಿತಿ:**

1. 500 ಸದಸ್ಯರನ್ನು ಹೊಂದಿದ್ದು, ಪ್ರತಿಯೊಬ್ಬರು ₹50 ವಾರ್ಷಿಕ ವಂತಿಗೆ ಪಾವತಿಸುತ್ತಾರೆ. 2014–15ರ ಪ್ರಾರಂಭದಲ್ಲಿ 2013–2014ರ ವಂತಿಗೆ ಬಾಕಿ ₹17,500. 2013–2014ರಲ್ಲಿ 40 ಸದಸ್ಯರು 2014–2015ರ ವಂತಿಗೆಗಳನ್ನು ಮುಂಗಡವಾಗಿ ಪಾವತಿಸಿದ್ದಾರೆ.
2. ಲೇಖನಸಾಮಗ್ರಿಗಳ ದಾಸ್ತಾನು 31 ಮಾರ್ಚ್, 2014ರಂದು ₹1,500, ಮತ್ತು 31 ಮಾರ್ಚ್ 2015ರಂದು ₹2,000
3. 31 ಮಾರ್ಚ್,2016ರಲ್ಲಿ ಬರುವ ಜನವರಿ 31ರ ಕರಗಳು ಮತ್ತು ತೆರಿಗೆಗಳನ್ನು ಮುಂಗಡವಾಗಿ ಪಾವತಿಸಿದೆ, ವಾರ್ಷಿಕ ಖರ್ಚುಗಳು ₹1,500
4. ತ್ರೈಮಾಸಿಕ ದೂರವಾಣಿ ಖರ್ಚುಗಳು ಬಾಕಿಯಿದ್ದು, ಒಟ್ಟು ಬಾಕಿ ಮೊತ್ತ ₹1,500 ಇರುತ್ತದೆ. ತ್ರೈಮಾಸಿಕ ಖರ್ಚುಗಳಲ್ಲಿ ಯಾವುದೇ ಬದಲಾವಣೆ ಇಲ್ಲ.
5. 31.3.2014ರಲ್ಲಿ ಇತರೆ ಖರ್ಚುಗಳು ₹250 ಗಳಿಕೆಯಾಗಿವೆ ಮತ್ತು 31 ಮಾರ್ಚ್ 2015ರಲ್ಲಿ ₹300 ಬಾಕಿ ಇವೆ.
6. 31 ಮಾರ್ಚ್,2014ರ ಪುಸ್ತಕದಲ್ಲಿ ಕಟ್ಟಡದ ಮೌಲ್ಯ ₹2,00,000 ಇದೆ ಮತ್ತು 10% ಪ್ರ.ವ. ಸವಕಳಿ ತೆಗೆಯುವುದು ಅವಶ್ಯಕವಾಗಿದೆ.
7. 31 ಮಾರ್ಚ್, 2015ರಲ್ಲಿ 8% ಸರ್ಕಾರಿ ಬಂಡವಾಳ ಪತ್ರಗಳ ಮೌಲ್ಯ ₹75,000 ಇದ್ದು, ಆ ದಿನಾಂಕದಲ್ಲಿ ಅವುಗಳನ್ನು ಮುಖಬೆಲೆಯಲ್ಲಿ ಖರೀದಿಸಲಾಗಿದೆ. ಹೆಚ್ಚುವರಿ ಸರ್ಕಾರಿ ಬಂಡವಾಳಪತ್ರ ₹25,000ವನ್ನು 31 ಮಾರ್ಚ್, 2015ರಂದು ಖರೀದಿಸಿದೆ.

ನೀವು ಇವುಗಳನ್ನು ತಯಾರಿಸುವುದು ಅವಶ್ಯಕವಾಗಿದೆ:

(ಎ) 31.3.2015ಕ್ಕೆ ವರ್ಷಾಂತ್ಯವಾಗುವ ಆದಾಯ–ವೆಚ್ಚ ಖಾತೆ.

(ಬಿ) ಅದೇ ದಿನಾಂಕದಂದು ಅಢಾವೆ ಪತ್ರಿಕೆ.

**ಪರಿಹಾರ:**

### ಫ್ರೆಂಡ್‌ಶಿಪ್ ಕ್ಲಬ್ ರವರ ಪುಸ್ತಕ
### 31 ಮಾರ್ಚ್, 2014 ರಂದು ಇದ್ದಂತೆ ಅಢಾವೆ ಪತ್ರಿಕೆ

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|---|
| ಬಾಕಿ ಖರ್ಚುಗಳು: | | | ಕಟ್ಟಡ | 2,00,000 |
| ದೂರವಾಣಿ ಖರ್ಚುಗಳು | 3,000 | | 8% ಸರ್ಕಾರಿ ಬಂಡವಾಳಪತ್ರಗಳಲ್ಲಿ | |
| ಇತರೆ ಖರ್ಚುಗಳು | 250 | 3,250 | ಹೂಡಿಕೆ | 75,000 |
| ಮುಂಗಡ ಸ್ವೀಕರಿಸಿದ ವಂತಿಕೆ | | 2,000 | ಲೇಖನಸಾಮಗ್ರಿ ದಾಸ್ತಾನು | 1,500 |
| ಸಾಮಾನ್ಯ ನಿಧಿ | | 3,00,000 | ಮುಂಗಡ ಪಾವತಿಸಿದ ಕರಗಳು ಮತ್ತು | |
| (ವ್ಯತ್ಯಾಸದ ಮೊತ್ತ) | | | ತೆರಿಗೆಗಳು | 1,250 |
| | | | ವಂತಿಗೆಗಳ ಬಾಕಿ | 17,500 |
| | | | ಕೈಯಲ್ಲಿನ ನಗದು | 10,000 |
| | | 3,05,250 | | 3,05,250 |

**ಖರ್ಚು** **ಮಾರ್ಚ್ 31,2015 ವರ್ಷಕ್ಕೆ ಅಂತ್ಯವಾಗುವ ಆದಾಯ–ವೆಚ್ಚ ಖಾತೆ** **ಜಮಾ**

| ವೆಚ್ಚ | | ಮೊತ್ತ ₹ | ಆದಾಯ | | ಮೊತ್ತ ₹ |
|---|---|---|---|---|---|
| ವೇತನಗಳು | | 20,000 | ಕ್ರೀಡೆಗಳಿಂದ ಲಾಭ | | 17,800 |
| ಲೇಖನಸಾಮಗ್ರಿ(ಪಾವತಿಸಿರುವುದು) | 4,500 | | 8% ಸರ್ಕಾರಿ ಬಂಡವಾಳಪತ್ರಗಳ | | |
| ಕೂಡಿಸಿ: ಪ್ರಾರಂಭಿಕ ದಾಸ್ತಾನು | 1,500 | | ಮೇಲಿನ ಬಡ್ಡಿ | 5,000 | |
| | 6,000 | | ಕೂಡಿಸಿ: ಬರಬೇಕಾದ ಬಾಕಿ | 1,000 | 6,000 |
| ಕಳೆಯಿರಿ: ಅಂತಿಮ ದಾಸ್ತಾನು | 2,000 | 4,000 | ಒಟ್ಟು ವಂತಿಗೆಗಳು: ಚಾಲ್ತಿ ವರ್ಷದಲ್ಲಿ | | |
| ಲೇಖನಸಾಮಾಗ್ರಿ ಬಳಕೆಯಾಗಿರುವುದು | | | ಸ್ವೀಕರಿಸಿರುವುದು | 40,000 | |
| ಕರಗಳು ಮತ್ತು ತೆರಿಗೆಗಳು | 1,500 | | ಕೂಡಿಸಿ: ಪ್ರಾರಂಭಿಕ ಮುಂಗಡ | | |
| ಕಳೆಯಿರಿ: ಅಂತಿಮ | | | ವಂತಿಗೆಗಳು | 2,000 | |
| ಮುಂಗಡಪಾವತಿ | 1,250 | | ಕೂಡಿಸಿ: ಚಾಲ್ತಿ ವರ್ಷದ | | |
| | 250 | | ಅಂತ್ಯದಬಾಕಿ(2,500+3,000) | 5,500 | |
| ಕೂಡಿಸಿ: ಪ್ರಾರಂಭಿಕ | | | | 47.500 | |
| ಮುಂಗಡಪಾವತಿ | 1,250 | 1,500 | ಕಳೆಯಿರಿ: ಮುಂಗಡವಾಗಿ ಸ್ವೀಕರಿಸಿದ | | |
| ದೂರವಾಣಿ ಖರ್ಚುಗಳ ಪಾವತಿ | 7,500 | | ವಂತಿಗೆಗಳು (ಅಂತಿಮ) | 5,000 | |
| ಕೂಡಿಸಿ: ಬಾಕಿ (ಚಾಲ್ತಿ ವರ್ಷ) | 1,500 | | | 42.500 | |
| | 9,000 | | | | |

| | | | | | |
|---|---|---|---|---|---|
| ಕಳೆಯಿರಿ: ಬಾಕಿ (ಹಿಂದಿನ ವರ್ಷ) | 3,000 | 6,000 | ಕಳೆಯಿರಿ: ಚಾಲ್ತಿ ವರ್ಷದ | | |
| ಇತರೆ ಖರ್ಚುಗಳ ಪಾವತಿ | 500 | | ಪ್ರಾರಂಭದ ಬಾಕಿ | 17,500 | 25,000 |
| ಕೂಡಿಸಿ: ಬಾಕಿ (ಚಾಲ್ತಿ ವರ್ಷ) | 300 | | ಕೊರತೆ: (ಆದಾಯವನ್ನು ಮೀರಿದ ವೆಚ್ಚಗಳು) | | 3,550 |
| | 800 | | | | |
| ಕಳೆಯಿರಿ: ಬಾಕಿ (ಹಿಂದಿನ ವರ್ಷ) | 250 | 550 | | | |
| ಕಟ್ಟಡ ಮೇಲಿನ ಸವಕಳಿ | | 20,000 | | | |
| ಕೊರಿಯರ್ ಖರ್ಚುಗಳು | | 300 | | | |
| | | **52,350** | | | **52,350** |

* ಪರಿಶೀಲನೆ: 500 × 50 = 25000

**31 ಮಾರ್ಚ್, 2015 ರಂದು ಇದ್ದಂತೆ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | | ಮೊತ್ತ ₹ |
|---|---|---|---|---|---|
| ಬಾಕಿ ಖರ್ಚುಗಳು: | | | ಕಟ್ಟಡ | 2,00,000 | |
| ದೂರವಾಣಿ ಖರ್ಚುಗಳು | 1,500 | | ಕಳೆಯಿರಿ: ಸವಕಳಿ | 20,000 | 1,80,000 |
| ಇತರೆ ಖರ್ಚುಗಳು | 300 | 1,800 | 8% ಸರ್ಕಾರಿ ಬಂಡವಾಳಪತ್ರಗಳಲ್ಲಿ | | |
| ಮುಂಗಡ ಸ್ವೀಕರಿಸಿದ ವಂತಿಗೆ | | 5,000 | ಹೂಡಿಕೆ | 75,000 | |
| ಸಾಮಾನ್ಯ ನಿಧಿ | 3,00,000 | | ಕೂಡಿಸಿ: ಖರೀದಿಗಳು | 25,000 | 1,00,000 |
| ಕಳೆಯಿರಿ: ಕೊರತೆ | 3,550 | 2,96,450 | ಲೇಖನಸಾಮಗ್ರಿ ದಾಸ್ತಾನು | | 2,000 |
| | | | 8% ಸರ್ಕಾರಿ ಬಂಡವಾಳ ಪತ್ರಗಳ ಮೇಲೆ ಬರಬೇಕಾದ ಬಾಕಿ ಬಡ್ಡಿ | | 1,000 |
| | | | ಮುಂಗಡ ಪಾವತಿಸಿದ ಸುಂಕಗಳು ಮತ್ತು ತೆರಿಗೆಗಳು | | 1,250 |
| | | | ವಂತಿಗೆಗಳ ಬಾಕಿ (₹17,500 – 15000 + 3000 = 5500) | | 5,500 |
| | | | ಕೈಯಲ್ಲಿನ ನಗದು | | 13,500 |
| | | **3,03,250** | | | **3,03,250** |

### 1.7 ತಾಳೆಪಟ್ಟಿ ಆಧರಿಸಿದ ಆದಾಯ–ವೆಚ್ಚ ಖಾತೆ:
### Income and Expenditure Account based on Trial Balance:

ಲಾಭಕ್ಕಲ್ಲದ ಸಂಸ್ಥೆಗಳಲ್ಲಿ, ಸಾಮಾನ್ಯವಾಗಿ ಆಯ–ವ್ಯಯ ಖಾತೆ ಮತ್ತು ನೀಡಿರುವ ಹೆಚ್ಚುವರಿ ಮಾಹಿತಿಗಳನ್ನು ಆಧರಿಸಿ ಆದಾಯ–ವೆಚ್ಚ ಖಾತೆ ಮತ್ತು ಅಢಾವೆ ಪತ್ರಿಕೆಗಳನ್ನು ತಯಾರಿಸಲಾಗುತ್ತದೆ. ಆದರೆ ಕೆಲವು ವೇಳೆ ತಾಳೆಪಟ್ಟಿಯೊಂದಿಗೆ ನೀಡಿರುವ ಹೆಚ್ಚುವರಿ ಮಾಹಿತಿಯಿಂದ ತಯಾರಿಸಲಾಗುತ್ತದೆ. ನಿದರ್ಶನ 14ನ್ನೂ ನೋಡಿ.

**ನಿದರ್ಶನ: 14:**

ಈ ಕೆಳಗೆ ಕೊಟ್ಟಿರುವ ಒಂದು ಶಾಲೆಯ ತಾಳೆಪಟ್ಟಿ ಮತ್ತು ಇತರೆ ಮಾಹಿತಿಯಿಂದ 31.3.2014ರಂದು ವರ್ಷಾಂತ್ಯವಾಗುವ ಆದಾಯ–ವೆಚ್ಚ ಖಾತೆ ಮತ್ತು ಅದೇ ದಿನಾಂಕದಂದು ಆಢಾವೆ ಪತ್ರಿಕೆಯನ್ನು ತಯಾರಿಸಿ:

| ಖರ್ಚು ಶಿಲ್ಕು | ಮೊತ್ತ ₹ | ಜಮಾ ಶಿಲ್ಕು | ಮೊತ್ತ ₹ |
|---|---|---|---|
| ಕಟ್ಟಡ | 6,25,000 | ದಾಖಲಾತಿ ಶುಲ್ಕಗಳು | 12,500 |
| ಪೀಠೋಪಕರಣ | 1,00,000 | ಭೋದನಾ ಶುಲ್ಕಗಳ ಸ್ವೀಕರಿಸಿದ್ದು | 5,00,000 |
| ಗ್ರಂಥಾಲಯ ಪುಸ್ತಕಗಳು | 1,50,000 | ಪೂರೈಕೆಯ ಧನಿಗಳು | 15,000 |
| 12%ರ ಹೂಡಿಕೆ | 5,00,000 | ಶಾಲಾ ಅವರಣದ ಬಾಡಿಗೆ | 10,000 |
| ವೇತನಗಳು | 5,00,000 | ಇತರೆ ಸ್ವೀಕೃತಿಗಳು | 30,000 |
| ಲೇಖನಸಾಮಗ್ರಿ | 40,000 | ಸರ್ಕಾರದ ಅನುದಾನ | 3,50,000 |
| ಸಾಮಾನ್ಯ ಖರ್ಚುಗಳು | 18,000 | ಸಾಮಾನ್ಯ ನಿಧಿ | 10,00,000 |
| ಕ್ರೀಡೆಗಳ ಖರ್ಚುಗಳು | 15,000 | ಗ್ರಂಥಾಲಯ ಪುಸ್ತಕಗಳಿಗೆ ದೇಣಿಗೆ | 62,500 |
| ಬ್ಯಾಂಕ್‌ನಲ್ಲಿ ನಗದು | 50,000 | ಹಳೆಯ ಪೀಠೋಪಕರಣಗಳ ಮಾರಾಟ | 20,000 |
| ಕೈಯಲ್ಲಿನ ನಗದು | 2,000 | | |
| | **20,00,000** | | **20,00,000** |

**ಹೆಚ್ಚುವರಿ ಮಾಹಿತಿ:**

1. ವರ್ಷದಲ್ಲಿ ಇನ್ನೂ ಸ್ವೀಕರಿಸಬೇಕಾದ ಶುಲ್ಕಗಳು ₹25,000
2. ಇನ್ನೂ ಪಾವತಿಸಬೇಕಾದ ವೇತನಗಳ ಮೊತ್ತ ₹30,000
3. 1 ಅಕ್ಟೋಬರ್, 2013ರಂದು ಖರೀದಿಸಿದ ಪೀಠೋಪಕರಣದ ಪುಸ್ತಕದ ಮೌಲ್ಯ ₹40,000
4. 1 ಏಪ್ರಿಲ್,2013ರಂದು ಮಾರಾಟ ಮಾಡಿದ ಪೀಠೋಪಕರಣದ ಪುಸ್ತಕದ ಮೌಲ್ಯ ₹50,000
5. ಪೀಠೋಪಕರಣದ ಮೇಲೆ ಪ್ರತೀವರ್ಷ 10% ರಷ್ಟು, ಗ್ರಂಥಾಲಯ ಪುಸ್ತಕಗಳ ಮೇಲೆ ಪ್ರತಿವರ್ಷ 15% ಮತ್ತು ಕಟ್ಟಡದ ಮೇಲೆ 5% ಸವಕಳಿ ತೆಗೆಯಿರಿ.

**ಪರಿಹಾರ:**

ಖರ್ಚು **ಮಾರ್ಚ್ 31,2014 ವರ್ಷಕ್ಕೆ ಅಂತ್ಯವಾಗುವ ಆದಾಯ–ವೆಚ್ಚ ಖಾತೆ** ಜಮಾ

| ವೆಚ್ಚ | | ಮೊತ್ತ ₹ | ಆದಾಯ | | ಮೊತ್ತ ₹ |
|---|---|---|---|---|---|
| ಹಳೆಯ ಪೀಠೋಪಕರಣಗಳ ಮಾರಾಟದ | | | ದಾಖಲಾತಿ ಶುಲ್ಕಗಳು | | 12,500 |
| ಮೇಲಿನ ನಷ್ಟ (50,000 – 20,000) | | 30,000 | ಭೋದನಾ ಶುಲ್ಕಗಳು | 5,00,000 | |
| ವೇತನಗಳು | 5,00,000 | | ಕೂಡಿಸಿ: ಬಾಕಿ | 25,000 | 5,25,000 |
| ಕೂಡಿಸಿ: ಬಾಕಿ | 30,000 | 5,30,000 | ಶಾಲಾ ಆವರಣದ ಬಾಡಿಗೆ | | 10,000 |
| ಲೇಖನಸಾಮಗ್ರಿ | | 40,000 | ಇತರೆ ಸ್ವೀಕೃತಿಗಳು | | 30,000 |
| ಸಾಮಾನ್ಯ ಖರ್ಚುಗಳು | | 18,000 | ಸರ್ಕಾರದ ಅನುದಾನ | | 3,50,000 |

| | | | | |
|---|---|---|---|---|
| ಸವಕಳಿ: | | | ಹೂಡಿಕೆಗಳ ಮೇಲೆ ಗಳಿಸಿದ ಬಡ್ಡಿ | 60,000 |
| ಪೀಠೋಪಕರಣ | 3,000 | | | |
| ಕಟ್ಟಡ | 31,250 | | | |
| ಗ್ರಂಥಾಲಯ ಪುಸ್ತಕಗಳು | 22,500 | 56,750 | | |
| ಕ್ರೀಡೆಗಳ ಖರ್ಚುಗಳು | | 15,000 | | |
| ಮಿಗತೆ (ವೆಚ್ಚವನ್ನು ಮೀರಿದ ಆದಾಯ) | | 2,97,750 | | |
| | | **9,87,500** | | **9,87,500** |

**ಲೆಕ್ಕದ ಟಿಪ್ಪಣಿಗಳು:**

1. ಒಂದು ಶಾಲೆಯ ದಾಖಲಾತಿ ಶುಲ್ಕವು ನಿರಂತರ ಆದಾಯವಾಗಿರುವುದರಿಂದ, ಇದನ್ನು ಶಾಲೆಯ ಕಂದಾಯದ ಆದಾಯವೆಂದು ತೆಗೆದುಕೊಳ್ಳಲಾಗಿದೆ.
2. ಪೀಠೋಪಕರಣದ ಮೇಲಿನ ಸವಕಳಿಯನ್ನು ಕಂಡುಹಿಡಿಯಲು ಪೀಠೋಪಕರಣವನ್ನು 1 ಏಪ್ರಿಲ್, 2013ರಂದು ಮಾರಾಟ ಮಾಡಲಾಗಿದೆ ಎಂದು ಊಹಿಸಿಕೊಳ್ಳಲಾಗಿದೆ.

| | |
|---|---|
| 31 ಮಾರ್ಚ್,2014ರಂದು ಪುಸ್ತಕದ ಮೌಲ್ಯ | 1,00,000 |
| **ಕಳೆಯಿರಿ:** ಪೀಠೋಪಕರಣ ಮಾರಾಟದ ಪುಸ್ತಕದ ಮೌಲ್ಯ | 50,000 |
| | 50,000 |
| ₹10,000 ಪೀಠೋಪಕರಣ ಮೇಲಿನ ಒಂದು ವರ್ಷದ ಸವಕಳಿ | 1,000 |
| ₹40,000 ಪೀಠೋಪಕರಣ ಮೇಲಿನ 6 ತಿಂಗಳ ಸವಕಳಿ | 2,000 |
| ಒಟ್ಟು ಸವಕಳಿ | 3,000 |

**31 ಮಾರ್ಚ್, 2014 ರಂದು ಇದ್ದಂತೆ ಆಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | | ಮೊತ್ತ ₹ |
|---|---|---|---|---|---|
| ಪೂರೈಕೆಯ ಧನಿಗಳು | | 15,000 | ಕಟ್ಟಡ | 6.25,000 | |
| ವೇತನಗಳ ಬಾಕಿ | | 30,000 | ಕಳೆಯಿರಿ: ಸವಕಳಿ | 31.250 | 5,93,750 |
| ಗ್ರಂಥಾಲಯ ಪುಸ್ತಕಗಳಿಗೆ ದೇಣಿಗೆ | | 62,500 | ಪೀಠೋಪಕರಣ | 1,00,000 | |
| ಸಾಮಾನ್ಯ ನಿಧಿ | 10,00,000 | | ಕಳೆಯಿರಿ: ಮಾರಾಟ | 50,000 | |
| ಕೂಡಿಸಿ: ಮಿಗತೆ | 2,97,750 | 12,97,750 | | 50,000 | |
| | | | ಕಳೆಯಿರಿ: ಸವಕಳಿ | 3,000 | 47,000 |
| | | | ಗಳಿಸಿದ ಶುಲ್ಕಗಳು | | 25,000 |
| | | | ಗ್ರಂಥಾಲಯ ಪುಸ್ತಕಗಳು | 1,50,000 | |
| | | | ಕಳೆಯಿರಿ: ಸವಕಳಿ | 22,500 | 1,27,500 |
| | | | 12%ರ ಹೂಡಿಕೆಗಳು | | 5,00,000 |
| | | | ಗಳಿಸಿದ ಬಡ್ಡಿ | | 60,000 |
| | | | ಬ್ಯಾಂಕ್‌ನಲ್ಲಿ ನಗದು | | 50,000 |
| | | | ಕೈಯಲ್ಲಿನ ನಗದು | | 2,000 |
| | | **14,05,250** | | | **14,05,250** |

## 1.8 ಪ್ರಾಸಂಗಿಕ ವ್ಯಾಪಾರಿ ಚಟುವಟಿಕೆಗಳು (Incidentel Trade Activities)

ಕೆಲವು ವೇಳೆ, ಔಷಧಿ ಮಳಿಗೆ ಆಸ್ಪತ್ರೆ, ಉಪಹಾರ ಗೃಹ, ಬ್ಯೂಟಿ ಪಾರ್ಲರ್, ಇತ್ಯಾದಿ ವ್ಯಾಪಾರಿ ಚಟುವಟಿಕೆಗಳನ್ನು ನಡೆಸುವ ಇಂತಹ ಸಂಸ್ಥೆಗಳು, ಸದಸ್ಯರುಗಳಿಗೆ ಅಥವಾ ಸಾಮಾನ್ಯ ಜನರಿಗೆ ನಿಶ್ಚಿತವಾದ ಸೌಕರ್ಯಗಳನ್ನು ನೀಡುತ್ತವೆ. ಆ ಸಂರ್ಭದಲ್ಲಿ, ಪ್ರಾಸಂಗಿಕ ಚಟುವಟಿಕೆಯ ಫಲಿತಾಂಶವನ್ನು ಕಂಡುಹಿಡಿಯಲು ವ್ಯಾಪಾರಿ ಖಾತೆಯನ್ನು ತಯಾರಿಸಲಾಗುತ್ತದೆ. ಆ ವಾಣಿಜ್ಯ (ವ್ಯಾಪಾರಿ) ಚಟುವಟಿಕೆಗಳಿಂದ ಬಂದ ಲಾಭವನ್ನು ಯಾವ ಮುಖ್ಯ ಉದ್ದೇಶ ಪೂರ್ಣಗೊಳಿಸಲು ಸಂಸ್ಥೆಯನ್ನು ಸ್ಥಾಪಿಸಲಾಗಿದೆಯೋ ಅದಕ್ಕೆ ಬಳಸಲಾಗುತ್ತದೆ. ಇದನ್ನು ಆದಾಯ–ವೆಚ್ಚ ಖಾತೆಗೆ ವರ್ಗಾಯಿಸಲಾಗುತ್ತದೆ. ಈ ರೀತಿಯ ಚಟುವಟಿಕೆಗಳಿಗೆ ಕೆಳಗಿನ ವಿಧಾನವನ್ನು ಅನುಸರಿಸುವುದು ಸೂಕ್ತವಾಗಿದೆ.

1. ಪ್ರಾಸಂಗಿಕ ವಾಣಿಜ್ಯ (ವ್ಯಾಪಾರಿ) ಚಟುವಟಿಕೆಯ ಲಾಭವನ್ನು ಕಂಡುಹಿಡಿಯಲು ವ್ಯಾಪಾರಿ ಖಾತೆಯನ್ನು ತಯಾರಿಸಿ. ಆ ಚಟುವಟಿಕೆಗೆ ನೇರವಾಗಿ ಮತ್ತು ಪ್ರತ್ಯೇಕವಾಗಿ ಸಂಬಂಧಿಸಿದ ಎಲ್ಲಾ ವೆಚ್ಚಗಳು ಮತ್ತು ಕಂದಾಯಗಳನ್ನು ವ್ಯಾಪಾರಿ ಖಾತೆಯಲ್ಲಿ ದಾಖಲಿಸಿ, ವ್ಯಾಪಾರಿ ಖಾತೆಯ ಶಿಲ್ಕನ್ನು ಆದಾಯ–ವೆಚ್ಚ ಖಾತೆಗೆ ವರ್ಗಾಯಿಸಿರಿ.

2. ವ್ಯಾಪಾರಿ ಖಾತೆಯ ಲಾಭ ಅಥವಾ ನಷ್ಟದ ಜೊತೆಗೆ, ವ್ಯಾಪಾರಿ ಖಾತೆಯಲ್ಲಿ ದಾಖಲಿಸದಿರುವ ಇತರೆ ಎಲ್ಲಾ ಆದಾಯಗಳು ಮತ್ತು ಖರ್ಚುಗಳನ್ನು ಆದಾಯ–ವೆಚ್ಚ ಖಾತೆಯಲ್ಲಿ ದಾಖಲಿ, ಆದಾಯ–ವೆಚ್ಚ ಖಾತೆಯು ತೋರಿಸುವ ಮಿಗತೆ ಅಥವಾ ಕೊರತೆಯನ್ನು ಬಂಡವಾಳ/ಸಾಮಾನ್ಯನಿಧಿಗೆ ವರ್ಗಾಯಿಸಿರಿ.

**ನಿದರ್ಶನ: 15**

31 ಮಾರ್ಚ್ 2015 ವರ್ಷಕ್ಕೆ ಅಂತ್ಯವಾಗುವ ಪ್ಲೆಸೆಂಟ್ ಕ್ಲಬ್‌ರವರ ಪುಸ್ತಕಗಳಿಂದ ಕೆಳಗಿನ ಶಿಲ್ಕುಗಳನ್ನು ಪಡೆಯಲಾಗಿದೆ,

| ವಿವರಗಳು | ಮೊತ್ತ ₹ |
|---|---|
| 31 ಮಾರ್ಚ್, 2014ರಂದು ಇದ್ದಂತೆ ಬಂಡವಾಳ ನಿಧಿ | 2,05,000 |
| 31 ಮಾರ್ಚ್, 2014ರಂದು ಇದ್ದಂತೆ ಪೀಠೋಪಕರಣ | 21,000 |
| ಈ ವರ್ಷದಲ್ಲಿ ಪೀಠೋಪಕರಣ ಖರೀದಿ | 23,500 |
| 31 ಮಾರ್ಚ್, 2014ರಂದು ಇದ್ದಂತೆ ಬಿಲ್ಲಿಯರ್ಡ್ಸ್ ಟೇಬಲ್ ಮತ್ತು ಇತರೆ ಉಪಕರಣಗಳು | 22,250 |
| 31 ಮಾರ್ಚ್, 2014ರಂದು ಇದ್ದಂತೆ ಚೈನಾ ಗ್ಲಾಸ್, ಕಟ್‌ಲರಿ ಮತ್ತು ಲಿನೆನ್(ನಾರು ಬಟ್ಟೆ) | 6,250 |
| ಈ ವರ್ಷದಲ್ಲಿ ಉಪಹಾರ ಗೃಹದ ಸ್ವೀಕೃತಿಗಳು | 9,68,000 |
| 31 ಮಾರ್ಚ್,2014ರಂದು ಇದ್ದಂತೆ ಉಪಾಹಾರದ ಗೃಹ ದಾಸ್ತಾನು | 9,750 |
| ಈ ವರ್ಷದಲ್ಲಿ ಬಿಲಿಯರ್ಡ್ಸ್ ರೂಮ್‌ಯಿಂದ ಸ್ವೀಕೃತಿಗಳು | 86,000 |
| ಈ ವರ್ಷದಲ್ಲಿ ವಂತಿಗೆ ಸ್ವೀಕರಿಸಿದ್ದು | 88,750 |
| ಈ ವರ್ಷದಲ್ಲಿ ಠೇವಣಿ ಮೇಲೆ ಬಡ್ಡಿ ಸ್ವೀಕರಿಸಿದ್ದು | 6,000 |
| ಕಾರ್ಯದರ್ಶಿಗೆ ಗೌರವಧನ ಪಾವತಿ | 80,000 |
| ಉಪಾಹಾರ ಗೃಹಕ್ಕಾಗಿ ಖರೀದಿಗಳು | 5,59,500 |
| ಬಾಡಿಗೆ ಮತ್ತು ಸುಂಕಗಳು | 87,250 |
| ಕೂಲಿಗಳು(ಉಪಾಹಾರ ಗೃಹ ₹1,25,000) | 2,30,750 |
| ದುರಸ್ತಿ ಮತ್ತು ನವೀಕರಣಗಳು | 44,750 |
| ಬೆಳಕಿನ ವೆಚ್ಚ | 44,250 |
| ಇಂಧನ | 33,500 |

| | |
|---|---|
| ಇತರೆ ಖರ್ಚುಗಳು | 8,000 |
| 31 ಮಾರ್ಚ್, 2014ರಂದು ಇದ್ದಂತೆ ಕೈಯಲ್ಲಿನ ನಗದು | 4,375 |
| 31 ಮಾರ್ಚ್, 2014ರಂದು ಇದ್ದಂತೆ ಬ್ಯಾಂಕ್ ಶಿಲ್ಕು | 36,875 |
| 31 ಮಾರ್ಚ್, 2014ರಂದು ಇದ್ದಂತೆ 10%ರ ಬ್ಯಾಂಕ್ ಠೇವಣಿ | 1,00,000 |

ಖರೀದಿಗಳ ಪಾವತಿಯು 31 ಮಾರ್ಚ್, 2014ರ ವರ್ಷಾಂತ್ಯದ ₹7,500ರನ್ನು ಒಳಗೊಂಡಿದೆ. 31 ಮಾರ್ಚ್ 2015ರ ಉಪಾಹಾರ ಗೃಹದ ದಾಸ್ತಾನು. ₹11,250 ವಂತಿಗೆ ಸ್ವೀಕರಿಸಿದ ಮೊತ್ತವು ಹಿಂದಿನ ವರ್ಷದ ₹12,000 ಮತ್ತು ಮುಂದಿನ ವರ್ಷದ ₹3,000 ಒಳಗೊಂಡಿದೆ. 31 ಮಾರ್ಚ್, 2015ರಂದು ಇದ್ದಂತೆ ವಂತಿಗೆಗಳ ಬಾಕಿ ₹12,500 ಇರುತ್ತದೆ.

ಸವಕಳಿಯು ಈ ಕೆಳಗಿನ ಪ್ರಕಾರದ ದರ ರಚನೆ ಹೊಂದಿರಬೇಕು:

(ಎ) ಪೀಠೋಪಕರಣ 10%ರಷ್ಟು;

(ಬಿ) ಬಿಲ್ಲಿಯರ್ಡ್ಸ್ ಟೇಬಲ್ ಮತ್ತು ಇತರೆ ಉಪಕರಣಗಳು 12%ರಷ್ಟು;

(ಸಿ) ಚೈನಾ ಗ್ಲಾಸ್, ಕಟ್‌ಲರಿ 20%ರಷ್ಟು.

ಸಿಬ್ಬಂದಿಯ ವಸತಿ ಖರ್ಚುಗಳ ಅಂದಾಜು ಮಾಡಿದ ವೆಚ್ಚ ₹68,750ರಲ್ಲಿ ₹50,000ಗಳನ್ನು ಉಪಾಹಾರ ಗೃಹಕ್ಕೆ ಖರ್ಚುಹಾಕಬೇಕು.

ಆಯ–ವ್ಯಯ ಖಾತೆ, ಆದಾಯ–ವೆಚ್ಚ ಖಾತೆ ಮತ್ತು ಉಪಹಾರ ಗೃಹದ ಲೆಕ್ಕಚಾರವನ್ನು ಪ್ರತ್ಯೇಕವಾಗಿ ತೋರಿಸುವ ಅಥಾವೆ ಪತ್ರಿಕೆಯನ್ನು ತಯಾರಿಸಿ. 31 ಮಾರ್ಚ್, 2015ರಂದು ಕೈಯಲ್ಲಿನ ನಗದು ₹8,500 ಇರುತ್ತದೆ.

**ಪ್ಲೆಸೆಂಟ್ ಕ್ಲಬ್‌ರವರ ಪುಸ್ತಕ**

**ಖರ್ಚು** **31 ಮಾರ್ಚ್, 2016ರ ವರ್ಷಕ್ಕೆ ಅಂತ್ಯವಾಗುವ ಆಯ–ವ್ಯಯ ಖಾತೆ** **ಜಮಾ**

| ಸ್ವೀಕೃತಿಗಳು | | ಮೊತ್ತ ₹ | ಪಾವತಿಗಳು | | ಮೊತ್ತ ₹ |
|---|---|---|---|---|---|
| ಪ್ರಾರಂಭಿಕ ಶಿಲ್ಕು: | | | ಬಾಡಿಗೆ ಮತ್ತು ಸುಂಕಗಳು | | 87,250 |
| ನಗದು | 4,375 | | ಕೂಲಿಗಳು: | | |
| ಬ್ಯಾಂಕ್ | 36,875 | 41,250 | ಉಪಾಹಾರ ಗೃಹ | 1,25,000 | |
| ವಂತಿಗೆಗಳು | | 88,750 | ಇತರೆ | 1,05,750 | 2,30,750 |
| ಠೇವಣಿ ಮೇಲಿನ ಬಡ್ಡಿ | | 6,000 | ದುರಸ್ತಿ ಮತ್ತು ನವೀಕರಣಗಳು | | 44,750 |
| ಉಪಾಹಾರ ಗೃಹದ ಸ್ವೀಕೃತಿಗಳು | | 9,68,000 | ಪೀಠೋಪಕರಣ ಖರೀದಿಸಿದ್ದು | | 23,500 |
| ಬಿಲಿಯರ್ಡ್ಸ್ ಸ್ವೀಕೃತಿಗಳು | | 86,000 | ಕಾರ್ಯದರ್ಶಿಯ ಸಹಾಯಧನ | | 80,000 |
| | | | ಉಪಾಹಾರ ಗೃಹಕ್ಕಾಗಿ ಖರೀದಿಗಳು | | 5,59,500 |
| | | | ಬೆಳಕಿನ ವ್ಯವಸ್ಥೆ | | 44,250 |
| | | | ಇಂಧನ | | 33,500 |
| | | | ಇತರೆ ಖರ್ಚುಗಳು | | 8,000 |
| | | | ಅಂತಿಮ ಶಿಲ್ಕು: | | |
| | | | ನಗದು | 8,500 | |
| | | | ಬ್ಯಾಂಕ್ | 70,000 | 78,500 |
| | | | (ವ್ಯತ್ಯಾಸದ ಮೊತ್ತ) | | |
| | | **11,90,000** | | | **11,90,000** |

**ಖರ್ಚು** **31 ಮಾರ್ಚ್, 2015ರ ವರ್ಷಾಂತ್ಯದ ವ್ಯಾಪಾರಿ ಖಾತೆ** **ಜಮಾ**

| ವಿವರಗಳು | | ಮೊತ್ತ ₹ | ವಿವರಗಳು | ಮೊತ್ತ ₹ |
|---|---|---|---|---|
| ಪ್ರಾರಂಭಿಕ ದಾಸ್ತಾನು | | 9,750 | ಉಪಾಹಾರ ಗೃಹ ಸ್ವೀಕೃತಿಗಳು | 9,68,000 |
| ಖರೀದಿಗಳು | 5,59,500 | | ಸಿಬ್ಬಂದಿಯ ವಸತಿ ಖರ್ಚುಗಳ | |
| ಕಳೆಯಿರಿ: ಹಿಂದಿನ ವರ್ಷ | 7,500 | 5,52,000 | ವೆಚ್ಚಗಳು | 68,750 |
| ಕೂಲಿ | | 1,25,000 | ಅಂತಿಮ ದಾಸ್ತನು | 11,250 |
| ಚೈನಾ ಗ್ಲಾಸ್, ಕಟ್ಲೆರಿಯ ಸವಕಳಿ | | 1,250 | | |
| ಸಿಬ್ಬಂದಿಯ ವಸತಿ ಖರ್ಚುಗಳ ವೆಚ್ಚ | | 50,000 | | |
| ಇಂಧನ | | 33,500 | | |
| ಆದಾಯ–ವೆಚ್ಚ ಖಾತೆಗೆ ಲಾಭ ವರ್ಗಾವಣೆ | | 2,76,500 | | |
| | | **10,48,000** | | **10,48,000** |

**ಖರ್ಚು** **ಮಾರ್ಚ್ 31, 2015 ವರ್ಷಕ್ಕೆ ಅಂತ್ಯವಾಗುವ ಆದಾಯ–ವೆಚ್ಚ ಖಾತೆ** **ಜಮಾ**

| ವೆಚ್ಚ | | ಮೊತ್ತ ₹ | ಆದಾಯ | | ಮೊತ್ತ ₹ |
|---|---|---|---|---|---|
| ಕೂಲಿ | | 1,05,750 | ವಂತಿಗೆ ಸ್ವೀಕರಿಸಿದ್ದು | 88,750 | |
| ದುರಸ್ತಿ ಮತ್ತು ನವೀಕರಣಗಳು | | 44,750 | ಕೂಡಿಸಿ: ಈ ವರ್ಷದ ಬಾಕಿ | 12,500 | |
| ಕಾರ್ಯದರ್ಶಿಯ ಗೌರವಧನ | | 80,000 | | 1,01,250 | |
| ಬೆಳಕಿನ ವ್ಯವಸ್ಥೆ | | 44,250 | ಕಳೆಯಿರಿ: ಹಿಂದಿನ ವರ್ಷದ | | |
| ಬಾಡಿಗೆ ಮತ್ತು ಸುಂಕಗಳು | | 87,250 | ಬಾಕಿ | 12,000 | |
| ಸಿಬ್ಬಂದಿ ವಸತಿ ಖರ್ಚುಗಳು | | 18,750 | | 89,250 | |
| ಇತರೆ ಖರ್ಚುಗಳು | | 8,000 | ಕಳೆಯಿರಿ: ಮುಂದಿನ ವರ್ಷದ | | |
| ಸವಕಳಿ: | | | ಮುಂಗಡ | 3,000 | 86,250 |
| ಪೀಠೋಪಕರಣ | 4,450 | | ಬಡ್ಡಿ ಸ್ವೀಕರಿಸಿದ್ದು | 6,000 | |
| ಬಿಲಿಯರ್ಡ್ಸ್ ಟೇಬಲ್ | 2,670 | 7,120 | ಕೂಡಿಸಿ: ಗಳಿಸಿದ್ದು | 4,000 | 10,000 |
| ಮಿಗತೆ: (ವೆಚ್ಚಗಳನ್ನು ಮೀರಿದ ಆದಾಯ) | | 62,880 | ಬಿಲ್ಲಿಯರ್ಡ್ಸ್ ಸ್ವೀಕೃತಿಗಳು | | 86,000 |
| | | | ವ್ಯಾಪಾರಿ ಖಾತೆಯಿಂದ ವರ್ಗಾವಣೆಯಾದ | | |
| | | | ಲಾಭ | | 2,76,500 |
| | | **4,58,750** | | | **4,58,750** |

**31 ಮಾರ್ಚ್, 2015 ರಂದು ಇದ್ದಂತೆ ಪ್ಲೆಸೆಂಟ್ ಕ್ಲಬ್ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | | ಮೊತ್ತ ₹ |
|---|---|---|---|---|---|
| ಸಾಮಾನ್ಯ ನಿಧಿ | 2,05,000 | | ಪೀಠೋಪಕರಣ: | | |
| ಕೂಡಿಸಿ: ಮಿಗತೆ | 62,880 | 2,67,880 | ಪ್ರಾರಂಭದ ಶಿಲ್ಕು | 21,000 | |
| ಮುಂಗಡ ಸ್ವೀಕರಿಸಿದ ವಂತಿಗೆ | | 3,000 | ಕೂಡಿಸಿ: ಖರೀದಿ | 23,500 | |
| | | | | 44,500 | |
| | | | ಕಳೆಯಿರಿ: ಸವಕಳಿ | 4,450 | 40,050 |
| | | | ಬಿಲ್ಲಿಯರ್ಡ್ ಟೇಬಲ್ | 22,250 | |
| | | | ಕಳೆಯಿರಿ: ಸವಕಳಿ | 2,670 | 19,580 |
| | | | ಚೈನಾ ಗ್ಲಾಸ್, ಕಟ್‌ಲರಿ | 6,250 | |
| | | | ಕಳೆಯಿರಿ: ಸವಕಳಿ | 1,250 | 5,000 |
| | | | ಉಪಾಹಾರ ಗೃಹ ದಾಸ್ತಾನು | | 11,250 |
| | | | ವಂತಿಗೆ ಬಾಕಿ | | 12,500 |
| | | | ಗಳಿಸಿದ ಬಡ್ಡಿ | | 4,000 |
| | | | ಬ್ಯಾಂಕ್ ಠೇವಣಿ | | 1,00,000 |
| | | | ಬ್ಯಾಂಕ್‌ನಲ್ಲಿ ನಗದು | | 8,500 |
| | | | ಕೈಯಲ್ಲಿನ ನಗದು | | 70,000 |
| | | **2,70,880** | | | **2,70,880** |

**ನಿದರ್ಶನ: 16**

ಈ ಕೆಳಗಿನ ಮಾಹಿತಿಯಿಂದ 31 ಮಾರ್ಚ್, 2015ಕ್ಕೆ ವರ್ಷಾಂತ್ಯವಾಗುವ ಎಂಟರ್‌ಟೈನ್‌ಮೆಂಟ್ ಕ್ಲಬ್‌ರವರ ಆದಾಯ–ವೆಚ್ಚ ಖಾತೆ ಮತ್ತು ಅದೇ ದಿನಾಂಕದಂದು ಅಢಾವೆ ಪತ್ರಿಕೆಯನ್ನು ತಯಾರಿಸಿ.

**ಖರ್ಚು** **31 ಮಾರ್ಚ್, 2015ರ ವರ್ಷಕ್ಕೆ ಅಂತ್ಯವಾಗುವ ಆಯ–ವ್ಯಯ ಖಾತೆ** **ಜಮೆ**

| ಸ್ವೀಕೃತಿಗಳು | | | ಮೊತ್ತ ₹ | ಪಾವತಿಗಳು | ಮೊತ್ತ ₹ |
|---|---|---|---|---|---|
| ಹಿಂದಿನಿಂದ ಬಂದ ಶಿಲ್ಕು | | | 24,000 | ಬಾಡಿಗೆ ಮತ್ತು ಸುಂಕಗಳು | 48,750 |
| ವಂತಿಗೆಗಳು: | 2013–14 | 23,250 | | ಪೀಠೋಪಕರಣ ಖರೀದಿಸಿದ್ದು | 40,000 |
| | 2014–15 | 3,36,000 | | ಕ್ರೀಡಾಸಾಮಗ್ರಿಗಳ ಧಣಿಗಳು | 61,000 |
| | 2015–16 | 13,000 | 3,72,250 | ಕ್ರೀಡಾಸಾಮಗ್ರಿಗಳ ಖರೀದಿ | 10,000 |
| ಕ್ರೀಡಾಸಾಮಗ್ರಿಗಳ ಮಾರಾಟ | | | 26,000 | ಬಹುಮಾನ ನೀಡಿಕೆಯ ವೆಚ್ಚ | 20,750 |
| ಪ್ರವೇಶ ಶುಲ್ಕಗಳು | | | 40,000 | ಪಂದ್ಯಾವಳಿ ಖರ್ಚುಗಳು | 35,150 |
| ಸಾಮಾನ್ಯ ದೇಣಿಗೆ | | | 20,250 | ಇತರೆ ಖರ್ಚುಗಳು | 1,50,000 |
| ಬಹುಮಾನ ನಿಧಿಗೆ ದೇಣಿಗೆ | | | 14,000 | ಮುಂದುವರಿದ ಶಿಲ್ಕು | 1,34,050 |
| ಬಹುಮಾನ ನಿಧಿ ಹೂಡಿಕೆ ಮೇಲಿನ ಬಡ್ಡಿ | | | 1,500 | | |
| ಇತರೆ ಸ್ವೀಕೃತಿಗಳು | | | 1,700 | | |
| | | | **4,99,700** | | **4,99,700** |

**ಹೆಚ್ಚುವರಿ ಮಾಹಿತಿ:**

| ವಿವರಗಳು | 1 ಎಪ್ರಿಲ್ 2014 | 31ಮಾರ್ಚ 2015 |
|---|---|---|
| ಕ್ರೀಡಾಸಾಮಗ್ರಿಗಳು | 20,000 | 25,000 |
| ಪೀಠೋಪಕರಣ | 2,00,000 | ? |
| 5% ಬಹುಮಾನ ನಿಧಿ ಹೂಡಿಕೆಗಳು | 60,000 | ? |
| ಕ್ರೀಡಾಸಾಮಗ್ರಿಗಳ ಧಣಿಗಳು | 7,000 | 14,750 |
| ವಂತಿಗೆಗಳ ಬಾಕಿ | 23,750 | ? |
| ಬಹುಮಾನ ನಿಧಿ | 60,000 | ? |
| ಮುಂಗಡ ಪಾವತಿಸಿದ ಬಾಡಿಗೆ | — | 3,750 |
| ಬಾಕಿ ಬಾಡಿಗೆ. | 3,750 | ? |
| ಬಾಕಿ ಇತರೆ ಖರ್ಚುಗಳು. | 11,400 | 20,100 |
| ಮುಂಗಡ ಪಾವತಿಸಿದ ಇತರೆ ಖರ್ಚುಗಳು. | 3,750 | 4,250 |
| ಕ್ರೀಡಾಸಾಮಗ್ರಿಗಳ ಮಾರಾಟದ ಪುಸ್ತಕದ ಮೌಲ್ಯ ₹20,000. | | |
| ಪೀಠೋಪಕರಣಗಳ ಮೇಲೆ 10%ರಷ್ಟು ಸವಕಳಿ ತೆಗೆಯಿರಿ. | | |
| ಪ್ರವೇಶ ಶುಲ್ಕದ ಅರ್ಧದಷ್ಟನ್ನು ಬಂಡವಾಳಿಕರಿಸಿ. | | |
| ₹1,440 ಸದಸ್ಯರುಗಳಿದ್ದು, ಪ್ರತಿಯೊಬ್ಬರು ವಾರ್ಷಿಕವಾಗಿ ₹250 ಪಾವತಿಸುತ್ತಿದ್ದಾರೆ. | | |
| 1.4.2014ರಂದು ಮುಂಗಡ ಸ್ವೀಕರಿಸಿದ ವಂತಿಗೆಗಳು ₹7,000 | | |

**ಎಂಟರ್‌ಟೈನ್‌ಮೆಂಟ್ ಕ್ಲಬ್‌ರವರ ಪುಸ್ತಕ**

**ಖರ್ಚು ಮಾರ್ಚ್ 31, 2015 ವರ್ಷಕ್ಕೆ ಅಂತ್ಯವಾಗುವ ಆದಾಯ-ವೆಚ್ಚ ಖಾತೆ ಜಮಾ**

| ವೆಚ್ಚ | | ಮೊತ್ತ ₹ | ಆದಾಯ | | ಮೊತ್ತ ₹ |
|---|---|---|---|---|---|
| ಬಾಡಿಗೆ | 48,750 | | ವಂತಿಗೆಗಳು | 3,36,000 | |
| ಕಳೆಯಿರಿ: ಪ್ರಾರಂಭಿಕ ಬಾಕಿ | 3,750 | | ಕೂಡಿಸಿ: ಮುಂಗಡವಾಗಿ | | |
| | 45,000 | | ಸ್ವೀಕರಿಸಿದ್ದು (2014–15) | 7,000 | |
| ಕಳೆಯಿರಿ: ಮುಂಗಡ ಪಾವತಿ | 3,750 | 41,250 | ಕೂಡಿಸಿ: ಬಾಕಿ (2013–14) | | |
| ಕ್ರೀಡಾಸಾಮಗ್ರಿಗಳು: | | | (₹3,60,000–₹3,43,000) | 17,000 | 3,60,000 |
| ಪ್ರಾರಂಭಿಕ ದಾಸ್ತಾನು | 20,000 | | ಸಾಮಾನ್ಯ ದೇಣಿಗೆಗಳು | | 20,250 |
| ಕೂಡಿಸಿ: ಧಣಿಗಳಿಗೆ ಪಾವತಿ | 61,000 | | ಪ್ರವೇಶ ಶುಲ್ಕಗಳು | | 20,000 |
| | 81,000 | | ಕ್ರೀಡಾಸಾಮಗ್ರಿಗಳು(ಮಾರಾಟದ ಮೇಲಿನ ಲಾಭ) (26,000–20,000) | | 6,000 |
| ಕೂಡಿಸಿ: ಅಂತಿಮ ಧಣಿಗಳು | 14,750 | | ಇತರೆ ಸ್ವೀಕೃತಿಗಳು | | 1,700 |
| | 95,750 | | | | |

| | | | | |
|---|---|---|---|---|
| ಕೂಡಿಸಿ: ನಗದು ಖರೀದಿ | 10,000 | | | |
| | 1,05,750 | | | |
| ಕಳೆಯಿರಿ: ಪ್ರಾರಂಭಿಕ ಧಣಿಗಳು | 7,000 | | | |
| | 98,750 | | | |
| ಕಳೆಯಿರಿ: ಕ್ರೀಡಾಸಾಮಗ್ರಿಗಳ ಮಾರಾಟ | 20,000 | | | |
| | 78,750 | | | |
| ಕಳೆಯಿರಿ: ಅಂತಿಮ ದಾಸ್ತಾನು | 25,000 | 53,750 | | |
| ಪಂದ್ಯಾಟದ ಖರ್ಚುಗಳು | | 35,150 | | |
| ಪೀಠೋಪಕರಣದ ಮೇಲಿನ ಸವಕಳಿ | | 24,000 | | |
| ಇತರೆ ಖರ್ಚುಗಳು: | | | | |
| ಪಾವತಿ | 1,50,000 | | | |
| ಕಳೆಯಿರಿ: ಬಾಕಿ (2013–14) | 11,400 | | | |
| | 1,38,600 | | | |
| ಕಳೆಯಿರಿ: ಮುಂಗಡ ಪಾವತಿ | 4,250 | | | |
| | 1,34,350 | | | |
| ಕೂಡಿಸಿ: ಬಾಕಿ (2013–14) | 20,100 | | | |
| | 1,54,250 | | | |
| ಮುಂಗಡ ಪಾವತಿ (2012–13) | 3,750 | 1,58,200 | | |
| ಮಿಗತೆ (ವೆಚ್ಚ ಮೀರಿದ ಆದಾಯ) | | 95,600 | | |
| | | **4,07,950** | | **4,07,950** |

**31 ಮಾರ್ಚ್, 2014 ರಂದು ಇದ್ದಂತೆ ಎಂಟರ್‌ಟೈನ್‌ಮೆಂಟ್ ಕ್ಲಬ್ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|---|
| ಬಂಡವಾಳ ನಿಧಿ (ವ್ಯತ್ಯಾಸದ ಮೌಲ್ಯ) | | 2,42,350 | ಪೀಠೋಪಕರಣ | 2,00,000 |
| ಬಹುಮಾನ ನಿಧಿ | | 60,000 | 5% ಬಹುಮಾನ ನಿಧಿ ಹೂಡಿಕೆಗಳು | 60,000 |
| ಕ್ರೀಡಾಸಾಮಗ್ರಿಗಳ ಧಣಿಗಳು | | 7,000 | ಬರಬೇಕಾದ ವಂತಿಗೆ(ಬಾಕಿ) | 23,750 |
| ಮುಂಗಡ ಸ್ವೀಕರಿಸಿದ ವಂತಿಗೆಗಳು | | 7,000 | ಕ್ರೀಡಾಸಾಮಗ್ರಿಗಳ ದಾಸ್ತಾನು | 20,000 |
| ಬಾಕಿ ಖರ್ಚುಗಳು: ಬಾಡಿಗೆ | 3,750 | | ಇತರೆ ಖರ್ಚುಗಳ ಮುಂಗಡ ಪಾವತಿ | 3,750 |
| ಇತರೆ ಖರ್ಚುಗಳು | 11,400 | | ಕೈಯಲ್ಲಿನ ನಗದು | 24,000 |
| | | 15,150 | | |
| | | **3,31,500** | | **3,31,500** |

**31 ಮಾರ್ಚ್, 2015 ರಂದು ಇದ್ದಂತೆ ಎಂಟರ್‌ಟೈನ್‌ಮೆಂಟ್ ಕ್ಲಬ್ ಆಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | | ಮೊತ್ತ ₹ |
|---|---|---|---|---|---|
| ಬಂಡವಾಳ ನಿಧಿ | 2,42,350 | | ಪೀಠೋಪಕರಣ: | | |
| ಕೂಡಿಸಿ: ಮಿಗತೆ | 95,600 | | ಪ್ರಾರಂಭಿಕ ಶಿಲ್ಕು | 2,00,000 | |
| ಪ್ರವೇಶ ಶುಲ್ಕಗಳು | 20,000 | 3,57,950 | ಖರೀದಿ | 40,000 | |
| ಬಹುಮಾನ ನಿಧಿ | 60,000 | | | 2,40,000 | |
| ಕೂಡಿಸಿ: ದೇಣಿಗೆಗಳು | 14,000 | | ಕಳೆಯಿರಿ: ಸವಕಳಿ | 24,000 | 2,16,000 |
| ಬಡ್ಡಿ ಸ್ವೀಕರಿಸಿದ್ದು | 1,500 | | 5% ಬಹುಮಾನ ನಿಧಿ ಹೂಡಿಕೆಗಳು | | 60,000 |
| ಗಳಿಕೆ ಬಡ್ಡಿ | 1,500 | | ಬರಬೇಕಾದ ವಂತಿಗೆ (ಬಾಕಿ): | | |
| | 77,000 | | (2013–14) | 500 | |
| ಕಳೆಯಿರಿ: ಬಹುಮಾನ ನೀಡಿಕೆ | 20,750 | 56,250 | (2014–15) | 17,000 | 17,500 |
| ಕ್ರೀಡಾಸಾಮಗ್ರಿಗಳ ಧಣಿಗಳು | | 14,750 | ಕ್ರೀಡಾಸಾಮಗ್ರಿಗಳ ದಾಸ್ತಾನು | | 25,000 |
| ಮುಂಗಡ ಸ್ವೀಕರಿಸಿದ ವಂತಿಗೆಗಳು | | 13,000 | ಇತರೆ ಖರ್ಚುಗಳ ಮುಂಗಡ ಪಾವತಿ | | 4,250 |
| ಬಾಕಿ ಇತರೆ ಖರ್ಚುಗಳು | | 20,100 | ಮುಂಗಡ ಪಾವತಿಸಿದ ಬಾಡಿಗೆ | | 3,750 |
| | | | ಬಹುಮಾನ ನಿಧಿ ಹೂಡಿಕೆಗಳ ಮೇಲಿನ ಗಳಿಕೆ ಬಡ್ಡಿ | | 1,500 |
| | | | ಕೈಯಲ್ಲಿನ ನಗದು | | 1,34,050 |
| | | **4,62,050** | | | **4,62,050** |

**ಟಿಪ್ಪಣಿ:** ಬಹುಮಾನ ನಿಧಿ ಹೂಡಿಕೆ ಮೇಲಿನ ಬಡ್ಡಿ 5%ರ ಮೊತ್ತ ₹3,000 ಅಗಲಿದ್ದು, ₹.1,500 ಮಾತ್ರ ಸ್ವೀಕರಿಸಿದೆ. ವ್ಯತ್ಯಾಸವನ್ನು ಗಳಿಕೆಯ ಬಡ್ಡಿ ಎಂದು ಪರಿಗಣಿಸಿದೆ.

ಹಲವು ವಹಿವಾಟುಗಳು, ಅನೇಕ ಅಂಶಗಳನ್ನು ಒಳಗೊಂಡಿರುವ ಪ್ರತ್ಯೇಕ ಖಾತೆಗಳನ್ನು ತಯಾರಿಸುವುದು ಸೂಕ್ತವಾಗಿದೆ. ಈ ಪ್ರಕರಣದಲ್ಲಿ ವಂತಿಗೆ, ಇತರೆ ಖರ್ಚುಗಳು ಮತ್ತು ಕ್ರೀಡಾಸಾಮಗ್ರಿಗಳ ಖಾತೆಗಳನ್ನು ತರಗತಿಯ ಚಟುವಟಿಕೆಯಾಗಿ ಮಾಡಬಹುದು.

**ನಿದರ್ಶನ: 17**

ಶಿವ್–ಇ–ನರೀನ್ ಎಜುಕೇಷನ್ ಟ್ರಸ್ಟ್ 31 ಮಾರ್ಚ್,2015ಕ್ಕೆ ಅಂತ್ಯವಾಗುವ ಆಯ–ವ್ಯಯ ಖಾತೆ ಮತ್ತು ಆದಾಯ–ವೆಚ್ಚ ಖಾತೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ನೀಡಿದೆ:

**ಖರ್ಚು** **31 ಮಾರ್ಚ್, 2015ರ ವರ್ಷಕ್ಕೆ ಅಂತ್ಯವಾಗುವ ಆಯ–ವ್ಯಯ ಖಾತೆ** **ಜಮಾ**

| ಸ್ವೀಕೃತಿಗಳು | | ಮೊತ್ತ ₹ | ಪಾವತಿಗಳು | ಮೊತ್ತ ₹ |
|---|---|---|---|---|
| 1 ಏಪ್ರಿಲ್,2014ರಂದು ಕೈಯಲ್ಲಿನ ನಗದು | | 3,000 | ಮುದ್ರಣ ಮತ್ತು ಲೇಖನಸಾಮಗ್ರಿ | 6,000 |
| 1 ಏಪ್ರಿಲ್,2014ರಂದು ಬ್ಯಾಂಕಿನಲ್ಲಿ ನಗದು | | 15,000 | ಬೆಳಕಿನ ವ್ಯವಸ್ಥೆ ಮತ್ತು ನೀರು | 2,600 |
| ವಂತಿಗೆಗಳು: | | | ಬಾಡಿಗೆ | 21,000 |
| 2013–14 | 12,000 | | ಜಾಹೀರಾತು | 2,820 |
| 2014–15 | 46,000 | | ಇತರೆ ಖರ್ಚುಗಳು | 4,400 |
| 2015–16 | 15,600 | 73,600 | ಸಿಬ್ಬಂದಿ ವೇತನ | 85,000 |

| | | | | |
|---|---|---|---|---|
| ಪ್ರವೇಶ ಶುಲ್ಕಗಳು | | 25,200 | ಪೀಠೋಪಕರಣ ಖರೀದಿ | 28,000 |
| ಬೋಧನ ಶುಲ್ಕಗಳು: | | | ಗೌರವಧನ | 15,000 |
| 2014–15 | 80,000 | | ಪುಸ್ತಕಗಳು | 5,000 |
| 2015–16 | 10,000 | 90,000 | 31 ಮಾರ್ಚ್, 2015ರಂದು ಕೈಯಲ್ಲಿನ | |
| ಹೂಡಿಕೆಗಳ ಮೇಲಿನ ಬಡ್ಡಿ: | | | ನಗದು | 9,180 |
| 2013–14 | 4,000 | | 31 ಮಾರ್ಚ್, 2015ರಂದು | |
| 2014–15 | 6,000 | 10,000 | ಬ್ಯಾಂಕಿನಲ್ಲಿನ ನಗದು | 45,000 |
| ಇತರೆ ಸ್ವೀಕೃತಿಗಳು | | 7,200 | | |
| | | **2,24,000** | | **2,24,000** |

31 ಮಾರ್ಚ್, 2015ರಂದು ಈ ಕೆಳಗಿನ ಶಿಲ್ಕುಗಳು ಕಾಣಿಸುತ್ತಿವೆ:

ಹೂಡಿಕೆಗಳು ₹1,60,000; ಪೀಠೋಪಕರಣಗಳು ₹40,000 ಮತ್ತು ಪುಸ್ತಕಗಳು ₹20,000.

**ಖರ್ಚು ಮಾರ್ಚ್ 31, 2015 ವರ್ಷಕ್ಕೆ ಅಂತ್ಯವಾಗುವ ಆದಾಯ–ವೆಚ್ಚ ಖಾತೆ ಜಮಾ**

| ವೆಚ್ಚ | ಮೊತ್ತ ₹ | ಆದಾಯ | ಮೊತ್ತ ₹ |
|---|---|---|---|
| ಮುದ್ರಣ ಮತ್ತು ಲೇಖನಸಾಮಗ್ರಿ | 7,800 | ವಂತಿಗೆ | 46,000 |
| ಬೆಳಕಿನ ವ್ಯವಸ್ಥೆ ಮತ್ತು ನೀರು | 2,600 | ಹೂಡಿಕೆ ಮೇಲಿನ ಬಡ್ಡಿ | 6,800 |
| ಬಾಡಿಗೆ | 24,000 | ಇತರೆ ಆದಾಯಗಳು | 7,200 |
| ಸಿಬ್ಬಂದಿ ವೇತನ | 84,000 | ಬೋಧನಾ ಶುಲ್ಕಗಳು | 90,000 |
| ಜಾಹೀರಾತು | 3,200 | | |
| ಗೌರವಧನ | 15,000 | | |
| ಇತರೆ ಖರ್ಚುಗಳು | 4,400 | | |
| ಪೀಠೋಪಕರಣಗಳ ಸವಕಳಿ | 4,000 | | |
| ಮಿಗತೆ(ವೆಚ್ಚ ಮೀರಿದ ಆದಾಯ) | 5,000 | | |
| | **1,50,000** | | **1,50,000** |

ಪ್ರಾರಂಭಿಕ ಮತ್ತು ಅಂತಿಮ ಅಢಾವೆ ಪತ್ರಿಕೆ ತಯಾರಿಸಿ.

**ಪರಿಹಾರ:**

**ಶಿವ್–ಇ–ನರೀನ್ ಎಜುಕೇಷನ್ ಟ್ರಸ್ಟ್**
**31 ಮಾರ್ಚ್, 2014 ರಂದು ಇದ್ದಂತೆ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|
| ಬಂಡವಾಳ/ಸಾಮಾನ್ಯ ನಿಧಿ | 2,54,000 | ಹೂಡಿಕೆಗಳು | 1,60,000 |
| (ವ್ಯತ್ಯಾಸದ ಮೌಲ್ಯ) | | ಪೀಠೋಪಕರಣ | 40,000 |
| | | ಪುಸ್ತಕಗಳು | 20,000 |
| | | ಬಾಕಿ ವಂತಿಗೆ | 12,000 |
| | | ಹೂಡಿಕೆ ಮೇಲಿನ ಬಡ್ಡಿ ಗಳಿಕೆ | 4,000 |
| | | ಕೈಯಲ್ಲಿನ ನಗದು | 3,000 |
| | | ಬ್ಯಾಂಕಿನಲ್ಲಿನ ನಗದು | 15,000 |
| | **2,54,000** | | **2,54,000** |

**ಶಿವ್–ಇ–ನರೀನ್ ಎಜುಕೇಷನ್ ಟ್ರಸ್ಟ್**
**31 ಮಾರ್ಚ್, 2015 ರಂದು ಇದ್ದಂತೆ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | | ಮೊತ್ತ ₹ |
|---|---|---|---|---|---|
| ಮುಂಗಡ ಬೋಧನೆ ಶುಲ್ಕ | | 10,000 | ಹೂಡಿಕೆಗಳು | | 1,60,000 |
| ಬಾಡಿಗೆ ಬಾಕಿ | | 3,000 | ಪೀಠೋಪಕರಣ | 40,000 | |
| ಜಾಹೀರಾತು ಬಾಕಿ | | 380 | ಕಳೆಯಿರಿ: ಸವಕಳಿ | 4,000 | |
| ಮುದ್ರಣ ಮತ್ತು ಲೇಖನಸಾಮಗ್ರಿ ಬಾಕಿ | | 1,800 | | 36,000 | |
| ಮುಂಗಡ ವಂತಿಗೆ | | 15,600 | ಕೂಡಿಸಿ: ಖರೀದಿಗಳು | 28,000 | 64,000 |
| ಬಂಡವಾಳ/ಸಾಮಾನ್ಯ ನಿಧಿ | 2,54,000 | | ಪುಸ್ತಕಗಳು | 20,000 | |
| ಕೂಡಿಸಿ: ಪ್ರವೇಶ ಶುಲ್ಕ | 25,200 | | ಕೂಡಿಸಿ: ಖರೀದಿಗಳು | 5,000 | 25,000 |
| ಕೂಡಿಸಿ: ಮಿಗತೆ | 5,000 | 2,84,200 | ಬಡ್ಡಿ ಗಳಿಕೆ | | 800 |
| | | | ಬೋಧನಾ ಶುಲ್ಕ ಬಾಕಿ | | 10,000 |
| | | | ಮುಂಗಡ ಸಿಬ್ಬಂದಿ ವೇತನ | | 1,000 |
| | | | ಕೈಯಲ್ಲಿನ ನಗದು | | 9,180 |
| | | | ಬ್ಯಾಂಕಿನಲ್ಲಿನ ನಗದು | | 45,000 |
| | | **3,14,980** | | | **3,14,980** |

**ಟಿಪ್ಪಣಿ:**

1. ಆದಾಯ–ವೆಚ್ಚ ಖಾತೆಯು ಚಾಲ್ತಿ ವರ್ಷದಲ್ಲಿ ಹೂಡಿಕೆ ಮೇಲಿನ ಬಡ್ಡಿ ಆದಾಯ ₹6,800 ತೋರಿಸುತ್ತಿದೆ, ಆದರೆ, ಆಯ–ವ್ಯಯ ಖಾತೆಯು ₹6,000 ತೋರಿಸುತ್ತಿದೆ, ₹800 ವ್ಯತ್ಯಾಸವು ಈ ವರ್ಷದ ಹೂಡಿಕೆ ಮೇಲಿನ ಬಡ್ಡಿ ಇನ್ನೂ ಬಂದಿರುವುದಿಲ್ಲ.
2. ಆದಾಯ–ವೆಚ್ಚ ಖಾತೆಯು ₹90,000 ಬೋಧನ ಶುಲ್ಕ ತೋರಿಸುತ್ತಿದೆ. ಆದರೆ, ಆಯ–ವ್ಯಯ ಖಾತೆಯು 2015–16ನೇ ವರ್ಷದ ₹10,000 ಮತ್ತು 2014–15ರ ₹80,000 ಸ್ವೀಕರಿಸಿದ ಬೋಧನ ಶುಲ್ಕ ತೋರಿಸುತ್ತಿವೆ. ಇದು 2014–15ನೇ ವರ್ಷದ ₹10,000 ಬೋಧನ ಶುಲ್ಕ ಇನ್ನೂ ಬರಬೇಕಾಗಿದೆ(ಬೋಧನಾ ಶುಲ್ಕ ಬಾಕಿ) ಎಂಬುದನ್ನು ಸೂಚಿಸುತ್ತದೆ.
3. ಆಯ–ವ್ಯಯ ಖಾತೆ ಸಿಬ್ಬಂದಿ ವೇತನದ ₹85,000 ಪಾವತಿಯನ್ನು ತೋರಿಸುತ್ತಿದೆ. ಆದರೆ, ಆದಾಯ–ವೆಚ್ಚ ಖಾತೆಯು ₹84,000 ಸಿಬ್ಬಂದಿ ವೇತನದ ವೆಚ್ಚ ತೋರಿಸುತ್ತಿದೆ. ಆಯ–ವ್ಯಯ ಖಾತೆಯಲ್ಲಿ ₹1,000 ಹೆಚ್ಚು ತೋರಿಸುತ್ತಿರುವುದು ಹಿಂದಿನ ವರ್ಷಕ್ಕೆ ಅಥವಾ ಮುಂದಿನ ವರ್ಷಕ್ಕೆ ಸಂಬಂಧಿಸಿದೆ ಎಂಬ ಅರ್ಥವನ್ನು ನೀಡುತ್ತದೆ. 2013–14ನೇ ಹಿಂದಿನ ವರ್ಷದ ಅಂತ್ಯದಲ್ಲಿನ ₹1,000 ಸಿಬ್ಬಂದಿ ವೇತನ ಬಾಕಿ ಇರುವ ಯಾವುದೇ ಪುರಾವೆ ಇಲ್ಲ. ಇದರಿಂದಾಗಿ ₹1,000 ಪಾವತಿಯನ್ನು ಸಿಬ್ಬಂದಿ ವೇತನದ ಮುಂಗಡ ಪಾವತಿ ಎಂದು ಪರಿಗಣಿಸಲಾಗಿದೆ.

**ಈ ಅಧ್ಯಾಯದಲ್ಲಿ ಪರಿಚಯಿಸಲಾದ ಪದಗಳು**

1. ಲಾಭಕ್ಕಲ್ಲದ ಸಂಸ್ಥೆ
2. ಆಯ–ವ್ಯಯ ಖಾತೆ
3. ಆದಾಯ–ವೆಚ್ಚ ಖಾತೆ
4. ಪ್ರವೇಶ ಶುಲ್ಕ
5. ಅಜೀವ ಸದಸ್ಯತ್ವ ಶುಲ್ಕ
6. ವಿಶೇಷ ಸ್ವೀಕೃತಿಗಳು
7. ವಂತಿಗೆ
8. ದೇಣಿಗೆ
9. ಸಂಭವನೀಯ ವ್ಯಾಪಾರ ಚಟುವಟಿಕೆ
10. ಮೃತ್ಯುಲೇಖದಾನ

## ಸಾರಾಂಶ Summary

1. **ಲಾಭ ನಿರೀಕ್ಷಿಸುವ ಸಂಸ್ಥೆಗಳು ಮತ್ತು ಲಾಭಕ್ಕಲ್ಲದ ಸಂಸ್ಥೆಗಳ ನಡುವಿನ ವ್ಯತ್ಯಾಸಗಳು:** ಲಾಭ ನಿರೀಕ್ಷಿಸುವ ಸಂಸ್ಥೆಗಳ ಉತ್ಪಾದನೆ, ವ್ಯಾಪಾರ, ಬ್ಯಾಂಕ್ ಮತ್ತು ವಿಮೆಯಂತಹ ಚಟುವಟಿಕೆಗಳನ್ನು ಕೈಗೊಂಡು ಮಾಲೀಕರಿಗೆ ಹಣಕಾಸಿನ ಗಳಿಕೆಯನ್ನು ತಂದುಕೊಡುತ್ತವೆ. ಲಾಭಕ್ಕಲ್ಲದ ಸಂಸ್ಥೆಗಳು ಸದಸ್ಯರಿಗೆ ಅಥವಾ ಸಮಾಜಕ್ಕೆ ಸೇವೆಯನ್ನು ಸಲ್ಲಿಸಲು ಅಸ್ತಿತ್ವದಲ್ಲಿರುತ್ತವೆ. ಇಂತಹ ಸಂಸ್ಥೆಗಳು ಕೆಲವು ವೇಳೆ ವ್ಯಾಪಾರ ಚಟುವಟಿಕೆಗಳನ್ನು ನಡೆಸಬಹುದು, ಆದರೆ ಅದರಿಂದ ಗಳಿಸುವ ಲಾಭವನ್ನು ಸೇವಾ ಉದ್ದೇಶಕ್ಕಾಗಿಯೇ ಬಳಸುತ್ತವೆ.
2. **ಲಾಭಕ್ಕಲ್ಲದ ಸಂಸ್ಥೆಗಳ ಪ್ರತ್ಯೇಕ ಲೆಕ್ಕಬರಹದ ಪರಿಗಣನೆಯ ಅಗತ್ಯತೆಯ ಪ್ರೋತ್ಸಾಹ:** ಲಾಭಕ್ಕಲ್ಲದ ಸಂಸ್ಥೆಗಳು ಮೂಲ ಸೇವಾ ಉದ್ದೇಶದಿಂದ ಮಾರ್ಗದರ್ಶಿಸಲ್ಪಡುವುದರಿಂದ, ಅವುಗಳ ವ್ಯವಸ್ಥಾಪಕರು ತೆಗೆದುಕೊಳ್ಳುವ ನಿರ್ಧಾರವು ಲಾಭ ನಿರೀಕ್ಷಿಸುವ ಸಂಸ್ಥೆಗಳ ವ್ಯವಸ್ಥಾಪಕರು ತೆಗೆದುಕೊಳ್ಳುವ ನಿರ್ಧಾರಗಳಿಗಿಂತ ಭಿನ್ನವಾಗಿರುತ್ತದೆ. ಯಾವುದರ ಮೇಲೆ ಅವುಗಳ ಹಣಕಾಸಿನ ಮಾಹಿತಿ ಆಧರಿಸಿದೆಯೋ ಆ ನಿರ್ಧಾರದ ಸ್ವರೂಪ, ಭಿನ್ನತೆಯನ್ನು ಸೂಚಿಸುತ್ತದೆ, ಅದರ ಅಂಶ ಮತ್ತು ತೋರಿಸುವಿಕೆಯೂ ಸಹ ಭಿನ್ನವಾಗಿರುತ್ತದೆ.
3. **ಲಾಭಕ್ಕಲ್ಲದ ಸಂಸ್ಥೆಗಳು ತಯಾರಿಸುವ ಮುಖ್ಯ ಹಣಕಾಸಿನ (ಪತ್ರಿಕೆಗಳ) ಪಟ್ಟಿಗಳ ಸ್ವರೂಪದ ವಿವರಣೆ:** ಲಾಭಕ್ಕಲ್ಲದ ಸಂಸ್ಥೆಗಳು ಇರಿಸುವ ಖಾತೆಗಳು ದ್ವಿ–ನಮೂದು ಪದ್ಧತಿ ಲೆಕ್ಕಬರಹವನ್ನು ಆಧರಿಸಿರುತ್ತವೆ. ಅವುಗಳ ಮಾಹಿತಿ ಅಗತ್ಯತೆಗಳನ್ನು ಪೂರೈಸಲು ಸಾಮಾನ್ಯವಾಗಿ ಮೂರು ಮುಖ್ಯ ಪಟ್ಟಿಗಳನ್ನು ತಯಾರಿಸುತ್ತವೆ. ಇವು ಆಯ–ವ್ಯಯ ಖಾತೆ, ಆದಾಯ–ವೆಚ್ಚ ಖಾತೆ ಮತ್ತು ಆಢಾವೆ ಪತ್ರಿಕೆಗಳನ್ನು ಒಳಗೊಂಡಿವೆ. ಆಯ–ವ್ಯಯ ಖಾತೆಯು ನಗದು ಪುಸ್ತಕದ ಸಾರಾಂಶವಾಗಿದ್ದು, ಎಲ್ಲಾ ನಗದು ಸ್ವೀಕೃತಿಗಳು ಮತ್ತು ನಗದು ಪಾವತಿಗಳನ್ನು ಬಂಡವಾಳ ಮತ್ತು ಕಂದಾಯ ಅಂಶಗಳ ನಡುವೆ ಮತ್ತು ಚಾಲ್ತಿ ವರ್ಷಕ್ಕೆ ಸಂಬಂಧಿಸಿದ ಮತ್ತು ಹಿಂದಿನ ವರ್ಷಕ್ಕೆ

ಸಂಬಂಧಿಸಿದ ಅಥವಾ ಭವಿಷ್ಯದ ವರ್ಷಗಳಿಗೆ ಸಂಬಂಧಿಸಿದ ಅಂಶಗಳ ನಡುವೆ ಯಾವುದೇ ಭಿನ್ನತೆಯನ್ನು ತೋರದೇ ದಾಖಲಿಸುತ್ತದೆ.

ಆದಾಯ–ವೆಚ್ಚ ಖಾತೆಯು ಆದಾಯದ ಪಟ್ಟಿಯಾಗಿದ್ದು ಇದನ್ನು ಕಂದಾಯದ ವೆಚ್ಚಗಳನ್ನು ಮೀರಿದ ಕಂದಾಯ ಆದಾಯಗಳನ್ನು ಅಥವಾ ವ್ಯತಿರಿಕ್ತವಾಗಿ ಸಂಸ್ಥೆಯ ಎಲ್ಲಾ ಚಟುವಟಿಕೆಗಳ ಫಲಿತಾಂಶವನ್ನು ಕಂಡುಹಿಡಿಯಲು ತಯಾರಿಸಲಾಗುತ್ತದೆ. ಇದನ್ನು ಲಾಭ ನಿರೀಕ್ಷಿಸುವ ಸಂಸ್ಥೆಯ ವ್ಯಾಪಾರಿ ಮತ್ತು ಲಾಭ–ನಷ್ಟ ಖಾತೆಯ ಬದಲಿ ಎಂದು ಪರಿಗಣಿಸಿದ್ದರೂ ಸಹ ಎರಡೂ ಪಟ್ಟಿಗಳ ನಡುವೆ ಕೆಲವು ಪರಿಕಲ್ಪನೆಗಳಲ್ಲಿನ ವ್ಯತ್ಯಾಸಗಳಿವೆ. ಆಢಾವೆ ಪತ್ರಿಕೆಯನ್ನು ಸಂಸ್ಥೆಯ ಲೆಕ್ಕಬರಹ ವರ್ಷದ ಅಂತ್ಯದಲ್ಲಿ ಆ ದಿನಾಂಕದಲ್ಲಿನ ಹಣಕಾಸಿನ ಸ್ಥಿತಿಯನ್ನು ತೋರಿಸಲು ತಯಾರಿಸಲಾಗುತ್ತದೆ. ಇದು ಬಂಡವಾಳ ನಿಧಿ ಅಥವಾ ಕೂಡಿಟ್ಟ ನಿಧಿ, ವಿಶೇಷ ಉದ್ದೇಶದ ನಿಧಿಗಳು ಮತ್ತು ಚರ ಜವಾಬ್ದಾರಿಗಳನ್ನು ಎಡ ಬದಿ ಅಥವಾ ಹೊಣೆಗಾರಿಕೆ ಬದಿಯಲ್ಲಿ ಮತ್ತು ಸ್ಥಿರ ಹಾಗೂ ಚರ ಆಸ್ತಿಗಳನ್ನು ಬಲ ಬದಿ ಅಥವಾ ಆಸ್ತಿಗಳ ಬದಿಯಲ್ಲಿ ತೋರಿಸಲಾಗುತ್ತದೆ.

4. **ಆಯ–ವ್ಯಯ ಖಾತೆ ಮತ್ತು ಆದಾಯ ವೆಚ್ಚ ಖಾತೆ ನಡುವಿನ ವ್ಯತ್ಯಾಸ:** ಆಯ–ವ್ಯಯ ಖಾತೆ ಮತ್ತು ಆದಾಯ–ವೆಚ್ಚ ಖಾತೆಗಳ ನಡುವೆ ಹಲವಾರು ವ್ಯತ್ಯಾಸಗಳಿರುವುದು ಅವುಗಳ ಸ್ವರೂಪ ಮತ್ತು ಉದ್ದೇಶಗಳಿಂದ ಸ್ಪಷ್ಟವಾಗುತ್ತದೆ. ಆಯ–ವ್ಯಯ ಖಾತೆಯು ಯಾವುದೇ ಲೆಕ್ಕಬರಹ ವರ್ಷದ ಬಂಡವಾಳ ಮತ್ತು ಕಂದಾಯದ ಸ್ವೀಕೃತಿ ಮತ್ತು ಪಾವತಿಗಳೆರಡನ್ನೂ ದಾಖಲಿಸುತ್ತದೆ. ಆದಾಯ–ವೆಚ್ಚ ಖಾತೆಯು ಚಾಲ್ತಿ ಲೆಕ್ಕಬರಹ ವರ್ಷಕ್ಕೆ ಸಂಬಂಧಿಸಿದ ಕಂದಾಯದ ಅಂಶಗಳನ್ನು ಮಾತ್ರ ದಾಖಲಿಸುತ್ತದೆ. ನಗದೇತರ ಖರ್ಚುಗಳಾದ ಸ್ಥಿರ ಆಸ್ತಿಗಳ ಮೇಲಿನ ಸವಕಳಿ ಮತ್ತು ಬಾಕಿ ಆದಾಯ ಮತ್ತು ಖರ್ಚುಗಳನ್ನು ಆದಾಯ–ವೆಚ್ಚ ಖಾತೆಯಲ್ಲಿ ತೋರಿಸಲಾಗುತ್ತದೆ, ಆದರೆ, ಆಯ–ವ್ಯಯ ಖಾತೆಯಲ್ಲಿ ತೋರಿಸುವುದಿಲ್ಲ. ಆಯ ವ್ಯಯ ಖಾತೆಯು ಪ್ರಾರಂಭಿಕ ಶಿಲ್ಕನ್ನು ಹೊಂದಿರುತ್ತದೆ ಆದರೆ ಆದಾಯ–ವೆಚ್ಚ ಖಾತೆ ಪ್ರಾರಂಭಿಕ ಶಿಲ್ಕನ್ನು ಹೊಂದಿರುವುದಿಲ್ಲ. ಮೊದಲನೇ ಖಾತೆಯ ಅಂತಿಮಶಿಲ್ಕು ನಗದು ಮತ್ತು ಬ್ಯಾಂಕ್ ಶಿಲ್ಕುಗಳನ್ನು ಪ್ರತಿನಿಧಿಸುತ್ತದೆ ಆದರೆ, ನಂತರದ ಖಾತೆಯು ಸಂಸ್ಥೆಯ ಚಟುವಟಿಕೆಗಳ ಮಿಗತೆ ಅಥವಾ ಕೊರತೆಯನ್ನು ಸೂಚಿಸುತ್ತದೆ.

5. **ಆಯ–ವ್ಯಯ ಖಾತೆಯನ್ನು ಆದಾಯ–ವೆಚ್ಚ ಖಾತೆಯಾಗಿ ಪರಿವರ್ತನೆ:** ಇದು ಅವಶ್ಯಕವಾಗಿ ಐದು ಹಂತಗಳನ್ನು ಒಳಗೊಂಡಿದೆ. ಅವುಗಳೆಂದರೆ, (i) ಆದಾಯ–ವೆಚ್ಚ ಖಾತೆಯ ಖರ್ಚು ಬದಿಯಲ್ಲಿ ಕಂದಾಯದ ಸ್ವೀಕೃತಿಗಳ ಚಾಲ್ತಿ ವರ್ಷದ ಬಾಕಿ ಆದಾಯಗಳನ್ನು ಮತ್ತು ಚಾಲ್ತಿ ವರ್ಷಕ್ಕೆ ಸಂಬಂಧಿಸಿದ ಆದಾಯ ಹಿಂದಿನ ವರ್ಷ ಸ್ವೀಕರಿಸಿರುವುದನ್ನು ಸೇರಿಸುವ ಮತ್ತು ಹಿಂದಿನ ವರ್ಷದ ಬಾಕಿ ಮತ್ತು ಮುಂಗಡ ಸ್ವೀಕರಿಸಿದ ಆದಾಯಗಳನ್ನು ಬಿಡುವ ಹೊಂದಾಣಿಕೆ ಮಾಡುವುದು; (ii) ಕಂದಾಯದ ಪಾವತಿಗಳನ್ನು ಜಮೆ ಬದಿಯಲ್ಲಿ ಹೊಂದಾಣಿಕೆ ಮಾಡುವುದು; (iii) ನಗದೇತರ ಖರ್ಚುಗಳು ಮತ್ತು ನಷ್ಟಗಳನ್ನು ಗುರುತಿಸಿ ಆದಾಯ–ವೆಚ್ಚ ಖಾತೆಯ ಖರ್ಚು ಬದಿಯಲ್ಲಿ ತೋರಿಸುವುದು; (iv) ವ್ಯಾಪಾರ ಮತ್ತು/ಅಥವಾ ಸಾಮಾಜಿಕ ಚಟುವಟಿಕೆಗಳಿಂದ ಲಾಭ/ನಷ್ಟವನ್ನು ಕಂಡುಹಿಡಿದು ಆದಾಯ–ವೆಚ್ಚ ಖಾತೆಯ ಜಮೆ/ಖರ್ಚು ಬದಿಯಲ್ಲಿ ತೋರಿಸುವುದು; ಮತ್ತು (v) ಆದಾಯ ವೆಚ್ಚ ಖಾತೆಯ ಮಿಗತೆ ಅಥವಾ ಕೊರತೆಯ ಅಂತಿಮ ಶಿಲ್ಕು ಕಂಡುಹಿಡಿಯುವುದು.

## ಅಭ್ಯಾಸದ ಪ್ರಶ್ನೆಗಳು Questions for Practice

### ಕಿರು ಉತ್ತರದ ಪ್ರಶ್ನೆಗಳು Short Answer Questions.

1. ಲಾಭಕ್ಕಲ್ಲದ ಸಂಸ್ಥೆಗಳ ಅರ್ಥವನ್ನು ತಿಳಿಸಿ.
2. ಆಯ–ವ್ಯಯ ಖಾತೆಯ ಅರ್ಥವನ್ನು ತಿಳಿಸಿ.
3. ಆದಾಯ–ವೆಚ್ಚ ಖಾತೆಯ ಅರ್ಥವನ್ನು ತಿಳಿಸಿ.
4. ಆಯ–ವ್ಯಯ ಖಾತೆಯ ಲಕ್ಷಣಗಳಾವುವು?
5. ಆಯ–ವ್ಯಯ ಖಾತೆಯಿಂದ ಆದಾಯ–ವೆಚ್ಚ ಖಾತೆಯನ್ನು ತಯಾರಿಸಲು ತೆಗೆದುಕೊಳ್ಳುವ ಹಂತಗಳಾವುವು?

6. ವಂತಿಗೆ ಎಂದರೇನು? ಇದನ್ನು ಹೇಗೆ ಕಂಡುಹಿಡಿಯುವಿರಿ?
7. ಬಂಡವಾಳ ನಿಧಿ ಎಂದರೇನು? ಇದನ್ನು ಹೇಗೆ ಕಂಡುಹಿಡಿಯುತ್ತೀರಿ?

**ದೀರ್ಘ ಉತ್ತರದ ಪ್ರಶ್ನೆಗಳು Long Answer Questions.**

1. "ಆಯ–ವ್ಯಯ ಖಾತೆಯು ಒಂದು ಸಾರಾಂಶ ರೂಪದ ನಗದು ಖಾತೆ". ಈ ಹೇಳಿಕೆಯನ್ನು ವಿವರಿಸಿರಿ.
2. "ಲಾಭಕ್ಕಲ್ಲದ ಸಂಸ್ಥೆಯ ಆದಾಯ–ವೆಚ್ಚ ಖಾತೆಯು ಒಂದು ವ್ಯವಹಾರಿ ಸಂಸ್ಥೆಯ ಲಾಭ ನಷ್ಟ ಖಾತೆಯ ಸಮಾನ ಲಕ್ಷಣದ್ದಾಗಿದೆ". ಈ ಹೇಳಿಕೆಯನ್ನು ವಿವರಿಸಿರಿ.
3. ಆಯ–ವ್ಯಯ ಖಾತೆ ಮತ್ತು ಆದಾಯ–ವೆಚ್ಚ ಖಾತೆಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿರಿ.
4. ಆದಾಯ–ವೆಚ್ಚ ಖಾತೆಯ ಮತ್ತು ಆಯ–ವ್ಯಯ ಖಾತೆಯ ಮೂಲ ಲಕ್ಷಣಗಳನ್ನು ವಿವರಿಸಿರಿ.
5. ಲಾಭಕ್ಕಲ್ಲದ ಸಂಸ್ಥೆಯು ಈ ಕೆಳಗಿನ ಅಂಶಗಳನ್ನು ಹೇಗೆ ಪರಿಗಣಿಸುತ್ತದೆ ಎಂದು ತೋರಿಸಿರಿ:
   (i) ವಾರ್ಷಿಕ ವಂತಿಗೆ
   (ii) ನಿಶ್ಚಿತ ದೇಣಿಗೆ
   (iii) ಸ್ಥಿರ ಆಸ್ತಿಗಳ ಮಾರಾಟ
   (iv) ಹಳೆಯ ನಿಯತಕಾಲಿಕಗಳ ಮಾರಾಟ
   (v) ಕ್ರೀಡಾಸಾಮಗ್ರಿ ಮಾರಾಟ
   (vi) ಆಜೀವ ಸದಸ್ಯತ್ವ ಶುಲ್ಕ
6. ನಿಶ್ಚಿತ ನಿಧಿ ಇದ್ದಾಗ ಆದಾಯ–ವೆಚ್ಚ ಖಾತೆಯ ನಿಶ್ಚಿತ ಅಂಶಗಳನ್ನು ಹೇಗೆ ಪರಿಗಣಿಸುತ್ತೀರಿ ಎಂದು ತೋರಿಸಿ.
7. ಆಯ–ವ್ಯಯ ಖಾತೆ ಎಂದರೇನು? ಇದು ಹೇಗೆ ಆದಾಯ ವೆಚ್ಚ ಖಾತೆಗಿಂತ ಭಿನ್ನವಾಗಿದೆ?

**ಸಂಖ್ಯಾತ್ಮಕ ಪ್ರಶ್ನೆಗಳು Numerical Questions.**

1. ಹೆಲ್ತ್ ಕ್ಲಬ್‌ನ ನಗದು ಪುಸ್ತಕದಿಂದ ತೆಗೆದುಕೊಂಡ ಕೆಳಗಿನ ವಿವರಗಳಿಂದ ಆಯ–ವ್ಯಯ ಖಾತೆ ತಯಾರಿಸಿ.

| | ₹ |
|---|---|
| ಪ್ರಾರಂಭಿಕ ಶಿಲ್ಕು: | |
| ಕೈಯಲ್ಲಿನ ನಗದು | 5,000 |
| ಬ್ಯಾಂಕಿನಲ್ಲಿನ ನಗದು | 25,000 |
| ವಂತಿಗೆಗಳು | 1,65,000 |
| ದೇಣಿಗೆಗಳು | 35,000 |
| ಹೂಡಿಕೆಗಳ ಖರೀದಿ | 80,000 |
| ಬಾಡಿಗೆ ಪಾವತಿ | 20,000 |
| ಸಾಮಾನ್ಯ ಖರ್ಚುಗಳು | 21,500 |
| ಅಂಚೆ ಮತ್ತು ಲೇಖನಸಾಮಗ್ರಿ | 2,000 |
| ಕೊರಿಯರ್ ಖರ್ಚುಗಳು | 1,000 |
| ಇತರೆ ಖರ್ಚುಗಳು | 2,500 |
| ಅಂತಿಮ ಕೈಯಲ್ಲಿನ ನಗದು | 12,000 |

(**ಉತ್ತರ:** ಬ್ಯಾಂಕಿನಲ್ಲಿನ ನಗದು(ವ್ಯತ್ಯಾಸದ ಅಂಕಿ) ₹91,000)

2. ಹರಿಮೋಹನ್ ಚಾರಿಟೆಬಲ್ ಸಂಸ್ಥೆಯು ನೀಡಿರುವ ಆಯ-ವ್ಯಯ ಖಾತೆ:

**ಖರ್ಚು 31 ಮಾರ್ಚ್, 2015ರ ವರ್ಷಕ್ಕೆ ಅಂತ್ಯವಾಗುವ ಆಯ-ವ್ಯಯ ಖಾತೆ ಜಮಾ**

| ಸ್ವೀಕೃತಿಗಳು | ಮೊತ್ತ ₹ | ಪಾವತಿಗಳು | ಮೊತ್ತ ₹ |
|---|---|---|---|
| ಹಿಂದಿನಿಂದ ಬಂದ ಶಿಲ್ಕು: | | ಪೀಠೋಪಕರಣ | 3,000 |
| ಬ್ಯಾಂಕಿನಲ್ಲಿ ನಗದು | 22,000 | ಹೂಡಿಕೆಗಳು | 55,000 |
| ಕೈಯಲ್ಲಿನ ನಗದು | 8,800 | ಕಟ್ಟಡಗಳಿಗೆ ಮುಂಗಡ | 20,000 |
| ದೇಣಿಗೆಗಳು | 32,000 | ದಾನಗಳು | 60,000 |
| ವಂತಿಗೆಗಳು | 50,200 | ವೇತನಗಳು | 10,400 |
| ದತ್ತಿ ನಿಧಿ | 60,000 | ಬಾಡಿಗೆ ಮತ್ತು ತೆರಿಗೆಗಳು | 4,000 |
| ಮೃತ್ಯುಲೇಖದಾನ | 24,000 | ಮುದ್ರಣ | 1,000 |
| ಹೂಡಿಕೆಯ ಮೇಲಿನ ಬಡ್ಡಿ | 3,800 | ಅಂಚೆ | 300 |
| ಠೇವಣಿಗಳ ಮೇಲಿನ ಬಡ್ಡಿ | 800 | ಜಾಹೀರಾತು | 1,100 |
| ಹಳೆಯ ದಿನಪತ್ರಿಕೆಗಳ ಮಾರಾಟ | 500 | ವಿಮೆ | 4,800 |
| | | ಮುಂದುವರಿದ ಶಿಲ್ಕು: | |
| | | ಬ್ಯಾಂಕಿನಲ್ಲಿ ನಗದು | 32,000 |
| | | ಕೈಯಲ್ಲಿನ ನಗದು | 10,500 |
| | 2,02,100 | | 2,02,100 |

ಈ ಕೆಳಗಿನವುಗಳನ್ನು ಪರಿಗಣಿಸಿ, 31.3.2015ರ ವರ್ಷಕ್ಕೆ ಅಂತ್ಯವಾಗುವ ಆದಾಯ-ವೆಚ್ಚ ಖಾತೆಯನ್ನು ತಯಾರಿಸಿ:

1. ಮೃತ್ಯುಲೇಖದಾನ ಮತ್ತು ದೇಣಿಗೆಗಳಿಂದ ಸ್ವೀಕರಿಸಿದ ಮೊತ್ತದ 50%ರಷ್ಟನ್ನು ಆದಾಯ ಎಂದು ತೀರ್ಮಾನಿಸಲಾಗಿದೆ.
2. ಜವಾಬ್ದಾರಿಗಳಿಗೆ ತೆಗೆದಿರಿಸಬೇಕಾಗಿರುವುದು:

   ಬಾಡಿಗೆ ₹800; ವೇತನ ₹1,200; ಜಾಹೀರಾತು ₹200.
3. ಹೂಡಿಕೆಗಳ ಮೇಲಿನ ಬಡ್ಡಿ ₹2,000 ಬಾಕಿ ಇದ್ದು ಇನ್ನೂ ಸ್ವೀಕರಿಸಿರುವುದಿಲ್ಲ.

(**ಉತ್ತರ:** ವೆಚ್ಚ ಮೀರಿದ ಆದಾಯ ₹2,500)

3. ಕೆಳಗಿನ ವಿವರಗಳಿಂದ ಆದಾಯ-ವೆಚ್ಚ ಖಾತೆಯನ್ನು ತಯಾರಿಸಿ:

| ವಿವರಗಳು | ಮೊತ್ತ ₹ |
|---|---|
| ಶುಲ್ಕಗಳ ಸಂಗ್ರಹಣೆ, ಹಿಂದಿನ ವರ್ಷದ ₹80,000 ಒಳಗೊಂಡಿದೆ | 5,20,000 |
| ಈ ವರ್ಷದ ಬಾಕಿ ಶುಲ್ಕಗಳು | 30,000 |
| ವೇತನ ಪಾವತಿ, ಹಿಂದಿನ ವರ್ಷದ ₹5,000 ಒಳಗೊಂಡಿದೆ | 68,000 |
| ವರ್ಷಾಂತ್ಯದಲ್ಲಿ ವೇತನ ಬಾಕಿ | 3,000 |
| ಮನರಂಜನೆ ಖರ್ಚುಗಳು | 8,000 |
| ಪಂದ್ಯಾವಳಿ ಖರ್ಚುಗಳು | 25,000 |

| | |
|---|---|
| ಸಭೆಯ ಖರ್ಚುಗಳು | 18,000 |
| ಪ್ರಯಾಣದ ಖರ್ಚುಗಳು | 7,000 |
| ಪುಸ್ತಕಗಳು ಮತ್ತು ನಿಯತಕಾಲಿಕಗಳ ಖರೀದಿ, ₹31,000 ಪುಸ್ತಕಗಳ ಖರೀದಿ ಒಳಗೊಂಡಿದೆ | 40,000 |
| ಬಾಡಿಗೆ | 15,000 |
| ಅಂಚೆ, ತಂತಿ ಮತ್ತು ದೂರವಾಣಿ | 6,000 |
| ಮುದ್ರಣ ಮತ್ತು ಲೇಖನ ಸಾಮಗ್ರಿ | 18,000 |
| ದೇಣಿಗೆಗಳನ್ನು ಸ್ವೀಕರಿಸಿದ್ದು | 25,000 |

(**ಉತ್ತರ:** ವೆಚ್ಚ ಮೀರಿದ ಆದಾಯ ₹3,07,000)

4. ಕ್ರೀಡಾ ಕ್ಲಬ್‌ನ ಕೆಲವು ಅಂಶಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಈ ಕೆಳಗೆ ನೀಡಲಾಗಿದೆ. ಈ ಅಂಶಗಳನ್ನು ಕ್ಲಬ್‌ನ ಆದಾಯ–ವೆಚ್ಚ ಖಾತೆ ಮತ್ತು ಅಢಾವೆ ಪತ್ರಿಕೆಯಲ್ಲಿ ತೋರಿಸಿ.

| | ₹ |
|---|---|
| 1.4.2015ರಂದು ಇದ್ದಂತೆ ಕ್ರೀಡಾ ನಿಧಿ | 35,000 |
| ಕ್ರೀಡಾ ನಿಧಿ ಹೂಡಿಕೆಗಳು | 35,000 |
| ಕ್ರೀಡಾ ನಿಧಿ ಮೇಲಿನ ಬಡ್ಡಿ | 4,000 |
| ಕ್ರೀಡಾ ನಿಧಿಗೆ ದೇಣಿಗೆಗಳು | 15,000 |
| ಕ್ರೀಡಾ ಬಹುಮಾನಗಳ ನೀಡಿಕೆ | 10,000 |
| ಕ್ರೀಡಾ ಚಟುವಟಿಕೆಗಳ ಖರ್ಚುಗಳು | 4,000 |
| ಸಾಮಾನ್ಯ ನಿಧಿ | 80,000 |
| ಸಾಮಾನ್ಯ ನಿಧಿ ಹೂಡಿಕೆಗಳು | 80,000 |
| ಸಾಮಾನ್ಯ ನಿಧಿ ಹೂಡಿಕೆಗಳ ಮೇಲಿನ ಬಡ್ಡಿ | 8,000 |

(**ಉತ್ತರ:** ಕ್ರೀಡಾ ನಿಧಿ ಶಿಲ್ಕು ₹40,000)

5. ಬಾಂಬೆ ವುಮೆನ್ಸ್ ಕ್ರಿಕೆಟ್ ಕ್ಲಬ್‌ನ 31.3.2015ರ ವರ್ಷಾಂತ್ಯದ ಆದಾಯ–ವೆಚ್ಚ ಖಾತೆ ಮತ್ತು 31.3.2015ರಂದು ಇದ್ದಂತೆ ಅಢಾವೆ ಪತ್ರಿಕೆಯನ್ನು ತಯಾರಿಸುವಾಗ ಈ ಕೆಳಗಿನ ಅಂಶಗಳನ್ನು ನೀವು ಹೇಗೆ ಪರಿಗಣಿಸುತ್ತೀರಿ.

| | ₹ |
|---|---|
| (ಎ) ಶಾಶ್ವತ ಪೆವಿಲಿಯನ್ ನಿರ್ಮಾಣಕ್ಕೆ ಈ ವರ್ಷದಲ್ಲಿ ಸ್ವೀಕರಿಸಿದ ದೇಣಿಗೆ. | 12,25,000 |
| 31.3.2015ರ ವರೆಗೆ ಇದರ ನಿರ್ಮಾಣಕ್ಕೆ ವೆಚ್ಚವಾಗಿರುವುದು | 10,80,000 |
| ಪೆವಿಲಿಯನ್ ನಿರ್ಮಾಣದ ಒಟ್ಟು ನಿರ್ಮಾಣದ ಅಂದಾಜು ವೆಚ್ಚ | 25,00,000 |
| (ಬಿ) ಪಂದ್ಯಾವಳಿ ನಿಧಿ: | |
| 1.4.2014ರಂದು ಇದ್ದಂತೆ ಶಿಲ್ಕು | 10,700 |
| ಈ ವರ್ಷದಲ್ಲಿ ಪಂದ್ಯಾವಳಿಗೆ ಸ್ವೀಕರಿಸಿದ ವಂತಿಗೆಗಳು | 65,800 |
| ಈ ವರ್ಷದಲ್ಲಿ ಪಂದ್ಯಾವಳಿಯನ್ನು ನಡೆಸಲು ಮಾಡಿರುವ ವೆಚ್ಚ | 72,400 |
| (ಸಿ) ಈ ವರ್ಷದಲ್ಲಿ ಸ್ವೀಕರಿಸಿದ ಅಜೀವ ಸದಸ್ಯತ್ವ ಶುಲ್ಕ | 28,000 |

ನಿಮ್ಮ ಉತ್ತರಗಳಿಗೆ ಕಾರಣಗಳನ್ನು ತಿಳಿಸಿರಿ.

**(ಉತ್ತರ:**

(ಎ) ಪೆವಿಲಿಯನ್ ನಿಧಿ ಶಿಲ್ಕು ₹1,45,000;

(ಬಿ) ಪಂದ್ಯಾವಳಿ ನಿಧಿ ಶಿಲ್ಕು ₹4,100;

(ಸಿ) ಆಜೀವ ಸದಸ್ಯತ್ವ ಶುಲ್ಕವನ್ನು ಬಂಡವಾಳೀಕರಿಸಿ.

6. ಈ ಕೆಳಗೆ ನೀಡಿರುವ ಸ್ವೀಕೃತಿಗಳು ಮತ್ತು ಪಾವತಿಗಳು ಹಾಗೂ ಮಾಹಿತಿಗಳಿಂದ, ಅಡಲ್ಫ್ ಲೈಬ್ರರಿಯ ಆದಾಯ ಮತ್ತು ವೆಚ್ಚ ಖಾತೆ ಹಾಗೂ 31 ಡಿಸೆಂಬರ್,2015ರಂದು ಇದ್ದಂತೆ ಪ್ರಾರಂಭದ ಅಢಾವೆ ಪತ್ರಿಕೆಯನ್ನು ತಯಾರಿಸಿ.

**ಖರ್ಚು 31 ಡಿಸೆಂಬರ್, 2015ರ ವರ್ಷಕ್ಕೆ ಅಂತ್ಯವಾಗುವ ಆಯ-ವ್ಯಯ ಖಾತೆ ಜಮಾ**

| ಸ್ವೀಕೃತಿಗಳು | | ಮೊತ್ತ ₹ | ಪಾವತಿಗಳು | ಮೊತ್ತ ₹ |
|---|---|---|---|---|
| ಹಿಂದಿನಿಂದ ಬಂದ ಶಿಲ್ಕು: | | | ಸಾಮಾನ್ಯ ಖರ್ಚುಗಳು | 3,200 |
| ಬ್ಯಾಂಕಿನಲ್ಲಿ ನಗದು | | 4,000 | ದಿನ ಪತ್ರಿಕೆ | 1,850 |
| ಕೈಯಲ್ಲಿನ ನಗದು | | 15,550 | ವಿದ್ಯುತ್ | 3,000 |
| ವಂತಿಗೆಗಳು: | | | ಬ್ಯಾಂಕಿನಲ್ಲಿ ಸ್ಥಿರ ಠೇವಣಿ | |
| 2014 | 1,200 | | (31.06.2016ರಂದು) 10% ಪ್ರ.ವ | 18,000 |
| 2015 | 26,500 | | ಪುಸ್ತಕಗಳು | 7,000 |
| 2016 | 500 | 28,200 | ವೇತನ | 3,600 |
| ಹಳೆಯ ದಿನಪತ್ರಿಕೆಗಳ ಮಾರಾಟ | | 1,250 | ಬಾಡಿಗೆ | 6,500 |
| ಸರ್ಕಾರಿ ಸಹಾಯಧನ | | 12,000 | ಅಂಚೆ ಖರ್ಚುಗಳು | 300 |
| ಹಳೆಯ ಪೀಠೋಪಕರಣಗಳ ಮಾರಾಟ | | | ಪೀಠೋಪಕರಣ (ಖರೀದಿ) | 10,500 |
| (ಪುಸ್ತಕ ಮೌಲ್ಯ ರೂ.5,000) | | 3,700 | ಮುಂದುವರಿದ ಶಿಲ್ಕು: | |
| ಸ್ಥಿರ ಠೇವಣಿ ಮೇಲಿನ ಬಡ್ಡಿ ಸ್ವೀಕರಿಸಿದ್ದು | | 450 | ಬ್ಯಾಂಕಿನಲ್ಲಿ ನಗದು | 3,000 |
| | | | ಕೈಯಲ್ಲಿನ ನಗದು | 8,200 |
| | | **65,150** | | **65,150** |

**ಮಾಹಿತಿ:**

1. 31.12.2014ರಂದು ಇದ್ದಂತೆ ₹2,000 ವಂತಿಗೆ ಬಾಕಿ ಮತ್ತು ಡಿಸೆಂಬರ್ 31, 2015ರಂದು ₹1,500 ಬಾಕಿ.
2. ಡಿಸೆಂಬರ್ 31,2015ರಂದು ವೇತನ ಬಾಕಿ ₹600 ಮತ್ತು ಒಂದು ತಿಂಗಳ ಬಾಡಿಗೆ ಮುಂಗಡ ಪಾವತಿ.
3. ಜನವರಿ 1,2014ರಂದು ಸಂಸ್ಥೆಯು ಹೊಂದಿರುವ ಪೀಠೋಪಕರಣ ₹12,000, ಪುಸ್ತಕಗಳು ₹5,000.

(**ಉತ್ತರ:** ಮಿಗತೆ ₹22,300, ಪ್ರಾರಂಭಿಕ ಬಂಡವಾಳ ನಿಧಿ ₹38,550, ಅಢಾವೆ ಪತ್ರಿಕೆಯ ಒಟ್ಟು ₹61,950).

7. ಡಿಸೆಂಬರ್ 31, 2015ಕ್ಕೆ ವರ್ಷಾಂತ್ಯವಾಗುವ ನಾರಿ ಕಲಾಯನ್ ಸಮಿತಿಯ ನಗದು ವಹಿವಾಟುಗಳ ಖಾತೆಯು ಈ ಕೆಳಗಿನಂತಿದೆ.

| ಸ್ವೀಕೃತಿಗಳು | ಮೊತ್ತ ₹ | ಪಾವತಿಗಳು | ಮೊತ್ತ ₹ |
|---|---|---|---|
| ಹಿಂದಿನ ವರ್ಷದಿಂದ ಬಂದ ಶಿಲ್ಕು | 2,270 | ಬಾಡಿಗೆ | 6,600 |
| ವಂತಿಗೆಗಳು | 32,500 | ವಿದ್ಯುತ್ ಶುಲ್ಕ | 3,200 |
| ಅಜೀವ ಸದಸ್ಯತ್ವ ಶುಲ್ಕ | 3,250 | ಉಪನ್ಯಾಸಕರ ಶುಲ್ಕ | 730 |
| ದೇಣಿಗೆ | 2,500 | ಕಛೇರಿ ಖರ್ಚುಗಳು | 1,480 |
| ಮನಂಜನೆಯಿಂದ ಲಾಭ | 7,250 | ಮುದ್ರಣ ಮತ್ತು ಲೇಖನಸಾಮಗ್ರಿ | 1,050 |
| ಹಳೆಯ ಪುಸ್ತಕಗಳ ಮಾರಾಟ | 750 | ಕಾನೂನಾತ್ಮಕ ಶುಲ್ಕ | 1,870 |
| (ಪುಸ್ತಕ ಮೌಲ್ಯ ರೂ.1,000) | | ಪುಸ್ತಕಗಳು | 6,500 |
| ಬಡ್ಡಿ | 350 | ಪೀಠೋಪಕರಣ ಖರೀದಿ | 8,600 |
| | | ನಾಟಕದ ಖರ್ಚುಗಳು | 1,300 |
| | | ಕೈಯಲ್ಲಿನ ನಗದು | 8,040 |
| | | ಬ್ಯಾಂಕಿನಲ್ಲಿನ ನಗದು | 9,500 |
| | **48,870** | | **48,870** |

ಈ ಕೆಳಗಿನ ಹೊಂದಾಣಿಕೆಗಳ ನಂತರ ಆದಾಯ–ವೆಚ್ಚ ಖಾತೆಯನ್ನು ನೀವು ತಯಾರಿಸಬೇಕಾಗಿದೆ:

(ಎ) ₹750 ವಂತಿಗೆಗಳನ್ನು ಇನ್ನೂ ಸ್ವೀಕರಿಸಬೇಕಿದೆ, ಆದರೆ ವಂತಿಗೆಗಳು 2014ನೇ ವರ್ಷದ ₹500ನ್ನು ಒಳಗೊಂಡಿದೆ.

(ಬಿ) ವರ್ಷದ ಪ್ರಾರಂಭದಲ್ಲಿ ಸಂಸ್ಥೆಯು ₹20,000 ಕಟ್ಟಡ, ₹3,000 ಪೀಠೋಪಕರಣ ಮತ್ತು ₹2,000 ಪುಸ್ತಕಗಳನ್ನು ಹೊಂದಿದೆ.

(ಸಿ) ಪೀಠೋಪಕರಣಗಳ ಮೇಲೆ 5% (ಖರೀದಿ ಒಳಗೊಂಡಂತೆ), ಪುಸ್ತಕಗಳ ಮೇಲೆ 10% ಮತ್ತು ಕಟ್ಟಡದ ಮೇಲೆ 5% ಸವಕಳಿ ತೆಗೆಯಿರಿ.

(**ಉತ್ತರ:** ಮಿಗತೆ ₹24,090)

8. ಇಂಡಿಯನ್ ಸ್ಪೋರ್ಟ್ಸ್ ಕ್ಲಬ್‌ನ ಕೆಳಗಿನ ಆಯ–ವ್ಯಯ ಖಾತೆಯಿಂದ ಆದಾಯ–ವೆಚ್ಚ ಖಾತೆ, ಡಿಸೆಂಬರ್ 31, 2015ರಂದು ಇದ್ದಂತೆ ಅಢಾವೆ ಪತ್ರಿಕೆಯನ್ನು ತಯಾರಿಸಿ:

**ಖರ್ಚು 31 ಡಿಸೆಂಬರ್, 2015ರ ವರ್ಷಕ್ಕೆ ಅಂತ್ಯವಾಗುವ ಆಯ–ವ್ಯಯ ಖಾತೆ ಜಮಾ**

| ಸ್ವೀಕೃತಿಗಳು | ಮೊತ್ತ ₹ | ಪಾವತಿಗಳು | ಮೊತ್ತ₹ |
|---|---|---|---|
| ಹಿಂದಿನಿಂದ ಬಂದ ಶಿಲ್ಕು | 7,890 | ವೇತನ | 11,000 |
| ವಂತಿಗೆಗಳು | 52,000 | ವಿದ್ಯುತ್ ಶುಲ್ಕ | 5,500 |
| ಅಜೀವ ಸದಸ್ಯತ್ವ ಶುಲ್ಕ | 2,200 | ಬಿಲಿಯರ್ಡ್ಸ್ ಟೇಬಲ್ | 17,500 |
| ಪ್ರವೇಶ ಶುಲ್ಕ | 3,200 | ಕಛೇರಿ ಖರ್ಚುಗಳು | 4,100 |
| ಪಂದ್ಯಾವಳಿ ನಿಧಿ | 26,000 | ಮುದ್ರಣ ಮತ್ತು ಲೇಖನಸಾಮಗ್ರಿ | 2,300 |
| ಭದ್ರತಾ ಕಪಾಟು ಬಾಡಿಗೆ | 1,250 | ಪಂದ್ಯಾವಳಿ ಖರ್ಚುಗಳು | 18,500 |
| | | ಮೈದಾನದ ದುರಸ್ತಿ | 2,000 |

| | | | |
|---|---|---|---|
| ಹಳೆಯ ಕ್ರೀಡಾ ಸರಕುಗಳ ಮಾರಾಟ (₹2,200 ವೆಚ್ಚಗಳು) | 2,500 | ಪೀಠೋಪಕರಣ ಖರೀದಿಸಿದ್ದು | 7,700 |
| | | ಕ್ರೀಡಾ ಉಪಕರಣಗಳು | 12,000 |
| ಹಳೆಯ ದಿನ ಪತ್ರಿಕೆಗಳ ಮಾರಾಟ | 750 | ಕೈಯಲ್ಲಿನ ನಗದು | 12,690 |
| ಮೃತ್ಯುಲೇಖದಾನ | 37,500 | ಬ್ಯಾಂಕಿನಲ್ಲಿನ ನಗದು | 10,000 |
| | | ಸ್ಥಿರ ಠೇವಣಿ (1.10.2015ರಂದು, 10% ಪ್ರತಿ ವರ್ಷಕ್ಕೆ) | 30,000 |
| | **1,33,290** | | **1,33,290** |

**ಇತರೆ ಮಾಹಿತಿ:**

1. ಡಿಸೆಂಬರ್ 31,2014ರಂದು ₹1,200 ಮತ್ತು ಡಿಸೆಂಬರ್ 31, 2015ರಂದು ₹3,200 ವಂತಿಗೆ ಬಾಕಿ ಇದೆ.
2. ಡಿಸೆಂಬರ್ 31,2015ರಂದು ₹250 ಭದ್ರತಾ ಕಪಾಟು ಬಾಡಿಗೆ ಬಾಕಿ ಇದೆ. ಡಿಸೆಂಬರ್ 31, 2015ರಂದು ₹1,000 ವೇತನ ಬಾಕಿ ಇದೆ.
3. ಜನವರಿ 1,2015ರಂದು ಕಟ್ಟಡ ₹36,000, ಪೀಠೋಪಕರಣ ₹12,000, ಕ್ರೀಡಾ ಉಪಕರಣಗಳು ₹17,500, ಇವುಗಳ ಮೇಲೆ 10% ಸವಕಳಿ ತೆಗೆಯಿರಿ (ಖರೀದಿ ಒಳಗೊಂಡಂತೆ).

(**ಉತ್ತರ:** ಮಿಗತೆ ₹26,300, ಪ್ರಾರಂಭಿಕ ಬಂಡವಾಳ ನಿಧಿ ₹74,590, ಅಢಾವೆ ಪತ್ರಿಯ ಅಂತಿಮ ಒಟ್ಟು ಮೊತ್ತ ₹1,49,090)

9. ಜಾನ್ ಕಲ್ಯಾಣ್ ಕ್ಲಬ್‌ನ ಕೆಳಗಿನ ಆಯ-ವ್ಯಯ ಖಾತೆಯಿಂದ ಆದಾಯ-ವೆಚ್ಚ ಖಾತೆ ಮತ್ತು ಮಾರ್ಚ್ 31, 2015ರಂದು ಇದ್ದಂತೆ ಅಢಾವೆ ಪತ್ರಿಕೆ ತಯಾರಿಸಿ:

**ಖರ್ಚು** **31 ಮಾರ್ಚ್, 2015ರ ವರ್ಷಕ್ಕೆ ಅಂತ್ಯವಾಗುವ ಆಯ-ವ್ಯಯ ಖಾತೆ** **ಜಮಾ**

| ಸ್ವೀಕೃತಿಗಳು | ಮೊತ್ತ ₹ | ಪಾವತಿಗಳು | ಮೊತ್ತ ₹ |
|---|---|---|---|
| 1.4.2014ರಂದು ಇದ್ದಂತೆ ಕೈಯಲ್ಲಿ ನಗದು | 6,800 | ವೇತನಗಳು | 24,000 |
| ವಂತಿಗೆ | 60,200 | ಪ್ರವಾಸ ಖರ್ಚುಗಳು | 6,000 |
| ದೇಣಿಗೆ | 3,000 | ಲೇಖನ ಸಾಮಗ್ರಿ | 2,300 |
| ಪೀಠೋಪಕರಣ ಮಾರಾಟ | 4,000 | ಬಾಡಿಗೆ | 16,000 |
| (ಪುಸ್ತಕದ ಮೌಲ್ಯ ₹6,000) | | ದುರಸ್ತಿ | 700 |
| ಪ್ರವೇಶ ಶುಲ್ಕ | 800 | ಪುಸ್ತಕಗಳ ಖರೀದಿಸಿದ್ದು | 6,000 |
| ಅಜೀವ ಸದಸ್ಯತ್ವ ಶುಲ್ಕ | 7,000 | ಕಟ್ಟಡ ಖರೀದಿಸಿದ್ದು | 30,000 |
| ಹೂಡಿಕೆ ಮೇಲಿನ ಬಡ್ಡಿ | 5,000 | 31.3.2015ರಂದು ಕೈಯಲ್ಲಿನ ನಗದು | 1,800 |
| (5% ಪೂರ್ಣ ವರ್ಷಕ್ಕೆ) | | | |
| | **86,800** | | **86,800** |

**ಹೆಚ್ಚುವರಿ ಮಾಹಿತಿ:**

| | 1.4.2014ರಂದು ₹ | 31.3.2015ರಂದು ₹ |
|---|---|---|
| (i) ಮುಂಗಡ ಸ್ವೀಕರಿಸಿದ ವಂತಿಗೆ | 1,000 | 3,200 |
| (ii) ಬಾಕಿ ವಂತಿಗೆ | 2,000 | 3,700 |
| (iii) ಲೇಖನಸಾಮಗ್ರಿ ದಾಸ್ತಾನು | 1,200 | 800 |
| (iv) ಪುಸ್ತಕಗಳು | 13,500 | 16,500 |
| (v) ಪೀಠೋಪಕರಣ | 16,000 | 8,000 |
| (vi) ಬಾಕಿ ಬಾಡಿಗೆ | 1,000 | 2,000 |

(**ಉತ್ತರ:** ಮಿಗತೆ ₹11,100, ಪ್ರಾರಂಭಿಕ ಬಂಡವಾಳ ನಿಧಿ ₹1,37,000, ಅಢಾವೆ ಪತ್ರಿಕೆ ಅಂತಿಮ ಒಟ್ಟು ಮೊತ್ತ ₹1,60,800).

10. ಶಂಕರ್ ಸ್ಪೋರ್ಟ್ಸ್ ಕ್ಲಬ್‌ನ ಮಾರ್ಚ್ 31,2015ಕ್ಕೆ ವರ್ಷಾಂತ್ಯವಾಗುವ ಆಯ-ವ್ಯಯ ಖಾತೆಯನ್ನು ಈ ಕೆಳಗೆ ನೀಡಲಾಗಿದೆ.

**ಖರ್ಚು** **31 ಮಾರ್ಚ್, 2015ರ ವರ್ಷಕ್ಕೆ ಅಂತ್ಯವಾಗುವ ಆಯ-ವ್ಯಯ ಖಾತೆ** **ಜಮಾ**

| ಸ್ವೀಕೃತಿಗಳು | ಮೊತ್ತ ₹ | ಪಾವತಿಗಳು | ಮೊತ್ತ ₹ |
|---|---|---|---|
| ಪ್ರಾರಂಭದ ಕೈಯಲ್ಲಿನ ನಗದು | 2,600 | ಬಾಡಿಗೆ | 18,000 |
| ಪ್ರವೇಶ ಶುಲ್ಕಗಳು | 3,200 | ಕೂಲಿ | 7,000 |
| ಕಟ್ಟಡದ ದೇಣಿಗೆ | 23,000 | ಬಿಲಿಯರ್ಡ್ಸ್ ಟೇಬಲ್ | 14,000 |
| ಭದ್ರತಾ ಕಪಾಟು ಬಾಡಿಗೆ | 1,200 | ಪೀಠೋಪಕರಣ | 10,000 |
| ಅಜೀವ ಸದಸ್ಯತ್ವ ಶುಲ್ಕ | 7,000 | ಬಡ್ಡಿ | 2,000 |
| ಮನರಂಜನೆಯಿಂದ ಲಾಭ | 3,000 | ಅಂಚೆ ಖರ್ಚು | 1,000 |
| ವಂತಿಗೆ | 40,000 | ವೇತನ | 24,000 |
| | | ಕೈಯಲ್ಲಿನ ನಗದು | 4,000 |
| | **80,000** | | **80,000** |

ಈ ಕೆಳಗಿನ ಮಾಹಿತಿಯ ಸಹಾಯದಿಂದ ಆದಾಯ-ವೆಚ್ಚ ಖಾತೆ ಮತ್ತು ಅಢಾವೆ ಪತ್ರಿಕೆ ತಯಾರಿಸಿ:

31 ಮಾರ್ಚ್, 2014ರಂದು ₹1,200 ಮತ್ತು 31 ಮಾರ್ಚ್, 2015ರಂದು ₹2,300 ವಂತಿಗೆ ಬಾಕಿ, ಪ್ರಾರಂಭದ ಅಂಚೆ ಚೀಟಿ ದಾಸ್ತಾನು ₹300 ಮತ್ತು ಅಂತಿಮ ದಾಸ್ತಾನು ₹200 ಬಾಡಿಗೆ ₹1,500 2005ಕ್ಕೆ ಸಂಬಂಧಿಸಿದೆ ಮತ್ತು ₹1,500 ಇನ್ನೂ ಪಾವತಿಸಿರುವುದಿಲ್ಲ.

1 ಏಪ್ರಿಲ್, 2014ರಂದು ₹15,000 ಪೀಠೋಪಕರಣಗಳನ್ನು ಕ್ಲಬ್ ಹೊಂದಿದೆ. 31 ಮಾರ್ಚ್,2015ರಂದು ಪೀಠೋಪಕರಣಗಳನ್ನು ₹22,500ಕ್ಕೆ ಮೌಲ್ಯಮಾಪನ ಮಾಡಿದೆ.

2014ರಲ್ಲಿ ಕ್ಲಬ್ ₹20,000 ಸಾಲ (10% ಪ್ರ.ವ) ತೆಗೆದುಕೊಂಡಿದೆ.

(**ಉತ್ತರ:** ಕೊರತೆ ₹8,100, ಪ್ರಾರಂಭದ ಬಂಡವಾಳ ನಿಧಿ ಕೊರತೆ ₹2,400, ಅಢಾವೆ ಪತ್ರಿಕೆಯ ಅಂತಿಮ ಒಟ್ಟು ಮೊತ್ತ ₹53,500)

11. ಕೆಳಗಿನ ಕಲ್ಚರ್ ಕ್ಲಬ್‌ನ ಆಯ–ವ್ಯಯ ಖಾತೆ ಮತ್ತು ಅಢಾವೆ ಪತ್ರಿಕೆಯಿಂದ 31 ಮಾರ್ಚ್, 2015ಕ್ಕೆ ವರ್ಷಾಂತ್ಯವಾಗುವ ಆದಾಯ–ವೆಚ್ಚ ಖಾತೆ ಮತ್ತು ಅಢಾವೆ ಪತ್ರಿಕೆ ತಯಾರಿಸಿ:

**ಖರ್ಚು 31 ಮಾರ್ಚ್, 2015ರ ವರ್ಷಕ್ಕೆ ಅಂತ್ಯವಾಗುವ ಆಯ–ವ್ಯಯ ಖಾತೆ ಜಮಾ**

| ಸ್ವೀಕೃತಿಗಳು | | ಮೊತ್ತ ₹ | ಪಾವತಿಗಳು | ಮೊತ್ತ ₹. |
|---|---|---|---|---|
| ಪ್ರಾರಂಭಿಕ ನಗದು ಶಿಲ್ಕು | | 12,000 | ಪೀಠೋಪಕರಣ | 4,000 |
| ವಂತಿಗೆಗಳು | | | ದೂರವಾಣಿ ಖರ್ಚುಗಳು | 800 |
| 2013–14 | 2,000 | | ವೇತನ | |
| 2014–15 | 22,000 | 24,000 | 2013–14 | 1,000 |
| ಪ್ರವೇಶ ಶುಲ್ಕಗಳು | | 2,800 | 2014–15 | 4,000 |
| ಭದ್ರತಾ ಕಪಾಟು ಬಾಡಿಗೆ | | 1,000 | ದಿನ ಪತ್ರಿಕೆಗಳು | 700 |
| ಅಜೀವ ಸದಸ್ಯತ್ವ ಶುಲ್ಕ | | 1,200 | ಇತರೆ ಖರ್ಚುಗಳು | 1,000 |
| ಸರ್ಕಾರದ ಅನುದಾನ | | 11,000 | ಡಿಫೆನ್ಸ್ ಬಾಂಡುಗಳು | 18,000 |
| | | | ಭೂಮಿ | 20,000 |
| | | | ಅಂತಿಮ ನಗದು ಶಿಲ್ಕು | 2,500 |
| | | **52,000** | | **52,000** |

**31 ಮಾರ್ಚ್, 2014ರಂದು ಇದ್ದಂತೆ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|
| ಭದ್ರತಾ ಕಪಾಟು ಬಾಡಿಗೆ ಮುಂಗಡ | 200 | ಕೈಯಲ್ಲಿನ ನಗದು | 12,000 |
| ಮುಂಗಡ ಸ್ವೀಕರಿಸಿದ ವಂತಿಗೆ | 1,000 | ಬಾಕಿ ಖರ್ಚುಗಳು | 3,000 |
| ಬಾಕಿ ವೇತನ | 2,000 | ಕಟ್ಟಡ | 35,000 |
| ಸಾಲ | 10,000 | | |
| ಬಂಡವಾಳ ನಿಧಿ | 36,800 | | |
| | **50,000** | | **50,000** |

(**ಉತ್ತರ:** ಮಿಗತೆ ₹31,500, ಅಂತಿಮ ಅಢಾವೆ ಪತ್ರಿಕೆ ಒಟ್ಟು ಮೊತ್ತ ₹80,500)

12. ಕೆಳಗಿನ ಆಯ–ವ್ಯಯ ಖಾತೆಯಿಂದ ಯುನಿಟಿ ಕ್ಲಬ್‌ನ 31 ಮಾರ್ಚ್, 2015ಕ್ಕೆ ವರ್ಷಾಂತ್ಯವಾಗುವ ಅಂತಿಮ ಖಾತೆಗಳನ್ನು ತಯಾರಿಸಿ:

**ಖರ್ಚು 31 ಮಾರ್ಚ್, 2015ರ ವರ್ಷಕ್ಕೆ ಅಂತ್ಯವಾಗುವ ಆಯ-ವ್ಯಯ ಖಾತೆ ಜಮಾ**

| ಸ್ವೀಕೃತಿಗಳು | | ಮೊತ್ತ ₹ | ಪಾವತಿಗಳು | ಮೊತ್ತ ₹. |
|---|---|---|---|---|
| ಹಿಂದಿನಿಂದ ಬಂದ ಶಿಲ್ಕು | | 15,000 | ಪೀಠೋಪಕರಣ | 18,000 |
| ಹಳೆಯ ಪೀಠೋಪಕರಣಗಳ ಮಾರಾಟ | | | ಗ್ರಂಥಾಲಯ ಪುಸ್ತಕಗಳು | 10,000 |
| (ರೂ.6,000 ವೆಚ್ಚ) | | 4,000 | ವೇತನಗಳು | 72,000 |
| ವಂತಿಗೆಗಳು: | | | ಸಾಮಾನ್ಯ ಖರ್ಚುಗಳು | 18,000 |
| 2014–15 | 18,000 | | ವಿದ್ಯುತ್ ಶುಲ್ಕ | 12,000 |
| 2015–16 | 60,000 | | ದಿನ ಪತ್ರಿಕೆಗಳು | 33,800 |
| 2016–17 | 12,000 | 90,000 | ಅಂಚೆ ಖರ್ಚು | 3,000 |
| ಹಳೆ ದಿನ ಪತ್ರಿಕೆಗಳ ಮಾರಾಟ | | 10,800 | ಲೇಖನಸಾಮಗ್ರಿ | 40,000 |
| ಮನರಂಜನೆಯಿಂದ ಲಾಭ | | 44,000 | ಲೆಕ್ಕ ಪರಿಶೋಧನೆ ಶುಲ್ಕ | 8,000 |
| ಬಾಡಿಗೆ | | 84,000 | ಮುಂದುವರಿದ ಶಿಲ್ಕು | 33,000 |
| | | **2,47,800** | | **2,47,800** |

**31 ಮಾರ್ಚ್, 2014ರಂದು ಇದ್ದಂತೆ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|
| ಬಾಕಿ ವೇತನ | 6,000 | ನಗದು | 15,000 |
| ಬಂಡವಾಳ ನಿಧಿ | 6,94,000 | ಬಾಕಿ ವಂತಿಗೆ | 18,000 |
| | | ಗ್ರಂಥಾಲಯ ಪುಸ್ತಕಗಳು | 30,000 |
| | | ಪೀಠೋಪಕರಣ | 37,000 |
| | | ಭೂಮಿ ಮತ್ತು ಕಟ್ಟಡ | 6,00,000 |
| | **7,00,000** | | **7,00,000** |

**ಹೆಚ್ಚುವರಿ ಮಾಹಿತಿ:**

1. ಕ್ಲಬ್ 500 ಸದಸ್ಯರನ್ನು ಹೊಂದಿದ್ದು ಪ್ರತಿಯೊಬ್ಬರು ₹150 ವಾರ್ಷಿಕ ವಂತಿಗೆ ಪಾವತಿಸುತ್ತಿದ್ದಾರೆ.
2. 31.3.2015ರಂದು ವೇತನ ಬಾಕಿ ಮೊತ್ತ ₹1,200 ಮತ್ತು ವೇತನ ಪಾವತಿಯು 2013–14ನೇ ವರ್ಷದ ₹6,000 ಒಳಗೊಂಡಿದೆ.
3. ಭೂಮಿ ಮತ್ತು ಕಟ್ಟಡದ ಮೇಲೆ 5% ಸವಕಳಿ ತೆಗೆಯಿರಿ.

(**ಉತ್ತರ:** ಮಿಗತೆ ₹14,000, ಅಂತಿಮ ಅಢಾವೆ ಪತ್ರಿಕೆ ಒಟ್ಟು ಮೊತ್ತ ₹7,27,000)

13. ಕೆಳಗಿನ ಮಾಹಿತಿಯು ಒಂದು ಕ್ರೀಡಾ ಕ್ಲಬ್‌ಗೆ ಸಂಬಂಧಿಸಿದೆ. ನೀವು ಅವುಗಳನ್ನು ಆದಾಯ-ವೆಚ್ಚ ಖಾತೆ ಮತ್ತು ಅಢಾವೆ ಪತ್ರಿಕೆಯಲ್ಲಿ ತೋರಿಸಬೇಕಾಗಿದೆ.

| ವಿವರಗಳು | ಮೊತ್ತ ₹ |
|---|---|
| 1 ಏಪ್ರಿಲ್ 2015ರಂದು ಕ್ರೀಡಾ ನಿಧಿ | 80,000 |
| ಕ್ರೀಡಾ ನಿಧಿ ಹೂಡಿಕೆಗಳು | 80,000 |
| ಕ್ರೀಡಾ ನಿಧಿ ಹೂಡಿಕೆಗಳ ಮೇಲಿನ ಬಡ್ಡಿ | 8,000 |
| ಕ್ರೀಡಾ ನಿಧಿಗೆ ದೇಣಿಗೆಗಳು | 30,000 |
| ಕ್ರೀಡಾ ಬಹುಮಾನಗಳ ನೀಡಿಕೆ | 16,000 |
| ಕ್ರೀಡಾ ಚಟುವಟಿಕೆಗಳ ಖರ್ಚು | 7,000 |
| ಸಾಮಾನ್ಯ ನಿಧಿ | 2,00,000 |
| ಸಾಮಾನ್ಯ ನಿಧಿ ಹೂಡಿಕೆಗಳು | 2,00,000 |
| ಸಾಮಾನ್ಯ ನಿಧಿ ಹೂಡಿಕೆಗಳ ಮೇಲಿನ ಬಡ್ಡಿ | 20,000 |

14. ಮೈತ್ರಿ ಕ್ರೀಡಾ ಕ್ಲಬ್‌ನ ಆಯ–ವ್ಯಯ ಖಾತೆಯು ₹68,500 ತೋರಿಸುತ್ತಿದ್ದು, ಇದನ್ನು 31 ಮಾರ್ಚ್,2016ರ ವರ್ಷಾಂತ್ಯದಲ್ಲಿ ವಂತಿಗೆಗಳಿಂದ ಸ್ವೀಕರಿಸಿದೆ.

ಹೆಚ್ಚುವರಿ ಮಾಹಿತಿ ಈ ಕೆಳಗಿನಂತಿದೆ:

1. 31 ಮಾರ್ಚ್, 2015ರಂದು ಇದ್ದಂತೆ ವಂತಿಗೆಗಳ ಬಾಕಿ ₹6,500.
2. 31 ಮಾರ್ಚ್, 2015ರಂದು ಇದ್ದಂತೆ ಮುಂಗಡ ಸ್ವೀಕರಿಸಿದ ವಂತಿಗೆಗಳು ₹4,100.
3. 31 ಮಾರ್ಚ್, 2016ರಂದು ಇದ್ದಂತೆ ವಂತಿಗೆಗಳು ಬಾಕಿ ₹5,400.
4. 31 ಮಾರ್ಚ್, 2016ರಂದು ಇದ್ದಂತೆ ಮುಂಗಡ ಸ್ವೀಕರಿಸಿದ ವಂತಿಗೆಗಳು ₹2,500.

ಮೈತ್ರಿ ಕ್ರೀಡಾ ಕ್ಲಬ್‌ನ 31 ಮಾರ್ಚ್, 2016ರಂದು ವರ್ಷಾಂತ್ಯವಾಗುವ ಅಂತಿಮ ಖಾತೆಗಳಲ್ಲಿ ಮೇಲಿನ ಮಾಹಿತಿಯನ್ನು ಹೇಗೆ ತೋರಿಸುತ್ತೀರಿ.

(**ಉತ್ತರ:** 31 ಮಾರ್ಚ್, 2016ರ ವರ್ಷಾಂತ್ಯಕ್ಕೆ ಆದಾಯ–ವೆಚ್ಚದ ಖಾತೆಗೆ ಜಮೆಯಾಗುವ ವಂತಿಗೆಗಳು ₹69,000. 31.3.2016ರಂದು ಇದ್ದಂತೆ ವಂತಿಗೆ ಬಾಕಿ ₹5,400 ಮತ್ತು ಇದನ್ನು 31 ಮಾರ್ಚ್,2016ರಂದು ಇದ್ದಂತೆ ಅಢಾವೆ ಪತ್ರಿಕೆ ಆಸ್ತಿಗಳ ಬದಿಯಲ್ಲಿ ತೋರಿಸಬೇಕು ಮತ್ತು 31 ಮಾರ್ಚ್,2016ರಂದು ಇದ್ದಂತೆ ಅಢಾವೆ ಪತ್ರಿಕೆ ಹೊಣೆಗಾರಿಕೆಗಳ ಬದಿಯಲ್ಲಿ ₹2,500 ಮುಂಗಡ ಸ್ವೀಕರಿಸಿದ ವಂತಿಗೆಗಳನ್ನು ತೋರಿಸಬೇಕು.)

15. ಈ ಕೆಳಗಿನ ಆಯ–ವ್ಯಯ ಖಾತೆಯು ರೋಹತ್‌ಗಿ ಟ್ರಸ್ಟ್ ರವರದ್ದಾಗಿದೆ:

**ಖರ್ಚು** **31 ಡಿಸೆಂಬರ್, 2015ರ ವರ್ಷಕ್ಕೆ ಅಂತ್ಯವಾಗುವ ಆಯ–ವ್ಯಯ ಖಾತೆ** **ಜಮಾ**

| ಸ್ವೀಕೃತಿಗಳು | | | ಮೊತ್ತ ₹ | ಪಾವತಿಗಳು | ಮೊತ್ತ ₹. |
|---|---|---|---|---|---|
| ಕೈಯಲ್ಲಿನ ನಗದು | | | 14,000 | ಬಾಡಿಗೆ | 6,000 |
| ಬ್ಯಾಂಕಿನಲ್ಲಿ ನಗದು | | | 60,000 | ವೇತನ | 12,000 |
| ವಂತಿಗೆಗಳು: | 2014 | 5,000 | | ಅಂಚೆ ಖರ್ಚು | 300 |
| | 2015 | 83,000 | | ವಿದ್ಯುತ್ ಶುಲ್ಕ | 6,000 |
| | 2016 | 3,000 | 91,000 | ಪೀಠೋಪಕರಣ ಖರೀದಿ | 20,000 |
| | | | | ಪುಸ್ತಕಗಳು | 3,000 |

| | | | |
|---|---|---|---|
| ಹೂಡಿಕೆಗಳ ಮಾರಾಟ | 90,000 | ಡಿಫೆನ್ಸ್ ಬಾಂಡ್ | 1,50,000 |
| ಹೂಡಿಕೆ ಮೇಲಿನ ಬಡ್ಡಿ | 2,000 | ವಿದ್ಯಾರ್ಥಿಗಳಿಗೆ ಸಹಾಯ | 22,000 |
| ಪೀಠೋಪಕರಣಗಳ ಮಾರಾಟ | 3,200 | ಕೈಯಲ್ಲಿನ ನಗದು | 10,900 |
| (₹.3,000 ವೆಚ್ಚ) | | ಬ್ಯಾಂಕಿನಲ್ಲಿ ನಗದು | 30,000 |
| | **2,60,200** | | **2,60,200** |

ಈ ಕೆಳಗಿನ ಹೊಂದಾಣಿಕೆಗಳಿಂದ 31 ಡಿಸೆಂಬರ್ 2015ಕ್ಕೆ ವರ್ಷಾಂತ್ಯವಾಗುವ ಆದಾಯ-ವೆಚ್ಚ ಖಾತೆ ಮತ್ತು ಅದೇ ದಿನಾಂಕದಂದು ಅಢಾವೆ ಪತ್ರಿಕೆ ತಯಾರಿಸಿ:

2013ರ ವಂತಿಗೆ ₹7,000 ಇನ್ನೂ ಬಾಕಿ ಇದೆ. ಡಿಫೆನ್ಸ್ ಬಾಂಡ್ ನ ಮೇಲಿನ ಬಡ್ಡಿ ಬಾಕಿ ₹7,000. ₹1,000 ಬಾಡಿಗೆ ಕೊಡಬೇಕಾಗಿದೆ. ಮಾರಾಟವಾದ ಹೂಡಿಕೆಗಳ ಪುಸ್ತಕ ಮೌಲ್ಯ ₹80,000 ಇದ್ದು, ₹30,000 ಹೂಡಿಕೆಗಳು ಇನ್ನೂ ಕೈಯಲ್ಲಿವೆ. 2013ರಲ್ಲಿ ಸ್ವೀಕರಿಸಿದ ವಂತಿಗೆಗಳಲ್ಲಿ ₹400 ಅಜೀವ ಸದಸ್ಯರದ್ದಾಗಿದೆ. 1 ಜನವರಿ 2015ರಂದು ಪೀಠೋಪಕರಣಗಳ ಒಟ್ಟು ಮೌಲ್ಯ ₹12,000. 2014ನೇ ವರ್ಷದ ವೇತನ ಪಾವತಿ ₹2,000.

(**ಉತ್ತರ:** ಮಿಗತೆ ₹59,900, ಅಂತಿಮ ಅಢಾವೆ ಪತ್ರಿಕೆ ಒಟ್ಟು ಮೊತ್ತ ₹2,68,900)

16. 31 ಡಿಸೆಂಬರ್, 2015ಕ್ಕೆ ವರ್ಷಾಂತ್ಯವಾಗುವ ಡೆಲ್ಲಿ ಚಾರಿಟಬಲ್ ಟ್ರಸ್ಟ್‌ನ ನಗದು ಖಾತೆಯಿಂದ ಈ ಕೆಳಗಿನ ಆಯ-ವ್ಯಯ ಖಾತೆಯನ್ನು ತಯಾರಿಸಲಾಗಿದೆ.

**ಖರ್ಚು** **31 ಡಿಸೆಂಬರ್, 2015ರ ವರ್ಷಕ್ಕೆ ಅಂತ್ಯವಾಗುವ ಆಯ-ವ್ಯಯ ಖಾತೆ** **ಜಮಾ**

| ಸ್ವೀಕೃತಿಗಳು | ಮೊತ್ತ ₹ | ಪಾವತಿಗಳು | ಮೊತ್ತ ₹ |
|---|---|---|---|
| ಹಿಂದಿನಿಂದ ಬಂದ ಶಿಲ್ಕು: | | ಧತ್ತಿ | 11,500 |
| ಕೈಯಲ್ಲಿನ ನಗದು | 11,500 | ಬಾಡಿಗೆ ಮತ್ತು ತೆರಿಗೆಗಳು | 3,200 |
| ಬ್ಯಾಂಕಿನಲ್ಲಿ ನಗದು | 12,600 | ವೇತನ | 6,000 |
| ದೇಣಿಗೆ | 9,000 | ಮುದ್ರಣ | 600 |
| ವಂತಿಗೆ | 42,800 | ಅಂಚೆ ಖರ್ಚು | 300 |
| ಮೃತ್ಯುಲೇಖದಾನ | 18,000 | ಜಾಹೀರಾತು | 4,500 |
| ಹೂಡಿಕೆ ಮೇಲಿನ ಬಡ್ಡಿ | 4,500 | ವಿಮೆ | 2,000 |
| ಹಳೆಯ ದಿನ ಪತ್ರಿಕೆಗಳ ಮಾರಾಟ | 200 | ಪೀಠೋಪಕರಣ | 21,600 |
| | | ಹೂಡಿಕೆ | 23,000 |
| | | ಮುಂದುವರಿದ ಶಿಲ್ಕು: | |
| | | ಕೈಯಲ್ಲಿನ ನಗದು | 9,900 |
| | | ಬ್ಯಾಂಕಿನಲ್ಲಿ ನಗದು | 16,000 |
| | 98,600 | | 98,600 |

ಈ ಕೆಳಗಿನ ಹೊಂದಾಣಿಕೆಗಳಿಂದ 31 ಡಿಸೆಂಬರ್, 2015ಕ್ಕೆ ವರ್ಷಾಂತ್ಯವಾಗುವ ಆದಾಯ–ವೆಚ್ಚ ಖಾತೆ ಮತ್ತು ಅದೇ ದಿನಾಂಕದಂದು ಇದ್ದಂತೆ ಅಢಾವೆ ಪತ್ರಿಕೆ ತಯಾರಿಸಿ:

(ಎ) ದೇಣಿಗೆಗಳಿಂದ ಸ್ವೀಕರಿಸಿದ ಮೊತ್ತದ ಮೂರನೇ ಒಂದು ಭಾಗವನ್ನು ಆದಾಯ ಎಂದು ಪರಿಗಣಿಸಲು ತೀರ್ಮಾನಿಸಲಾಗಿದೆ.

(ಬಿ) ಮೂರು ತಿಂಗಳ ವಿಮಾ ಕಂತು ಮುಂಗಡವಾಗಿ ಪಾವತಿಸಿದೆ.

(ಸಿ) ಹೂಡಿಕೆ ಮೇಲಿನ ಬಡ್ಡಿ ₹1,100 ಗಳಿಕೆಯಾಗಿದ್ದು ಸ್ವೀಕರಿಸಿರುವುದಿಲ್ಲ.

(ಡಿ) 31 ಡಿಸೆಂಬರ್, 2015ರಂದು ಇದ್ದಂತೆ ಬಾಡಿಗೆ ₹600, ವೇತನ ₹900 ಮತ್ತು ಜಾಹೀರಾತು ಖರ್ಚು ₹1,000 ಬಾಕಿ ಇದೆ.

(**ಉತ್ತರ:** ಮಿಗತೆ ₹21,500 ಅಂತಿಮ ಅಢಾವೆ ಪತ್ರಿಕೆ ಒಟ್ಟು ಮೊತ್ತ ₹72,100)

16. ಒಂದು ಕ್ಲಬ್‌ನ ಈ ಕೆಳಗಿನ ಆಯ–ವ್ಯಯ ಖಾತೆಯಿಂದ 31 ಡಿಸೆಂಬರ್, 2015ಕ್ಕೆ ವರ್ಷಾಂತ್ಯವಾಗುವ ಆದಾಯ–ವೆಚ್ಚ ಖಾತೆ ಮತ್ತು ಅದೇ ದಿನಾಂಕದಂದು ಇದ್ದಂತೆ ಅಢಾವೆ ಪತ್ರಿಕೆ ತಯಾರಿಸಿ:

**ಖರ್ಚು** **31 ಡಿಸೆಂಬರ್, 2015ರ ವರ್ಷಕ್ಕೆ ಅಂತ್ಯವಾಗುವ ಆಯ–ವ್ಯಯ ಖಾತೆ** **ಜಮಾ**

| ಸ್ವೀಕೃತಿಗಳು | | ಮೊತ್ತ ₹ | ಪಾವತಿಗಳು | ಮೊತ್ತ ₹ |
|---|---|---|---|---|
| ಹಿಂದಿನಿಂದ ಬಂದ ಶಿಲ್ಕು | | 3,500 | ಸಾಮಾನ್ಯ ಖರ್ಚುಗಳು | 900 |
| ವಂತಿಗೆಗಳು: | | | ವೇತನ | 16,000 |
| 2014 | 2,000 | | ಅಂಚೆ ಖರ್ಚು | 1,300 |
| 2015 | 70,000 | | ವಿದ್ಯುತ್ ಶುಲ್ಕ | 7,800 |
| 2016 | 3,000 | 75,000 | ಪೀಠೋಪಕರಣ | 26,500 |
| ಹಳೆ ಪುಸ್ತಕಗಳ ಮಾರಾಟ | | 2,000 | ಪುಸ್ತಕಗಳು | 13,000 |
| (ರೂ.3,200 ವೆಚ್ಚಗಳು) | | | ದಿನ ಪತ್ರಿಕೆಗಳು | 600 |
| ಹಾಲ್ ಉಪಯೋಗದಿಂದ ಬಾಡಿಗೆ | | 17,000 | ಸಭೆಯ ಖರ್ಚುಗಳು | 7,200 |
| ದಿನ ಪತ್ರಿಕೆಗಳ ಮಾರಾಟ | | 400 | ಟಿ.ವಿ. ಉಪಕರಣ | 16,000 |
| ಮನರಂಜನೆಯಿಂದ ಲಾಭ | | 7,300 | ಮುಂದುವರಿದ ಶಿಲ್ಕು | 15,900 |
| | | 1,05,200 | | 1,05,200 |

**ಹೆಚ್ಚುವರಿ ಮಾಹಿತಿ:**

(ಎ) ಕ್ಲಬ್ 100 ಸದಸ್ಯರನ್ನು ಹೊಂದಿದ್ದು ಪ್ರತಿಯೊಬ್ಬರು ₹900 ವಾರ್ಷಿಕ ವಂತಿಗೆ ಪಾವತಿಸುತ್ತಿದ್ದಾರೆ 31 ಡಿಸೆಂಬರ್, 2015 ರಂದು ಬಾಕಿ ವಂತಿಕೆಗಳು ₹3,600

(ಬಿ) 31 ಡಿಸೆಂಬರ್, 2015ರಂದು ವೇತನ ಬಾಕಿ ಮೊತ್ತ ₹1,000 ಮತ್ತು ವೇತನ ಪಾವತಿಯು 2014ನೇ ವರ್ಷದ ₹1,000 ಒಳಗೊಂಡಿದೆ.

(ಸಿ) 1 ಜನವರಿ,2015ರಂದು ₹25,000 ಭೂಮಿ ಮತ್ತು ಕಟ್ಟಡ, ₹2,600 ಪೀಠೋಪಕರಣ ಮತ್ತು ₹6,200 ಪುಸ್ತಕಗಳನ್ನು ಕ್ಲಬ್ ಹೊಂದಿದೆ.

(**ಉತ್ತರ:** ಮಿಗತೆ ₹79,700, ಅಂತಿಮ ಅಢಾವೆ ಪತ್ರಿಕೆ ಒಟ್ಟು ಮೊತ್ತ ₹1,23,800)

18. ಈ ಕೆಳಗಿನ ಆಯ–ವ್ಯಯ ಖಾತೆಯು 31 ಡಿಸೆಂಬರ್,2015ಕ್ಕೆ ವರ್ಷಾಂತ್ಯವಾಗುವ ವುಮೆನ್ಸ್ ವೆಲ್‌ಫೇರ್ ಕ್ಲಬ್‌ನದ್ದಾಗಿದೆ:

**ಖರ್ಚು** **31 ಡಿಸೆಂಬರ್, 2015ರ ವರ್ಷಕ್ಕೆ ಅಂತ್ಯವಾಗುವ ಆಯ–ವ್ಯಯ ಖಾತೆ** **ಜಮಾ**

| ಸ್ವೀಕೃತಿಗಳು | ಮೊತ್ತ ₹ | ಪಾವತಿಗಳು | ಮೊತ್ತ ₹ |
|---|---|---|---|
| ಹಿಂದಿನಿಂದ ಬಂದ ಶಿಲ್ಕು | 7,250 | ವೇತನ | 12,500 |
| ವಂತಿಗೆಗಳು | 81,750 | ಲೇಖನಸಾಮಗ್ರಿ | 1,700 |
| ದೇಣಿಗೆಗಳು | 3,000 | ವಿದ್ಯುತ್ ಶುಲ್ಕ | 9,550 |
| ಸರ್ಕಾರದಿಂದ ಅನುದಾನ | 15,000 | ವಿಮೆ | 7,500 |
| ದಿನ ಪತ್ರಿಕೆಗಳ ಮಾರಾಟ | 300 | ಉಪಕರಣಗಳು | 30,000 |
| ದತ್ತಿ ಪ್ರದರ್ಶನ ಗಳಿಕೆ | 16,500 | ಚಿಲ್ಲರೆ ಖರ್ಚುಗಳು | 500 |
| ಹೂಡಿಕೆಗಳ ಮೇಲಿನ ಬಡ್ಡಿ | 7,000 | ದತ್ತಿ ಪ್ರದರ್ಶನದ ಖರ್ಚುಗಳು | 12,900 |
| @ 10% ಪೂರ್ಣ ವರ್ಷಕ್ಕೆ | | ದಿನ ಪತ್ರಿಕೆಗಳು | 1,000 |
| ಇತರೆ ಆದಾಯ | 400 | ಉಪನ್ಯಾಸಗಳ ಶುಲ್ಕ | 16,500 |
| | | ಕಾರ್ಯದರ್ಶಿಯ ಗೌರವಧನ | 12,000 |
| | | ಮುಂದುವರಿದ ಶಿಲ್ಕು | 27,050 |
| | **1,31,200** | | **1,31,200** |

**ಹೆಚ್ಚುವರಿ ಮಾಹಿತಿ:**

| | 01.01.2015 ₹ | 31.12.2015 ₹ |
|---|---|---|
| ಬಾಕಿ ವೇತನಗಳು | 1,200 | 1,800 |
| ವಿಮೆ ಮುಂಗಡ ಪಾವತಿ | 700 | 300 |
| ವಂತಿಗೆ ಬಾಕಿ | 3,750 | 2,500 |
| ಮುಂಗಡ ಸ್ವೀಕರಿಸಿದ ವಂತಿಕೆ | 1,750 | 1,000 |
| ವಿದ್ಯುತ್ ಶುಲ್ಕ ಬಾಕಿ | — | 1,250 |
| ಲೇಖನಸಾಮಗ್ರಿ ದಾಸ್ತಾನು | 2,250 | 700 |
| ಉಪಕರಣಗಳು | 25,600 | 50,200 |
| ಕಟ್ಟಡ | 1,20,000 | 1,14,000 |

31 ಡಿಸೆಂಬರ್,2015ಕ್ಕೆ ವರ್ಷಾಂತ್ಯವಾಗುವ ಆದಾಯ–ವೆಚ್ಚ ಖಾತೆ ಮತ್ತು ಅದೇ ದಿನಾಂಕದಂದು ಇದ್ದಂತೆ ಅಢಾವೆ ಪತ್ರಿಕೆ ತಯಾರಿಸಿ.

(**ಉತ್ತರ:** ಮಿಗತೆ ₹79,700, ಅಂತಿಮ ಅಢಾವೆ ಪತ್ರಿಕೆ ಒಟ್ಟು ಮೊತ್ತ ₹1,23,800)

19. 31 ಮಾರ್ಚ್,2015ರಂದು ಇದ್ದಂತೆ ಇಂಡಿಯನ್ ಚಾರ್ಟರ್ಡ್ ಅಕೌಂಟೆಟ್ಸ್ ರಿಕ್ರಿಯೆಶನ್ ಕ್ಲಬ್ ರವರ ಪುಸ್ತಕಗಳಿಂದ ಕೆಳಗಿನ ಶಿಲ್ಕುಗಳನ್ನು ತೆಗೆದುಕೊಳ್ಳಲಾಗಿದೆ ಮತ್ತು ಇವುಗಳನ್ನು ತಯಾರಿಸಲು ನಿಮ್ಮನ್ನು ಕೋರಲಾಗಿದೆ:

(1) ಉಪಾಹಾರ ಮತ್ತು ಊಟದ ಕೊಠಡಿ ನಿರ್ವಹಣೆಯಿಂದ ಗಳಿಸಿದ ಒಟ್ಟು ಲಾಭವನ್ನು ಕಂಡುಹಿಡಿಯುವ ವ್ಯಾಪಾರಿ ಖಾತೆ, ಮತ್ತು

(2) 31 ಮಾರ್ಚ್,2015ಕ್ಕೆ ವರ್ಷಾಂತ್ಯವಾಗುವ ಆದಾಯ–ವೆಚ್ಚ ಖಾತೆ, ಮತ್ತು (3) ಅದೇ ದಿನಾಂಕದಂದು ಇದ್ದಂತೆ ಅಢಾವೆ ಪತ್ರಿಕೆ.

| ಖರ್ಚು ಶಿಲ್ಕುಗಳು | ₹ | ಜಮಾ ಶಿಲ್ಕುಗಳು | ₹ |
|---|---|---|---|
| ಕೈಯಲ್ಲಿನ ದಾಸ್ತಾನು | 1,170 | ಊಟದ ಕೊಠಡಿಯ ಸ್ವೀಕೃತಿಗಳು | 87,660 |
| ಖರೀದಿಗಳು | 24,660 | ವಂತಿಗೆಗಳು | 9,450 |
| ಊಟದ ಕೊಠಡಿ | 32,370 | ಬಿಲ್ಲಿಯರ್ಡ್ಸ್ ನ ಸ್ವೀಕೃತಿಗಳು | 7,300 |
| ಬಾಡಿಗೆ | 10,470 | ವಿವಿಧ ಸ್ವೀಕೃತಿಗಳು | 410 |
| ಕೂಲಿಗಳು | 18,690 | ಸ್ಥಿರ ಠೇವಣಿ ಮೇಲಿನ ಬಡ್ಡಿ | 270 |
| ದುರಸ್ತಿ ಮತ್ತು ನವೀಕರಣಗಳು | 5,400 | ವಿವಿಧ ಧಣಿಗಳು | 5,310 |
| ಇಂಧನ ಮತ್ತು ಬೆಳಕು | 5,280 | ಸಂಸ್ಥೆಯಿಂದ ಅನುದಾನ (ಶಾಶ್ವತ) | 42,000 |
| ಇತರೆ ಖರ್ಚುಗಳು | 4,050 | ಆದಾಯ–ವೆಚ್ಚ ಖಾತೆ (1.4.2014) | 1,380 |
| ಕೈಯಲ್ಲಿನ ನಗದು | 560 | | |
| ಬ್ಯಾಂಕಿನಲ್ಲಿ ನಗದು | 2,760 | | |
| ಸ್ಥಿರ ಠೇವಣಿ | 8,500 | | |
| ವಿವಿಧ ಋಣಿಗಳು | 2,250 | | |
| ಚೀನಾ ಗ್ಲಾಸ್, ಕಟ್ಲರಿ ಮತ್ತು ಲಿನೆನ್(ನಾರು) | 600 | | |
| ಬಿಲ್ಲಿಯರ್ಡ್ಸ್ ಟೇಬಲ್ | 2,070 | | |
| ಸ್ಥಿರೀಕರಣಗಳು ಮತ್ತು ಅಳವಡಿಕೆಗಳು | 870 | | |
| ಪೀಠೋಪಕರಣ | 4,140 | | |
| ಕ್ಲಬ್ ಆವರಣ | 30,000 | | |
| | **1,53,840** | | **1,53,840** |

31.3.2015ರಂದು ಉಪಾಹಾರ ಗೃಹದ ದಾಸ್ತಾನು ₹900 ಮತ್ತು ₹60 ಕ್ರಮವಾಗಿ ಹೊಂದಿದೆ. ಸ್ಥಿರೀಕರಣಗಳು ಮತ್ತು ಅಳವಡಿಕೆಗಳ ಮೇಲೆ ₹60, ಮತ್ತು ಬಿಲ್ಲಿಯರ್ಡ್ಸ್ ಟೇಬಲ್ ಮೇಲೆ ₹390 ಮತ್ತು ಪೀಠೋಪಕರಣ ಮೇಲೆ ₹560 ಸವಕಳಿ ತೆಗೆಯಿರಿ.

(**ಉತ್ತರ:** ವೆಚ್ಚ ಮೀರಿದ ಆದಾಯ ₹2,950, ಆಢಾವೆ ಪತ್ರಿಕೆ ಒಟ್ಟು ಮೊತ್ತ ₹51,700)

## ನಿಮ್ಮ ತಿಳಿವಳಿಕೆಯ ಪರೀಕ್ಷೆಗೆ ಪರಿಶೀಲನೆ– ಪಟ್ಟಿ

**ನಿಮ್ಮ ತಿಳುವಳಿಕೆಯ ಪರೀಕ್ಷೆ – I**

**ಉತ್ತರ: ಸರಿ:** (3) (6) (7) (10); **ತಪ್ಪು:** (1) (2) (4) (5) (8) (9).

**ನಿಮ್ಮ ತಿಳುವಳಿಕೆಯ ಪರೀಕ್ಷೆ – II**

1. ನಿಶ್ಚಿತ ಪಂದ್ಯಾವಳಿ ನಿಧಿ ಇದ್ದಾಗ, ಲೆಕ್ಕಬರಹದ ಪರಿಗಣನೆಯು ಈ ಕೆಳಗಿನಂತೆ ಇರುತ್ತದೆ:

| ಆಢಾವೆ ಪತ್ರಿಕೆಯ ಹೊಣೆಗಾರಿಕೆಗಳ ಬದಿ | ಮೊತ್ತ ₹ |
|---|---|
| ಪಂದ್ಯಾವಳಿ ನಿಧಿ | 40,000 |
| ಕೂಡಿಸಿ: ಪಂದ್ಯಾವಳಿಯ ಸ್ವೀಕೃತಿಗಳು | 16,000 |
| | 56,000 |
| ಕಳೆಯಿರಿ: ಪಂದ್ಯಾವಳಿಯ ಖರ್ಚುಗಳು | 14,000 |
| ಅಢಾವೆ ಪತ್ರಿಕೆಯ ಹೊಣೆಗಾರಿಕೆ ಬದಿಯಲ್ಲಿ ಉಳಿಯುವ ಶಿಲ್ಕು | 42,000 |

2. ನಿಶ್ಚಿತ ನಿಧಿ ಇರುವುದಿಲ್ಲ. ಹಾಗಾಗಿ ₹4,000 ಟೇಬಲ್ ಟೆನ್ನಿಸ್‌ಗೆ ಮಾಡಿದ ಖರ್ಚುಗಳನ್ನು ಆದಾಯ–ವೆಚ್ಚ ಖಾತೆಯ ಖರ್ಚು ಬದಿಯಲ್ಲಿ ತೋರಿಸಬಹುದಾಗಿದೆ. ಇದು ಯಾವುದೇ ನಿಶ್ಚಿತ ನಿಧಿಯ ಸ್ವತಂತ್ರ ಖರ್ಚುಗಳ ಪ್ರಕರಣವಾಗಿದೆ.

3. ನಿಶ್ಚಿತ ನಿಧಿ ಇದೆ. ಲೆಕ್ಕಬರಹದ ಪರಿಗಣನೆಯು ಈ ಕೆಳಗಿನಂತೆ ಇರುತ್ತದೆ:

| ಅಢಾವೆ ಪತ್ರಿಕೆ ಹೊಣೆಗಾರಿಕೆಗಳ ಬದಿ | ಮೊತ್ತ ₹ |
|---|---|
| ಬಹುಮಾನ ನಿಧಿ | 22,000 |
| ಕೂಡಿಸಿ: ಬಡ್ಡಿ | 3,000 |
| | 25,000 |
| ಕಳೆಯಿರಿ: ಬಹುಮಾನಗಳ ನೀಡಿಕೆ | 5,000 |
| ಅಢಾವೆ ಪತ್ರಿಕೆಯ ಹೊಣೆಗಾರಿಕೆ ಬದಿಯಲ್ಲಿ ಉಳಿಯುವ ಶಿಲ್ಕು | 20,000 |
| ಅಢಾವೆ ಪತ್ರಿಕೆಯ ಆಸ್ತಿ ಬದಿಯಲ್ಲಿ ಬಹುಮಾನ ನಿಧಿ ಹೂಡಿಕೆ | 18,000 |

4. ನಿಶ್ಚಿತ ನಿಧಿ ಇರುವುದಿಲ್ಲ. ದತ್ತಿ ಪ್ರದರ್ಶನದ ಸ್ವೀಕೃತಿಗಳಿಂದ ದತ್ತಿ ಪ್ರದರ್ಶನದ ಖರ್ಚುಗಳನ್ನು ಕಳೆದು, ನಿವ್ವಳ ಮೊತ್ತವನ್ನು ಆದಾಯ–ವೆಚ್ಚ ಖಾತೆಯ ಜಮೆ ಬದಿಯಲ್ಲಿ ತೋರಿಸಬಹುದು.

* * *

# ಪಾಲುದಾರಿಕೆಯ ಲೆಕ್ಕಬರಹ : ಮೂಲ ಪರಿಕಲ್ಪನೆಗಳು
# Accounting for Partnership: Basic Concepts

**2**

**ಕಲಿಕಾ ಉದ್ದೇಶಗಳು**
**(Learning Objectives)**

**ಈ ಅಧ್ಯಾಯವನ್ನು ಅಭ್ಯಸಿಸಿದ ನಂತರ ನೀವು ಏನನ್ನು ತಿಳಿಯುತ್ತೀರೆಂದರೆ:**

- ಪಾಲುದಾರಿಕೆಯ ವ್ಯಾಖ್ಯೆ ಮತ್ತು ಅದರ ಅವಶ್ಯಕ ಲಕ್ಷಣಗಳ ಪಟ್ಟಿ ಮಾಡುವುದು;
- ಪಾಲುದಾರಿಕೆ ಒಪ್ಪಂದದ ಅರ್ಥವಿವರಣೆ ಮತ್ತು ಒಳಗೊಂಡ ಅಂಶಗಳನ್ನು ಪಟ್ಟಿ ಮಾಡುವುದು.
- 1932 ರ ಭಾರತೀಯ ಪಾಲುದಾರಿಕೆ ಕಾಯ್ದೆಯಲ್ಲಿ ಲೆಕ್ಕ ಬರಹಕ್ಕೆ ಸಂಬಂಧಿತ ಉಪಬಂಧಗಳನ್ನು ಗುರುತಿಸುವುದು;
- ಸ್ಥಿರ ಮತ್ತು ಬದಲಾಗುವ ಬಂಡವಾಳ ವಿಧಾನಗಳಲ್ಲಿ ಪಾಲುದಾರರ ಬಂಡವಾಳ ಖಾತೆಗಳನ್ನು ತಯಾರಿಸುವುದು;
- ಪಾಲುದಾರರ ಮಧ್ಯ ಲಾಭ ಅಥವಾ ನಷ್ಟ ಹಂಚಿಕೆಯ ವಿವರಣೆ ಹಾಗೂ ಲಾಭ ಮತ್ತು ನಷ್ಟ ಹಂಚಿಕೆ ಖಾತೆಯನ್ನು ತಯಾರಿಸುವುದು;
- ವಿವಿಧ ಸನ್ನಿವೇಶಗಳಲ್ಲಿ ಬಂಡವಾಳ ಮತ್ತು ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿ ಲೆಕ್ಕಚಾರ ಮಾಡುವುದು;
- ಪಾಲುದಾರರ ಲಾಭ ಹಂಚಿಕೆಯ ಮೇಲೆ ಕನಿಷ್ಟ ಮೊತ್ತದ ಲಾಭ ಖಾತರಿಯ ಪರಿಣಾಮದ ಬಗ್ಗೆ ವಿವರಣೆ;
- ಪಾಲುದಾರರ ಬಂಡವಾಳ ಖಾತೆಗಳಲ್ಲಾದ ಹಿಂದಿನ ತಪ್ಪುಗಳನ್ನು ಸರಿಪಡಿಸಲು ಅವಶ್ಯಕ ಹೊಂದಾಣಿಕೆಗಳನ್ನು ಮಾಡುವುದು;
- ಪಾಲುದಾರಿಕೆ ಸಂಸ್ಥೆಯ ಅಂತಿಮ ಖಾತೆಗಳನ್ನು ತಯಾರಿಸುವುದು;

ಏಕವ್ಯಕ್ತಿ ವ್ಯಾಪಾರಿ ಸಂಸ್ಥೆಯ ಅಂತಿಮ ಖಾತೆಗಳನ್ನು ತಯಾರಿಸುವುದರ ಬಗ್ಗೆ ಈಗಾಗಲೇ ನೀವು ತಿಳಿದುಕೊಂಡಿದ್ದೀರಿ. ವ್ಯವಹಾರವು ವಿಸ್ತಾರವಾದಂತೆ ಅಧಿಕ ಬಂಡವಾಳ ಮತ್ತು ವ್ಯವಹಾರದ ನಿರ್ವಹಣೆ ಹಾಗೂ ನಷ್ಟ ಭಯ ಹಂಚಿಕೊಳ್ಳಲು ಅಧಿಕ ಸಂಖ್ಯೆಯ ಜನರು ಬೇಕಾಗುತ್ತಾರೆ. ಇಂತಹ ಸಂದರ್ಭದಲ್ಲಿ ಸಾಮಾನ್ಯವಾಗಿ ಪಾಲುದಾರಿಕೆ ಸ್ವರೂಪದ ಸಂಘಟನೆಯನ್ನು ಅಳವಡಿಸಿಕೊಳ್ಳುತ್ತಾರೆ. ವ್ಯವಹಾರದ ಸ್ಥಾಪನೆ ಮತ್ತು ಅದರ ಲಾಭವನ್ನು ಹಂಚಿಕೊಳ್ಳಲು ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳು ಒಂದುಗೂಡಿದ ಪಾಲುದಾರಿಕೆ ಸಂಸ್ಥೆಯು ಅಸ್ತಿತ್ವಕ್ಕೆ ಬರುತ್ತದೆ. ಪಾಲುದಾರಿಕೆ ಸಂಸ್ಥೆಯ ಲೆಕ್ಕಬರಹವು ತನ್ನದೇ ಆದ ವಿಶೇಷತೆಯನ್ನು ಹೊಂದಿದೆ. ಪಾಲುದಾರರ ನಡುವೆ ಯಾವುದೇ ನಿರ್ದಿಷ್ಟ ಒಪ್ಪಂದ ಇಲ್ಲದಿರುವಾಗ ಲಾಭ ಹಂಚಿಕೆಯಲ್ಲಿ ಹಲವಾರು ಗೊಂದಲಗಳು, ವಿವಾದಗಳು ಉದ್ಭವಿಸುತ್ತವೆ. ಇಂತಹ ಸಂದರ್ಭದಲ್ಲಿ 1932 ರ ಭಾರತೀಯ ಪಾಲುದಾರಿಕೆ ಕಾಯ್ದೆಯ ಉಪಬಂಧಗಳು ಅನ್ವಯಿಸುತ್ತವೆ. ಅದೇ ರೀತಿಯಾಗಿ ಬಂಡವಾಳದ ಮೇಲಿನ ಬಡ್ಡಿ, ಸ್ವಂತಕ್ಕೆ ಹಿಂಪಡೆದ ಮೊತ್ತದ ಮೇಲಿನ ಬಡ್ಡಿಯ ಲೆಕ್ಕಾಚಾರ ಹಾಗೂ ಪಾಲುದಾರರ ಬಂಡವಾಳ ಖಾತೆಗಳ ನಿರ್ವಹಣೆಯು ತಮ್ಮದೇ ಆದ ವಿಶೇಷತೆಯನ್ನು ಹೊಂದಿವೆ. ಒಬ್ಬ ಪಾಲುದಾರ ನಿಧನ ಹೊಂದಿದಾಗ ಅಥವಾ ಪಾಲುದಾರನ ಪ್ರವೇಶ ಪಡೆದಂತಹ ವಿಶೇಷ ಸಂದರ್ಭಗಳಲ್ಲಿ ವಿವಿಧ ಹೊಂದಾಣಿಕೆಗಳ ಅವಶ್ಯಕತೆಯಷ್ಟೇ ಅಲ್ಲದೆ, ಲೆಕ್ಕಬರಹದಲ್ಲಿನ ಕೆಲವು ಹೊಂದಾಣಿಕೆಗಳಿಗೆ ಸ್ಪಷ್ಟೀಕರಣವೂ ಬೇಕಾಗುತ್ತದೆ.

ಈ ಅಧ್ಯಾಯದಲ್ಲಿ ಪಾಲುದಾರಿಕೆಯ ಮೂಲ ಅಂಶಗಳಾದ ಲಾಭದ ಹಂಚಿಕೆ, ಬಂಡವಾಳ ಖಾತೆಗಳ ನಿರ್ವಹಣೆ, ಮುಂತಾದವುಗಳನ್ನು ಚರ್ಚಿಸಲಾಗಿದೆ. ಪಾಲುದಾರರ ಪ್ರವೇಶ, ನಿವೃತ್ತಿ, ನಿಧನ ಮತ್ತು ವಿಸರ್ಜನೆಗಳಂತಹ ಸನ್ನಿವೇಶಗಳ ಪರಿಗಣನೆಯನ್ನು ಮುಂದಿನ ಅಧ್ಯಾಯಗಳಲ್ಲಿ ನೀಡಲಾಗಿದೆ.

## 2.1. ಪಾಲುದಾರಿಕೆಯ ಸ್ವರೂಪ: Nature of Partnership

ಇಬ್ಬರು ಅಥವಾ ಹೆಚ್ಚಿನ ವ್ಯಕ್ತಿಗಳು ಒಂದು ಸಂಸ್ಥೆಯನ್ನು ರಚಿಸಿ, ಅದರ ಲಾಭ ಮತ್ತು ನಷ್ಟವನ್ನು ಹಂಚಿಕೊಳ್ಳಲು ಒಂದುಗೂಡಿದಾಗ ಅದನ್ನು ಪಾಲುದಾರಿಕೆ ಎಂದು ಕರೆಯುವರು. 1932 ರ ಭಾರತೀಯ ಪಾಲುದಾರಿಕೆ ಕಾಯ್ದೆಯ ಪರಿಚ್ಛೇದ 4 ರನ್ವಯ ಪಾಲುದಾರಿಕೆಯನ್ನು ಹೀಗೆ ವ್ಯಾಖ್ಯಾನಿಸಲಾಗಿದೆ.

"ಎಲ್ಲರೂ ಸೇರಿ ಅಥವಾ ಅವರಲ್ಲಿ ಎಲ್ಲರ ಪರವಾಗಿ ಒಬ್ಬರು ನಿರ್ವಹಿಸುತ್ತಿರುವ, ವ್ಯವಹಾರದ ಲಾಭವನ್ನು ಹಂಚಿಕೊಳ್ಳಲು ಒಪ್ಪಿಕೊಂಡಿರುವ ವ್ಯಕ್ತಿಗಳ ನಡುವಿನ ಸಂಬಂಧವಾಗಿದೆ."

ಪಾಲುದಾರಿಕೆಯಲ್ಲಿ ಪ್ರವೇಶ ಪಡೆಯುವ ವ್ಯಕ್ತಿಗಳನ್ನು ವೈಯಕ್ತಿಕವಾಗಿ 'ಪಾಲುದಾರರು' ಎಂದು ಮತ್ತು ಸಾಮೂಹಿಕವಾಗಿ 'ಸಂಸ್ಥೆ' ಎಂದು ಕರೆಯಲಾಗುತ್ತದೆ. ವ್ಯವಹಾರವು ಯಾವ ಹೆಸರಿನ ಮೇಲೆ ನಡೆಸಲಾಗುತ್ತದೆಯೋ ಅದನ್ನು 'ಸಂಸ್ಥೆಯ ಹೆಸರು' ಎಂದು ಕರೆಯಲಾಗುತ್ತದೆ. ಪಾಲುದಾರಿಕೆ ಸಂಸ್ಥೆಯನ್ನು ಸ್ಥಾಪಿಸಿದ ಪಾಲುದಾರರ ಹೊರತಾಗಿ ಪಾಲುದಾರಿಕೆ ಸಂಸ್ಥೆಯು ಪ್ರತ್ಯೇಕ ಕಾನೂನಿನ ಅಸ್ತಿತ್ವವನ್ನು ಹೊಂದಿರುವುದಿಲ್ಲ. ಪಾಲುದಾರಿಕೆಯ ಅವಶ್ಯಕ ಲಕ್ಷಣಗಳು ಈ ಕೆಳಗಿನಂತಿವೆ.

1. **ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳು:** ಒಂದು ಸಾಮಾನ್ಯ ಉದ್ದೇಶಕ್ಕಾಗಿ ಪಾಲುದಾರಿಕೆಯನ್ನು ರಚಿಸಲು ಕನಿಷ್ಟ ಪಕ್ಷ ಇಬ್ಬರು ವ್ಯಕ್ತಿಗಳು ಒಂದುಗೂಡಬೇಕಾಗುತ್ತದೆ. ಅಂದರೆ, ಸಂಸ್ಥೆಯಲ್ಲಿ ಕನಿಷ್ಟ ಪಾಲುದಾರರ ಸಂಖ್ಯೆ ಎರಡು ಇರಬೇಕು. ಆದರೆ ಗರಿಷ್ಟ ಸಂಖ್ಯೆಯ ಮೇಲೆ ನಿರ್ಬಂಧವಿದೆ. ಹಾಗೆಯೇ ಅದು ಬ್ಯಾಂಕಿಂಗ್ ವ್ಯವಹಾರದಲ್ಲಿ ತೊಡಗಿದ್ದರೆ, ಗರಿಷ್ಟ 10 ಪಾಲುದಾರರನ್ನು, ಇತರೆ ಯಾವುದೇ ವ್ಯವಹಾರವಾಗಿದ್ದರೆ ಗರಿಷ್ಟ 20 ಪಾಲುದಾರರನ್ನು ಹೊಂದಿರಬಹುದು.

2. **ಒಪ್ಪಂದ:** ಪಾಲುದಾರಿಕೆಯು ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳು ನಡೆಸುವ ವ್ಯವಹಾರದ ಮತ್ತು ಅದರ ಲಾಭ ಮತ್ತು ನಷ್ಟವನ್ನು ಹಂಚಿಕೊಳ್ಳುವ ಕರಾರಿನ ಫಲಶೃತಿಯಾಗಿದೆ. ಪಾಲುದಾರರ ನಡುವಿನ ಸಂಬಂಧಕ್ಕೆ ಈ ಕರಾರು ಆಧಾರವಾಗಿರುತ್ತದೆ. ಇಂತಹ ಕರಾರು ಲಿಖಿತ ಸ್ವರೂಪದಲ್ಲಿರಬೇಕಾದ ಅವಶ್ಯಕತೆಯಿಲ್ಲ, ಮೌಖಿಕ ಕರಾರೂ ಸಹ ಅಷ್ಟೇ ಮಾನ್ಯತೆ ಹೊಂದಿದೆ. ಆದರೆ, ವಿವಾದಗಳನ್ನು ತಪ್ಪಿಸುವ ದೃಷ್ಟಿಯಿಂದ ಪಾಲುದಾರರು ಲಿಖಿತ ಕರಾರುಗಳನ್ನು ಅಳವಡಿಸಿಕೊಳ್ಳಲು ಆದ್ಯತೆ ನೀಡುತ್ತಾರೆ.

3. **ವ್ಯವಹಾರ:** ಒಪ್ಪಂದವು ಯಾವುದಾದರೊಂದು ವ್ಯವಹಾರ ನಡೆಸಿಕೊಂಡು ಹೋಗುವುದಕ್ಕಾಗಿಯೇ ಆಗಿರಬೇಕು. ಕೇವಲ ಆಸ್ತಿಯ ಮಾಲಿಕತ್ವವನ್ನು ಪಾಲುದಾರಿಕೆ ಎಂದು ಪರಿಗಣಿಸಲಾಗುವುದಿಲ್ಲ. ಉದಾಹರಣೆಗೆ: ರೋಹಿತ್ ಮತ್ತು ಸಚಿನ್ ಜಂಟಿಯಾಗಿ ಒಂದು ನಿವೇಶನ ಖರೀದಿಸಿದರೆ, ಅವರು ಆ ಆಸ್ತಿಯ ಜಂಟಿ ಮಾಲಿಕರಾಗುತ್ತಾರೆಯೇ ಹೊರತು ಪಾಲುದಾರರಾಗುವುದಿಲ್ಲ. ಆದರೆ, ಅವರು ಲಾಭ ಮಾಡುವ ಉದ್ದೇಶದಿಂದ ಭೂಮಿಯನ್ನು ಖರೀದಿ ಮತ್ತು ಮಾರಾಟ ಮಾಡುವ ವ್ಯವಹಾರದಲ್ಲಿ ತೊಡಗಿದ್ದರೆ ಅವರನ್ನು ಪಾಲುದಾರರೆಂದು ಪರಿಗಣಿಸಲಾಗುತ್ತದೆ.

4. **ಪರಸ್ಪರ ಪ್ರತಿನಿಧಿತ್ವ:** ಪಾಲುದಾರಿಕೆ ಸಂಸ್ಥೆಯ ವ್ಯವಹಾರವನ್ನು ಎಲ್ಲಾ ಪಾಲುದಾರರು ಅಥವಾ ಅವರಲ್ಲಿ ಎಲ್ಲರ ಪರವಾಗಿ ಒಬ್ಬರು ನಡೆಸಿಕೊಂಡು ಹೋಗಬಹುದು. ಈ ಹೇಳಿಕೆಯು ಎರಡು ಪ್ರಮುಖ ಪರಿಣಾಮಗಳನ್ನು ಒಳಗೊಂಡಿದೆ. ಮೊದಲನೆಯದಾಗಿ, ಇದರ ವ್ಯವಹಾರದ ನೀತಿ–ನಿರೂಪಣೆಯಲ್ಲಿ ಭಾಗವಹಿಸಲು ಪ್ರತಿಯೊಬ್ಬ ಪಾಲುದಾರನೂ ಹಕ್ಕುಳ್ಳವನಾಗಿರುತ್ತಾನೆ. ಎರಡನೆಯದಾಗಿ, ಪಾಲುದಾರರ ನಡುವೆ ಪರಸ್ಪರ ಪ್ರತಿನಿಧಿತ್ವ ಸಂಬಂಧ ಅಸ್ತಿತ್ವದಲ್ಲಿರುತ್ತದೆ. ವ್ಯವಹಾರದ ನಿರ್ವಹಣೆಯಲ್ಲಿ ಪ್ರತಿ ಪಾಲುದಾರನು ಮುಖ್ಯಸ್ಥನಾಗಿಯೂ ಹಾಗೂ ಇತರ ಪಾಲುದಾರರಿಗೆ ಪ್ರತಿನಿಧಿಯಾಗಿಯೂ ಇರುತ್ತಾನೆ. ಸಂಸ್ಥೆಯ ವ್ಯವಹಾರಕ್ಕೆ ಸಂಬಂಧಿಸಿದಂತೆ ಅವನು ತನ್ನ ಕಾರ್ಯಗಳಿಂದ ಇತರರನ್ನು ನಿರ್ಬಂಧಿಸುತ್ತಾನೆ. ಅದೇ ರೀತಿ, ತಾನು ಇತರರ ಕಾರ್ಯಗಳಿಂದ ನಿರ್ಬಂಧಕ್ಕೆ ಒಳಪಡುತ್ತಾನೆ. ಪರಸ್ಪರ ಪ್ರತಿನಿಧಿತ್ವ ಅಂಶ ಇಲ್ಲದಿದ್ದಲ್ಲಿ ಪಾಲುದಾರಿಕೆಯೇ ಇಲ್ಲವೆಂದು ಹೇಳಬಹುದಾಗಿದೆ.

5. **ಲಾಭದ ಹಂಚಿಕೆ:** ಪಾಲುದಾರಿಕೆಯ ಇನ್ನೊಂದು ಪ್ರಮುಖ ಅಂಶವೆಂದರೆ, ಪಾಲುದಾರರ ನಡುವಿನ ಒಪ್ಪಂದದನ್ವಯ ವ್ಯವಹಾರದ ಲಾಭ ಮತ್ತು ನಷ್ಟಗಳನ್ನು ಪಾಲುದಾರರ ನಡುವೆ ಹಂಚಿಕೆ ಮಾಡಲೇಬೇಕು. ಪಾಲುದಾರಿಕೆ ಕಾಯ್ದೆಯನ್ವಯ ಪಾಲುದಾರಿಕೆಯು ವ್ಯಾಖ್ಯಾನಿಸಲಾಗಿದ್ದರೂ ವ್ಯವಹಾರದಿಂದ ಬಂದ ಲಾಭವನ್ನು ಹಂಚಿಕೊಳ್ಳಲು ಒಪ್ಪಿಕೊಂಡಿರುವ ಜನರ ನಡುವಿನ ಸಂಬಂಧವೆಂದು ವಿವರಿಸಲಾಗಿದ್ದರೂ ನಷ್ಟದ ಹಂಚಿಕೆಯನ್ನೂ ಕೂಡ ಒಳಗೊಂಡಿದೆ. ಹೀಗೆ ಲಾಭ ಮತ್ತು ನಷ್ಟದ ಹಂಚಿಕೆಯು ಪ್ರಮುಖವಾಗಿದೆ. ಒಂದು ವೇಳೆ, ಕೆಲ ವ್ಯಕ್ತಿಗಳು ಧರ್ಮಾರ್ಥ(ದತ್ತಿ) ಚಟುವಟಿಕೆಗಳಿಗಾಗಿ ಒಂದುಗೂಡಿದರೆ ಅದನ್ನು ಪಾಲುದಾರಿಕೆ ಎಂದು ಪರಿಗಣಿಸಲಾಗುವುದಿಲ್ಲ.

6. **ಪಾಲುದಾರರ ಹೊಣೆಗಾರಿಕೆ:** ಪ್ರತಿ ಪಾಲುದಾರನು ತಾನು ಪಾಲುದಾರನಾಗಿದ್ದಾಗ ಸಂಸ್ಥೆಯ ಎಲ್ಲಾ ಕಾರ್ಯಗಳಿಗೆ ಉಳಿದೆಲ್ಲಾ ಪಾಲುದಾರರೊಂದಿಗೆ ಜಂಟಿಯಾಗಿಯೂ ಹಾಗೂ ಮೂರನೆಯ ವ್ಯಕ್ತಿಗಳಿಗೆ ವೈಯಕ್ತಿಕವಾಗಿಯೂ

ಜವಾಬ್ದಾರನಾಗಿರುತ್ತಾನೆ. ಅದಲ್ಲದೆ, ಪಾಲುದಾರನ ಹೊಣೆಗಾರಿಕೆಯು ಸಂಸ್ಥೆಯ ಕಾರ್ಯಗಳಿಗೆ ಅನಿಯಮಿತವಾಗಿರುತ್ತದೆ. ಇದು ಸಂಸ್ಥೆಯ ಸಾಲಗಳನ್ನು ತೀರಿಸಲು ಪಾಲುದಾರನ ಖಾಸಗಿ ಆಸ್ತಿಗಳನ್ನೂ ಸಹ ಬಳಸಬಹುದೆಂಬುದನ್ನು ಸೂಚಿಸುತ್ತದೆ.

## 2.2. ಪಾಲುದಾರಿಕೆಯ ಕರಾರು ಪತ್ರ: Partnership Deed

ಪಾಲುದಾರಿಕೆಯು ಪಾಲುದಾರರಲ್ಲಾದ ಕರಾರಿನ ಮೂಲಕ ಅಸ್ತಿತ್ವದಲ್ಲಿ ಬರುತ್ತದೆ. ಈ ಕರಾರು ಮೌಖಿಕವಾಗಿರಬಹುದು, ಇಲ್ಲವೇ ಲಿಖಿತ ಸ್ವರೂಪದಲ್ಲಿರಬಹುದು. ಪಾಲುದಾರಿಕೆ ಕಾಯ್ದೆಯನ್ವಯ ಕರಾರು ಲಿಖಿತ ಸ್ವರೂಪದಲ್ಲಿರಬೇಕಾದ ಅಗತ್ಯತೆ ಇಲ್ಲ. ಆದರೆ, ಕರಾರಿನಲ್ಲಿ ಅಡಕವಾಗಿರುವ ಅಂಶಗಳು ಲಿಖಿತ ಸ್ವರೂಪದಲ್ಲಿದ್ದರೆ ಅಂತಹ ದಾಖಲೆಯನ್ನು ಪಾಲುದಾರಿಕೆ ಕರಾರು ಪತ್ರವೆಂದು ಕರೆಯುತ್ತಾರೆ. ಇದು ಸಾಮಾನ್ಯವಾಗಿ ಪಾಲುಗಾರರ ನಡುವಿನ ಸಂಬಂಧದ ಮೇಲೆ ಪರಿಣಾಮ ಬೀರುವಂತಹ ವ್ಯವಹಾರದ ಉದ್ದೇಶಗಳನ್ನೂ ಒಳಗೊಂಡಂತೆ ಎಲ್ಲಾ ಅಂಶಗಳ ವಿವರಣೆ, ಪ್ರತಿಯೊಬ್ಬ ಪಾಲುದಾರರ ಬಂಡವಾಳದ ಕೊಡುಗೆ ಪಾಲುದಾರರು ಹಂಚಿಕೊಳ್ಳಬಹುದಾದ ಲಾಭ ಮತ್ತು ನಷ್ಟದ ಅನುಪಾತ, ಪಾಲುದಾರರಿಗೆ ಬರಬೇಕಾದ ಬಂಡವಾಳದ ಮೇಲಿನ ಬಡ್ಡಿ ಮತ್ತು ಸಾಲದ ಮೇಲಿನ ಬಡ್ಡಿ, ಇತ್ಯಾದಿಗಳನ್ನು ಒಳಗೊಂಡಿರುತ್ತದೆ.

ಕರಾರು ಪತ್ರದ ಕಲಮುಗಳನ್ನು ಎಲ್ಲಾ ಪಾಲುದಾರರ ಸಮ್ಮತಿಯೊಂದಿಗೆ ಬದಲಾವಣೆ ಮಾಡಬಹುದಾಗಿದೆ. ಕರಾರು ಪತ್ರದ ಕರಡು ಯೋಗ್ಯ ರೀತಿಯಲ್ಲಿರಬೇಕು ಮತ್ತು ಮುದ್ರಾಂಕ ಕಾಯ್ದೆಯ ಪ್ರಕಾರ ತಯಾರಿಸಿರಬೇಕು ಹಾಗೂ ಆದ್ಯತಾನುಸಾರ ಪಾಲುದಾರಿಕೆ ನೋಂದಣಾಧಿಕಾರಿಯಲ್ಲಿ ನೋಂದಾಯಿಸಿರಬೇಕು.

**ಪಾಲುದಾರಿಕೆ ಕರಾರು ಪತ್ರ ಒಳಗೊಂಡಿರುವ ಅಂಶಗಳು : Contents of the Partnership Deed**

ಸಾಮಾನ್ಯವಾಗಿ ಪಾಲುದಾರಿಕೆ ಕರಾರು ಪತ್ರವು ಈ ಕೆಳಗಿನ ಅಂಶಗಳನ್ನು ಒಳಗೊಡಿರುತ್ತದೆ:

- ಸಂಸ್ಥೆಯ ಹೆಸರು ಮತ್ತು ವಿಳಾಸ ಹಾಗೂ ಅದರ ಪ್ರಮುಖ ವ್ಯವಹಾರ.
- ಎಲ್ಲಾ ಪಾಲುದಾರರ ಹೆಸರು ಮತ್ತು ವಿಳಾಸ.
- ಪ್ರತಿ ಪಾಲುದಾರನು ನೀಡಬೇಕಾದ ಬಂಡವಾಳದ ಮೊತ್ತ.
- ಸಂಸ್ಥೆಯ ಲೆಕ್ಕಬರಹದ ಅವಧಿ.
- ಪಾಲುದಾರಿಕೆಯ ಪ್ರಾರಂಭದ ದಿನಾಂಕ.
- ಬ್ಯಾಂಕ್ ಖಾತೆಗಳ ನಿರ್ವಹಣೆಗೆ ಸಂಬಂಧಿಸಿದ ನಿಯಮಗಳು.
- ಲಾಭ ಮತ್ತು ನಷ್ಟದ ಹಂಚಿಕೆಯ ಅನುಪಾತ.
- ಬಂಡವಾಳ, ಸಾಲ ಮತ್ತು ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿ ದರ, ಇತ್ಯಾದಿ.
- ಲೆಕ್ಕ ಪರಿಶೋಧಕರ ನೇಮಕಾತಿ ವಿಧಾನ, ಅವಶ್ಯವಿದ್ದರೆ.
- ಯಾವುದೇ ಪಾಲುದಾರನಿಗೆ ಪಾವತಿ ಮಾಡಬಹುದಾದ ವೇತನ, ದಲ್ಲಾಳಿ, ಇತ್ಯಾದಿ
- ಪ್ರತಿ ಪಾಲುದಾರನ ಹಕ್ಕುಗಳು, ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು.
- ಒಬ್ಬರು ಅಥವಾ ಹೆಚ್ಚು ಪಾಲುದಾರರ ದಿವಾಳಿಯಿಂದ ಉದ್ಭವಿಸುವ ನಷ್ಟದ ಪರಿಗಣನೆ.
- ಸಂಸ್ಥೆಯ ವಿಸರ್ಜನೆ ಸಂದರ್ಭದಲ್ಲಿ ಲೆಕ್ಕಪತ್ರಗಳನ್ನು ಇತ್ಯರ್ಥಗೊಳಿಸುವ ವಿಧಾನ.
- ಪಾಲುದಾರರಲ್ಲಿನ ವಿವಾದಗಳ ಬಗೆಹರಿಸುವಿಕೆಯ ವಿಧಾನ.
- ಪಾಲುದಾರನ ಪ್ರವೇಶ, ನಿವೃತ್ತಿ, ನಿಧನದ ಸಂದರ್ಭದಲ್ಲಿ ಅನುಸರಿಸಬೇಕಾದ ನಿಯಮಗಳು ಮತ್ತು
- ವ್ಯವಹಾರದ ನೀತಿಗೆ ಸಂಬಂಧಿಸಿದ ಯಾವುದಾದರೂ ಇತರೆ ವಿಷಯಗಳು.

ಸಾಮಾನ್ಯವಾಗಿ, ಪಾಲುದಾರಿಕೆ ಒಪ್ಪಂದವು ಪಾಲುದಾರರಲ್ಲಿನ ಸಂಬಂಧದ ಮೇಲೆ ಪರಿಣಾಮ ಬೀರುವ ಎಲ್ಲಾ ವಿಷಯಗಳನ್ನು ಒಳಗೊಂಡಿರುತ್ತದೆ. ಆದಾಗ್ಯೂ, ಕೆಲವು ವಿಷಯಗಳಲ್ಲಿ ಕರಾರುವಕ್ಕಾದ ಒಪ್ಪಂದ ಇರದಿದ್ದಲ್ಲಿ ಭಾರತೀಯ ಪಾಲುದಾರಿಕೆ ಕಾಯ್ದೆ 1932 ರ ಉಪಬಂಧಗಳು ಅನ್ವಯವಾಗುತ್ತವೆ.

### 2.2.1. ಲೆಕ್ಕಬರಹಕ್ಕೆ ಸಂಬಂಧಿತ ಉಪಬಂಧಗಳು : Provisions Relevant for Accounting

ಪಾಲುದಾರಿಕೆ ಲೆಕ್ಕಬರಹದ ಮೇಲೆ ಪರಿಣಾಮ ಬೀರುವ ಪ್ರಮುಖ ಉಪಬಂಧಗಳು ಈ ಕೆಳಗಿನಂತಿವೆ:

(ಎ) **ಲಾಭ ಹಂಚಿಕೆಯ ಅನುಪಾತ:** ಒಂದು ವೇಳೆ ಲಾಭ ಹಂಚಿಕೆಯ ಅನುಪಾತದ ಬಗ್ಗೆ ಪಾಲುದಾರಿಕೆ ಒಪ್ಪಂದವು ಏನನ್ನೂ ಸ್ಪಷ್ಟಗೊಳಿಸದಿದ್ದರೆ, ಪಾಲುದಾರರು ಸಂಸ್ಥೆಯಲ್ಲಿ ಹಾಕಿದ ಬಂಡವಾಳವನ್ನು ಲೆಕ್ಕಿಸದೇ ಸಂಸ್ಥೆಯ ಲಾಭ ಮತ್ತು ನಷ್ಟಗಳನ್ನು ಸಮಾನವಾಗಿ ಹಂಚಿಕೊಳ್ಳಬೇಕು.

(ಬಿ) **ಬಂಡವಾಳದ ಮೇಲೆ ಬಡ್ಡಿ:** ಯಾವುದೇ ಪಾಲುದಾರನು ತಾನು ಹಾಕಿದ ಬಂಡವಾಳದ ಮೇಲೆ ಬಡ್ಡಿಯನ್ನು ಪಡೆಯಲು ಹಕ್ಕುಳ್ಳವನಾಗಿರುವುದಿಲ್ಲ. ಆದಾಗ್ಯೂ ಪಾಲುದಾರರು ಇದನ್ನು ಸ್ಪಷ್ಟವಾಗಿ ಒಪ್ಪಿಕೊಂಡಾಗ ಬಡ್ಡಿಯನ್ನು ಪಡೆಯಲು ಅನುಮತಿಸಬಹುದು. ಪಾಲುದಾರಿಕೆ ಒಪ್ಪಂದವು ಈ ವಿಷಯದಲ್ಲಿ ತಟಸ್ಥವಾಗಿದ್ದರೆ, ಬಂಡವಾಳದ ಮೇಲೆ ಯಾವುದೇ ಬಡ್ಡಿಯನ್ನು ಪಾವತಿಸಲಾಗುವುದಿಲ್ಲ. ವ್ಯವಹಾರದ ಲಾಭದಿಂದ ಮಾತ್ರ ಬಡ್ಡಿಯನ್ನು ಪಾವತಿಸಲ್ಪಡುತ್ತದೆಯೇ ವಿನಹ ಸಂಸ್ಥೆಯು ನಷ್ಟ ಅನುಭವಿಸುತ್ತಿರುವ ಅವಧಿಯಲ್ಲಿ ಅಲ್ಲ.

(ಸಿ) **ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿ :** ಒಪ್ಪಂದದಲ್ಲಿ ಉಲ್ಲೇಖವಿಲ್ಲದಿದ್ದರೆ ಪಾಲುದಾರರ ಸ್ವಂತಕ್ಕೆ ಹಿಂಪಡೆತದ ಮೇಲೆ ಯಾವುದೇ ಬಡ್ಡಿಯನ್ನು ವಿಧಿಸಲಾಗುವುದಿಲ್ಲ.

(ಡಿ) **ಮುಂಗಡಗಳ ಮೇಲಿನ ಬಡ್ಡಿ :** ಯಾವುದೇ ಪಾಲುದಾರ ತನ್ನ ಬಂಡವಾಳದ ಮೊತ್ತವನ್ನು ಹೊರತುಪಡಿಸಿ ವ್ಯವಹಾರದ ಉದ್ದೇಶಕ್ಕಾಗಿ ಸಂಸ್ಥೆಗೆ ಮುಂಗಡ ಹಣ ನೀಡಿದ್ದರೆ, ಆ ಹಣದ ಮೇಲೆ ವಾರ್ಷಿಕ ಶೇ. 6 ರಷ್ಟು ಬಡ್ಡಿ ಪಡೆಯಲು ಹಕ್ಕುಳ್ಳವನಾಗಿರುತ್ತಾನೆ.

(ಇ) **ಸಂಸ್ಥೆಯ ಕೆಲಸಕ್ಕಾಗಿ ಸಂಭಾವನೆ :** ಪಾಲುದಾರಿಕೆ ಒಪ್ಪಂದದಲ್ಲಿ ಅವಕಾಶವಿರದ ಹೊರತು, ಯಾವುದೇ ಪಾಲುದಾರ ವ್ಯವಹಾರದ ನಿರ್ವಹಣೆಯಲ್ಲಿ ಭಾಗವಹಿಸಿದ್ದಕ್ಕಾಗಿ ಸಂಬಳ ಅಥವಾ ಇತರೆ ಸಂಭಾವನೆಯನ್ನು ಪಡೆಯಲು ಹಕ್ಕುಳ್ಳವನಾಗಿರುವುದಿಲ್ಲ.

ಈ ಮೇಲಿನವುಗಳನ್ನು ಹೊರತುಪಡಿಸಿ, ಪಾಲುದಾರರ ನಡುವಿನ ಒಪ್ಪಂದಕ್ಕೆ ಒಳಪಟ್ಟು ಭಾರತೀಯ ಪಾಲುದಾರಿಕೆ ಕಾಯ್ದೆಯು ಹೀಗೆ ಸೂಚಿಸುತ್ತದೆ,

(i) ಪಾಲುದಾರನು ಸಂಸ್ಥೆಯ ಯಾವುದಾದರೊಂದು ವಹಿವಾಟಿನಿಂದ ಅಥವಾ ಸಂಸ್ಥೆಯ ಆಸ್ತಿಯನ್ನು ಬಳಸಿಕೊಂಡು ಅಥವಾ ಸಂಸ್ಥೆಯ ವ್ಯವಹಾರಿಕ ಸಂಪರ್ಕಗಳಿಂದ ಅಥವಾ ಸಂಸ್ಥೆಯ ಹೆಸರನ್ನು ಸ್ವಂತಕ್ಕೆ ಬಳಸಿ ಲಾಭ ಮಾಡಿಕೊಂಡಿದ್ದರೆ, ಅಂತಹ ವ್ಯವಹಾರದಿಂದ ಅವನು ಗಳಿಸಿದ ಲಾಭಕ್ಕೆ ಲೆಕ್ಕ ಕೊಡಬೇಕಾಗುತ್ತದೆ ಮತ್ತು ಅದನ್ನು ಸಂಸ್ಥೆಗೆ ಪಾವತಿಸಬೇಕಾಗುತ್ತದೆ.

(ii) ಪಾಲುದಾರನು ಸಂಸ್ಥೆಯೊಂದಿಗೆ ಪೈಪೋಟಿ ನೀಡುವಂತಹ ಒಂದೇ ರೀತಿಯ ಸ್ವರೂಪವುಳ್ಳ ಯಾವುದಾದರೂ ವ್ಯವಹಾರವನ್ನು ನಡೆಸುತ್ತಿದ್ದರೆ, ಆದರೆ ವ್ಯವಹಾರದಿಂದ ಬಂದ ಎಲ್ಲಾ ಲಾಭವನ್ನು ಲೆಕ್ಕಕ್ಕೆ ಪಡೆದು ಅವನು/ಅವಳು ಸಂಸ್ಥೆಗೆ ನೀಡಬೇಕಾಗುತ್ತದೆ.

**ನಿಮ್ಮ ತಿಳುವಳಿಕೆಯನ್ನು ಪರೀಕ್ಷಿಸಿಕೊಳ್ಳಿರಿ –I Test Your Understanding – I**

1. ಸಂಸ್ಥೆಯಲ್ಲಿ ಮೋಹನ್ ಮತ್ತು ಶ್ಯಾಮ್ ಪಾಲುದಾರರು. ಈ ಕೆಳಗಿನ ವಿಷಯಗಳಲ್ಲಿ ಪಾಲುಗಾರಿಕೆ ಒಪ್ಪಂದವು ಮೌನವಾಗಿದ್ದರೆ, ಹಕ್ಕು ಸಾಧನೆಯು ಮಾನ್ಯವಾಗುವುದೇ ಎಂಬುವುದನ್ನು ತಿಳಿಸಿರಿ:
   (i) ಮೋಹನ್ ಒಬ್ಬ ಕ್ರಿಯಾಶೀಲ ಪಾಲುದಾರ, ಅವನು ವರ್ಷಕ್ಕೆ ₹ 10,000 ವೇತನವನ್ನು ಬಯಸುತ್ತಾನೆ.
   (ii) ಶ್ಯಾಮ್ ಸಂಸ್ಥೆಗೆ ಸಾಲ ನೀಡಿದ್ದಾನೆ, ಅವನು ಶೇ.10 ರಷ್ಟು ಬಡ್ಡಿಗಾಗಿ ಹಕ್ಕು ಸಾಧಿಸುತ್ತಾನೆ.
   (iii) ಮೋಹನ್ ₹20,000 ಮತ್ತು ಶ್ಯಾಮ್ ₹50,000 ಬಂಡವಾಳ ಹೂಡಿಕೆ ಮಾಡಿದ್ದಾರೆ. ಮೋಹನ್ ಲಾಭದಲ್ಲಿ ಸಮಾನ ಪಾಲು ಬಯಸುತ್ತಿದ್ದಾನೆ.
   (iv) ಶ್ಯಾಮ್ ತನ್ನ ಬಂಡವಾಳದ ಮೇಲೆ ವಾರ್ಷಿಕ ಶೇ. 6 ರಷ್ಟು ಬಡ್ಡಿ ಜಮಾ ಆಗಬೇಕೆಂದು ಬಯಸುತ್ತಾನೆ.
2. ಕೆಳಗಿನ ಹೇಳಿಕೆಗಳು ಸರಿಯೋ ಅಥವಾ ತಪ್ಪೋ ತಿಳಿಸಿರಿ.
   (i) ಪಾಲುದಾರರ ನಡುವೆ ಯಾವುದೇ ಲಿಖಿತ ಒಪ್ಪಂದವಿಲ್ಲದಿದ್ದರೂ ಸಹಿತ ಮಾನ್ಯತೆವುಳ್ಳ ಪಾಲುದಾರಿಕೆಯನ್ನು ಸ್ಥಾಪಿಸಬಹುದು.
   (ii) ವ್ಯವಹಾರದಲ್ಲಿ ಪಾಲ್ಗೊಳ್ಳುವ ಪ್ರತಿ ಪಾಲುದಾರನು, ಮುಖ್ಯಸ್ಥನಾಗಿ ಹಾಗೂ ಉಳಿದೆಲ್ಲಾ ಪಾಲುದಾರರಿಗೆ ಪ್ರತಿನಿಧಿಯೂ ಸಹ ಆಗಿರುತ್ತಾನೆ.
   (iii) ಬ್ಯಾಂಕಿಂಗ್ ಸಂಸ್ಥೆಯಲ್ಲಿ ಪಾಲುದಾರರ ಗರಿಷ್ಠ ಸಂಖ್ಯೆಯು 20 ಆಗಿರುತ್ತದೆ.
   (iv) ಪಾಲುದಾರರ ನಡುವಿನ ವಿವಾದಗಳನ್ನು ಬಗೆಹರಿಸುವ ವಿಧಾನಗಳು ಪಾಲುದಾರಿಕೆ ಕರಾರು ಪತ್ರದ ಭಾಗವಾಗಿರುವುದಿಲ್ಲ.
   (v) ಕರಾರು ಪತ್ರವು ತಟಸ್ಥವಾಗಿದ್ದಾಗ, ಪಾಲುದಾರರ ಹಿಂಪಡೆತದ ಮೇಲೆ ಶೇ. 6 ರಷ್ಟು ಬಡ್ಡಿ ಆಕರಿಸಲಾಗುವುದು.
   (vi) ಕರಾರು ಪತ್ರವು ತಟಸ್ಥವಾಗಿದ್ದಾಗ, ಪಾಲುದಾರರ ಸಾಲದ ಮೇಲೆ ಶೇ. 12 ರಷ್ಟು ಬಡ್ಡಿ ನೀಡಲಾಗುವುದು.

## 2.3 ಪಾಲುದಾರಿಕೆ ಲೆಕ್ಕ ಪತ್ರಗಳ ವಿಶೇಷ ಅಂಶಗಳು: Special Aspects of Partnership Accounts

ಈ ಕೆಳಗಿನ ಅಂಶಗಳನ್ನು ಹೊರತುಪಡಿಸಿದರೆ, ಪಾಲುದಾರಿಕೆ ಸಂಸ್ಥೆಯ ಲೆಕ್ಕಬರಹದ ಪದ್ಧತಿಯು ಏಕ ಮಾಲೀಕತ್ವ ವ್ಯವಹಾರದಂತೆಯೇ ಇದೆ.

- ಪಾಲುದಾರರ ಬಂಡವಾಳ ಖಾತೆಗಳ ನಿರ್ವಹಣೆ.
- ಪಾಲುದಾರರಲ್ಲಿ ಲಾಭ ಮತ್ತು ನಷ್ಟದ ಹಂಚಿಕೆ.
- ಹಿಂದಿನ ಲಾಭದ ತಪ್ಪು ವಿತರಣೆಗಾಗಿ ಹೊಂದಾಣಿಕೆಗಳು.
- ಪಾಲುದಾರಿಕೆ ಒಪ್ಪಂದದ ಪುನರ್ ರಚನೆ ಮತ್ತು,
- ಪಾಲುದಾರಿಕೆ ಸಂಸ್ಥೆಯ ವಿಸರ್ಜನೆ.

ಈ ಅಧ್ಯಾಯದ ಕೆಳಗಿನ ವಿಭಾಗಗಳಲ್ಲಿ ಮೇಲೆ ತಿಳಿಸಲಾದ ಮೊದಲ ಮೂರು ಅಂಶಗಳನ್ನು ತೆಗೆದುಕೊಳ್ಳಲಾಗಿದೆ. ಉಳಿದ ಅಂಶಗಳನ್ನು ಮುಂದಿನ ಅಧ್ಯಾಯಗಳಲ್ಲಿ ತಿಳಿಸಲಾಗಿದೆ.

## 2.4 ಪಾಲುದಾರರ ಬಂಡವಾಳ ಖಾತೆಗಳ ನಿರ್ವಹಣೆ: Maintenance of Capital Accounts of Partners

ಪಾಲುದಾರರಿಗೆ ಸಂಬಂಧಿಸಿದ ಎಲ್ಲಾ ವಹಿವಾಟುಗಳನ್ನು ಅವರ ಬಂಡವಾಳ ಖಾತೆಗಳ ಮೂಲಕ ಸಂಸ್ಥೆಯ ಲೆಕ್ಕ ಪುಸ್ತಕಗಳಲ್ಲಿ ದಾಖಲಿಸಲಾಗುತ್ತದೆ. ಬಂಡವಾಳವಾಗಿ ತಂದ ಹಣದ ಮೊತ್ತ, ಸ್ವಂತಕ್ಕೆ ಹಿಂಪಡೆತ, ಲಾಭದ ಹಂಚಿಕೆ, ಬಂಡವಾಳದ ಮೇಲಿನ ಬಡ್ಡಿ, ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿ, ಪಾಲುದಾರರ ವೇತನ, ದಲ್ಲಾಳಿ ಮುಂತಾದವುಗಳನ್ನು ಇದು ಒಳಗೊಂಡಿರುತ್ತದೆ.

ಪಾಲುದಾರರ ಬಂಡವಾಳ ಖಾತೆಗಳನ್ನು ಈ ಎರಡು ವಿಧಾನಗಳಿಂದ ನಿರ್ವಹಿಸಬಹುದು. ಅವುಗಳೆಂದರೆ, (1) ಸ್ಥಿರ ಬಂಡವಾಳ ವಿಧಾನ ಮತ್ತು (2) ಬದಲಾಗುವ ಬಂಡವಾಳ ವಿಧಾನ. ಬಂಡವಾಳ ಹೆಚ್ಚಿಸುವಿಕೆ ಅಥವಾ ಹಿಂತೆಗೆತದ ಹೊರತಾಗಿ ಇನ್ನುಳಿದ ಎಲ್ಲಾ ವಹಿವಾಟುಗಳನ್ನು ಪಾಲುದಾರರ ಬಂಡವಾಳ ಖಾತೆಗಳಲ್ಲಿ ದಾಖಲಿಸಲಾಗುತ್ತದೆಯೋ ಅಥವಾ ಇಲ್ಲವೋ ಎಂಬುದರಲ್ಲಿ ವ್ಯತ್ಯಾಸವಿದೆ.

(ಎ) **ಸ್ಥಿರ ಬಂಡವಾಳ ವಿಧಾನ: Fixed Capital Method:** ಸ್ಥಿರ ಬಂಡವಾಳ ಪದ್ಧತಿಯಲ್ಲಿ ಪಾಲುದಾರರಲ್ಲಿನ ಒಡಂಬಡಿಕೆಯ ಪ್ರಕಾರ ಬಂಡವಾಳದ ಭಾಗಶಃ ಹಿಂತೆಗೆದುಕೊಳ್ಳುವಿಕೆ ಅಥವಾ ಹೆಚ್ಚುವರಿ ಬಂಡವಾಳ ಹೂಡಿಕೆಯನ್ನು ಹೊರತುಪಡಿಸಿ, ಪಾಲುದಾರರ ಬಂಡವಾಳ ಸ್ಥಿರವಾಗಿ ಉಳಿಯುತ್ತದೆ. ಲಾಭ ಮತ್ತು ನಷ್ಟದ ಹಂಚಿಕೆ, ಬಂಡವಾಳದ ಮೇಲಿನ ಬಡ್ಡಿ, ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿ, ಮುಂತಾದ ಅಂಶಗಳನ್ನು ಪಾಲುದಾರರ ಪ್ರತ್ಯೇಕ ಚಾಲ್ತಿ ಖಾತೆಗಳಲ್ಲಿ ದಾಖಲಿಸಲಾಗುತ್ತದೆ. ಬಂಡವಾಳ ಹೆಚ್ಚಿಸುವಿಕೆ ಅಥವಾ ಹಿಂತೆಗೆತದ ಹೊರತು ಪಾಲುದಾರರ ಬಂಡವಾಳ ಖಾತೆಗಳ ಶಿಲ್ಕು ವರ್ಷದಿಂದ ವರ್ಷಕ್ಕೆ ಸ್ಥಿರವಾಗಿರುತ್ತವೆ ಹಾಗೂ ಅವು ಯಾವಾಗಲೂ ಜಮಾ ಶಿಲ್ಕು ತೋರಿಸುತ್ತವೆ. ಆದರೆ, ಪಾಲುದಾರರ ಚಾಲ್ತಿ ಖಾತೆಗಳು ಜಮಾ ಅಥವಾ ಖರ್ಚು ಶಿಲ್ಕು ತೋರಿಸಬಹುದು. ಹೀಗೆ, ಈ ಪದ್ಧತಿಯಲ್ಲಿ ಪ್ರತಿ ಪಾಲುದಾರನ ಹೆಸರಿನಲ್ಲಿ ಎರಡು ಖಾತೆಗಳನ್ನು ನಿರ್ವಹಿಸಲಾಗುತ್ತದೆ. ಅವುಗಳೆಂದರೆ, ಬಂಡವಾಳ ಖಾತೆ ಮತ್ತು ಚಾಲ್ತಿ ಖಾತೆ. ಹಾಗೆಯೇ, ಆಢಾವೆ ಪತ್ರಿಕೆಯಲ್ಲಿ ಪಾಲುದಾರರ ಬಂಡವಾಳ ಖಾತೆಗಳು ಯಾವಾಗಲೂ ಹೊಣೆಗಾರಿಕೆಯ ಭಾಗದಲ್ಲಿ ಕಾಣಿಸಿಕೊಳ್ಳುತ್ತವೆ. ಪಾಲುದಾರರ ಚಾಲ್ತಿ ಖಾತೆಗಳು ಜಮಾ ಶಿಲ್ಕು ಹೊಂದಿದ್ದರೆ ಹೊಣೆಗಾರಿಕೆಯ ಭಾಗದಲ್ಲಿ, ಖರ್ಚು ಶಿಲ್ಕು ಹೊಂದಿದ್ದರೆ ಆಸ್ತಿಗಳ ಭಾಗದಲ್ಲಿ ತೋರಿಸಲಾಗುತ್ತದೆ.

ಸ್ಥಿರ ಬಂಡವಾಳ ವಿಧಾನದಲ್ಲಿ ಪಾಲುದಾರರ ಬಂಡವಾಳ ಖಾತೆ ಮತ್ತು ಚಾಲ್ತಿ ಖಾತೆ ಈ ಕೆಳಗಿನಂತೆ ಕಾಣಿಸಿಕೊಳ್ಳುತ್ತವೆ.

**ಖರ್ಚು** **ಪಾಲುದಾರರ ಬಂಡವಾಳ ಖಾತೆ** **ಜಮಾ**

| ದಿನಾಂಕ | ವಿವರಗಳು | ರೋ. ಪಾ. | ಮೊತ್ತ (₹) | ದಿನಾಂಕ | ವಿವರಗಳು | ರೋ. ಪಾ. | ಮೊತ್ತ (₹) |
|---|---|---|---|---|---|---|---|
| | ಬ್ಯಾಂಕು (ಬಂಡವಾಳದ ಶಾಶ್ವತ ಹಿಂಪಡೆತ) | | xxx | | ಹಿಂದಿನಿಂದ ಬಂದ ಶಿಲ್ಕು (ಆರಂಭದ ಶಿಲ್ಕು) | | xxx |
| | ಮುಂದುವರೆದ ಶಿಲ್ಕು (ಅಂತಿಮ ಶಿಲ್ಕು) | | xxx | | ಬ್ಯಾಂಕು (ಹೆಚ್ಚುವರಿ ಬಂಡವಾಳ ಹೂಡಿಕೆ) | | xxx |
| | | | xxx | | | | xxx |

**ಖರ್ಚು** **ಪಾಲುದಾರರ ಚಾಲ್ತಿ ಖಾತೆ** **ಜಮಾ**

| ದಿನಾಂಕ | ವಿವರಗಳು | ರೋ. ಪಾ. | ಮೊತ್ತ (₹) | ದಿನಾಂಕ | ವಿವರಗಳು | ರೋ. ಪಾ. | ಮೊತ್ತ (₹) |
|---|---|---|---|---|---|---|---|
| | ಹಿಂದಿನಿಂದ ಬಂದ ಶಿಲ್ಕು (ಆರಂಭದ ಶಿಲ್ಕು ಖರ್ಚು ಇದ್ದಾಗ) | | xxx | | ಹಿಂದಿನಿಂದ ಬಂದ ಶಿಲ್ಕು (ಆರಂಭದ ಶಿಲ್ಕು ಜಮಾ ಇದ್ದಾಗ) | | xxx |
| | ಸ್ವಂತಕ್ಕೆ ಹಿಂಪಡೆತ | | xxx | | ವೇತನ | | xxx |
| | ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿ | | xxx | | ದಲ್ಲಾಳಿ | | xxx |
| | | | | | ಬಂಡವಾಳದ ಮೇಲಿನ ಬಡ್ಡಿ | | xxx |
| | ಲಾಭ ಮತ್ತು ನಷ್ಟ ವಿತರಣೆ (ನಷ್ಟದ ಭಾಗ) | | xxx | | ಲಾಭ ಮತ್ತು ನಷ್ಟ ವಿತರಣೆ (ಲಾಭದ ಭಾಗ) | | xxx |
| | ಮುಂದುವರೆದ ಶಿಲ್ಕು (ಅಂತಿಮ ಶಿಲ್ಕು ಜಮಾ ಇದ್ದಾಗ) | | xxx | | ಮುಂದುವರೆದ ಶಿಲ್ಕು (ಅಂತಿಮ ಶಿಲ್ಕು ಖರ್ಚು ಇದ್ದಾಗ) | | xxx |
| | | | **xxx** | | | | **xxx** |

**ಚಿತ್ರ. 2.1: ಸ್ಥಿರ ಬಂಡವಾಳ ಪದ್ಧತಿಯಲ್ಲಿ ಪಾಲುದಾರರ ಬಂಡವಾಳ ಮತ್ತು ಚಾಲ್ತಿ ಖಾತೆ ನಮೂನೆ.**

(ಬಿ) **ಬದಲಾಗುವ ಬಂಡವಾಳ ವಿಧಾನ: Fluctuating Capital Method:** ಬದಲಾಗುವ ಬಂಡವಾಳ ವಿಧಾನದಲ್ಲಿ ಪ್ರತಿ ಪಾಲುದಾರನ ಹೆಸರಿನಲ್ಲಿ ಕೇವಲ ಒಂದು ಖಾತೆ, ಅಂದರೆ ಬಂಡವಾಳ ಖಾತೆಯನ್ನು ನಿರ್ವಹಿಸಲಾಗುತ್ತದೆ. ಲಾಭ ಮತ್ತು ನಷ್ಟದ ಹಂಚಿಕೆ, ಬಂಡವಾಳದ ಮೇಲಿನ ಬಡ್ಡಿ, ಸ್ವಂತಕ್ಕೆ ಹಿಂಪಡೆತ, ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿ, ಪಾಲುದಾರರ ವೇತನ ಅಥವಾ ದಲ್ಲಾಳಿ ಮುಂತಾದ ಎಲ್ಲಾ ಹೊಂದಾಣಿಕೆಗಳನ್ನು ನೇರವಾಗಿ ಪಾಲುದಾರರ ಬಂಡವಾಳ ಖಾತೆಗಳಲ್ಲಿ ದಾಖಲಿಸಲಾಗುತ್ತದೆ. ಇದರಿಂದ, ಬಂಡವಾಳ ಖಾತೆಯಲ್ಲಿನ ಶಿಲ್ಕು ವರ್ಷದಿಂದ ವರ್ಷಕ್ಕೆ ಬದಲಾಗುತ್ತದೆ. ಅದಕ್ಕಾಗಿಯೇ, ಈ ವಿಧಾನವನ್ನು ಬದಲಾಗುವ ಬಂಡವಾಳ ವಿಧಾನ ಎಂದು ಕರೆಯಲಾಗುತ್ತದೆ. ಯಾವುದೇ ಸೂಚನೆಗಳನ್ನು ನೀಡದಿದ್ದಲ್ಲಿ ಬಂಡವಾಳ ಖಾತೆಯನ್ನು ಈ ವಿಧಾನದಲ್ಲಿಯೇ ತಯಾರಿಸಬೇಕು. ಬದಲಾಗುವ ಬಂಡವಾಳ ವಿಧಾನದಲ್ಲಿ ತಯಾರಿಸಲಾಗುವ ಬಂಡವಾಳ ಖಾತೆಯ ಮಾದರಿಯನ್ನು ಕೆಳಗೆ ಕೊಡಲಾಗಿದೆ.

**ಖರ್ಚು** **ಪಾಲುದಾರರ ಬಂಡವಾಳ ಖಾತೆ** **ಜಮಾ**

| ದಿನಾಂಕ | ವಿವರಗಳು | ರೋ .ಪಾ. | ಮೊತ್ತ (₹) | ದಿನಾಂಕ | ವಿವರಗಳು | ರೋ. ಪಾ. | ಮೊತ್ತ (₹) |
|---|---|---|---|---|---|---|---|
| | ಸ್ವಂತಕ್ಕೆ ಹಿಂಪಡೆತ | | xxx | | ಹಿಂದಿನಿಂದ ಬಂದ ಶಿಲ್ಕು | | xxx |
| | ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿ | | xxx | | ಬ್ಯಾಂಕು (ಹೆಚ್ಚುವರಿ ಬಂಡವಾಳ ಹೂಡಿಕೆ) | | xxx |
| | | | | | ವೇತನ | | xxx |
| | ಲಾಭ ಮತ್ತು ನಷ್ಟ ವಿತರಣೆ (ನಷ್ಟದ ಭಾಗ) | | xxx | | ಬಂಡವಾಳದ ಮೇಲಿನ ಬಡ್ಡಿ | | xxx |
| | ಮುಂದುವರೆದ ಶಿಲ್ಕು (ಅಂತಿಮ ಶಿಲ್ಕು) | | xxx | | ಲಾಭ ಮತ್ತು ನಷ್ಟ ವಿತರಣೆ (ಲಾಭದ ಭಾಗ) | | xxx |
| | | | xxx | | | | xxx |

**ಚಿತ್ರ. 2.2: ಬದಲಾಗುವ ಬಂಡವಾಳ ಪದ್ಧತಿಯಲ್ಲಿ ಪಾಲುದಾರರ ಬಂಡವಾಳ ಖಾತೆ ನಮೂನೆ.**

### 2.4.1 ಸ್ಥಿರ ಮತ್ತು ಬದಲಾಗುವ ಬಂಡವಾಳ ವಿಧಾನಗಳ ನಡುವಿನ ವ್ಯತ್ಯಾಸಗಳು: Distinctions between Fixed and Fluctuating Capital Accounts

ಸ್ಥಿರ ಮತ್ತು ಬದಲಾಗುವ ಬಂಡವಾಳ ವಿಧಾನಗಳ ನಡುವಿನ ವ್ಯತ್ಯಾಸಗಳ ಮುಖ್ಯಾಂಶಗಳನ್ನು ಈ ಕೆಳಗಿನಂತೆ ಸಾರಾಂಶಗೊಳಿಸಬಹುದು.

| ವ್ಯತ್ಯಾಸದ ಆಧಾರ | ಸ್ಥಿರ ಬಂಡವಾಳದ ವಿಧಾನ | ಬದಲಾಗುವ ಬಂಡವಾಳದ ವಿಧಾನ |
|---|---|---|
| ಖಾತೆಗಳ ಸಂಖ್ಯೆ | ಈ ವಿಧಾನದಲ್ಲಿ ಪ್ರತಿಯೊಬ್ಬ ಪಾಲುದಾರನಿಗೆ ಎರಡು ಪ್ರತ್ಯೇಕ ಖಾತೆಗಳನ್ನು ನಿರ್ವಹಿಸಲಾಗುತ್ತದೆ. ಅವುಗಳೆಂದರೆ, ಬಂಡವಾಳ ಖಾತೆ ಮತ್ತು ಚಾಲ್ತಿ ಖಾತೆ. | ಈ ವಿಧಾನದಲ್ಲಿ ಪ್ರತಿಯೊಬ್ಬ ಪಾಲುದಾರ ಒಂದೇ ಖಾತೆಯನ್ನು ಹೊಂದಿರುತ್ತಾನೆ. ಅದು ಬಂಡವಾಳ ಖಾತೆ. |
| ಹೊಂದಾಣಿಕೆಗಳು | ಸ್ವಂತಕ್ಕೆ ಹಿಂಪಡೆತ, ವೇತನ, ಬಂಡವಾಳದ ಮೇಲಿನ ಬಡ್ಡಿ, ಮುಂತಾದ ಎಲ್ಲಾ ಹೊಂದಾಣಿಕೆಗಳನ್ನು ಚಾಲ್ತಿ ಖಾತೆಯಲ್ಲಿ ಮಾಡಲಾಗುತ್ತದೆಯೇ ಹೊರತು ಬಂಡವಾಳ ಖಾತೆಯಲ್ಲಲ್ಲ. | ಸ್ವಂತಕ್ಕೆ ಹಿಂಪಡೆತ, ವೇತನ, ಬಂಡವಾಳದ ಮೇಲಿನ ಬಡ್ಡಿ, ಮುಂತಾದ ಎಲ್ಲಾ ಹೊಂದಾಣಿಕೆಗಳನ್ನು ಬಂಡವಾಳ ಖಾತೆಯಲ್ಲಿ ಮಾಡಲಾಗುತ್ತದೆ. |
| ಸ್ಥಿರ ಶಿಲ್ಕು | ಹೆಚ್ಚುವರಿ ಬಂಡವಾಳ ಅಥವಾ ಬಂಡವಾಳ ಹಿಂತೆಗೆತವಾಗದ ಹೊರತು ಬಂಡವಾಳ ಖಾತೆಯ ಶಿಲ್ಕು ಬದಲಾಗುವುದಿಲ್ಲ. | ಬಂಡವಾಳ ಖಾತೆಯ ಶಿಲ್ಕು ವರ್ಷದಿಂದ ವರ್ಷಕ್ಕೆ ಬದಲಾಗುತ್ತದೆ. |
| ಜಮಾ / ಖರ್ಚು ಶಿಲ್ಕು | ಬಂಡವಾಳ ಖಾತೆಯು ಯಾವಾಗಲೂ ಜಮಾ ಶಿಲ್ಕು ತೋರಿಸುತ್ತದೆ. | ಬಂಡವಾಳ ಖಾತೆಯು ಕೆಲವೊಮ್ಮೆ ಖರ್ಚು ಶಿಲ್ಕು ತೋರಿಸುತ್ತದೆ. |

**ನಿದರ್ಶನ – 1**

ಸಮೀರ್ ಮತ್ತು ಯಾಸ್ಮಿನ್ ಪಾಲುದಾರರಾಗಿದ್ದು, ಅನುಕ್ರಮವಾಗಿ ₹15,00,000 ಮತ್ತು ₹10,00,000 ಬಂಡವಾಳ ಹೊಂದಿದ್ದಾರೆ. ಅವರು 3:2ರ ಅನುಪಾತದಲ್ಲಿ ಲಾಭವನ್ನು ಹಂಚಿಕೊಳ್ಳಲು ಒಪ್ಪಿದ್ದಾರೆ. ಪಾಲುದಾರರ ಬಂಡವಾಳ ಖಾತೆಗಳಲ್ಲಿ ಈ ಮುಂದಿನ ವಹಿವಾಟುಗಳನ್ನು ಯಾವ ರೀತಿ ದಾಖಲಿಸುವರೆಂದು ತೋರಿಸಿರಿ.

1. ಸ್ಥಿರ ಬಂಡವಾಳವಿದ್ದಾಗ. 2. ಬದಲಾಗುವ ಬಂಡವಾಳವಿದ್ದಾಗ.

**ಪ್ರತಿವರ್ಷ ಮಾರ್ಚ 31 ಕ್ಕೆ ಪುಸ್ತಕಗಳನ್ನು ಅಂತಿಮಗೊಳಿಸುವುದು.**

| ವಿವರಗಳು | ಸಮೀರ್ (₹) | ಯಾಸ್ಮಿನ್ (₹) |
|---|---|---|
| 1 ನೇ ಜುಲೈ, 2014ಕ್ಕೆ ಹೆಚ್ಚುವರಿ ಬಂಡವಾಳ ಹೂಡಿಕೆ | 3,00,000 | 2,00,000 |
| ಬಂಡವಾಳದ ಮೇಲಿನ ಬಡ್ಡಿ | 5% | 5% |
| ಸ್ವಂತಕ್ಕೆ ಹಿಂಪಡೆತ (2014–15) | 30,000 | 20,000 |
| ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿ | 1,800 | 1,200 |
| ವೇತನ | 20,000 | — |
| ದಲ್ಲಾಳಿ | 10,000 | 7,000 |
| 2014–15 ನೇ ಸಾಲಿನ ನಷ್ಟದ ಪಾಲು | 60,000 | 40,000 |

**ಪರಿಹಾರ:**

**ಸ್ಥಿರ ಬಂಡವಾಳ ಪದ್ಧತಿಯಲ್ಲಿ**

**ಖರ್ಚು — ಪಾಲುದಾರರ ಬಂಡವಾಳ ಖಾತೆಗಳು — ಜಮಾ**

| ದಿನಾಂಕ | ವಿವರಗಳು | ರೋ. ಪಾ. | ಸಮೀರ್ (₹) | ಯಾಸ್ಮಿನ್ (₹) | ದಿನಾಂಕ | ವಿವರಗಳು | ರೋ. ಪಾ. | ಸಮೀರ್ (₹) | ಯಾಸ್ಮಿನ್ (₹) |
|---|---|---|---|---|---|---|---|---|---|
| | ಮುಂದುವರೆದ ಶಿಲ್ಕು | | 18,00,000 | 12,00,000 | | ಹಿಂದಿನಿಂದ ಬಂದ ಶಿಲ್ಕು | | 15,00,000 | 10,00,000 |
| | | | | | | ಹೆಚ್ಚುವರಿ ಬಂಡವಾಳ | | 3,00,000 | 2,00,000 |
| | | | 18,00,000 | 12,00,000 | | | | 18,00,000 | 12,00,000 |

**ಖರ್ಚು — ಪಾಲುದಾರರ ಚಾಲ್ತಿ ಖಾತೆಗಳು — ಜಮಾ**

| ದಿನಾಂಕ | ವಿವರಗಳು | ರೋ. ಪಾ. | ಸಮೀರ್ ಮೊತ್ತ (₹) | ಯಾಸ್ಮಿನ್ ಮೊತ್ತ (₹) | ದಿನಾಂಕ | ವಿವರಗಳು | ರೋ. ಪಾ. | ಸಮೀರ್ ಮೊತ್ತ (₹) | ಯಾಸ್ಮಿನ್ ಮೊತ್ತ (₹) |
|---|---|---|---|---|---|---|---|---|---|
| | ಸ್ವಂತಕ್ಕೆ ಹಿಂಪಡೆತ | | 30,000 | 20,000 | | ಬಂಡವಾಳದ ಮೇಲಿನ ಬಡ್ಡಿ | | 82,500 | 55,000 |
| | ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿ | | 1,800 | 1,200 | | ಪಾಲುಗಾರರ ವೇತನ | | 20,000 | 7,000 |
| | ಲಾಭ ಮತ್ತು ನಷ್ಟದ ಹಂಚಿಕೆ | | 60,000 | 40,000 | | ದಲ್ಲಾಳಿ | | 10,000 | – |
| | ಮುಂದುವರೆದ ಶಿಲ್ಕು | | 20,700 | 800 | | | | | |
| | | | **1,12,500** | **62,000** | | | | **1,12,500** | **62,000** |

**ಲೆಕ್ಕ ಟಿಪ್ಪಣಿಗಳು: Working Notes**

ಬಂಡವಾಳದ ಮೇಲಿನ ಬಡ್ಡಿಯ ಲೆಕ್ಕಚಾರ: ₹

ಸಮೀರ್: ₹15,00,000 ಕ್ಕೆ ಶೇ. 5 ರಂತೆ 1 ವರ್ಷಕ್ಕೆ $= 5 \times \frac{₹15,00,000}{100}$ = 75,000

₹3,00,000 ಕ್ಕೆ ಶೇ. 5 ರಂತೆ 06 ತಿಂಗಳಿಗೆ $= 5 \times \frac{₹3,00,000}{100} \times \frac{6}{12}$ = 7,500

**82,500**

ಯಾಸ್ಮಿನ್: ₹10,00,000 ಕ್ಕೆ ಶೇ. 5 ರಂತೆ 1 ವರ್ಷಕ್ಕೆ $= 5 \times \frac{₹10,00,000}{100}$ = 50,000

₹2,00,000 ಕ್ಕೆ ಶೇ. 5 ರಂತೆ 06 ತಿಂಗಳಿಗೆ $= 5 \times \frac{₹2,00,000}{100} \times \frac{6}{12}$ = 5,000

**55,000**

**ಬದಲಾಗುವ ಬಂಡವಾಳ ಪದ್ಧತಿಯಲ್ಲಿ :**

**ಖರ್ಚು ಪಾಲುದಾರರ ಬಂಡವಾಳ ಖಾತೆಗಳು ಜಮಾ**

| ದಿನಾಂಕ | ವಿವರಗಳು | ರೋ. ಪಾ. | ಸಮೀರ್ ಮೊತ್ತ (₹) | ಯಾಸ್ಮಿನ್ ಮೊತ್ತ (₹) | ದಿನಾಂಕ | ವಿವರಗಳು | ರೋ. ಪಾ. | ಸಮೀರ್ ಮೊತ್ತ (₹) | ಯಾಸ್ಮಿನ್ ಮೊತ್ತ (₹) |
|---|---|---|---|---|---|---|---|---|---|
| | ಸ್ವಂತಕ್ಕೆ ಹಿಂಪಡೆತ | | 30,000 | 20,000 | | ಆರಂಭದ ಶಿಲ್ಕು | | 15,00,000 | 10,00,000 |
| | ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿ | | 1,800 | 1,200 | | ಬ್ಯಾಂಕ್ | | 3,00,000 | 2,00,000 |
| | ಲಾಭ ಮತ್ತು ನಷ್ಟ ಹಂಚಿಕೆ | | 60,000 | 40,000 | | ಬಂಡವಾಳದ ಮೇಲಿನ ಬಡ್ಡಿ | | 82,500 | 55,000 |
| | ಮುಂದುವರೆದ ಶಿಲ್ಕು | | 18,20,700 | 12,00,800 | | ವೇತನ | | 20,000 | 7,000 |
| | | | | | | ದಲ್ಲಾಳಿ | | 10,000 | — |
| | | | **19,12,500** | **12,62,000** | | | | **19,12,500** | **12,62,000** |

**ನೀವೆ ಮಾಡಿ : do it yourself**

1. ಸೌಮ್ಯ ಮತ್ತು ಬಿಮಲ್ ಸಂಸ್ಥೆಯಲ್ಲಿ ಪಾಲುದಾರರಾಗಿದ್ದು, ಲಾಭ ಮತ್ತು ನಷ್ಟವನ್ನು 3:2ರ ಅನುಪಾತದಲ್ಲಿ ಹಂಚಿಕೊಳ್ಳಲಿದ್ದಾರೆ. 1ನೇ ಏಪ್ರಿಲ್, 2015ಕ್ಕೆ ಅವರ ಬಂಡವಾಳ ಮತ್ತು ಚಾಲ್ತಿ ಖಾತೆಯ ಶಿಲ್ಕು ಈ ಕೆಳಗಿನಂತಿದೆ.

| ಖಾತೆಗಳು | ಸೌಮ್ಯ (₹) | ಬಿಮಲ್ (₹) |
|---|---|---|
| ಬಂಡವಾಳ ಖಾತೆ | 3,00,000 | 2,00,000 |
| ಚಾಲ್ತಿ ಖಾತೆ (ಜಮಾ) | 1,00,000 | 80,000 |

ಪಾಲುದಾರಿಕೆ ಒಪ್ಪಂದದ ಪ್ರಕಾರ ಸೌಮ್ಯಳಿಗೆ ಪ್ರತಿ ತಿಂಗಳು ₹500 ರಂತೆ ವೇತನವನ್ನು ನೀಡಲಾಗುವುದು. ಜೊತೆಗೆ ಬಿಮಲ್ ವರ್ಷಕ್ಕೆ ₹40,000 ದಲ್ಲಾಳಿ ಪಡೆಯುವನು. ಬಂಡವಾಳದ ಮೇಲೆ ವರ್ಷಕ್ಕೆ ಶೇ. 6 ರಷ್ಟು ಬಡ್ಡಿ ಜಮಾ ಮಾಡಲಾಗುವುದು. ಸೌಮ್ಯ ಮತ್ತು ಬಿಮಲ್ ಕ್ರಮವಾಗಿ ಆ ವರ್ಷದಲ್ಲಿ ₹30,000 ಮತ್ತು ₹10,000 ತಮ್ಮ ಸ್ವಂತ ವೆಚ್ಚಕ್ಕೆ ಪಡೆಯುವರು. ಈ ಹೊಂದಾಣಿಕೆಗಳ ಪೂರ್ವದಲ್ಲಿ ಸಂಸ್ಥೆಯ ನಿವ್ವಳ ಲಾಭವು ₹ 2,49,000. ಸೌಮ್ಯಳಿಗೆ ಸ್ವಂತ ವೆಚ್ಚದ ಮೇಲೆ ₹750 ಬಡ್ಡಿಯನ್ನು ಮತ್ತು ಬಿಮಲ್ ಸ್ವಂತ ವೆಚ್ಚದ ಮೇಲೆ ₹250 ಬಡ್ಡಿಯನ್ನು ಹಾಕಲಾಗಿದೆ. ಪಾಲುದಾರರ ಬಂಡವಾಳ ಮತ್ತು ಚಾಲ್ತಿ ಖಾತೆಗಳನ್ನು ಮತ್ತು ಲಾಭ ಮತ್ತು ನಷ್ಟದ ವಿತರಣಾ ಖಾತೆಯನ್ನು ತಯಾರಿಸಿ.

2. 1ನೇ ಏಪ್ರಿಲ್, 2015ಕ್ಕೆ ಸೋನಿಯಾ, ಚಾರು ಮತ್ತು ಸ್ಮಿತಾ ಒಂದು ಪಾಲುದಾರಿಕೆ ಸಂಸ್ಥೆಯನ್ನು ಪ್ರಾರಂಭಿಸಿದರು. ಅವರು ಅನುಕ್ರಮವಾಗಿ ₹5,00,000, ₹4,00,000 ಮತ್ತು ₹ 3,00,000 ಬಂಡವಾಳವನ್ನು ಹಾಕಿದರು. ಲಾಭ ಮತ್ತು ನಷ್ಟವನ್ನು 3:2:1 ರ ಅನುಪಾತದಲ್ಲಿ ಹಂಚಿಕೊಳ್ಳಲು ನಿರ್ಧರಿಸುತ್ತಾರೆ. ಪಾಲುದಾರಿಕೆಯಲ್ಲಿ ಸೋನಿಯಾಳಿಗೆ ಪ್ರತಿ ತಿಂಗಳು ₹10,000ರಂತೆ ವೇತನವನ್ನು ಮತ್ತು ಚಾರುಳಿಗೆ ₹50,000 ದಷ್ಟು ದಲ್ಲಾಳಿಯನ್ನು ಪಾವತಿಸುವುದು. ಬಂಡವಾಳದ ಮೇಲೆ ವಾರ್ಷಿಕ ಶೇ. 6 ರಂತೆ ಬಡ್ಡಿಯನ್ನು ನೀಡಲಾಗುವುದು. ಪ್ರಸ್ತುತ ವರ್ಷದಲ್ಲಿ ಸೋನಿಯಾ ₹60,000, ಚಾರು ₹40,000 ಮತ್ತು ಸ್ಮೀತಾ ₹20,000 ಸ್ವಂತ ವೆಚ್ಚಕ್ಕೆ ಪಡೆಯುವರು. ಈ ಮೊತ್ತಕ್ಕೆ ಸೋನಿಯಾಳಿಗೆ ₹2,700, ಚಾರುಳಿಗೆ ₹ 1,800 ಮತ್ತು ಸ್ಮೀತಾಳಿಗೆ ₹900 ಬಡ್ಡಿಯನ್ನು ಹಾಕಲಾಗಿದೆ. 2015–16 ನೇ ವರ್ಷಕ್ಕೆ ಇರುವ ಲಾಭ ಮತ್ತು ನಷ್ಟದ ಖಾತೆಯ ಪ್ರಕಾರ ನಿವ್ವಳ ಲಾಭದ ಮೊತ್ತವು ₹ 3,56,600 ಇರುತ್ತದೆ.
   (i) ಅವಶ್ಯಕ ರೋಜು ನಮೂದುಗಳನ್ನು ದಾಖಲಿಸಿರಿ.
   (ii) ಲಾಭ ಮತ್ತು ನಷ್ಟದ ವಿತರಣೆ ಖಾತೆಯನ್ನು ತಯಾರಿಸಿರಿ.
   (iii) ಪಾಲುದಾರರ ಬಂಡವಾಳ ಖಾತೆಗಳನ್ನು ತೋರಿಸಿರಿ.

## 2.5 ಪಾಲುದಾರರಲ್ಲಿ ಲಾಭದ ವಿತರಣೆ: Distribution of Profits among Partners

ಸಂಸ್ಥೆಯ ಲಾಭ ಮತ್ತು ನಷ್ಟವನ್ನು ಪಾಲುದಾರರಲ್ಲಿ ಒಪ್ಪಂದದ ಅನುಪಾತದಂತೆ ಹಂಚಿಕೆ ಮಾಡಲಾಗುವುದು. ಒಂದು ವೇಳೆ ಪಾಲುದಾರಿಕೆ ಒಪ್ಪಂದವು ಈ ವಿಷಯದಲ್ಲಿ ತಟಸ್ಥವಾಗಿದ್ದರೆ, ಸಂಸ್ಥೆಯ ಲಾಭ ಮತ್ತು ನಷ್ಟವನ್ನು ಎಲ್ಲಾ ಪಾಲುದಾರರು ಸಮಾನವಾಗಿ ಹಂಚಿಕೊಳ್ಳಬೇಕು.

ಏಕವ್ಯಕ್ತಿ ಒಡೆತನ ಸಂಸ್ಥೆಗಳಲ್ಲಿ ಲಾಭ ಮತ್ತು ನಷ್ಟದ ಖಾತೆಯಿಂದ ಕಂಡುಹಿಡಿದ ಲಾಭ ಅಥವಾ ನಷ್ಟವನ್ನು ಮಾಲಿಕನ ಬಂಡವಾಳ ಖಾತೆಗೆ ವರ್ಗಾಯಿಸಲಾಗುತ್ತದೆ ಎಂಬುದು ತಮಗೆ ತಿಳಿದಿದೆ. ಪಾಲುದಾರಿಕೆಯಲ್ಲಿ ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿ, ಬಂಡವಾಳದ ಮೇಲಿನ ಬಡ್ಡಿ, ಪಾಲುದಾರರ ವೇತನ ಮತ್ತು ದಲ್ಲಾಳಿಯಂತಹ ಕೆಲವು ಹೊಂದಾಣಿಕೆಗಳನ್ನು ಮಾಡಬೇಕಾಗುತ್ತದೆ. ಈ ಉದ್ದೇಶಕ್ಕಾಗಿ ಸಂಸ್ಥೆಯು ಲಾಭ ಮತ್ತು ನಷ್ಟ ವಿತರಣಾ ಖಾತೆಯನ್ನು ತಯಾರಿಸುವುದು ರೂಢಿಯಲ್ಲಿದೆ ಮತ್ತು ಪಾಲುದಾರರಿಗೆ ವಿತರಿಸಬಹುದಾದ ಅಂತಿಮ ಲಾಭ ಅಥವಾ ನಷ್ಟವನ್ನು ಕಂಡು ಹಿಡಿದು, ಲಾಭ ಹಂಚಿಕೆಯ ಅನುಪಾತದ ಪ್ರಕಾರ ವಿತರಿಸಲಾಗುವುದು.

### 2.5.1 ಲಾಭ ಮತ್ತು ನಷ್ಟ ವಿತರಣಾ ಖಾತೆ: Profit and Loss Appropriation Account

ಲಾಭ ಮತ್ತು ನಷ್ಟ ವಿತರಣಾ ಖಾತೆಯು ಸಂಸ್ಥೆಯ ಲಾಭ ಮತ್ತು ನಷ್ಟ ಖಾತೆಯ ವಿಸ್ತರಣೆಯಾಗಿದೆ. ಇದು ಪಾಲುದಾರರ ಮಧ್ಯ ಲಾಭ ಮತ್ತು ನಷ್ಟವು ಹೇಗೆ ವಿತರಣೆ ಅಥವಾ ಹಂಚಲ್ಪಟ್ಟಿದೆ ಎಂಬುವುದನ್ನು ತೋರಿಸುತ್ತದೆ. ಪಾಲುದಾರರ ವೇತನ, ದಲ್ಲಾಳಿ, ಬಂಡವಾಳದ ಮೇಲಿನ ಬಡ್ಡಿ, ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿ ಮುಂತಾದವುಗಳಿಗೆ ಸಂಬಂಧಪಟ್ಟ ಎಲ್ಲಾ ಹೊಂದಾಣಿಕೆಗಳನ್ನು ಈ ಖಾತೆಯಲ್ಲಿ ದಾಖಲಿಸಲಾಗುತ್ತದೆ. ಲಾಭ ಮತ್ತು ನಷ್ಟ ಖಾತೆಯಿಂದ ವರ್ಗಾವಣೆಯಾದ ನಿವ್ವಳ ಲಾಭ ಅಥವಾ ನಷ್ಟದೊಂದಿಗೆ ಈ ಖಾತೆಯು ಆರಂಭವಾಗುತ್ತದೆ. ಲಾಭ ಮತ್ತು ನಷ್ಟ ವಿತರಣಾ ಖಾತೆಯನ್ನು ತಯಾರಿಸುವ ಮತ್ತು ಇದರ ಮೂಲಕ ಹಲವಾರು ಹೊಂದಾಣಿಕೆಗಳನ್ನು ಮಾಡುವುದಕ್ಕೆ ಸಂಬಂಧಿಸಿದ ರೋಜು ದಾಖಲೆಗಳನ್ನು ಈ ಕೆಳಗೆ ನೀಡಲಾಗಿದೆ.

**ರೋಜು ದಾಖಲೆಗಳು**

| ವಿವರಗಳು | ಖರ್ಚು ₹ | ಜಮೆ ₹ |
|---|---|---|
| 1. ಲಾಭ ಮತ್ತು ನಷ್ಟ ವಿತರಣಾ ಖಾತೆಗೆ ಲಾಭ ಮತ್ತು ನಷ್ಟ ಖಾತೆಯ ಶಿಲ್ಕನ್ನು ವರ್ಗಾಯಿಸಿದಾಗ: | | |
| (ಎ) ಲಾಭ ಮತ್ತು ನಷ್ಟ ಖಾತೆಯು ಜಮಾ ಶಿಲ್ಕನ್ನು ತೋರಿಸಿದಾಗ (ನಿವ್ವಳ ಲಾಭ); | | |
| ಲಾಭ ಮತ್ತು ನಷ್ಟ ಖಾತೆ ಖರ್ಚು | xxx | |
| ಲಾಭ ಮತ್ತು ನಷ್ಟ ವಿತರಣಾ ಖಾತೆಗೆ | | xxx |
| (ಬಿ) ಲಾಭ ಮತ್ತು ನಷ್ಟ ಖಾತೆಯು ಖರ್ಚಿನ ಶಿಲ್ಕನ್ನು ತೋರಿಸಿದಾಗ (ನಿವ್ವಳ ನಷ್ಟ); | | |
| ಲಾಭ ಮತ್ತು ನಷ್ಟ ವಿತರಣಾ ಖಾತೆ ಖರ್ಚು | xxx | |
| ಲಾಭ ಮತ್ತು ನಷ್ಟ ಖಾತೆಗೆ | | xxx |
| 2. ಬಂಡವಾಳದ ಮೇಲಿನ ಬಡ್ಡಿ: | | |
| (ಎ) ಪಾಲುದಾರರ ಖಾತೆಗೆ ಬಂಡವಾಳದ ಮೇಲಿನ ಬಡ್ಡಿಯನ್ನು ಜಮಾ ಮಾಡಿದಾಗ; | | |
| ಬಂಡವಾಳದ ಮೇಲಿನ ಬಡ್ಡಿ ಖಾತೆ ಖರ್ಚು | xxx | |
| ಪಾಲುದಾರರ ಬಂಡವಾಳ/ ಚಾಲ್ತಿ ಖಾತೆಗೆ (ವೈಯಕ್ತಿಕವಾಗಿ) | | xxx |

| | | |
|---|---|---|
| (ಬಿ) ಲಾಭ ಮತ್ತು ನಷ್ಟ ವಿತರಣಾ ಖಾತೆಗೆ ಬಂಡವಾಳದ ಮೇಲಿನ ಬಡ್ಡಿಯನ್ನು ವರ್ಗಾವಣೆ ಮಾಡಿದಾಗ;<br>ಲಾಭ ಮತ್ತು ನಷ್ಟ ವಿತರಣಾ ಖಾತೆ ಖರ್ಚು<br>ಬಂಡವಾಳದ ಮೇಲಿನ ಬಡ್ಡಿ ಖಾತೆಗೆ | xxx | xxx |
| 3. ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿ:<br>(ಎ) ಪಾಲುದಾರರ ಬಂಡವಾಳ ಖಾತೆಗಳಿಗೆ ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿಯನ್ನು ಆಕರಿಸಿದಾಗ;<br>ಪಾಲುದಾರರ ಬಂಡವಾಳ/ ಚಾಲ್ತಿ ಖಾತೆ (ವೈಯಕ್ತಿಕವಾಗಿ) ಖರ್ಚು<br>ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿ ಖಾತೆಗೆ | xxx | xxx |
| (ಬಿ) ಲಾಭ ಮತ್ತು ನಷ್ಟ ವಿತರಣಾ ಖಾತೆಗೆ ಹಿಂಪಡೆತದ ಮೇಲಿನ ಬಡ್ಡಿಯನ್ನು ವರ್ಗಾವಣೆ ಮಾಡಿದಾಗ;<br>ಬಂಡವಾಳದ ಮೇಲಿನ ಬಡ್ಡಿ ಖಾತೆ ಖರ್ಚು<br>ಲಾಭ ಮತ್ತು ನಷ್ಟ ವಿತರಣಾ ಖಾತೆಗೆ | xxx | xxx |
| 4. ಪಾಲುದಾರರ ವೇತನ:<br>(ಎ) ಪಾಲುದಾರರ ಖಾತೆಗೆ ಪಾಲುದಾರರ ವೇತನವನ್ನು ಜಮಾ ಮಾಡಿದಾಗ;<br>ಪಾಲುದಾರರ ವೇತನ ಖಾತೆ ಖರ್ಚು<br>ಪಾಲುದಾರರ ಬಂಡವಾಳ/ ಚಾಲ್ತಿ ಖಾತೆಗೆ<br>(ವೈಯಕ್ತಿಕವಾಗಿ) | xxx | xxx |
| (ಬಿ) ಲಾಭ ಮತ್ತು ನಷ್ಟ ವಿತರಣಾ ಖಾತೆಗೆ ಪಾಲುದಾರರ ವೇತನವನ್ನು ವರ್ಗಾವಣೆ ಮಾಡಿದಾಗ;<br>ಲಾಭ ಮತ್ತು ನಷ್ಟ ವಿತರಣಾ ಖಾತೆ ಖರ್ಚು<br>ಪಾಲುದಾರರ ವೇತನ ಖಾತೆಗೆ | xxx | xxx |
| 5. ಪಾಲುದಾರರ ದಲ್ಲಾಳಿ:<br>(ಎ) ಪಾಲುದಾರರ ಖಾತೆಗೆ ಪಾಲುದಾರರ ದಲ್ಲಾಳಿಯನ್ನು ಜಮಾ ಮಾಡಿದಾಗ;<br>ಪಾಲುದಾರರ ದಲ್ಲಾಳಿ ಖಾತೆ ಖರ್ಚು<br>ಪಾಲುದಾರರ ಬಂಡವಾಳ/ ಚಾಲ್ತಿ ಖಾತೆಗೆ<br>(ವೈಯಕ್ತಿಕವಾಗಿ) | xxx | xxx |
| (ಬಿ) ಲಾಭ ಮತ್ತು ನಷ್ಟ ವಿತರಣಾ ಖಾತೆಗೆ ಪಾಲುದಾರರ ದಲ್ಲಾಳಿಯನ್ನು ವರ್ಗಾವಣೆ ಮಾಡಿದಾಗ;<br>ಲಾಭ ಮತ್ತು ನಷ್ಟ ವಿತರಣಾ ಖಾತೆ ಖರ್ಚು<br>ಪಾಲುದಾರರ ದಲ್ಲಾಳಿ ಖಾತೆಗೆ<br>(ಬಂಡವಾಳ/ ಚಾಲ್ತಿ ಖಾತೆ) | xxx | xxx |

| | | |
|---|---|---|
| 6. ವಿತರಣೆ ನಂತರ ಲಾಭ ಅಥವಾ ನಷ್ಟದ ಪಾಲು:<br>(ಎ) ಲಾಭವಾದಾಗ;<br>ಲಾಭ ಮತ್ತು ನಷ್ಟ ವಿತರಣಾ ಖಾತೆ ಖರ್ಚು<br>ಪಾಲುದಾರರ ಬಂಡವಾಳ/ ಚಾಲ್ತಿ ಖಾತೆಗೆ(ವೈಯಕ್ತಿಕವಾಗಿ) | xxx | xxx |
| (ಬಿ) ನಷ್ಟವಾದಾಗ;<br>ಪಾಲುದಾರರ ಬಂಡವಾಳ/ ಚಾಲ್ತಿ ಖಾತೆ (ವೈಯಕ್ತಿಕವಾಗಿ) ಖರ್ಚು<br>ಲಾಭ ಮತ್ತು ನಷ್ಟ ವಿತರಣಾ ಖಾತೆಗೆ | xxx | xxx |

**ಖರ್ಚು ಲಾಭ ಮತ್ತು ನಷ್ಟದ ವಿತರಣಾ ಖಾತೆ ಜಮಾ**

| ವಿವರಗಳು | ಮೊತ್ತ (₹) | ವಿವರಗಳು | ಮೊತ್ತ (₹) |
|---|---|---|---|
| ಲಾಭ ಮತ್ತು ನಷ್ಟ ಖಾತೆ (ನಷ್ಟವಿದ್ದಾಗ) | xxx | ಲಾಭ ಮತ್ತು ನಷ್ಟ (ಲಾಭವಿದ್ದಾಗ) | xxx |
| ಬಂಡವಾಳದ ಮೇಲಿನ ಬಡ್ಡಿ | xxx | ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿ | xxx |
| ಪಾಲುದಾರರಿಗೆ ವೇತನ | xxx | ಪಾಲುದಾರರ ಬಂಡವಾಳ ಖಾತೆಗಳು (ನಷ್ಟದ ಹಂಚಿಕೆ) | xxx |
| ಪಾಲುದಾರರಿಗೆ ದಲ್ಲಾಳಿ | xxx | | |
| ಪಾಲುದಾರರ ಸಾಲದ ಮೇಲಿನ ಬಡ್ಡಿ | xxx | | |
| ಪಾಲುದಾರರ ಬಂಡವಾಳ ಖಾತೆಗಳು (ಲಾಭದ ಹಂಚಿಕೆ) | xxx | | |
| | **xxxx** | | **xxxx** |

**ಚಿತ್ರ. 2.3 ಲಾಭ ಮತ್ತು ನಷ್ಟ ವಿತರಣಾ ಖಾತೆ ನಮೂನೆ.**

**ನಿದರ್ಶನ – 2**

1ನೇ ಏಪ್ರಿಲ್, 2015 ರಂದು ಅಮಿತ್, ಬಾಬು ಮತ್ತು ಚಾರು ಒಂದು ಪಾಲುದಾರಿಕೆ ಸಂಸ್ಥೆಯನ್ನು ಪ್ರಾರಂಭಿಸಿದರು. ಅವರು ಅನುಕ್ರಮವಾಗಿ ₹50,000, ₹40,000 ಮತ್ತು ₹30,000 ಬಂಡವಾಳವನ್ನು ಹಾಕಿದರು ಮತ್ತು 3:2:1 ರ ಅನುಪಾತದಲ್ಲಿ ಲಾಭ ಮತ್ತು ನಷ್ಟವನ್ನು ಹಂಚಿಕೊಳ್ಳಲು ಒಪ್ಪಿದರು. ಪ್ರತಿ ತಿಂಗಳು ₹1,000 ದಂತೆ ಅಮಿತ್‌ನಿಗೆ ವೇತನವನ್ನು ಮತ್ತು ಬಾಬುಗೆ ₹5,000 ದಲ್ಲಾಳಿಯನ್ನು ಪಾವತಿಸುವುದು. ಅವರ ಬಂಡವಾಳದ ಮೇಲೆ ವಾರ್ಷಿಕ ಶೇ. 6 ರಷ್ಟು ಬಡ್ಡಿ ನೀಡುವುದು. ಅದೇ ವರ್ಷದಲ್ಲಿ ಅಮಿತ್ ₹6,000, ಬಾಬು ₹4,000 ಮತ್ತು ಚಾರು ₹2,000 ಗಳನ್ನು ತಮ್ಮ ಸ್ವಂತ ವೆಚ್ಚಕ್ಕೆ ಹಿಂಪಡೆಯುವರು. ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿಯೆಂದು ಅಮಿತ್‌ನಿಗೆ ₹270, ಬಾಬುಗೆ ₹180 ಮತ್ತು ಚಾರೂಗೆ ₹90 ಗಳನ್ನು ಹಾಕಲಾಗಿದೆ. 31ನೇ ಮಾರ್ಚ, 2015 ರ ವರ್ಷಾಂತ್ಯಕ್ಕೆ ಲಾಭ ಮತ್ತು ನಷ್ಟದ ಖಾತೆಯ ಪ್ರಕಾರ ₹35,660 ನಿವ್ವಳ ಲಾಭವಿತ್ತು. ಲಾಭ ಮತ್ತು ನಷ್ಟದ ವಿತರಣಾ ಖಾತೆಯನ್ನು ತಯಾರಿಸಿ, ಪಾಲುದಾರರಲ್ಲಿನ ಲಾಭದ ಹಂಚಿಕೆಯನ್ನು ತೋರಿಸಿರಿ.

**ಪರಿಹಾರ:**

**ಖರ್ಚು** **ಲಾಭ ಮತ್ತು ನಷ್ಟದ ವಿತರಣಾ ಖಾತೆ** **ಜಮಾ**

| ವಿವರಗಳು | | ಮೊತ್ತ (₹) | ವಿವರಗಳು | | ಮೊತ್ತ (₹) |
|---|---|---|---|---|---|
| ಅಮಿತ್‌ನ ವೇತನ | | 12,000 | ನಿವ್ವಳ ಲಾಭ | | 35,660 |
| ಬಾಬುನ ದಲ್ಲಾಳಿ | | 5,000 | ಸ್ವಂತಕ್ಕೆ ಪಡೆದ ಮೊತ್ತಕ್ಕೆ ಬಡ್ಡಿ; | | |
| ಬಂಡವಾಳದ ಮೇಲಿನ ಬಡ್ಡಿ; | | | ಅಮಿತ್ | 270 | |
| ಅಮಿತ್ | 3,000 | | ಬಾಬು | 180 | |
| ಬಾಬು | 2,400 | | ಚಾರು | 90 | 540 |
| ಚಾರು | 1,800 | 7,200 | | | |
| ಬಂಡವಾಳ ಖಾತೆಗೆ ವರ್ಗಾಯಿಸಲಾದ ಲಾಭದಲ್ಲಿನ ಪಾಲು; | | | | | |
| ಅಮಿತ್ | 6,000 | | | | |
| ಬಾಬು | 4,000 | | | | |
| ಚಾರು | 2,000 | 12,000 | | | |
| | | **36,200** | | | **36,200** |

**ನಿದರ್ಶನ – 3**

ಅಮಿತಾಭ್ ಮತ್ತು ಬಬುಲ್ ಪಾಲುದಾರರಾಗಿದ್ದು, ಅನುಕ್ರಮವಾಗಿ ₹50,000 ಮತ್ತು ₹30,000 ಗಳಷ್ಟು ಬಂಡವಾಳದೊಂದಿಗೆ, 3:2 ರಷ್ಟು ಲಾಭ ಹಂಚಿಕೆಯ ಅನುಪಾತ ಹೊಂದಿದ್ದಾರೆ. ವಾರ್ಷಿಕ ಶೇ. 6 ರಷ್ಟು ಬಂಡವಾಳದ ಮೇಲೆ ಬಡ್ಡಿಯನ್ನು ಪಡೆಯಲು ಒಪ್ಪಿದ್ದಾರೆ. ಬಾಬುಗೆ ವಾರ್ಷಿಕ ವೇತನ ₹2,500 ರಷ್ಟು ಅನುಮತಿಸಲಾಗಿದೆ. ಬಂಡವಾಳದ ಮೇಲೆ ಬಡ್ಡಿಯನ್ನು ಲೆಕ್ಕಿಸುವುದಕ್ಕಿಂತ ಮುಂಚೆ, ಆದರೆ ಬಾಬುನ ವೇತನವನ್ನು ಖರ್ಚು ಹಾಕಿದ ನಂತರ, 2014–15 ನೇ ವರ್ಷದಲ್ಲಿ ₹ 12,500 ಗಳಷ್ಟು ಲಾಭವಿತ್ತು. ವ್ಯವಸ್ಥಾಪಕನಿಗೆ ಲಾಭದಲ್ಲಿ ಶೇ. 5 ರಷ್ಟು ದಲ್ಲಾಳಿಯನ್ನು ನೀಡುವ ಅವಕಾಶ ಕಲ್ಪಿಸಬೇಕು.

31ನೇ ಮಾರ್ಚ್,2015 ರ ವರ್ಷಾಂತ್ಯಕ್ಕೆ ಲಾಭ ಮತ್ತು ನಷ್ಟದ ವಿತರಣಾ ಖಾತೆಯನ್ನು ತಯಾರಿಸಿ, ಲಾಭದ ಹಂಚಿಕೆ ಪ್ರಮಾಣ ಮತ್ತು ಪಾಲುದಾರರ ಖಾತೆಗಳನ್ನು ತೋರಿಸಿರಿ.

**ಪರಿಹಾರ:**

**ಖರ್ಚು** **ಲಾಭ ಮತ್ತು ನಷ್ಟದ ವಿತರಣಾ ಖಾತೆ** **ಜಮಾ**

| ವಿವರಗಳು | | ಮೊತ್ತ (₹) | ವಿವರಗಳು | ಮೊತ್ತ (₹) |
|---|---|---|---|---|
| ಬಬುಲ್‌ನ ವೇತನ | | 2,500 | ನಿವ್ವಳ ಲಾಭ (ಬಬುಲ್‌ನ ವೇತನ ಪಾವತಿಗೆ ಮುಂಚೆ) | 15,000 |
| ಬಂಡವಾಳದ ಮೇಲಿನ ಬಡ್ಡಿ: | | | | |
| ಅಮಿತಾಭ್ | 3,000 | | | |
| ಬಬುಲ್ | 1,800 | 4,800 | | |
| ವ್ಯವಸ್ಥಾಪಕನ ದಲ್ಲಾಳಿ; (₹15,000 ಕ್ಕೆ ಶೇ. 5 ರಷ್ಟು) | | 750 | | |
| ಬಂಡವಾಳ ಖಾತೆಗೆ ವರ್ಗಾಯಿಸಲಾದ ಲಾಭ; | | | | |
| ಅಮಿತಾಭ್ | 4,170 | | | |
| ಬಬುಲ್ | 2,780 | 6,950 | | |
| | | **15,000** | | **15,000** |

**ಖರ್ಚು ಅಮಿತಾಭ್‌ನ ಬಂಡವಾಳ ಖಾತೆ ಜಮಾ**

| ದಿನಾಂಕ | ವಿವರಗಳು | ರೋ. ಪಾ. | ಮೊತ್ತ (₹) | ದಿನಾಂಕ | ವಿವರಗಳು | ರೋ. ಪಾ. | ಮೊತ್ತ (₹) |
|---|---|---|---|---|---|---|---|
| 2015 | | | | 2014 | | | |
| ಮಾರ್ಚ 31 | ಮುಂದುವರೆದ ಶಿಲ್ಕು | | 57,170 | ಏಪ್ರಿಲ್ 1 | ಆರಂಭದ ಶಿಲ್ಕು | | 50,000 |
| | | | | 2015 ಮಾರ್ಚ 31 | ಬಂಡವಾಳದ ಮೇಲೆ ಬಡ್ಡಿ | | 3,000 |
| | | | | 2015 ಮಾರ್ಚ 31 | ಲಾಭ ಮತ್ತು ನಷ್ಟ (ಲಾಭದ ಹಂಚಿಕೆ) | | 4,170 |
| | | | **57,170** | | | | **57,170** |

**ಖರ್ಚು ಬಬುಲ್‌ನ ಬಂಡವಾಳ ಖಾತೆ ಜಮಾ**

| ದಿನಾಂಕ | ವಿವರಗಳು | ರೋ. ಪಾ. | ಮೊತ್ತ (₹) | ದಿನಾಂಕ | ವಿವರಗಳು | ರೋ. ಪಾ. | ಮೊತ್ತ (₹) |
|---|---|---|---|---|---|---|---|
| 2015 | | | | 2014 | | | |
| ಮಾರ್ಚ 31 | ಮುಂದುವರೆದ ಶಿಲ್ಕು | | 37,080 | ಏಪ್ರಿಲ್ 1 | ಆರಂಭದ ಶಿಲ್ಕು | | 30,000 |
| | | | | 2015 | | | |
| | | | | ಮಾರ್ಚ 31 | ವೇತನ | | 2,500 |
| | | | | ಮಾರ್ಚ 31 | ಬಂಡವಾಳದ ಮೇಲೆ ಬಡ್ಡಿ | | 1,800 |
| | | | | ಮಾರ್ಚ 31 | ಲಾಭ ಮತ್ತು ನಷ್ಟ (ಲಾಭದ ವಿತರಣೆ) | | 2,780 |
| | | | **37,080** | | | | **37,080** |

**ನಿಮ್ಮ ತಿಳುವಳಿಕೆಯನ್ನು ಪರೀಕ್ಷಿಸಿಕೊಳ್ಳಿರಿ –II Test Your Understanding – II**

1. 1ನೇ ಏಪ್ರಿಲ್, 2015 ರಂದು ರಾಜು ಮತ್ತು ಜೈ ಪಾಲುದಾರಿಕೆಯ ವ್ಯವಹಾರವನ್ನು ಪ್ರಾರಂಭಿಸಿದರು. ಲಿಖಿತವಾಗಲಿ ಅಥವಾ ಮೌಖಿಕವಾಗಿಯಾಗಲಿ ಯಾವುದೇ ಪಾಲುಗಾರಿಕೆಯ ಒಪ್ಪಂದವಾಗಿರಲಿಲ್ಲ. ಅವರು ಕ್ರಮವಾಗಿ ₹4,00,000 ಮತ್ತು ₹1,00,000 ಬಂಡವಾಳವನ್ನು ಹಾಕಿದ್ದರು. 1ನೇ ಅಕ್ಟೋಬರ್, 2015 ರಂದು ರಾಜು ₹ 2,00,000 ಸಂಸ್ಥೆಗೆ ಸಾಲವಾಗಿ ನೀಡಿದ್ದನು. 1ನೇ ಜುಲೈ, 2015 ರಂದು ರಾಜುಗೆ ಅಪಘಾತ ಸಂಭವಿಸಿದ್ದರಿಂದ, ಅವನು 30ನೇ ಸಪ್ಟೆಂಬರ್, 2015ರ ವರೆಗೆ ವ್ಯವಹಾರದಲ್ಲಿ ಹಾಜರಿರಲು ಆಗಲಿಲ್ಲ. ಮಾರ್ಚ 31, 2016ನೇ ವರ್ಷಕ್ಕೆ ಲಾಭದ ಮೊತ್ತವು ₹ 50,600 ಆಗಿತ್ತು. ಸಂಸ್ಥೆಯ ಲಾಭದ ಹಂಚಿಕೆಯಲ್ಲಿ ಅವರ ಮಧ್ಯ ವಿವಾದ ಪ್ರಾರಂಭವಾಯಿತು.

   ರಾಜುನ ಕೋರಿಕೆ:

   (i) ಬಂಡವಾಳ ಮತ್ತು ಸಾಲದ ಮೇಲೆ ಅವನಿಗೆ ಶೇ. 10 ರಷ್ಟು ಬಡ್ಡಿಯನ್ನು ನೀಡಬೇಕು.

   (ii) ಬಂಡವಾಳದ ಅನುಪಾತದ ಮೇಲೆ ಅವನಿಗೆ ಲಾಭವನ್ನು ಹಂಚಬೇಕು.

   ಜೈ ನ ಕೋರಿಕೆ:

   (i) ನಿವ್ವಳ ಲಾಭವನ್ನು ಸಮನಾಗಿ ಹಂಚಬೇಕು.

   (ii) ರಾಜುನ ಅನಾರೋಗ್ಯದ ಅವಧಿಯಲ್ಲಿ ಅವನಿಗೆ ವಾರ್ಷಿಕ ₹1,000 ದಷ್ಟು ಗೌರವ ಸಂಭಾವನೆ ನೀಡಬೇಕು.

   (iii) ಬಂಡವಾಳ ಮತ್ತು ಸಾಲದ ಮೇಲೆ ವಾರ್ಷಿಕ ಶೇ. 6 ರಷ್ಟು ಬಡ್ಡಿಯನ್ನು ನೀಡಬೇಕು.

   1932ರ ಪಾಲುಗಾರಿಕೆ ಕಾಯ್ದೆಯ ಉಪಬಂಧಗಳನ್ವಯ ಪ್ರತಿಯೊಂದು ಸಮಸ್ಯೆಗೆ ಸರಿಯಾದ ಪರಿಹಾರವನ್ನು ತಿಳಿಸಿರಿ.

2. ರೀನಾ ಮತ್ತು ರಮನ್ ಅನುಕ್ರಮವಾಗಿ ₹3,00,000 ಮತ್ತು ₹1,00,000 ಬಂಡವಾಳದೊಂದಿಗೆ ಪಾಲುದಾರರಾಗಿದ್ದಾರೆ. ಲಾಭ ಮತ್ತು ನಷ್ಟದ ಖಾತೆಯ ಪ್ರಕಾರ ಮಾರ್ಚ 31, 2015 ರ ವರ್ಷಾಂತ್ಯಕ್ಕೆ ₹1,20,000 ದಷ್ಟು ಲಾಭವಿದೆ. ಬಂಡವಾಳದ ಮೇಲೆ ವಾರ್ಷಿಕ ಶೇ. 6 ರಷ್ಟು ಬಡ್ಡಿಯನ್ನು ಅನುಮತಿಸಿದೆ. ರಮನ್ ₹ 30,000 ವಾರ್ಷಿಕ ವೇತನ ಪಡೆಯಲು ಅರ್ಹನಿದ್ದಾನೆ. ಪಾಲುದಾರರು ಕ್ರಮವಾಗಿ ₹30,000 ಮತ್ತು ₹20,000 ತಮ್ಮ ಸ್ವಂತ ವೆಚ್ಚಕ್ಕೆ ಹಿಂಪಡೆದಿದ್ದಾರೆ. ರೀನಾಳಿಗೆ ₹1,000 ಮತ್ತು ರಮನ್ ಗೆ ₹500 ರಷ್ಟು ಸ್ವಂತಕ್ಕೆ ಹಿಂಪಡೆತದ ಮೇಲೆ ಬಡ್ಡಿಯನ್ನು ಹಾಕಲಾಗಿದೆ.
ರೀನಾ ಮತ್ತು ರಮನ್ ಸಮನಾದ ಪಾಲುದಾರರೆಂದು ಊಹಿಸಿ, ಅವಶ್ಯಕ ವಿತರಣೆಯ ಬಳಿಕ, ಅವರ ಲಾಭದ ಹಂಚಿಕೆಯ ಪ್ರಮಾಣವನ್ನು ತಿಳಿಸಿ.

### 2.5.2 ಬಂಡವಾಳದ ಮೇಲಿನ ಬಡ್ಡಿ ಲೆಕ್ಕಚಾರ: Calculation of Interest on Capital

ಪಾಲುದಾರರ ಸ್ಪಷ್ಟವಾದ ಒಪ್ಪಿಗೆ ಇರದ ಹೊರತು ಪಾಲುದಾರರ ಬಂಡವಾಳದ ಮೇಲೆ ಬಡ್ಡಿಯನ್ನು ಪಾವತಿಸಲು ಬರುವುದಿಲ್ಲ. ಇದನ್ನು ಒಪ್ಪಂದದಲ್ಲಿ ಸ್ಪಷ್ಟವಾಗಿ ಅನುಮತಿಸಿದ್ದರೆ, ಆ ಹಣಕಾಸು ವರ್ಷದ ಅವಧಿಯಲ್ಲಿ ಬಂಡವಾಳ ಉಪಯೋಗಿಸಿದ ಅವಧಿಗೆ ಒಪ್ಪಿದ ದರದಂತೆ ಬಡ್ಡಿಯನ್ನು ಪಾಲುಗಾರರ ಖಾತೆಗೆ ಜಮೆ ಮಾಡಲಾಗುವುದು. ಬಂಡವಾಳದ ಮೇಲಿನ ಬಡ್ಡಿಯನ್ನು ಸಾಮಾನ್ಯವಾಗಿ ಎರಡು ಸಂದರ್ಭಗಳಲ್ಲಿ ಅನುಮತಿಸಲಾಗುತ್ತದೆ: (1) ಪಾಲುದಾರರು ಅಸಮ ಪ್ರಮಾಣದಲ್ಲಿ ಬಂಡವಾಳವನ್ನು ಹಾಕಿ ಸಮ ಪ್ರಮಾಣದಲ್ಲಿ ಲಾಭವನ್ನು ಹಂಚಿಕೊಂಡಾಗ. (2) ಸಮ ಪ್ರಮಾಣದಲ್ಲಿ ಬಂಡವಾಳವನ್ನು ಹಾಕಿ ಅಸಮ ಪ್ರಮಾಣದಲ್ಲಿ ಲಾಭ ಹಂಚಿಕೊಂಡಾಗ.

ಲೆಕ್ಕ ಬರಹದ ವರ್ಷದಲ್ಲಿನ ಬಂಡವಾಳದ ಹಿಂಪಡೆತ ಅಥವಾ ಹೆಚ್ಚುವರಿ ಬಂಡವಾಳದ ಮೇಲಿನ ಬಡ್ಡಿಯನ್ನು ಲೆಕ್ಕ ಮಾಡಲಾಗುತ್ತದೆ.

ಉದಾಹರಣೆಗೆ, ಮೋಹಿನಿ, ರಷ್ಮಿ ಮತ್ತು ನವೀನ ರವರು ಕ್ರಮವಾಗಿ ₹ 3,00,000, ₹ 2,00,000 ಮತ್ತು ₹ 1,00,000 ಗಳೊಂದಿಗೆ ಪಾಲುದಾರಿಕೆ ವ್ಯವಹಾರದಲ್ಲಿ ಸೇರಿರುತ್ತಾರೆ. ಅವರು ಲಾಭ ಮತ್ತು ನಷ್ಟವನ್ನು ಸಮಾನವಾಗಿ ಹಂಚಿಕೊಳ್ಳಲು ನಿರ್ಧರಿಸುತ್ತಾರೆ ಮತ್ತು ಪಾಲುದಾರರಿಗೆ ಬಂಡವಾಳದ ಮೇಲೆ ವಾರ್ಷಿಕ ಶೇ. 10 ರಂತೆ ಬಡ್ಡಿ ನೀಡಲು ಒಪ್ಪಿಕೊಳ್ಳುತ್ತಾರೆ. ವರ್ಷದಲ್ಲಿ ಬಂಡವಾಳಕ್ಕೆ ಯಾವುದೇ ಹೆಚ್ಚುವರಿ ಅಥವಾ ಹಿಂಪಡೆತ ಇರುವುದಿಲ್ಲ. ಬಂಡವಾಳದ ಮೇಲೆ ಬಡ್ಡಿಯು ಮೋಹಿನಿಗೆ ₹ 30,000 (₹3,00,000 ಕ್ಕೆ ಶೇ. 10 ರಂತೆ) ರಷ್ಮಿಗೆ ₹ 20,000 (₹2,00,000 ಕ್ಕೆ ಶೇ. 10 ರಂತೆ) ಮತ್ತು ನವೀನ ಗೆ ₹ 10,000 (₹1,00,000 ಕ್ಕೆ ಶೇ. 10 ರಂತೆ) ಬರುತ್ತದೆ.

ಇನ್ನೊಂದು ಪ್ರಕರಣವನ್ನು ತೆಗೆದುಕೊಳ್ಳೋಣ, ಮನ್ಸೂರ ಮತ್ತು ರೇಷ್ಮಾ ಪಾಲುದಾರರಾಗಿರುವ ಪಾಲುದಾರಿಕೆ ಸಂಸ್ಥೆಯಲ್ಲಿ, ಎಪ್ರಿಲ್ 1, 2015 ರಂದು ಅವರ ಬಂಡವಾಳ ಖಾತೆಗಳು ಕ್ರಮವಾಗಿ ₹ 2,00,000 ಮತ್ತು 1,50,000 ಶಿಲ್ಕು ತೋರಿಸುತ್ತಿವೆ. 2015 ಅಗಷ್ಟ 1 ರಂದು ಮನ್ಸೂರ ರವರು ₹ 1,00,000 ಗಳಷ್ಟು ಹೆಚ್ಚುವರಿ ಬಂಡವಾಳವಾಗಿ ತೊಡಗಿಸುತ್ತಾನೆ. ಅದೇ ರೀತಿ ರೇಷ್ಮಾ ರವರು 2015 ಅಕ್ಟೋಬರ್ 1 ರಂದು ₹1,50,000 ಗಳಷ್ಟು ಹೆಚ್ಚುವರಿ ಬಂಡವಾಳವನ್ನಾಗಿ ತರುತ್ತಾಳೆ. ಬಂಡವಾಳದ ಮೇಲೆ ಶೇ. 6 ರಂತೆ ಬಡ್ಡಿಯನ್ನು ಅನುಮತಿಸಲಾಗಿದೆ. ಇದನ್ನು ಈ ಕೆಳಗಿನಂತೆ ಲೆಕ್ಕ ಮಾಡಬಹುದು.

ಮನ್ಸೂರ ರವರಿಗೆ $\left(₹2,00,000 \times \frac{6}{100}\right) + \left(₹1,00,000 \times \frac{6}{100} \times \frac{8}{12}\right)$

= ₹ 12,000 + ₹ 4,000 = ₹ **16,000**

ರೇಷ್ಮಾ ರವರಿಗೆ $\left(₹1,50,000 \times \frac{6}{100}\right) + \left(₹1,50,000 \times \frac{6}{100} \times \frac{6}{12}\right)$

= ₹ 9,000 + ₹ 4,500 = ₹ **13,500**

ಹಣಕಾಸು ವರ್ಷದಲ್ಲಿ ಪಾಲುದಾರರ ಹೆಚ್ಚುವರಿ ಬಂಡವಾಳದ ಹೂಡಿಕೆಯ ಜೊತೆಗೆ ಬಂಡವಾಳದ ಹಿಂಪಡೆತವೂ ಸಹ ಇದ್ದರೆ, ಬಂಡವಾಳದ ಮೇಲಿನ ಬಡ್ಡಿಯ ಲೆಕ್ಕಚಾರವು ಈ ಕೆಳಗಿನಂತಿದೆ.

(i) ಪಾಲುದಾರರ ಬಂಡವಾಳ ಖಾತೆಗಳ ಆರಂಭಿಕ ಶಿಲ್ಕಿನ ಮೇಲೆ ಪೂರ್ತಿ ವರ್ಷಕ್ಕೆ ಬಡ್ಡಿಯನ್ನು ಲೆಕ್ಕ ಹಾಕಲಾಗುತ್ತದೆ.

(ii) ವರ್ಷಾವಧಿಯಲ್ಲಿ ಯಾವುದೇ ಪಾಲುದಾರರು ಹೆಚ್ಚುವರಿ ಬಂಡವಾಳ ತಂದಿದ್ದರೆ, ಅಂತಹ ಬಂಡವಾಳದ ಮೇಲೆ, ಹೆಚ್ಚುವರಿ ಬಂಡವಾಳ ಹೂಡಿಕೆ ಮಾಡಿದ ದಿನಾಂಕದಿಂದ ಹಣಕಾಸು ವರ್ಷದ ಕೊನೆಯ ದಿನಾಂಕದ ವರೆಗಿನ ಅವಧಿಗೆ ಬಡ್ಡಿ ಲೆಕ್ಕ ಹಾಕಲಾಗುತ್ತದೆ.

(iii) ವರ್ಷಾವಧಿಯಲ್ಲಿ ಬಂಡವಾಳ ಹಿಂಪಡೆದ ಮೊತ್ತದ (ಸಾಮಾನ್ಯ ಹಿಂಪಡೆತಗಳನ್ನು ಹೊರತು ಪಡಿಸಿ) ಮೇಲೆ, ಬಂಡವಾಳ ಹಿಂಪಡೆದ ದಿನಾಂಕದಿಂದ ಹಣಕಾಸು ವರ್ಷದ ಕೊನೆಯ ದಿನಾಂಕದ ವರೆಗಿನ ಅವಧಿಗೆ ಬಡ್ಡಿ ಲೆಕ್ಕ ಹಾಕಲಾಗುತ್ತದೆ ಮತ್ತು ಇದನ್ನು ಮೇಲಿನ ಅಂಶ 1 ಮತ್ತು 2 ರಲ್ಲಿ ಲೆಕ್ಕ ಮಾಡಲಾದ ಒಟ್ಟು ಬಡ್ಡಿ ಮೊತ್ತದಲ್ಲಿ ಕಡಿತಗೊಳಿಸಲಾಗುತ್ತದೆ.

ಪರ್ಯಾಯವಾಗಿ, ಸಂಬಂಧಿಸಿದ ಅವಧಿಗಳಿಗೆ ಹೂಡಿಕೆಯಾಗಿರುವ ಮೊತ್ತಕ್ಕೆ ಸಂಬಂಧಿಸಿದಂತೆ ಇದನ್ನು ಲೆಕ್ಕಹಾಕಬಹುದು.

**ನಿದರ್ಶನ – 4**

ಸಲೋನಿ ಮತ್ತು ಸೃಷ್ಠಿ ಸಂಸ್ಥೆಯ ಪಾಲುದಾರರಾಗಿದ್ದಾರೆ. ಏಪ್ರೀಲ್ 1, 2015 ಕ್ಕೆ ಅವರ ಬಂಡವಾಳ ಖಾತೆಯ ಶಿಲ್ಕು ಕ್ರಮವಾಗಿ ₹2,00,000 ಮತ್ತು ₹3,00,000 ತೋರಿಸುತ್ತಿದೆ. 1ನೇ ಜುಲೈ, 2015 ಕ್ಕೆ ಹೆಚ್ಚುವರಿ ಬಂಡವಾಳವಾಗಿ ಸಲೋನಿ ₹50,000 ಮತ್ತು ಸೃಷ್ಠಿ ₹60,000 ತೊಡಗಿಸಿದ್ದಾರೆ. ಅವರ ಬಂಡವಾಳದಿಂದ ಅಕ್ಟೋಬರ್ 01 ರಂದು ಸಲೋನಿ ₹30,000 ಮತ್ತು ಜನೇವರಿ 1, 2016ಕ್ಕೆ ಸೃಷ್ಠಿ ₹15,000 ಸ್ವಂತಕ್ಕೆ ಪಡೆದಿದ್ದಾರೆ. ವಾರ್ಷಿಕ ಶೇ. 8 ರಷ್ಟು ಬಡ್ಡಿಯನ್ನು ಅನುಮತಿಸಲಾಗಿದೆ. 2015–16 ನೇ ಹಣಕಾಸಿನ ವರ್ಷಕ್ಕೆ ಸಂಬಂಧಿಸಿದಂತೆ ಇಬ್ಬರೂ ಪಾಲುಗಾರರು ಬಂಡವಾಳದ ಮೇಲೆ ಪಾವತಿಸಬಹುದಾದ ಬಡ್ಡಿಯನ್ನು ಲೆಕ್ಕಹಾಕಿರಿ.

**ಪರಿಹಾರ:**

**ಬಂಡವಾಳದ ಮೇಲೆ ಬಡ್ಡಿ ಲೆಕ್ಕಚಾರ ತೋರಿಸುವ ತಃಖ್ತೆ**

| **ಸಲೋನಿ:** | | (₹) |
|---|---|---|
| ₹ 2,00,000ಕ್ಕೆ 1 ವರ್ಷದ ಬಡ್ಡಿ | $= ₹2,00,000 \times \frac{8}{100} =$ | 16,000 |
| (+) ಕೂಡಿಸಿ: ₹50,000 ಕ್ಕೆ 9 ತಿಂಗಳ ಬಡ್ಡಿ | $= ₹50,000 \times \frac{8}{100} \times \frac{9}{12} =$ | 3,000 |
| | | 19,000 |
| (–) ಕಳೆಯಿರಿ: ₹ 30,000ಕ್ಕೆ 6 ತಿಂಗಳ ಬಡ್ಡಿ | $= ₹30,000 \times \frac{8}{100} \times \frac{6}{12} =$ | 1,200 |
| | | **17,800** |

**ಇದಕ್ಕೆ ಪರ್ಯಾಯವಾಗಿ ಬಡ್ಡಿಯನ್ನು ಈ ರೀತಿ ಲೆಕ್ಕ ಹಾಕಬಹುದು:**

₹ 2,00,000 ಕ್ಕೆ 3 ತಿಂಗಳಿಗೆ, ₹2,50,000 ಕ್ಕೆ 3 ತಿಂಗಳಿಗೆ ಮತ್ತು ₹2,20,000ಕ್ಕೆ 6 ತಿಂಗಳಿಗೆ (₹4,000 + ₹5,000 + ₹8,800 = ₹ 17,800.) ಬಡ್ಡಿಯನ್ನು ವಿಧಿಸಬಹುದು.

**ಸೃಷ್ಟಿ :**

₹ 3,00,000 ಕ್ಕೆ ಶೇ. 8 ರಂತೆ 1 ವರ್ಷದ ಬಡ್ಡಿ $= ₹3,00,000 \times \frac{8}{100} =$ 24,000

ಕೂಡಿಸಿ: (+) ₹ 60,000 ಕ್ಕೆ 9 ತಿಂಗಳ ಬಡ್ಡಿ $= ₹60,000 \times \frac{8}{100} \times \frac{9}{12} =$ 3,600

27,600

ಕಳೆಯಿರಿ: (–) ₹ 15,000ಕ್ಕೆ 3 ತಿಂಗಳ ಬಡ್ಡಿ (ಸ್ವಂತ ವೆಚ್ಚ ) $= ₹15,000 \times \frac{8}{100} \times \frac{3}{12} =$ 300
(ಹಿಂಪಡೆದ ಮೊತ್ತ)

**27,300**

ಪರ್ಯಾಯವಾಗಿ ₹3,00,000ಕ್ಕೆ 3 ತಿಂಗಳಿಗೆ, ₹3,60,000ಕ್ಕೆ 6 ತಿಂಗಳಿಗೆ ಮತ್ತು ₹3,45,000 ಕ್ಕೆ 3 ತಿಂಗಳಿಗೆ (₹6,000+₹14,400+₹6,900 = 27,300) ಬಡ್ಡಿಯನ್ನು ವಿಧಿಸಬಹುದು.

**ನಿದರ್ಶನ – 5**

ಜೋಶ್ ಮತ್ತು ಕ್ರಿಶ್ ಪಾಲುದಾರರಾಗಿದ್ದು, ಲಾಭ ಮತ್ತು ನಷ್ಟದ ಹಂಚಿಕೆ 3:1 ರ ಅನುಪಾತದಲ್ಲಿದೆ. 2015–16 ನೇ ಹಣಕಾಸಿನ ವರ್ಷಾಂತ್ಯಕ್ಕೆ ಅವರ ಬಂಡವಾಳವು ಕ್ರಮವಾಗಿ ₹1,50,000 ಮತ್ತು ₹75,000 ಇರುತ್ತದೆ. 2015–16 ನೇ ವರ್ಷದಲ್ಲಿ ಜೋಶ್ ₹20,000 ಮತ್ತು ಕ್ರಿಶ್ ₹5,000 ಸ್ವಂತವೆಚ್ಚಕ್ಕೆ ಪಡೆದಿದ್ದಾರೆ. ಪಾಲುಗಾರರ ಬಂಡವಾಳದ ಖಾತೆಗೆ ತಕ್ಕಂತೆ ಖರ್ಚು ಹಾಕಲಾಗಿತ್ತು. ಬಂಡವಾಳದ ಮೇಲೆ ಬಡ್ಡಿ ಹಾಕುವುದಕ್ಕಿಂತ ಪೂರ್ವದಲ್ಲಿ ವರ್ಷದ ಲಾಭವು ₹16,000 ಇದೆ. ಅದನ್ನು ಅವರ ಲಾಭ ಹಂಚಿಕೆ ಪ್ರಮಾಣದಲ್ಲಿ ಖರ್ಚು ಹಾಕಲಾಗಿತ್ತು. ಅಕ್ಟೋಬರ್ 1, 2015 ರಂದು ಕ್ರಿಶ್‌ನು ₹16,000 ಹೆಚ್ಚುವರಿ ಬಂಡವಾಳವಾಗಿ ತಂದನು. 2015–16 ನೇ ವರ್ಷಕ್ಕೆ, ವಾರ್ಷಿಕ ಶೇ. 12 ರಂತೆ ಬಂಡವಾಳದ ಮೇಲೆ ಬಡ್ಡಿಯನ್ನು ಲೆಕ್ಕಹಾಕಿರಿ.

**ಪರಿಹಾರ:**

**ಆರಂಭಿಕ ಬಂಡವಾಳ ಲೆಕ್ಕಚಾರ ತೋರಿಸುವ ತಃಖ್ತೆ**

| ವಿವರಗಳು | ಜೋಶ್ (₹) | ಕ್ರಿಶ್ (₹) |
|---|---|---|
| ಅಂತಿಮ ಬಂಡವಾಳ | 1,50,000 | 75,000 |
| ಕೂಡಿಸಿರಿ (+): ವರ್ಷಾವಧಿಯ ಸ್ವಂತ ವೆಚ್ಚ | 20,000 | 5,000 |
| | **1,70,000** | **80,000** |
| ಕಳೆಯಿರಿ (–): ಲಾಭದ ಪಾಲು (ಜಮಾ ಆಗಿದ್ದು) | 12,000 | 4,000 |
| | **1,58,000** | **76,000** |
| ಕಳೆಯಿರಿ (–): ಹೆಚ್ಚುವರಿ ಬಂಡವಾಳ | – | 16,000 |
| ಆರಂಭದ ಬಂಡವಾಳ | **1,58,000** | **60,000** |

ಜೋಶ್‌ನ ಬಂಡವಾಳದ ಮೇಲಿನ ಬಡ್ಡಿ ₹19,200 (₹1,60,000 ಕ್ಕೆ ಶೇ. 12 ರಂತೆ) ಮತ್ತು ಕ್ರಿಶ್‌ನದ್ದು ₹960 ಈ ಮುಂದಿನಂತೆ ಲೆಕ್ಕಹಾಕಿದೆ.

$$\left(₹60,000 \times \frac{12}{100}\right) + \left(₹16,000 \times \frac{12}{100} \times \frac{6}{12}\right) = ₹7,200 + ₹960 = ₹8,160$$

ಕೆಲವು ಸಲ ಪಾಲುದಾರರ ಪ್ರಾರಂಭಿಕ ಬಂಡವಾಳವನ್ನು ನೀಡದೇ ಇರಬಹುದು. ಅಂತಹ ಪ್ರಕರಣದಲ್ಲಿ ಬಂಡವಾಳದ ಮೇಲಿನ ಬಡ್ಡಿಯನ್ನು ಲೆಕ್ಕಿಸುವುದಕ್ಕಿಂತ ಮುಂಚೆ ಹೆಚ್ಚುವರಿ ಬಂಡವಾಳ ತೊಡಗಿಸಿದ್ದನ್ನು ಮತ್ತು ಬಂಡವಾಳ ಹಿಂಪಡೆದದ್ದನ್ನು, ಸ್ವಂತಕ್ಕೆ ಹಿಂಪಡೆದದ್ದು, ಲಾಭ ಅಥವಾ ನಷ್ಟದ ಪಾಲು ಇವುಗಳನ್ನು ಮೊದಲೇ ಬಂಡವಾಳ ಖಾತೆಗಳಲ್ಲಿ ತೋರಿಸಿದ್ದರೆ, ಪಾಲುದಾರರ ಪ್ರಾರಂಭಿಕ ಬಂಡವಾಳವನ್ನು ಮೊದಲು ಲೆಕ್ಕಿಸಬೇಕು.

ಈಗಾಗಲೇ ಸ್ಪಷ್ಟಪಡಿಸಿದಂತೆ, ಲೆಕ್ಕ ಬರಹದ ಅವಧಿಯಲ್ಲಿ ಸಂಸ್ಥೆಯು ಲಾಭ ಗಳಿಸಿದ್ದರೆ ಮಾತ್ರ ಬಂಡವಾಳದ ಮೇಲಿನ ಬಡ್ಡಿಯನ್ನು ಅನುಮತಿಸಲಾಗುತ್ತದೆ. ಹೀಗಾಗಿ, ಸಂಸ್ಥೆಯು ನಿವ್ವಳ ನಷ್ಟ ಅನುಭವಿಸಿದ ವರ್ಷದಲ್ಲಿ ಬಡ್ಡಿಯನ್ನು ನೀಡಲಾಗುವುದಿಲ್ಲ ಮತ್ತು ಯಾವುದೇ ವರ್ಷದಲ್ಲಿ ಪಾಲುದಾರರಿಗೆ ನೀಡಬೇಕಾದ ಬಂಡವಾಳದ ಮೇಲಿನ ಬಡ್ಡಿಯ ಮೊತ್ತಕ್ಕಿಂತ ಲಾಭವು ಕಡಿಮೆ ಇದ್ದರೆ ಬಡ್ಡಿಯನ್ನು ನೀಡುವ ಪ್ರಮಾಣವು ಲಭ್ಯವಿರುವ ಲಾಭದ ಮೊತ್ತಕ್ಕೆ ಸೀಮಿತಗೊಳಿಸಲಾಗುವುದು. ಅಂತಹ ಸಂದರ್ಭದಲ್ಲಿ, ಲಾಭವನ್ನು ಪ್ರತಿ ಪಾಲುದಾರನ ಬಂಡವಾಳದ ಮೇಲಿನ ಬಡ್ಡಿಯ ಅನುಪಾತದಲ್ಲಿ ಪರಿಣಾಮಕಾರಿಯಾಗಿ ಹಂಚಲಾಗುವುದು.

**ನಿದರ್ಶನ – 6**

ಅನುಪಮ ಮತ್ತು ಅಭಿಷೇಕ್ ಪಾಲುದಾರರಾಗಿದ್ದು, ಲಾಭ ಮತ್ತು ನಷ್ಟದ ಹಂಚಿಕೆಯ ಪ್ರಮಾಣವು 3:2ರ ಅನುಪಾತದಲ್ಲಿದೆ. ಜನವರಿ 1, 2013 ರಂದು ಅವರ ಬಂಡವಾಳ ಖಾತೆಯ ಶಿಲ್ಕು ಕ್ರಮವಾಗಿ ₹1,50,000 ಮತ್ತು ₹2,00,000 ದಷ್ಟಿದೆ. ಡಿಸೆಂಬರ್ 31, 2015 ರ ವರ್ಷಾಂತ್ಯಕ್ಕೆ ಈ ಕೆಳಗೆ ತೋರಿಸಲಾದ ಪ್ರತಿ ಪರ್ಯಾಯದಲ್ಲಿ ಯಾವ ರೀತಿಯಾಗಿ ಬಂಡವಾಳದ ಮೇಲೆ ಬಡ್ಡಿಯನ್ನು ಲೆಕ್ಕ ಹಾಕುವಿರೆಂದು ತೋರಿಸಿರಿ.

(ಎ) ಒಂದು ವೇಳೆ ಬಂಡವಾಳದ ಮೇಲೆ ಬಡ್ಡಿ ನೀಡುವುದರ ಬಗ್ಗೆ ಪಾಲುದಾರಿಕೆ ಒಪ್ಪಂದವು ತಟಸ್ಥವಾಗಿದ್ದು ಮತ್ತು ಆ ವರ್ಷದ ಲಾಭವು ₹50,000 ಗಳಷ್ಟಿದ್ದರೆ.

(ಬಿ) ಪಾಲುದಾರಿಕೆ ಒಪ್ಪಂದವು ವಾರ್ಷಿಕ ಶೇ. 8 ರಷ್ಟು ಬಂಡವಾಳದ ಮೇಲೆ ಬಡ್ಡಿಯನ್ನು ಅನುಮತಿಸಿದ್ದು ಮತ್ತು ಪ್ರಸ್ತುತ ವರ್ಷದಲ್ಲಿ ಸಂಸ್ಥೆಯು ₹10,000 ನಷ್ಟವನ್ನು ಹೊಂದಿದ್ದರೆ.

(ಸಿ) ಪಾಲುದಾರಿಕೆ ಒಪ್ಪಂದವು ವಾರ್ಷಿಕ ಶೇ. 8 ಬಂಡವಾಳದ ಮೇಲೆ ಬಡ್ಡಿಯನ್ನು ಅನುಮತಿಸಿದ್ದು ಮತ್ತು ಪ್ರಸ್ತುತ ವರ್ಷದಲ್ಲಿ ಸಂಸ್ಥೆಯು ₹50,000 ಲಾಭವನ್ನು ಗಳಿಸಿದ್ದರೆ.

(ಡಿ) ಪಾಲುದಾರಿಕೆ ಒಪ್ಪಂದವು ವಾರ್ಷಿಕ ಶೇ. 8 ರಷ್ಟು ಬಂಡವಾಳದ ಮೇಲೆ ಬಡ್ಡಿಯನ್ನು ಅನುಮತಿಸಿದ್ದು ಮತ್ತು ಪ್ರಸ್ತುತ ವರ್ಷದಲ್ಲಿ ಸಂಸ್ಥೆಯು ₹14,000 ಲಾಭವನ್ನು ಗಳಿಸಿದ್ದರೆ.

**ಪರಿಹಾರ:**

(ಎ) ಒಪ್ಪಂದದಲ್ಲಿ ಯಾವುದೇ ನಿರ್ದಿಷ್ಟ ಸೂಚನೆಗಳಿಲ್ಲದಿದ್ದರೆ, ಪಾಲುದಾರರ ಬಂಡವಾಳಕ್ಕೆ ಬಡ್ಡಿಯನ್ನು ಪಾವತಿಸುವಂತಿಲ್ಲ. ಅದಾಗ್ಯೂ ಸಂಪೂರ್ಣ ಲಾಭದ ಮೊತ್ತವನ್ನು ಪಾಲುದಾರರ ಮಧ್ಯ ಅವರ ಲಾಭದ ಹಂಚಿಕೆ ಪ್ರಮಾಣದಲ್ಲಿ ವಿತರಿಸಬೇಕು.

(ಬಿ) ಲೆಕ್ಕ ಬರಹ ವರ್ಷದಲ್ಲಿ ಅವಧಿಯಲ್ಲಿ ಸಂಸ್ಥೆಯು ನಷ್ಟ ಅನುಭವಿಸಿದ್ದರಿಂದ ಯಾವುದೇ ಪಾಲುದಾರನಿಗೆ ಬಂಡವಾಳದ ಮೇಲೆ ಬಡ್ಡಿ ನೀಡಲಾಗುವುದಿಲ್ಲ. ಅದಾಗ್ಯೂ ಸಂಸ್ಥೆಯ ನಷ್ಟವನ್ನು ಪಾಲುದಾರರು ಅವರ ಲಾಭದ ಹಂಚಿಕೆ ಪ್ರಮಾಣದಲ್ಲಿ ಹಂಚಿಕೊಳ್ಳಬೇಕು.

| | | ₹ |
|---|---|---|
| (ಕ) ಅನುಪಮ್ ಗೆ ₹2,00,000 ಕ್ಕೆ ಶೇ. 8 ರಷ್ಟು ಬಡ್ಡಿ | = | 16,000 |
| ಅಭಿಷೇಕ್ ಗೆ ₹1,50,000 ಕ್ಕೆ ಶೇ. 8 ರಷ್ಟು ಬಡ್ಡಿ | = | 12,000 |
| | = | **28,000** |

ಒಪ್ಪಿದ ದರದಲ್ಲಿ ಬಡ್ಡಿಯನ್ನು ಪಾವತಿಸಲು ಸಾಕಾಗುವಷ್ಟು ಲಾಭವಿರುವುದರಿಂದ ಬಂಡವಾಳದ ಮೇಲಿನ ಸಂಪೂರ್ಣ ಬಡ್ಡಿಯ ಮೊತ್ತವನ್ನು ಮತ್ತು ಉಳಿದ ಲಾಭದ ಮೊತ್ತ ₹22,000 ( ₹50,000–₹28,000)ಗಳನ್ನು ಪಾಲುದಾರರು ಅವರ ಲಾಭದ ಹಂಚಿಕೆ ಪ್ರಮಾಣದಲ್ಲಿ ಹಂಚಿಕೊಳ್ಳುವುದು.

(ಡಿ) ಪ್ರಸಕ್ತ ವರ್ಷದ ಲಾಭವು ₹14,000 ಗಳಷ್ಟಿದ್ದು, ಇದು ಪಾಲುದಾರರ ಬಂಡವಾಳದ ಮೇಲೆ ಬಡ್ಡಿಯ ಬಾಕಿ ಮೊತ್ತ ₹28,000 (ಅನುಪಮ್‌ಗೆ ₹12,000 ಮತ್ತು ಅಭಿಷೇಕ್‌ಗೆ ₹16,000) ಕ್ಕಿಂತ ಕಡಿಮೆಯಿದೆ. ಆದ್ದರಿಂದ ₹14,000 ಲಾಭವನ್ನು ಬಡ್ಡಿಯೆಂದು ಪಾವತಿಸುವುದು. ಅನುಪಮ್ ಮತ್ತು ಅಭಿಷೇಕ್‌ನಿಗೆ ಕ್ರಮವಾಗಿ ₹6,000 ಮತ್ತು ₹8,000 ಜಮಾ ಮಾಡಲಾಗುವುದು. ಪರಿಣಾಮವಾಗಿ ಸಂಸ್ಥೆಯ ಲಾಭವನ್ನು ಬಂಡವಾಳದ ಮೇಲಿನ ಬಡ್ಡಿಯ ಪ್ರಮಾಣದಲ್ಲಿ ಹಂಚಿಕೆ ಮಾಡಿದಂತಾಗುತ್ತದೆ.

**ನಿಮ್ಮ ತಿಳುವಳಿಕೆಯನ್ನು ಪರೀಕ್ಷಿಸಿಕೊಳ್ಳಿರಿ –III Test Your Understanding – III**

1. ರಾಣಿ ಮತ್ತು ಸುಮನ್ ಪಾಲುದಾರರಾಗಿದ್ದು ಕ್ರಮವಾಗಿ ₹80,000 ಮತ್ತು ₹60,000 ಬಂಡವಾಳ ಹೊಂದಿದ್ದಾರೆ. 2015–16 ನೇ ವರ್ಷದಲ್ಲಿ ರಾಣಿ ತನ್ನ ಬಂಡವಾಳದಿಂದ ₹ 10,000 ಮತ್ತು ಸುಮನ್ ₹15,000ಗಳನ್ನು ಸ್ವಂತ ವೆಚ್ಚಕ್ಕೆ ಪಡೆದಿದ್ದಾರೆ. ಬಂಡವಾಳದ ಮೇಲೆ ಬಡ್ಡಿಯನ್ನು ನೀಡುವುದಕ್ಕಿಂತ ಪೂರ್ವದಲ್ಲಿ ₹50,000 ಲಾಭವಿದೆ. ರಾಣಿ ಮತ್ತು ಸುಮನ್‌ರ ಲಾಭವನ್ನು 3:2ರ ಪ್ರಮಾಣದಲ್ಲಿ ಹಂಚಿಕೊಳ್ಳುತ್ತಾರೆ. 31ನೇ ಮಾರ್ಚ, 2016 ರ ವರ್ಷಾಂತ್ಯಕ್ಕೆ ವಾರ್ಷಿಕ ಶೇ. 12 ರಂತೆ ಅವರ ಬಂಡವಾಳದ ಮೇಲಿನ ಬಡ್ಡಿಯನ್ನು ಲೆಕ್ಕಹಾಕಿರಿ.
2. ಪ್ರಿಯಾ ಮತ್ತು ಕಾಜಲ್ ಒಂದು ಸಂಸ್ಥೆಯ ಪಾಲುದಾರರಾಗಿದ್ದಾರೆ. ಅವರು ಲಾಭ ಮತ್ತು ನಷ್ಟವನ್ನು 5:3ರ ಪ್ರಮಾಣದಲ್ಲಿ ಹಂಚಿಕೊಳ್ಳುತ್ತಾರೆ. ಏಪ್ರೀಲ್ 1, 2015 ರಂದು ಅವರ ಸ್ಥಿರ ಬಂಡವಾಳ ಖಾತೆಯ ಶಿಲ್ಕು ಪ್ರಿಯಾಳದ್ದು ₹6,00,000 ಮತ್ತು ಕಾಜಲ್‌ಳದ್ದು ₹8,00,000 ಗಳಾಗಿತ್ತು. 31ನೇ ಮಾರ್ಚ, 2016ರ ವರ್ಷಾಂತ್ಯಕ್ಕೆ ಸಂಸ್ಥೆಯ ಲಾಭವು ₹1,26,000 ದಷ್ಟಿದೆ. ಕೆಳಗಿನ ಸಂದರ್ಭಗಳಲ್ಲಿ ಅದರ ಲಾಭದ ಹಂಚಿಕೆಯನ್ನು ಲೆಕ್ಕಹಾಕಿರಿ.

   (ಎ) ಬಂಡವಾಳದ ಮೇಲಿನ ಬಡ್ಡಿಯ ವಿಷಯದಲ್ಲಿ ಯಾವುದೇ ಒಪ್ಪಂದವಿಲ್ಲದಿದ್ದಾಗ.

   (ಬಿ) ವಾರ್ಷಿಕ ಶೇ. 12 ರಷ್ಟು ಬಂಡವಾಳದ ಮೇಲಿನ ಬಡ್ಡಿಯನ್ನು ಅನುಮತಿಸಲು ಒಪ್ಪಂದವಿದ್ದಾಗ.

### 2.5.3 ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿ: Interest on Drawings

ಪಾಲುದಾರರು ತಮ್ಮ ಸ್ವಂತ ವೆಚ್ಚಕ್ಕಾಗಿ ಸಂಸ್ಥೆಯಿಂದ ಹಿಂತೆಗೆದುಕೊಂಡ ಹಣದ ಮೇಲೆ ಬಡ್ಡಿ ಆಕರಿಸಲು ಪಾಲುದಾರಿಕೆಯ ಕರಾರು ಅನುಮತಿಸಬಹುದು. ಈ ಮೊದಲು ತಿಳಿಸಿದಂತೆ, ಪಾಲುದಾರರಲ್ಲಿ ಇದರ ಬಗ್ಗೆ ಸ್ಪಷ್ಟವಾದ ಒಡಂಬಡಿಕೆಯಾಗದ ಹೊರತು ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿ ಆಕರಿಸಲು ಬರುವುದಿಲ್ಲ. ಆದಾಗ್ಯೂ, ಪಾಲುದಾರಿಕೆ ಒಪ್ಪಂದವು ಇದಕ್ಕೆ ಅವಕಾಶ ನೀಡಿದ್ದರೆ, ಲೆಕ್ಕಬರಹದ ವರ್ಷಾವಧಿಯಲ್ಲಿ ಪಾಲುದಾರರಿಂದ ಬರಬೇಕಾದ ಹಣಕ್ಕೆ ಒಪ್ಪಿದ ದರದಲ್ಲಿ ಮತ್ತು ಅವಧಿಗೆ ಬಡ್ಡಿಯನ್ನು ಆಕರಿಸಲಾಗುವುದು. ಹಿಂಪಡೆತದ ಮೇಲೆ ಬಡ್ಡಿ ಆಕರಿಸುವುದರಿಂದ ಪಾಲುದಾರರು ಹೆಚ್ಚಿನ ಪ್ರಮಾಣದ ಹಿಂಪಡೆತದ ಬಗ್ಗೆ ನಿರುತ್ಸಾಹಿಗಳಾಗುತ್ತಾರೆ.

ವಿವಿಧ ಸನ್ನಿವೇಶಗಳಲ್ಲಿ ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿ ಲೆಕ್ಕಚಾರವನ್ನು ಈ ಕೆಳಗಿನಂತೆ ತೋರಿಸಲಾಗಿದೆ.

**ಪ್ರತಿ ತಿಂಗಳು ಸ್ಥಿರ ಮೊತ್ತವನ್ನು ಹಿಂಪಡೆದಾಗ : When fixed amount is withdrawn every month**

ಅನೇಕ ಸಲ ಪಾಲುದಾರರು ನಿರಂತರವಾಗಿ ಪ್ರತಿ ತಿಂಗಳು ಅಥವಾ ಪ್ರತಿ ತ್ರೈಮಾಸಿಕದ ಅಂತರದಲ್ಲಿ ನಿಶ್ಚಿತ ಪ್ರಮಾಣದ ಹಣವನ್ನು ಹಿಂಪಡೆದುಕೊಳ್ಳುತ್ತಾರೆ. ಸಮಯಾವಧಿಯನ್ನು ಲೆಕ್ಕಚಾರ ಮಾಡುವಾಗ ನಿಶ್ಚಿತ ಮೊತ್ತವನ್ನು ಹಿಂತೆಗೆದುಕೊಂಡದ್ದು ತಿಂಗಳಿನ ಆರಂಭದಲ್ಲಿ (ಮೊದಲ ದಿನ), ಮಧ್ಯದಲ್ಲಿ, ಅಥವಾ ಅಂತ್ಯದಲ್ಲಿ (ಕೊನೆಯ ದಿನ) ಎಂಬುವುದರ ಬಗ್ಗೆ ಗಮನಹರಿಸಬೇಕು. ಒಂದು ವೇಳೆ ಹಿಂಪಡೆದುಕೊಂಡದ್ದು ಪ್ರತಿ ತಿಂಗಳಿನ ಮೊದಲ ದಿನವಾಗಿದ್ದರೆ, ಒಟ್ಟು ಹಣದ ಮೇಲೆ 6 1/2 ತಿಂಗಳಿಗೆ ಬಡ್ಡಿಯನ್ನು ಲೆಕ್ಕ ಮಾಡಲಾಗುವುದು. ಹಿಂಪಡೆದುಕೊಂಡದ್ದು ಪ್ರತಿ ತಿಂಗಳಿನ ಕೊನೆಯ ದಿನವಾಗಿದ್ದರೆ, ಇದನ್ನು 5 1/2 ತಿಂಗಳಿಗೆ ಬಡ್ಡಿಯನ್ನು ಲೆಕ್ಕ ಮಾಡಲಾಗುವುದು ಮತ್ತು ಹಿಂಪಡೆದುಕೊಂಡದ್ದು ಪ್ರತಿ ತಿಂಗಳಿನ ಮಧ್ಯದಲ್ಲಿದ್ದರೆ, ಇದನ್ನು 6 ತಿಂಗಳಿಗೆ ಬಡ್ಡಿಯನ್ನು ಲೆಕ್ಕ ಮಾಡಲಾಗುವುದು.

ಮಾರ್ಚ 31, 2015 ರ ವರ್ಷಾಂತ್ಯದ ಅವಧಿಯಲ್ಲಿ ಆಶಿಶ್ ಪ್ರತಿ ತಿಂಗಳು ₹ 1000 ದಂತೆ ತನ್ನ ಸ್ವಂತ ವೆಚ್ಚಕ್ಕಾಗಿ ಹಿಂಪಡೆದುಕೊಂಡಿದ್ದಾನೆ ಎಂದು ಊಹಿಸಿಕೊಳ್ಳಿ. ವಿವಿಧ ಸನ್ನಿವೇಶಗಳಲ್ಲಿ ಹಿಂಪಡೆತದ ಮೇಲಿನ ಬಡ್ಡಿ ಮತ್ತು ಸರಾಸರಿ ಅವಧಿಯ ಲೆಕ್ಕಚಾರವು ಈ ಕೆಳಗಿನಂತಿದೆ.

**(ಎ) ಪ್ರತಿ ತಿಂಗಳ ಆರಂಭದಲ್ಲಿ ಮೊತ್ತವನ್ನು ಹಿಂಪಡೆದುಕೊಂಡಾಗ:**
**When the amount is withdrawn at the beginning of each month**

$$\text{ಸರಾಸರಿ ಅವಧಿ} = \frac{\text{ಒಟ್ಟು ಅವಧಿ (ತಿಂಗಳುಗಳಲ್ಲಿ)} + 1}{2} = \frac{12 + 1}{2} = \frac{13}{2} = 6\frac{1}{2}\text{ ತಿಂಗಳುಗಳು}$$

$$\text{ಹಿಂಪಡೆತದ ಮೇಲಿನ ಬಡ್ಡಿ} = ₹1,20,000 \times \frac{8}{100} \times \frac{13}{2} \times \frac{1}{12} = ₹\ 5,200$$

**(ಬಿ) ಪ್ರತಿ ತಿಂಗಳ ಕೊನೆಯಲ್ಲಿ ಮೊತ್ತವನ್ನು ಹಿಂಪಡೆದುಕೊಂಡಾಗ:**
**when the amount is withdrawn at the end of each month**

$$\text{ಸರಾಸರಿ ಅವಧಿ} = \frac{\text{ಒಟ್ಟು ಅವಧಿ (ತಿಂಗಳುಗಳಲ್ಲಿ)} - 1}{2} = \frac{12 - 1}{2} = \frac{11}{2} = 5\frac{1}{2}\text{ ತಿಂಗಳುಗಳು}$$

$$\text{ಹಿಂಪಡೆತದ ಮೇಲಿನ ಬಡ್ಡಿ} = ₹1,20,000 \times \frac{8}{100} \times \frac{11}{2} \times \frac{1}{12} = ₹\ 4,400$$

**(ಸಿ) ಪ್ರತಿ ತಿಂಗಳ ಮಧ್ಯದಲ್ಲಿ ಮೊತ್ತವನ್ನು ಹಿಂಪಡೆದುಕೊಂಡಾಗ:**
**When the amount is withdrawn at the middle of each month**

ಒಟ್ಟು ಅವಧಿಯಲ್ಲಿ ಏನನ್ನೂ ಕಡಿತಗೊಳಿಸಲಾಗುವುದಿಲ್ಲ ಅಥವಾ ಸೇರಿಸುವುದಿಲ್ಲ.

$$\text{ಸರಾಸರಿ ಅವಧಿ} = \frac{\text{ಒಟ್ಟು ಅವಧಿ (ತಿಂಗಳುಗಳಲ್ಲಿ)}}{2} = \frac{12}{2} = 6\text{ ತಿಂಗಳುಗಳು}$$

$$\text{ಹಿಂಪಡೆತದ ಮೇಲಿನ ಬಡ್ಡಿ} = ₹1,20,000 \times \frac{8}{100} \times \frac{6}{12} \times \frac{1}{1} = ₹\ 4,800$$

**ತ್ರೈಮಾಸಿಕವಾಗಿ ಸ್ಥಿರ ಮೊತ್ತವನ್ನು ಹಿಂಪಡೆದುಕೊಂಡಾಗ: When Fixed amount is withdrawn quarterly:** ಪಾಲುದಾರರು ತ್ರೈಮಾಸಿಕವಾಗಿ ಸ್ಥಿರ ಮೊತ್ತವನ್ನು ಹಿಂಪಡೆದುಕೊಂಡ ಸಂದರ್ಭದಲ್ಲಿ ಬಡ್ಡಿಯನ್ನು ಲೆಕ್ಕ ಮಾಡುವ ಉದ್ದೇಶಕ್ಕಾಗಿ ಬೇಕಾಗುವ ಒಟ್ಟು ಸಮಯಾವಧಿಯನ್ನು, ಹಣವನ್ನು ಹಿಂಪಡೆದುಕೊಂಡ ಪ್ರತಿ ತ್ರೈಮಾಸಿಕದ ಆರಂಭ ಅಥವಾ ಕೊನೆಯಲ್ಲಿ ಎಂಬುದರ ಆಧಾರದ ಮೇಲೆ ಲೆಕ್ಕಮಾಡಲಾಗುತ್ತದೆ. ಮೊತ್ತವನ್ನು ಪ್ರತಿ ತ್ರೈಮಾಸಿಕ ಆರಂಭದಲ್ಲಿ ಹಿಂಪಡೆದುಕೊಂಡಿದ್ದರೆ, ವರ್ಷದಲ್ಲಿ ಹಿಂಪಡೆದುಕೊಂಡ ಒಟ್ಟು ಹಣದ ಮೇಲೆ 7½ ತಿಂಗಳ ಅವಧಿ ಬಡ್ಡಿಯನ್ನು ಲೆಕ್ಕ ಮಾಡಲಾಗುತ್ತದೆ ಮತ್ತು ಪ್ರತಿ ತ್ರೈಮಾಸಿಕದ ಕೊನೆಯಲ್ಲಿ ಹಿಂಪಡೆದುಕೊಂಡಿದ್ದರೆ ಇದನ್ನು 4½ ತಿಂಗಳ ಅವಧಿಗೆ ಲೆಕ್ಕ ಮಾಡಲಾಗುವುದು.

ಸತೀಶ ಮತ್ತು ತಿಲಕರು ಒಂದು ಸಂಸ್ಥೆಯಲ್ಲಿ ಲಾಭ ಮತ್ತು ನಷ್ಟವನ್ನು ಸಮನಾಗಿ ಹಂಚಿಕೊಳ್ಳುವ ಪಾಲುದಾರರೆಂದು ಊಹಿಸೋಣ. 2015–16 ರ ಹಣಕಾಸು ವರ್ಷದ ಅವಧಿಯಲ್ಲಿ ಸತೀಶ ತ್ರೈಮಾಸಿಕವಾಗಿ ₹30,000 ರಂತೆ ಹಿಂಪಡೆದುಕೊಳ್ಳುತ್ತಾನೆ. ಹಿಂಪಡೆತದ ಮೇಲೆ ವಾರ್ಷಿಕ ಶೇ. 8 ರಷ್ಟು ಬಡ್ಡಿ ಆಕರಿಸಿದರೆ, ಹಿಂಪಡೆತದ ಮೇಲಿನ ಬಡ್ಡಿ ಮತ್ತು ಸರಾಸರಿ ಅವಧಿಯ ಲೆಕ್ಕಾಚಾರವು ಈ ಕೆಳಗಿನಂತಿದೆ.

**(ಎ) ಪ್ರತಿ ತ್ರೈಮಾಸಿಕ ಆರಂಭದಲ್ಲಿ ಮೊತ್ತವನ್ನು ಹಿಂಪಡೆದುಕೊಂಡಿದ್ದರೆ:**
**If the amount is withdrawn at the beginning of each quarter**

**ಹಿಂಪಡೆತದ ಮೇಲಿನ ಬಡ್ಡಿ ಲೆಕ್ಕಾಚಾರ ತೋರಿಸುವ ಪಟ್ಟಿ**

| ದಿನಾಂಕ | ಮೊತ್ತ (₹) | ಸಮಯಾವಧಿ | ಬಡ್ಡಿ ಲೆಕ್ಕಾಚಾರ | ಬಡ್ಡಿ (₹) |
|---|---|---|---|---|
| ಏಪ್ರೀಲ್ 1, 2015 | 30,000 | 12 ತಿಂಗಳು | $₹30,000 \times \frac{8}{100} \times 1$ | 2,400 |
| ಜುಲೈ 1, 2015 | 30,000 | 9 ತಿಂಗಳು | $₹30,000 \times \frac{9}{12} \times \frac{8}{100}$ | 1,800 |
| ಅಕ್ಟೋಬರ್ 1, 2015 | 30,000 | 6 ತಿಂಗಳು | $₹30,000 \times \frac{6}{12} \times \frac{8}{100}$ | 1,200 |
| ಜನೇವರಿ 1, 2016 | 30,000 | 3 ತಿಂಗಳು | $₹30,000 \times \frac{3}{12} \times \frac{8}{100}$ | 600 |
| **ಒಟ್ಟು** | **1,20,000** | | | **6,000** |

ಲೆಕ್ಕ ಬರಹದ ಅವಧಿಯಲ್ಲಿ ಹಿಂಪಡೆದುಕೊಂಡ ಒಟ್ಟು ಮೊತ್ತದ ಮೇಲೆ ಪರ್ಯಾಯವಾಗಿ ಈ ಕೆಳಗಿನಂತೆ ಬಡ್ಡಿಯನ್ನು ಲೆಕ್ಕ ಮಾಡಬಹುದು. ಅಂದರೆ ₹1,20,000 ಕ್ಕೆ 7 1/2 ತಿಂಗಳು ಅವಧಿಗೆ (12+9+6+3)/4.

ಹಿಂಪಡೆತದ ಮೇಲಿನ ಬಡ್ಡಿ = $₹1,20,000 \times \frac{8}{100} \times \frac{15}{2} \times \frac{1}{12}$ = ₹ 6,000

**(ಬಿ) ಪ್ರತಿ ತ್ರೈಮಾಸಿಕದ ಕೊನೆಯಲ್ಲಿ ಮೊತ್ತವನ್ನು ಹಿಂಪಡೆದುಕೊಂಡಿದ್ದರೆ:**
**If the amount is withdrawn at the end of each quarter**

**ಹಿಂಪಡೆತದ ಮೇಲಿನ ಬಡ್ಡಿ ಲೆಕ್ಕಾಚಾರ ತೋರಿಸುವ ಪಟ್ಟಿ**

| ದಿನಾಂಕ | ಮೊತ್ತ (₹) | ಸಮಯಾವಧಿ | ಬಡ್ಡಿ ಲೆಕ್ಕಾಚಾರ | ಬಡ್ಡಿ (₹) |
|---|---|---|---|---|
| 2015 ಜೂನ 30 | 30,000 | 9 ತಿಂಗಳು | $₹30,000 \times \frac{9}{12} \times \frac{8}{100}$ | 1,800 |
| 2015 ಸೆಪ್ಟಂಬರ 30 | 30,000 | 6 ತಿಂಗಳು | $₹30,000 \times \frac{6}{12} \times \frac{8}{100}$ | 1,200 |
| 2015 ಡಿಸೆಂಬರ 31 | 30,000 | 3 ತಿಂಗಳು | $₹30,000 \times \frac{3}{12} \times \frac{8}{100}$ | 600 |
| 2016 ಮಾರ್ಚ 31 | 30,000 | 0 ತಿಂಗಳು | — | — |
| **ಒಟ್ಟು** | **1,20,000** | | | **3,600** |

ಲೆಕ್ಕಬರಹದ ಅವಧಿಯಲ್ಲಿ ಹಿಂಪಡೆದುಕೊಂಡ ಒಟ್ಟು ಮೊತ್ತದ ಮೇಲೆ ಪರ್ಯಾಯವಾಗಿ ಈ ಕೆಳಗಿನಂತೆ ಬಡ್ಡಿಯನ್ನು ಲೆಕ್ಕಮಾಡಬಹುದು.

ಅಂದರೆ, ₹1,20,000 ಗೆ 4 1/2 ತಿಂಗಳ ಅವಧಿಗೆ (9+6+3+0)/4, ಈ ಕೆಳಗಿನಂತೆ ಲೆಕ್ಕಿಸಬಹುದು.

ಹಿಂಪಡೆತದ ಮೇಲಿನ ಬಡ್ಡಿ = ₹ 1,20,000 $\times \frac{8}{100} \times \frac{9}{2} \times \frac{1}{12}$ = ₹ 3,600

**ವಿವಿಧ ಅಂತರಗಳಲ್ಲಿ ವಿಭಿನ್ನ ಮೊತ್ತವನ್ನು ಹಿಂಪಡೆದುಕೊಂಡಾಗ:**
**When varying amounts are withdrawn at different intervals**

ವಿವಿಧ ಸಮಯಾವಧಿಯಲ್ಲಿ ವಿಭಿನ್ನ ಮೊತ್ತವನ್ನು ಪಾಲುದಾರರು ಹಿಂಪಡೆದುಕೊಂಡಾಗ ಉತ್ಪನ್ನ ವಿಧಾನದ ಮೂಲಕ ಬಡ್ಡಿಯನ್ನು ಲೆಕ್ಕ ಮಾಡಲಾಗುತ್ತದೆ. ಉತ್ಪನ್ನ ವಿಧಾನದ ಪ್ರಕಾರ ಹಣಕಾಸು ವರ್ಷದಲ್ಲಿ ಹಿಂಪಡೆದುಕೊಂಡ ಪ್ರತಿ ಹಿಂಪಡೆತದ ಮೊತ್ತವನ್ನು ಅದರ ಅವಧಿಯಿಂದ (ಸಾಮಾನ್ಯವಾಗಿ ತಿಂಗಳಲ್ಲಿ ವ್ಯಕ್ತಪಡಿಸಲಾಗುತ್ತದೆ) ಗುಣಿಸಲಾಗುತ್ತದೆ. ಹಿಂಪಡೆದುಕೊಂಡ ದಿನಾಂಕದಿಂದ ಲೆಕ್ಕ ಬರಹ ಅವಧಿಯ ಕೊನೆಯ ದಿನದ ವರೆಗೆ ಅವಧಿಯನ್ನು ಲೆಕ್ಕಮಾಡಲಾಗುತ್ತದೆ. ಈ ರೀತಿ ಲೆಕ್ಕ ಹಾಕಿದ ಉತ್ಪನ್ನಗಳನ್ನು ಒಟ್ಟುಗೂಡಿಸಿ ಒಟ್ಟು ಉತ್ಪನ್ನದ ಮೇಲೆ ನಿಗದಿತ ದರದಂತೆ ಒಂದು ತಿಂಗಳಿಗೆ ಬಡ್ಡಿಯನ್ನು ಲೆಕ್ಕಮಾಡಲಾಗುತ್ತದೆ. ಬಡ್ಡಿ ಲೆಕ್ಕಾಚಾರವನ್ನು ಒಂದು ಉದಾಹರಣೆಯ ಸಹಾಯದಿಂದ ಹೀಗೆ ವಿವರಿಸಬಹುದು

2015 ಮಾರ್ಚ 31 ರ ವರ್ಷಾಂತ್ಯಕ್ಕೆ ಶಹನಾಜ ಸ್ವಂತ ಖರ್ಚಿಗಾಗಿ ತನ್ನ ಸಂಸ್ಥೆಯಿಂದ ಈ ಕೆಳಗಿನ ಮೊತ್ತಗಳನ್ನು ಹಿಂಪಡೆಯುತ್ತಾಳೆ. ವರ್ಷಕ್ಕೆ ಶೇ. 7 ರಂತೆ ಬಡ್ಡಿ ಆಕರಿಸಿದರೆ, ಉತ್ಪನ್ನ ವಿಧಾನದಲ್ಲಿ ಸ್ವಂತಕ್ಕೆ ಹಿಂಪಡೆತದ ಮೇಲೆ ಬಡ್ಡಿಯನ್ನು ಲೆಕ್ಕ ಹಾಕಿರಿ.

| ದಿನಾಂಕ | ಮೊತ್ತ (₹) |
|---|---|
| ಎಪ್ರಿಲ್ 1, 2014 | 16,000 |
| ಜೂನ 30, 2014 | 15,000 |
| ಅಕ್ಟೋಬರ್ 31, 2014 | 10,000 |
| ಡಿಸೆಂಬರ್ 1, 2014 | 14,000 |
| ಮಾರ್ಚ 1, 2015 | 11,000 |

ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿ ಲೆಕ್ಕಾಚಾರ ಈ ಕೆಳಗಿನಂತಿದೆ,

**ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿ ಲೆಕ್ಕಾಚಾರ ತೋರಿಸುವ ಪಟ್ಟಿ**

| ದಿನಾಂಕ | ಮೊತ್ತ (₹) | ಸಮಯಾವಧಿ | ಉತ್ಪನ್ನ |
|---|---|---|---|
| ಏಪ್ರೀಲ್ 1, 2014 | 16,000 | 12 ತಿಂಗಳು | 1,92,000 |
| ಜೂನ್ 30, 2014 | 15,000 | 9 ತಿಂಗಳು | 1,35,000 |
| ಅಕ್ಟೋಬರ್ 31, 2014 | 10,000 | 5 ತಿಂಗಳು | 50,000 |
| ಡಿಸೆಂಬರ್ 31, 2014 | 14,000 | 3 ತಿಂಗಳು | 42,000 |
| ಮಾರ್ಚ 1, 2015 | 11,000 | 1 ತಿಂಗಳು | 11,000 |
| | | **ಒಟ್ಟು** | **4,30,000** |

ಹಿಂಪಡೆತದ ಮೇಲಿನ ಬಡ್ಡಿ = ಉತ್ಪನ್ನಗಳ ಒಟ್ಟು ಮೊತ್ತ × ದರ × $\frac{1}{12}$

$= 4,30,000 \times \frac{7}{100} \times \frac{1}{12} = \frac{30100}{12} =$ ₹ **2,508** (ಅಂದಾಜು)

**ನಿದರ್ಶನ – 7**

ಮಾಡರ್ನ್ ಟೂರ್ಸ್ ಮತ್ತು ಟ್ರಾವೆಲ್ಸ್‌ನಲ್ಲಿ ಜಾನ್ ಇಬ್ರಾಹಿಂ ಪಾಲುಗಾರನಾಗಿದ್ದು, 31ನೇ ಮಾರ್ಚ, 2015ರ ವರ್ಷಾಂತ್ಯಕ್ಕೆ ತನ್ನ ಸ್ವಂತ ವೆಚ್ಚಕ್ಕಾಗಿ ಬಂಡವಾಳ ಖಾತೆಯಿಂದ ಹಣವನ್ನು ಹಿಂಪಡೆದುಕೊಳ್ಳುತ್ತಾನೆ. ಈ ಮುಂದೆ ಹೇಳಿದ ಪ್ರತಿ ಪರ್ಯಾಯ ಸಂದರ್ಭಗಳಲ್ಲಿ ಬಡ್ಡಿಯ ದರವು ವಾರ್ಷಿಕ ಶೇ. 9 ರಷ್ಟಿದ್ದರೆ ಪಡೆದ ಹಣದ ಮೇಲೆ ಬಡ್ಡಿಯನ್ನು ಲೆಕ್ಕಹಾಕಿರಿ.

(ಎ) ಪ್ರತಿ ತಿಂಗಳು ಪ್ರಾರಂಭದಲ್ಲಿ ಅವನು ₹ 3,000 ಗಳನ್ನು ಸ್ವಂತಕ್ಕೆ ಹಿಂಪಡೆದರೆ

(ಬಿ) ಪ್ರತಿ ತಿಂಗಳು ಕೊನೆಯಲ್ಲಿ ಅವನು ₹ 3,000 ಗಳನ್ನು ಸ್ವಂತಕ್ಕೆ ಹಿಂಪಡೆದರೆ

(ಸಿ) ಈ ಮುಂದಿನಂತೆ ಹಣವನ್ನು ಸ್ವಂತ ವೆಚ್ಚಕ್ಕೆ ಹಿಂಪಡೆದರೆ:

1ನೇ ಜೂನ್,2014 ರಂದು ₹12,000; 31ನೇ ಆಗಸ್ಟ್,2014 ರಂದು ₹8,000; 30ನೇ ಸಪ್ಟೆಂಬರ್,2014 ರಂದು ₹3,000; 30ನೇ ನವೆಂಬರ್, 2014 ರಂದು ₹7,000 ಮತ್ತು 31ನೇ ಜನೇವರಿ, 2015 ರಂದು ₹6,000.

**ಪರಿಹಾರ:**

(ಎ) ಪ್ರತಿ ತಿಂಗಳು ಪ್ರಾರಂಭದಲ್ಲಿ ಸಮವಾಗಿ ₹3,000 ಸ್ವಂತ ವೆಚ್ಚಕ್ಕಾಗಿ ಹಿಂಪಡೆತದ ಮೇಲೆ $6\frac{1}{2}$ ತಿಂಗಳು ಬಡ್ಡಿಯನ್ನು ಸರಾಸರಿ $6\frac{1}{2}$ ತಿಂಗಳ ಅವಧಿಗೆ ಲೆಕ್ಕಹಾಕಲಾಗುವುದು.

ಸ್ವಂತ ವೆಚ್ಚದ ಮೇಲಿನ ಬಡ್ಡಿ = ₹$36,000 \times \frac{9}{100} \times \frac{13}{2} \times \frac{1}{12}$ = ₹1,755

(ಬಿ) ಪ್ರತಿ ತಿಂಗಳ ಕೊನೆಯಲ್ಲಿ ಸ್ಥಿರವಾಗಿ ₹ 3,000 ದಷ್ಟು ಸ್ವಂತ ವೆಚ್ಚಕ್ಕಾಗಿ ಹಿಂಪಡೆದಿದ್ದರೆ, ಹಿಂಪಡೆತದ ಮೇಲೆ ಬಡ್ಡಿಯನ್ನು ಸರಾಸರಿ $5\frac{1}{2}$ ತಿಂಗಳ ಅವಧಿಗೆ ಲೆಕ್ಕಹಾಕಲಾಗುವುದು.

ಸ್ವಂತ ವೆಚ್ಚದ ಮೇಲಿನ ಬಡ್ಡಿ = ₹$36,000 \times \frac{9}{100} \times \frac{11}{2} \times \frac{1}{12}$ = ₹1,485

**(ಸಿ) ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿ ಲೆಕ್ಕಚಾರ ತೋರಿಸುವ ಪಟ್ಟಿ**

| ದಿನಾಂಕ | ಹಿಂಪಡೆದ ಮೊತ್ತ (₹) | ಅವಧಿ (ತಿಂಗಳುಗಳಲ್ಲಿ) | ಬಡ್ಡಿ ಲೆಕ್ಕಾಚಾರ | ಬಡ್ಡಿ (₹) |
|---|---|---|---|---|
| ಜೂನ್ 1, 2014 | 12,000 | 10 | $₹12,000\times\frac{9}{100}\times\frac{10}{12}$ | 900 |
| ಆಗಸ್ಟ್ 31,2014 | 8,000 | 7 | $₹8,000\times\frac{9}{100}\times\frac{7}{12}$ | 420 |
| ಸಪ್ಟೆಂಬರ್ 30,2014 | 3,000 | 6 | $₹3,000\times\frac{9}{100}\times\frac{6}{12}$ | 135 |
| ನವೆಂಬರ್ 30,2014 | 7,000 | 4 | $₹7,000\times\frac{9}{100}\times\frac{4}{12}$ | 210 |
| ಜನೇವರಿ 31, 2015 | 6,000 | 2 | $₹6,000\times\frac{9}{100}\times\frac{2}{12}$ | 90 |
| **ಒಟ್ಟು ಬಡ್ಡಿ** | | | | **1,755** |

**ನಿದರ್ಶನ – 8**

ಮನು, ಹ್ಯಾರಿ ಮತ್ತು ಅಲಿ ಸಂಸ್ಥೆಯ ಪಾಲುದಾರರಾಗಿದ್ದು, ಲಾಭ ಮತ್ತು ನಷ್ಟವನ್ನು ಸಮನಾಗಿ ಹಂಚಿಕೊಳ್ಳಲಿದ್ದಾರೆ. 2015 ನೇ ವರ್ಷದಲ್ಲಿ ಹ್ಯಾರಿ ಮತ್ತು ಅಲಿಯವರು ತಮ್ಮ ಸ್ವಂತ ಬಳಕೆಗಾಗಿ ಈ ಕೆಳಗಿನಂತೆ ಹಿಂಪಡೆದುಕೊಳ್ಳುತ್ತಾರೆ.

| ದಿನಾಂಕ | ಹ್ಯಾರಿ (₹) | ಅಲಿ (₹) |
|---|---|---|
| 2015 | | |
| ಜನವರಿ 1 | 5,000 | 7,000 |
| ಏಪ್ರಿಲ್ 1 | 8,000 | 4,000 |
| ಸಪ್ಟೆಂಬರ್ 1 | 5,000 | 5,000 |
| ಡಿಸೆಂಬರ್ 1 | 4,000 | 10,000 |

ವಾರ್ಷಿಕ ಶೇ. 10 ರಷ್ಟು ಬಡ್ಡಿಯನ್ನು ವಿಧಿಸಿ, ಅವರ ಸ್ವಂತ ವೆಚ್ಚದ ಮೇಲೆ ಬಡ್ಡಿಯನ್ನು ಲೆಕ್ಕಹಾಕಿ ಮತ್ತು ಪ್ರತಿ ವರ್ಷ ಡಿಸೆಂಬರ್ 31 ಕ್ಕೆ ಪುಸ್ತಕಗಳನ್ನು ಅಂತಿಮಗೊಳಿಸಿ.

**ಪರಿಹಾರ:**

**ಸ್ವಂತ ವೆಚ್ಚದ ಹಿಂಪಡೆತದ ಮೇಲಿನ ಬಡ್ಡಿ ಲೆಕ್ಕಚಾರ ತೋರಿಸುವ ಪಟ್ಟಿ (2015ರ ಡಿಸೆಂಬರ್)**

| ಹಿಂಪಡೆತದ ದಿನಾಂಕ | ಹ್ಯಾರಿ | | | ಅಲಿ | | |
|---|---|---|---|---|---|---|
| | ಮೊತ್ತ (₹) | ಅವಧಿ (ತಿಂಗಳುಗಳಲ್ಲಿ) | ಉತ್ಪನ್ನ | ಮೊತ್ತ (₹) | ಅವಧಿ (ತಿಂಗಳುಗಳಲ್ಲಿ) | ಉತ್ಪನ್ನ |
| 2015 ಜನವರಿ 1 | 5,000 | 12 | 60,000 | 7,000 | 12 | 84,000 |
| ಏಪ್ರಿಲ್ 1 | 8,000 | 9 | 72,000 | 4,000 | 9 | 36,000 |
| ಸಪ್ಟೆಂಬರ್ 1 | 5,000 | 4 | 20,000 | 5,000 | 4 | 20,000 |
| ಡಿಸೆಂಬರ್ 1 | 4,000 | 1 | 4,000 | 10,000 | 1 | 10,000 |
| | | **ಒಟ್ಟು ಉತ್ಪನ್ನ** | **1,56,000** | | **ಒಟ್ಟು ಉತ್ಪನ್ನ** | **1,50,000** |

ಬಡ್ಡಿಯ ಮೊತ್ತ (₹)

ಮನುನ ಹಿಂಪಡೆತದ ಮೇಲಿನ ಬಡ್ಡಿ = $1,56,000 \times \frac{10}{100} \times \frac{1}{12} =$ ₹ 1,300

ಅಲಿಯ ಹಿಂಪಡೆತದ ಮೇಲಿನ ಬಡ್ಡಿ = $1,50,000 \times \frac{10}{100} \times \frac{1}{12} =$ ₹ 1,250

**ನೀವೇ ಮಾಡಿರಿ Do it yourself**

1. ಗೋವಿಂದ ಒಂದು ಸಂಸ್ಥೆಯ ಪಾಲುದಾರನಾಗಿದ್ದು, 2015–16 ನೇ ವರ್ಷದಲ್ಲಿ ಈ ಮುಂದಿನಂತೆ ಅವನು ತನ್ನ ಸ್ವಂತ ವೆಚ್ಚಕ್ಕೆ ಪಡೆಯುತ್ತಾನೆ.

| | ₹ |
|---|---|
| ಏಪ್ರೀಲ್ 30, 2015 | 6,000 |
| ಜೂನ್ 30, 2015 | 4,000 |
| ಸಪ್ಟೆಂಬರ್ 30, 2015 | 8,000 |
| ಡಿಸೆಂಬರ್ 31, 2015 | 3,000 |
| ಜನೇವರಿ 31, 2016 | 5,000 |

ವಾರ್ಷಿಕ ಶೇ. 6 ರಂತೆ ಸ್ವಂತವೆಚ್ಚಕ್ಕೆ ಬಡ್ಡಿಯನ್ನು ಲೆಕ್ಕ ಹಾಕಿ, ಪ್ರತಿವರ್ಷ ಮಾರ್ಚ 31 ಕ್ಕೆ ಪುಸ್ತಕಗಳನ್ನು ಮುಕ್ತಾಯಗೊಳಿಸಿ.

2. ರಾಮ್ ಮತ್ತು ಶ್ಯಾಮ್ ಪಾಲುದಾರರಾಗಿದ್ದು, ಲಾಭ ಮತ್ತು ನಷ್ಟವನ್ನು ಸಮನಾಗಿ ಹಂಚಿಕೊಳ್ಳುತ್ತಾರೆ. 2015–16 ನೇ ವರ್ಷದಲ್ಲಿ ರಾಮನು ನಿರಂತರವಾಗಿ ಪ್ರತಿ ತಿಂಗಳ ಪ್ರಾರಂಭದ ದಿನದಂದು ₹1,000 ಗಳನ್ನು ತನ್ನ ಸ್ವಂತ ಖರ್ಚಿಗಾಗಿ ತೆಗೆದುಕೊಳ್ಳುತ್ತಾನೆ. ವಾರ್ಷಿಕ ಶೇ. 5 ರಂತೆ ರಾಮನ ಸ್ವಂತಕ್ಕೆ ಹಿಂಪಡೆದ ಮೊತ್ತಕ್ಕೆ ಬಡ್ಡಿಯನ್ನು ಲೆಕ್ಕಹಾಕಿರಿ.

3. ವರ್ಮಾ ಮತ್ತು ಕೌಲ್ ಪಾಲುದಾರರಾಗಿದ್ದಾರೆ. ಪಾಲುದಾರಿಕೆ ಒಪ್ಪಂದವು ವಾರ್ಷಿಕ ಶೇ. 6 ರಷ್ಟು ಬಡ್ಡಿಯನ್ನು ವಿಧಿಸಲು ಅವಕಾಶ ನೀಡಿದೆ. ಏಪ್ರೀಲ್ 1, 2014 ರಿಂದ ಮಾರ್ಚ 31, 2015ರ ರವರೆಗೆ ಪ್ರತಿ ತಿಂಗಳು ಪ್ರಾರಂಭದಲ್ಲಿ ₹2,000 ದಂತೆ ವರ್ಮಾ ಸ್ವಂತಕ್ಕೆ ಹಿಂಪಡೆಯುತ್ತಾನೆ. ಏಪ್ರೀಲ್ 1, 2015 ರಿಂದ ಪ್ರಾರಂಭಿಸಿ ₹3,000 ದಷ್ಟು ಪ್ರತಿ ತ್ರೈಮಾಸಿಕವಾಗಿ ಕೌಲ್ ಸ್ವಂತಕ್ಕೆ ಹಿಂಪಡೆಯುತ್ತಾಳೆ. ಪಾಲುದಾರರ ಸ್ವಂತಕ್ಕೆ ಹಿಂಪಡೆದ ಮೊತ್ತಕ್ಕೆ ಬಡ್ಡಿಯನ್ನು ಲೆಕ್ಕಹಾಕಿರಿ.

**ಸ್ವಂತಕ್ಕೆ ಹಿಂಪಡೆತದ ದಿನಾಂಕಗಳನ್ನು ನಿರ್ದಿಷ್ಟಪಡಿಸದಿದ್ದಾಗ: When dates of withdrawal are not specified**

ಸ್ವಂತಕ್ಕೆ ಹಿಂಪಡೆದ ಒಟ್ಟು ಮೊತ್ತವನ್ನು ನೀಡಿ, ಹಿಂಪಡೆತದ ದಿನಾಂಕಗಳನ್ನು ನೀಡದಿದ್ದಾಗ, ವರ್ಷದುದ್ದಕ್ಕೂ ಸಮನಾಗಿ ಮೊತ್ತವನ್ನು ಹಿಂಪಡೆಯಲಾಗಿದೆ ಎಂದು ಊಹಿಸಿಕೊಳ್ಳಲಾಗುವುದು.

**ಉದಾಹರಣೆಗೆ;** ಶಕಿಲಾ 2015 ಮಾರ್ಚ 31ರ ವರ್ಷಾಂತ್ಯದಲ್ಲಿ ಸಂಸ್ಥೆಯಿಂದ ₹60,000 ಗಳನ್ನು ಸ್ವಂತಕ್ಕೆ ಹಿಂಪಡೆದಿದ್ದಾಳೆ ಹಾಗೂ ವಾರ್ಷಿಕ ಶೇ. 8 ರ ದರದಲ್ಲಿ ಸ್ವಂತಕ್ಕೆ ಹಿಂಪಡೆತದ ಮೇಲೆ ಬಡ್ಡಿಯನ್ನು ಆಕರಿಸಲಾಗುವುದು. ವರ್ಷದುದ್ದಕ್ಕೂ ತಿಂಗಳ ಮಧ್ಯದಲ್ಲಿ ಮೊತ್ತವನ್ನು ಸ್ವಂತಕ್ಕೆ ಹಿಂಪಡೆಯಲಾಗಿದೆ ಎಂದು ಊಹಿಸಿಕೊಂಡು, ಸರಾಸರಿ ಅವಧಿ 6 ತಿಂಗಳುಗಳಿಗೆ ಬಡ್ಡಿಯನ್ನು ಲೆಕ್ಕಿಸಲಾಗುವುದು. ಸ್ವಂತಕ್ಕೆ ಹಿಂಪಡೆತದ ಮೊತ್ತದ ಮೇಲೆ ಹೊರಹೊಮ್ಮಬಹುದಾದ ಬಡ್ಡಿ ಮೊತ್ತವು ₹2,400 ಈ ಕೆಳಗಿನಂತಿದೆ.

ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿ = $\left[₹60,000 \times \frac{8}{100} \times \frac{6}{12}\right]$ = ₹2,400

## 2.6. ಪಾಲುದಾರನಿಗೆ ಲಾಭದಲ್ಲಿ ಖಾತರಿ: Guarantee of Profit to a Partner

ಕೆಲವೊಮ್ಮೆ ಪಾಲುದಾರನು ಸಂಸ್ಥೆಯ ಲಾಭದಲ್ಲಿ ಕನಿಷ್ಟ ಮೊತ್ತದ ತನ್ನ ಪಾಲನ್ನು ಖಾತರಿಪಡಿಸಿಕೊಂಡು ಸಂಸ್ಥೆಯಲ್ಲಿ ಪ್ರವೇಶ ಪಡೆಯುತ್ತಾನೆ. ಇಂತಹ ಭರವಸೆಯನ್ನು ಹೊಸ ಪಾಲುದಾರನಿಗೆ ಹಳೆಯ ಪಾಲುದಾರರಲ್ಲಿ ಯಾರಾದರೂ ವೈಯುಕ್ತಿಕವಾಗಿ ಅಥವಾ ನಿರ್ದಿಷ್ಟ ಅನುಪಾತದಲ್ಲಿ ಎಲ್ಲಾ ಹಳೆಯ ಪಾಲುದಾರರು ನೀಡಬಹುದು. ಇಂತಹ ಹೊಸ ಪಾಲುದಾರನಿಗೆ ಅವನ ಲಾಭ ಹಂಚಿಕೆ ಅನುಪಾತದ ಪ್ರಕಾರ ಲಾಭವು ಖಾತರಿ ಮೊತ್ತಕ್ಕಿಂತ ಕಡಿಮೆಯಾದಾಗ ಅವನಿಗೆ ಖಾತರಿ ಮೊತ್ತವನ್ನು ಪಾವತಿ ಮಾಡಬೇಕಾಗುತ್ತದೆ.

ಉದಾಹರಣೆಗೆ; ಸಂಸ್ಥೆಯ ಪಾಲುದಾರರಾದ ಮದುಲಿಕ ಮತ್ತು ರಕ್ಷಿತ ಇವರು ಕನಿಷ್ಕ ಎಂಬುವವರನ್ನು ತಮ್ಮ ಸಂಸ್ಥೆಗೆ ಸೇರಿಸಿಕೊಂಡು, ಅವಳಿಗೆ ಸಂಸ್ಥೆಯ ಲಾಭದಲ್ಲಿ ₹25,000 ಕನಿಷ್ಟ ಪಾಲನ್ನು ಖಾತರಿಯಾಗಿ ನೀಡಲು ನಿರ್ಧರಿಸಿರುತ್ತಾರೆ. ಸಂಸ್ಥೆಯು ವರ್ಷದಲ್ಲಿ ₹1,20,000 ಲಾಭ ಗಳಿಸಿದೆ ಮತ್ತು ಪಾಲುದಾರರ ನಡುವಿನ ಲಾಭ ಹಂಚಿಕೆ ಅನುಪಾತವು 2:3:1 ಎಂದು ಒಪ್ಪಿಕೊಳ್ಳಲಾಗಿದೆ. ಈ ಅನುಪಾತದ ಪ್ರಕಾರ ಮದುಲಿಕಳ ₹ 40,000 (2/6 × ₹ 1,20,000) ರಕ್ಷಿತಾ ₹ 60,000 (3/6 × ₹ 1,20,000) ಮತ್ತು ಕನಿಷ್ಕ ₹ 20,000 ಗೆ (1/6 × ₹ 1,20,000) ಪಾಲು ಬರುತ್ತದೆ. ಕನಿಷ್ಕರವರ ಪಾಲು ಭರವಸೆಯ ಮೊತ್ತಕ್ಕಿಂತ ₹5000 ದಷ್ಟು ಕಡಿಮೆಯಾಗುತ್ತದೆ. ಇದನ್ನು ಭರವಸೆ ನೀಡಿದ ಪಾಲುದಾರರಾದ ಮದುಲಿಕ ಮತ್ತು ರಕ್ಷಿತಾರವರು ಅವರ ಲಾಭ ಹಂಚಿಕೆ ಅನುಪಾತದನುಸಾರ 2:3 ರ ರಂತೆ ನೀಡಬೇಕಾಗುತ್ತದೆ. ಈ ಸನ್ನಿವೇಶದಲ್ಲಿ ಮದುಲಿಕ ₹2,000 (2/5 × ₹ 5,000) ಮತ್ತು ರಕ್ಷಿತಾ ₹ 3,000 ಗಳನ್ನು (3/5 × ₹ 5,000) ಕೊರತೆಯ ಪಾಲು ಭರಿಸಬೇಕಾಗುತ್ತದೆ. ಸಂಸ್ಥೆಯ ಒಟ್ಟು ಲಾಭವನ್ನು ಪಾಲುದಾರರಲ್ಲಿ ಈ ಕೆಳಗಿನಂತೆ ವಿತರಿಸಲಾಗುವುದು. ಮದುಲಿಕರವರು ₹ 38,000 (₹40,000 ಅವಳ ಪಾಲು – ₹2,000 ಕೊರತೆಯಲ್ಲಿನ ಪಾಲು) ರಕ್ಷಿತಾ ₹ 57,000 (₹ 60,000 – ₹ 3,000) ಮತ್ತು ಕನಿಷ್ಕ ₹ 25,000 (₹20,000+₹2,000+₹3,000).

ಮೇಲಿನ ಸನ್ನಿವೇಶದಲ್ಲಿ ಒಬ್ಬ ಪಾಲುದಾರ ಮಾತ್ರ ಭರವಸೆ ನೀಡಿದರೆ, ಅಂದರೆ ರಕ್ಷಿತಾ ಮಾತ್ರ ಭರವಸೆ ನೀಡಿದರೆ ಕೊರತೆಯ ಒಟ್ಟು ಮೊತ್ತವನ್ನು (₹5,000) ಅವಳೊಬ್ಬಳೇ ನೀಡಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಲಾಭ ವಿತರಣೆಯು ಮದುಲಿಕ ₹ 40,000, ರಕ್ಷಿತಾ ₹ 55,000 (₹60,000 – 5,000) ಮತ್ತು ಕನಿಷ್ಕ ₹ 25,000 (₹20,000 + ₹5,000) ಇರುತ್ತದೆ.

**ನಿದರ್ಶನ – 9**

ಮೋಹಿತ್ ಮತ್ತು ರೋಹನ್ ಲಾಭ ಮತ್ತು ನಷ್ಟವನ್ನು 2:1 ರ ಅನುಪಾತದಲ್ಲಿ ಹಂಚಿಕೊಳ್ಳುತ್ತಾರೆ. ಲಾಭದಲ್ಲಿ 1/4 ರಷ್ಟು ಮತ್ತು ಜೊತೆಗೆ ಕನಿಷ್ಠ ₹50,000 ಗಳಷ್ಟು ಎಂಬ ಭರವಸೆಯ ಲಾಭದೊಂದಿಗೆ ಅವರು ರಾಹುಲ್‌ನನ್ನು ತೆಗೆದುಕೊಳ್ಳುತ್ತಾರೆ. ಮಾರ್ಚ 31, 2015 ರ ವರ್ಷಾಂತ್ಯಕ್ಕೆ ಸಂಸ್ಥೆಯ ನಿವ್ವಳ ಲಾಭವು ₹1,60,000 ರಷ್ಟು ಇದೆ. ಲಾಭ ಮತ್ತು ನಷ್ಟ ವಿತರಣಾ ಖಾತೆಯನ್ನು ತಯಾರಿಸಿ.

**ಪರಿಹಾರ:**

**ಖರ್ಚು** **ಲಾಭ ಮತ್ತು ನಷ್ಟದ ವಿತರಣಾ ಖಾತೆ** **ಜಮಾ**

| ವಿವರಗಳು | | ಮೊತ್ತ (₹) | ವಿವರಗಳು | ಮೊತ್ತ (₹) |
|---|---|---|---|---|
| ಮೋಹಿತ್‌ನ ಬಂಡವಾಳ: | | | ನಿವ್ವಳ ಲಾಭ | 1,60,000 |
| (ಲಾಭದ ಪಾಲು) | 80,000 | | | |
| ಕಳೆಯಿರಿ (–) ಪಾಲಿನಲ್ಲಿ ಕೊರತೆ | 6,667 | 73,333 | | |
| ರೋಹನ್‌ನ ಬಂಡವಾಳ: | | | | |
| (ಲಾಭದ ಪಾಲು) | 40,000 | | | |
| ಕಳೆಯಿರಿ (–) ಪಾಲಿನಲ್ಲಿ ಕೊರತೆ | 3,333 | 36,667 | | |
| ರಾಹುಲ್‌ನ ಬಂಡವಾಳ: | | | | |
| (ಲಾಭದ ಪಾಲು) | 40,000 | | | |
| ಕೂಡಿಸಿ (+) ಕೊರತೆಯನ್ನು ಪಡೆದಿರುವುದು: | | | | |
| ಮೋಹಿತ್ | 6,667 | | | |
| ರೋಹನ್ | 3,333 | 50,000 | | |
| | | **1,60,000** | | **1,60,000** |

**ಲೆಕ್ಕದ ಟಿಪ್ಪಣಿಗಳು: Working Notes**

ರಾಹುಲ್‌ನ ಪ್ರವೇಶದ ಬಳಿಕ ಹೊಸ ಲಾಭದ ಹಂಚಿಕೆ ಅನುಪಾತ 2:1:1 ರಷ್ಟಿದೆ. ಈ ಅನುಪಾತದ ಮೇರೆಗೆ ಪಾಲುದಾರರ ಲಾಭದ ಪಾಲು ಈ ರೀತಿ ಇದೆ.

ಮೋಹಿತ್ = ₹ 1,60,000 $\times \frac{2}{4}$ = ₹ 80,000

ರೋಹನ್ = ₹ 1,60,000 $\times \frac{1}{4}$ = ₹ 40,000

ರಾಹುಲ್ = ₹ 1,60,000 $\times \frac{1}{4}$ = ₹ 40,000

ಆದರೆ, ರಾಹುಲ್‌ನಿಗೆ ಕನಿಷ್ಠ ₹ 50,000 ದಷ್ಟು ಅವನ ಲಾಭದ ಪಾಲು ನೀಡುವ ಭರವಸೆ ಇತ್ತು. ₹ 10,000 (₹50,000 – ₹40,000) ರಷ್ಟು ಕೊರತೆಯನ್ನು ಮೋಹಿತ್ ಮತ್ತು ರೋಹನ್ ಅವರ ಲಾಭದ ಅನುಪಾತ 2:1 ರಲ್ಲಿ ಈ ಮುಂದಿನಂತೆ ಭರಿಸುತ್ತಾರೆ.

ಕೊರತೆಯಲ್ಲಿ ಮೋಹಿತ್‌ನ ಪಾಲು $\frac{2}{3}$ × ₹10,000 = ₹6,667

ಕೊರತೆಯಲ್ಲಿ ರೋಹನ್‌ನ ಪಾಲು $\frac{1}{3}$ × ₹10,000 = ₹3,333

ಆದ್ದರಿಂದ, ಮೋಹಿತ್‌ನು ₹80,000 – ₹6,667 = ₹73,333 ಪಡೆಯುತ್ತಾನೆ.

ರೋಹನ್‌ನು ₹ 40,000 – ₹3,333 = ₹36,667 ಪಡೆಯುತ್ತಾನೆ.

ಮತ್ತು ರಾಹುಲ್‌ನು ₹40,000 + ₹6,667 + ₹3,333 = ₹50,000 ಸಂಸ್ಥೆಯ ಲಾಭದಲ್ಲಿ ಪಾಲು ಪಡೆಯುತ್ತಾನೆ.

ಹೊಸ ಲಾಭದ ಹಂಚಿಕೆ ಅನುಪಾತ ಲೆಕ್ಕಹಾಕಿರಿ.

ಹೊಸ ಪಾಲುದಾರ ರಾಹುಲ್‌ನ ಪಾಲು $\frac{1}{4}$ ಉಳಿದ ಪಾಲು, $1 - \frac{1}{4} = \frac{3}{4}$ ನ್ನು ರೋಹಿತ್ ಮತ್ತು ರೋಹನ್‌ರ ಮಧ್ಯ ಅನುಪಾತ 2:1 ರಲ್ಲಿ ಹಂಚುವುದು.

ಮೋಹಿತ್‌ನ ಹೊಸ ಪಾಲು = $\frac{3}{4} \times \frac{2}{3} = \frac{6}{12} = \frac{2}{4}$

ರೋಹನ್‌ನ ಹೊಸ ಪಾಲು = $\frac{3}{4} \times \frac{1}{3} = \frac{3}{12} = \frac{1}{4}$

ಆದ್ದರಿಂದ, ಹೊಸ ಲಾಭದ ಹಂಚಿಕೆಯ ಅನುಪಾತ ಪ್ರಮಾಣವು $\frac{2}{4}:\frac{1}{4}:\frac{1}{4}$ ಅಥವಾ 2:1:1.

**ನಿದರ್ಶನ – 10**

ಜಾನ್ ಮತ್ತು ಮ್ಯಾಥ್ಯೂ ಅನುಪಾತ 3:2 ರಲ್ಲಿ ಲಾಭ ಮತ್ತು ನಷ್ಟವನ್ನು ಹಂಚಿಕೊಳ್ಳಲಿದ್ದು, ಅವರು ಸಂಸ್ಥೆಯ ಲಾಭದಲ್ಲಿ 1/6 ರಷ್ಟು ಪಾಲನ್ನು ಮೊಹಂತಿಗೆ ಕೊಡುವುದಾಗಿ ಒಪ್ಪಿ ಅವನಿಗೆ ಪ್ರವೇಶ ನೀಡುತ್ತಾರೆ. ವಾರ್ಷಿಕ ಶೇ. 10 ರಷ್ಟು ಬಂಡವಾಳದ ಮೇಲೆ ಬಡ್ಡಿಯನ್ನು ಹಾಕಿದ ನಂತರವೂ, ಯಾವ ವರ್ಷವೂ ₹30,000 ಕ್ಕಿಂತ ಕಡಿಮೆಯಿಲ್ಲದಷ್ಟು ಲಾಭದಲ್ಲಿ ಪಾಲಿನ ಭರವಸೆಯನ್ನು ಜಾನ್ ವೈಯಕ್ತಿಕವಾಗಿ ಮೊಹಂತಿಗೆ ನೀಡುತ್ತಾನೆ. ಈ ಮುಂದಿನಂತೆ ಬಂಡವಾಳವನ್ನು ಒದಗಿಸಲಾಗಿದೆ. ಜಾನ್ ₹2,50,000, ಮ್ಯಾಥ್ಯೂ ₹2,00,000 ಮತ್ತು ಮೊಹಂತಿ ₹1,50,000. ಬಂಡವಾಳದ ಮೇಲೆ ಬಡ್ಡಿಯನ್ನು ಒದಗಿಸುವ ಪೂರ್ವದಲ್ಲಿ ಮಾರ್ಚ 31, 2015 ಕ್ಕೆ ವಾರ್ಷಿಕ ಲಾಭದ ಮೊತ್ತ ₹1,50,000 ರಷ್ಟಿದೆ. ಹೊಸ ಲಾಭದ ಹಂಚಿಕೆ ಪ್ರಮಾಣ 3:2:1 ರಷ್ಟಿದ್ದು ಲಾಭ ಮತ್ತು ನಷ್ಟ ವಿತರಣಾ ಖಾತೆಯನ್ನು ತೋರಿಸಿರಿ.

**ಪರಿಹಾರ:**

**ಖರ್ಚು** **ಲಾಭ ಮತ್ತು ನಷ್ಟದ ವಿತರಣಾ ಖಾತೆ** **ಜಮಾ**

| ವಿವರಗಳು | | ಮೊತ್ತ (₹) | ವಿವರಗಳು | ಮೊತ್ತ (₹) |
|---|---|---|---|---|
| ಬಂಡವಾಳದ ಮೇಲೆ ಬಡ್ಡಿ; | | | ನಿವ್ವಳ ಲಾಭ | 1,50,000 |
| ಜಾನ್ | 25,000 | | | |
| ಮ್ಯಾಥ್ಯೂ | 20,000 | | | |
| ಮೊಹಂತಿ | 15,000 | 60,000 | | |
| ಬಂಡವಾಳ ಖಾತೆಗಳು; | | | | |
| ಜಾನ್: | 45,000 | | | |
| (–) ಕೊರತೆ ಪಾಲು | 15,000 | 30,000 | | |
| ಮ್ಯಾಥ್ಯೂ: | | 30,000 | | |
| ಮೊಹಂತಿ: | 15,000 | | | |
| (+) ಜಾನ್ ಭರಿಸಿದ ಕೊರತೆ | 15,000 | 30,000 | | |
| | | **1,50,000** | | **1,50,000** |

**ಲೆಕ್ಕದ ಟಿಪ್ಪಣಿಗಳು: Working Notes**

ಬಂಡವಾಳದ ಮೇಲಿನ ಬಡ್ಡಿಯ ನಂತರ ಲಾಭವು ₹ 90,000 (₹1,50,000 – ₹60,000) ರಷ್ಟಿದೆ. ಅದನ್ನು 3:2:1 ರ ಅನುಪಾತದಲ್ಲಿ ಮುಂದಿನಂತೆ ಹಂಚಲಾಗಿದೆ.

ಜಾನ್ ₹ 45,000 ( 3/6 × ₹90,000) ಪಡೆಯುತ್ತಾನೆ, ಮ್ಯಾಥ್ಯೂ ₹ 30,000, ಮೊಹಂತಿ ₹15,000. ಭರವಸೆ ನೀಡಿದ ಪ್ರಕಾರ ಮೊಹಂತಿಯ ಕೊರತೆಯನ್ನು (₹15,000) ಜಾನ್‌ನು ತನ್ನ ಲಾಭದಿಂದ ಭರಿಸುತ್ತಾನೆ. ಆದ್ದರಿಂದ, ಜಾನ್ (₹45,000 – ₹15,000) ₹30,000, ಮ್ಯಾಥ್ಯೂ ₹30,000 ಮತ್ತು ಮೊಹಂತಿ ₹30,000 ಪಡೆಯುತ್ತಾರೆ.

**ನಿದರ್ಶನ – 11**

ಮಹೇಶ ಮತ್ತು ದಿನೇಶ 2:1 ರ ಅನುಪಾತದಲ್ಲಿ ಲಾಭ ಮತ್ತು ನಷ್ಟವನ್ನು ಹಂಚಿಕೊಳ್ಳಲಿದ್ದು, ಜನೇವರಿ 1, 2014 ರಿಂದ ರಾಕೇಶ್‌ನನ್ನು ಅವರ ಸಂಸ್ಥೆಗೆ ಸೇರಿಸಿಕೊಂಡು, ಲಾಭದಲ್ಲಿ 1/10 ಕೊಡುವುದರ ಜೊತೆಗೆ ಕನಿಷ್ಠ ₹ 25,000 ಲಾಭವನ್ನು ನೀಡುವ ಭರವಸೆಯನ್ನು ಕೊಡುತ್ತಾರೆ. ಮಹೇಶ ಮತ್ತು ದಿನೇಶ್ ಲಾಭದ ಹಂಚಿಕೆಯನ್ನು ಹಿಂದಿನಂತೆಯೇ ಮುಂದುವರಿಸುತ್ತಾರೆ. ಆದರೆ, ರಾಕೇಶ್‌ನಿಗೆ ನೀಡಿದ ಭರವಸೆಯಂತೆ ಏನಾದರೂ ಕೊರತೆ ಕಂಡರೆ ಕ್ರಮವಾಗಿ 3:2 ರ ಅನುಪಾತದಲ್ಲಿ ಭರಿಸಲು ಒಪ್ಪಿದ್ದಾರೆ. ಡಿಸೆಂಬರ್ 31, 2015 ರ ವರ್ಷಾಂತ್ಯಕ್ಕೆ ಸಂಸ್ಥೆಯ ಲಾಭದ ಮೊತ್ತವು ₹1,20,000 ರಷ್ಟಿದೆ. ಲಾಭ ಮತ್ತು ನಷ್ಟ ವಿತರಣಾ ಖಾತೆಯನ್ನು ತಯಾರಿಸಿ.

**ಪರಿಹಾರ:**

**ಖರ್ಚು** **ಲಾಭ ಮತ್ತು ನಷ್ಟದ ವಿತರಣಾ ಖಾತೆ** **ಜಮಾ**

| ವಿವರಗಳು | | ಮೊತ್ತ (₹) | ವಿವರಗಳು | ಮೊತ್ತ (₹) |
|---|---|---|---|---|
| ಬಂಡವಾಳ ಖಾತೆಗಳು: (ಲಾಭದ ಹಂಚಿಕೆ) | | | ನಿವ್ವಳ ಲಾಭ | 1,20,000 |
| ಮಹೇಶ: (6/10 × ₹1,20,000) | 72,000 | | | |
| (–) ಕೊರತೆ ಪಾಲು | 7,800 | 64,200 | | |
| ದಿನೇಶ: (3/10 × ₹1,20,000) | 36,000 | | | |
| (–) ಕೊರತೆ ಪಾಲು | 5,200 | 30,800 | | |
| ರಾಕೇಶ್: | 12,000 | | | |
| (+) ಕೊರತೆಯ ಪಾಲು: ಮಹೇಶ | 7,800 | | | |
| ದಿನೇಶ | 5,200 | 25,000 | | |
| | | **1,20,000** | | **1,20,000** |

**ಲೆಕ್ಕದ ಟಿಪ್ಪಣಿಗಳು (Working Notes):**

ಹೊಸ ಲಾಭದ ಹಂಚಿಕೆಯ ಅನುಪಾತ ಈ ಮುಂದಿನಂತೆ ಲೆಕ್ಕಹಾಕಲಾಗಿದೆ:

ಲಾಭದೊಳಗೆ 1/10 ಪಾಲು ರಾಕೇಶನದು, ಉಳಿದ 9/10 ಲಾಭದಲ್ಲಿ ಮಹೇಶ ಮತ್ತು ದಿನೇಶ 2:1ರ ಅನುಪಾತದಲ್ಲಿ ಪ್ರಮಾಣದಲ್ಲಿ ಹಂಚಿಕೊಳ್ಳುವರು.

ಲಾಭದಲ್ಲಿ ಮಹೇಶನ ಪಾಲು $= \frac{2}{3}\times\frac{9}{10}=\frac{3}{5}$

ಲಾಭದಲ್ಲಿ ದಿನೇಶನ ಪಾಲು $= \frac{1}{3}\times\frac{9}{10}=\frac{3}{10}$

ಹೊಸ ಅನುಪಾತದ ಪ್ರಮಾಣ $= \frac{3}{5}:\frac{3}{10}:\frac{1}{10}=\left(\frac{3\times2}{5\times2}\right):\frac{3}{10}:\frac{1}{10}$

$$=\frac{6}{10}:\frac{3}{10}:\frac{1}{10}$$

$$=6:3:1$$

ಲಾಭದಲ್ಲಿ ಮಹೇಶನ ಪಾಲು = ₹1,20,000 × $\frac{6}{10}$ = ₹72,000

ಲಾಭದಲ್ಲಿ ದಿನೇಶನ ಪಾಲು = ₹ 36,000

ಲಾಭದಲ್ಲಿ ರಾಕೇಶನ ಪಾಲು = ₹ 12,000

ರಾಕೇಶ್‌ನ ಕೊರತೆ ₹13,000 ನ್ನು ಮಹೇಶ ಮತ್ತು ದಿನೇಶ ಅನುಪಾತ 3:2ರಲ್ಲಿ ಭರಿಸುತ್ತಾರೆ.

3/5 ×₹ 13,000 = ₹7,800 ಮಹೇಶ ಭರಿಸುತ್ತಾನೆ ಮತ್ತು 2/5 ×₹13,000 = ₹5,200 ರಾಕೇಶ ಭರಿಸುತ್ತಾನೆ.

ಆದ್ದರಿಂದ, ಸಂಸ್ಥೆಯ ಲಾಭವನ್ನು ಈ ಮುಂದಿನಂತೆ ಪಡೆದುಕೊಳ್ಳುತ್ತಾರೆ.

₹72,000 – ₹7,800 = ₹64,200 ಮಹೇಶನು ಪಡೆಯುತ್ತಾನೆ.

₹36,000 – ₹5,200 = ₹30,800 ದಿನೇಶನು ಪಡೆಯುತ್ತಾನೆ.

₹12,000 + ₹7,800 + ₹5,200 = ₹ 25,000 ರಾಕೇಶನು ಪಡೆಯುತ್ತಾನೆ.

**ನೀವೇ ಮಾಡಿರಿ Do it yourself**

ಕವಿತಾ ಮತ್ತು ಲಲಿತಾ ಪಾಲುದಾರರಾಗಿದ್ದು, ಲಾಭ ಹಂಚಿಕೆಯು 2:1 ರ ಅನುಪಾತದಲ್ಲಿದೆ. ಲಾಭದೊಳಗೆ ₹ 25,000 ಗಳನ್ನು ಮೋಹನನಿಗೆ ನೀಡುವ ಭರವಸೆಯೊಂದಿಗೆ ಅವನನ್ನು ಸೇರಿಸಿಕೊಳ್ಳಲು ನಿರ್ಧರಿಸುತ್ತಾರೆ. ಮೋಹನನಿಗೆ ನೀಡಿದ ಭರವಸೆಯ ಮೊತ್ತದ ಹೊಣೆಗಾರಿಕೆಯನ್ನು ಕವಿತಾ ಮತ್ತು ಲಲಿತಾ ಇಬ್ಬರೂ ತಮ್ಮ ಲಾಭದ ಹಂಚಿಕೆಯ ಪ್ರಮಾಣದಲ್ಲಿ ಭರಿಸಲು ನಿರ್ಣಯಿಸಿದರು. ಕವಿತಾ ಮತ್ತು ಲಲಿತಾರ ಮಧ್ಯ ಲಾಭದ ಹಂಚಿಕೆ ಪ್ರಮಾಣದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. 2006–07 ರಲ್ಲಿ ಸಂಸ್ಥೆಯು ₹76,000 ದಷ್ಟು ಲಾಭ ಗಳಿಸಿದೆ. ಪಾಲುದಾರರ ಮಧ್ಯ ಹಂಚುವ ಲಾಭವನ್ನು ತೋರಿಸಿರಿ.

## 2.7 ಹಿಂದಿನ ಹೊಂದಾಣಿಕೆಗಳು: Past Adjustments

ಕೆಲವೊಮ್ಮೆ ಸಂಸ್ಥೆಯ ಅಂತಿಮ ಖಾತೆಗಳನ್ನು ತಯಾರಿಸಿ, ಲಾಭವನ್ನು ಪಾಲುದಾರರಲ್ಲಿ ವಿತರಣೆ ಮಾಡಿದ ನಂತರ, ವಹಿವಾಟುಗಳ ದಾಖಲೆ ಅಥವಾ ಅಂತಿಮ ತಃಖ್ತೆಗಳ ತಯಾರಿಕೆಯಲ್ಲಿ ಕೆಲವು ಲೋಪಗಳು ಅಥವಾ ದೋಷಗಳು ಕಂಡುಬರುತ್ತವೆ. ಇಂತಹ ಲೋಪಗಳು ಬಂಡವಾಳದ ಮೇಲಿನ ಬಡ್ಡಿ, ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿ, ಪಾಲುದಾರರ ಸಾಲದ ಮೇಲಿನ ಬಡ್ಡಿ, ಕೊಡತಕ್ಕ ಖರ್ಚುಗಳು ಮುಂತಾದವುಗಳಿಗೆ ಸಂಬಂಧಪಟ್ಟಿರಬಹುದು. ಪಾಲುದಾರಿಕೆ ಒಪ್ಪಂದದ ಉಪಬಂಧಗಳು ಅಥವಾ ಲೆಕ್ಕ ಬರಹ ಪದ್ಧತಿಯಲ್ಲಿನ ಕೆಲವು ಬದಲಾವಣೆಗಳು ಸಹ ಹಿಂದಿನ ಪರಿಣಾಮದೊಂದಿಗೆ ಪ್ರಭಾವ ಬೀರುತ್ತವೆ. ಈ ಎಲ್ಲಾ ಲೋಪಗಳ ಪರಿಣಾಮಗಳನ್ನು ಸರಿಪಡಿಸಲು ಹೊಂದಾಣಿಕೆಗಳು ಅವಶ್ಯಕ. ಇದಕ್ಕಾಗಿ ಹಳೆಯ ಖಾತೆಗಳನ್ನು ಬದಲಾಯಿಸುವ ಬದಲು, ಲಾಭ ಮತ್ತು ನಷ್ಟ ಹೊಂದಾಣಿಕೆ ಅಥವಾ ನೇರವಾಗಿ ಸಂಬಂಧಪಟ್ಟ ಪಾಲುದಾರರ ಬಂಡವಾಳ ಖಾತೆಗಳಲ್ಲಿ ಅವಶ್ಯಕ ಹೊಂದಾಣಿಕೆಗಳನ್ನು ಮಾಡಬಹುದು. ಇದನ್ನು ಕೆಳಗಿನ ಉದಾಹರಣೆಯ ಸಹಾಯದಿಂದ ವಿವರಿಸಬಹುದು.

ರಮೀಜ್ ಮತ್ತು ಜಯೀರ್ ಸಮಾನ ಪಾಲುದಾರರಾಗಿದ್ದಾರೆ. 2015, ಎಪ್ರೀಲ್ 1 ರಂದು ಅವರ ಬಂಡವಾಳವು ಕ್ರಮವಾಗಿ ₹50,000 ಮತ್ತು ₹1,00,000 ಇದೆ. 2016 ಮಾರ್ಚ, 31 ರ ಹಣಕಾಸು ವರ್ಷಾಂತ್ಯಕ್ಕೆ ಖಾತೆಗಳನ್ನು ತಯಾರಿಸಿದ ನಂತರ, ಲಾಭ ಹಂಚಿಕೆ ಮಾಡುವುದಕ್ಕಿಂತ ಮುಂಚೆ ಪಾಲುದಾರಿಕೆ ಒಪ್ಪಂದದಲ್ಲಿದ್ದ ವಾರ್ಷಿಕ ಶೇ. 6 ರಷ್ಟು ಬಡ್ಡಿಯನ್ನು ಪಾಲುದಾರರ ಖಾತೆಗಳಿಗೆ ಜಮಾ ಮಾಡದಿರುವುದು ಗೊತ್ತಾಗಿದೆ. ಈ ಸಂದರ್ಭದಲ್ಲಿ ಪಾಲುದಾರರ ಖಾತೆಗಳಿಗೆ ಜಮೆಯಾಗದ ಬಡ್ಡಿಯು ರಮೀಜ್‌ನಿಗೆ ₹ 3,000 (6/100 × ₹50,000) ಮತ್ತು ಜಹೀರನಿಗೆ

₹ 6,000 (6/100 × ₹1,00,000) ಬರುತ್ತದೆ. ಬಂಡವಾಳದ ಮೇಲಿನ ಬಡ್ಡಿಯನ್ನು ಸೂಕ್ತವಾಗಿ ಮೊದಲೇ ನೀಡಿದ್ದರೆ, ಸಂಸ್ಥೆಯ ಲಾಭವು ₹ 9,000 ಕ್ಕೆ ಇಳಿಯುತ್ತಿತ್ತು. ಲಾಭ ಮತ್ತು ನಷ್ಟ ಖಾತೆಯಲ್ಲಿನ ಎಲ್ಲಾ ಲಾಭದ ಮೊತ್ತವನ್ನು (ಹೊಂದಾಣಿಕೆಯಾಗದ ₹ 9,000) ಪಾಲುದಾರರಲ್ಲಿ ಅವರ ಲಾಭ ಹಂಚಿಕೆ ಅನುಪಾತದ ಪ್ರಕಾರ ವಿತರಣೆ ಮಾಡಿರುತ್ತಾರೆ. ಆದರೆ, ಅವರ ಬಂಡವಾಳ ಖಾತೆಗಳಿಗೆ ಬಂಡವಾಳದ ಮೇಲಿನ ಬಡ್ಡಿಯನ್ನು ಜಮೆ ಮಾಡಿರುವುದಿಲ್ಲ. ಹೀಗಿದ್ದಾಗ, ಈ ಕೆಳಗಿನ ಯಾವುದಾದರೊಂದು ವಿಧಾನಗಳಿಂದ ಈ ತಪ್ಪನ್ನು ಸರಿಪಡಿಸಬಹುದು.

| ವಿವರಗಳು | ರಮೀಜ್ (₹) | ಜಹೀರ್ (₹) |
|---|---|---|
| **(ಎ) ಲಾಭ ಮತ್ತು ನಷ್ಟ ಹೊಂದಾಣಿಕೆ ಖಾತೆಯ ಮೂಲಕ** | | |
| ಲಾಭ ಮತ್ತು ನಷ್ಟ ಹೊಂದಾಣಿಕೆ ಖಾತೆ ಖರ್ಚು | 9,000 | |
| ರಮೀಜ್ ಬಂಡವಾಳ ಖಾತೆಗೆ | | 3,000 |
| ಜಹೀರ ಬಂಡವಾಳ ಖಾತೆಗೆ | | 6,000 |
| (ಬಂಡವಾಳದ ಮೇಲೆ ಬಡ್ಡಿ ) | | |
| ರಮೀಜ್ ಬಂಡವಾಳ ಖಾತೆ ಖರ್ಚು | 4,500 | |
| ಜಹೀರ್ ಬಂಡವಾಳ ಖಾತೆ ಖರ್ಚು | 4,500 | |
| ಲಾಭ ಮತ್ತು ನಷ್ಟ ಹೊಂದಾಣಿಕೆ ಖಾತೆಗೆ | | 9,000 |
| (ಹೊಂದಾಣಿಕೆಯಿಂದಾದ ನಷ್ಟ) | | |

(ಬಿ) **ನೇರವಾಗಿ ಪಾಲುದಾರರ ಬಂಡವಾಳ ಖಾತೆಗಳಲ್ಲಿ:** ನೇರವಾಗಿ ಪಾಲುದಾರರ ಬಂಡವಾಳ ಖಾತೆಗಳಲ್ಲಿ ಹೊಂದಾಣಿಕೆ ಮಾಡುವುದಕ್ಕಿಂತ ಪೂರ್ವದಲ್ಲಿ ಪಾಲುದಾರರ ಬಂಡವಾಳ ಖಾತೆಗಳ ಮೇಲೆ ಲೋಪದ ನಿವ್ವಳ ಪರಿಣಾಮವನ್ನು ಕಂಡು ಹಿಡಿಯಲು ಈ ಕೆಳಗಿನಂತೆ ತಃಖ್ತೆಯನ್ನು ತಯಾರಿಸಲಾಗುವುದು. ನಂತರ ಹೊಂದಾಣಿಕೆ ರೋಜುಗಳನ್ನು ದಾಖಲಿಸಬಹುದಾಗಿದೆ.

**ಬಂಡವಾಳದ ಮೇಲಿನ ಬಡ್ಡಿ ಬಿಟ್ಟಿರುವ ಲೋಪದಿಂದಾದ ನಿವ್ವಳ ಪರಿಣಾಮ ತೋರಿಸುವ ಪಟ್ಟಿ**

| ವಿವರಗಳು | ರಮೀಜ್ (₹) | ಜಹೀರ್(₹) |
|---|---|---|
| (1) ಜಮೆಯಾಗಬೇಕಾಗಿದ್ದ ಬಂಡವಾಳದ ಮೇಲಿನ ಬಡ್ಡಿಯ ಮೊತ್ತ | 3,000 | 6,000 |
| (2) ಲಾಭದ ಪಾಲಾಗಿ ನೈಜವಾಗಿ ಜಮೆಯಾದ ಮೊತ್ತ (₹9,000 ಸಮಾನಾಗಿ ವಿಂಗಡಿಸಿದೆ) | 4,500 | 4,500 |
| (1)ಮತ್ತು (2) ರ ಮಧ್ಯ ವ್ಯತ್ಯಾಸ (ನಿವ್ವಳ ಪರಿಣಾಮ) | **1,500**<br>**ಹೆಚ್ಚುವರಿ ಜಮಾ** | **1,500**<br>**ಕೊರತೆ ಜಮಾ** |

ರಮೀಜ್‌ರವರು ₹ 1,500 ಗಳನ್ನು ಹೆಚ್ಚುವರಿ ಜಮೆ ಪಡೆದಿದ್ದಾರೆ, ಹಾಗೆಯೇ ಜಹೀರ ಖಾತೆಗೆ ₹1500 ಕಡಿಮೆ ಜಮೆಯಾಗಿದೆ ಎಂದು ಈ ತಃಖ್ತೆಯು ತೋರಿಸುತ್ತದೆ. ₹1,500 ಗಳನ್ನು ರಮೀಜ ಬಂಡವಾಳ ಖಾತೆಗೆ ಖರ್ಚು ಮತ್ತು ಜಹೀರ ಖಾತೆಗೆ ಜಮೆ ಮಾಡುವ ಈ ಕೆಳಗಿನ ರೋಜು ದಾಖಲೆ ಬರೆಯುವದರ ಮೂಲಕ ತಪ್ಪನ್ನು ಸರಿಪಡಿಸಬಹುದು.

**ರೋಜು ದಾಖಲೆ**

| ವಿವರಗಳು | ರಮೀಜ್ (₹) | ಜಹೀರ್ (₹) |
|---|---|---|
| ರಮೀಜ್ ಬಂಡವಾಳ ಖಾತೆ ಖರ್ಚು | 1,500 | |
| ಜಹೀರ್ ಬಂಡವಾಳ ಖಾತೆಗೆ | | 1,500 |
| (ಬಂಡವಾಳದ ಮೇಲಿನ ಬಡ್ಡಿ ಬಿಟ್ಟಿದ್ದಕ್ಕಾಗಿ ಲೋಪದ ಹೊಂದಾಣಿಕೆ) | | |

**ನಿದರ್ಶನ – 12**

ನಸ್ರತ್, ಸೋನು ಮತ್ತು ಹಿಮೇಶ್ ಪಾಲುದಾರರಾಗಿದ್ದು, ಲಾಭ ಮತ್ತು ನಷ್ಟವನ್ನು 5:3:2 ರ ಅನುಪಾತದಲ್ಲಿ ಹಂಚಿಕೊಳ್ಳಲಿದ್ದಾರೆ. ಅವರು ಸ್ವಂತಕ್ಕೆ ಹಿಂಪಡೆದ ಮೊತ್ತಕ್ಕೆ ವಾರ್ಷಿಕ ಶೇ. 10 ರಷ್ಟು ಬಡ್ಡಿಯನ್ನು ಆಕರಿಸಲು ಪಾಲುಗಾರಿಕೆ ಒಪ್ಪಂದವು ಅನುಮತಿಸಿದೆ.

ಡಿಸೆಂಬರ್ 2015 ರ ವರ್ಷಾಂತ್ಯಕ್ಕೆ ನಸ್ರತ್, ಸೋನು ಮತ್ತು ಹಿಮೇಶ್ ಅನುಕ್ರಮವಾಗಿ ₹20,000, ₹15,000 ಮತ್ತು ₹10,000 ದಷ್ಟು ಮೊತ್ತವನ್ನು ಸ್ವಂತಕ್ಕೆ ಹಿಂಪಡೆದಿದ್ದಾರೆ. ಅವರು ಸ್ವಂತಕ್ಕೆ ಹಿಂಪಡೆದ ಮೊತ್ತಕ್ಕೆ ಬಡ್ಡಿಯನ್ನು ಆಕರಿಸಿಲ್ಲ ಎನ್ನುವುದು ಅಂತಿಮ ಖಾತೆಗಳನ್ನು ತಯಾರಿಸಿದ ನಂತರ ತಿಳಿದು ಬಂದಿದೆ. ಅವಶ್ಯಕ ಹೊಂದಾಣಿಕೆಗಳ ರೋಜು ದಾಖಲೆಗಳನ್ನು ನೀಡಿರಿ.

**ಪರಿಹಾರ:**

**ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿ ಬಿಟ್ಟಿರುವುದರಿಂದಾದ ನಿವ್ವಳ ಪರಿಣಾಮ ತೋರಿಸುವ ಪಟ್ಟಿ**

| ವಿವರಗಳು | ನಸ್ರತ್ (₹) | ಸೋನು (₹) | ಹಿಮೇಶ್ (₹) | ಒಟ್ಟು ಮೊತ್ತ (₹) |
|---|---|---|---|---|
| ಸ್ವಂತ ವೆಚ್ಚಕ್ಕೆ ಬಡ್ಡಿಯ ರೂಪದಲ್ಲಿ ಹಾಕಲಾದ ಖರ್ಚಿನ ಮೊತ್ತ | 2,000 | 1,500 | 1,000 | 4,500 |
| ಲಾಭದ ಪಾಲಿನ ರೂಪದಲ್ಲಿ ಜಮೆ ಮಾಡಲಾದ ಮೊತ್ತ | 2,250 | 1,350 | 9,00 | 4,500 |
| ಅವಶ್ಯಕ ಹೊಂದಾಣಿಕೆ | 250 ಜಮೆ (ಕೊರತೆ) | 150 ಜಮೆ (ಹೆಚ್ಚುವರಿ) | **100 ಜಮೆ** (ಹೆಚ್ಚುವರಿ) | – |

**ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿಯ ಹೊಂದಾಣಿಕೆಗಾಗಿ ರೋಜು ನಮೂದು ಹೀಗಿದೆ**

| ವಿವರಗಳು | ಸೋನು (₹) | ಹಿಮೇಶ್ (₹) |
|---|---|---|
| ಸೋನುನ ಬಂಡವಾಳ ಖಾತೆ ಖರ್ಚು | 150 | – |
| ಹಿಮೇಶ್‌ನ ಬಂಡವಾಳ ಖಾತೆ ಖರ್ಚು | 100 | – |
| ನಸ್ರತ್ ಬಂಡವಾಳ ಖಾತೆಗೆ | – | 250 |
| (ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿ ಬಿಟ್ಟಿದ್ದರ ಲೋಪದ ಹೊಂದಾಣಿಕೆ) | | |

**ನೀವೇ ಮಾಡಿರಿ Do it yourself**

1. ಗುಪ್ತ ಮತ್ತು ಸರೀನ್ ಸಂಸ್ಥೆಯ ಪಾಲುದಾರರಾಗಿದ್ದು ಲಾಭದ ಹಂಚಿಕೆಯು 3:2ರ ಅನುಪಾತದಷ್ಟಿದೆ. ಅವರ ಸ್ಥಿರ ಬಂಡವಾಳವು: ಗುಪ್ತ ₹2,00,000 ಮತ್ತು ಸರೀನ್ ₹3,00,000 ಇದೆ. ಪಾಲುದಾರಿಕೆ ಒಪ್ಪಂದದಲ್ಲಿ ನಿರ್ಧರಿಸಿದಂತೆ ವಾರ್ಷಿಕ ಶೇ. 10 ರಷ್ಟು ಬಂಡವಾಳದ ಮೇಲೆ ಬಡ್ಡಿಯನ್ನು ನೀಡಬೇಕು. ಲಾಭದ ಹಂಚಿಕೆಯ ಪೂರ್ವದಲ್ಲಿ ಪಾಲುಗಾರರ ಬಂಡವಾಳ ಖಾತೆಗಳಿಗೆ ಜಮೆಯಾಗಿಲ್ಲ ಎನ್ನುವುದು ವರ್ಷದ ಲೆಕ್ಕಪತ್ರಗಳನ್ನು ತಯಾರಿಸಿದ ನಂತರ ಗೊತ್ತಾಗಿದೆ. ತಪ್ಪುಗಳನ್ನು ತಿದ್ದಿ ಸರಿಪಡಿಸಿ, ಹೊಂದಾಣಿಕೆ ರೋಜುಗಳನ್ನು ತಯಾರಿಸಿರಿ.
2. ಕೃಷ್ಣ, ಸಂದೀಪ್ ಮತ್ತು ಕರೀಮ್ ಪಾಲುದಾರರಾಗಿದ್ದು ಲಾಭದ ಹಂಚಿಕೆಯ ಪ್ರಮಾಣವು ಅನುಪಾತ 3:2:1 ರಷ್ಟಿದೆ. ಅವರ ಸ್ಥಿರ ಬಂಡವಾಳವು: ಕೃಷ್ಣ ₹ 1,20,000, ಸಂದೀಪ ₹ 90,000 ಮತ್ತು ಕರೀಮ್ ₹ 60,000 ಇದೆ. 2014–15 ನೇ ವರ್ಷದಲ್ಲಿ ವಾರ್ಷಿಕ ಶೇ. 5 ರಷ್ಟು ಬಡ್ಡಿ ಜಮಾ ಆಗುವುದರ ಬದಲು ಶೇ. 6 ರಷ್ಟು ಜಮಾ ಆಗಿದೆ. ಹೊಂದಾಣಿಕೆಯ ರೋಜುಗಳನ್ನು ತಯಾರಿಸಿರಿ.
3. ಲೀಲಾ, ಮೀರಾ ಮತ್ತು ನೇಹಾ ಪಾಲುದಾರರಾಗಿದ್ದು, ಮಾರ್ಚ 31, 2013 ರ ವರ್ಷಾಂತ್ಯಕ್ಕೆ ಮೂರು ವರ್ಷಗಳ ವರೆಗೆ ವಾರ್ಷಿಕ ಶೇ. 9 ರಷ್ಟು ಬಂಡವಾಳದ ಮೇಲಿನ ಬಡ್ಡಿ ದಾಖಲಿಸುವುದನ್ನು ಬಿಡಲಾಗಿದೆ. ಪೂರ್ತಿ ವರ್ಷ ಅವರ ಸ್ಥಿರ ಬಂಡವಾಳಗಳ ಮೇಲೆ ಬಡ್ಡಿಯನ್ನು ಅನುಮತಿಸಿದೆ. ಅಂದರೆ: ಲೀಲಾ ₹80,000, ಮೀರಾ ₹60,000 ಮತ್ತು ನೇಹಾ ₹1,00,000. ಅವರ ಕಳೆದ ಮೂರು ವರ್ಷದ ಲಾಭದ ಹಂಚಿಕೆ ಅನುಪಾತಗಳು ಈ ರೀತಿ ಇವೆ.

| ವರ್ಷ | ಲೀಲಾ | ಮೀರಾ | ನೇಹಾ |
|---|---|---|---|
| 2015–16 | 2 | 2 | 2 |
| 2014–15 | 4 | 5 | 1 |
| 2013–14 | 1 | 2 | 2 |

ಹೊಂದಾಣಿಕೆಯ ನಮೂದುಗಳನ್ನು ದಾಖಲಿಸಿರಿ.

## 2.8. ಅಂತಿಮ ಖಾತೆಗಳು: Final Accounts

ಪಾಲುದಾರರಲ್ಲಿ ಲಾಭದ ಹಂಚಿಕೆಗೆ ಸಂಬಂಧಪಟ್ಟ ವ್ಯತ್ಯಾಸವೊಂದನ್ನು ಬಿಟ್ಟರೆ ಏಕವ್ಯಕ್ತಿ ವ್ಯಾಪಾರಿ ಸಂಸ್ಥೆಯಲ್ಲಿ ತಯಾರಿಸಿದ ರೀತಿಯಲ್ಲಿಯೇ ಪಾಲುದಾರಿಕೆ ಸಂಸ್ಥೆಗಳಲ್ಲಿ ಅಂತಿಮ ಖಾತೆಗಳನ್ನು ತಯಾರಿಸಲಾಗುತ್ತದೆ. ಈ ಅಧ್ಯಾಯದಲ್ಲಿ ಈ ಮೊದಲೇ ಚರ್ಚಿಸಿದಂತೆ ವ್ಯಾಪಾರ ಮತ್ತು ಲಾಭ ಮತ್ತು ನಷ್ಟ ಖಾತೆಯನ್ನು ತಯಾರಿಸಿದ ನಂತರ, ನಿವ್ವಳ ಲಾಭ ಅಥವಾ ನಿವ್ವಳ ನಷ್ಟವನ್ನು ಲಾಭ ಮತ್ತು ನಷ್ಟ ವಿತರಣಾ ಖಾತೆಗೆ ವರ್ಗಾಯಿಸಲಾಗುತ್ತದೆ. ನಿಮಗೆ ಗೊತ್ತಿರುವಂತೆ ಬಂಡವಾಳದ ಮೇಲಿನ ಬಡ್ಡಿ, ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿ, ಪಾಲುದಾರರ ಸಾಲದ ಮೇಲಿನ ಬಡ್ಡಿ ಮುಂತಾದವುಗಳನ್ನು ಲಾಭ ಮತ್ತು ನಷ್ಟ ಖಾತೆಗೆ ದಾಖಲಿಸಲಾಗುತ್ತದೆ, ಪಾಲುದಾರರ ವೇತನ, ಪಾಲುದಾರರ ಲಾಭ ಮತ್ತು ನಷ್ಟದ ಪಾಲು, ಪಾಲುದಾರರ ಸಾಲದ ಮೇಲಿನ ಬಡ್ಡಿ, ಮುಂತಾದವುಗಳಿಗೆ ಸಂಬಂಧಿಸಿದವುಗಳನ್ನು ಲಾಭ ಮತ್ತು ನಷ್ಟ ವಿತರಣಾ ಖಾತೆಯ ಮೂಲಕ ಹೊಂದಾಣಿಕೆ ಮಾಡಲಾಗುತ್ತದೆ. ವ್ಯವಹಾರದ ಕಾರ್ಯಾಚರಣೆ ಮತ್ತು ಪಾಲುದಾರರಲ್ಲಿನ ಲಾಭದ ಹಂಚಿಕೆಯ ಫಲಿತಾಂಶಗಳ ನಡುವಿನ ವ್ಯತ್ಯಾಸವನ್ನು ತೋರಿಸಲು ಇದನ್ನು ತಯಾರಿಸಲಾಗುತ್ತದೆ. ಅಂತಿಮ ಖಾತೆಗಳು ಮತ್ತು ಲಾಭ ಮತ್ತು ನಷ್ಟ ವಿತರಣಾ ಖಾತೆ ತಯಾರಿಸುವುದನ್ನು ನಿದರ್ಶನ 13 ರ ಸಹಾಯದಿಂದ ಸ್ಪಷ್ಟಪಡಿಸಲಾಗಿದೆ.

**ನಿದರ್ಶನ – 13**

ಕಪಿಲ್ ಮತ್ತು ವಿನೀತ್ ಪಾಲುದಾರರಾಗಿದ್ದು, ಲಾಭ ಮತ್ತು ನಷ್ಟವನ್ನು 3:2ರ ಅನುಪಾತದಲ್ಲಿ ಹಂಚಿಕೊಳ್ಳಲಿದ್ದಾರೆ. ಮಾರ್ಚ 31, 2014 ರ ವರ್ಷಾಂತ್ಯಕ್ಕೆ ಲೆಕ್ಕದ ಪುಸ್ತಕಗಳಿಂದ ಪಡೆಯಲಾದ ಮಾಹಿತಿಗಳು ಈ ಕೆಳಗಿನಂತಿವೆ.

| ಖಾತೆಯ ಹೆಸರು | ಖರ್ಚು ಮೊತ್ತ (₹) | ಜಮೆ ಮೊತ್ತ (₹) |
|---|---|---|
| ಬಂಡವಾಳಗಳು; | | |
| ಕಪಿಲ್ | – | 60,000 |
| ವಿನೀತ್ | – | 50,000 |
| ಚಾಲ್ತಿ ಖಾತೆಗಳು (ಏಪ್ರಿಲ್ 1, 2013 ರಲ್ಲಿದ್ದಂತೆ); | – | 2,800 |
| ಕಪಿಲ್ | – | – |
| ವಿನೀತ್ | – | 1,600 |
| ಸ್ವಂತ ವೆಚ್ಚಕ್ಕೆ; | – | |
| ಕಪಿಲ್ | 1,200 | – |
| ವಿನೀತ್ | 8,000 | – |
| ಏಪ್ರಿಲ್ 1, 2013 ಕ್ಕೆ ಇರುವ ದಾಸ್ತಾನು | 11,000 | – |
| ಖರೀದಿ ಮತ್ತು ಮಾರಾಟ | 54,000 | 80,000 |
| ವಾಪಾಸಾತಿಗಳು | 2,000 | 1,500 |
| ಕೂಲಿ | 2,500 | – |
| ವೇತನ | 4,000 | – |
| ಮುದ್ರಣ ಮತ್ತು ಸ್ಟೇಷನರಿ | 500 | – |
| ಬರತಕ್ಕ ಹುಂಡಿಗಳು | 12,000 | – |
| ಕೊಡತಕ್ಕ ಹುಂಡಿಗಳು | – | 2,000 |
| ಸಾಲಗಾರರು (ಋಣಿಗಳು) ಮತು ಸಾಹುಕಾರರು (ಧಣಿಗಳು ) | 36,000 | 8,000 |
| ಸೋಡಿ | 1,200 | 1,500 |
| ಬಾಡಿಗೆ ಮತ್ತು ದರಗಳು | 800 | – |
| ವಸೂಲಾಗದ ಸಾಲ (ಕರಡು ಸಾಲ) | 1,400 | – |
| ವಿಮೆ | 400 | – |
| ಅಂಚೆ ಮತ್ತು ತಂತಿ | 300 | – |
| ವಿಕ್ರಯದಾರನ ದಲ್ಲಾಳಿ | 3,400 | – |
| ಭೂಮಿ ಮತ್ತು ಕಟ್ಟಡ | 24,000 | – |
| ಸ್ಥಾವರ ಮತ್ತು ಯಂತ್ರೋಪಕರಣಗಳು | 20,000 | – |
| ಉಪಕರಣಗಳು | 13,500 | – |
| ಮೀರೆಳೆತ | – | 2,000 |
| ವ್ಯಾಪಾರ ಖರ್ಚುಗಳು | 400 | – |
| ಕೈಯಲ್ಲಿರುವ ನಗದು | 500 | – |
| ಬ್ಯಾಂಕಿನಲ್ಲಿರುವ ನಗದು | 1,500 | – |
| ಒಟ್ಟು | **2,09,400** | **2,09,400** |

ಈ ಮುಂದಿನವುಗಳನ್ನು ಪರಿಗಣಿಸಿ ಮಾರ್ಚ 31, 2014ರ ವರ್ಷಾಂತ್ಯಕ್ಕೆ ಅಂತಿಮ ಲೆಕ್ಕದ ಖಾತೆಗಳನ್ನು ತಯಾರಿಸಿರಿ:

(ಎ) ಮಾರ್ಚ 31, 2014ಕ್ಕೆ ಇರುವ ದಾಸ್ತಾನು ₹ 18,000;

(ಬಿ) ಸಾಲಗಾರರ ಮೇಲೆ ಶೇ. 5 ರಷ್ಟು ಸಂಶಯಾಸ್ಪದ ಸಾಲಗಳ ನಿಧಿ ತೆಗೆಯಿರಿ;

(ಸಿ) ಕೊಡಬೇಕಾದ ಬಾಕಿ ವೇತನ ₹1,000;

(ಡಿ) ಡಿಸೆಂಬರ್ 10, 2013 ಕ್ಕೆ ಅಗ್ನಿ ಅನಾಹುತಕ್ಕೆ ₹ 8,000 ಸರಕುಗಳು ಹಾಳಾಗಿವೆ. ವಿಮಾ ಪರಿಹಾರ ₹7,000 ಮೊತ್ತವನ್ನು ವಿಮಾ ಕಂಪನಿ ಭರಿಸಲು ಒಪ್ಪಿದೆ;

(ಇ) ವಾರ್ಷಿಕ ಶೇ. 6 ರಷ್ಟು ಬಂಡವಾಳದ ಮೇಲೆ ಬಡ್ಡಿಯನ್ನು ಮತ್ತು ವಾರ್ಷಿಕ ಶೇ. 6 ರಷ್ಟು ಸ್ವಂತಕ್ಕೆ ಹಿಂಪಡೆತದ ಮೇಲೆ ಬಡ್ಡಿಯನ್ನು ಆಕರಿಸುವುದು;

(ಎಫ್) ಕಪಿಲ್‌ನು ವಾರ್ಷಿಕ ₹ 1,200 ವೇತನ ಪಡೆಯಲು ಹಕ್ಕುಳ್ಳವನಾಗಿರುತ್ತಾನೆ;

(ಜಿ) ಭೂಮಿ ಮತ್ತು ಕಟ್ಟಡದ ಮೇಲೆ ಶೇ. 5, ಸಲಕರಣೆಗಳ ಮೇಲೆ ಶೇ. 10 ಮತ್ತು ಸ್ಥಾವರ ಮತ್ತು ಯಂತ್ರೋಪಕರಣಗಳ ಮೇಲೆ ಶೇ. 15 ರಷ್ಟು ಸವಕಳಿ ತೆಗೆಯಿರಿ;

**ಪರಿಹಾರ:**

**ಮಾರ್ಚ್ 31, 2014 ರ ವರ್ಷಾಂತ್ಯಕ್ಕೆ ಇದ್ದಂತೆ**

**ಖರ್ಚು ವ್ಯಾಪಾರ ಮತ್ತು ಲಾಭ ಮತ್ತು ನಷ್ಟ ಖಾತೆ ಜಮಾ**

| ವಿವರಗಳು | | ಮೊತ್ತ (₹) | ವಿವರಗಳು | | ಮೊತ್ತ (₹) |
|---|---|---|---|---|---|
| ಆರಂಭಿಕ ಶಿಲ್ಕು | | 11,000 | ಮಾರಾಟಗಳು | 80,000 | |
| ಖರೀದಿಗಳು | 54,000 | | (–) ವಾಪಸಾತಿಗಳು | 2,000 | 78,000 |
| (–) ವಾಪಸಾತಿಗಳು | 1,500 | 52,500 | ಅಂತಿಮ ಶಿಲ್ಕು | | 18,000 |
| ಕೂಲಿ | | 2,500 | ಅಗ್ನಿಯಿಂದ ಹಾನಿಯಾದ ಸರಕುಗಳು | | 8,000 |
| ಸ್ಥೂಲ ಲಾಭ: (ಲಾಭ ಮತ್ತು ನಷ್ಟ ಖಾತೆಗೆ ವರ್ಗಾಯಿಸಿದ್ದು) | | 38,000 | | | |
| | | **1,04,000** | | | **1,04,000** |
| ವೇತನಗಳು | 4,000 | | ಸ್ಥೂಲ ಲಾಭ: (ವ್ಯಾಪಾರಿ ಖಾತೆಯಿಂದ ಬಂದದ್ದು) | | 38,000 |
| ಕೂಡಿಸಿ: (+) ಬಾಕಿ | 1,000 | 5,000 | | | |
| ಮುದ್ರಣ ಮತ್ತು ಸ್ಟೇಷನರಿ | | 500 | ಸೋಡಿ ಸ್ವೀಕರಿಸಿದ್ದು | | 1,500 |
| ಬಾಡಿಗೆ ಮತ್ತು ದರಗಳು | | 800 | | | |
| ವಿಮೆ | | 400 | | | |
| ಸೋಡಿ ಬಿಟ್ಟಿರುವುದು | | 1,200 | | | |
| ವ್ಯಾಪಾರಿ ಖರ್ಚುಗಳು | | 400 | | | |
| ಅಂಚೆ ಮತ್ತು ತಂತಿ | | 300 | | | |
| ಕರಡು ಸಾಲ | 1,400 | | | | |
| ಕೂಡಿಸಿ: | | 3,200 | | | |
| (+) ಸಂಶಯಾಸ್ಪದ ಸಾಲದ ನಿಧಿ | 1,800 | | | | |
| ವಿಕ್ರಯದಾರನ ದಲ್ಲಾಳಿ | | 3,400 | | | |
| ಅಗ್ನಿಯಿಂದ ಸಂಭವಿಸಿದ ಹಾನಿ (8,000 – 7,000) | | 1,000 | | | |
| ಸವಕಳಿ: | | | | | |
| ಭೂಮಿ ಮತ್ತು ಕಟ್ಟಡ | 1,200 | | | | |
| ಸಲಕರಣೆಗಳು | 1,350 | | | | |
| ಸ್ಥಾವರ ಮತ್ತು ಯಂತ್ರೋಪಕರಣ | 3,000 | 5,550 | | | |
| ನಿವ್ವಳಲಾಭ: ಲಾಭ ಮತ್ತು ನಷ್ಟದ ವಿತರಣಾ ಖಾತೆಗೆ ವರ್ಗಾಯಿಸಿದ್ದು | | 17,750 | | | |
| | | **39,500** | | | **39,500** |

**ಖರ್ಚು ಲಾಭ ಮತ್ತು ನಷ್ಟದ ವಿತರಣಾ ಖಾತೆ ಜಮಾ**

| ವಿವರಗಳು | | ಮೊತ್ತ (₹) | ವಿವರಗಳು | | ಮೊತ್ತ (₹) |
|---|---|---|---|---|---|
| ಬಂಡವಾಳದ ಮೇಲೆ ಬಡ್ಡಿ; | | | ಲಾಭ ಮತ್ತು ನಷ್ಟ ಖಾತೆ | | 17,750 |
| ಕಪಿಲ್ | 3,600 | | ಸ್ವಂತಕ್ಕೆ ಪಡೆದ ಮೊತ್ತಕ್ಕೆ ಬಡ್ಡಿ(6 ತಿಂಗಳಿಗೆ) | | |
| ವಿನೀತ್ | 3,000 | 6,600 | ಕಪಿಲ್ | 360 | |
| ಕಪಿಲ್‌ನಿಗೆ ವೇತನ | | 1,200 | ವಿನೀತ್ | 240 | 600 |
| ನಿವ್ವಳ ಲಾಭ: ಬಂಡವಾಳ ಖಾತೆಗಳಿಗೆ ವರ್ಗಾಯಿಸಿದೆ; | | | | | |
| ಕಪಿಲ್ | 6,330 | | | | |
| ವಿನೀತ್ | 4,220 | 10,550 | | | |
| | | **18,350** | | | **18,350** |

**ಖರ್ಚು ಪಾಲುದಾರರ ಚಾಲ್ತಿ ಖಾತೆಗಳು ಜಮಾ**

| ದಿನಾಂಕ | ವಿವರಗಳು | ರೋ. ಪಾ. | ಕಪಿಲ್ (₹) | ವಿನೀತ್ (₹) | ದಿನಾಂಕ | ವಿವರಗಳು | ರೋ. ಪಾ. | ಕಪಿಲ್ (₹) | ವಿನೀತ್ (₹) |
|---|---|---|---|---|---|---|---|---|---|
| | ಸ್ವಂತಕ್ಕೆ ಹಿಂಪಡೆದದ್ದು | | 12,000 | 8,000 | | ಆರಂಭಿಕ ಶಿಲ್ಕು | | 2,800 | 1,600 |
| | ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿ | | 360 | 240 | | ಬಂಡವಾಳದ ಮೇಲಿನ ಬಡ್ಡಿ | | 3,600 | 3,000 |
| | | | | | | ವೇತನ | | 1,200 | – |
| | ಮುಂದುವರೆದ ಶಿಲ್ಕು (ಅಂತಿಮ ಶಿಲ್ಕು) | | 1,570 | 580 | | ಲಾಭದ ಪಾಲು | | 6,330 | 4,220 |
| | | | **13,930** | **8,820** | | | | **13,930** | **8,820** |
| | | | | | | ಹಿಂದಿನಿಂದ ಬಂದ ಶಿಲ್ಕು | | 1,570 | 580 |

**ಮಾರ್ಚ 31, 2014 ರ ವರ್ಷಾಂತ್ಯಕ್ಕೆ ಇದ್ದಂತೆ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | | ಮೊತ್ತ (₹) | ಆಸ್ತಿಗಳು | | ಮೊತ್ತ (₹) |
|---|---|---|---|---|---|
| ಮೀರೆಳೆತ | | 2,000 | ಭೂಮಿ ಮತ್ತು ಕಟ್ಟಡ | 24,000 | |
| ಕೊಡತಕ್ಕ ಹುಂಡಿಗಳು | | 2,000 | ಕಳೆಯಿರಿ: ಸವಕಳಿ | 1,200 | 22,800 |
| ಧಣಿಗಳು | | 8,000 | ಸ್ಥಾವರ ಮತ್ತು | | |
| ಬಾಕಿ ವೇತನ | | 1,000 | ಯಂತ್ರೋಪಕರಣ | 20,000 | |
| ಬಂಡವಾಳ; | | | ಕಳೆಯಿರಿ: ಸವಕಳಿ | 3,000 | 17,000 |
| ಕಪಿಲ್ | 60,000 | | ಸಲಕರಣೆಗಳು | 13,500 | |
| ವಿನೀತ್ | 50,000 | 1,10,000 | ಕಳೆಯಿರಿ: ಸವಕಳಿ | 1,350 | 12,150 |
| ಚಾಲ್ತಿ ಖಾತೆಗಳು; | | | ದಾಸ್ತಾನು | | 18,000 |
| ಕಪಿಲ್ | 1,570 | | ಸಾಲಗಾರರು | 36,000 | |
| ವಿನೀತ್ | 580 | 2,150 | ಕಳೆಯಿರಿ: ಕರಡು ಸಾಲದ | | |
| | | | ಮೇಲಿನ ನಿಧಿ | 1,800 | 34,200 |
| | | | ವಿಮಾ ಕಂಪನಿಯ ಕ್ಲೇಮ್ ಬಾಕಿ ಹಣ | | 7,000 |
| | | | ಬರತಕ್ಕ ಹುಂಡಿಗಳು | | 12,000 |
| | | | ಬ್ಯಾಂಕಿನಲ್ಲಿರುವ ನಗದು | | 1,500 |
| | | | ಕೈಯಲ್ಲಿರುವ ನಗದು | | 500 |
| | | **1,25,150** | | | **1,25,150** |

**ಈ ಅಧ್ಯಾಯದಲ್ಲಿ ಪರಿಚಯಿಸಲಾದ ಪದಗಳು: Terms Introduced in the Chapter**

1. ಪಾಲುದಾರಿಕೆ – Partnership
2. ಬಂಡವಾಳದ ಮೇಲಿನ ಬಡ್ಡಿ – Interest on Capital
3. ಪಾಲುದಾರಿಕೆ ಸಂಸ್ಥೆಗಳು – Partnership Firms
4. ಹಿಂಪಡೆತದ ಮೇಲಿನ ಬಡ್ಡಿ – Interest on Drawings
5. ಪಾಲುದಾರಿಕೆ ಕರಾರು ಪತ್ರ – Partnership Deed
6. ಸರಾಸರಿ ಅವಧಿ – Average Period
7. ಸ್ಥಿರ ಬಂಡವಾಳ ಖಾತೆ – Fixed Capital Account
8. ಲಾಭ ಮತ್ತು ನಷ್ಟ ವಿತರಣಾ ಖಾತೆ – Profit and Loss Appropriation Account
9. ಬದಲಾಗುವ ಬಂಡವಾಳ ಖಾತೆ – Fluctuating Capital Account
10. ಪಾಲುದಾರರ ಚಾಲ್ತಿ ಖಾತೆ – Partners' Current Account
11. ಲಾಭ ಮತ್ತು ನಷ್ಟ ಹೊಂದಾಣಿಕೆ ಖಾತೆ– Profit and Loss Adjustment Account

## ಸಾರಾಂಶ Summary

1. **ಪಾಲುದಾರಿಕೆಯ ವ್ಯಾಖ್ಯೆ ಮತ್ತು ಅದರ ಅವಶ್ಯಕ ಲಕ್ಷಣಗಳು:** ಪಾಲುದಾರಿಕೆಯನ್ನು ಹೀಗೆ ವ್ಯಾಖ್ಯಾನಿಸಲಾಗಿದೆ: "ಎಲ್ಲರೂ ಸೇರಿ ಅಥವಾ ಎಲ್ಲರ ಪರವಾಗಿ ಒಬ್ಬರು ನಿರ್ವಹಿಸುತ್ತಿರುವ, ವ್ಯವಹಾರದ ಲಾಭವನ್ನು ಹಂಚಿಕೊಳ್ಳಲು ಒಪ್ಪಿಕೊಂಡಿರುವ ವ್ಯಕ್ತಿಗಳ ನಡುವಿನ ಸಂಬಂಧ". ಪಾಲುದಾರಿಕೆಯ ಅವಶ್ಯಕ ಲಕ್ಷಣಗಳೆಂದರೆ,
   1. ಪಾಲುದಾರಿಕೆಯನ್ನು ರಚಿಸಲು ಕನಿಷ್ಟ ಇಬ್ಬರು ವ್ಯಕ್ತಿಗಳಿರಬೇಕು.
   2. ಇದು ಒಪ್ಪಂದದ ಮೂಲಕ ರಚಿಸಲ್ಪಡುತ್ತದೆ.
   3. ಕಾನೂನುಬದ್ಧ ವ್ಯವಹಾರ ನಡೆಸಲು ಒಪ್ಪಂದವಾಗಿರಬೇಕು.
   4. ಲಾಭ ಮತ್ತು ನಷ್ಟದ ಹಂಚಿಕೆ.
   5. ಪಾಲುದಾರರಲ್ಲಿ ಪರಸ್ಪರ ಪ್ರತಿನಿಧಿತ್ವ ತತ್ವ.
2. **ಪಾಲುದಾರಿಕೆ ಕರಾರು ಪತ್ರದ ಅರ್ಥ ಮತ್ತು ಒಳಗೊಂಡ ಅಂಶಗಳು:** ಪಾಲುದಾರರು ಒಪ್ಪಿರುವ ಪಾಲುದಾರಿಕೆಯ ಷರತ್ತುಗಳನ್ನು ಹೊಂದಿರುವ ದಾಖಲೆಗೆ ಪಾಲುದಾರಿಕೆ ಕರಾರು ಪತ್ರ ಎನ್ನುವರು. ಇದು ಸಾಮಾನ್ಯವಾಗಿ ಪಾಲುದಾರರ ನಡುವಿನ ಸಂಬಂಧದ ಮೇಲೆ ಪರಿಣಾಮ ಬೀರುವ ವ್ಯವಹಾರದ ಉದ್ದೇಶಗಳನ್ನೂ ಒಳಗೊಂಡಂತೆ ಪ್ರತಿ ಪಾಲುದಾರರ ಬಂಡವಾಳದ ಪ್ರಮಾಣ, ಪಾಲುದಾರರು ಹಂಚಿಕೊಳ್ಳಬಹುದಾದ ಲಾಭ ಮತ್ತು ನಷ್ಟದ ಅನುಪಾತ, ಪಾಲುದಾರರು ಪಡೆಯಬಹುದಾದ ಬಂಡವಾಳ,ಸಾಲದ ಮೇಲಿನ ಬಡ್ಡಿ ಮತ್ತು ಪಾಲುದಾರರ ಪ್ರವೇಶ, ನಿವೃತ್ತಿ, ನಿಧನ, ವಿಸರ್ಜನೆ, ಮುಂತಾದ ಎಲ್ಲಾ ಅಂಶಗಳ ಬಗ್ಗೆ ವಿವರಣೆಯನ್ನು ಒಳಗೊಂಡಿರುತ್ತದೆ.
3. **ಲೆಕ್ಕಬರಹಕ್ಕೆ ಅನ್ವಯಿಸುವ 1932 ರ ಪಾಲುದಾರಿಕೆ ಕಾಯ್ದೆಯ ಉಪಬಂಧಗಳು:** ಕೆಲವು ಅಂಶಗಳಲ್ಲಿ ಪಾಲುದಾರಿಕೆ ಕರಾರು ಪತ್ರವು ತಟಸ್ಥವಾಗಿದ್ದರೆ, 1932 ರ ಭಾರತೀಯ ಪಾಲುದಾರಿಕೆ ಕಾಯಿದೆಯ ಸಂಬಂಧಿತ ಉಪಬಂಧಗಳು ಅನ್ವಯಿಸುತ್ತವೆ. ಪಾಲುದಾರಿಕೆ ಕಾಯ್ದೆಯ ಪ್ರಕಾರ ಪಾಲುದಾರರು ಲಾಭವನ್ನು ಸಮಾನವಾಗಿ ಹಂಚಿಕೊಳ್ಳಬೇಕು, ಪಾಲುದಾರರು ಯಾವುದೇ ಸಂಭಾವನೆ ಪಡೆಯುವಂತಿಲ್ಲ, ಬಂಡವಾಳದ ಮೇಲೆ ಯಾವುದೇ ಬಡ್ಡಿ ಇಲ್ಲ, ಹಿಂಪಡೆತದ ಮೇಲೆ ಬಡ್ಡಿ ಆಕರಿಸುವುದಿಲ್ಲ. ಆದರೆ, ಯಾರಾದರೂ ಪಾಲುದಾರರು ಸಂಸ್ಥೆಗೆ ಸಾಲ ನೀಡಿದ್ದಲ್ಲಿ ಅಂತಹ ಮೊತ್ತದ ಮೇಲೆ ವಾರ್ಷಿಕ ಶೇಕಡ 6 ರಷ್ಟು ಬಡ್ಡಿ ಪಡೆಯಲು ಹಕ್ಕುಳ್ಳವರಾಗಿರುತ್ತಾರೆ.

4. **ಸ್ಥಿರ ಮತ್ತು ಬದಲಾಗುವ ಬಂಡವಾಳ ಪದ್ಧತಿಯಲ್ಲಿ ಬಂಡವಾಳ ಖಾತೆಗಳನ್ನು ತಯಾರಿಸುವುದು:** ಪಾಲುದಾರರಿಗೆ ಸಂಬಂಧಿಸಿದ ಎಲ್ಲಾ ವಹಿವಾಟುಗಳನ್ನು ಅವರ ಬಂಡವಾಳ ಖಾತೆಗಳ ಮೂಲಕ ಸಂಸ್ಥೆಯ ಖಾತೆ ಪುಸ್ತಕಗಳಲ್ಲಿ ದಾಖಲಿಸಲಾಗುತ್ತದೆ. ಎರಡು ವಿಧಾನಗಳಿಂದ ಪಾಲುದಾರರ ಬಂಡವಾಳ ಖಾತೆಗಳನ್ನು ನಿರ್ವಹಿಸಬಹುದು. ಅವುಗಳೆಂದರೆ, (1) ಸ್ಥಿರ ಬಂಡವಾಳ ವಿಧಾನ ಮತ್ತು (2) ಬದಲಾಗುವ ಬಂಡವಾಳ ವಿಧಾನ. ಬದಲಾಗುವ ಬಂಡವಾಳ ವಿಧಾನದಲ್ಲಿ ಪಾಲುದಾರರಿಗೆ ಸಂಬಂಧಿಸಿದ ಎಲ್ಲಾ ವಹಿವಾಟುಗಳನ್ನು ನೇರವಾಗಿ ಬಂಡವಾಳ ಖಾತೆಯಲ್ಲಿ ದಾಖಲಿಸಲಾಗುತ್ತದೆ. ಆದರೆ, ಸ್ಥಿರ ಬಂಡವಾಳ ವಿಧಾನದಲ್ಲಿ ಬಂಡವಾಳದ ಮೊತ್ತ ಸ್ಥಿರವಾಗಿರುತ್ತದೆ. ಬಂಡವಾಳದ ಮೇಲಿನ ಬಡ್ಡಿ, ಹಿಂಪಡೆತದ ಮೇಲಿನ ಬಡ್ಡಿ, ವೇತನ, ದಲ್ಲಾಳಿ, ಲಾಭ ಮತ್ತು ನಷ್ಟದ ಪಾಲು, ಇಂತಹ ವಹಿವಾಟುಗಳನ್ನು ಪಾಲುದಾರರ ಪ್ರತ್ಯೇಕ ಚಾಲ್ತಿ ಖಾತೆಯಲ್ಲಿ ದಾಖಲಿಸಲಾಗುತ್ತದೆ.

5. **ಲಾಭ ಮತ್ತು ನಷ್ಟದ ವಿತರಣೆ:** ಪಾಲುದಾರರಿಗೆ ಲಾಭ ಮತ್ತು ನಷ್ಟದ ವಿತರಣೆಯನ್ನು ಲಾಭ ಮತ್ತು ನಷ್ಟ ವಿತರಣಾ ಖಾತೆಯ ಮೂಲಕ ಹಂಚಿಕೆ ಮಾಡಲಾಗುವುದು. ಇದು ಕೇವಲ ಲಾಭ ಮತ್ತು ನಷ್ಟ ಖಾತೆಯ ವಿಸ್ತರಣೆಯಾಗಿದೆ. ಸಾಮಾನ್ಯವಾಗಿ ಬಂಡವಾಳದ ಮೇಲಿನ ಬಡ್ಡಿ ಮತ್ತು ಪಾಲುದಾರರಿಗೆ ಅನುಮತಿಸಿದ ವೇತನ ಅಥವಾ ದಲ್ಲಾಳಿ ಇವುಗಳನ್ನು ಖಾತೆಯ ಖರ್ಚಿನ ಭಾಗದಲ್ಲಿ ಹಾಗೂ ಲಾಭ ಮತ್ತು ನಷ್ಟ ಖಾತೆಯಿಂದ ಬಂದ ನಿವ್ವಳ ಲಾಭ ಮತ್ತು ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿ ಇವುಗಳನ್ನು ಜಮಾ ಭಾಗದಲ್ಲಿ ದಾಖಲಿಸಿ, ಇದರಿಂದ ಬಂದ ಲಾಭ ಮತ್ತು ನಷ್ಟವನ್ನು ಸಂಬಂಧಪಟ್ಟ ಪಾಲುದಾರರಿಗೆ ಹಂಚಿಕೆ ಮಾಡಿ, ಅವರ ಬಂಡವಾಳ ಖಾತೆಗಳಿಗೆ ವರ್ಗಾಯಿಸಲಾಗುವುದು.

6. **ಪಾಲುದಾರನಿಗೆ ಕನಿಷ್ಠ ಲಾಭದ ಖಾತರಿ ಪರಿಗಣಿಸುವುದು:** ಕೆಲವೊಮ್ಮೆ ಪಾಲುದಾರನು ಸಂಸ್ಥೆಯ ಲಾಭದಲ್ಲಿ ತನ್ನ ಕನಿಷ್ಠ ಮೊತ್ತದ ಪಾಲನ್ನು ಖಾತರಿಪಡಿಸಿಕೊಂಡಿರುತ್ತಾನೆ. ಯಾವುದಾದರೂ ಒಂದು ವರ್ಷದಲ್ಲಿ ಲಾಭ ಹಂಚಿಕೆಯ ಅನುಪಾತದ ಪ್ರಕಾರ ಬಂದ ಲಾಭವು ಅವನ ಖಾತರಿ ಮೊತ್ತಕ್ಕಿಂತ ಕಡಿಮೆಯಾದಾಗ ಕೊರತೆಯಾಗುವ ಮೊತ್ತವನ್ನು ಭರವಸೆ ನೀಡಿದ ಪಾಲುದಾರರು ಒಪ್ಪಿದ ಅನುಪಾತದ ಪ್ರಕಾರ ನೀಡಿ ಸರಿಪಡಿಸಬೇಕಾಗುತ್ತದೆ. ಆದರೆ, ಇಂತಹ ಭರವಸೆಯನ್ನು ಅವರಲ್ಲಿ ಒಬ್ಬರು ಭರವಸೆ ನೀಡಿದ್ದರೆ, ಅವರೊಬ್ಬರೇ ಆ ಕೊರತೆಯನ್ನು ಭರಿಸಬೇಕಾಗುತ್ತದೆ.

7. **ಹಿಂದಿನ ಹೊಂದಾಣಿಕೆಗಳನ್ನು ಪರಿಗಣಿಸುವುದು:** ಕೆಲವೊಮ್ಮೆ ಸಂಸ್ಥೆಯ ಅಂತಿಮ ಖಾತೆಗಳನ್ನು ತಯಾರಿಸಿದ ನಂತರ ಕೆಲವು ಲೋಪಗಳು ಅಥವಾ ದೋಷಗಳು ಗಮನಕ್ಕೆ ಬರಬಹುದು. ಇಂತಹ ಲೋಪಗಳು ಬಂಡವಾಳದ ಮೇಲಿನ ಬಡ್ಡಿ, ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿ, ಪಾಲುದಾರರ ವೇತನ, ದಲ್ಲಾಳಿ, ಮುಂತಾದವುಗಳನ್ನು ಸರಿಪಡಿಸಲು ಲಾಭ ಮತ್ತು ನಷ್ಟ ವಿತರಣಾ ಖಾತೆಯ ಮೂಲಕ ಪಾಲುದಾರರ ಖಾತೆಗಳಲ್ಲಿ ಹೊಂದಾಣಿಕೆ ಮಾಡಲಾಗುತ್ತದೆ.

8. **ಪಾಲುದಾರಿಕೆ ಸಂಸ್ಥೆಯ ಅಂತಿಮ ಖಾತೆಗಳನ್ನು ತಯಾರಿಸುವುದು:** ಪಾಲುದಾರಿಕೆ ಸಂಸ್ಥೆಗಳಲ್ಲಿ ಪಾಲುದಾರರ ಮಧ್ಯ ಹಂಚಿಕೆ ಮಾಡಲಾಗುವ ಲಾಭ ಮತ್ತು ನಷ್ಟವನ್ನು ತೋರಿಸುವ ಲಾಭ ಮತ್ತು ನಷ್ಟ ವಿತರಣಾ ಖಾತೆ ಎಂಬ ಹೆಚ್ಚುವರಿ ಖಾತೆ ತಯಾರಿಸುವುದನ್ನು ಹೊರತುಪಡಿಸಿದರೆ, ಏಕವ್ಯಕ್ತಿ ಸಂಸ್ಥೆ ಮತ್ತು ಪಾಲುದಾರಿಕೆ ಸಂಸ್ಥೆಯ ಅಂತಿಮ ಖಾತೆಗಳಲ್ಲಿ ಯಾವುದೇ ಗಮನಾರ್ಹ ವ್ಯತ್ಯಾಸವಿರುವುದಿಲ್ಲ.

## ಅಭ್ಯಾಸಕ್ಕೆ ಪ್ರಶ್ನೆಗಳು Questions for practice

### ಕಿರು ಉತ್ತರದ ಪ್ರಶ್ನೆಗಳು: Short Answer Questions

1. ಪಾಲುದಾರಿಕೆ ಕರಾರು ಪತ್ರವನ್ನು ವ್ಯಾಖ್ಯಾನಿಸಿರಿ.
2. ಪಾಲುದಾರಿಕೆ ಕರಾರು ಪತ್ರವು ಲಿಖಿತ ರೂಪದಲ್ಲಿರಬೇಕೆಂದು ಅಪೇಕ್ಷಿಸುವುದೇಕೆ?
3. ಪಾಲುದಾರರ ಬಂಡವಾಳ ಖಾತೆಗಳಿಗೆ ಖರ್ಚು ಮತ್ತು ಜಮಾ ಆಗುವ ಅಂಶಗಳನ್ನು ಪಟ್ಟಿ ಮಾಡಿರಿ.

   (ಅ) ಸ್ಥಿರ ಬಂಡವಾಳವಿದ್ದಾಗ (ಬ) ಬದಲಾಗುವ ಬಂಡವಾಳವಿದ್ದಾಗ

4. ಲಾಭ ಮತ್ತು ನಷ್ಟದ ಹೊಂದಾಣಿಕೆ ಖಾತೆಯನ್ನು ಏಕೆ ಸಿದ್ಧಪಡಿಸಲಾಗುತ್ತದೆ? ವಿವರಿಸಿರಿ.
5. ಪಾಲುದಾರರ ಸ್ಥಿರ ಬಂಡವಾಳವು ಬದಲಾವಣೆಯಾಗುವ ಎರಡು ಸಂದರ್ಭಗಳನ್ನು ತಿಳಿಸಿರಿ.
6. ಪ್ರತಿ ತ್ರೈಮಾಸಿಕದ ಮೊದಲ ದಿನ ನಿಗಧಿತ ಮೊತ್ತವನ್ನು ಹಿಂಪಡೆದುಕೊಂಡರೆ, ಹಿಂಪಡೆದುಕೊಂಡ ಒಟ್ಟು ಮೊತ್ತದ ಮೇಲೆ ಬಡ್ಡಿಯನ್ನು ಲೆಕ್ಕಹಾಕಲು ಯಾವ ಅವಧಿಯನ್ನು ಪರಿಗಣಿಸಲಾಗುವುದು?
7. ಪಾಲುದಾರಿಕೆ ಕರಾರುಪತ್ರದ ಅನುಪಸ್ಥಿತಿಯಲ್ಲಿ, ಈ ಕೆಳಗಿನವುಗಳಿಗೆ ಅನ್ವಯಿಸುವ ನಿಯಮಗಳನ್ನು ಸೂಚಿಸಿರಿ.
   (ಅ) ಲಾಭ ಮತ್ತು ನಷ್ಟದ ಹಂಚಿಕೆ
   (ಬ) ಪಾಲುದಾರರ ಬಂಡವಾಳದ ಮೇಲಿನ ಬಡ್ಡಿ
   (ಕ) ಪಾಲುದಾರರ ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿ
   (ಡ) ಪಾಲುದಾರರ ಸಾಲದ ಮೇಲಿನ ಬಡ್ಡಿ
   (ಇ) ಪಾಲುದಾರನ ವೇತನ

**ದೀರ್ಘ ಉತ್ತರದ ಪ್ರಶ್ನೆಗಳು: Long Answer Questions**

1. ಪಾಲುದಾರಿಕೆ ಎಂದರೇನು? ಇದರ ಪ್ರಮುಖ ಲಕ್ಷಣಗಳೇನು ? ವಿವರಿಸಿ.
2. ಪಾಲುದಾರಿಕೆ ಕರಾರು ಪತ್ರ ಇಲ್ಲದಿದ್ದಲ್ಲಿ, ಪಾಲುದಾರಿಕೆ ಖಾತೆಗಳಿಗೆ ಸಂಬಂಧಿಸಿದಂತೆ, 1932 ರ ಭಾರತೀಯ ಪಾಲುದಾರಿಕೆ ಕಾಯ್ದೆಯ ಪ್ರಮುಖ ಉಪಬಂಧಗಳ ಬಗ್ಗೆ ಚರ್ಚಿಸಿರಿ.
3. ಪಾಲುದಾರಿಕೆ ಒಪ್ಪಂದವು ಲಿಖಿತ ಸ್ವರೂಪದಲ್ಲಿದ್ದರೆ ಉತ್ತಮ, ಏಕೆ? ವಿವರಿಸಿರಿ.
4. ವಿವಿಧ ಸಂದರ್ಭಗಳಲ್ಲಿ ಸ್ವಂತ ವೆಚ್ಚದ ಮೇಲಿನ ಬಡ್ಡಿಯನ್ನು ಹೇಗೆ ಲೆಕ್ಕ ಹಾಕುವಿರಿ ಎಂಬುದನ್ನು ತಿಳಿಸಿರಿ.
5. ಪ್ರಸ್ತುತ ಪಾಲುದಾರರಲ್ಲಿ ಬದಲಾಗುವ ಲಾಭದ ಹಂಚಿಕೆಯ ಅನುಪಾತವನ್ನು ನೀವು ಹೇಗೆ ಪರಿಗಣಿಸುವಿರಿ? ನಿಮ್ಮ ಉತ್ತರಕ್ಕೆ ಕಾಲ್ಪನಿಕ ಅಂಕಿ–ಅಂಶಗಳನ್ನು ತೆಗೆದುಕೊಳ್ಳಿರಿ.

**ಸಂಖ್ಯಾತ್ಮಕ ಪ್ರಶ್ನೆಗಳು: Numerical Questions**

**ಸ್ಥಿರ ಮತ್ತು ಬದಲಾಗುವ ಬಂಡವಾಳಗಳು;**

1. ತ್ರಿಪದಿ ಮತ್ತು ಚೌಹಾಣ ಸಂಸ್ಥೆಯ ಪಾಲುದಾರರಾಗಿದ್ದು, ಅವರ ಲಾಭ ಮತ್ತು ನಷ್ಟಗಳ ಪ್ರಮಾಣ ಅನುಕ್ರಮವಾಗಿ 3:2 ಅನುಪಾತದಲ್ಲಿದೆ. ದಿನಾಂಕ 01.01.2015ರಂದು ಅವರು ಅನುಕ್ರಮವಾಗಿ ₹ 60,000 ಮತ್ತು ₹ 40,000 ಬಂಡವಾಳವನ್ನು ಹೊಂದಿರುತ್ತಾರೆ. ಪ್ರಸ್ತುತ ವರ್ಷದಲ್ಲಿ ಅವರು ₹ 30,000 ಲಾಭವನ್ನು ಗಳಿಸಿದ್ದಾರೆ. ಪಾಲುದಾರಿಕೆ ಒಪ್ಪಂದದ ಪ್ರಕಾರ ಇಬ್ಬರು ಪಾಲುದಾರರು ತಿಂಗಳಿಗೆ ₹ 1,000 ದಂತೆ ವೇತನವನ್ನು ಮತ್ತು ಅವರ ಬಂಡವಾಳದ ಮೇಲೆ ಶೇ.5% ರಷ್ಟು ಬಡ್ಡಿಯನ್ನು ಪಡೆಯುತ್ತಾರೆ. ಜೊತೆಗೆ, ತ್ರಿಪದಿಯ ₹12,000 ಮತ್ತು ಚೌಹಾಣರ ₹8,000 ದಷ್ಟು ಸ್ವಂತಕ್ಕೆ ಹಿಂಪಡೆಯಲಾದ ಮೊತ್ತಕ್ಕೆ ಶೇ.5% ರಷ್ಟು ಬಡ್ಡಿಯನ್ನು ಅವಧಿ ಪರಿಗಣಿಸದೆ ಲೆಕ್ಕ ಹಾಕಲಾಗಿದೆ. ಸ್ಥಿರ ಬಂಡವಾಳವಿದ್ದಾಗ ಪಾಲುದಾರರ ಖಾತೆಯನ್ನು ತಯಾರಿಸಿರಿ.

   (ಉತ್ತರ: ತ್ರಿಪದಿಯ ಚಾಲ್ತಿ ಖಾತೆಯ ಶಿಲ್ಕು ₹ 20,400. ಚೌಹಾಣರ ಚಾಲ್ತಿ ಖಾತೆಯ ಶಿಲ್ಕು ₹ 17,600)

2. ಅನುಭಾ ಮತ್ತು ಕಾಜಲ್ ಸಂಸ್ಥೆಯ ಪಾಲುದಾರರಾಗಿದ್ದು ಅವರ ಲಾಭ ಮತ್ತು ನಷ್ಟಗಳ ಪ್ರಮಾಣ 2:1 ರ ಅನುಪಾತದಷ್ಟಿದೆ. ಅನುಕ್ರಮವಾಗಿ ₹ 90,000 ಮತ್ತು ₹60,000 ಅವರ ಬಂಡವಾಳವಿದ್ದು, ಪ್ರಸ್ತುತ ವರ್ಷದಲ್ಲಿ ₹ 45,000 ಲಾಭವಾಗಿದೆ. ಪಾಲುದಾರಿಕೆ ಒಪ್ಪಂದದ ಪ್ರಕಾರ ಅನುಭಾ ಪ್ರತಿ ತಿಂಗಳು ₹ 700 ರಂತೆ ಮತ್ತು ಕಾಜಲ್ ಪ್ರತಿ ತಿಂಗಳು ₹ 500 ರಂತೆ ವೇತನ ಪಡೆಯುತ್ತಾರೆ. ಬಂಡವಾಳದ ಮೇಲೆ ವಾರ್ಷಿಕ ಶೇ. 5 ರಷ್ಟು ಬಡ್ಡಿಯನ್ನು

ಪಡೆಯುತ್ತಾರೆ. ವರ್ಷದ ಕೊನೆಯಲ್ಲಿ ಅನುಭಾ ₹ 8,500 ಮತ್ತು ಕಾಜಲ್ ₹ 6,500 ಗಳನ್ನು ತಮ್ಮ ಸ್ವಂತಕ್ಕೆ ಹಿಂಪಡೆದುಕೊಳ್ಳುತ್ತಾರೆ. ಅವರು ಸ್ವಂತಕ್ಕೆ ಹಿಂಪಡೆದ ಮೊತ್ತಕ್ಕೆ ವಾರ್ಷಿಕ ಶೇ. 5% ರಷ್ಟು ಬಡ್ಡಿಯನ್ನು ಆಕರಿಸಲಾಗುತ್ತದೆ. ಬದಲಾಗುವ ಬಂಡವಾಳ ಖಾತೆಗಳೆಂದು ಊಹಿಸಿ, ಪಾಲುದಾರರ ಬಂಡವಾಳ ಖಾತೆಗಳನ್ನು ತಯಾರಿಸಿ.

(ಉತ್ತರ: ಅನುಭಾಳ ಬಂಡವಾಳ ಖಾತೆಯ ಶಿಲ್ಕು ₹ 1,23,975 ಕಾಜಲ್ ಬಂಡವಾಳ ಖಾತೆ ಶಿಲ್ಕು ₹ 77,175.)

**ಲಾಭದ ಹಂಚಿಕೆ;**

3. 2015 ರ ಏಪ್ರಿಲ್ 1 ರಿಂದ ಹರ್ಷದ್ ಮತ್ತು ಧೀಮನ್ ಪಾಲುದಾರರಾಗಿದ್ದಾರೆ. ಯಾವುದೇ ಪಾಲುದಾರಿಕೆ ಒಪ್ಪಂದವಿರುವುದಿಲ್ಲ. ಅವರು ಕ್ರಮವಾಗಿ ₹4,00,000 ಮತ್ತು ₹1,00,000 ಬಂಡವಾಳ ಹಾಕಿದ್ದಾರೆ. ಇದರ ಜೊತೆಗೆ ದಿನಾಂಕ 01.10.2015 ರಂದು ₹1,00,000ವನ್ನು ಹರ್ಷದ್‌ನು ಸಂಸ್ಥೆಗೆ ಮುಂಗಡವಾಗಿ ನೀಡಿದ್ದಾನೆ. 1ನೇ ಆಗಸ್ಟದಿಂದ 30ನೇ ಸೆಪ್ಟೆಂಬರ್, 2015 ರವರೆಗೆ ಹರ್ಷದನಿಗೆ ದೀರ್ಘಾವಧಿ ಅನಾರೋಗ್ಯದ ಕಾರಣ ಹರ್ಷದ್‌ನು ವ್ಯವಹಾರದಲ್ಲಿ ಭಾಗವಹಿಸಿರುವುದಿಲ್ಲ. 31ನೇ ಮಾರ್ಚ್, 2015 ಕ್ಕೆ ಸಂಸ್ಥೆಯು ₹1,80,000 ಲಾಭ ಗಳಿಸಿದೆ.

   ಹರ್ಷದ್ ಮತ್ತು ಧೀಮನ್ ನಡುವೆ ವಿವಾದ ಉದ್ಭವಿಸಿದೆ.

   ಹರ್ಷದ್‌ನ ಬೇಡಿಕೆ:

   (i) ಅವನ ಬಂಡವಾಳ ಮತ್ತು ಸಾಲದ ಮೇಲೆ ವಾರ್ಷಿಕ ಶೇಕಡ 10 ರಷ್ಟು ಬಡ್ಡಿ ನೀಡುವುದು.

   (ii) ಬಂಡವಾಳದ ಪ್ರಮಾಣಕ್ಕನುಗುಣವಾಗಿ ಲಾಭ ಹಂಚಿಕೆ ಮಾಡುವುದು.

   **ಧೀಮನ್ ಬೇಡಿಕೆ;**

   (i) ಲಾಭವನ್ನು ಸಮಾನವಾಗಿ ವಿತರಿಸಬೇಕು

   (ii) ಹರ್ಷದನ ಅನುಪಸ್ಥಿತಿಯಲ್ಲಿ ವ್ಯವಹಾರ ನಿರ್ವಹಿಸಿದ ಅವಧಿಗೆ ತನಗೆ ತಿಂಗಳಿಗೆ ₹ 2,000 ರಂತೆ ಗೌರವ ಸಂಭಾವನೆ ನೀಡಲು ಅನುಮತಿಸುವುದು.

   (iii) ಬಂಡವಾಳ ಮತ್ತು ಸಾಲದ ಮೇಲೆ ಶೇ. 6 ರಷ್ಟು ಬಡ್ಡಿಯನ್ನು ನೀಡುವುದು.

   ನೀವು ಹರ್ಷದ್ ಮತ್ತು ಧೀಮನ್ ನಡುವಿನ ವಿವಾದವನ್ನು ಬಗೆಹರಿಸುವುದರ ಜೊತೆಗೆ ಲಾಭ ಮತ್ತು ನಷ್ಟದ ವಿತರಣಾ ಖಾತೆಯನ್ನು ತಯಾರಿಸಿ.

   (ಉತ್ತರ: ಹರ್ಷದ್‌ನ ಪಾಲಿನ ಲಾಭ ₹ 88,500, ಧೀಮನ್‌ನ ಪಾಲಿನ ಲಾಭ ₹ 88,500)

4. ಯಾವುದೇ ಪಾಲುದಾರಿಕೆ ಒಪ್ಪಂದವಿಲ್ಲದೆ, ಏಪ್ರಿಲ್ 01. 2015 ರಿಂದ ಆಕೃತಿ ಮತ್ತು ಬಿಂದು ಸಿದ್ಧ ಉಡುಪುಗಳನ್ನು ತಯಾರಿಸುವ ಪಾಲುದಾರಿಕೆಯಲ್ಲಿ ಪ್ರವೇಶಿಸಿದರು. ಅಕ್ಟೋಬರ್ 01, 2015 ರಂದು ಅವರು ಕ್ರಮವಾಗಿ ₹ 5,00,000 ಮತ್ತು ₹ 3,00,000 ಗಳನ್ನು ಬಂಡವಾಳ ರೂಪದಲ್ಲಿ ತೊಡಗಿಸಿದರು. ಯಾವುದೇ ಬಡ್ಡಿಯ ಒಪ್ಪಂದವಿಲ್ಲದೆ ಆಕೃತಿಯು ಸಂಸ್ಥೆಗೆ ಮುಂಗಡವಾಗಿ ಸಾಲ ನೀಡಿದಳು. ಮಾರ್ಚ್ 2016ರ ವರ್ಷಾಂತ್ಯಕ್ಕೆ ಲಾಭ ಮತ್ತು ನಷ್ಟದ ಖಾತೆಯು ₹ 43,000 ಲಾಭವನ್ನು ತೋರಿಸುತ್ತದೆ.

   ಲಾಭದ ವಿಭಜನೆ ಮತ್ತು ಬಡ್ಡಿ ವಿಷಯದಲ್ಲಿ ಪಾಲುದಾರರಲ್ಲಿ ಒಪ್ಪಂದವಿರುವುದಿಲ್ಲ. ಪಾಲುದಾರರ ಮಧ್ಯ ಲಾಭದ ಹಂಚಿಕೆ ಮಾಡಿ, ನಿಮ್ಮ ಪರಿಹಾರಕ್ಕೆ ಕಾರಣಗಳನ್ನು ನೀಡಿರಿ.

   (ಉತ್ತರ: ಆಕೃತಿ ಮತ್ತು ಬಿಂದುವಿನ ಲಾಭದ ಹಂಚಿಕೆ ಸಮಾನವಾಗಿದೆ ₹ 21,200) ಇರುತ್ತದೆ.

5. ರಾಖಿ ಮತ್ತು ಶಿಖಾ ಸಂಸ್ಥೆಯಲ್ಲಿ ಪಾಲುದಾರರಾಗಿದ್ದು, ಅವರು ಶ್ರಮದ ₹ 2,00,000 ಮತ್ತು ₹ 3,00,000 ಗಳನ್ನು ಬಂಡವಾಳ ಹೊಂದಿದ್ದಾರೆ. 2014–15 ರ ವರ್ಷಾಂತ್ಯಾಕ್ಕೆ ಸಂಸ್ಥೆಯ ಲಾಭವು ₹23,200 ರಷ್ಟಿದೆ. ಪಾಲುದಾರಿಕೆಯ ಕರಾರಿನನ್ವಯ ಅವರ ಲಾಭದ ಪ್ರಮಾಣವು ಬಂಡವಾಳದ ಅನುಪಾತದ ಮೇರೆಗೆ ಹಂಚಿಕೊಳ್ಳುವುದು. ಶಿಖಾಗೆ ಪ್ರತಿ ತಿಂಗಳು ₹5,000 ವೇತನ ಮತ್ತು ವಾರ್ಷಿಕ ಶೇ. 10 ರಷ್ಟು ಪಾಲುದಾರರ

ಬಂಡವಾಳದ ಮೇಲಿನ ಬಡ್ಡಿ ನೀಡುವುದು. ಪ್ರಸ್ತುತ ವರ್ಷದಲ್ಲಿ ರಾಖಿ ₹ 7,000 ಮತ್ತು ಶೀಖಾ ₹ 10,000 ತಮ್ಮ ಸ್ವಂತ ವೆಚ್ಚಕ್ಕೆ ಪಡೆದುಕೊಳ್ಳುವರು. ಲಾಭ ಮತ್ತು ನಷ್ಟದ ವಿತರಣಾ ಖಾತೆ ಮತ್ತು ಪಾಲುದಾರರ ಬಂಡವಾಳ ಖಾತೆಗಳನ್ನು ತಯಾರಿಸಿ.

(ಉತ್ತರ: ರಾಖಿ ಬಂಡವಾಳ ಖಾತೆಗೆ ನಷ್ಟದ ವರ್ಗಾವಣೆ ₹ 34,720 ಮತ್ತು ಶಿಖಾ ಬಂಡವಾಳ ಖಾತೆಗೆ ನಷ್ಟದ ವರ್ಗಾವಣೆ ₹ 52,080)

6. ಲೋಕೇಶ್ ಮತ್ತು ಆಜಾದ್ ಸಂಸ್ಥೆಯಲ್ಲಿ ಪಾಲುದಾರರಾಗಿದ್ದು ಲಾಭದ ಹಂಚಿಕೆಯ ಅನುಪಾತ 3:2 ರಷ್ಟಿದೆ, ಕ್ರಮವಾಗಿ ₹ 50,000 ಮತ್ತು ₹ 30,000 ಬಂಡವಾಳ ಹೊಂದಿದ್ದಾರೆ. ಬಂಡವಾಳದ ಮೇಲೆ ವಾರ್ಷಿಕ ಶೇ. 6ರಷ್ಟು ಬಡ್ಡಿ ನೀಡಲು ಒಪ್ಪಿದೆ. ಆಜಾದ್‌ನಿಗೆ ವಾರ್ಷಿಕ ₹ 2,500 ವೇತನ ನೀಡುವುದು. 2013ನೇ ವರ್ಷದಲ್ಲಿ ಬಂಡವಾಳದ ಮೇಲಿನ ಬಡ್ಡಿ ಲೆಕ್ಕ ಹಾಕುವುದಕ್ಕಿಂತ ಪೂರ್ವದಲ್ಲಿ, ಆದರೆ ಆಜಾದ್‌ನ ವೇತನ ಪಾವತಿಸಿದ ನಂತರ ₹ 12,500ರಷ್ಟು ಲಾಭವಿದೆ. ವ್ಯವಸ್ಥಾಪಕರ ದಲ್ಲಾಳಿಗಾಗಿ ಲಾಭದಲ್ಲಿ ಶೇ. 5 ರಷ್ಟು ತೆಗೆದಿರಿಸುವುದು. ಲಾಭದ ಹಂಚಿಕೆಯ ಖಾತೆ ಮತ್ತು ಪಾಲುದಾರರ ಬಂಡವಾಳ ಖಾತೆಯನ್ನು ತಯಾರಿಸಿರಿ.

(ಉತ್ತರ: ಲೋಕೇಶ್‌ನ ಬಂಡವಾಳಕ್ಕೆ ಲಾಭದ ವರ್ಗಾವಣೆ ₹ 4,170 ಮತ್ತು ಆಜಾದ್‌ನ ಬಂಡವಾಳ ಖಾತೆಗೆ ಲಾಭದ ವರ್ಗಾವಣೆ ₹ 2,780)

7. ಮನೀಶ್ ಮತ್ತು ಗಿರೀಶ್ ನಡುವಿನ ಪಾಲುದಾರಿಕೆಯ ಕರಾರು ಈ ಕೆಳಗಿನಂತಿದೆ.

   (i) ಲಾಭವನ್ನು ಸಮಾನವಾಗಿ ಹಂಚಿಕೊಳ್ಳಬೇಕು

   (ii) ಮನೀಶ್‌ನಿಗೆ ಪ್ರತಿ ತಿಂಗಳು ₹ 400 ವೇತನ ನೀಡುವುದು.

   (iii) ಮನೀಶ್‌ನಿಗೆ ವೇತನ ಪಾವತಿಸಿದ ನಂತರ, ಗಿರೀಶ್‌ನು ಮಾರಾಟ ವಿಭಾಗವನ್ನು ನಿರ್ವಹಿಸುವುದಕ್ಕಾಗಿ ಅವನಿಗೆ ನಿವ್ವಳ ಲಾಭದ ಶೇಕಡ 10 ರಷ್ಟು ದಲ್ಲಾಳಿ ನೀಡುವುದು.

   (iv) ಪಾಲುದಾರರ ಸ್ಥಿರ ಬಂಡವಾಳದ ಮೇಲೆ ವಾರ್ಷಿಕ ಶೇಕಡ 7 ರಷ್ಟು ಬಡ್ಡಿಯನ್ನು ನೀಡುವುದು

   (v) ಪಾಲುದಾರರ ಸ್ವಂತ ವೆಚ್ಚದ ಮೇಲೆ ಶೇಕಡ 5 ರಷ್ಟು ಬಡ್ಡಿಯನ್ನು ಆಕರಿಸುವುದು.

   (vi) ಮನೀಶ್ ಮತ್ತು ಗಿರೀಶ್‌ರ ಸ್ಥಿರ ಬಂಡವಾಳವು ಕ್ರಮವಾಗಿ ₹ 1,00,000 ಮತ್ತು ₹ 80,000 ರಷ್ಟಿದೆ. ಅವರು ಕ್ರಮವಾಗಿ ₹ 16,000 ಮತ್ತು ₹ 14,000 ರಷ್ಟು ಪ್ರಸ್ತುತ ವರ್ಷದಲ್ಲಿ ಸ್ವಂತ ವೆಚ್ಚಕ್ಕೆ ಪಡೆದುಕೊಂಡಿದ್ದಾರೆ. ಮಾರ್ಚ್ 31, 2015 ರ ವರ್ಷಾಂತ್ಯಕ್ಕೆ ₹ 40,000 ದಷ್ಟು ನಿವ್ವಳ ಲಾಭವಿದೆ.

   ಸಂಸ್ಥೆಯ ಲಾಭ ಮತ್ತು ನಷ್ಟದ ವಿತರಣಾ ಖಾತೆಯನ್ನು ತಯಾರಿಸಿ.

   (ಉತ್ತರ: ಮನೀಶ್ ಮತ್ತು ಗಿರೀಶ್‌ರ ಬಂಡವಾಳ ಖಾತೆಗಳಿಗೆ ಸಮನಾಗಿ ₹ 10,290 ರಷ್ಟು ಲಾಭ ವರ್ಗಾಯಿಸಿದೆ.)

8. ರಾಮ್, ರಾಜ್ ಮತ್ತು ಜಾರ್ಜ್ ಪಾಲುದಾರರಾಗಿದ್ದು, 5:3:2 ರ ಅನುಪಾತದಲ್ಲಿ ಲಾಭವನ್ನು ಹಂಚಿಕೊಳ್ಳುತ್ತಾರೆ. ಪಾಲುದಾರಿಕೆಯ ಕರಾರಿನನ್ವಯ ಜಾರ್ಜ್ ಪ್ರತಿ ವರ್ಷ ಕನಿಷ್ಠ ₹ 10,000 ದಷ್ಟು ತನ್ನ ಪಾಲಿನ ಲಾಭವನ್ನು ಪಡೆಯುತ್ತಾನೆ. 2013 ನೇ ವರ್ಷದಲ್ಲಿ ₹40,000 ನಿವ್ವಳ ಲಾಭವಿದೆ. ಲಾಭ ಮತ್ತು ನಷ್ಟದ ವಿತರಣಾ ಖಾತೆಯನ್ನು ತಯಾರಿಸಿ.

   (ಉತ್ತರ: ಲಾಭದ ವರ್ಗಾವಣೆ: ರಾಮ್‌ನ ಬಂಡವಾಳ ಖಾತೆಗೆ ₹ 18,750; ರಾಜ್‌ನ ಬಂಡವಾಳ ಖಾತೆಗೆ ₹ 11,250; ಮತ್ತು ಜಾರ್ಜ್ ಬಂಡವಾಳ ಖಾತೆಗೆ ₹ 10,000)

9. ಅಮನ್, ಬಬಿತಾ ಮತ್ತು ಸುರೇಶ್ ಸಂಸ್ಥೆಯ ಪಾಲುದಾರರಾಗಿದ್ದು, ಅವರ ಲಾಭದ ಹಂಚಿಕೆ ಪ್ರಮಾಣವು 2ಃ2ಃ1 ರ ಅನುಪಾತದಲ್ಲಿದೆ. ಸುರೇಶ್‌ನು ಪ್ರತಿ ವರ್ಷ ಕನಿಷ್ಟ ₹ 10,000 ಲಾಭದ ಭರವಸೆ ಪಡೆದಿದ್ದಾನೆ. ಅವನ ಖಾತೆಗೆ ಏನಾದರೂ ಕೊರತೆಯಾದರೆ ಅದನ್ನು ಬಬಿತಾ ಭರಿಸುವಳು. ಡಿಸೆಂಬರ್ 31, 2015 ಮತ್ತು ಡಿಸೆಂಬರ್

31, 2016 ರ ವರ್ಷಾಂತ್ಯಕ್ಕೆ ಎರಡು ವರ್ಷಗಳ ಲಾಭವು ಕ್ರಮವಾಗಿ ₹ 40,000 ಮತ್ತು ₹ 60,000 ರಷ್ಟಿದೆ. ಎರಡು ವರ್ಷಗಳ ಲಾಭ ಮತ್ತು ನಷ್ಟದ ವಿತರಣಾ ಖಾತೆ ತಯಾರಿಸಿರಿ.

(ಉತ್ತರ: 2015 ಕ್ಕೆ ಲಾಭದ ಹಂಚಿಕೆ ಅಮನ್‌ನ ಬಂಡವಾಳ ಖಾತೆಗೆ ₹ 16,000, ಬಬಿತಾಳ ಬಂಡವಾಳ ಖಾತೆಗೆ ₹ 14,000, ಸುರೇಶ್‌ನ ಬಂಡವಾಳ ಖಾತೆಗೆ ₹ 10.000 ಮತ್ತು 2016 ರ ವರ್ಷದ್ದು ಲಾಭದ ಹಂಚಿಕೆ– ಅಮನ್‌ನ ಬಂಡವಾಳ ಖಾತೆಗೆ ₹24,000, ಬಬಿತಾಳ ಬಂಡವಾಳ ಖಾತೆಗೆ ₹ 24,000 ಮತ್ತು ಸುರೇಶ್‌ನ ಬಂಡವಾಳ ಖಾತೆಗೆ ₹12,000)

10. ಸಿಮ್ಮಿ ಮತ್ತು ಸೋನು ಸಂಸ್ಥೆಯ ಪಾಲುದಾರರಾಗಿದ್ದು, ಲಾಭ ಮತ್ತು ನಷ್ಟದ ಹಂಚಿಕೆಯು 3:1 ರ ಅನುಪಾತದಲ್ಲಿದೆ. ಮಾರ್ಚ್ 31, 2015 ರ ವರ್ಷಾಂತ್ಯಕ್ಕೆ ಸಂಸ್ಥೆಯ ಲಾಭ ಮತ್ತು ನಷ್ಟ ಖಾತೆಯು ₹1,50,000 ನಿವ್ವಳ ಲಾಭ ತೋರಿಸುತ್ತಿದೆ. ಈ ಮುಂದಿನ ಅಂಶಗಳನ್ನು ಪರಿಗಣಿಸಿ ಲಾಭ ಮತ್ತು ನಷ್ಟದ ವಿತರಣಾ ಖಾತೆಯನ್ನು ತಯಾರಿಸಿರಿ.

   (i) ಏಪ್ರಿಲ್ 01, 2014 ಕ್ಕೆ ಪಾಲುದಾರರ ಬಂಡವಾಳ: ಸಿಮ್ಮಿ ₹ 30,000, ಸೋನು ₹ 60,000.

   (ii) ಏಪ್ರಿಲ್ 01, 2014 ಕ್ಕೆ ಚಾಲ್ತಿ ಖಾತೆಯ ಶಿಲ್ಕು : ಸಿಮ್ಮಿ ₹ 30,000 (ಜಮಾ), ಸೋನು ₹ 15,000 (ಜಮಾ)

   (iii) ಪ್ರಸಕ್ತ ವರ್ಷದಲ್ಲಿ ಪಾಲುದಾರರು ಸ್ವಂತ ವೆಚ್ಚಕ್ಕೆ ಪಡೆದದ್ದು: ಸಿಮ್ಮಿ ₹ 20,000, ಸೋನು ₹ 15,000

   (iv) ಬಂಡವಾಳದ ಮೇಲಿನ ಬಡ್ಡಿ ವಾರ್ಷಿಕ ಶೇ. 5 ರಷ್ಟು.

   (v) 06 ತಿಂಗಳ ಸರಾಸರಿ ಆಧಾರದ ಮೇಲೆ ಸ್ವಂತ ವೆಚ್ಚದ ಮೇಲೆ ವಾರ್ಷಿಕ ಶೇ. 6 ರಷ್ಟು ಬಡ್ಡಿ ಹಾಕಿದೆ.

   (vi) ಪಾಲುದಾರರ ವೇತನ : ಸಿಮ್ಮಿ ₹12,000 ಮತ್ತು ಸೋನು ₹9,000. ಪಾಲುದಾರರ ಚಾಲ್ತಿ ಖಾತೆಯನ್ನು ತೋರಿಸಿ.

(ಉತ್ತರ: ಲಾಭದ ವರ್ಗಾವಣೆ: ಸಿಮ್ಮಿ ಬಂಡವಾಳ ಖಾತೆಗೆ ₹92,587 ಮತ್ತು ಸೋನುಳ ಬಂಡವಾಳ ಖಾತೆಗೆ ₹ 30,863.)

11. ರಮೇಶ ಮತ್ತು ಸುರೇಶ ಸಂಸ್ಥೆಯ ಪಾಲುದಾರರಾಗಿದ್ದು, ಅವರು ವ್ಯವಹಾರ ಪ್ರಾರಂಭಿಸುವ ಸಂದರ್ಭದಲ್ಲಿ ಹಾಕಿದ ಬಂಡವಾಳ ಕ್ರಮವಾಗಿ ₹ 80,000 ಮತ್ತು ₹ 60,000 ರಷ್ಟಿದೆ. ಅದರ ಪ್ರಕಾರ ಲಾಭವನ್ನು ಹಂಚಿಕೊಳ್ಳುವುದು. ಏಪ್ರೀಲ್ 01, 2013 ರಂದು ಸಂಸ್ಥೆಯನ್ನು ಪ್ರಾರಂಭಿಸಲಾಗಿದೆ. ಪಾಲುದಾರರ ಕರಾರಿನ ಪ್ರಕಾರ, ಬಂಡವಾಳದ ಮೇಲಿನ ಬಡ್ಡಿ ಮತ್ತು ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿ ಕ್ರಮವಾಗಿ ವಾರ್ಷಿಕ ಶೇ. 12 ಮತ್ತು ಶೇ. 10 ರಷ್ಟಿದೆ. ರಮೇಶ ಮತ್ತು ಸುರೇಶನು ಪ್ರತಿ ತಿಂಗಳು ಕ್ರಮವಾಗಿ ₹ 2,000 ಮತ್ತು ₹ 3,000 ವೇತನ ಪಡೆಯುತ್ತಾರೆ.

ಮೇಲಿನವುಗಳನ್ನು ವಿತರಿಸುವ ಪೂರ್ವದಲ್ಲಿ ಮಾರ್ಚ್ 31, 2015 ರ ವರ್ಷಾಂತ್ಯಕ್ಕೆ ₹ 1,00,300 ರಷ್ಟು ಲಾಭವಿದೆ. ರಮೇಶ ಮತ್ತು ಸುರೇಶ ರವರ ಸ್ವಂತಕ್ಕೆ ಹಿಂಪಡೆದ ಮೊತ್ತವು ಕ್ರಮವಾಗಿ ₹ 40,000 ಮತ್ತು ₹ 50,000 ಇರುತ್ತದೆ. ಸ್ವಂತ ವೆಚ್ಚದ ಮೇಲಿನ ಬಡ್ಡಿ ರಮೇಶನದು ₹ 2,000 ಮತ್ತು ಸುರೇಶನದು ₹ 2,500 ಇರುತ್ತದೆ. ಅವರದು ಬದಲಾಗುವ ಬಂಡವಾಳ ವಿಧಾನವೆಂದು ಊಹಿಸಿ, ಲಾಭ ಮತ್ತು ನಷ್ಟದ ವಿತರಣಾ ಖಾತೆ ಮತ್ತು ಪಾಲುದಾರರ ಬಂಡವಾಳ ಖಾತೆಗಳ ತಯಾರಿಸಿ.

(ಉತ್ತರ: ಲಾಭದ ವರ್ಗಾವಣೆ: ರಮೇಶನ ಬಂಡವಾಳ ಖಾತೆಗೆ ₹16,000 ಮತ್ತು ಸುರೇಶನ ಬಂಡವಾಳ ಖಾತೆಗೆ ₹ 12,000)

12. ಸುರೇಶ ಮತ್ತು ವನಿತಾ ಸಂಸ್ಥೆಯ ಪಾಲುದಾರರಾಗಿದ್ದು, ಅವರ ಪಾಲುದಾರಿಕೆ ಕರಾರು ಈ ರೀತಿ ಇದೆ.

   (i) ಸುರೇಶ ಮತ್ತು ವನಿತಾ 3:2ರ ಅನುಪಾತದಲ್ಲಿ ಲಾಭವನ್ನು ಹಂಚಿಕೊಳ್ಳುವುದು.

   (ii) ಬಂಡವಾಳದ ಮೇಲೆ ಶೇ. 5ರಷ್ಟು ಬಡ್ಡಿ ಅನುಮತಿಸುವುದು.

   (ii) ವನಿತಾಳಿಗೆ ಪ್ರತಿ ತಿಂಗಳು ₹ 600 ವೇತನ ನೀಡುವುದು.

**ಡಿಸೆಂಬರ್ 31, 2014 ಕ್ಕೆ ಸಂಸ್ಥೆಯ ಪುಸ್ತಕದ ಶಿಲ್ಕು ಈ ಮುಂದಿನಂತೆ ತೋರಿಸುತ್ತದೆ.**

| | ಸುರೇಶ (₹) | ವನಿತಾ (₹) |
|---|---|---|
| ಬಂಡವಾಳ ಖಾತೆಗಳು | 40,000 | 40,000 |
| ಚಾಲ್ತಿ ಖಾತೆಗಳು | 7,000 (ಜಮಾ) | 2,800 (ಜಮಾ) |
| ಸ್ವಂತಕ್ಕೆ ಹಿಂಪಡೆತ | 10,850 | 8,150 |

ಪಾಲುದಾರರ ವೇತನ ಪಾವತಿಸಿದ ನಂತರ ಹಾಗೂ ಬಂಡವಾಳದ ಮೇಲಿನ ಬಡ್ಡಿ ಆಕರಿಸುವುದಕ್ಕಿಂತ ಪೂರ್ವದಲ್ಲಿ ಪ್ರಸ್ತುತ ವರ್ಷದಲ್ಲಿ ₹ 9,500 ನಿವ್ವಳ ಲಾಭವಿದೆ. ಲಾಭ ಮತ್ತು ನಷ್ಟದ ವಿತರಣಾ ಖಾತೆ ಮತ್ತು ಪಾಲುದಾರರ ಚಾಲ್ತಿ ಖಾತೆಗಳನ್ನು ತಯಾರಿಸಿ.

(ಉತ್ತರ: ಲಾಭದ ವರ್ಗಾವಣೆ: ಸುರೇಶನ ಬಂಡವಾಳ ಖಾತೆಗೆ ₹3,300 ಮತ್ತು ವನಿತಾಳ ಬಂಡವಾಳ ಖಾತೆಗೆ ₹2,200)

**ಬಂಡವಾಳದ ಮೇಲಿನ ಬಡ್ಡಿ ಮತ್ತು ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿಯ ಲೆಕ್ಕಾಚಾರ:**

13. ರಾಹುಲ್, ರೋಹಿತ್ ಮತ್ತು ಕಿರಣ ಏಪ್ರಿಲ್ 01, 2014 ರಂದು ಕ್ರಮವಾಗಿ ₹20,00,000 ₹18,00,000 ಮತ್ತು ₹ 16,00,000 ಬಂಡವಾಳದೊಂದಿಗೆ ಪಾಲುದಾರಿಕೆಯ ವ್ಯವಹಾರ ಪ್ರಾರಂಭಿಸಿದರು. ಮಾರ್ಚ್ 2015 ರ ವರ್ಷಾಂತ್ಯಕ್ಕೆ ₹1,35,000 ಲಾಭವಿದೆ ಮತ್ತು ಪಾಲುದಾರರ ಸ್ವಂತ ವೆಚ್ಚಕ್ಕಾಗಿ ರಾಹುಲ್ ₹50,000, ರೋಹಿತ್ ₹50,000 ಮತ್ತು ಕಿರಣ ₹ 40,000 ಹಿಂಪಡೆದಿದ್ದಾರೆ. 3:2:1 ರ ಅನುಪಾತದಲ್ಲಿ ಪಾಲುದಾರರಿಗೆ ಲಾಭವನ್ನು ವಿತರಿಸಿದೆ. ಬಂಡವಾಳದ ಮೇಲೆ ವಾರ್ಷಿಕ ಶೇ. 5% ರಷ್ಟು ಬಡ್ಡಿಯನ್ನು ಲೆಕ್ಕಹಾಕಿರಿ.

(ಉತ್ತರ: ಬಂಡವಾಳದ ಮೇಲಿನ ಬಡ್ಡಿ : ರಾಹುಲ್ ₹ 1,00,000 , ರೋಹಿತ್ ₹ 90,000, ಕಿರಣ ₹ 80,000)

14. ಏಪ್ರೀಲ್ 01, 2014 ರಂದು ಸನ್‌ಫ್ಲವರ್ ಮತ್ತು ಪಿಂಕ್‌ರೋಜ್ ಕ್ರಮವಾಗಿ ₹ 2,50,000 ಮತ್ತು ₹1,50,000 ಬಂಡವಾಳದೊಂದಿಗೆ ಪಾಲುದಾರಿಕೆಯ ವ್ಯವಹಾರವನ್ನು ಪ್ರಾರಂಭಿಸಿದರು. ಅಕ್ಟೋಬರ್ 01, 2014ರಂದು ತಲಾ ₹ 2,00,000 ಬಂಡವಾಳ ಇರಬೇಕೆಂದು ಅವರು ನಿರ್ಧರಿಸಿದರು. ಬಂಡವಾಳದಲ್ಲಿ ನಗದು ತೊಡಗಿಸುವಾಗ ಅಥವಾ ಹಿಂಪಡೆಯುವಾಗ ಅವಶ್ಯಕ ಹೊಂದಾಣಿಕೆಗಳನ್ನು ಮಾಡುವುದು. ವಾರ್ಷಿಕ ಶೇ. 10 ರಷ್ಟು ಬಂಡವಾಳದ ಮೇಲಿನ ಬಡ್ಡಿ ವಿಧಿಸುವುದು. ಮಾರ್ಚ್ 31, 2015 ಕ್ಕೆ ಬಂಡವಾಳದ ಮೇಲಿನ ಬಡ್ಡಿ ಲೆಕ್ಕಹಾಕಿ.

(ಉತ್ತರ: ಬಂಡವಾಳದ ಮೇಲಿನ ಒಟ್ಟು ಬಡ್ಡಿ : ಸನ್‌ಫ್ಲವರ್ ₹ 22,500, ಪಿಂಕ್‌ರೋಜ್ ₹ 17,500)

15. ಮಾರ್ಚ್ 31, 2014 ರಂದು ಖಾತೆಗಳನ್ನು ಅಂತಿಮಗೊಳಿಸಿದ ನಂತರ ಸಂಸ್ಥೆಯ ಪುಸ್ತಕಗಳಲ್ಲಿ ಮೌಂಟೇನ್, ಹಿಲ್ ಮತ್ತು ರಾಕ್ ರ ಬಂಡವಾಳ ಕ್ರಮವಾಗಿ ₹4,00,000, ₹3,00,000 ಮತ್ತು ₹2,00,000 ರಷ್ಟಿದೆ. ತದನಂತರ ವಾರ್ಷಿಕ ಶೇ. 10 ರಷ್ಟು ಬಂಡವಾಳದ ಮೇಲಿನ ಬಡ್ಡಿ ಬಿಟ್ಟಿರುವುದು ಪತ್ತೆಯಾಯಿತು. ಪ್ರಸ್ತುತ ವರ್ಷದ ಲಾಭವು ₹ 1,50,000 ಮತ್ತು ಪಾಲುದಾರರ ಸ್ವಂತ ವೆಚ್ಚಕ್ಕಾಗಿ ಮೌಂಟೇನ್ ₹20,000, ಹಿಲ್ ₹ 15,000, ರಾಕ್ ₹ 10,000 ಪಡೆದಿದ್ದಾರೆ.

ಬಂಡವಾಳದ ಮೇಲಿನ ಬಡ್ಡಿಯನ್ನು ಲೆಕ್ಕಹಾಕಿ.

(ಉತ್ತರ: ಬಂಡವಾಳದ ಮೇಲಿನ ಬಡ್ಡಿ : ಮೌಂಟೇನ್ ₹ 37,000; ಹಿಲ್ ₹ 26,500; ರಾಕ್ ₹ 16,000)

16. ಮಾರ್ಚ್ 31, 2014 ಕ್ಕೆ ನೀಲಕಂಠ ಮತ್ತು ಮಹಾದೇವನ ಅಢಾವೆ ಪತ್ರಿಕೆಯ ಸಾರಾಂಶ ಈ ಮುಂದಿನಂತಿದೆ.

**ಮಾರ್ಚ್ 31, 2014 ಕ್ಕೆ ಅಢಾವೆ ಪತ್ರಕೆ**

| ಹೊಣೆಗಾರಿಕೆಗಳು | ಮೊತ್ತ (₹) | ಆಸ್ತಿಗಳು | ಮೊತ್ತ (₹) |
|---|---|---|---|
| ನೀಲಕಂಠನ ಬಂಡವಾಳ | 10,00,000 | ಒಟ್ಟು ಆಸ್ತಿಗಳು | 30,00,000 |
| ಮಹಾದೇವನ ಬಂಡವಾಳ | 10,00,000 | | |
| ನೀಲಕಂಠನ ಚಾಲ್ತಿ ಖಾತೆ | 1,00,000 | | |
| ಮಹಾದೇವನ ಚಾಲ್ತಿ ಖಾತೆ | 1,00,000 | | |
| ಲಾಭ ಮತ್ತು ನಷ್ಟ ವಿತರಣೆ (ಮಾರ್ಚ್ 2007) | 8,00,000 | | |
| | **30,00,000** | | **30,00,000** |

ಪ್ರಸ್ತುತ ವರ್ಷದಲ್ಲಿ ಮಹಾದೇವನು ಸ್ವಂತವೆಚ್ಚಕ್ಕೆ ₹ 30,000 ಪಡೆದನು. 2014 ರಲ್ಲಿ ₹ 10,00,000 ಲಾಭವಿದೆ. ಮಾರ್ಚ್ 31, 2014ರ ವರ್ಷಾಂತ್ಯಕ್ಕೆ ವಾರ್ಷಿಕ ಶೇ. 5 ರಷ್ಟು ಬಂಡವಾಳದ ಮೇಲೆ ಬಡ್ಡಿಯನ್ನು ಲೆಕ್ಕಹಾಕಿರಿ.

(ಉತ್ತರ: ಬಂಡವಾಳದ ಮೇಲೆ ಬಡ್ಡಿ : ನೀಲಕಂಠ ₹ 50,000, ಮಹಾದೇವ ₹ 50,000)

17. ರಿಷಿ ಒಂದು ಸಂಸ್ಥೆಯ ಪಾಲುದಾರನಾಗಿದ್ದು, ಮಾರ್ಚ್31, 2014 ಕ್ಕೆ ಅಂತ್ಯವಾಗುವ ವರ್ಷದ ಅವಧಿಯಲ್ಲಿ ಈ ಮುಂದಿನ ಮೊತ್ತವನ್ನು ತನ್ನ ಸ್ವಂತ ವೆಚ್ಚಕ್ಕೆ ಹಿಂಪಡೆಯುತ್ತಾನೆ.

| | ₹ |
|---|---|
| ಮೇ 01, 2013 | 12,000 |
| ಜುಲೈ 31, 2013 | 6,000 |
| ಸೆಪ್ಟೆಂಬರ್ 30, 2013 | 9,000 |
| ನವೆಂಬರ್ 30, 2013 | 12,000 |
| ಜನೇವರಿ 01, 2014 | 8,000 |
| ಮಾರ್ಚ್ 31, 2014 | 7,000 |

ಸ್ವಂತಕ್ಕೆ ಹಿಂಪಡೆತದ ಮೇಲೆ ವಾರ್ಷಿಕ ಶೇ. 9 ರಷ್ಟು ಬಡ್ಡಿಯನ್ನು ಆಕರಿಸುವುದು.

ಸ್ವಂತಕ್ಕೆ ಹಿಂಪಡೆತದ ಮೇಲೆ ಬಡ್ಡಿಯನ್ನು ಲೆಕ್ಕಹಾಕಿ.

(ಉತ್ತರ: ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿ ₹ 2,295)

18. ಏಪ್ರೀಲ್ 01, 2014 ಕ್ಕೆ ಮೋಲಿ ಮತ್ತು ಗೋಲುರವರ ಬಂಡವಾಳ ಖಾತೆಯ ಶಿಲ್ಕು ₹ 40,000 ಮತ್ತು ₹ 20,000 ತೋರಿಸುತ್ತದೆ. ಅವರು 3:2ರ ಅನುಪಾತದಲ್ಲಿ ಲಾಭವನ್ನು ಹಂಚಿಕೊಳ್ಳುತ್ತಾರೆ. ಅವರಿಗೆ ವಾರ್ಷಿಕ ಶೇ. 10 ರಷ್ಟು ಬಂಡವಾಳದ ಮೇಲೆ ಬಡ್ಡಿಯನ್ನು ನೀಡಲಾಗುತ್ತದೆ ಮತ್ತು ವಾರ್ಷಿಕ ಶೇ. 12 ರಷ್ಟು ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿ ಆಕರಿಸುವುದು. ಆಗಸ್ಟ್ 01, 2014 ಕ್ಕೆ ಗೋಲು ರೂ 10,000 ಮುಂಗಡವಾಗಿ ಸಂಸ್ಥೆಗೆ ಸಾಲ ನೀಡಿದ್ದಾನೆ. ಪ್ರಸ್ತುತ ವರ್ಷದಲ್ಲಿ ಮೋಲಿಯು ಪ್ರತಿ ತಿಂಗಳ ಪ್ರಾರಂಭದಲ್ಲಿ ₹ 1,000 ಸ್ವಂತಕ್ಕೆ ಹಿಂಪಡೆಯುತ್ತಾನೆ. ಅದೇ ರೀತಿ ಗೋಲು ಪ್ರತಿ ತಿಂಗಳು ಕೊನೆಯಲ್ಲಿ ₹ 1,000 ಸ್ವಂತಕ್ಕೆ ಹಿಂಪಡೆಯುತ್ತಾನೆ. ಮೇಲಿನ ಹೊಂದಾಣಿಕೆಗಳ ಪೂರ್ವದಲ್ಲಿ ಲಾಭವು ₹ 20,950 ರಷ್ಟಿದೆ. ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿಯನ್ನು ಲೆಕ್ಕಹಾಕಿರಿ. ಲಾಭದ ಹಂಚಿಕೆಯನ್ನು ತೋರಿಸಿ ಮತ್ತು ಪಾಲುದಾರರ ಬಂಡವಾಳ ಖಾತೆಗಳನ್ನು ತಯಾರಿಸಿ.

(ಉತ್ತರ: ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿ : ಮೋಲಿ ₹ 780; ಗೋಲು ₹ 660, ಲಾಭ : ಮೋಲಿ ₹ 9,594, ಗೋಲು ₹ 6,396)

19. ರಾಖೇಶ್ ಮತ್ತು ರೋಹನ್ ಪಾಲುದಾರರಾಗಿದ್ದು, ಲಾಭದ ಹಂಚಿಕೆಯು 3:2 ರ ಅನುಪಾತದಲ್ಲಿದೆ. ಕ್ರಮವಾಗಿ ₹ 40,000 ಮತ್ತು ₹30,000 ರಷ್ಟು ಬಂಡವಾಳವಿದ್ದು, ಅವರು ಸಂಸ್ಥೆಯಿಂದ ಈ ಮುಂದಿನಂತೆ ತಮ್ಮ ಸ್ವಂತ ವೆಚ್ಚಕ್ಕಾಗಿ ಹಿಂಪಡೆದುಕೊಳ್ಳುತ್ತಾರೆ.

| ಪಾಲುದಾರರು | ತಿಂಗಳು | ₹ |
|---|---|---|
| **ರಾಖೇಶ್** | ಮೇ 31, 2014 | 600 |
| | ಜೂನ್ 30, 2014 | 500 |
| | ಆಗಸ್ಟ್ 31, 2014 | 1,000 |
| | ನವೆಂಬರ್ 01, 2014 | 400 |
| | ಡಿಸೆಂಬರ್ 31, 2014 | 1,500 |
| | ಜನೇವರಿ 31, 2015 | 300 |
| | ಮಾರ್ಚ 01, 2015 | 700 |
| ರೋಹನ್ | ಪ್ರತಿ ತಿಂಗಳು ಪ್ರಾರಂಭದಲ್ಲಿ | 400 |

ವಾರ್ಷಿಕ ಶೇ. 6 ರಷ್ಟು ಬಡ್ಡಿಯನ್ನು ವಿಧಿಸುವುದು. ಪ್ರತಿ ವರ್ಷ ಮಾರ್ಚ 31, 2015 ಕ್ಕೆ ಖಾತೆ ಪುಸ್ತಕಗಳು ಮುಕ್ತಾಯವಾಗುತ್ತವೆ ಎಂದು ಊಹಿಸಿ, ಸ್ವಂತಕ್ಕೆ ಹಿಂಪಡೆತದ ಮೇಲೆ ಬಡ್ಡಿಯನ್ನು ಲೆಕ್ಕಹಾಕಿರಿ.

(ಉತ್ತರ: ರಾಕೇಶ್‌ನ ಸ್ವಂತಕ್ಕೆ ಹಿಂಪಡೆತದ ಮೇಲೆ ಬಡ್ಡಿ ₹ 102, ರೋಹನ್‌ನ ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿ ₹ 156 ಹತ್ತಿರದ ರೂಪಾಯಿಗೆ ಸಮಾನಗೊಳಿಸಿ)

20. ಹಿಮಾಂಶು ಪ್ರತಿ ತಿಂಗಳ ಕೊನೆಯಲ್ಲಿ ₹ 2,500 ರಷ್ಟು ಸ್ವಂತಕ್ಕೆ ಹಿಂಪಡೆಯುತ್ತಾನೆ. ಪಾಲುದಾರಿಕೆಯ ಕರಾರಿನನ್ವಯ ವಾರ್ಷಿಕ ಶೇ. 12 ರಷ್ಟು ಬಡ್ಡಿಯನ್ನು ವಿಧಿಸುವುದು 31 ನೇ ಡಿಸೆಂಬರ್, 2014 ರ ವರ್ಷಾಂತ್ಯಕ್ಕೆ ಹಿಮಾಂಶು ಸ್ವಂತಕ್ಕೆ ಹಿಂಪಡೆದ ಮೊತ್ತದ ಮೇಲಿನ ಬಡ್ಡಿಯನ್ನು ಲೆಕ್ಕಹಾಕಿರಿ.

(ಉತ್ತರ: ಸ್ವಂತಕ್ಕೆ ಹಿಂಪಡೆತದ ಮೇಲೆ ಬಡ್ಡಿ ₹ 1,650)

21. ಭಾರಮ್ ಒಂದು ಸಂಸ್ಥೆಯಲ್ಲಿ ಪಾಲುದಾರನಾಗಿದ್ದು, ಅವನು ಪ್ರತಿತಿಂಗಳು ಪ್ರಾರಂಭದಲ್ಲಿ ₹3,000ದಂತೆ 12 ತಿಂಗಳ ವರೆಗೆ ಹಿಂಪಡೆಯುತ್ತಾನೆ. ಪ್ರತಿ ವರ್ಷ ಮಾರ್ಚ 31 ಕ್ಕೆ ಸಂಸ್ಥೆಯ ಪುಸ್ತಕಗಳನ್ನು ಅಂತಿಮಗೊಳಿಸಲಾಗುವುದು. ವಾರ್ಷಿಕ ಶೇ. 10 ರ ಬಡ್ಡಿದರದಂತೆ ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿಯನ್ನು ಲೆಕ್ಕಹಾಕಿರಿ.

(ಉತ್ತರ: ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿ ರೂ 1,950)

22. ರಾಜ್ ಮತ್ತು ನೀರಜ್ ಒಂದು ಸಂಸ್ಥೆಯ ಪಾಲುದಾರರಾಗಿದ್ದಾರೆ. ಏಪ್ರೀಲ್ 01, 2015 ಕ್ಕೆ ಅವರ ಬಂಡವಾಳವು ಕ್ರಮವಾಗಿ ₹ 2,50,000 ಮತ್ತು ₹ 1,50,000 ರಷ್ಟಿದೆ. ಅವರು ಲಾಭವನ್ನು ಸಮಾನವಾಗಿ ಹಂಚಿಕೊಳ್ಳುತ್ತಾರೆ. ಜುಲೈ 01, 2015 ಕ್ಕೆ ಅವರ ಬಂಡವಾಳ ತಲಾ ₹ 1,00,000 ದಷ್ಟಿರಬೇಕು ಎಂದು ಅವರು ನಿರ್ಧರಿಸುತ್ತಾರೆ. ಪ್ರತಿ ಪಾಲುದಾರರು ಬಂಡವಾಳದಲ್ಲಿ ನಗದನ್ನು ತೊಡಗಿಸುವಾಗ ಅಥವಾ ಹಿಂಪಡೆಯುವಾಗ ಅವಶ್ಯಕ ಹೊಂದಾಣಿಕೆಗಳನ್ನು ಮಾಡುವುದು. ವಾರ್ಷಿಕ ಶೇ. 8 ರಷ್ಟು ಬಂಡವಾಳದ ಮೇಲಿನ ಬಡ್ಡಿ ಅನುಮತಿಸುವುದು. ಮಾರ್ಚ 31, 2016ರ ವರ್ಷಾಂತ್ಯಕ್ಕೆ ಇಬ್ಬರೂ ಪಾಲುಗಾರರ ಬಂಡವಾಳದ ಮೇಲಿನ ಬಡ್ಡಿಯನ್ನು ಲೆಕ್ಕಹಾಕಿರಿ.

(ಉತ್ತರ: ರಾಜ್ ರೂ 11,000 ಮತ್ತು ನೀರಜ್ ರೂ 9,000)

23. ಅಮಿತ್ ಮತ್ತು ಬೋಲಾ ಒಂದು ಸಂಸ್ಥೆಯ ಪಾಲುದಾರರಾಗಿದ್ದಾರೆ. ಅವರು 3:2ರ ಅನುಪಾತದಲ್ಲಿ ಲಾಭವನ್ನು ಹಂಚಿಕೊಳ್ಳುತ್ತಾರೆ. ಪಾಲುದಾರಿಕೆ ಕರಾರಿನನ್ವಯ, ವಾರ್ಷಿಕ ಶೇ. 10 ರಷ್ಟು ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿಯನ್ನು ವಿಧಿಸುವುದು. 2013ರ ವರ್ಷದಲ್ಲಿ ಕ್ರಮವಾಗಿ ₹ 24,000 ಮತ್ತು ₹ 16,000 ದಷ್ಟು ಅವರು

ಸ್ವಂತಕ್ಕೆ ಹಿಂಪಡೆಯುವರು. ಇಡೀ ವರ್ಷ ಸಮಾನಾಂತರವಾಗಿ ಮೊತ್ತವನ್ನು ಹಿಂಪಡೆಯುವರೆಂದು ಊಹಿಸಿ, ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿಯನ್ನು ಲೆಕ್ಕಹಾಕಿರಿ.

(ಉತ್ತರ: ಅಮಿತ್‌ನ ಸ್ವಂತಕ್ಕೆ ಹಿಂಪಡೆತದ ಮೆಲಿನ ಬಡ್ಡಿ ₹ 2,400 ಮತ್ತು ಬೋಲಾರ ಸ್ವಂತಕ್ಕೆ ಹಿಂಪಡೆತದ ಮೇಲಿನ ಮೊತ್ತ ₹ 800)

24. ಹರೀಶನು ಒಂದು ಸಂಸ್ಥೆಯ ಪಾಲುದಾರನಾಗಿದ್ದು, 2015 ರಲ್ಲಿ ಅವನು ಈ ಮುಂದಿನಂತೆ ಮೊತ್ತವನ್ನು ಹಿಂಪಡೆಯುತ್ತಾನೆ.

| | ₹ |
|---|---|
| ಫೆಬ್ರುವರಿ 01 | 4,000 |
| ಮೇ 01 | 10,000 |
| ಜೂನ್ 30 | 4,000 |
| ಅಕ್ಟೋಬರ್ 31 | 12,000 |
| ಡಿಸೆಂಬರ್ 31 | 4,000 |

ವಾರ್ಷಿಕ ಶೇ. $7\frac{1}{2}$ ರಷ್ಟು ಸ್ವಂತಕ್ಕೆ ಹಿಂಪಡೆತದ ಮೇಲೆ ಬಡ್ಡಿಯನ್ನು ವಿಧಿಸುವುದು.

ಡಿಸೆಂಬರ್ 31, 2015ರ ವರ್ಷಾಂತ್ಯಕ್ಕೆ ಹರೀಶನ ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿಯ ಮೊತ್ತವನ್ನು ಲೆಕ್ಕಹಾಕಿ.

(ಉತ್ತರ: ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿ ₹ 1,075)

25. ಮೆನಾನ್ ಮತ್ತು ಥೋಮಾಸ್ ಒಂದು ಸಂಸ್ಥೆಯ ಪಾಲುದಾರನಾಗಿದ್ದಾರೆ. ಅವರು ಲಾಭವನ್ನು ಸಮನಾಗಿ ಹಂಚಿಕೊಳ್ಳಲಿದ್ದಾರೆ. ಅವರು ಪ್ರತಿ ತಿಂಗಳು ತಲಾ ₹ 2,000 ದಂತೆ ಸ್ವಂತಕ್ಕೆ ಹಿಂಪಡೆದಿದ್ದಾರೆ. ವಾರ್ಷಿಕ ಶೇ. 10 ರಷ್ಟು ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿಯನ್ನು ವಿಧಿಸಿದೆ.

**ಸಂದರ್ಭಗಳು:**

(i) ಪ್ರತಿ ತಿಂಗಳು ಪ್ರಾರಂಭದಲ್ಲಿ

(ii) ಪ್ರತಿ ತಿಂಗಳ ಮಧ್ಯದಲ್ಲಿ

(iii) ಪ್ರತಿ ತಿಂಗಳ ಕೊನೆಯಲ್ಲಿ ಮೊತ್ತವನ್ನು ಹಿಂಪಡೆಯುವರೆಂದು ಊಹಿಸಿ, 2006 ರಲ್ಲಿ ಮೆನಾನ್‌ನ ಸ್ವಂತಕ್ಕೆ ಹಿಂಪಡೆತದ ಮೇಲೆನ ಬಡ್ಡಿಯನ್ನು ಲೆಕ್ಕಹಾಕಿ.

(ಉತ್ತರ: ಸ್ವಂತಕ್ಕೆ ಹಿಂಪಡೆತದ ಮೇಲೆ ಬಡ್ಡಿ (1) ₹ 1,300 (2) ₹ 1,200 (3) ₹ 1,100 )

26. ಮಾರ್ಚ 31, 2015 ಕ್ಕೆ ಲೆಕ್ಕದ ಪುಸ್ತಕಗಳನ್ನು ಅಂತಿಮಗೊಳಿಸಿದ ಬಳಿಕ, ರಾಮ್, ಶ್ಯಾಮ್ ಮತ್ತು ಮೋಹನರ ಬಂಡವಾಳ ಶಿಲ್ಕು ಕ್ರಮವಾಗಿ ₹ 24,000 ₹ 18,000 ಮತ್ತು ₹ 12,000 ದಷ್ಟು ತೋರಿಸುತ್ತಿದೆ. ಶೇ. 5 ರಷ್ಟು ಬಂಡವಾಳದ ಮೇಲಿನ ಬಡ್ಡಿಯನ್ನು ಬಿಟ್ಟು ಬಿಡಲಾಗಿದೆ ಎಂದು ನಂತರ ಗೊತ್ತಾಯಿತು. ಮಾರ್ಚ 31, 2015 ರ ವರ್ಷಾಂತ್ಯಕ್ಕೆ ಲಾಭದ ಮೊತ್ತವು ₹ 30,000 ಮತ್ತು ಪಾಲುದಾರರು ತಮ್ಮ ಸ್ವಂತ ವೆಚ್ಚಕ್ಕಾಗಿ ರಾಮ್ ₹ 3,600, ಶ್ಯಾಮ್ ₹ 4,500 ಮತ್ತು ಮೋಹನ್ ₹ 2,700 ಹಿಂಪಡೆಯುತ್ತಾರೆ. ರಾಮ್, ಶ್ಯಾಮ್ ಮತ್ತು ಮೋಹನ್‌ರ ಲಾಭದ ಹಂಚಿಕೆಯ ಅನುಪಾತ 3:2:1 ರಷ್ಟಿದೆ. ಬಂಡವಾಳದ ಮೇಲಿನ ಬಡ್ಡಿಯನ್ನು ಲೆಕ್ಕಹಾಕಿರಿ.

(ಉತ್ತರ: ರಾಮನ ಬಂಡವಾಳದ ಮೇಲಿನ ಬಡ್ಡಿ ₹ 480; ಶ್ಯಾಮ್‌ನ ಬಂಡವಾಳದ ಮೇಲಿನ ಬಡ್ಡಿ ₹ 525, ಮತ್ತು ಮೋಹನ್‌ನ ಬಂಡವಾಳದ ಮೇಲಿನ ಬಡ್ಡಿ ₹ 435)

**ಪಾಲುದಾರರಿಗೆ ಲಾಭದ ಭರವಸೆ:**

27. ಅಮಿತ್, ಸುಮಿತ್ ಮತ್ತು ಸಮೀಕ್ಷಾ ಪಾಲುದಾರಿಕೆಯಲ್ಲಿದ್ದು 3:2:1 ಅನುಪಾತದಲ್ಲಿ ಲಾಭವನ್ನು ಹಂಚಿಕೊಳ್ಳಲಿದ್ದಾರೆ. ಸಮೀಕ್ಷಾಳಿಗೆ ಕನಿಷ್ಟ ₹ 8,000 ದಷ್ಟು ಅಮಿತ್ ಮತ್ತು ಸುಮಿತ್ ಲಾಭದಲ್ಲಿ ಪಾಲಿನ ಭರವಸೆಯನ್ನು ನೀಡಲಾಗಿದೆ. ಮಾರ್ಚ 31, 2015 ರ ವರ್ಷಾಂತ್ಯಕ್ಕೆ ₹ 36,000 ಲಾಭವಿದೆ, ಪಾಲುದಾರರಿಗೆ ಲಾಭವನ್ನು ಹಂಚಿರಿ.

    (ಉತ್ತರ: ಲಾಭ: ಅಮಿತ್ ₹ 16,800; ಸುಮಿತ್ ₹ 11,200; ಸಮೀಕ್ಷಾ ₹ 8,000)

28. ಪಿಂಕಿ, ದೀಪ್ತಿ ಮತ್ತು ಕಾಕು ಪಾಲುದಾರರಾಗಿದ್ದು 5:4:1ರ ಅನುಪಾತದಲ್ಲಿ ಲಾಭವನ್ನು ಹಂಚಿಕೊಳ್ಳುತ್ತಾರೆ. ಯಾವುದೇ ವರ್ಷದ ಲಾಭದಲ್ಲಿ ₹ 5,000 ಕ್ಕಿಂತ ಕಡಿಮೆ ಇಲ್ಲದಷ್ಟು ಪಾಲನ್ನು ಕಾಕುಗೆ ಭರವಸೆ ನೀಡಲಾಗಿದೆ. ಒಂದು ವೇಳೆ ಏನಾದರೂ ಕೊರತೆಯಾದರೆ ಅದನ್ನು ಪಿಂಕಿ ಮತ್ತು ದೀಪ್ತಿ ಸಮನಾಗಿ ತುಂಬಿಕೊಡುವುದು ವರ್ಷದ ಲಾಭದ ಮೊತ್ತವು ₹ 40,000 ದಷ್ಟಿದೆ. ಸಂಸ್ಥೆಯ ಪುಸ್ತಕಗಳಲ್ಲಿ ಅವಶ್ಯಕ ರೋಜು ನಮೂದುಗಳನ್ನು ನಮೂದಿಸಿ, ಲಾಭದ ಹಂಚಿಕೆಯನ್ನು ತೋರಿಸಿರಿ.

    (ಉತ್ತರ: ಪಿಂಕಿ ಮತ್ತು ದೀಪ್ತಿಯಿಂದ ತಲಾ ₹ 500 ರಷ್ಟು ಕೊರತೆಯನ್ನು ತುಂಬಿಕೊಡುವುದು.)

29. ಅಭಯ್, ಸಿದ್ದಾರ್ಥ ಮತ್ತು ಕುಸುಮ್ ಸಂಸ್ಥೆಯ ಪಾಲುದಾರರಾಗಿದ್ದು, ಲಾಭದ ಹಂಚಿಕೆಯ ಅನುಪಾತ 5:3:2 ರಷ್ಟಿದೆ. ಕನಿಷ್ಠ ಮೊತ್ತ ₹ 10,000 ದಷ್ಟು ಲಾಭದಲ್ಲಿನ ಪಾಲಿನ ಭರವಸೆಯನ್ನು ಕುಸುಮ ಪಡೆಯುತ್ತಾಳೆ. ಆ ಖಾತೆಯಲ್ಲಿ ಏನಾದರೂ ಕೊರತೆ ಉದ್ಭವಿಸಿದರೆ ಅದನ್ನು ಸಿದ್ದಾರ್ಥನಿಂದ ಪೂರೈಸುವುದು. ಮಾರ್ಚ್ 31, 2015 ಮತ್ತು 2016 ರ ವರ್ಷಾಂತ್ಯಕ್ಕೆ ಲಾಭವು ಕ್ರಮವಾಗಿ ₹ 40,000 ಮತ್ತು ₹ 60,000 ರಷ್ಟಿದೆ. ಲಾಭ ಮತ್ತು ನಷ್ಟದ ವಿತರಣಾ ಖಾತೆಯನ್ನು ತಯಾರಿಸಿ.

    (ಉತ್ತರ: 2015ಕ್ಕೆ : ಅಭಯ್ ₹ 20,000, ಸಿದ್ದಾರ್ಥ ₹ 10,000 ಮತ್ತು ಕುಸುಮ ₹ 10,000,

    2016ಕ್ಕೆ : ಅಭಯ್ ₹ 30,000, ಸಿದ್ದಾರ್ಥ ₹ 18,000 ಮತ್ತು ಕುಸುಮ ₹ 12,000)

30. ರಾಧಾ, ಮೇರಿ ಮತ್ತು ಫಾತಿಮಾ ಪಾಲುದಾರರಾಗಿದ್ದು, ಲಾಭದ ಹಂಚಿಕೆಯ ಅನುಪಾತ 5:4:1 ರಷ್ಟಿದೆ. ಯಾವುದೇ ವರ್ಷದ ಲಾಭದಲ್ಲಿ ಕನಿಷ್ಟ ₹ 5,000 ಕ್ಕಿಂತ ಕಡಿಮೆಯಿಲ್ಲದಷ್ಟು ಪಾಲನ ಭರವಸೆಯನ್ನು ಫಾತಿಮಾಳಿಗೆ ನೀಡಲಾಗಿದೆ. ಮಾರ್ಚ್ 31, 2015 ರ ವರ್ಷಾಂತ್ಯಕ್ಕೆ ಲಾಭದ ಮೊತ್ತವು ₹ 35,000 ರಷ್ಟಿದೆ. ಏನಾದರೂ ಕಡಿಮೆಯಾದರೆ, ಫಾತಿಮಾಳಿಗೆ ನೀಡಿದ ಭರವಸೆಯಂತೆ ರಾಧ ಮತ್ತು ಮೇರಿಯು ಅನುಪಾತ 3:2 ರಲ್ಲಿ ತುಂಬಿ ಕೊಡಬೇಕಾಗುತ್ತದೆ.

    ರೋಜು ಪುಸ್ತಕದಲ್ಲಿ ಅವಶ್ಯಕ ನಮೂದುಗಳನ್ನು ದಾಖಲಿಸಿ, ಪಾಲುದಾರರಿಗೆ ಹಂಚುವ ಲಾಭವನ್ನು ತೋರಿಸಿ.

    (ಉತ್ತರ: ರಾಧಾಳ ಕೊರತೆಯ ಪಾಲು ₹ 900. ಮತ್ತು ಮೇರಿ ₹ 600)

31. X Y ಮತ್ತು Z ಪಾಲುದಾರಿಕೆಯಲ್ಲಿದ್ದು, ಲಾಭ ಮತ್ತು ನಷ್ಟದ ಹಂಚಿಕೆಯ ಅನುಪಾತ ಕ್ರಮವಾಗಿ 3:2:1 ರಷ್ಟಿದೆ. ಕನಿಷ್ಟ ₹ 8,000 ದಷ್ಟು ಲಾಭದಲ್ಲಿನ ಪಾಲಿನ ಭರವಸೆಯನ್ನು Z ಗೆ X ಮತ್ತು Y ನೀಡುತ್ತಾರೆ. ಮಾಚ್ 31, 2015ರ ವರ್ಷಾಂತ್ಯಕ್ಕೆ ₹ 30,000ದಷ್ಟು ನಿವ್ವಳ ಲಾಭವಿದೆ. ಅಂತಿಮವಾಗಿ ಪ್ರತಿ ಪಾಲುದಾರನ ಮೊತ್ತವನ್ನು ಸೂಚಿಸಿ, ಲಾಭ ಮತ್ತು ನಷ್ಟದ ವಿತರಣಾ ಖಾತೆಯನ್ನು ತಯಾರಿಸಿ.

    (ಉತ್ತರ: ಲಾಭ: X ₹ 13,200, Y ₹ 8,800 ಮತ್ತು Z ₹ 8,000)

32. ಅರುಣಾ, ಬಾಬಿ ಮತ್ತು ಚಿಂಟು ಒಂದು ಸಂಸ್ಥೆಯ ಪಾಲುದಾರರಾಗಿದ್ದಾರೆ. ಲಾಭದ ಹಂಚಿಕೆಯ ಅನುಪಾತ 2:2:1 ರಷ್ಟಿದೆ. ಪಾಲುದಾರಿಕೆಯ ಒಪ್ಪಂದದ ಕರಾರಿನನ್ವಯ ಸಂಸ್ಥೆಯ ಲಾಭವನ್ನು ಪರಿಗಣಿಸಿದೆ. ಚಿಂಟು ಕನಿಷ್ಟ ₹60,000 ದಷ್ಟು ಪಡೆಯುತ್ತಾನೆ. ಚಿಂಟುಗೆ ನೀಡಿದ ಭರವಸೆಯಲ್ಲಿ ಏನಾದರೂ ಕೊರತೆಯಾದರೆ

ಅದನ್ನು ಅರುಣನು ತುಂಬಿಕೊಡುವುದು. ಲಾಭ ಮತ್ತು ನಷ್ಟದ ವಿತರಣಾ ಖಾತೆಯನ್ನು ತಯಾರಿಸಿ, ಪಾಲುದಾರರಿಗೆ ಹಂಚುವ ಲಾಭವನ್ನು ತೋರಿಸಿ, 2015ರ ಮತ್ತು 16ರ ಲಾಭವು ಕ್ರಮವಾಗಿ (1) ₹ 2,50,000 (2) ₹ 3,60,000 ಇದ್ದಾಗ,

(ಉತ್ತರ: (1) ಲಾಭಃ ಅರುಣ್ ₹ 90,000 . ಬಾಬಿ ₹ 1,00,000 ಮತ್ತು ಚಿಂಟು ₹ 60,000.

(2) ಅರುಣ ಗೆ ಲಾಭ ₹ 1,44,000, ಬಾಬಿ ₹ 1,44,000 ಮತ್ತು ಚಿಂಟು ₹ 72,000)

33. ಅಶೋಕ ಮತ್ತು ಬ್ರಿಜೆಶ್ ಮತ್ತು ಚೀನಾ ಪಾಲುದಾರರಾಗಿದ್ದಾರೆ, ಲಾಭ ಮತ್ತು ನಷ್ಟವನ್ನು ಅನುಪಾತ 2ಃ2ಃ1 ರಲ್ಲಿ ಹಂಚಿಕೊಳ್ಳುತ್ತಾರೆ. ಯಾವುದೇ ವರ್ಷದಲ್ಲಿ ಚೀನಾಗೆ ₹ 20,000 ಕ್ಕಿಂತ ಕಡಿಮೆಯಿಲ್ಲದಷ್ಟು ಪಾಲನ್ನು ನೀಡುವುದಾಗಿ ಅಶೋಕ ಮತ್ತು ಬ್ರಿಜೇಶ್ ಭರವಸೆ ನೀಡುತ್ತಾರೆ. ಮಾರ್ಚ್ 31, 2015 ರ ವರ್ಷಾಂತ್ಯಕ್ಕೆ ನಿವ್ವಳ ಲಾಭದ ಮೊತ್ತವು ₹70,000 ಇದೆ. ಲಾಭ ಮತ್ತು ನಷ್ಟದ ವಿತರಣಾ ಖಾತೆಯನ್ನು ತಯಾರಿಸಿ.

(ಉತ್ತರ: ಅಶೋಕನ ಲಾಭ ₹ 25,000, ಬ್ರಿಜೇಶ ₹ 25,000 ಮತ್ತು ಚೀನಾ ₹ 20,000)

34. ರಾಮ್, ಮೋಹನ್ ಮತ್ತು ಸೋಹನ್ ಪಾಲುದಾರರಾಗಿದ್ದಾರೆ, ಇವರು ಕ್ರಮವಾಗಿ ₹ 5,00,000, ₹ 2,50,000 ಮತ್ತು ₹ 2,00,000 ಬಂಡವಾಳ ಹಾಕಿದ್ದಾರೆ. ವಾರ್ಷಿಕ ಶೇ. 10 ರಷ್ಟು ಬಂಡವಾಳದ ಮೇಲಿನ ಬಡ್ಡಿ ನೀಡಿದ ನಂತರ ಈ ಮುಂದಿನಂತೆ ಲಾಭವನ್ನು ಭಾಗ ಮಾಡಬಹುದಾಗಿದೆ.

ರಾಮ 1/2, ಮೋಹನ್ 1/3 ಮತ್ತು ಸೋಹನ್ 1/6, ಆದರೆ ಯಾವುದೇ ವರ್ಷದಲ್ಲಿ ಸೋಹನ್‌ನಿಗೆ ₹ 25,000 ಕ್ಕಿಂತ ಕಡಿಮೆಯಿಲ್ಲದಷ್ಟು ಪಾಲನ್ನು ನೀಡುವುದಾಗಿ ರಾಮ ಮತ್ತು ಮೋಹನ್ ಭರವಸೆ ನೀಡುತ್ತಾರೆ. ಬಂಡವಾಳದ ಮೇಲಿನ ಬಡ್ಡಿ ಹಾಕುವುದಕ್ಕಿಂತ ಪೂರ್ವದಲ್ಲಿ ಮಾರ್ಚ್ 31, 2015 ರ ವರ್ಷಾಂತ್ಯಕ್ಕೆ ₹ 2,00,000 ನಿವ್ವಳ ಲಾಭವಿದೆ.

ಲಾಭದ ಹಂಚಿಕೆಯನ್ನು ತೋರಿಸಿರಿ.

(ಉತ್ತರ: ಲಾಭಃ ರಾಮ ₹ 48,000, ಮೋಹನ್ ₹ 32,000 ಮತ್ತು ಸೋಹನ್ ₹ 25,000)

35. ಅಮಿತ್, ಬಬಿತ್ ಮತ್ತು ಸೋನ ಪಾಲುದಾರಿಕೆ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಈ ಮುಂದಿನ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಲಾಭದ ಹಂಚಿಕೆಯ ಅನುಪಾತ 3ಃ2ಃ1 ರಷ್ಟಿದೆ.

(i) ಯಾವುದೇ ವರ್ಷದಲ್ಲಿ ₹15,000 ಕ್ಕಿಂತ ಕಡಿಮೆಯಿಲ್ಲದಷ್ಟು ಸೋನಾಳಿಗೆ ಲಾಭದಲ್ಲಿ ಪಾಲನ್ನು ನೀಡುವುದು.

(ii) ಬಬಿತಾ ಅವರು ಸಂಸ್ಥೆಯಿಂದ ಗಳಿಸಿದ ಒಟ್ಟು ಶುಲ್ಕವು ಐದು ವರ್ಷಗಳ ಮುಂದುವರೆಯುವಿಕೆಯ ಸರಾಸರಿ ಮೊತ್ತದ ಶುಲ್ಕಕ್ಕೆ ಸಮನಾಗಿರುತ್ತದೆ ಎಂಬ ಪರಿಣಾಮಕ್ಕೆ ಭರವಸೆ ನೀಡುತ್ತದೆ. ಅದು ಅವಳು ಒಬ್ಬಳೇ ವೃತ್ತಿಯಲ್ಲಿ ಮುಂದುವರೆಯುತ್ತಿರುವಾಗ (ಅದು ₹25,000). ಮಾರ್ಚ್ 31, 2015ರ ವರ್ಷಾಂತ್ಯಕ್ಕೆ ನಿವ್ವಳ ಲಾಭವು ₹75,000 ಇದೆ. ಸಂಸ್ಥೆಯಲ್ಲಿ ಬಬಿತ್ ಗಳಿಸಿದ ಒಟ್ಟು ಮೊತ್ತವು ₹16,000.

ಲಾಭ ಮತ್ತು ನಷ್ಟದ ವಿತರಣಾ ಖಾತೆಯನ್ನು ತೋರಿಸಿ (ಒಬ್ಬಳಿಗೆ ಪರಿಣಾಮ ನೀಡಿದ ನಂತರ )

(ಉತ್ತರ: ಬಂಡವಾಳ ಖಾತೆಗಳಿಗೆ ಲಾಭದ ವರ್ಗಾವಣೆ; ಅಮಿತ್ ₹ 41,400, ಬಬಿತ್ ₹ 27,600 ಮತ್ತು ಸೋನ ₹ 15,000)

**ಹಿಂದಿನ ಹೊಂದಾಣಿಕೆಗಳು:**

36. ಮಾರ್ಚ 31, 2015 ರ ವರ್ಷಾಂತಕ್ಕೆ X, Y ಮತ್ತು Z ಇವರ ನಿವ್ವಳ ಲಾಭವು ₹ 60,000 ಇದೆ. ಈ ಲಾಭವನ್ನು ಇವರ ಮಧ್ಯ 3:1:1 ರ ಅನುಪಾತದಲ್ಲಿ ಹಂಚಿಕೆ ಮಾಡಲಾಗಿದೆ.

ತರುವಾಯ ಈ ಕೆಳಗೆ ತಿಳಿಸಲಾದ ವಹಿವಾಟುಗಳು ಲೆಕ್ಕದ ಪುಸ್ತಕಗಳಲ್ಲಿ ದಾಖಲೆಯಾಗದಿರುವುದು ಪತ್ತೆಯಾಗಿದೆ.

(i) ಬಂಡವಾಳದ ಮೇಲೆ ವಾರ್ಷಿಕ ಶೇ. 5 ರಷ್ಟು ಬಡ್ಡಿ.

(ii) ಸ್ವಂತಕ್ಕೆ ಹಿಂಪಡೆದ ಮೊತ್ತದ ಮೇಲಿನ ಬಡ್ಡಿಯು, X ₹700, Y ₹ 500 ಮತ್ತು Z ₹300.

(iii) ಪಾಲುದಾರರ ವಾರ್ಷಿಕ ವೇತನವು X ₹ 1,000 ಮತ್ತು Y ₹ 1,500.

ಪಾಲುದಾರರ ಬಂಡವಾಳ ಖಾತೆಗಳ ಶಿಲ್ಕು, X ₹ 1,00,000, Y ₹ 80,000 ಮತ್ತು Z ₹ 60,000 ರಷ್ಟು ಇರುತ್ತದೆ.

ಹೊಂದಾಣಿಕೆ ನಮೂದುಗಳನ್ನು ದಾಖಲಿಸಿರಿ.

(ಉತ್ತರ: X ಖರ್ಚು ₹ 2,700, Y ಜಮಾ ₹ 2,600 ಮತ್ತು Z ಜಮಾ ₹ 100)

37. ಹ್ಯಾರಿ, ಪೋರ್ಟರ್ ಮತ್ತು ಅಲಿ ರವರು ಒಂದು ಸಂಸ್ಥೆಯಲ್ಲಿ ಪಾಲುದಾರರಾಗಿದ್ದು, ಲಾಭವನ್ನು 2:2:1 ರ ಅನುಪಾತದಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಅಲಿ ಯು, ಹ್ಯಾರಿ ಮತ್ತು ಪೋರ್ಟರ್ ಜೊತೆಗೆ ಲಾಭದಲ್ಲಿ ಸಮನಾಗಿ ಪಾಲು ಪಡೆಯಬೇಕೆಂದು ಬಯಸುತ್ತಾನೆ ಹಾಗೂ ಹಿಂದಿನ ಮೂರು ವರ್ಷಗಳಿಂದ ಪೂರ್ವಾನ್ವಯವಾಗುವಂತೆ ಸಂಸ್ಥೆಯ ಲಾಭ ಹಂಚಿಕೆಯ ಅನುಪಾತದಲ್ಲಿ ಬದಲಾವಣೆಯಾಗಬೇಕೆಂದೂ ಸಹ ಬಯಸುತ್ತಾನೆ. ಈ ವಿಷಯದಲ್ಲಿ ಹ್ಯಾರಿ ಮತ್ತು ಪೋರ್ಟರ್ ಒಪ್ಪಂದ ಮಾಡಿಕೊಂಡಿದ್ದಾರೆ.

ಹಿಂದಿನ ಮೂರು ವರ್ಷಗಳ ಲಾಭಗಳು ಈ ರೀತಿ ಇವೆ:

| | ₹ |
|---|---|
| 2013–14 | 22,000 |
| 2014–15 | 24,000 |
| 2015–16 | 29,000 |

ಏಕ ಹೊಂದಾಣಿಕೆ ರೋಜು ದಾಖಲೆಯ ಮೂಲಕ ಲಾಭದ ಹೊಂದಾಣಿಕೆಯನ್ನು ತೋರಿಸಿರಿ.

(ಉತ್ತರ: ಹ್ಯಾರಿ ಖರ್ಚು ₹ 5,000, ಪೋರ್ಟರ್ ಖರ್ಚು ₹ 5,000 ಮತ್ತು ಅಲಿ ಜಮಾ ₹ 10,000)

38. ಮನ್ನು ಮತ್ತು ಸೃಷ್ಠಿ ರವರು ಒಂದು ಸಂಸ್ಥೆಯಲ್ಲಿ ಪಾಲುದಾರರಾಗಿದ್ದು, ಲಾಭವನ್ನು 3:2 ರ ಅನುಪಾತದಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಮಾರ್ಚ 31, 2015 ರ ವರ್ಷಾಂತ್ಯಕ್ಕೆ ಸಂಸ್ಥೆಯ ಅಢಾವೆ ಪತ್ರಿಕೆಯು ಈ ಕೆಳಗಿನಂತಿದೆ.

**ಮಾರ್ಚ 31, 2015 ರಂದು ಇದ್ದಂತೆ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | | ಮೊತ್ತ (₹) | ಆಸ್ತಿಗಳು | | ಮೊತ್ತ (₹) |
|---|---|---|---|---|---|
| ಮನ್ನು ನ ಬಂಡವಾಳ | 30,000 | | ಸ್ವಂತಕ್ಕೆ ಹಿಂಪಡೆತ: | | |
| ಸೃಷ್ಠಿ ಯ ಬಂಡವಾಳ | 10,000 | 40,000 | ಮನ್ನು | 4,000 | |
| | | | ಸೃಷ್ಠಿ | 2,000 | 6,000 |
| | | | ಇತರೆ ಆಸ್ತಿಗಳು | | 34,000 |
| | | **40,000** | | | **40,000** |

ಮಾರ್ಚ 31, 2015 ರ ವರ್ಷಾಂತ್ಯದ ಲಾಭ ₹ 5,000 ಗಳನ್ನು ಒಪ್ಪಂದದ ಅನುಪಾತದ ಪ್ರಕಾರ ಹಂಚಲಾಗಿದೆ. ಆದರೆ, ಬಂಡವಾಳದ ಮೇಲಿನ ವಾರ್ಷಿಕ ಶೇ. 5 ರಷ್ಟು ಬಡ್ಡಿ ಮತ್ತು ಸ್ವಂತಕ್ಕೆ ಹಿಂಪಡೆತದ ಮೇಲಿನ ವಾರ್ಷಿಕ ಶೇ. 6 ರಷ್ಟು ಬಡ್ಡಿಯು ಅಜಾಗರೂಕತೆಯಿಂದಾಗಿ ವಿಚಾರಣೆಯಲ್ಲಿವೆ. ಸ್ವಂತಕ್ಕೆ ಹಿಂಪಡೆತದ ಮೇಲಿನ ಬಡ್ಡಿಯನ್ನು ಆರು ತಿಂಗಳ ಸರಾಸರಿ ಆಧಾರದ ಮೇಲೆ ಸರಿದೂಗಿಸಲಾಗಿದೆ.

ಹೊಂದಾಣಿಕೆಯ ನಮೂದುಗಳನ್ನು ನೀಡಿರಿ.

(ಉತ್ತರ: ಮನ್ನು ಖರ್ಚು ₹ 288, ಮತ್ತು ಸೃಷ್ಠಿ ಜಮಾ ₹ 288)

39. ಮಾರ್ಚ 31, 2015 ರಂದು ಲಾಭ, ಸ್ವಂತಕ್ಕೆ ಹಿಂಪಡೆತ ಮುಂತಾದವುಗಳನ್ನು ಹೊಂದಾಣಿಕೆ ಮಾಡಿದ ನಂತರ ಹೆಲ್ವಿನ್, ಮೋನು ಮತ್ತು ಅಹ್ಮದ್ ಇವರ ಬಂಡವಾಳ ಖಾತೆಗಳ ಶಿಲ್ಕು ಕ್ರಮವಾಗಿ ₹ 80,000, ₹ 60,000 ಮತ್ತು ₹ 40,000 ಇರುತ್ತದೆ. ತರುವಾಯ, ಬಂಡವಾಳದ ಮೇಲಿನ ಬಡ್ಡಿ ಮತ್ತು ಸ್ವಂತಕ್ಕೆ ಹಿಂಪಡೆದ ಮೊತ್ತದ ಮೇಲಿನ ಬಡ್ಡಿಯ ದಾಖಲೆ ಮಾಡುವುದು ಮಾಡುವುದು ಬಿಟ್ಟುಹೋಗಿರುವುದು ಬೆಳೆಯುತ್ತದೆ.

ಪಾಲುದಾರರು ತಮ್ಮ ಬಂಡವಾಳದ ಮೇಲೆ ವಾರ್ಷಿಕ ಶೇ. 5 ರಷ್ಟು ಬಡ್ಡಿ ಪಡೆಯಲು ಹಕ್ಕುಳ್ಳವರಾಗಿರುತ್ತಾರೆ. ವರ್ಷಾವಧಿಯಲ್ಲಿ ಹೆಲ್ವಿನ್ ₹ 20,000, ಮೋನು ₹ 15,000 ಮತ್ತು ಅಹ್ಮದ್ ₹9,000 ಗಳಷ್ಟು ಹಿಂಪಡೆದಿದ್ದಾರೆ. ಪಾಲುದಾರರ ಹಿಂಪಡೆತದ ಮೇಲಿನ ಬಡ್ಡಿಯು ಹೆಲ್ವಿನ್ ₹ 500, ಮೋನು ₹ 360 ಮತ್ತು ಅಹ್ಮದ್ ₹ 200 ಗಳಷ್ಟು ಆಕರಿಸಲಾಗಿದೆ. ವರ್ಷದ ನಿವ್ವಳ ಲಾಭವು ₹ 1,20,000 ಇದ್ದು, ಲಾಭ ಹಂಚಿಕೆಯ ಅನುಪಾತವು 3:2:1 ರಷ್ಟು ಇರುತ್ತದೆ.

ಅಗತ್ಯ ಹೊಂದಾಣಿಕೆ ನಮೂದುಗಳನ್ನು ದಾಖಲಿಸಿರಿ.

(ಉತ್ತರ : ಹೆಲ್ವಿನ್(ಖರ್ಚು) ₹ 570, ಮೋನು (ಜಮಾ) ₹ 10 ಮತ್ತು ಅಹ್ಮದ್ (ಜಮಾ) ₹ 560)

40. ಆಜಾದ್ ಮತ್ತು ಬೆನ್ನಿ ಯವರು ಸಮಾನ ಪಾಲುದಾರರಾಗಿದ್ದಾರೆ. ಅವರ ಬಂಡವಾಳವು ಕ್ರಮವಾಗಿ ₹40,000 ಮತ್ತು ₹ 80,000 ರಷ್ಟು ಇದೆ. ವರ್ಷದ ಲೆಕ್ಕ ಪತ್ರಗಳನ್ನು ತಯಾರಿಸಿದ ನಂತರ ಪಾಲುದಾರಿಕೆ ಒಪ್ಪಂದದಲ್ಲಿ ಅನುಮತಿಸಿದ ಶೇ. 5 ರಷ್ಟು ಬಡ್ಡಿಯನ್ನು ಲಾಭ ಹಂಚಿಕೆ ಮಾಡುವ ಮುಂಚೆ ಬಂಡವಾಳ ಖಾತೆಗಳಿಗೆ ಜಮೆ ಮಾಡದಿರುವುದು ತಿಳಿದು ಬಂದಿದೆ. ಇದಕ್ಕಾಗಿ ಮುಂದಿನ ವರ್ಷದ ಆರಂಭದಲ್ಲಿ ಒಂದು ಹೊಂದಾಣಿಕೆ ದಾಖಲೆಯನ್ನು ಮಾಡಲು ನಿರ್ಧರಿಸಲಾಯಿತು.

ಅವಶ್ಯಕ ರೋಜು ದಾಖಲೆಗಳನ್ನು ದಾಖಲಿಸಿರಿ.

(ಉತ್ತರ: ಅಜಾದ (ಖರ್ಚು) ₹ 1,000 ಮತ್ತು ಬೆನ್ನಿ (ಜಮಾ) ₹ 1,000)

41. ಕವಿತ ಮತ್ತು ಪ್ರದೀಪ ರವರು ಪಾಲುದಾರರಾಗಿದ್ದಾರೆ. ಲಾಭವನ್ನು 3:2 ರ ಅನುಪಾತದಲ್ಲಿ ಹಂಚಿಕೊಳ್ಳುತ್ತಾರೆ. ಅವರು ಚಂದನ ರವರನ್ನು ವ್ಯವಸ್ಥಾಪಕರನ್ನಾಗಿ ನೇಮಿಸಿ, ಪ್ರತಿ ತಿಂಗಳು ₹750 ರಂತೆ ವೇತನ ಪಾವತಿ ಮಾಡುತ್ತಿದ್ದಾರೆ. ಚಂದನ ರವರು ಸಂಸ್ಥೆಯಲ್ಲಿ ₹ 20,000 ಠೇವಣಿ ಇಟ್ಟಿದ್ದು, 2001 ರ ವರ್ಷಾಂತ್ಯಕ್ಕೆ ಅದರ ಮೇಲೆ ಶೇ. 9 ರಷ್ಟು ಬಡ್ಡಿ ಪಾವತಿ ಮಾಡಲಾಗುವುದು. ( ಲಾಭ ವಿತರಣೆಯ ನಂತರ), ಜನವರಿ 1, 1998 ರಿಂದ ಅನ್ವಯವಾಗುವಂತೆ ಲಾಭದಲ್ಲಿ 1/6 ರಷ್ಟು ಪಾಲಿನೊಂದಿಗೆ ಚಂದನ ರವರನ್ನು ಸಂಸ್ಥೆಯ ಪಾಲುದಾರರೆಂದು ಪರಿಗಣಿಸಿ, ಅವಳ ಠೇವಣಿ ಮೊತ್ತವನ್ನು ಬಂಡವಾಳವೆಂದು ಪರಿಗಣಿಸಿ, ಇತರೇ ಪಾಲುದಾರರಂತೆ ಶೇ. 6 ರಷ್ಟು ಬಡ್ಡಿ ನೀಡಲು ನಿರ್ಧರಿಸಲಾಯಿತು.

ಬಂಡವಾಳದ ಮೇಲೆ ಬಡ್ಡಿಯನ್ನು ಅನುಮತಿಸಿದ ನಂತರ, ಸಂಸ್ಥೆಯ ಲಾಭವು ಈ ಕೆಳಗಿನಂತಿದೆ.

| | | (₹) |
|---|---|---|
| 2012 | ಲಾಭ | 59,000 |
| 2013 | ಲಾಭ | 62,000 |
| 2014 | ನಷ್ಟ | (4,000) |
| 2015 | ಲಾಭ | 78,000 |

ಮೇಲಿನವುಗಳ ಪರಿಣಾಮ ಭಿತ್ತರಿಸುವ ಅವಶ್ಯಕ ರೋಜು ದಾಖಲೆಗಳನ್ನು ದಾಖಲಿಸಿರಿ.

(ಉತ್ತರ: ಕವಿತ (ಖರ್ಚು) ₹ 300, ಪ್ರದೀಪ (ಖರ್ಚು) ₹ 200 ಮತ್ತು ಚಂದನ (ಜಮಾ) ₹ 500)

42. ಮೋಹನ್, ವಿಜಯ್ ಮತ್ತು ಅನಿಲ್ ರವರು ಪಾಲುದಾರರಾಗಿದ್ದಾರೆ. ಅವರ ಬಂಡವಾಳ ಖಾತೆಗಳ ಶಿಲ್ಕು ಕ್ರಮವಾಗಿ ₹30,000, ₹ 25,000 ಮತ್ತು ₹ 20,000 ಇರುತ್ತದೆ. ಮಾರ್ಚ 31, 2015 ರ ವರ್ಷಾಂತಕ್ಕೆ ಸಂಸ್ಥೆಯ ವಾರ್ಷಿಕ ಲಾಭದ ಮೊತ್ತವು ₹ 24,000 ಪಾಲುದಾರರಿಗೆ ಅವರು ಹಂಚಿಕೊಳ್ಳುವ ಅನುಪಾತದನುಸಾರ ಜಮಾ ಮಾಡಲಾಗಿದೆ. ವರ್ಷಾವಧಿಯಲ್ಲಿ ಮೋಹನ್, ವಿಜಯ್ ಮತ್ತು ಅನಿಲ್ ರವರು ಸ್ವಂತಕ್ಕಾಗಿ ಹಿಂಪಡೆತವು ಕ್ರಮವಾಗಿ ₹ 5000, ₹4000 ಮತ್ತು ₹ 3000 ಇರುತ್ತದೆ. ತರುವಾಯ, ಈ ಕೆಳಗಿನ ಲೋಪಗಳು ಗಮನಕ್ಕೆ ಬಂದಿವೆ:

(ಎ) ಬಂಡವಾಳದ ಮೇಲೆ ವಾರ್ಷಿಕ ಶೇ. 10 ರಷ್ಟು ಬಡ್ಡಿಯನ್ನು ಆಕರಿಸಿರುವುದಿಲ್ಲ.

(ಬಿ) ಸ್ವಂತಕ್ಕಾಗಿ ಹಿಂಪಡೆತದ ಮೇಲಿನ ಬಡ್ಡಿ: ಮೋಹನ್ ರ ₹ 250, ವಿಜಯ ರ ₹200 ಮತ್ತು ಅನಿಲ್ ರ ₹ 150 ಗಳನ್ನು ಲೆಕ್ಕ ಪುಸ್ತಕಗಳಲ್ಲಿ ದಾಖಲಿಸಿರುವುದಿಲ್ಲ.

ರೋಜು ದಾಖಲೆಗಳ ಮೂಲಕ ಅವಶ್ಯಕ ತಿದ್ದುಪಡಿಗಳನ್ನು ದಾಖಲಿಸಿರಿ.

(ಉತ್ತರ: ₹450ರಷ್ಟು ಅನಿಲ್ ರ ಬಂಡವಾಳ ಖಾತೆಗೆ ಖರ್ಚು, ಮತ್ತು ₹450.ರಷ್ಟು ಮೋಹನ್ ರ ಬಂಡವಾಳ ಖಾತೆಗೆ ಜಮಾ.)

43. ಅಂಜು, ಮಂಜು ಮತ್ತು ಮಮತ ರವರು ಪಾಲುದಾರರಾಗಿದ್ದಾರೆ. ಅವರ ಸ್ಥಿರ ಬಂಡವಾಳವು ಕ್ರಮವಾಗಿ ₹10,000, ₹ 8,000 ಮತ್ತು 6,000 ಇರುತ್ತದೆ. ಪಾಲುದಾರಿಕೆಯ ಒಡಂಬಡಿಕೆಯ ಪ್ರಕಾರ ಬಂಡವಾಳದ ಮೇಲೆ ಶೇ. 5 ರಷ್ಟು ಬಡ್ಡಿಯನ್ನು ಅನುಮತಿಸಲಾಗಿದೆ. ಆದರೆ, ಇದಕ್ಕೆ ಸಂಬಂಧಪಟ್ಟಂತೆ ಹಿಂದಿನ 3 ವರ್ಷಗಳಿಂದ ದಾಖಲೆಗಳನ್ನು ಮಾಡಿರುವುದಿಲ್ಲ. ಆ ವರ್ಷಗಳ ಲಾಭ ಹಂಚಿಕೆಯ ಅನುಪಾತವು ಈ ಕೆಳಗಿನಂತಿದೆ.

| ವರ್ಷ | ಅಂಜು | ಮಂಜು | ಮಮತ |
|---|---|---|---|
| 2013 | 4 | 3 | 5 |
| 2014 | 3 | 2 | 1 |
| 2015 | 1 | 1 | 1 |

ನಾಲ್ಕನೆಯ ವರ್ಷದ ಆರಂಭ ಅಂದರೆ, ಜನವರಿ 2015 ರಲ್ಲಿ ಇದ್ದಂತೆ ಅವಶ್ಯಕ ಮತ್ತು ಹೊಂದಾಣಿಕೆ ದಾಖಲೆಗಳನ್ನು ಬರೆಯಿರಿ.

(ಉತ್ತರ: ಮಮತ ಖರ್ಚು ₹200, ಅಂಜು ಜಮಾ ₹100 ಮತ್ತು ಮಂಜು ಜಮಾ ₹100)

44. ದಿನಕರ ಮತ್ತು ರವೀಂದ್ರ ಪಾಲುದಾರರಾಗಿದ್ದಾರೆ. ಇವರ ಲಾಭ ಮತ್ತು ನಷ್ಟದ ಅನುಪಾತವು 2:1 ರಷ್ಟು ಇರುತ್ತದೆ. ಡಿಸೆಂಬರ್ 31, 2015 ರ ವರ್ಷಾಂತ್ಯಕ್ಕೆ ಲೆಕ್ಕಪುಸ್ತಕಗಳಿಂದ ಪಡೆಯಲಾದ ಶಿಲ್ಕುಗಳು ಈ ಕೆಳಗಿನಂತಿವೆ.

| ಖಾತೆಯ ಹೆಸರು | ಖರ್ಚು ಮೊತ್ತ (₹) | ಜಮಾ ಮೊತ್ತ (₹) |
|---|---|---|
| ಬಂಡವಾಳಗಳು: | | |
| ದಿನಕರ | – | 2,35,000 |
| ರವೀಂದ್ರ | – | 1,63,000 |
| ಸ್ವಂತಕ್ಕೆ ಹಿಂಪಡೆತ; | | |
| ದಿನಕರ | 6,000 | – |
| ರವೀಂದ್ರ | 5,000 | – |
| ಆರಂಭಿಕ ದಾಸ್ತಾನು | 35,100 | – |
| ಖರೀದಿ ಮತ್ತು ಮಾರಾಟ | 2,85,000 | 3,75,000 |
| ಗಾಡಿ ಬಾಡಿಗೆ | 2,200 | – |
| ವಾಪಾಸಾತಿಗಳು | 3,000 | 2,200 |
| ಲೇಖನ ಸಾಮಾಗ್ರಿಗಳು | 1.200 | – |
| ಕೂಲಿ | 12,500 | – |
| ಬರತಕ್ಕ ಹುಂಡಿಗಳು ಮತ್ತು ಕೊಡತಕ್ಕ ಹುಂಡಿಗಳು | 45,000 | 32,000 |
| ಸೋಡಿ | 900 | 400 |
| ವೇತನ | 12,000 | – |
| ಬಾಡಿಗೆ ಮತ್ತು ತೆರಿಗೆಗಳು | 18,000 | – |
| ವಿಮೆ ಕಂತು | 2,400 | – |
| ಅಂಚೆ ವೆಚ್ಚ | 300 | – |
| ಒಟ್ಟು ವೆಚ್ಚಗಳು | 1,100 | – |
| ದಲ್ಲಾಳಿ | – | 3,200 |
| ಸಾಲಗಾರರು (ಋಣಿಗಳು) ಮತು ಸಾಹುಕಾರರು (ಧಣಿಗಳು) | 95,000 | 40,000 |
| ಭೂಮಿ | 1.20,000 | – |
| ಸ್ಥಾವರ ಮತ್ತು ಯಂತ್ರೋಪಕರಣಗಳು | 80,000 | – |
| ಹೂಡಿಕೆ | 1,00,000 | – |
| ಪೀಠೋಪಕರಣ ಮತ್ತು ಬಿಡಿಭಾಗಗಳು | 26,000 | – |
| ವಸೂಲಾಗದ ಸಾಲ | 2,000 | – |
| ವಸೂಲಾಗದ ಸಾಲದ ನಿಧಿ | – | 4,600 |
| ಸಾಲ | – | 35,000 |
| ಕಾನುನು ವೆಚ್ಚಗಳು | 200 | – |
| ಲೆಕ್ಕಪರಿಶೋಧನಾ ಶುಲ್ಕ | 1,800 | – |
| ಕೈಯಲ್ಲಿರುವ ನಗದು | 13,500 | – |
| ಬ್ಯಾಂಕಿನಲ್ಲಿರುವ ನಗದು | 23,000 | – |
| | **8,91,200** | **8,91,200** |

ಡಿಸೆಂಬರ್ 31, 2015 ರ ವರ್ಷಾಂತ್ಯಕ್ಕೆ ಕೆಳಗಿನ ಹೊಂದಾಣಿಕೆಗಳೊಂದಿಗೆ ಅಂತಿಮ ಖಾತೆಗಳನ್ನು ತಯಾರಿಸಿರಿ:

(ಎ) ಡಿಸೆಂಬರ್ 31, 2015 ರಲ್ಲಿದ್ದಂತೆ ದಾಸ್ತಾನು ₹ 42,500.

(ಬಿ) ಸಾಲಗಾರರ ಮೇಲೆ ಶೇ. 5 ರಷ್ಟು ಸಂಶಯಾಸ್ಪದ ಸಾಲಗಳ ನಿಧಿ ತೆಗೆಯಿರಿ.

(ಸಿ) ಬಾಕಿ ಬಾಡಿಗೆ ₹ 1,600

(ಡಿ) ಬಾಕಿ ಕೂಲಿ ₹ 1,200

(ಇ) ಬಂಡವಾಳದ ಮೇಲೆ ವಾರ್ಷಿಕ ಶೇ. 4 ರಷ್ಟು ಬಡ್ಡಿ ನೀಡಲು ಅನುಮತಿಸಿದೆ ಮತ್ತು ಹಿಂಪಡೆತಗಳ ಮೇಲೆ ವಾರ್ಷಿಕ ಶೇ. 6 ರಷ್ಟು ಬಡ್ಡಿ ಆಕರಿಸಲಾಗುವುದು..

(ಎಫ್) ವಾರ್ಷಿಕ ವೇತನದಲ್ಲಿ ದಿನಕರ ಮತ್ತು ರವೀಂದ್ರರವರ ಹಕ್ಕು ₹2,000

(ಜಿ) ದಲ್ಲಾಳಿಯಲ್ಲಿ ರವೀಂದ್ರರವರ ಹಕ್ಕು ₹1,500

(ಹೆಚ್) ಕಟ್ಟಡದ ಮೇಲೆ ಶೇ. 4 ರಷ್ಟು, ಸ್ಥಾವರ ಮತ್ತು ಯಂತ್ರೋಪಕರಣದ ಮೇಲೆ ಶೇ. 6 ರಷ್ಟು, ಮತ್ತು ಪೀಠೋಪಕರಣಗಳ ಮತ್ತು ಬಿಡಿಭಾಗಗಳ ಮೇಲೆ ಶೇ. 5 ರಷ್ಟು ಸವಕಳಿ ಆಕರಿಸುವುದು.

(ಐ) ಸಾಲದ ಮೇಲಿನ ಬಡ್ಡಿ ಬಾಕಿ ₹350.

(ಒಟ್ಟು ಲಾಭ ₹ 81,500, ನಿವ್ವಳ ಲಾಭ ₹ 32,200, ದಿನಕರನ ಬಂಡವಾಳ ₹ 2,47,627, ರವೀಂದ್ರನ ಬಂಡವಾಳ ₹ 1,71,573, ಅಢಾವೆ ಪತ್ರಿಕೆಯ ಒಟ್ಟು ಮೊತ್ತ ₹ 5,29,350)

45. ಕಾಜೋಲ್ ಮತ್ತು ಸನ್ನಿ ಪಾಲುದಾರರಾಗಿದ್ದಾರೆ. ಇವರ ಲಾಭ ಮತ್ತು ನಷ್ಟ ಅನುಪಾತವು 3:2 ರಷ್ಟು ಇರುತ್ತದೆ. ಡಿಸೆಂಬರ್ 31, 2015 ರ ವರ್ಷಾಂತ್ಯಕ್ಕೆ ಲೆಕ್ಕಪುಸ್ತಕಗಳಿಂದ ಪಡೆಯಲಾದ ಶಿಲ್ಕುಗಳು ಈ ಕೆಳಗಿನಂತಿವೆ.

| ಖಾತೆಯ ಹೆಸರು | ಖರ್ಚು ಮೊತ್ತ (₹) | ಜಮಾ ಮೊತ್ತ (₹) |
|---|---|---|
| ಬಂಡವಾಳಗಳು: | | |
| ಕಾಜೋಲ್ | – | 1,15,000 |
| ಸನ್ನಿ | – | 91,000 |
| ಚಾಲ್ತಿ ಖಾತೆಗಳು( 1–4–2015 ರಂದಿದ್ದಂತೆ); | | |
| ಕಾಜೋಲ್ | – | 4,500 |
| ಸನ್ನಿ | 3,200 | – |
| ಸ್ವಂತಕ್ಕೆ ಹಿಂಪಡೆತ: | | |
| ಕಾಜೋಲ್ | 6,000 | – |
| ಸನ್ನಿ | 3,000 | – |
| ಆರಂಭಿಕ ದಾಸ್ತಾನು | 22,700 | – |
| ಖರೀದಿ ಮತ್ತು ಮಾರಾಟ | 1,65,000 | 2,35,800 |
| ಬಂದರು ಬಾಡಿಗೆ | 1,200 | – |
| ವಾಪಾಸಾತಿಗಳು | 2,000 | 3,200 |
| ಮುದ್ರಣ ಮತ್ತು ಲೇಖನ ಸಾಮಾಗ್ರಿಗಳು | 900 | – |
| ಕೂಲಿ | 5.500 | – |
| ಬರತಕ್ಕ ಹುಂಡಿಗಳು ಮತ್ತು ಕೊಡತಕ್ಕ ಹುಂಡಿಗಳು | 25,000 | 21,000 |
| ಸೋಡಿ | 400 | 800 |
| ವೇತನ | 6,000 | – |
| ಬಾಡಿಗೆ | 7,200 | – |
| ವಿಮೆ ಕಂತು | 2,000 | – |
| ಪ್ರಯಾಣದ ವೆಚ್ಚ | 700 | – |
| ಒಟ್ಟು ವೆಚ್ಚಗಳು | 1,100 | – |
| ದಲ್ಲಾಳಿ | – | 1,600 |
| ಸಾಲಗಾರರು (ಋಣಿಗಳು) ಮತು ಸಾಹುಕಾರರು (ಧಣಿಗಳು) | 74,000 | 78,000 |
| ಕಟ್ಟಡ | 85,000 | – |
| ಸ್ಥಾವರ ಮತ್ತು ಯಂತ್ರೋಪಕರಣಗಳು | 70,000 | – |
| ಮೋಟಾರ್ ಕಾರ್ | 60,000 | – |
| ಪೀಠೋಪಕರಣ ಮತ್ತು ಬಿಡಿಭಾಗಗಳು | 15,000 | – |
| ವಸೂಲಾಗದ ಸಾಲ | 1,500 | – |
| ಸಂಶಯಾಸ್ಪದ ಸಾಲದ ನಿಧಿ | – | 2,200 |
| ಸಾಲ | – | 25,000 |
| ಕಾನುನು ವೆಚ್ಚಗಳು | 300 | – |
| ಲೆಕ್ಕಪರಿಶೋಧನಾ ಶುಲ್ಕ | 900 | – |
| ಕೈಯಲ್ಲಿರುವ ನಗದು | 7,500 | – |
| ಬ್ಯಾಂಕಿನಲ್ಲಿರುವ ನಗದು | 12,000 | – |
| | **5,78,100** | **5,78,100** |

ಡಿಸೆಂಬರ್ 31, 2015 ರ ವರ್ಷಾಂತಕ್ಕೆ ಕೆಳಗಿನ ಹೊಂದಾಣಿಕೆಗಳೊಂದಿಗೆ ಅಂತಿಮ ಖಾತೆಗಳನ್ನು ತಯಾರಿಸಿರಿ:

(ಎ) ಡಿಸೆಂಬರ್ 31, 2015 ರಲ್ಲಿದ್ದಂತೆ ದಾಸ್ತಾನು ₹ 37,500

(ಬಿ) ವಸೂಲಾಗದ ಸಾಲ ₹ 3,000; ಸಾಲಗಾರರ ಮೇಲೆ ಶೇ. 5ರಷ್ಟು ಸಂಶಯಾಸ್ಪದ ಸಾಲಗಳ ನಿಧಿ ತೆಗೆಯಿರಿ.

(ಸಿ) ಬಾಡಿಗೆ ಮುಂಗಡ ಪಾವತಿ ₹ 1,200

(ಡಿ) ಬಾಕಿ ಕೂಲಿ ₹ 2,200

(ಇ) ಬಂಡವಾಳದ ಮೇಲೆ ವಾರ್ಷಿಕ ಶೇ. 6 ರಷ್ಟು ಬಡ್ಡಿ ನೀಡಲು ಅನುಮತಿಸಿದೆ ಮತ್ತು ಹಿಂಪಡೆತಗಳ ಮೇಲೆ ವಾರ್ಷಿಕ ಶೇ. 5 ರಷ್ಟು ಬಡ್ಡಿ ಆಕರಿಸಲಾಗುವುದು.

(ಎಫ್) ಪ್ರತಿ ವರ್ಷಕ್ಕೆ ಕಾಜೋಲ್‌ರವರ ವೇತನದ ಹಕ್ಕು ₹ 2,000

(ಜಿ) ವಿಮೆ ಮುಂಗಡ ಪಾವತಿ ₹ 500

(ಎಫ್) ಕಟ್ಟಡದ ಮೇಲೆ ಶೇ. 4 ರಷ್ಟು, ಸ್ಥಾವರ ಮತ್ತು ಯಂತ್ರೋಪಕರಣದ ಮೇಲೆ ಶೇ. 5 ರಷ್ಟು, ಮೋಟಾರ್ ಕಾರ್ ಮೇಲೆ ಶೇ. 10 ರಷ್ಟು ಮತ್ತು ಪೀಠೋಪಕರಣ ಮತ್ತು ಬಿಡಿಭಾಗಗಳ ಮೇಲೆ ಶೇ. 5 ರಷ್ಟು ಸವಕಳಿ ಆಕರಿಸುವುದು.

(ಜಿ) ಜನವರಿ 20, 2015 ರಂದು ₹ 7,000 ಬೆಲೆ ಬಾಳುವ ಸರಕುಗಳು ಅಗ್ನಿಯಿಂದ ಹಾಳಾದವು. ವಿಮಾ ಕಂಪನಿಯು ಕ್ಲೇಮುಗಳನ್ನು ಪೂರ್ಣ ಇತ್ಯರ್ಥಪಡಿಸಲು ₹ 7,000 ಪಾವತಿ ಮಾಡಲು ಒಪ್ಪಿಗೆ ಸೂಚಿಸಿದೆ.

(ಒಟ್ಟು ಲಾಭ ₹ 84,900, ನಿವ್ವಳ ಲಾಭ ₹ 48,000, ಕಾಜೋಲ್‌ಳ ಚಾಲ್ತಿ ಖಾತೆ ₹ 27,369, ಸನ್ನಿಯ ಚಾಲ್ತಿ ಖಾತೆ ₹ 12,931, ಅಢಾವೆ ಪತ್ರಿಕೆಯ ಒಟ್ಟು ಮೊತ್ತ ₹ 3,72,500)

## ನಿಮ್ಮ ತಿಳುವಳಿಕೆಯನ್ನು ಪರೀಕ್ಷಿಸಿಕೊಳ್ಳಿ – ಪರಿಶೀಲನಾ ಪಟ್ಟಿ

**ನಿಮ್ಮ ತಿಳುವಳಿಕೆಯನ್ನು ಪರೀಕ್ಷಿಸಿಕೊಳ್ಳಿ – I**

1. (i) ಅಮಾನ್ಯ (ii) ಅಮಾನ್ಯ (iii) ಮಾನ್ಯ (iv) ಅಮಾನ್ಯ
2. (i) ಸರಿ (ii) ಸರಿ (iii) ಸರಿ (iv) ತಪ್ಪು (v) ತಪ್ಪು (vi) ತಪ್ಪು

**ನಿಮ್ಮ ತಿಳುವಳಿಕೆಯನ್ನು ಪರೀಕ್ಷಿಸಿಕೊಳ್ಳಿ – II**

1. (i) ಸಾಲದ ಮೇಲೆ ವಾರ್ಷಿಕ ಶೇ. 6 ರಷ್ಟು ಬಡ್ಡಿ ನೀಡಲಾಗುವುದು.

   (ii) ಬಂಡವಾಳದ ಮೇಲೆ ಯಾವುದೇ ಬಡ್ಡಿ ನೀಡಲು ಅನುಮತಿಸಲಾಗದು ಮತ್ತು ಸ್ವಂತಕ್ಕೆ ಹಿಂಪಡೆತದ ಮೇಲೆ ಸಹ ಯಾವುದೇ ಬಡ್ಡಿ ಆಕರಿಸುವುದಿಲ್ಲ.

   (iii) ಪಾಲುದಾರರಿಗೆ ವೇತನ ಮತ್ತು ದಲ್ಲಾಳಿ ನೀಡಲಾಗುವುದಿಲ್ಲ.

   (iv) ಲಾಭವನ್ನು ಸಮನಾಗಿ ಹಂಚಿಕೆ ಮಾಡಲಾಗುವುದು.
2. ಲಾಭ: ರಿನಾ, ₹ 3,87,500; ರಾಮನ್, ₹ 3,87,500

**ನಿಮ್ಮ ತಿಳುವಳಿಕೆಯನ್ನು ಪರೀಕ್ಷಿಸಿಕೊಳ್ಳಿ – III**

1. ಬಂಡವಾಳದ ಮೇಲೆ ಬಡ್ಡಿ: ರಾಣಿ ₹ 9,600; ಸುಮನ್, ₹7,200
2. (ಎ) ಲಾಭ : ಪ್ರಿಯಾ ₹ 78,750; ಕಾಜಲ್ ₹ 47,250

   (ಬಿ) ಲಾಭ : ಶೂನ್ಯ ಬಂಡವಾಳದ ಮೇಲಿನ ಬಡ್ಡಿ: ಪ್ರಿಯಾ, ₹ 47,250; ಕಾಜಲ್, ₹78,750.

* * *

# ಪಾಲುದಾರಿಕೆ ಸಂಸ್ಥೆಯ ಪುನರ್‌ರಚನೆ – ಪಾಲುದಾರನ ಪ್ರವೇಶ
# Reconstitution of a Partnership Firm - Admission of a Partner

# 3

**ಕಲಿಕಾ ಉದ್ದೇಶಗಳು**

**Learning Objectives**

ಈ ಅಧ್ಯಾಯವನ್ನು ಅಭ್ಯಸಿಸಿದ ನಂತರ ನೀವು ಏನನ್ನು ತಿಳಿಯುತ್ತೀರೆಂದರೆ:

- ಪಾಲುದಾರಿಕೆ ಸಂಸ್ಥೆಯ ಪುನರ್‌ರಚನೆಯ ಪರಿಕಲ್ಪನೆ ಮತ್ತು ದಾರಿಗಳ ಬಗ್ಗೆ ವಿವರಿಸಬಲ್ಲಿರಿ;
- ಹೊಸ ಪಾಲುದಾರನ ಪ್ರವೇಶವಾದಾಗ ಸಂಸ್ಥೆಯ ಲೆಕ್ಕಪುಸ್ತಕಗಳಲ್ಲಿ ಮಾಡಬೇಕಾದ ಹೊಂದಾಣಿಕೆಗಳನ್ನು ಗುರ್ತಿಸುವಿರಿ;
- ಹೊಸ ಲಾಭ ಹಂಚಿಕೆ ಅನುಪಾತವನ್ನು ನಿರ್ಧರಿಸುವಿರಿ ಮತ್ತು ತ್ಯಾಗದ ಅನುಪಾತವನ್ನು ಲೆಕ್ಕ ಹಾಕುವಿರಿ. ಕೀರ್ತಿಮೌಲ್ಯವನ್ನು ವ್ಯಾಖ್ಯಾನಿಸಿ, ಅದರ ಮೇಲೆ ಪ್ರಭಾವ ಬೀರುವ ಅಂಶಗಳನ್ನು ಗಣನೆ ಮಾಡುವಿರಿ;
- ಕೀರ್ತಿಮೌಲ್ಯವನ್ನು ಕಂಡು ಹಿಡಿಯುವ ವಿಧಾನಗಳನ್ನು ವಿವರಿಸುವಿರಿ;
- ಹೊಸ ಪಾಲುದಾರನ ಪ್ರವೇಶವಾದಾಗ ಕೀರ್ತಿಮೌಲ್ಯವನ್ನು ಹೇಗೆ ಪರಿಗಣಿಸುವ–ರೆಂಬುದರ ವಿವಿಧ ಸಂದರ್ಭಗಳನ್ನು ವಿವರಿಸುವಿರಿ;
- ಆಸ್ತಿಗಳ ಪುನರ್‌ಮೌಲ್ಯಮಾಪನ ಮತ್ತು ಹೊಣೆಗಾರಿಕೆಗಳ ಪುನರ್ ನಿರ್ಧರಣೆಗಳ ಬಗ್ಗೆ ಅವಶ್ಯಕ ಹೊಂದಾಣಿಕೆಗಳನ್ನು ಮಾಡುವಿರಿ;
- ಕೂಡಿಟ್ಟ ಲಾಭ / ಹಾನಿಗಳ ಬಗ್ಗೆ ಅವಶ್ಯಕ ಹೊಂದಾಣಿಕೆ ಮಾಡುವುದನ್ನು ತಿಳಿಯುವಿರಿ;
- ಹೊಸ ಲಾಭ ಹಂಚಿಕೆ ಅನುಪಾತದ ಪ್ರಕಾರ ಪ್ರತಿ ಪಾಲುದಾರನ ಬಂಡವಾಳ ಎಷ್ಟಿರಬೇಕೆಂದು ನಿರ್ಧರಿಸುವಿರಿ ಮತ್ತು ಅವಶ್ಯಕ ಹೊಂದಾಣಿಕೆ ಮಾಡುವುದನ್ನು ಅರಿಯುವಿರಿ;
- ಪ್ರಸ್ತುತ ಪಾಲುದಾರರ ಲಾಭ ಹಂಚಿಕೆ ಅನುಪಾತದಲ್ಲಿ ಬದಲಾವಣೆಯಾದಾಗ ಮಾಡಬೇಕಾದ ಅವಶ್ಯಕ ಹೊಂದಾಣಿಕೆಗಳ ಬಗ್ಗೆ ತಿಳಿಯುವಿರಿ.

ಪಾಲುದಾರಿಕೆ ಎಂಬುದು (ಪಾಲುದಾರರು ಎಂದು ಕರೆಯಲ್ಪಡುವ) ಎಲ್ಲರೂ ಸೇರಿ ಅಥವಾ ಎಲ್ಲರ ಪರವಾಗಿ ಯಾರಾದರೂ ನಡೆಸುವ ವ್ಯವಹಾರದಿಂದ ಬರುವ ಲಾಭವನ್ನು ಹಂಚಿಕೊಳ್ಳಲು ಒಪ್ಪಿಕೊಂಡಿರುವ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳ ನಡುವೆ ಆಗುವ ಒಪ್ಪಂದವಾಗಿದೆ. ಪ್ರಸ್ತುತ ಒಪ್ಪಂದದಲ್ಲಿ ಏನಾದರೂ ಬದಲಾವಣೆಯಾದರೆ ಅದು ಪಾಲುದಾರಿಕೆ ಸಂಸ್ಥೆಯ ಪುನರ್‌ರಚನೆ ಎಂದು ಪರಿಗಣಿಸಲ್ಪಡುವುದು. ಆಗ ಪ್ರಸ್ತುತ ಒಪ್ಪಂದವು ಅಂತ್ಯಗೊಂಡು ಪಾಲುದಾರಿಕೆ ಸಂಸ್ಥೆಯ ಸದಸ್ಯರ ಸಂಬಂಧದಲ್ಲಿ ಬದಲಾವಣೆಯಾಗಿ ಹೊಸ ಒಪ್ಪಂದವು ಜಾರಿಯಾಗಿದೆ ಅಥವಾ ಸಂಯೋಜನೆಯಾಗಿದೆ ಎಂದು ತಿಳಿಯಲಾಗುವುದು. ಏನೇ ಆದರೂ ಸಂಸ್ಥೆಯು ಮುಂದುವರಿಯುವುದು. ಹಲವಾರು ವಿಧದಲ್ಲಿ ಪಾಲುದಾರಿಕೆ ಸಂಸ್ಥೆ ಪುನರ್‌ರಚನೆಗೆ ಪಾಲುದಾರರು ಮುಂದಾಗುವರು. ಅವು ಯಾವುವೆಂದರೆ, ಹೊಸ ಪಾಲುದಾರನ ಪ್ರವೇಶ, ಲಾಭ ಹಂಚಿಕೆ ಅನುಪಾತದಲ್ಲಿ ಬದಲಾವಣೆ, ಪಾಲುದಾರನ ನಿವೃತ್ತಿ, ಪಾಲುದಾರನ ಮರಣ ಅಥವಾ ದಿವಾಳಿತನ, ಮುಂತಾದವುಗಳು. ಇವೆಲ್ಲವುಗಳ ಬಗ್ಗೆ ಸಂಕ್ಷಿಪ್ತವಾದ ವಿಚಾರಗಳನ್ನು ನಾವು ಈ ಅಧ್ಯಾಯದಲ್ಲಿ ತಿಳಿದುಕೊಳ್ಳುವುದಲ್ಲದೇ ಹೊಸ ಪಾಲುದಾರನ ಪ್ರವೇಶ ಅಥವಾ ಲಾಭಹಂಚಿಕೆ ಅನುಪಾತದಲ್ಲಿ ಬದಲಾವಣೆಯಾದಾಗ ಲೆಕ್ಕಬರಹದಲ್ಲಿ ಅದರ ಪರಿಣಾಮಗಳ ಕುರಿತು ವಿವರವಾಗಿ ತಿಳಿದುಕೊಳ್ಳೋಣ.

## 3.1: ಪಾಲುದಾರಿಕೆ ಸಂಸ್ಥೆ ಪುನರ್‌ರಚನೆಯ ವಿಧಾನಗಳು:

### Modes of Reconstitution of Partnership Firm

ಪಾಲುದಾರಿಕೆ ಸಂಸ್ಥೆಯ ಪುನರ್‌ರಚನೆಯು ಈ ಕೆಳಗಿನವುಗಳ ಯಾವುದೇ ವಿಧದಲ್ಲಿ ಆಗಬಹುದು.

**ಹೊಸ ಪಾಲುದಾರನ ಪ್ರವೇಶ:** ಸಂಸ್ಥೆಗೆ ಹೆಚ್ಚಿನ ಬಂಡವಾಳದ ಅವಶ್ಯಕತೆ ಉಂಟಾದಾಗ ಅಥವಾ ವ್ಯವಸ್ಥಾಪನೆಯಲ್ಲಿ ಸಹಾಯ ಬೇಕೆನಿಸಿದಾಗ ಹೊಸ ಪಾಲುದಾರನೊಬ್ಬನನ್ನು ಸೇರಿಸಿಕೊಳ್ಳಬಹುದು. 1932ರ ಪಾಲುದಾರಿಕೆ ಅಧಿನಿಯಮದ ಪ್ರಕಾರ, ಪಾಲುದಾರಿಕೆ ಒಪ್ಪಂದದಲ್ಲಿ ಈ ಬಗ್ಗೆ ಉಲ್ಲೇಖವಿರದ ಹೊರತು ಎಲ್ಲಾ ಪ್ರಸ್ತುತ ಪಾಲುದಾರರ ಸಮ್ಮತಿ ಮೇರೆಗೆ ಹೊಸ ಪಾಲುದಾರನನ್ನು ಸೇರಿಸಿಕೊಳ್ಳಬಹುದು. ಉದಾಹರಣೆಗೆ, ಹರಿ ಮತ್ತು ಹಕ್ ಎಂಬ ಇಬ್ಬರು ಪಾಲುದಾರರಿದ್ದು, ಅವರು 3:2 ರ ಅನುಪಾತದಲ್ಲಿ ಲಾಭ ಹಂಚಿಕೆ ಮಾಡಿಕೊಳ್ಳುತ್ತಾರೆ.

ದಿ: 01–04–2015 ರಂದು ಅವರು ಸಂಸ್ಥೆಯ ಲಾಭದಲ್ಲಿ 1/6 ರಷ್ಟು ಪಾಲು ನೀಡುವುದಾಗಿ ಒಪ್ಪಿ ಜಾನ್ ಎಂಬ ಹೊಸ ಪಾಲುದಾರನನ್ನು ಸೇರಿಸಿಕೊಳ್ಳುವರು. ಈ ಬದಲಾವಣೆಯೊಂದಿಗೆ ಈಗ ಪಾಲುದಾರಿಕೆ ಸಂಸ್ಥೆಯಲ್ಲಿ ಮೂರು ಜನ ಪಾಲುದಾರರಾದರು. ಈಗ ಪಾಲುದಾರಿಕೆ ಪುನರ್‌ರಚನೆಗೊಂಡಂತಾಯಿತು.

**ಪ್ರಸಕ್ತ ಪಾಲುದಾರರ ಲಾಭ ಹಂಚಿಕೆ ಅನುಪಾತದಲ್ಲಿ ಬದಲಾವಣೆ:**

ಕೆಲವು ಸಲ ಸಂಸ್ಥೆಯ ಪಾಲುದಾರರು ಪ್ರಸಕ್ತದಲ್ಲಿರುವ ಲಾಭಹಂಚಿಕೆ ಅನುಪಾತದಲ್ಲಿ ಬದಲಾವಣೆ ಮಾಡಲು ತೀರ್ಮಾನಿಸುತ್ತಾರೆ. ಪ್ರಸ್ತುತ ಸಂಸ್ಥೆಯಲ್ಲಿ ಪಾಲುದಾರರ ಪಾತ್ರ ಬದಲಾದಾಗ ಹೀಗಾಗುವುದುಂಟು. ಉದಾಹರಣೆಗೆ, ರಾಮ, ಮೋಹನ ಮತ್ತು ಸೋಹನ ಇವರು ಸಂಸ್ಥೆಯಲ್ಲಿ ಪಾಲುದಾರರಾಗಿದ್ದು 3:2:1 ರ ಅನುಪಾತದಲ್ಲಿ ಲಾಭ ಹಂಚಿಕೊಳ್ಳುತ್ತಿದ್ದಾರೆ. ದಿನಾಂಕ: 01–04–2015 ರಿಂದ ಅವರು ಲಾಭವನ್ನು ಸಮನಾಗಿ ಹಂಚಿಕೊಳ್ಳುವುದೆಂದು ತೀರ್ಮಾನಿಸಿದ್ದಾರೆ. ಅದಕ್ಕಾಗಿ ಸೋಹನನು ಹೆಚ್ಚಿನ ಬಂಡವಾಳವನ್ನು ತೊಡಗಿಸಬೇಕು. ಇದರಿಂದ ಪ್ರಸ್ತುತ ಪಾಲುದಾರಿಕೆ ಒಪ್ಪಂದವು ಬದಲಾವಣೆಯಾಗಿ ಹೊಸ ಒಪ್ಪಂದವುಂಟಾಗಿ ಪಾಲುದಾರಿಕೆ ಪುನರ್‌ರಚನೆಯಾದಂತಾಯಿತು.

**ಪ್ರಸ್ತುತದಲ್ಲಿರುವ ಪಾಲುದಾರನ ನಿವೃತ್ತಿ:**

ಅನಾರೋಗ್ಯ, ವಯೋವೃದ್ಧತೆ ಅಥವಾ ವ್ಯವಹಾರದ ಆಸಕ್ತಿಯ ಬದಲಾವಣೆಯಿಂದಾಗಿ ಪಾಲುದಾರನು ಸಂಸ್ಥೆಯಿಂದ ಹಿಂದೆ ಸರಿಯಲು ನಿಶ್ಚಯಿಸಬಹುದು. ಇಚ್ಛಾನುಸಾರ ಪಾಲುದಾರಿಕೆಯಾಗಿದ್ದಲ್ಲಿ ಪಾಲುದಾರನು ತನ್ನಿಚ್ಛೆಯಂತೆ ಯಾವಾಗಬೇಕಾದರೂ ನಿವೃತ್ತನಾಗಬಹುದಾಗಿದೆ. ಉದಾಹರಣೆಗೆ, ರೈ, ರವಿ ಮತ್ತು ರಾವ್ ಎಂಬವರು ಒಂದು ಸಂಸ್ಥೆಯ ಪಾಲುದಾರರಾಗಿದ್ದು ಅವರು 2:2:1 ರ ಅನುಪಾತದಲ್ಲಿ ಲಾಭಹಂಚಿಕೆ ಮಾಡಿಕೊಳ್ಳುವರು. ಅನಾರೋಗ್ಯದಿಂದಾಗಿ, ದಿ: 31–03–2015 ರಂದು ರವಿ ನಿವೃತ್ತನಾದನು. ಈಗ ಇಬ್ಬರೇ ಪಾಲುದಾರರು ಉಳಿದರು. ಇದರಿಂದಾಗಿ ಪಾಲುದಾರಿಕೆ ಸಂಸ್ಥೆಯು ಪುನರ್‌ರಚನೆಯಾದಂತಾಯಿತು.

**ಪಾಲುದಾರನ ನಿಧನ:**

ಪಾಲುದಾರನೊಬ್ಬನು ನಿಧನ ಹೊಂದಿದಾಗ ಉಳಿದ ಪಾಲುದಾರರು ಸಂಸ್ಥೆಯನ್ನು ಎಂದಿನಂತೆ ಮುಂದುವರೆಸಲು ತೀರ್ಮಾನಿಸಿದರೆ, ಆಗ ಪಾಲುದಾರಿಕೆಯು ಪುನರ್‌ರಚನೆಗೊಂಡಂತಾಗುತ್ತದೆ. ಉದಾಹರಣೆಗೆ, X, Y ಮತ್ತು Z ಎಂಬುವವರು ಸಂಸ್ಥೆಯ ಪಾಲುದಾರರಾಗಿದ್ದು ಅವರು 3:2:1 ರ ಅನುಪಾತದಲ್ಲಿ ಲಾಭ ಹಂಚಿಕೊಳ್ಳುವರು. ದಿ: 31–03–2015 ರಂದು X ನು ಮರಣಹೊಂದಿದ್ದು, Y ಮತ್ತು Z ಇವರು ಭವಿಷ್ಯತ್ತಿನಲ್ಲಿ ಲಾಭವನ್ನು ಸಮನಾಗಿ ಹಂಚಿಕೊಳ್ಳಲು ಒಪ್ಪಿಕೊಂಡು ಸಂಸ್ಥೆಯನ್ನು ಮುಂದುವರೆಸಿದಾಗ ಸಂಸ್ಥೆಯು ಪುನರ್‌ರಚನೆ ಆದಂತಾಯಿತು.

## 3.2: ಹೊಸ ಪಾಲುದಾರನ ಪ್ರವೇಶ : Admission of a new Partner

ಒಂದು ವೇಳೆ ಸಂಸ್ಥೆಗೆ ಹೆಚ್ಚುವರಿ ಬಂಡವಾಳ ಅಥವಾ ವ್ಯವಸ್ಥಾಪನೆ ಸಹಾಯ ಅಥವಾ ಎರಡರ ಅವಶ್ಯಕತೆ ಇದೆ ಎಂದು ಅನಿಸಿದಾಗ ಈಗಿರುವ ಪಾಲುದಾರರೊಂದಿಗೆ ಹೊಸ ಪಾಲುದಾರನೊಬ್ಬನನ್ನು ಸೇರಿಸಿಕೊಂಡು ಪ್ರಸಕ್ತದಲ್ಲಿನ ಸಂಪನ್ಮೂಲಗಳನ್ನು ವೃದ್ಧಿಸಿಕೊಳ್ಳಬಹುದು. 1932 ರ ಪಾಲುದಾರಿಕೆ ಕಾನೂನಿನ ಪ್ರಕಾರ, ಪಾಲುದಾರಿಕೆ ಒಪ್ಪಂದದಲ್ಲಿ ಈ ಬಗ್ಗೆ ಪ್ರಸ್ತಾಪವಿರದಿದ್ದಲ್ಲಿ, ಈಗಿರುವ ಎಲ್ಲಾ ಪಾಲುದಾರರ ಸಮ್ಮತಿಯಿದ್ದಲ್ಲಿ, ಹೊಸ ಪಾಲುದಾರನನ್ನು ಸೇರಿಸಿಕೊಳ್ಳಬಹುದಾಗಿದೆ. ಹೊಸ ಪಾಲುದಾರನ ಸೇರ್ಪಡೆಯಿಂದ ಪಾಲುದಾರಿಕೆ ಸಂಸ್ಥೆ ಪುನರ್‌ರಚನೆಯಾಗುವುದು ಮತ್ತು ವ್ಯವಹಾರವನ್ನು ಮುಂದುವರೆಸಲು ಹೊಸ ಒಪ್ಪಂದವನ್ನು ಮಾಡಿಕೊಳ್ಳಲಾಗುವುದು.

ಹೊಸದಾಗಿ ಸೇರ್ಪಡೆಯಾದ ಪಾಲುದಾರನಿಗೆ ಎರಡು ಮುಖ್ಯವಾದ ಹಕ್ಕುಗಳು ಪ್ರಾಪ್ತಿಯಾಗುವವು.

1] ಪಾಲುದಾರಿಕೆ ಸಂಸ್ಥೆಯ ಆಸ್ತಿಗಳಲ್ಲಿ ಪಾಲನ್ನು ಹೊಂದಲು ಮತ್ತು

2] ಪಾಲುದಾರಿಕೆ ಸಂಸ್ಥೆಯ ಲಾಭದಲ್ಲಿ ಪಾಲನ್ನು ಹೊಂದಲು

ಹೀಗೆ ಪಾಲುದಾರಿಕೆ ಸಂಸ್ಥೆಯ ಆಸ್ತಿಗಳಲ್ಲಿ ಮತ್ತು ಲಾಭದಲ್ಲಿ ಪಾಲನ್ನು ಪಡೆಯಬೇಕಾದರೆ ಹೊಸ ಪಾಲುದಾರನು ಒಪ್ಪಿದ ಬಂಡವಾಳವನ್ನು ನಗದು ಅಥವಾ ಆಸ್ತಿಗಳ ರೂಪದಲ್ಲಿ ತರಬೇಕು. ಒಂದು ವೇಳೆ ಸಂಸ್ಥೆಯು ಬಹಳ ಉನ್ನತ ಸ್ಥಾನದಲ್ಲಿದ್ದು ಅದರ ಬಂಡವಾಳದ ಮೇಲೆ ಸಾಮಾನ್ಯ ಪ್ರತಿಫಲ ದರಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಅದು

ಲಾಭ ಗಳಿಸುತ್ತಿದ್ದರೆ, ಹೊಸ ಪಾಲುದಾರನು ಒಂದಿಷ್ಟು ಹೆಚ್ಚುವರಿ ಹಣವನ್ನು ಕೀರ್ತಿಮೌಲ್ಯಕ್ಕಾಗಿ ತರಬೇಕಾಗುವುದು. ಈಗಿರುವ ಪಾಲುದಾರರು ಈ ಹೆಚ್ಚುವರಿ ಅಧಿಕ ಲಾಭದಲ್ಲಿ ಹೊಸ ಪಾಲುದಾರನಿಗೆ ಪಾಲು ಬಿಟ್ಟುಕೊಟ್ಟಿದ್ದಕ್ಕಾಗಿ ಆಗುವ ಹಾನಿಯನ್ನು ಸರಿದೂಗಿಸಲು ಹೀಗೆ ಮಾಡುವರು.

ಹೊಸ ಪಾಲುದಾರನ ಪ್ರವೇಶವಾದಾಗ ಈ ಕೆಳಗಿನ ಮಹತ್ವದ ಅಂಶಗಳನ್ನು ಪರಿಗಣಿಸಬೇಕಾಗುತ್ತದೆ:

1. ಹೊಸ ಲಾಭ ಹಂಚಿಕೆ ಅನುಪಾತ;
2. ತ್ಯಾಗದ ಅನುಪಾತ;
3. ಕೀರ್ತಿಮೌಲ್ಯದ ಮೌಲ್ಯಮಾಪನ ಮತ್ತು ಹೊಂದಾಣಿಕೆ;
4. ಆಸ್ತಿಗಳ ಪುನರ್ ಮೌಲ್ಯಮಾಪನ ಮತ್ತು ಜವಾಬ್ದಾರಿಗಳ ಪುನರ್‌ನಿರ್ಧರಣೆ;
5. ಕೂಡಿಟ್ಟ ಲಾಭದ (ಮೀಸಲುಗಳು) ಹಂಚಿಕೆ ಮತ್ತು
6. ಪಾಲುದಾರರ ಬಂಡವಾಳಗಳ ಹೊಂದಾಣಿಕೆ.

## 3.3: ಹೊಸ ಲಾಭ ಹಂಚಿಕೆ ಅನುಪಾತ : New Profit Sharing Ratio

ಹೊಸ ಪಾಲುದಾರನ ಪ್ರವೇಶವಾದಾಗ ಅವನು ತನ್ನ ಪಾಲಿನ ಲಾಭದ ಪ್ರಮಾಣವನ್ನು ಹಳೆಯ ಪಾಲುದಾರರಿಂದ ಪಡೆದುಕೊಳ್ಳುತ್ತಾನೆ. ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ, ಹೊಸ ಪಾಲುದಾರನ ಪ್ರವೇಶ ಆದಾಗ, ಹಳೆಯ ಪಾಲುದಾರರು ತಮ್ಮ ಪಾಲಿನ ಲಾಭದಲ್ಲಿನ ಭಾಗವನ್ನು ಅವನಿಗೆ ತ್ಯಾಗ ಮಾಡುತ್ತಾರೆ. ಆದರೆ ಹೊಸ ಪಾಲುದಾರನ ಲಾಭದ ಪ್ರಮಾಣ ಎಷ್ಟಿರಬೇಕು ಮತ್ತು ಅದನ್ನು ಅವನು ಹಳೆಯ ಪಾಲುದಾರರಿಂದ ಹೇಗೆ ಪಡೆದುಕೊಳ್ಳಬೇಕೆಂಬುದನ್ನು ಹಳೆಯ ಪಾಲುದಾರರು ಮತ್ತು ಹೊಸ ಪಾಲುದಾರ ಎಲ್ಲರೂ ಸೇರಿ ಪರಸ್ಪರ ಚರ್ಚಿಸಿ ನಿರ್ಧರಿಸುತ್ತಾರೆ. ಒಂದು ವೇಳೆ, ಹೊಸ ಪಾಲುದಾರನು ತನ್ನ ಪಾಲಿನ ಲಾಭದ ಪ್ರಮಾಣವನ್ನು ಹೇಗೆ ಪಡೆಯಬೇಕೆಂಬುದನ್ನು ಸ್ಪಷ್ಟಪಡಿಸದಿದ್ದರೆ, ಅವನು ಹಳೆಯ ಪಾಲುದಾರರ ಲಾಭ ಹಂಚಿಕೆ ಅನುಪಾತದಲ್ಲಿಯೇ ಪಡೆದುಕೊಳ್ಳುತ್ತಾನೆ ಎಂದು ಪರಿಭಾವಿಸಲಾಗುತ್ತದೆ. ಏನೇ ಇರಲಿ, ಹೊಸ ಪಾಲುದಾರನ ಪ್ರವೇಶವಾದಾಗ ಹಳೆಯ ಪಾಲುದಾರರು ತಮ್ಮ ಪಾಲಿನ ಲಾಭದಲ್ಲಿ ಭಾಗಶಃವನ್ನು ಹೊಸ ಪಾಲುದಾರನಿಗೆ ಬಿಟ್ಟು ಕೊಡುವುದರಿಂದ ಭವಿಷ್ಯದಲ್ಲಿನ ಲಾಭ ಹಂಚಿಕೆ ಅನುಪಾತವು ಬದಲಾಗುತ್ತದೆ. ಆದ್ದರಿಂದ ಎಲ್ಲ ಪಾಲುದಾರರು ಭವಿಷ್ಯದಲ್ಲಿ ಲಾಭ ಹಂಚಿಕೆ ಮಾಡಿಕೊಳ್ಳಲು ಹೊಸ ಲಾಭ ಹಂಚಿಕೆ ಅನುಪಾತವನ್ನು ಕಂಡುಹಿಡಿಯಲೇಬೇಕಾಗುತ್ತದೆ. ಅದು ಹೊಸ ಪಾಲುದಾರನು ಹಳೆಯ ಪಾಲುದಾರರಿಂದ ಹೇಗೆ ತನ್ನ ಪಾಲಿನ ಲಾಭದ ಪ್ರಮಾಣ ಪಡೆದುಕೊಳ್ಳುತ್ತಾನೆಂಬುದರ ಸಾಧ್ಯತೆಗಳನ್ನವಲಂಭಿಸಿದೆ. ಈ ಕೆಳಗಿನ ನಿದರ್ಶನಗಳಿಂದ ನಾವು ಅದನ್ನು ತಿಳಿದುಕೊಳ್ಳೋಣ.

**ನಿದರ್ಶನ 1:**

ಅನಿಲ ಮತ್ತು ವಿಶಾಲ ಪಾಲುದಾರರಾಗಿದ್ದು 3:2 ರ ಅನುಪಾತದಲ್ಲಿ ಲಾಭ ಹಂಚಿಕೊಳ್ಳುತ್ತಿರುವರು. ಅವರು ಭವಿಷ್ಯತ್ತಿನ ಲಾಭದಲ್ಲಿ 1/5 ರಷ್ಟು ಪಾಲು ನೀಡಲು ಒಪ್ಪಿ ಸುಮಿತ ಎಂಬ ಹೊಸ ಪಾಲುದಾರನನ್ನು ಸಂಸ್ಥೆಗೆ ಸೇರಿಸಿಕೊಂಡಿರುವರು. ಅನಿಲ, ವಿಶಾಲ ಮತ್ತು ಸುಮಿತ ಇವರ ಹೊಸ ಲಾಭ ಹಂಚಿಕೆ ಅನುಪಾತವನ್ನು ಕಂಡು ಹಿಡಿಯಿರಿ.

**ಪರಿಹಾರ:**

ಸುಮಿತ್‌ನ ಪಾಲು $= \frac{1}{5}$

ಉಳಿದ ಪಾಲು $= 1 - \frac{1}{5} = \frac{4}{5}$

ಅನಿಲನ ಹೊಸ ಪಾಲು $= \frac{4}{5}$ ರಲ್ಲಿ $\frac{3}{5} = \frac{12}{25}$

ವಿಶಾಲನ ಹೊಸ ಪಾಲು $= \frac{4}{5}$ ರಲ್ಲಿ $\frac{2}{5} = \frac{8}{25}$

ಅನಿಲ, ವಿಶಾಲ ಮತ್ತು ಸುಮಿತ ರವರ ಹೊಸ ಲಾಭಹಂಚಿಕೆ ಅನುಪಾತವು 12:8:5.

**ಟಿಪ್ಪಣಿ:** ಹೊಸ ಪಾಲುದಾರನು ತನ್ನ ಪಾಲನ್ನು ಹಳೆಯ ಪಾಲುದಾರರಿಂದ ಅವರ ಹಳೆಯ ಲಾಭ ಹಂಚಿಕೆ ಅನುಪಾತದಲ್ಲಿ ಪಡೆಯುವನು ಎಂದು ಭಾವಿಸಲಾಗಿದೆ.

**ನಿದರ್ಶನ 2:**

ಅಕ್ಷಯ ಮತ್ತು ಭಾರತಿ ಪಾಲುದಾರರಾಗಿದ್ದು 3:2 ರ ಅನುಪಾತದಲ್ಲಿ ಲಾಭ ಹಂಚಿಕೊಳ್ಳುತ್ತಿರುವರು. ಅವರು ದಿನೇಶ ಎಂಬುವವನನ್ನು ಭವಿಷ್ಯತ್ತಿನ ಲಾಭದಲ್ಲಿ $\frac{1}{5}$ ರಷ್ಟು ಪಾಲಿಗೆ ಹೊಸ ಪಾಲುದಾರನನ್ನಾಗಿ ಸೇರಿಸಿಕೊಳ್ಳುವರು. ಅದನ್ನು ಅವನು ಅಕ್ಷಯ ಮತ್ತು ಭಾರತಿ ಕಡೆಯಿಂದ ಸಮನಾಗಿ ಪಡೆದುಕೊಳ್ಳುವನು. ಅಕ್ಷಯ, ಭಾರತಿ ಮತ್ತು ದಿನೇಶ ಇವರ ಹೊಸ ಲಾಭ ಹಂಚಿಕೆ ಅನುಪಾತ ಕಂಡು ಹಿಡಿಯಿರಿ.

**ಪರಿಹಾರ:**

ದಿನೇಶನ ಪಾಲು $= \frac{1}{5}$ ಅಥವಾ $\frac{2}{10}$

ಅಕ್ಷಯನ ಪಾಲು $= \frac{3}{5} - \frac{1}{10} = \frac{5}{10}$

ಭಾರತಿಯ ಪಾಲು $= \frac{2}{5} - \frac{1}{10} = \frac{3}{10}$

ಅಕ್ಷಯ, ಭಾರತಿ ಮತ್ತು ದಿನೇಶ ಇವರ ಹೊಸ ಲಾಭ ಹಂಚಿಕೆ ಅನುಪಾತವು 5:3:2.

**ನಿದರ್ಶನ 3:**

ಅಂಶು ಮತ್ತು ನೀತು ಪಾಲುದಾರರಾಗಿದ್ದು, 3:2 ರ ಅನುಪಾತದಲ್ಲಿ ಲಾಭ ಹಂಚಿಕೊಳ್ಳುತ್ತಿರುವರು. ಅವರು ಜ್ಯೋತಿ ಎಂಬುವವರನ್ನು $\frac{3}{10}$ ರಷ್ಟು ಪಾಲು ನೀಡುವುದಾಗಿ ಹೊಸ ಪಾಲುದಾರಳನ್ನಾಗಿ ಸೇರಿಸಿಕೊಂಡರು. ಅದನ್ನು ಅವಳು ಅಂಶುಳಿಂದ $\frac{}{10}$ ಮತ್ತು ನೀತುಳಿಂದ $\frac{1}{10}$ ರಷ್ಟು ಪಡೆದುಕೊಂಡಳು. ಅಂಶು, ನೀತು ಮತ್ತು ಜ್ಯೋತಿ ಇವರುಗಳ ಹೊಸ ಲಾಭ ಹಂಚಿಕೆ ಅನುಪಾತ ಕಂಡು ಹಿಡಿಯಿರಿ.

**ಪರಿಹಾರ:**

ಜ್ಯೋತಿಯ ಪಾಲು $= \frac{3}{10}$

ಹೊಸ ಪಾಲು = ಹಳೆಯ ಪಾಲು – ಬಿಟ್ಟುಕೊಟ್ಟ ಪಾಲು

ಅಂಶುಳ ಹೊಸ ಪಾಲು $= \frac{3}{5} - \frac{2}{10} = \frac{4}{10}$

ನೀತುಳ ಹೊಸ ಪಾಲು $= \frac{2}{5} - \frac{1}{10} = \frac{3}{10}$

ಅಂಶು, ನೀತು ಮತ್ತು ಜ್ಯೋತಿ ಇವರ ಹೊಸ ಲಾಭ ಹಂಚಿಕೆ ಅನುಪಾತವು 4:3:3.

**ನಿದರ್ಶನ 4:**

ರಾಮ ಮತ್ತು ಶ್ಯಾಮ ಇವರು 3:2 ರ ಅನುಪಾತದಲ್ಲಿ ಲಾಭ ಹಂಚಿಕೊಳ್ಳುವ ಪಾಲುದಾರರು. ಅವರು ಘನಶ್ಯಾಮನನ್ನು ಹೊಸ ಪಾಲುದಾರನನ್ನಾಗಿ ಸೇರಿಸಿಕೊಂಡರು. ರಾಮನು ತನ್ನ ಪಾಲಿನಲ್ಲಿ $\frac{1}{4}$ ರಷ್ಟು ಬಿಟ್ಟುಕೊಟ್ಟನು ಮತ್ತು ಶ್ಯಾಮನು ತನ್ನ ಪಾಲಿನಲ್ಲಿ $\frac{1}{3}$ ರಷ್ಟನ್ನು ಘನಶ್ಯಾಮನಿಗೆ ಬಿಟ್ಟುಕೊಟ್ಟನು. ರಾಮ, ಶ್ಯಾಮ ಮತ್ತು ಘನಶ್ಯಾಮ ಇವರ ಹೊಸ ಲಾಭಹಂಚಿಕೆ ಅನುಪಾತವನ್ನು ಕಂಡು ಹಿಡಿಯಿರಿ.

**ಪರಿಹಾರ:**

ರಾಮನ ಹಳೆಯ ಪಾಲು = $\frac{3}{5}$

ರಾಮನು ಬಿಟ್ಟುಕೊಟ್ಟ ಪಾಲು = $\frac{3}{5}$ ರಲ್ಲಿ $\frac{1}{4} = \frac{3}{20}$

ರಾಮನ ಹೊಸ ಪಾಲು = $\frac{3}{5}-\frac{3}{20}=\frac{9}{20}$

ಶ್ಯಾಮನ ಹಳೆಯ ಪಾಲು = $\frac{2}{5}$

ಶ್ಯಾಮನು ಬಿಟ್ಟುಕೊಟ್ಟ ಪಾಲು = $\frac{2}{5}$ ರಲ್ಲಿ $\frac{1}{3}=\frac{2}{15}$

ಶ್ಯಾಮನ ಹೊಸ ಪಾಲು = $\frac{2}{5}-\frac{2}{15}=\frac{4}{15}$

ಘನಶ್ಯಾಮನ ಹೊಸ ಪಾಲು = ರಾಮನ ತ್ಯಾಗ +ಶ್ಯಾಮನ ತ್ಯಾಗ

= $\frac{3}{20}+\frac{2}{15}=\frac{17}{60}$

ರಾಮ, ಶ್ಯಾಮ ಮತ್ತು ಘನಶ್ಯಾಮ ಇವರ ಹೊಸ ಲಾಭ ಹಂಚಿಕೆ ಅನುಪಾತವು 27 : 16 : 17.

**ನಿದರ್ಶನ 5:**

ದಾಸ ಮತ್ತು ಸಿನ್ಹ ಇವರು 4:1 ರ ಅನುಪಾತದಲ್ಲಿ ಲಾಭ ಹಂಚಿಕೊಳ್ಳುವ ಪಾಲುದಾರರು. ಅವರು $\frac{1}{4}$ ಪಾಲಿಗಾಗಿ ಪಾಲ್ ಎಂಬುವವರನ್ನು ಹೊಸ ಪಾಲುದಾರನನ್ನಾಗಿ ಸೇರಿಸಿಕೊಂಡಿದ್ದು, ಅದನ್ನು ಅವರು ಸಂಪೂರ್ಣವಾಗಿ ದಾಸ್ ಅವರಿಂದ ಪಡೆದುಕೊಳ್ಳುವರು. ಪಾಲುದಾರರ ಹೊಸ ಲಾಭಹಂಚಿಕೆ ಅನುಪಾತವನ್ನು ನಿರ್ಧರಿಸಿರಿ.

**ಪರಿಹಾರ:**

ಪಾಲ್ ರವರ ಪಾಲು = $\frac{1}{4}$

ದಾಸ್ ರವರ ಹೊಸ ಪಾಲು = ಹಳೆಯ ಪಾಲು – ತ್ಯಾಗ ಮಾಡಿದ ಪಾಲು

= $\frac{4}{5}-\frac{1}{4}=\frac{11}{20}$

ಸಿನ್ಹ ರವರ ಹೊಸ ಪಾಲು = $\frac{1}{5}$

ದಾಸ್, ಸಿನ್ಹ ಮತ್ತು ಪಾಲ್ ಇವರ ಹೊಸ ಲಾಭ ಹಂಚಿಕೆ ಅನುಪಾತವು 11:4:5.

### 3.4: ತ್ಯಾಗದ ಅನುಪಾತ : Sacrificing Ratio

ಹಳೆಯ ಪಾಲುದಾರರು ಒಳಬರುವ ಪಾಲುದಾರನಿಗೆ ತಮ್ಮ ಪಾಲಿನ ಲಾಭದಲ್ಲಿ ಬಿಟ್ಟುಕೊಡುವ ಲಾಭದ ಅನುಪಾತವೇ ತ್ಯಾಗದ ಅನುಪಾತ ಆಗಿದೆ.

**ಪಾಲುದಾರನ ತ್ಯಾಗದ ಪ್ರಮಾಣ = ಹಳೆಯ ಲಾಭದ ಪಾಲು – ಹೊಸ ಲಾಭದ ಪಾಲು.**

ಈ ಮೊದಲೇ ತಿಳಿಸಿರುವಂತೆ, ಹಳೆಯ ಪಾಲುದಾರರ ಸಂಸ್ಥೆಯ ಅಧಿಕ ಲಾಭದಲ್ಲಿ ಹೊಸ ಪಾಲುದಾರನಿಗೆ ಪಾಲು ದೊರೆಯುವುದರಿಂದ ಹೊಸ ಪಾಲುದಾರನು ಒಂದಿಷ್ಟು ಹೆಚ್ಚುವರಿ ಹಣವನ್ನು ಕೀರ್ತಿಮೌಲ್ಯಕ್ಕಾಗಿ ತಂದು ಕೊಡಬೇಕು. ಈ ಹಣವನ್ನು ಹಳೆಯ ಪಾಲುದಾರರು ತ್ಯಾಗದ ಅನುಪಾತದಲ್ಲಿ ಹಂಚಿಕೊಳ್ಳುತ್ತಾರೆ.

ಪಾಲುದಾರರು ಒಪ್ಪಿಕೊಂಡಿರುವಂತೆ ಸಾಮಾನ್ಯವಾಗಿ ಹಳೆಯ ಲಾಭದ ಅನುಪಾತ, ಸಮಾನ ತ್ಯಾಗ ಅಥವಾ ನಿರ್ಧಿಷ್ಟ ಅನುಪಾತವೆಂದು ಕೊಡಲಾಗಿರುತ್ತದೆ. ಒಂದು ವೇಳೆ ಹೊಸ ಪಾಲುದಾರನು ಹಳೆಯ ಪಾಲುದಾರರಿಂದ ತನ್ನ ಲಾಭದ ಪಾಲನ್ನು ಹೇಗೆ ಪಡೆದುಕೊಳ್ಳುತ್ತಾನೆಂಬುದನ್ನು ಸ್ಪಷ್ಟವಾಗಿ ಹೇಳಿರದಿದ್ದರೆ ಸಮಸ್ಯೆ ಉದ್ಭವಿಸುವುದು. ಆಗ ಹೊಸ ಲಾಭ ಹಂಚಿಕೆ ಅನುಪಾತ ಕೊಟ್ಟಿರುವರು. ಅಂತಹ ಸಂದರ್ಭದಲ್ಲಿ ಪ್ರತಿ ಪಾಲುದಾರನ ಹಳೆಯ ಪಾಲಿನಲ್ಲಿ ಹೊಸ ಪಾಲನ್ನು ಕಳೆಯುವ ಮೂಲಕ ಆತನ ತ್ಯಾಗದ ಪ್ರಮಾಣವನ್ನು ಕಂಡುಹಿಡಿಯಲಾಗುವುದು. ನಿದರ್ಶನ 6 ರಿಂದ 8 ನ್ನು ಅವಲೋಕಿಸಿರಿ ಮತ್ತು ಅಂತಹ ಸಂದರ್ಭಗಳಲ್ಲಿ ತ್ಯಾಗದ ಅನುಪಾತವನ್ನು ಹೇಗೆ ಕಂಡು ಹಿಡಿಯಲಾಗುವುದು ಎಂಬುದನ್ನು ತಿಳಿಯಿರಿ.

**ನಿದರ್ಶನ 6:**

ರೋಹಿತ ಮತ್ತು ಮೋಹಿತ ಸಂಸ್ಥೆಯ ಪಾಲುದಾರರಿದ್ದು, 5:3 ರ ಅನುಪಾತದಲ್ಲಿ ಲಾಭ ಹಂಚಿಕೊಳ್ಳುವರು. ಅವರು $\frac{1}{7}$ ರಷ್ಟು ಪಾಲಿಗೆ ಬಿಜಾಯ್ ಎಂಬುವವರನ್ನು ಹೊಸ ಪಾಲುದಾರನನ್ನಾಗಿ ಸೇರಿಸಿಕೊಳ್ಳುವರು. ಹೊಸ ಲಾಭ ಹಂಚಿಕೆ ಅನುಪಾತವು 4:2:1 ಆಗಿರುವುದು. ರೋಹಿತ ಮತ್ತು ಮೋಹಿತರ ತ್ಯಾಗದ ಅನುಪಾತವನ್ನು ಕಂಡುಹಿಡಿಯಿರಿ.

**ಪರಿಹಾರ:**

ರೋಹಿತನ ಹಳೆಯ ಪಾಲು $= \frac{1}{7}$

ರೋಹಿತನ ಹೊಸ ಪಾಲು $= \frac{4}{7}$

ರೋಹಿತನ ತ್ಯಾಗ $= \frac{5}{8} - \frac{4}{7} = \frac{3}{56}$

ಮೋಹಿತನ ಹಳೆಯ ಪಾಲು $= \frac{3}{8}$

ಮೋಹಿತನ ಹೊಸ ಪಾಲು $= \frac{2}{7}$

ಮೋಹಿತನ ತ್ಯಾಗ $= \frac{3}{8} - \frac{2}{7} = \frac{5}{56}$

ರೋಹಿತ ಮತ್ತು ಮೋಹಿತ ಇವರ ತ್ಯಾಗದ ಅನುಪಾತವು 3:5.

**ನಿದರ್ಶನ 7:**

ಅಮರ ಮತ್ತು ಬಹಾದೂರ್ ರವರು ಪಾಲುದಾರರಾಗಿದ್ದು, 3:2 ರ ಅನುಪಾತದಲ್ಲಿ ಲಾಭ ಹಂಚಿಕೆ ಮಾಡಿಕೊಳ್ಳುತ್ತಿರುವರು. ಅವರು ಮೇರಿ ಎಂಬವರನ್ನು $\frac{1}{4}$ ರಷ್ಟು ಪಾಲಿಗೆ ಹೊಸ ಪಾಲುದಾರ ಎಂದು ಸೇರಿಸಿಕೊಳ್ಳುವರು. ಅಮರ ಮತ್ತು ಬಹಾದೂರ್ ರವರ ನೂತನ ಲಾಭ ಹಂಚಿಕೆ ಅನುಪಾತವು 2:1 ಆಗಿರುತ್ತದೆ. ಅವರ ತ್ಯಾಗದ ಅನುಪಾತವನ್ನು ಕಂಡು ಹಿಡಿಯಿರಿ.

**ಪರಿಹಾರ:**

ಮೇರಿಯ ಪಾಲು $= \frac{1}{4}$

ಉಳಿದ ಪಾಲು $= 1-\frac{1}{4}=\frac{3}{4}$

ಈ 3/4 ಪಾಲನ್ನು ಅಮರ ಮತ್ತು ಬಹಾದೂರರು 2:1 ರಲ್ಲಿ ಹಂಚಿಕೊಳ್ಳುವರು.

ಅಮರನ ಹೊಸ ಪಾಲು $= \frac{3}{4}$ ರಲ್ಲಿ $\frac{2}{3}=\frac{6}{12}$ ಅಥವಾ $\frac{2}{4}$

ಬಹಾದೂರನ ಹೊಸ ಪಾಲು $= \frac{3}{4}$ ರಲ್ಲಿ $\frac{1}{3}=\frac{3}{12}$ ಅಥವಾ $\frac{1}{4}$

ಅಮರ, ಬಹಾದೂರ ಮತ್ತು ಮೇರಿ ಇವರ ಹೊಸ ಲಾಭ ಹಂಚಿಕೆ ಅನುಪಾತವು 2:1:1

ಅಮರನ ತ್ಯಾಗ $= \frac{3}{5}-\frac{2}{4}=\frac{2}{20}$

ಬಹಾದೂರನ ತ್ಯಾಗ $= \frac{2}{5}-\frac{1}{4}=\frac{3}{20}$

ಅಮರ ಮತ್ತು ಬಹಾದೂರ ಇವರ ತ್ಯಾಗದ ಅನುಪಾತವು 2 : 3

**ನಿದರ್ಶನ 8:**

ರಮೇಶ ಮತ್ತು ಸುರೇಶ ಇವರು ಒಂದು ಸಂಸ್ಥೆಯ ಪಾಲುದಾರರಾಗಿದ್ದು, 4:3 ರ ಅನುಪಾತದಲ್ಲಿ ಲಾಭ ಹಂಚಿಕೊಳ್ಳುವರು. ಅವರು ಮೋಹನನನ್ನು ಹೊಸ ಪಾಲುದಾರನಾಗಿ ಸೇರಿಸಿಕೊಳ್ಳುವರು. ರಮೇಶ, ಸುರೇಶ ಮತ್ತು ಮೋಹನ ಇವರ ಲಾಭ ಹಂಚಿಕೆ ಅನುಪಾತವು 2:3:1 ಆಗಿರುವುದು. ಹಳೆಯ ಪಾಲುದಾರರ ಗಳಿಕೆ ಅಥವಾ ತ್ಯಾಗದ ಪ್ರಮಾಣ ಕಂಡು ಹಿಡಿಯಿರಿ.

**ಪರಿಹಾರ:**

ರಮೇಶನ ಹಳೆಯ ಪಾಲು $= \frac{4}{7}$

ರಮೇಶನ ಹೊಸ ಪಾಲು $= \frac{2}{6}$

ರಮೇಶನ ತ್ಯಾಗ $= \frac{4}{7}-\frac{2}{6}=\frac{10}{42}$

ಸುರೇಶನ ಹೊಸ ಪಾಲು $= \frac{3}{6}$

ಸುರೇಶನ ಹಳೆಯ ಪಾಲು $= \frac{3}{7}$

ಸುರೇಶನ ಗಳಿಕೆ $= \frac{3}{6} - \frac{3}{7} = \frac{3}{42}$

ಮೋಹನನ ಪಾಲು $= \frac{1}{6}$ ಅಥವಾ $\frac{7}{42}$

ರಮೇಶನ ತ್ಯಾಗ = ಸುರೇಶನ ಗಳಿಕೆ + ಮೋಹನನ ಗಳಿಕೆ

$= \frac{3}{42} + \frac{7}{42} = \frac{10}{42}$

ಈ ಪ್ರಕರಣದಲ್ಲಿ ಪೂರ್ತಿ ತ್ಯಾಗವನ್ನು ರಮೇಶನೇ ಮಾಡಿರುವನು.

**ನಿಮ್ಮ ತಿಳುವಳಿಕೆಯನ್ನು ಪರೀಕ್ಷಿಸಿಕೊಳ್ಳಿರಿ –1**

**Test Your Understanding – I**

1] A ಮತ್ತು B ಎಂಬ ಪಾಲುದಾರರು 3:1 ರ ಅನುಪಾತದಲ್ಲಿ ಲಾಭ ಹಂಚಿಕೊಳ್ಳುತ್ತಿರುವರು. ಅವರು 'C' ಯನ್ನು ಭವಿಷ್ಯದ ಲಾಭದಲ್ಲಿ $\frac{1}{4}$ ರಷ್ಟು ಪಾಲಿಗೆ ಸೇರಿಸಿಕೊಳ್ಳುವರು. ಆಗ ಹೊಸ ಲಾಭಹಂಚಿಕೆ ಅನುಪಾತವು.

[a] A $\frac{9}{16}$, B $\frac{3}{16}$, C $\frac{4}{16}$

[b] A $\frac{8}{16}$, B $\frac{4}{16}$, C $\frac{4}{16}$

[c] A $\frac{10}{16}$, B $\frac{2}{16}$, C $\frac{4}{16}$

[d] A $\frac{8}{16}$, B $\frac{9}{16}$, C $\frac{10}{16}$

2] X ಮತ್ತು Y ಪಾಲುದಾರರು 3:2 ರ ಅನುಪಾತದಲ್ಲಿ ಲಾಭ ಹಂಚಿಕೊಳ್ಳುವರು. ಈ ಸಂಸ್ಥೆಗೆ $\frac{1}{5}$ ರಷ್ಟು ಪಾಲಿಗೆ Z ಎಂಬುವವರು ಸೇರಿಕೊಂಡರು. Z ರವರು ತಮ್ಮ ಪಾಲನ್ನು X ರಿಂದ $\frac{3}{20}$ ರಷ್ಟು ಮತ್ತು Y ರಿಂದ $\frac{1}{20}$ ರಷ್ಟು ಪಡೆದುಕೊಂಡರೆ, ಹೊಸ ಲಾಭ ಹಂಚಿಕೆ ಅನುಪಾತವು.

[a] 9 : 7 : 4 [b] 8 : 8 : 4 [c] 6 : 10 : 4 [d] 10 : 6 : 4

3] A ಮತ್ತು B ಎಂಬ ಪಾಲುದಾರರು 3:1 ರ ಅನುಪಾತದಲ್ಲಿ ಲಾಭ ಹಂಚಿಕೊಳ್ಳುವರು. C ಎಂಬುವವರು $\frac{1}{4}$ ಪಾಲಿಗೆ ಸೇರಿದರು. A ಮತ್ತು B ಇವರ ತ್ಯಾಗದ ಅನುಪಾತವು:

[a] ಸಮನಾಗಿ [b] 3 : 1 [c] 2 : 1 [d] 3 : 2

### 3.5: ಕೀರ್ತಿಮೌಲ್ಯ : Goodwill

ಪಾಲುದಾರಿಕೆ ಸಂಸ್ಥೆಯ ಪುನರ್‌ರಚನೆ ಸಂದರ್ಭದಲ್ಲಿ (ಲಾಭ ಹಂಚಿಕೆ ಅನುಪಾತದಲ್ಲಿ ಬದಲಾವಣೆ, ಪಾಲುದಾರನ ಸೇರ್ಪಡೆ, ಪಾಲುದಾರನ ನಿವೃತ್ತಿ ಇತ್ಯಾದಿ) ಲೆಕ್ಕ ಬರಹದಲ್ಲಿ ಹೊಂದಾಣಿಕೆಗಳನ್ನು ಮಾಡಬೇಕಾದ ವಿಶೇಷ ಅಂಶಗಳಲ್ಲಿ ಕೀರ್ತಿಮೌಲ್ಯದ ಪರಿಗಣನೆಯೂ ಒಂದಾಗಿದೆ.

### 3.5.1 : ಕೀರ್ತಿಮೌಲ್ಯದ ಅರ್ಥ : Meaning of Goodwill

ದಿನಗಳು ಕಳೆದಂತೆಲ್ಲಾ ವ್ಯವಹಾರ ಸಂಸ್ಥೆಯು ಒಳ್ಳೆಯ ಹೆಸರು, ಕೀರ್ತಿ, ವಿಸ್ತ್ರತ ವ್ಯವಹಾರ ಸಂಪರ್ಕಗಳ ಪ್ರಯೋಜನ ಪಡೆಯುತ್ತದೆ. ಹೊಸದಾಗಿ ಪ್ರಾರಂಭವಾದ ವ್ಯವಹಾರ ಸಂಸ್ಥೆಗೆ ಹೋಲಿಸಿದರೆ ಈ ಸಂಸ್ಥೆಯು ಹೆಚ್ಚಿನ ಲಾಭಗಳಿಸುವ ಸಾಮರ್ಥ್ಯ ಹೊಂದಿರುತ್ತದೆ. ಹೀಗೆ ಸಂಸ್ಥೆಯು ಹೊಂದಿದ ಅಧಿಕ ಲಾಭಗಳಿಸುವ ಸಾಮರ್ಥ್ಯದ ನಗದು ಮೌಲ್ಯವನ್ನೇ ಲೆಕ್ಕಬರಹದಲ್ಲಿ 'ಕೀರ್ತಿಮೌಲ್ಯ' ಎಂದು ಕರೆಯಲಾಗಿದೆ.

ಇದನ್ನು ಅಭೌತಿಕ ಆಸ್ತಿ ಎಂದು ಪರಗಣಿಸಲಾಗಿದೆ. ಬೇರೆ ಮಾತಿನಲ್ಲಿ ಹೇಳುವುದಾದರೆ, ಸಂಸ್ಥೆಯು ಭವಿಷ್ಯತ್ತಿನಲ್ಲಿ ಗಳಿಸಬಹುದಾದ ಸಾಮಾನ್ಯ ಲಾಭಕ್ಕಿಂತ ಅಧಿಕ ಲಾಭಗಳಿಸುವಿಕೆಯ ಮೌಲ್ಯವು ಇದಾಗಿದ್ದು, ಸಂಸ್ಥೆಯು ಗಳಿಸಿದ ಒಳ್ಳೆಯ ಹೆಸರು, ಕೀರ್ತಿಯಿಂದ ಇದು ಉದ್ಭವಿಸುತ್ತದೆ. ಸಾಮಾನ್ಯವಾಗಿ ಕಂಡುಬರುವಂತೆ, ವ್ಯಕ್ತಿಯೋರ್ವನು ಕೀರ್ತಿಮೌಲ್ಯಕ್ಕಾಗಿ ಹೆಚ್ಚಿನ ಹಣಸಂದಾಯ ಮಾಡಿರುವನೆಂದಾದರೆ, ಆ ಕೈಗಾರಿಕೆಯಲ್ಲಿ ಹೊಸದಾಗಿ ಪ್ರಾರಂಭವಾದ ಸಂಸ್ಥೆ ಗಳಿಸಬಹುದಾದ ಲಾಭಕ್ಕಿಂತ ಹೆಚ್ಚಿನ ಅಧಿಕ ಲಾಭ ಗಳಿಸುವ ಸಾಮರ್ಥ್ಯವನ್ನು ಆ ಸಂಸ್ಥೆಯು ಹೊಂದಿದೆ. ಅದಕ್ಕಾಗಿ ಅವನು ಹೆಚ್ಚಿನ ಹಣವನ್ನು ಕೀರ್ತಿಮೌಲ್ಯಕ್ಕಾಗಿ ಸಂದಾಯ ಮಾಡಿರುವನು ಎಂದು ತಿಳಿಯತಕ್ಕದ್ದು.

ಇನ್ನೂ ಸರಳವಾದ ನುಡಿಗಳಲ್ಲಿ ಹೇಳಬೇಕೆಂದರೆ, ಕೀರ್ತಿಮೌಲ್ಯ ಎಂಬುದು ಭವಿಷ್ಯತ್ತಿನಲ್ಲಿ ಸಂಸ್ಥೆಯು ಗಳಿಸಬಹುದಾದ ಹೆಚ್ಚುವರಿ ಗಳಿಕೆಯ ಇಂದಿನ ಮೌಲ್ಯವಾಗಿದೆ ಅಥವಾ ಲಾಭಗಳಿಕೆ ಸಾಮಾರ್ಥ್ಯದ ಬಂಡವಾಳೀಕೃತ ಮೌಲ್ಯವಾಗಿದೆ. ಆದ್ದರಿಂದ ಸಂಸ್ಥೆಯು ಲಾಭಗಳಿಸುತ್ತಿದ್ದರೆ ಮಾತ್ರ ಕೀರ್ತಿಮೌಲ್ಯ ಹೊಂದಿದೆ ಎಂದು ಹೇಳಬಹುದು. ಯಾವುದೇ ಸಂಸ್ಥೆಯು ಸಾಮಾನ್ಯ ಲಾಭವನ್ನು ಮಾತ್ರ ಗಳಿಸುತ್ತಿದ್ದರೆ ಅಥವಾ ಹಾನಿಯನ್ನು ಅನುಭವಿಸುತ್ತಿದ್ದರೆ ಆ ಸಂಸ್ಥೆಯು ಕೀರ್ತಿಮೌಲ್ಯವನ್ನು ಹೊಂದಿಲ್ಲವೆಂದು ಭಾವಿಸಲಾಗುವದು.

### 3.5.2 : ಕೀರ್ತಿಮೌಲ್ಯದ ಮೌಲ್ಯ ನಿರ್ಧರಣೆ ಮೇಲೆ ಪ್ರಭಾವ ಬೀರುವ ಅಂಶಗಳು :

**Factors affecting the value of Goodwill**

ಕೀರ್ತಿಮೌಲ್ಯದ ಮೌಲ್ಯ ನಿರ್ಧರಿಸುವಾಗ ಈ ಕೆಳಗಿನ ಅಂಶಗಳನ್ನು ಪ್ರಮುಖವಾಗಿ ಪರಿಗಣಿಸಬೇಕಾಗುತ್ತದೆ.

1] **ವ್ಯವಹಾರದ ಸ್ವರೂಪ :** ಅತೀ ಮಹತ್ವದ ಉತ್ಪನ್ನಗಳನ್ನು ತಯಾರಿಸುವ ಸಂಸ್ಥೆ ಅಥವಾ ಸ್ಥಿರವಾದ ಬೇಡಿಕೆಯುಳ್ಳ ಉತ್ಪನ್ನಗಳನ್ನು ತಯಾರಿಸುವ ಸಂಸ್ಥೆಯು ಹೆಚ್ಚು ಲಾಭ ಗಳಿಸುವುದು.ಆದ್ದರಿಂದ ಅದು ಹೆಚ್ಚಿನ ಕೀರ್ತಿಮೌಲ್ಯವನ್ನು ಹೊಂದಿರುತ್ತದೆ.

2] **ಸ್ಥಳ:** ವ್ಯವಹಾರವು ಕೇಂದ್ರ ಸ್ಥಳದಲ್ಲಿ ಸ್ಥಾಪಿಸಲ್ಪಟ್ಟಿದ್ದರೆ ಅಥವಾ ಅತೀ ಹೆಚ್ಚಿನ ಗ್ರಾಹಕ ಸಂಚಾರ ದಟ್ಟನೆ ಇರುವ ಸ್ಥಳದಲ್ಲಿ ಸ್ಥಾಪಿತಗೊಂಡಿದ್ದರೆ ಹೆಚ್ಚಿನ ಕೀರ್ತಿಮೌಲ್ಯ ಹೊಂದಿರುತ್ತದೆ.

3] **ನಿರ್ವಹಣೆಯ ಸಾಮರ್ಥ್ಯ:** ಸರಿಯಾದ ನಿರ್ವಹಣೆಯುಳ್ಳ ಸಂಸ್ಥೆಯು ಸಾಮಾನ್ಯವಾಗಿ ಹೆಚ್ಚಿನ ಉತ್ಪಾದಕತೆ ಮತ್ತು ವೆಚ್ಚ ಉಳಿತಾಯದ ಪ್ರಯೋಜನಗಳನ್ನು ಹೊಂದಿರುತ್ತದೆ. ಇದರಿಂದ ಹೆಚ್ಚಿನ ಲಾಭವಾಗುತ್ತದೆ. ಆದ್ದರಿಂದ ಅಂತಹ ಸಂಸ್ಥೆಯ ಕೀರ್ತಿಮೌಲ್ಯವು ಹೆಚ್ಚಾಗಿರುತ್ತದೆ.

4] **ಮಾರುಕಟ್ಟೆ ಪರಿಸ್ಥಿತಿ:** ಏಕಸ್ವಾಮ್ಯತೆ ಅಥವಾ ಸೀಮಿತ ಪೈಪೋಟಿಯಂತಹ ಪರಿಸ್ಥಿತಿಯಲ್ಲಿ ಸಂಸ್ಥೆಯು ಹೆಚ್ಚಿನ ಲಾಭಗಳಿಸುತ್ತದೆ. ಆಗ ಕೀರ್ತಿಮೌಲ್ಯವು ಹೆಚ್ಚಾಗಿರುತ್ತದೆ.

5] **ವಿಶೇಷ ಅನುಕೂಲತೆಗಳು :** ಆಮದು ಪರವಾನಿಗೆ, ಕಡಿಮೆ ದರದಲ್ಲಿ ವಿದ್ಯುತ್ ಸರಬರಾಜು ಭರವಸೆ, ಕಚ್ಚಾ ವಸ್ತುಗಳ ಪೂರೈಕೆಗೆ ದೀರ್ಘಾವಧಿ ಒಪ್ಪಂದ, ಪ್ರತಿಷ್ಠಿತರೊಂದಿಗಿನ ಸಹಭಾಗಿತ್ವ, ಹಕ್ಕು ಸ್ವಾಮ್ಯಗಳು, ವ್ಯಾಪಾರ ಮುದ್ರೆಗಳು, ಮುಂತಾದ ವಿಶೇಷ ಪ್ರಯೋಜನಗಳುಳ್ಳ ಸಂಸ್ಥೆಯು ಹೆಚ್ಚಿನ ಲಾಭಗಳಿಸುವ ಸ್ಥಿತಿಯಲ್ಲಿದ್ದರೆ ಅದರ ಕೀರ್ತಿಮೌಲ್ಯವು ಅಧಿಕವಾಗಿರುತ್ತದೆ.

### 3.5.3 : ಕೀರ್ತಿಮೌಲ್ಯದ ಮೌಲ್ಯನಿರ್ಧರಣೆಯ ಅವಶ್ಯಕತೆ : Need for Valuation of Goodwill

ಸಾಮಾನ್ಯವಾಗಿ ವ್ಯವಹಾರ ಸಂಸ್ಥೆಯನ್ನು ಮಾರಾಟ ಮಾಡುವ ಸಂದರ್ಭದಲ್ಲಿ ಕೀರ್ತಿಮೌಲ್ಯದ ಮೌಲ್ಯವನ್ನು ಕಂಡುಹಿಡಿಯಬೇಕಾಗುತ್ತದೆ. ಆದರೆ ಪಾಲುದಾರಿಕೆ ಸಂಸ್ಥೆಗೆ ಅನ್ವಯಿಸಿ ಹೇಳುವುದಾದರೆ ಈ ಕೆಳಗಿನ ಸಂದರ್ಭಗಳಲ್ಲಿ ಅದರ ಅವಶ್ಯಕತೆಯು ಕಂಡು ಬರುತ್ತದೆ.

1] ಪ್ರಸಕ್ತ ಪಾಲುದಾರರ ಲಾಭಹಂಚಿಕೆ ಅನುಪಾತದಲ್ಲಿ ಬದಲಾವಣೆಯಾದಾಗ;

2] ಹೊಸ ಪಾಲುದಾರನ ಪ್ರವೇಶವಾದಾಗ;

3] ಪಾಲುದಾರನ ನಿವೃತ್ತಿಯಾದಾಗ;

4] ಪಾಲುದಾರನ ಮರಣವಾದಾಗ ಮತ್ತು

5] ಮುಂದುವರಿಯುವ ಸಂಸ್ಥೆಯಾಗಿ ಇಡೀ ವ್ಯವಹಾರವನ್ನು ಮಾರಾಟ ಮಾಡುವುದಕ್ಕೆ ಸಂಸ್ಥೆ ವಿಸರ್ಜಿಸಲ್ಪಟ್ಟಾಗ;

6] ಪಾಲುದಾರಿಕೆ ಸಂಸ್ಥೆಗಳ ಸಂಯೋಗವಾದಾಗ;

### 3.5.4 : ಕೀರ್ತಿಮೌಲ್ಯದ ಮೌಲ್ಯನಿರ್ಧರಣೆಯ ವಿಧಾನಗಳು : Methods of valuation of Goodwill

ಕೀರ್ತಿಮೌಲ್ಯವು ಆಗೋಚರ ಆಸ್ತಿಯಾಗಿದ್ದು, ಅದರ ಸರಿಯಾದ ಮೌಲ್ಯನಿರ್ಧರಿಸುವದು ಕಠಿಣಕರವಾಗಿದೆ. ಪಾಲುದಾರಿಕೆ ಸಂಸ್ಥೆಯ ಕೀರ್ತಿಮೌಲ್ಯವನ್ನು ನಿರ್ಧರಿಸಲು ಹಲವಾರು ವಿಧಾನಗಳನ್ನು ಸೂಚಿಸಲಾಗಿದೆ. ಒಂದು ವಿಧಾನದಲ್ಲಿ ನಿರ್ಧರಿಸುವ ಕೀರ್ತಿಮೌಲ್ಯವು ಮತ್ತೊಂದು ವಿಧಾನದಲ್ಲಿ ನಿರ್ಧರಿಸುವ ಕೀರ್ತಿಮೌಲ್ಯಕ್ಕಿಂತ ಭಿನ್ನವಾಗಿರುವುದು. ಆದ್ದರಿಂದ ಯಾವ ವಿಧಾನದಲ್ಲಿ ಕೀರ್ತಿಮೌಲ್ಯವನ್ನು ನಿರ್ಧರಿಸಬೇಕೆಂಬ ಬಗ್ಗೆ ಪ್ರಸಕ್ತ ಪಾಲುದಾರರು ಮತ್ತು ಒಳಬರುವ ಪಾಲುದಾರ ಎಲ್ಲರೂ ಸೇರಿ ಚರ್ಚಿಸಿ ನಿರ್ಧರಿಸುವರು.

ಕೀರ್ತಿಮೌಲ್ಯ ನಿರ್ಧರಿಸುವ ಕೆಲವು ಮಹತ್ವದ ವಿಧಾನಗಳು ಈ ಕೆಳಗಿನಂತಿವೆ:

1] ಸರಾಸರಿ ಲಾಭದ ವಿಧಾನ

2] ಅಧಿಕ ಲಾಭದ ವಿಧಾನ

3] ಬಂಡವಾಳೀಕರಣ ವಿಧಾನ.

#### 3.5.4.1: ಸರಾಸರಿ ಲಾಭದ ವಿಧಾನ : Average Profits Method

ಈ ವಿಧಾನದಲ್ಲಿ, ಕಳೆದ ಕೆಲವು ವರ್ಷಗಳ ಸರಾಸರಿ ಲಾಭದ ಇಂತಿಷ್ಟು ವರ್ಷಗಳ ಖರೀದಿ ಮೌಲ್ಯವೇ ಕೀರ್ತಿಮೌಲ್ಯ ಎಂದು ಪರಿಗಣಿಸಲಾಗುತ್ತದೆ. ಹೊಸದಾಗಿ ಪ್ರಾರಂಭವಾದ ವ್ಯವಹಾರವು ಆರಂಭದ ಕೆಲವು ವರ್ಷಗಳ ವರೆಗೆ ಯಾವುದೇ ಲಾಭಗಳಿಸಲು ಶಕ್ತವಾಗಿರಲಾರದು ಎಂಬ ಊಹೆಯ ಮೇರೆಗೆ ಈ ವಿಧಾನ ರೂಪಿಸಲಾಗಿದೆ. ಆದ್ದರಿಂದ ಯಶಸ್ವಿಯಾಗಿ ನಡೆಯುತ್ತಿರುವ ಒಂದು ವ್ಯವಹಾರವನ್ನು ಖರೀದಿಸುವ ವ್ಯಕ್ತಿಯು ಆರಂಭಿಕ ಕೆಲವು ವರ್ಷಗಳ ವರೆಗೆ ಗಳಿಸಬಹುದಾದ ಲಾಭಕ್ಕೆ ಸಮನಾದ ಮೊತ್ತವನ್ನು ಕೀರ್ತಿಮೌಲ್ಯಕ್ಕಾಗಿ ಪಾವತಿಸಬೇಕಾಗುತ್ತದೆ. ಆದ್ದರಿಂದ ಹಿಂದಿನ ವರ್ಷಗಳ ಸರಾಸರಿ ಲಾಭಕ್ಕೆ ಭವಿಷ್ಯತ್ತಿನಲ್ಲಿ ಲಾಭಗಳಿಸಬಹುದಾದ ವರ್ಷಗಳಿಂದ ಗುಣಿಸುವ ಮೂಲಕ ಕೀರ್ತಿಮೌಲ್ಯವನ್ನು ಲೆಕ್ಕಹಾಕಬೇಕಾಗುತ್ತದೆ.

ಉದಾಹರಣೆಗೆ, ಹಿಂದಿನ ವರ್ಷಗಳ ಸರಾಸರಿ ಲಾಭವು ₹20,000 ಆಗಿದ್ದರೆ, ಮುಂದಿನ ಮೂರು ವರ್ಷಗಳ ವರೆಗೆ ಇದೇ ರೀತಿ ಲಾಭವು ಮುಂದುವರೆಯುವುದೆಂದು ಊಹಿಸಿದರೆ, ಕೀರ್ತಿಮೌಲ್ಯವು ₹60,000 ಆಗುವುದು. (₹20,000 × 3 = ₹ 60,000).

**ನಿದರ್ಶನ 9:**

ಸಂಸ್ಥೆಯು ಗಳಿಸಿದ ಐದು ವರ್ಷಗಳ ಲಾಭದ ವಿವರವು ಹೀಗಿದೆ.

2010 ನೇ ವರ್ಷಕ್ಕೆ ₹ 4,00,000

2011 ನೇ ವರ್ಷಕ್ಕೆ ₹ 3,98,000

2012 ನೇ ವರ್ಷಕ್ಕೆ ₹ 4,50,000

2013 ನೇ ವರ್ಷಕ್ಕೆ ₹ 4,45,000 ಮತ್ತು

2014 ನೇ ವರ್ಷಕ್ಕೆ ₹ 5,00,000

5 ವರ್ಷಗಳ ಸರಾಸರಿ ಲಾಭದ 4 ವರ್ಷದ ಖರೀದಿ ಆಧರಿಸಿ ಸಂಸ್ಥೆಯ ಕೀರ್ತಿಮೌಲ್ಯವನ್ನು ಲೆಕ್ಕ ಹಾಕಿರಿ.

**ಪರಿಹಾರ:**

| ವರ್ಷ | ಲಾಭ (₹) |
|---|---|
| 2010 | 4,00,000 |
| 2011 | 3,98,000 |
| 2012 | 4,50,000 |
| 2013 | 4,45,000 |
| 2014 | 5,00,000 |
| **ಒಟ್ಟು** | **21,93,000** |

$$\text{ಸರಾಸರಿ ಲಾಭ} = \frac{\text{ಹಿಂದಿನ 5 ವರ್ಷಗಳ ಒಟ್ಟು ಲಾಭ}}{\text{ವರ್ಷಗಳ ಸಂಖ್ಯೆ}}$$

$$= ₹\ \frac{21,93,000}{5}$$

$$= ₹\ 4,38,600$$

$$\text{ಕೀರ್ತಿಮೌಲ್ಯ} = \text{ಸರಾಸರಿ ಲಾಭ} \times \text{ಖರೀದಿಸಿದ ವರ್ಷಗಳ ಸಂಖ್ಯೆ}$$

$$= ₹\ 4,38,600 \times 4$$

$$= ₹\ 17,54,400$$

ಭವಿಷ್ಯತ್ತಿನಲ್ಲಿ ಲಾಭಗಳಿಕೆಯ ಒಟ್ಟಾರೆ ಸ್ಥಿತಿಗತಿಯಲ್ಲಿ ಯಾವುದೇ ಬದಲಾವಣೆಯಾಗಲಾರದೆಂಬ ಊಹೆಯನ್ನು ಆಧರಿಸಿ ಮೇಲಿನಂತೆ ಕೀರ್ತಿಮೌಲ್ಯವನ್ನು ಲೆಕ್ಕಹಾಕಲಾಗಿದೆ.

ಮೇಲಿನ ನಿದರ್ಶನವು ಸರಳ ಸರಾಸರಿಯನ್ನು ಆಧರಿಸಿದೆ. ಕೆಲವು ಸಲ, ಲಾಭಗಳಿಕೆಯು ಏರಿಕೆ ಅಥವಾ ಇಳಿಕೆ ಕ್ರಮದಲ್ಲಿ ಸಾಗುತ್ತಿರುತ್ತದೆ. ಹಾಗಿದ್ದಾಗ ಹಿಂದಿನ ವರ್ಷಗಳಿಗಿಂತ ಇತ್ತೀಚಿನ ವರ್ಷಗಳ ಲಾಭಕ್ಕೆ ಹೆಚ್ಚಿನ ತೂಕಗಳನ್ನು ನೀಡಿ ಸರಾಸರಿ ಲೆಕ್ಕ ಹಾಕಲಾಗುತ್ತದೆ. ಆದ್ದರಿಂದ ಹಿಂದಿನ ವರ್ಷಗಳಿಂದ ಮುಂದಿನ ವರ್ಷಗಳ ಲಾಭಕ್ಕೆ 1, 2, 3, 4 ಹೀಗೆ ತೂಕಗಳನ್ನು ನೀಡಲಾಗುತ್ತದೆ. ಏನೇ ಆದರೂ ತೂಕಗಳನ್ನು ನೀಡಿ ಸರಾಸರಿ ಲೆಕ್ಕ ಹಾಕುವಂತೆ ನಿರ್ದಿಷ್ಟವಾಗಿ ತಿಳಿಸಿದಾಗ ಮಾತ್ರ ಅನುಸರಿಸಬೇಕು. (ನಿದರ್ಶನ 10 ಮತ್ತು 11 ನ್ನು ಅವಲೋಕಿಸಿರಿ).

**ನಿದರ್ಶನ 10:**

ಸಂಸ್ಥೆಯ ಐದು ವರ್ಷಗಳ ಲಾಭದ ವಿವರ ಹೀಗಿದೆ.

| ವರ್ಷ | ಲಾಭ (₹) |
|---|---|
| 2011–12 | 20,000 |
| 2012–13 | 24,000 |
| 2013–14 | 30,000 |
| 2014–15 | 25,000 |
| 2015–16 | 18,000 |

ತೂಕದ ಸರಾಸರಿ ಲಾಭದ ಮೂರು ವರ್ಷದ ಲಾಭ ಖರೀದಿ ಆಧರಿಸಿ ಕೀರ್ತಿಮೌಲ್ಯವನ್ನು ಅನುಕ್ರಮವಾಗಿ 1, 2, 3, 4 ಮತ್ತು 5 ತೂಕಗಳನ್ನು ನೀಡಿ ಲೆಕ್ಕ ಹಾಕಿರಿ.

**ಪರಿಹಾರ:**

| 31 ನೇ ಮಾರ್ಚಗೆ ಕೊನೆಗೊಂಡ ವರ್ಷ | ಲಾಭ (₹) | ತೂಕ | ಗುಣಲಬ್ಧ |
|---|---|---|---|
| 2011–12 | 20,000 | 1 | 20,000 |
| 2012–13 | 24,000 | 2 | 48,000 |
| 2013–14 | 30,000 | 3 | 90,000 |
| 2014–15 | 25,000 | 4 | 1,00,000 |
| 2015–16 | 18,000 | 5 | 90,000 |
| **ಒಟ್ಟು** | | **15** | **3,48,000** |

ತೂಕದ ಸರಾಸರಿ ಲಾಭ $= \frac{3,48,000}{15}$

$= ₹\ 23,200$

ಕೀರ್ತಿಮೌಲ್ಯ $= ₹\ 23,200 \times 3$

$= ₹\ 69,600$

**ನಿದರ್ಶನ 11:**

ಹಿಂದಿನ ನಾಲ್ಕು ವರ್ಷಗಳ ತೂಕದ ಸರಾಸರಿಯ ಮೂರು ವರ್ಷದ ಖರೀದಿ ಆಧರಿಸಿ ಕೀರ್ತಿಮೌಲ್ಯವನ್ನು ಲೆಕ್ಕ ಹಾಕಿರಿ. ಹಿಂದಿನ ನಾಲ್ಕು ವರ್ಷಗಳ ಲಾಭವು. 2012– ₹ 20,200, 2013– ₹ 24,800, 2014– ₹ 20,000 ಮತ್ತು 2015– ₹ 30,000. ಪ್ರತಿಯೊಂದು ವರ್ಷಕ್ಕೆ ನಿಗದಿಪಡಿಸಿದ ತೂಕಗಳು : 2012–1, 2013–2, 2014–3 ಮತ್ತು 2015–4.

ನಿಮಗೆ ಕೆಳಗಿನ ಮಾಹಿತಿಯನ್ನು ಒದಗಿಸಲಾಗಿದೆ.

1] ದಿ: 01–09–2014 ರಂದು ₹ 6,000 ವೆಚ್ಚದಲ್ಲಿ ಸ್ಥಾವರದ ಧೀರ್ಘಕಾಲಿಕ ರಿಪೇರಿ ಕೈಗೊಳ್ಳಲಾಗಿದ್ದು, ಅದನ್ನು ಕಂದಾಯಕ್ಕೆ ಹೊಂದಿಸಲಾಗಿದೆ. ಕೀರ್ತಿಮೌಲ್ಯ ಲೆಕ್ಕಹಾಕುವಾಗ ಅದನ್ನು ಬಂಡವಾಳೀಕೃತ ವೆಚ್ಚವೆಂದು ಪರಿಗಣಿಸಬೇಕು ಮತ್ತು ವಾರ್ಷಿಕ ಶೇ. 10 ರ ದರದಲ್ಲಿ ಇಳಿಕೆ ಶಿಲ್ಕಿನ ವಿಧಾನದಲ್ಲಿ ಸವಕಳಿಯನ್ನು ಹೊಂದಾಣಿಕೆಗೊಳಿಸಬೇಕು.

2] 2013 ನೇ ವರ್ಷಕ್ಕೆ ಅಂತಿಮ ಶಿಲ್ಕಿನ ಮೌಲ್ಯ ನಿರ್ಧರಿಸುವಾಗ ₹ 2,400 ರಷ್ಟು ಅಧಿಕ ಮೌಲ್ಯ ನಿರ್ಧರಿಸಲಾಗಿದೆ.

3] ವ್ಯವಸ್ಥಾಪನೆಯ ವೆಚ್ಚಗಳನ್ನು ಸರಿದೂಗಿಸಲು ವಾರ್ಷಿಕ ₹ 4,800 ಗಳನ್ನು ಕೀರ್ತಿಮೌಲ್ಯ ಲೆಕ್ಕ ಹಾಕಲು ಹೊರೆಯಾಗಿಸಬೇಕು.

**ಪರಿಹಾರ:**

**ಹೊಂದಾಣಿಕೆಗೊಳಿಸಿದ ಲಾಭದ ಲೆಕ್ಕ**

| ವಿವರಗಳು | 2012 ₹ | 2013 ₹ | 2014 ₹ | 2015 ₹ |
|---|---|---|---|---|
| ಕೊಟ್ಟಿರುವ ಲಾಭ | 20,200 | 24,800 | 20,000 | 30,000 |
| ಕಳೆ: ವ್ಯವಸ್ಥಾಪನೆಯ ವೆಚ್ಚ | 4,800 | 4,800 | 4,800 | 4,800 |
| | 15,400 | 20,000 | 15,200 | 25,200 |
| ಕೂಡಿಸಿ:ಕಂದಾಯಕ್ಕೆ ಹೊರೆಯಾಗಿಸಲಾದ ಬಂಡವಾಳ ವೆಚ್ಚ | – | – | 6,000 | – |
| | 15,400 | 20,000 | 21,200 | 25,200 |
| ಕಳೆ: ಒದಗಿಸಲಾರದ ಸವಕಳಿ | – | – | 200 | 580 |
| | 15,400 | 20,000 | 21,000 | 24,620 |
| ಕಳೆ: ಅಂತಿಮ ಶಿಲ್ಕಿನ ಅಧಿಕ ಮೌಲ್ಯಮಾಪನ | – | 2,400 | – | – |
| | 15,400 | 17,600 | 21,000 | 24,620 |
| ಕೂಡಿಸು: ಆರಂಭಿಕ ಶಿಲ್ಕಿನಲ್ಲಿ ಕೂಡಿದ ಅಧಿಕ ಮೌಲ್ಯ | – | – | 2,400 | – |
| **ಹೊಂದಾಣಿಕೆಗೊಳಿಸಿದ ಲಾಭ** | **15,400** | **17,600** | **23,400** | **24,620** |

**ತೂಕದ ಸರಾಸರಿ ಲಾಭದ ಲೆಕ್ಕ:**

| ವರ್ಷ | ಲಾಭ (₹) | ತೂಕ | ಗುಣಲಬ್ಧ |
|---|---|---|---|
| 2012 | 15,400 | 1 | 15,400 |
| 2013 | 17,600 | 2 | 35,200 |
| 2014 | 23,400 | 3 | 70,200 |
| 2015 | 24,620 | 4 | 98,480 |
| **ಒಟ್ಟು** | | **10** | **2,19,280** |

ತೂಕದ ಸರಾಸರಿ ಲಾಭ $= \frac{2,19,280}{10}$

$= ₹\ 21,928$

ಕೀರ್ತಿಮೌಲ್ಯ $= ₹\ 21,928 \times 3$

$= ₹\ 65,784$

**ಟಿಪ್ಪಣಿಗಳು :–**

1] 2014 ರ ಸವಕಳಿ = ₹6,000 ಮೇಲೆ ಶೇ. 10 ರಂತೆ 4 ತಿಂಗಳು

= ₹6,000 × 10/100 × 4/12 = ₹ 200

2] 2015 ರ ಸವಕಳಿ = [₹6,000–₹200 (ಮೊದಲ ವರ್ಷದ ಸವಕಳಿ)] ರ ಮೇಲೆ ಶೇ. 10

= ₹5,800 × 10/100 = ₹ 580

3] 2013 ರ ಅಂತಿಮ ಸರಕು 2014 ರ ಆರಂಭದ ಶಿಲ್ಕು ಆಗುವುದು.

### 3.5.4.2: ಅಧಿಕ ಲಾಭದ ವಿಧಾನ : Super Profits Method

ಹೊಸದಾಗಿ ವ್ಯವಹಾರವೊಂದನ್ನು ಪ್ರಾರಂಭಿಸಿದಾಗ ಅದು ತನ್ನ ಕಾರ್ಯಾಚರಣೆಯ ಆರಂಭಿಕ ಕೆಲವು ವರ್ಷಗಳಲ್ಲಿ ಯಾವುದೇ ಲಾಭವನ್ನು ಗಳಿಸಲಾರದು ಎಂಬ ಊಹೆಯ ಮೇರೆಗೆ ಕೀರ್ತಿಮೌಲ್ಯ ನಿರ್ಧರಿಸುವ ಸರಾಸರಿ ಲಾಭದ (ಸಾಮಾನ್ಯ ಅಥವಾ ತೂಕದ) ವಿಧಾನವನ್ನು ನಿರೂಪಿಸಲಾಗಿದೆ. ಆದ್ದರಿಂದ ಪ್ರಸಕ್ತದಲ್ಲಿ ಅಸ್ತಿತ್ವದಲ್ಲಿರುವ ವ್ಯವಹಾರವನ್ನು ಖರೀದಿಸುವ ವ್ಯಕ್ತಿಯು ಆರಂಭಿಕ ಕೆಲವು ವರ್ಷಗಳಲ್ಲಿ ಆತ ಪಡೆಯುವ ಲಾಭಕ್ಕೆ ಸಮನಾದ ಮೊತ್ತವನ್ನು ಕೀರ್ತಿಮೌಲ್ಯಕ್ಕಾಗಿ ಸಂದಾಯ ಮಾಡಬೇಕಾಗುತ್ತದೆ. ಆದರೆ ಇದು ಸಮಂಜಸವಾಗಲಾರದು. ಆತ ಪಡೆಯುವ ನೈಜ ಪ್ರಯೋಜನವನ್ನು ಆರಂಭಿಕ ವರ್ಷಗಳ ಒಟ್ಟು ಲಾಭಕ್ಕೆ ಹೋಲಿಕೆ ಮಾಡದೇ ಇದೇ ರೀತಿಯ ವ್ಯವಹಾರ ಪಥದಲ್ಲಿ ತೊಡಗಿಸಿದ ಬಂಡವಾಳದ ಮೇಲೆ ಸಾಮಾನ್ಯವಾಗಿ ಗಳಿಸಬಹುದಾದ ಸಾಮಾನ್ಯ ಪ್ರತಿಫಲದ ದರದಲ್ಲಿ ತೊಡಗಿಸಿದ ಬಂಡವಾಳದ ಮೇಲೆ ಗಳಿಸಬಹುದಾದ ಸಾಮಾನ್ಯ ಲಾಭವನ್ನು ಪರಿಗಣಿಸಬೇಕಾಗುತ್ತದೆ. ಆದ್ದರಿಂದ ಸಾಮಾನ್ಯ ಲಾಭ ಪ್ರಮಾಣಕ್ಕಿಂತ ಹೆಚ್ಚಿನ ಲಾಭಗಳಿಸಿದ ಪ್ರಮಾಣವನ್ನು ಆಧರಿಸಿ ಕೀರ್ತಿಮೌಲ್ಯವನ್ನು ನಿರ್ಧರಿಸುವುದು ಸಮಂಜಸವೆನಿಸುತ್ತದೆ. ಸಾಮಾನ್ಯ ಲಾಭಕ್ಕಿಂತ ಗಳಿಸಿದ ಹೆಚ್ಚುವರಿ ಲಾಭವನ್ನು ಅಧಿಕ ಲಾಭವೆಂದು ಪರಿಗಣಿಸುವರು.

$$\text{ಸಾಮಾನ್ಯ ಲಾಭ} = \frac{\text{ತೊಡಗಿಸಿದ ಬಂಡವಾಳ} \times \text{ಸಾಮಾನ್ಯ ಪ್ರತಿಫಲದ ದರ}}{100}$$

ಒಂದು ಅಸ್ತಿತ್ವದಲ್ಲಿರುವ ಸಂಸ್ಥೆಯು ₹ 1,50,000 ಬಂಡವಾಳದ ಮೇಲೆ ₹ 18,000 ಲಾಭ ಗಳಿಸುತ್ತದೆ ಎಂದು ಊಹಿಸೋಣ ಮತ್ತು ಸಾಮಾನ್ಯ ಗಳಿಕೆ ದರ ಶೇ. 10 ರಂತೆ ಇರುತ್ತದೆ. ಆಗ ಸಾಮಾನ್ಯ ಲಾಭ ಪ್ರಮಾಣ ₹ 15,000 ಆಗುತ್ತದೆ(₹ 1,50,000 × 10/100). ಈ ಪ್ರಕರಣದಲ್ಲಿ ಅಧಿಕ ಲಾಭ ಪ್ರಮಾಣವು ₹ 3,000 ಆಗುತ್ತದೆ (₹ 18,000 – ₹ 15,000). ಅಧಿಕ ಲಾಭದ ವಿಧಾನದಲ್ಲಿ ಅಧಿಕ ಲಾಭ ಪ್ರಮಾಣಕ್ಕೆ ಕೆಲವು ವರ್ಷಗಳ ಖರೀದಿ ಗುಣಕದಿಂದ ಗುಣಿಸುವ ಮೂಲಕ ಕೀರ್ತಿಮೌಲ್ಯವನ್ನು ಲೆಕ್ಕ ಹಾಕಲಾಗುತ್ತದೆ. ಮೇಲಿನ ಉದಾಹರಣೆಯಲ್ಲಿ ಅಧಿಕ ಲಾಭದ ಪ್ರಯೋಜನವು ಭವಿಷ್ಯದ ಐದು ವರ್ಷಗಳ ವರೆಗೆ ದೊರೆಯುವುದೆಂದು ಸಂಸ್ಥೆಯು ನಿರೀಕ್ಷಿಸಿದರೆ, ಆಗ ಕೀರ್ತಿಮೌಲ್ಯದ ಮೊತ್ತವನ್ನು ₹ 15,000 (₹ 3,000 × 5) ಗಳಿಗೆ ಮೌಲೀಕರಿಸಲಾಗುತ್ತದೆ .

ಈ ವಿಧಾನವು ಕೆಳಗಿನ ಹಂತಗಳನ್ನು ಒಳಗೊಂಡಿರುತ್ತದೆ.

1] ಸರಾಸರಿ ಲಾಭದ ಲೆಕ್ಕಾಚಾರ

2] ಸಾಮಾನ್ಯ ಪ್ರತಿಫಲ ದರದ ಆಧಾರದ ಮೇಲೆ ತೊಡಗಿಸಿದ ಬಂಡವಾಳದ ಮೇಲೆ ಸಾಮಾನ್ಯ ಲಾಭದ ಲೆಕ್ಕಾಚಾರ ಮಾಡುವುದು.

3] ಸರಾಸರಿ ಲಾಭದಿಂದ ಸಾಮಾನ್ಯ ಲಾಭವನ್ನು ಕಳೆಯುವುದರ ಮೂಲಕ ಅಧಿಕ ಲಾಭದ ಲೆಕ್ಕಾಚಾರ ಮಾಡುವುದು.

4] ನೀಡಿದ ವರ್ಷಗಳ ಖರೀದಿಗೆ ಅಧಿಕ ಲಾಭವನ್ನು (Super profit) ಗುಣಿಸುವುದರ ಮೂಲಕ ಕೀರ್ತಿ ಮೌಲ್ಯವನ್ನು ಲೆಕ್ಕಾಚಾರ ಮಾಡುವುದು.

**ನಿದರ್ಶನ 12:**

ಒಂದು ವ್ಯವಹಾರ ಸಂಸ್ಥೆಯ ಪುಸ್ತಕವು ದಿನಾಂಕ: 31–12–2014 ರಂದು ₹ 5,00,000 ತೊಡಗಿಸಿದ ಬಂಡವಾಳವೆಂದು ತೋರಿಸುತ್ತದೆ ಮತ್ತು ಹಿಂದಿನ 5 ವರ್ಷಗಳ ಲಾಭಗಳು ಈ ರೀತಿಯಾಗಿವೆ: 2010–₹ 40,000, 2011–₹ 50,000 2012–₹ 55,000, 2013–₹ 70,000 ಹಾಗೂ 2014–₹ 85,000. ಸಾಮಾನ್ಯ ಪ್ರತಿಫಲದ ದರವು ಶೇ. 10 ರಷ್ಟು ಆಗಿದ್ದು, ಸಂಸ್ಥೆಯ ಅಧಿಕಲಾಭದ ಮೂರು ವರ್ಷಗಳ ಖರೀದಿಯ ಆಧಾರದ ಮೇಲೆ ಕೀರ್ತಿಮೌಲ್ಯದ ಮೊತ್ತವನ್ನು ಕಂಡು ಹಿಡಿಯಿರಿ.

**ಪರಿಹಾರ:**

$$\text{ಸಾಮಾನ್ಯ ಲಾಭ} = \frac{\text{ತೊಡಗಿಸಿದ ಬಂಡವಾಳ} \times \text{ಸಾಮಾನ್ಯ ಪ್ರತಿಫಲದ ದರ}}{100}$$

$$= \frac{₹5,00,000 \times 10}{100}$$

$$= ₹\ 50,000$$

ಸರಾಸರಿ ಲಾಭವು

| ವರ್ಷ | ಲಾಭ (₹) |
|---|---|
| 2010 | 40,000 |
| 2011 | 50,000 |
| 2012 | 55,000 |
| 2013 | 70,000 |
| 2014 | 85,000 |
| **ಒಟ್ಟು** | **3,00,000** |

ಸರಾಸರಿ ಲಾಭ = ₹ 3,00,000 / 5 = ₹ 60,000

ಅಧಿಕ ಲಾಭ = ₹ 60,000 – ₹ 50,000 = ₹ 10,000

ಕೀರ್ತಿಮೌಲ್ಯ = ₹ 10,000 × 3

= ₹ 30,000

**ನಿದರ್ಶನ 13:**

ಅನು ಮತ್ತು ವೇಣು ಇವರ ಸಂಸ್ಥೆಯ ಬಂಡವಾಳ ₹ 1,00,000 ಇದ್ದು ಮತ್ತು ಮಾರುಕಟ್ಟೆಯ ಬಡ್ಡಿ ದರವು ಶೇ.15 ಆಗಿರುತ್ತದೆ. ಪ್ರತಿ ಪಾಲುದಾರರ ವಾರ್ಷಿಕ ವೇತನವು ₹ 6,000 ಇರುತ್ತದೆ. ಹಿಂದಿನ ಮೂರು ವರ್ಷಗಳ ಲಾಭಗಳ ವಿವರ ಹೀಗಿವೆ ₹ 30,000, ₹ 36,000 ಹಾಗೂ ₹ 42,000. ಹಿಂದಿನ ಮೂರು ವರ್ಷಗಳ ಸರಾಸರಿ ಅಧಿಕ ಲಾಭದ 2 ವರ್ಷಗಳ ಖರೀದಿಗೆ ಕೀರ್ತಿ ಮೌಲ್ಯವನ್ನು ಮೌಲೀಕರಿಸಿ ಸಂಸ್ಥೆಯ ಕೀರ್ತಿಮೌಲ್ಯವನ್ನು ಲೆಕ್ಕಚಾರ ಮಾಡಿರಿ.

**ಪರಿಹಾರ:**

ಬಂಡವಾಳದ ಮೇಲಿನ ಬಡ್ಡಿ = ₹ 1,00,000 × $\frac{15}{100}$ = ₹ 15,000 (i)

ಕೂಡಿಸಿ: ಪಾಲುದಾರರ ವೇತನ = ₹ 6,000 × 2 = ₹ 12000 (ii)

ಸಾಮಾನ್ಯ ಲಾಭ = (i +ii) = ₹ 15,000 + ₹ 12,000 = ₹ 27,000

ಸರಾಸರಿ ಲಾಭ = $\frac{₹30,000 + ₹36,000 + ₹42,000}{3}$

= $\frac{₹1,08,000}{3}$

= ₹ 36,000

ಅಧಿಕ ಲಾಭ = ಸರಾಸರಿ ಲಾಭ – ಸಾಮಾನ್ಯ ಲಾಭ

= ₹ 36,000 – ₹ 27,000

= ₹ 9,000

ಕೀರ್ತಿಮೌಲ್ಯ = ಅಧಿಕ ಲಾಭ × ಖರೀದಿಸಿದ ವರ್ಷಗಳ ಸಂಖ್ಯೆ

= ₹ 9,000 × 2

= ₹ 18,000

### 3.5.4.3: ಬಂಡವಾಳೀಕರಣದ ವಿಧಾನಗಳು : Capitalisation Methods

ಈ ವಿಧಾನದಲ್ಲಿ ಕೀರ್ತಿಮೌಲ್ಯವನ್ನು ಎರಡು ವಿಧದಲ್ಲಿ ಕಂಡು ಹಿಡಿಯಲಾಗುವುದು.

ಎ) ಸರಾಸರಿ ಲಾಭದ ಬಂಡವಾಳೀಕರಣ ಅಥವಾ

ಬಿ) ಅಧಿಕ ಲಾಭದ ಬಂಡವಾಳೀಕರಣ

**ಎ) ಸರಾಸರಿ ಲಾಭದ ಬಂಡವಾಳೀಕರಣ**

ಈ ವಿಧಾನದಲ್ಲಿ ಸಾಮಾನ್ಯ ಪ್ರತಿಫಲದ ದರದಲ್ಲಿ ಬಂಡವಾಳೀಕರಿಸಿದ ಸರಾಸರಿ ಲಾಭದ ಮೌಲ್ಯದಿಂದ ವ್ಯವಹಾರದಲ್ಲಿ ತೊಡಗಿಸಿದ ನೈಜ ಬಂಡವಾಳ(ನಿವ್ವಳ ಆಸ್ತಿಗಳು) ವನ್ನು ಕಳೆಯುವ ಮೂಲಕ ಕೀರ್ತಿಮೌಲ್ಯವನ್ನು ಕಂಡು ಹಿಡಿಯಲಾಗುತ್ತದೆ. ಇದು ಈ ಕೆಳಗಿನ ಹಂತಗಳನ್ನು ಒಳಗೊಂಡಿದೆ:

1) ಹಿಂದಿನ ಕೆಲವು ವರ್ಷಗಳ ಕಾರ್ಯನಿರ್ವಹಣೆಯನ್ನಾಧರಿಸಿ ಸರಾಸರಿ ಲಾಭವನ್ನು ಕಂಡುಹಿಡಿಯುವುದು.
2) ಸಾಮಾನ್ಯ ಪ್ರತಿಫಲದ ದರದಲ್ಲಿ ಸರಾಸರಿ ಲಾಭದ ಬಂಡವಾಳೀಕೃತ ಮೌಲ್ಯವನ್ನು ಈ ಕೆಳಗಿನಂತೆ ಕಂಡುಹಿಡಿಯುವುದು.

**ಸರಾಸರಿ ಲಾಭದ ಬಂಡವಾಳೀಕೃತ ಮೌಲ್ಯ = $\frac{\text{ಸರಾಸರಿ ಲಾಭ} \times 100}{\text{ಸಾಮಾನ್ಯ ಪ್ರತಿಫಲದ ದರ}}$**

3) ಕೀರ್ತಿಮೌಲ್ಯವನ್ನು ಹೊರತುಪಡಿಸಿ ಒಟ್ಟು ಆಸ್ತಿಗಳಿಂದ ಬಾಹ್ಯ ಹೊಣೆಗಾರಿಕೆಗಳನ್ನು ಕಳೆಯುವ ಮೂಲಕ ತೊಡಗಿಸಿದ ನೈಜ ಬಂಡವಾಳ (ನಿವ್ವಳ ಆಸ್ತಿಗಳು) ವನ್ನು ಕಂಡು ಹಿಡಿಯುವುದು.

**ತೊಡಗಿಸಿದ ಬಂಡವಾಳ = ಕೀರ್ತಿಮೌಲ್ಯ ಹೊರತುಪಡಿಸಿ ಒಟ್ಟು ಆಸ್ತಿಗಳು – ಬಾಹ್ಯ ಹೊಣೆಗಾರಿಕೆಗಳು**

4) ಸರಾಸರಿ ಲಾಭದ ಬಂಡವಾಳೀಕೃತ ಮೌಲ್ಯದಿಂದ ನಿವ್ವಳ ಆಸ್ತಿಗಳನ್ನು ಕಳೆದು ಕೀರ್ತಿಮೌಲ್ಯವನ್ನು ಲೆಕ್ಕ ಹಾಕುವುದು (ಮೇಲಿನ 2 ರಲ್ಲಿ 3 ನ್ನು ಕಳೆಯುವುದು.)

**ನಿದರ್ಶನ 14:**

ಹಿಂದಿನ ಕೆಲವು ವರ್ಷಗಳಲ್ಲಿ ವ್ಯವಹಾರ ಸಂಸ್ಥೆಯು ₹1,00,000 ಗಳಷ್ಟು ಸರಾಸರಿ ಲಾಭವನ್ನು ಗಳಿಸಿದೆ ಮತ್ತು ಈ ರೀತಿ ವ್ಯವಹಾರಗಳಲ್ಲಿ ಸಾಮಾನ್ಯ ಪ್ರತಿಫಲದ ದರವು ಶೇಕಡಾ 10 ರಷ್ಟು ಆಗಿದೆ. ವ್ಯವಹಾರದ ನಿವ್ವಳ ಆಸ್ತಿಗಳ ಮೌಲ್ಯ ₹ 8,20,000 ಆಗಿದ್ದಾಗ, ಸರಾಸರಿ ಲಾಭದ ಬಂಡವಾಳೀಕರಣದ ವಿಧಾನದಲ್ಲಿ ಕೀರ್ತಿಮೌಲ್ಯವನ್ನು ಕಂಡು ಹಿಡಿಯಿರಿ.

**ಪರಿಹಾರ:**

$$\text{ಸರಾಸರಿ ಲಾಭದ ಬಂಡವಾಳೀಕೃತ ಮೌಲ್ಯ} = \frac{₹1,00,000 \times 100}{10}$$

$$= ₹\ 10,00,000$$

$$\text{ಕೀರ್ತಿಮೌಲ್ಯ} = \text{ಬಂಡವಾಳೀಕೃತ ಮೌಲ್ಯ} - \text{ನಿವ್ವಳ ಆಸ್ತಿಗಳು}$$

$$= ₹10,00,000 - ₹8,20,000$$

$$= ₹\ 1,80,000$$

**ಬಿ) ಅಧಿಕ ಲಾಭದ ಬಂಡವಾಳೀಕರಣ:**

ಅಧಿಕ ಲಾಭವನ್ನು ನೇರವಾಗಿ ಬಂಡವಾಳೀಕರಿಸುವ ಮೂಲಕ ಕೀರ್ತಿಮೌಲ್ಯವನ್ನು ಕಂಡು ಹಿಡಿಯಬಹುದು. ಈ ವಿಧಾನದಲ್ಲಿ ಸರಾಸರಿ ಲಾಭದ ಬಂಡವಾಳೀಕೃತ ಮೌಲ್ಯವನ್ನು ಕಂಡು ಹಿಡಿಯಬೇಕಾಗಿಲ್ಲ. ಇದು ಈ ಕೆಳಗಿನ ಹಂತಗಳನ್ನು ಒಳಗೊಂಡಿದೆ:

1. ಒಟ್ಟು ಆಸ್ತಿಗಳಲ್ಲಿ ಬಾಹ್ಯ ಹೊಣೆಗಾರಿಕೆಗಳನ್ನು ಕಳಿಯುವುದರ ಮೂಲಕ ತೊಡಗಿಸಿದ ಬಂಡವಾಳವನ್ನು ಲೆಕ್ಕ ಹಾಕಬೇಕು.
2. ತೊಡಗಿಸಿದ ಬಂಡವಾಳದ ಮೇಲೆ ಸಾಮಾನ್ಯ ಲಾಭವನ್ನು ಕಂಡು ಹಿಡಿಯಬೇಕು.
3. ಹಿಂದಿನ ವರ್ಷಗಳ ಸರಾಸರಿ ಲಾಭವನ್ನು ಲೆಕ್ಕ ಹಾಕಬೇಕು.
4. ಸರಾಸರಿ ಲಾಭದಿಂದ ಸಾಮಾನ್ಯ ಲಾಭವನ್ನು ಕಳೆಯುವ ಮೂಲಕ ಅಧಿಕ ಲಾಭವನ್ನು ಲೆಕ್ಕ ಹಾಕಬೇಕು
5. ಅಧಿಕ ಲಾಭಕ್ಕೆ ಅಪೇಕ್ಷಿತ ಪ್ರತಿಫಲದ ದರದಿಂದ ಗುಣಿಸಬೇಕು.

$$\textbf{ಕೀರ್ತಿಮೌಲ್ಯ} = \frac{\textbf{ಅಧಿಕ ಲಾಭ} \times \mathbf{100}}{\textbf{ಸಾಮಾನ್ಯ ಪ್ರತಿಫಲದ ದರ}}$$

ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ ಅಧಿಕ ಲಾಭದ ಬಂಡವಾಳೀಕೃತ ಮೌಲ್ಯವೇ ಕೀರ್ತಿಮೌಲ್ಯವಾಗಿದೆ. ಸರಾಸರಿ ಲಾಭದ ಬಂಡವಾಳೀಕೃತ ಮೌಲ್ಯದಿಂದ ಲೆಕ್ಕಹಾಕಿದ ಕೀರ್ತಿಮೌಲ್ಯವನ್ನೇ ಈ ವಿಧಾನವು ತೋರಿಸುವುದು.

ಉದಾಹರಣೆಗೆ: ನಿದರ್ಶನ 14 ರಲ್ಲಿ ಕೊಟ್ಟಿರುವ ಮಾಹಿತಿ ಸರಾಸರಿ ಲಾಭ ₹ 1,00,000 ಮತ್ತು ಸಾಮಾನ್ಯ ಲಾಭವು ₹82,000 (₹8,20,000 × 10%) ಅಧಿಕ ಲಾಭವು ₹ 18,000 (₹ 1,00,000 – ₹82,000) ಕೊಡಲಾಗಿದೆ. ಆಗ ಕೀರ್ತಿಮೌಲ್ಯವು;

$$\text{ಕೀರ್ತಿಮೌಲ್ಯವು} = \frac{₹18,000 \times 100}{10}$$

$$= ₹1,80,000$$

**ನಿದರ್ಶನ 15:**

1) ಹಿಂದಿನ 5 ವರ್ಷಗಳ ಸರಾಸರಿ ಲಾಭದ 3 ವರ್ಷದ ಖರೀದಿ ಆಧರಿಸಿ ಸಂಸ್ಥೆಯ ಕೀರ್ತಿಮೌಲ್ಯವನ್ನು ಕಂಡುಹಿಡಿಯಿರಿ.

| ವರ್ಷ | ಲಾಭ (ನಷ್ಟ) (₹) |
|---|---|
| 2012 | 10,000 |
| 2013 | 15,000 |
| 2014 | 4,000 |
| 2015 | (5,000) |
| 2016 | 6,000 |

2) ಸಂಸ್ಥೆಯಲ್ಲಿ ತೊಡಗಿಸಿದ ಬಂಡವಾಳ ₹ 1,00,000 ಇರುತ್ತದೆ ಮತ್ತು ಸಾಮಾನ್ಯ ಪ್ರತಿಫಲದ ದರವು ಶೇ 8% ಆಗಿದೆ. ಹಿಂದಿನ 5 ವರ್ಷದ ಸರಾಸರಿ ಲಾಭವು ₹ 12,000 ಆಗಿದೆ. ಅಧಿಕ ಲಾಭದ 3 ವರ್ಷಗಳ ಖರೀದಿಯಂತೆ ಕೀರ್ತಿಮೌಲ್ಯವನ್ನು ಕಂಡುಹಿಡಿಯಿರಿ.

3) ರಾಮಾ ಸಹೋದರರು ₹2,00,000 ಬಂಡವಾಳ ತೊಡಗಿಸಿ, ₹ 30,000 ಗಳ ಸರಾಸರಿ ಲಾಭವನ್ನು ಗಳಿಸಿರುತ್ತಾರೆ. ಈ ವ್ಯವಹಾರದಲ್ಲಿ ಸಾಮಾನ್ಯ ಪ್ರತಿಫಲದ ದರವು ಶೇ 10 ಆಗಿದೆ. ಅಧಿಕ ಲಾಭದ ಬಂಡವಾಳೀಕರಣ ವಿಧಾನದಲ್ಲಿ ಸಂಸ್ಥೆಯ ಕೀರ್ತಿಮೌಲ್ಯವನ್ನು ಲೆಕ್ಕ ಹಾಕಿರಿ.

**ಪರಿಹಾರ:**

1) ಒಟ್ಟು ಲಾಭ = ₹10,000 + ₹15,000 + ₹4,000 + ₹6,000 – ₹5,000
= ₹30,000

ಸರಾಸರಿ ಲಾಭ = ₹30,000 / 5
= ₹6,000

ಕೀರ್ತಿಮೌಲ್ಯ = ಸರಾಸರಿ ಲಾಭ × 3
= ₹6,000 × 3
= ₹18,000

2) ಸರಾಸರಿ ಲಾಭ = ₹12000

ಸಾಮಾನ್ಯ ಲಾಭ = ₹1,00,000 × $\frac{8}{100}$
= ₹8000

ಅಧಿಕ ಲಾಭ = ಸರಾಸರಿ ಲಾಭ – ಸಾಮಾನ್ಯ ಲಾಭ
= ₹12,000 – ₹ 8000
= ₹4000

ಕೀರ್ತಿಮೌಲ್ಯ = ಅಧಿಕ ಲಾಭ × 3
= ₹4000 × 3
= ₹12,000

3) ಸಾಮಾನ್ಯ ಲಾಭ = ₹ 2,00,000 × 10/100

= ₹ 20,000

ಅಧಿಕ ಲಾಭ = ಸರಾಸರಿ ಲಾಭ – ಸಾಮಾನ್ಯ ಲಾಭ

= ₹ 30,000 – ₹ 20,000

= ₹ 10,000

ಕೀರ್ತಿಮೌಲ್ಯ = ಅಧಿಕ ಲಾಭ × 100/ ಸಾಮಾನ್ಯ ಪ್ರತಿಫಲದ ದರ

= ₹ 10,000 × 100/10

= ₹ 1,00,000

### 3.5.5: ಕೀರ್ತಿಮೌಲ್ಯದ ಪರಿಗಣನೆ : Treatment of Goodwill

ಈ ಮೊದಲು ತಿಳಿಸಿರುವಂತೆ ಒಳಬರುವ ಪಾಲುದಾರನು ಅಧಿಕ ಲಾಭದಲ್ಲಿ ಪಾಲು ಪಡೆದದ್ದಕ್ಕಾಗಿ ಹಳೆಯ ಪಾಲುದಾರರಿಗೆ ಪರಿಹಾರ ನೀಡುವುದಕ್ಕಾಗಿ ಒಂದಿಷ್ಟು ಹೆಚ್ಚುವರಿ ಹಣವನ್ನು ತಂದಿರುತ್ತಾನೆ. ಅದನ್ನು ಕೀರ್ತಿಮೌಲ್ಯದಲ್ಲಿನ ಆತನ ಪಾಲು ಎಂದು ಪರಿಗಣಿಸಲಾಗುವುದು. ಪರ್ಯಾಯವಾಗಿ, ನಗದು ರೂಪದಲ್ಲಿ ಹೆಚ್ಚಿನ ಹಣ ನೀಡದೇ ಲೆಕ್ಕದ ಪುಸ್ತಕದಲ್ಲಿ ಕೀರ್ತಿಮೌಲ್ಯ ಖಾತೆಯನ್ನು ಸೃಷ್ಟಿಸಿ ಹಳೆಯ ಪಾಲುದಾರರ ಬಂಡವಾಳ ಖಾತೆಗೆ ಜಮೆ ನೀಡುವುದುಂಟು. ಆದ್ದರಿಂದ ಹೊಸ ಪಾಲುದಾರನ ಆಗಮನವಾದಾಗ ಕೀರ್ತಿಮೌಲ್ಯದ ಪರಿಗಣನೆಯಲ್ಲಿ ಎರಡು ವಿಧಗಳಿವೆ.

1] ಅಧಿಕ ಮೌಲ್ಯ ವಿಧಾನ.

2] ಪುನರ್ ಮೌಲ್ಯ ವಿಧಾನ.

### 3.5.5.1: ಅಧಿಕ ಮೌಲ್ಯ ವಿಧಾನ : Premium Method

ಒಳಬರುವ ಪಾಲುದಾರನು ತನ್ನ ಪಾಲಿನ ಕೀರ್ತಿಮೌಲ್ಯವನ್ನು ನಗದಾಗಿ ತಂದಾಗ ಈ ವಿಧಾನವನ್ನು ಅನುಸರಿಸಲಾಗುವದು. ಹೊಸ ಪಾಲುದಾರನು ತಂದಿರುವ ಅಧಿಕ ನಗದನ್ನು ಹಳೆಯ ಪಾಲುದಾರರು ತ್ಯಾಗದ ಅನುಪಾತದಲ್ಲಿ ಹಂಚಿಕೊಳ್ಳುತ್ತಾರೆ. ಒಂದು ವೇಳೆ ಹೊಸ ಪಾಲುದಾರನು ಈ ಹಣವನ್ನು ಹಳೆಯ ಪಾಲುದಾರರಿಗೆ ನೇರವಾಗಿ (ವೈಯಕ್ತಿಕವಾಗಿ) ಸಂದಾಯ ಮಾಡಿದರೆ ಲೆಕ್ಕದ ಪುಸ್ತಕದಲ್ಲಿ ಯಾವುದೇ ದಾಖಲೆಗಳನ್ನು ಮಾಡಬೇಕಾಗಿಲ್ಲ. ಆದರೆ ಸಾಮಾನ್ಯವಾಗಿ ಈ ಹಣವನ್ನು ಸಂಸ್ಥೆಯ ಮೂಲಕವೇ ಸಂದಾಯ ಮಾಡುತ್ತಾರೆ. ಆಗ ಈ ಕೆಳಗಿನ ರೋಜು ನಮೂದುಗಳನ್ನು ಮಾಡಲಾಗುತ್ತದೆ.

| ದಿನಾಂಕ | ವಿವರಣೆ | ಖಾ.ಪಾ | ಖರ್ಚು ₹ | ಜಮೆ ₹ |
|---|---|---|---|---|
| i | ನಗದು ಖಾತೆ ಖರ್ಚು<br>ಕೀರ್ತಿಮೌಲ್ಯ ಖಾತೆಗೆ<br>(ಹೊಸ ಪಾಲುದಾರನು ಕೀರ್ತಿಮೌಲ್ಯಕ್ಕಾಗಿ ಹಣ ತಂದದ್ದು) | | | |
| ii | ಕೀರ್ತಿಮೌಲ್ಯ ಖಾತೆ ಖರ್ಚು<br>ಪ್ರಸ್ತುತ ಪಾಲುದಾರರ ಬಂಡವಾಳ ಖಾತೆಗೆ (ವೈಯಕ್ತಿಕವಾಗಿ)<br>(ಕೀರ್ತಿಮೌಲ್ಯದ ಹಣವನ್ನು ತ್ಯಾಗದ ಅನುಪಾತದಲ್ಲಿ ಹಳೆಯ ಪಾಲುದಾರರಿಗೆ ಹಂಚಿದ್ದು). | | | |

ಪರ್ಯಾಯವಾಗಿ ಅದನ್ನು ಹೊಸ ಪಾಲುದಾರನ ಬಂಡವಾಳ ಖಾತಗೆ ಜಮೆ ನೀಡಿ, ತ್ಯಾಗದ ಅನುಪಾತದಲ್ಲಿ ಹಳೆಯ ಪಾಲುದಾರರಿಗೆ ಹಂಚಿ, ಅವರ ಬಂಡವಾಳ ಖಾತೆಗಳಿಗೆ ಖರ್ಚು ನೀಡಿ, ಹೊಂದಾಣಿಕೆಗೊಳಿಸುವುದುಂಟು. ಆ ಸಂದರ್ಭದಲ್ಲಿ ಕೆಳಗಿನ ರೋಜು ದಾಖಲೆಗಳನ್ನು ಮಾಡಬೇಕು.

| ದಿನಾಂಕ | ವಿವರಗಳು | ಖಾ.ಪಾ | ಖರ್ಚು ₹ | ಜಮೆ ₹ |
|---|---|---|---|---|
| i | ನಗದು ಖಾತೆ ಖರ್ಚು<br>ಹೊಸ ಪಾಲುದಾರನ ಬಂಡವಾಳ ಖಾತೆಗೆ<br>(ಹೊಸ ಪಾಲುದಾರನು ಕೀರ್ತಿಮೌಲ್ಯಕ್ಕೆ ಹಣ ತಂದದ್ದು) | | | |
| ii | ಹೊಸ ಪಾಲುದಾರನ ಬಂಡವಾಳ ಖಾತೆ ಖರ್ಚು<br>ಪ್ರಸ್ತುತ ಪಾಲುದಾರರ ಬಂಡವಾಳ ಖಾತೆಗೆ (ವೈಯಕ್ತಿಕವಾಗಿ)<br>(ಕೀರ್ತಿಮೌಲ್ಯಕ್ಕಾಗಿ ಹೊಸ ಪಾಲುದಾರನು ತಂದ ಹಣವನ್ನು ಹಳೆಯ ಪಾಲುದಾರರಿಗೆ ಹಳೆಯ ಅನುಪಾತದಲ್ಲಿ ಹಂಚಿಕೆ ಮಾಡಿದ್ದು). | | | |

ಹಳೆಯ ಪಾಲುದಾರರ ಬಂಡವಾಳ ಖಾತೆಗಳಿಗೆ ಜಮೆ ಮಾಡಲಾದ ಕೀರ್ತಿಮೌಲ್ಯದ ಹಣವನ್ನು ವ್ಯವಹಾರದಲ್ಲಿಯೇ ಉಳಿಸಿಕೊಳ್ಳುವುದೆಂದು ತೀರ್ಮಾನಿಸಿದರೆ ಯಾವುದೇ ಹೆಚ್ಚಿನ ರೋಜುದಾಖಲೆ ಬರುವದಿಲ್ಲ. ಒಂದು ವೇಳೆ ಆ ಹಣವನ್ನು ಪೂರ್ತಿಯಾಗಿ ಅಥವಾ ಭಾಗಶಃ ಹಿಂಪಡೆಯಲು ಬಯಸಿದರೆ, ಈ ಕೆಳಗಿನ ಹೆಚ್ಚುವರಿ ರೋಜು ನಮೂದು ಮಾಡಬೇಕಾಗುವುದು.

ಪ್ರಸ್ತುತ ಪಾಲುದಾರರ ಬಂಡವಾಳ ಖಾತೆ (ವೈಯಕ್ತಿಕವಾಗಿ) ಖರ್ಚು

ನಗದು ಖಾತೆಗೆ

(ಕೀರ್ತಿಮೌಲ್ಯದ ಹಣವನ್ನು ಪ್ರಸ್ತುತ ಪಾಲುದಾರರು ಹಿಂಪಡೆದದ್ದು).

**ನಿದರ್ಶನ 16:**

ಸುನೀಲ ಮತ್ತು ದಿಲೀಪ ಎಂಬ ಪಾಲುದಾರರು ಲಾಭ ಮತ್ತು ನಷ್ಟವನ್ನು 5:3 ರ ಅನುಪಾತದಲ್ಲಿ ಹಂಚಿಕೊಳ್ಳುತ್ತಾರೆ. ಸಚಿನ್ ಎಂಬವರು 1/5 ಪಾಲಿಗೆ ಸಂಸ್ಥೆಗೆ ಸೇರಿಕೊಳ್ಳುತ್ತಾನೆ. ಅವನು ಬಂಡವಾಳವೆಂದು ₹ 20,000 ಮತ್ತು ಕೀರ್ತಿ ಮೌಲ್ಯದ ಪಾಲಿಗಾಗಿ ₹ 4,000 ಗಳನ್ನು ತಂದಿರುತ್ತಾನೆ. ಕೆಳಗಿನ ಪ್ರಕರಣಗಳಲ್ಲಿ ಅವಶ್ಯಕ ರೋಜುದಾಖಲೆ ಬರೆಯಿರಿ.

ಎ] ಕೀರ್ತಿಮೌಲ್ಯದ ಹಣವನ್ನು ವ್ಯವಹಾರದಲ್ಲಿಯೇ ಉಳಿಸಿಕೊಂಡಾಗ.

ಬಿ] ಕೀತಿಮೌಲ್ಯದ ಹಣವನ್ನು ಸಂಪೂರ್ಣವಾಗಿ ಹಿಂಪಡೆದಾಗ.

ಸಿ] ಕೀರ್ತಿಮೌಲ್ಯದ ಶೇ. 50 ರಷ್ಟು ಹಣವನ್ನು ಹಿಂಪಡೆದಾಗ.

**ಪರಿಹಾರ:**

a] ಕೀರ್ತಿಮೌಲ್ಯದ ಹಣವನ್ನು ಪ್ರಸಕ್ತ ಪಾಲುದಾರರಿಗೆ ಹಂಚಿ ಬಂಡವಾಳ ಖಾತೆಗೆ ಜಮೆ ಕೊಟ್ಟು ವ್ಯವಹಾರದಲ್ಲಿ ಉಳಿಸಿಕೊಂಡಾಗ.

**ಸುನೀಲ ಮತ್ತು ದಿಲೀಪರವರ ಪುಸ್ತಕದಲ್ಲಿ.**
**ರೋಜು ಪುಸ್ತಕ**

| ದಿನಾಂಕ | ವಿವರಗಳು | ಖಾ.ಪಾ | ಖರ್ಚು ₹ | ಜಮೆ ₹ |
|---|---|---|---|---|
| i | ನಗದು ಖಾತೆ ಖರ್ಚು | | 24,000 | |
| | ಸಚಿನ್‌ನ ಬಂಡವಾಳ ಖಾತೆಗೆ | | – | 20,000 |
| | ಕೀರ್ತಿಮೌಲ್ಯ ಖಾತೆಗೆ | | – | 4,000 |
| | (ಬಂಡವಾಳ ಮತ್ತು ಕೀರ್ತಿಮೌಲ್ಯಕ್ಕಾಗಿ ಸಚಿನ್‌ನು ಹಣ ತಂದದ್ದು) | | | |
| ii | ಕೀರ್ತಿಮೌಲ್ಯ ಖಾತೆ ಖರ್ಚು | | 4,000 | – |
| | ಸುನೀಲನ ಬಂಡವಾಳ ಖಾತೆಗೆ | | – | 2,500 |
| | ದಿಲೀಪನ ಬಂಡವಾಳ ಖಾತೆಗೆ | | – | 1,500 |
| | (ಕೀರ್ತಿಮೌಲ್ಯದ ಹಣವನ್ನು ಸುನೀಲ ಮತ್ತು ದಿಲೀಪರವರಿಗೆ 5:3 ರ ಅನುಪಾತದಲ್ಲಿ ಹಂಚಿಕೆ ಮಾಡಿದ್ದು). | | | |

ಪರ್ಯಾಯವಾಗಿ ಲೆಕ್ಕದ ಪುಸ್ತಕದಲ್ಲಿ ಕೀರ್ತಿಮೌಲ್ಯ ಖಾತೆಯನ್ನು ತೆರೆಯದೇ ಈ ಕೆಳಗಿನ ರೋಜು ನಮೂದು ದಾಖಲಿಸಬಹುದು.

| | | | | |
|---|---|---|---|---|
| i | ನಗದು ಖಾತೆ | ಖರ್ಚು | 24,000 | – |
| | ಸಚಿನ್‌ನ ಬಂಡವಾಳ ಖಾತೆಗೆ | | – | 24,000 |
| ii | ಸಚಿನ್‌ನ ಬಂಡವಾಳ ಖಾತೆ | ಖರ್ಚು | 4,000 | – |
| | ಸುನೀಲನ ಬಂಡವಾಳ ಖಾತೆಗೆ | | – | 2,500 |
| | ದಿಲೀಪನ ಬಂಡವಾಳ ಖಾತೆಗೆ. | | – | 1,500 |

**ಟಿಪ್ಪಣಿ:** ತ್ಯಾಗದ ಅನುಪಾತವು ಹಳೆಯ ಲಾಭ ಹಂಚಿಕೆ ಅನುಪಾತವೇ ಆಗಿದೆ ಎಂದು ಭಾವಿಸಲಾಗಿದೆ.

b] ಪ್ರಸ್ತುತ ಪಾಲುದಾರರಿಗೆ ಜಮೆ ಮಾಡಿದ ಕೀರ್ತಿಮೌಲ್ಯವನ್ನು ಸಂಪೂರ್ಣವಾಗಿ ಹಿಂಪಡೆದಾಗ:

**ರೋಜು ಪುಸ್ತಕ**

| ದಿನಾಂಕ | ವಿವರಗಳು | ಖಾ ಪಾ | ಖರ್ಚು ₹ | ಜಮೆ ₹ |
|---|---|---|---|---|
| 1 | ಮೇಲಿನ (a) ಪ್ರಕರಣದಲ್ಲಿರುವಂತೆ | | | |
| 2 | ಮೇಲಿನ (a) ಪ್ರಕರಣದಲ್ಲಿರುವಂತೆ | | | |
| 3 | ಸುನೀಲನ ಬಂಡವಾಳ ಖಾತೆ ಖರ್ಚು | | 2,500 | – |
| | ದಿಲೀಪನ ಬಂಡವಾಳ ಖಾತೆ ಖರ್ಚು | | 1,500 | – |
| | ನಗದು ಖಾತೆಗೆ | | – | 4,000 |
| | (ಸುನೀಲ ಮತ್ತು ದಿಲೀಪರವರು ತಮ್ಮ ಪಾಲಿನ ಕೀರ್ತಿಮೌಲ್ಯ ಹಣವನ್ನು ಹಿಂಪಡೆದದ್ದು) | | | |

c] ಪ್ರಸಕ್ತ ಪಾಲುದಾರರ ಬಂಡವಾಳ ಖಾತೆಗೆ ಜಮೆಯಾದ ಕೀರ್ತಿಮೌಲ್ಯದ ಶೇ.50 ರಷ್ಟು ಹಣ ಹಿಂಪಡೆದಾಗ:

**ರೋಜು ಪುಸ್ತಕ**

| ದಿನಾಂಕ | ವಿವರಗಳು | ಖಾ ಪಾ | ಖರ್ಚು ₹ | ಜಮೆ ₹ |
|---|---|---|---|---|
| 1 | ಮೇಲಿನ (a) ಪ್ರಕರಣದಲ್ಲಿರುವಂತೆ | | | |
| 2 | ಮೇಲಿನ (a) ಪ್ರಕರಣದಲ್ಲಿರುವಂತೆ | | | |
| 3 | ಸುನೀಲನ ಬಂಡವಾಳ ಖಾತೆ ಖರ್ಚು | | 1,250 | – |
| | ದಿಲೀಪನ ಬಂಡವಾಳ ಖಾತೆ ಖರ್ಚು | | 750 | – |
| | ನಗದು ಖಾತೆಗೆ | | – | 2,000 |
| | (ಸುನೀಲ ಮತ್ತು ದಿಲೀಪರವರು ತಮ್ಮ ಪಾಲಿನ ಕೀರ್ತಿ ಮೌಲ್ಯದ ಶೇ 50 ರಷ್ಟು ಹಣವನ್ನು ಹಿಂಪಡೆದದ್ದು) | | | |

**ನಿದರ್ಶನ 17:**

ವಿಜಯ ಮತ್ತು ಸಂಜಯರವರು ಸಂಸ್ಥೆಯಲ್ಲಿ ಪಾಲುದಾರರಿದ್ದು ಲಾಭ – ಹಾನಿಯನ್ನು 3:2 ರ ಅನುಪಾತದಲ್ಲಿ ಹಂಚಿಕೊಳ್ಳುತ್ತಾರೆ. ಅವರು ಅಜೇಯನನ್ನು 1/4 ಪಾಲಿಗಾಗಿ ಸೇರಿಸಿಕೊಳ್ಳಲು ನಿರ್ಧರಿಸಿರುವರು. ಅಜೇಯನು ಬಂಡವಾಳಕ್ಕಾಗಿ ₹ 30,000 ಮತ್ತು ಕೀರ್ತಿಮೌಲ್ಯದಲ್ಲಿನ ಪಾಲಿಗಾಗಿ ಅಗತ್ಯ ಹಣವನ್ನು ತರಲು ಒಪ್ಪಿರುವನು. ಸಂಸ್ಥೆಯ ಕೀರ್ತಿಮೌಲ್ಯವು ₹ 20,000 ಇರುವುದು. ಹೊಸ ಲಾಭ ಹಂಚಿಕೆಯ ಅನುಪಾತವು 2:1:1 ಆಗಿರುವದು. ವಿಜಯ ಮತ್ತು ಸಂಜಯರವರು ಕೀರ್ತಿಮೌಲ್ಯದಲ್ಲಿನ ತಮ್ಮ ಪಾಲನ್ನು ಹಿಂಪಡೆಯುತ್ತಾರೆ. ಅವಶ್ಯಕ ರೋಜು ನಮೂದುಗಳನ್ನು ದಾಖಲಿಸಿರಿ.

**ಪರಿಹಾರ:**

[a] ಅಜೇಯನು ಕೀರ್ತಿಮೌಲ್ಯದಲ್ಲಿನ ತನ್ನ ಪಾಲಿಗಾಗಿ ತರಬೇಕಾದ ಹಣ ₹ 5,000
(₹ 20,000 × 1/4 ಪಾಲು)

[b] ತ್ಯಾಗದ ಅನುಪಾತವು 2:3 ಆಗುವುದು. ಕೆಳಗಿನ ಲೆಕ್ಕ ನೋಡಿ.
ವಿಜಯನ ಪಾಲು ಹಳೆ ಅನುಪಾತದಲ್ಲಿ 3/5 ಮತ್ತು ಹೊಸ ಅನುಪಾತದಲ್ಲಿ 2/4 ಇರುವದು.
ಆದ್ದರಿಂದ ಅವನ ತ್ಯಾಗದ ಪ್ರಮಾಣವು $= \frac{3}{5} - \frac{2}{4} = \frac{12-10}{20} = \frac{2}{20}$
ಸಂಜಯನ ಪಾಲು ಹಳೆ ಅನುಪಾತದಲ್ಲಿ 2/5 ಮತ್ತು ಹೊಸ ಅನುಪಾತದಲ್ಲಿ 1/4 ಇರುವದು.
ಆದ್ದರಿಂದ ಅವನ ತ್ಯಾಗದ ಪ್ರಮಾಣವು $= \frac{2}{5} - \frac{1}{4} = \frac{8-5}{20} = \frac{3}{20}$

**ವಿಜಯ ಮತ್ತು ಸಂಜಯರವರ ಪುಸ್ತಕ**
**ರೋಜು ಪುಸ್ತಕ**

| ದಿನಾಂಕ | ವಿವರಗಳು | ಖಾ ಪಾ | ಖರ್ಚು ₹ | ಜಮೆ ₹ |
|---|---|---|---|---|
| 1 | ನಗದು ಖಾತೆ ಖರ್ಚು | | 35,000 | – |
| | ಅಜೇಯನ ಬಂಡವಾಳ ಖಾತೆಗೆ | | – | 30,000 |
| | ಕೀರ್ತಿಮೌಲ್ಯದ ಖಾತೆಗೆ | | – | 5,000 |
| | (ಅಜೇಯನು ಬಂಡವಾಳ ಮತ್ತು ಕೀರ್ತಿಮೌಲ್ಯಕ್ಕಾಗಿ ಹಣವನ್ನು ತಂದದ್ದು). | | | |
| 2 | ಕೀರ್ತಿಮೌಲ್ಯ ಖಾತೆ ಖರ್ಚು | | 5,000 | – |
| | ವಿಜಯನ ಬಂಡವಾಳ ಖಾತೆಗೆ | | – | 2,000 |
| | ಸಂಜಯನ ಬಂಡವಾಳ ಖಾತೆಗೆ | | – | 3,000 |
| | (ಅಜೇಯನು ಕೀರ್ತಿಮೌಲ್ಯಕ್ಕಾಗಿ ತಂದಿರುವ ಹಣವನ್ನು ವಿಜಯ ಮತ್ತು ಸಂಜಯರವರು ಅವರ ತ್ಯಾಗದ ಅನುಪಾತದಲ್ಲಿ ಹಂಚಿಕೊಂಡಿದ್ದು) | | | |
| 3 | ವಿಜಯನ ಬಂಡವಾಳ ಖಾತೆ ಖರ್ಚು | | 2,000 | – |
| | ಸಂಜಯನ ಬಂಡವಾಳ ಖಾತೆ ಖರ್ಚು | | 3,000 | – |
| | ನಗದು ಖಾತೆಗೆ | | – | 5,000 |
| | (ವಿಜಯ ಮತ್ತು ಸಂಜಯರವರು ತಮ್ಮ ಕೀರ್ತಿಮೌಲ್ಯದ ಪಾಲನ್ನು ನಗದಾಗಿ ಹಿಂಪಡೆದದ್ದು) | | | |

**ಟಿಪ್ಪಣಿ :** ಪರ್ಯಾಯವಾಗಿ ಮೇಲಿನ 1 ಮತ್ತು 2 ನೇ ರೋಜುದಾಖಲೆಗಳ ಬದಲಾಗಿ ಕೆಳಗಿನ ರೋಜು ದಾಖಲೆಗಳನ್ನು ಮಾಡಬಹುದು.

**ವಿಜಯ ಮತ್ತು ಸಂಜಯರವರ ಪುಸ್ತಕದಲ್ಲಿ**
**ರೋಜು ಪುಸ್ತಕ**

| ದಿನಾಂಕ | ವಿವರಗಳು | ಖಾ ಪಾ | ಖರ್ಚು ₹ | ಜಮೆ ₹ |
|---|---|---|---|---|
| 1 | ನಗದು ಖಾತೆ ಖರ್ಚು | | 35,000 | – |
| | ಅಜೇಯನ ಬಂಡವಾಳ ಖಾತೆಗೆ | | – | 35,000 |
| | (ಅಜೇಯನು ಬಂಡವಾಳಕ್ಕಾಗಿ ₹ 30,000 ಮತ್ತು ಕೀರ್ತಿ ಮೌಲ್ಯಕ್ಕಾಗಿ ₹ 5,000 ಹಣ ತಂದದ್ದು) | | | |
| 2 | ಅಜೇಯನ ಬಂಡವಾಳ ಖಾತೆ ಖರ್ಚು | | 5,000 | – |
| | ವಿಜಯನ ಬಂಡವಾಳ ಖಾತೆಗೆ | | – | 2,000 |
| | ಸಂಜಯನ ಬಂಡವಾಳ ಖಾತೆಗೆ | | – | 3,000 |
| | (ಅಜೇಯನು ಕೀರ್ತಿಮೌಲ್ಯಕ್ಕಾಗಿ ತಂದಿರುವ ಹಣವನ್ನು ವಿಜಯ ಮತ್ತು ಸಂಜಯರವರು 2:3 ರ ತ್ಯಾಗದ ಅನುಪಾತದಲ್ಲಿ ಹಂಚಿಕೊಂಡಿದ್ದು) | | | |

**ಈಗಾಗಲೇ ಕೀರ್ತಿಮೌಲ್ಯ ಖಾತೆಯು ಲೆಕ್ಕಪುಸ್ತಕದಲ್ಲಿದ್ದಾಗ:**

ಲೆಕ್ಕದ ಪುಸ್ತಕದಲ್ಲಿ ಕೀರ್ತಿಮೌಲ್ಯವು ಇರುವುದಿಲ್ಲ ಎಂಬ ಊಹೆಯನ್ನು ಆಧರಿಸಿ ಮೇಲಿನ ಹೊಂದಾಣಿಕೆಗಳನ್ನು ಪರಿಗಣಿಸಲಾಗಿದೆ. ಆದಾಗ್ಯೂ ಈಗಾಗಲೇ ಲೆಕ್ಕ ಪುಸ್ತಕದಲ್ಲಿ ಕೀರ್ತಿಮೌಲ್ಯ ಇದ್ದರೂ ಹೊಸ ಪಾಲುದಾರನು ತನ್ನ ಪಾಲಿನ ಕೀರ್ತಿಮೌಲ್ಯಕ್ಕಾಗಿ ಒಂದಿಷ್ಟು ಹಣವನ್ನು ತರುವುದು ಸಾಮಾನ್ಯವಾಗಿರುತ್ತದೆ. ಅಂತಹ ಪ್ರಕರಣಗಳಲ್ಲಿ ಹೊಸ ಪಾಲುದಾರನು ಕೀರ್ತಿಮೌಲ್ಯಕ್ಕಾಗಿ ತಂದಿರುವ ಹಣವನ್ನು ಹಳೆ ಪಾಲುದಾರರಿಗೆ ಬಂಡವಾಳ ಖಾತೆಗೆ ಜಮೆ ಮಾಡಿದ ನಂತರ ಈಗಾಗಲೇ ಇರುವ ಹಿಂದಿನ ಕೀರ್ತಿಮೌಲ್ಯವನ್ನು ಹಳೆಯ ಲಾಭದ ಅನುಪಾತದಲ್ಲಿ ಹಂಚಿ, ಹಳೆ ಪಾಲುದಾರರ ಬಂಡವಾಳ ಖಾತೆಗೆ ಖರ್ಚು ಹಾಕಿ ತೆಗೆದು ಹಾಕಲಾಗುವದು. ಆದರೆ, ಒಂದು ವೇಳೆ ಹಳೆಯ ಕೀರ್ತಿಮೌಲ್ಯವು ಲೆಕ್ಕದ ಪುಸ್ತಕದಲ್ಲಿ ಇದ್ದಂತೆಯೇ ಮುಂದುವರಿಸುವುದೆಂದು ತೀರ್ಮಾನಿಸಿದರೆ, ಹೊಸ ಪಾಲುದಾರನು ಕೀರ್ತಿಮೌಲ್ಯಕ್ಕಾಗಿ ತಂದಿರುವ ಹಣವನ್ನು ಪ್ರಮಾಣ ಬದ್ಧವಾಗಿ ಕಡಿಮೆಗೊಳಿಸಲಾಗುವುದು. ಇದರ ಅರ್ಥ, ಪರಸ್ಪರ ಒಪ್ಪಿದ ಕೀರ್ತಿಮೌಲ್ಯವು ಈಗಾಗಲೆ ಪುಸ್ತಕದಲ್ಲಿರುವ ಕೀರ್ತಿಮೌಲ್ಯಕ್ಕಿಂತ ಹೆಚ್ಚಾಗಿದ್ದರೆ, ಆ ಹೆಚ್ಚುವರಿ ಭಾಗದಲ್ಲಿನ ತನ್ನ ಪಾಲಿನಷ್ಟು ಹಣವನ್ನು ಮಾತ್ರ ತರುವನು.

ಉದಾಹರಣೆಗೆ; ಮೇಲಿನ ನಿದರ್ಶನ 17 ರಲ್ಲಿ ಸಂಸ್ಥೆಯ ಕೀರ್ತಿಮೌಲ್ಯವು ₹20,000 ಇದೆ ಮತ್ತು ಅಜೇಯನು 1/4 ಪಾಲಿಗೆ ಸೇರ್ಪಡೆಗೊಂಡು ತನ್ನ ಪಾಲಿನ ಕೀರ್ತಿಮೌಲ್ಯಕ್ಕಾಗಿ ₹5,000 ತರುವನೆಂದು ತಿಳಿಯೋಣ. ಒಂದು ವೇಳೆ ಈಗಾಗಲೇ ಪುಸ್ತಕದಲ್ಲಿ ₹10,000 ಕೀರ್ತಿಮೌಲ್ಯ ಇದ್ದು, ಅದನ್ನು ಮುಂದುವರೆಸುವ ಬಗ್ಗೆ ಯಾವುದೇ ನಿರ್ಧಾರವಾಗಿಲ್ಲವೆಂದು ತಿಳಿಯೋಣ. ಅಂತಹ ಸಂದರ್ಭದಲ್ಲಿ ಅಜೇಯನು ತಂದಿರುವ ಕೀರ್ತಿಮೌಲ್ಯದ ಹಣವನ್ನು ಹಂಚಿ ವಿಜಯ ಮತ್ತು ಸಂಜಯರವರ ಬಂಡವಾಳ ಖಾತೆಗೆ ಜಮೆ ಮಾಡಿದ ನಂತರ ಹಳೆಯ ಕೀರ್ತಿಮೌಲ್ಯವನ್ನು ತೆಗೆದು ಹಾಕಲು ಈ ಕೆಳಗಿನ ಹೆಚ್ಚುವರಿ ರೋಜು ನಮೂದನ್ನು ಮಾಡಬೇಕಾಗುತ್ತದೆ.

| ದಿನಾಂಕ | ವಿವರಗಳು | ಖಾ ಪಾ | ಖರ್ಚು ₹ | ಜಮೆ ₹ |
|---|---|---|---|---|
| | ವಿಜಯನ ಬಂಡವಾಳ ಖಾತೆ ಖರ್ಚು | | 6,000 | – |
| | ಸಂಜಯನ ಬಂಡವಾಳ ಖಾತೆ ಖರ್ಚು | | 4,000 | – |
| | ಕೀರ್ತಿಮೌಲ್ಯ ಖಾತೆಗೆ | | – | 10,000 |
| | (ಕೀರ್ತಿಮೌಲ್ಯವನ್ನು ಪಾಲುದಾರರ ಹಳೆ ಅನುಪಾತದಲ್ಲಿ ತೆಗೆದುಹಾಕಿದ್ದು) | | | |

ಒಂದು ವೇಳೆ ಕೀರ್ತಿಮೌಲ್ಯ ಖಾತೆಯನ್ನು ಯಥಾವತ್ತಾಗಿ ಮುಂದುವರಿಸಲು ಪಾಲುದಾರರು ನಿರ್ಧರಿಸಿದರೆ, ಆಗ ಹೊಸ ಪಾಲುದಾರನು ಒಟ್ಟು ಕೀರ್ತಿಮೌಲ್ಯ ಮತ್ತು ಪುಸ್ತಕದಲ್ಲಿರುವ ಕೀರ್ತಿಮೌಲ್ಯ ಇವುಗಳ ವ್ಯತ್ಯಾಸದಲ್ಲಿ ತನ್ನ ಪಾಲಿನ ಹಣವನ್ನು ತರಬೇಕಾಗುತ್ತದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಅಜೇಯನು ಕೇವಲ ₹ 2,500 ತರಬೇಕಾಗುವದು. [(₹ 10,000 ದಲ್ಲಿ 1/4ರಷ್ಟು)(₹ 20,000 – ₹ 10,000)] ಅದನ್ನು ಹಳೆ ಪಾಲುದಾರರಿಗೆ ಅವರ ತ್ಯಾಗದ ಅನುಪಾತದಲ್ಲಿ ಹಂಚಿ ಜಮೆ ಮಾಡಲಾಗುವದು ಮತ್ತು ಪುಸ್ತಕದಲ್ಲಿರುವ ಮೊದಲಿನ ಕೀರ್ತಿಮೌಲ್ಯವನ್ನು ತೆಗೆದು ಹಾಕಿದ್ದಕ್ಕಾಗಿ ಯಾವುದೇ ರೋಜು ದಾಖಲೆಯನ್ನು ಮಾಡುವುದಿಲ್ಲ.

**ನಿದರ್ಶನ 18:**

ಶ್ರೀಕಾಂತ ಮತ್ತು ರಾಮನ್ ಇವರು ಸಂಸ್ಥೆಯ ಪಾಲುದಾರರಿದ್ದು, 3:2 ರ ಅನುಪಾತದಲ್ಲಿ ಲಾಭ–ನಷ್ಟವನ್ನು ಹಂಚಿಕೊಳ್ಳುತ್ತಿರುವರು. ಅವರು ವೆಂಕಟನನ್ನು ಲಾಭದಲ್ಲಿ 1/3 ಪಾಲಿಗಾಗಿ ಸೇರಿಸಿಕೊಳ್ಳಲು ನಿರ್ಧರಿಸಿರುವರು. ವೆಂಕಟನು ₹ 30,000 ಗಳನ್ನು ತನ್ನ ಬಂಡವಾಳವೆಂದು ತಂದಿರುವನು. ಅಷ್ಟೇ ಅಲ್ಲದೆ ಕೀರ್ತಿಮೌಲ್ಯದಲ್ಲಿನ ತನ್ನ ಪಾಲಿಗಾಗಿ ಅವಶ್ಯಕ ಹಣವನ್ನು ತರುವುದಾಗಿ ವಾಗ್ದಾನ ಮಾಡಿರುತ್ತಾನೆ. ಪಾಲುದಾರನ ಪ್ರವೇಶದ ದಿನಾಂಕದಂದು ಸಂಸ್ಥೆಯ ಕೀರ್ತಿಮೌಲ್ಯವು ₹ 24,000 ಇರುವದು ಮತ್ತು ಲೆಕ್ಕದ ಪುಸ್ತಕದಲ್ಲಿ ಈಗಾಗಲೇ ₹ 12,000 ದಷ್ಟು ಕೀರ್ತಿಮೌಲ್ಯವು ಇರುವದು. ವೆಂಕಟನು ತನ್ನ ಪಾಲಿನ ಕೀರ್ತಿಮೌಲ್ಯದಷ್ಟು ಹಣವನ್ನು ತಂದಿರುವನು ಮತ್ತು ಪ್ರಸ್ತುತದಲ್ಲಿರುವ ಕೀರ್ತಿಮೌಲ್ಯ ಖಾತೆಯನ್ನು ತೆಗೆದು ಹಾಕಲು ಒಪ್ಪಿರುತ್ತಾರೆ. ಸಂಸ್ಥೆಯ ಪುಸ್ತಕದಲ್ಲಿ ಅಗತ್ಯ ರೋಜು ನಮೂದುಗಳನ್ನು ದಾಖಲಿಸಿರಿ.

**ಪರಿಹಾರ:**

**ಶ್ರೀಕಾಂತ ಮತ್ತು ರಾಮನ್ ರವರ ಪುಸ್ತಕದಲ್ಲಿ**
**ರೋಜು ಪುಸ್ತಕ**

| ದಿನಾಂಕ | ವಿವರಗಳು | ಖಾ ಪಾ | ಖರ್ಚು ₹ | ಜಮೆ ₹ |
|---|---|---|---|---|
| 1 | ನಗದು ಖಾತೆ ಖರ್ಚು | | 38,000 | – |
| | ವೆಂಕಟನ ಬಂಡವಾಳ ಖಾತೆಗೆ | | – | 30,000 |
| | ಕೀರ್ತಿಮೌಲ್ಯದ ಖಾತೆಗೆ | | – | 8,000 |
| | (ವೆಂಕಟನು ತನ್ನ ಪಾಲಿನ ಬಂಡವಾಳ ಮತ್ತು ಕೀರ್ತಿಮೌಲ್ಯವನ್ನು ತಂದದ್ದು) | | | |

| | | | | |
|---|---|---|---|---|
| 2 | ಕೀರ್ತಿಮೌಲ್ಯ ಖಾತೆ ಖರ್ಚು | | 8,000 | – |
| | ಶ್ರೀಕಾಂತನ ಬಂಡವಾಳ ಖಾತೆಗೆ | | – | 4,800 |
| | ರಾಮನ್‌ನ ಬಂಡವಾಳ ಖಾತೆಗೆ | | – | 3,200 |
| | (ವೆಂಕಟನು ತಂದಿರುವ ಕೀರ್ತಿಮೌಲ್ಯವನ್ನು ಹಳೆ ಪಾಲುದಾರರು ತಮ್ಮ ತ್ಯಾಗದ ಅನುಪಾತದಲ್ಲಿ ಹಂಚಿಕೊಂಡಿದ್ದು) | | | |
| 3 | ಶ್ರೀಕಾಂತನ ಬಂಡವಾಳ ಖಾತೆ ಖರ್ಚು | | 7,200 | – |
| | ರಾಮನ್‌ನ ಬಂಡವಾಳ ಖಾತೆ ಖರ್ಚು | | 4,800 | – |
| | ಕೀರ್ತಿಮೌಲ್ಯ ಖಾತೆಗೆ | | – | 12,000 |
| | (ಪ್ರಸಕ್ತದಲ್ಲಿ ಲೆಕ್ಕದಪುಸ್ತಕದಲ್ಲಿದ್ದ ಕೀರ್ತಿಮೌಲ್ಯವನ್ನು ಹಳೆ ಲಾಭಹಂಚಿಕೆ ಅನುಪಾತದಲ್ಲಿ ತೆಗೆದುಹಾಕಿದ್ದು) | | | |

**ಟಿಪ್ಪಣಿ :**

ಹೊಸ ಪಾಲುದಾರನು ಲಾಭದಲ್ಲಿಯ ತನ್ನ ಪಾಲನ್ನು ಶ್ರೀಕಾಂತ ಮತ್ತು ರಾಮನ್‌ರಿಂದ ಹೇಗೆ ಪಡೆದುಕೊಳ್ಳುತ್ತಾನೆಂಬುದರ ಬಗ್ಗೆ ಏನನ್ನೂ ತಿಳಿಸಿಲ್ಲದಿರುವದರಿಂದ, ಅವರು ತಮ್ಮ ಹಳೆಯ ಲಾಭ ಹಂಚಿಕೆಯ ಅನುಪಾತವಾದ 3:2 ರಲ್ಲಿಯೇ ತ್ಯಾಗ ಮಾಡುತ್ತಾರೆಂದು ಭಾವಿಸಲಾಗಿದೆ.

### 3.5.5.2: ಪುನರ್‌ಮೌಲ್ಯ ವಿಧಾನ : Revaluation Method

ಹೊಸ ಪಾಲುದಾರನು ಕೀರ್ತಿಮೌಲ್ಯದಲ್ಲಿನ ತನ್ನ ಪಾಲಿಗಾಗಿ ಯಾವುದೇ ನಗದು ತರದೇ ಇರುವಾಗ ಈ ವಿಧಾನವನ್ನು ಅನುಸರಿಸುವರು. ಅಂತಹ ಸಂದರ್ಭದಲ್ಲಿ ಹಳೆಯ ಪಾಲುದಾರರ ಬಂಡವಾಳ ಖಾತೆಗಳಿಗೆ ಹಳೆ ಲಾಭ ಹಂಚಿಕೆಯ ಅನುಪಾತದಲ್ಲಿ ಕೀರ್ತಿಮೌಲ್ಯವನ್ನು ಹಂಚಿ ಜಮಾ ಮಾಡುವ ಮೂಲಕ ಪುಸ್ತಕದಲ್ಲಿ ಕೀರ್ತಿಮೌಲ್ಯ ಖಾತೆಯನ್ನು ಸೃಷ್ಟಿಸಲಾಗುತ್ತದೆ. ಲೆಕ್ಕದ ಪುಸ್ತಕದಲ್ಲಿ ಕೀರ್ತಿಮೌಲ್ಯ ಖಾತೆಯನ್ನು ಸೃಷ್ಟಿಸಲು ಎರಡು ಸಾಧ್ಯತೆಗಳಿರುತ್ತವೆ.

[a] ಪಾಲುದಾರನ ಪ್ರವೇಶದ ಸಮಯದಲ್ಲಿ ಪುಸ್ತಕದಲ್ಲಿ ಯಾವುದೇ ಕೀರ್ತಿಮೌಲ್ಯ ಖಾತೆ ಇರದಿದ್ದಾಗ,

[b] ಪಾಲುದಾರನ ಪ್ರವೇಶದ ಸಮಯದಲ್ಲಿ ಲೆಕ್ಕಪುಸ್ತಕದಲ್ಲಿ ಈಗಾಗಲೇ ಕೀರ್ತಿಮೌಲ್ಯವು ಅಸ್ತಿತ್ವದಲ್ಲಿ ಇದ್ದಾಗ.

**[a] ಲೆಕ್ಕದ ಪುಸ್ತಕದಲ್ಲಿ ಕೀರ್ತಿಮೌಲ್ಯ ಇರದೇ ಇದ್ದಾಗ:**

ಹೊಸ ಪಾಲುದಾರನ ಪ್ರವೇಶದ ಸಮಯದಲ್ಲಿ ಲೆಕ್ಕದ ಪುಸ್ತಕದಲ್ಲಿ ಕೀರ್ತಿಮೌಲ್ಯವು ಇರದೇ ಇದ್ದರೆ, ಈಗ ಪೂರ್ಣ ಮೊತ್ತಕ್ಕೆ ಕೀರ್ತಿಮೌಲ್ಯ ಖಾತೆಯನ್ನು ಕಡ್ಡಾಯವಾಗಿ ಸೃಷ್ಟಿಸಲಾಗುವದು. ಕೀರ್ತಿಮೌಲ್ಯದ ಪೂರ್ಣ ಮೊತ್ತವನ್ನು ಕೀರ್ತಿಮೌಲ್ಯದ ಖಾತೆಗೆ ಖರ್ಚು ಹಾಕಿ, ಹಳೆಯ ಪಾಲುದಾರರ ಬಂಡವಾಳ ಖಾತೆಗೆ ಅವರ ಲಾಭ ಹಂಚಿಕೆ ಅನುಪಾತದಲ್ಲಿ ಜಮೆ ಹಾಕಲಾಗುವುದು. ರೋಜು ನಮೂದು ಈ ಕೆಳಗಿನಂತಿರುವುದು:

ಕೀರ್ತಿಮೌಲ್ಯ ಖಾತೆ ಖರ್ಚು

ಹಳೆ ಪಾಲುದಾರರ ಬಂಡವಾಳ ಖಾತೆಗಳಿಗೆ (ವೈಯಕ್ತಿಕವಾಗಿ)

(ಪೂರ್ಣ ಮೊತ್ತದ ಕೀರ್ತಿಮೌಲ್ಯವನ್ನು ಹಳೆಯ ಅನುಪಾತದಲ್ಲಿ ಹಂಚಿ ಸೃಷ್ಟಿಸಿದ್ದು).

ಈಗ ಪೂರ್ಣ ಮೊತ್ತದ ಕೀರ್ತಿಮೌಲ್ಯವನ್ನು ಸಂಸ್ಥೆಯ ಅಢಾವೆ ಪತ್ರಿಕೆಯಲ್ಲಿ ತೋರಿಸಲಾಗುತ್ತದೆ.

**ನಿದರ್ಶನ 19:**

ಅಹುಜಾ ಮತ್ತು ಬರುವಾ ರವರು ಸಂಸ್ಥೆಯ ಪಾಲುದಾರರಿದ್ದು, ಲಾಭ–ನಷ್ಟವನ್ನು 3:2 ರ ಅನುಪಾತದಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಅವರು ಚೌಧರಿ ಅವರನ್ನು 1/5 ರ ಲಾಭದ ಪಾಲಿಗಾಗಿ ಪಾಲುದಾರಿಕೆಗೆ ಸೇರಿಸಿಕೊಳ್ಳಲು ತೀರ್ಮಾನಿಸಿದ್ದು, ಅದನ್ನು ಅವನು ಅಹುಜಾ ಮತ್ತು ಬರುವಾರಿಂದ ಸಮನಾಗಿ ಪಡೆದುಕೊಳ್ಳುವನು. ಕೀರ್ತಿ ಮೌಲ್ಯವು ₹ 30,000 ಇರುವದು. ಚೌಧರಿಯವರು ತನ್ನ ಬಂಡವಾಳಕ್ಕಾಗಿ ₹ 16,000 ಗಳನ್ನು ತರುವರು. ಆದರೆ ಅವನು ಕೀರ್ತಿಮೌಲ್ಯಕ್ಕಾಗಿ ಯಾವುದೇ ಹಣವನ್ನು ತರುವ ಪರಿಸ್ಥಿತಿಯಲ್ಲಿ ಇರುವುದಿಲ್ಲ. ಸಂಸ್ಥೆಯ ಪುಸ್ತಕದಲ್ಲಿಯೂ ಕೀರ್ತಿಮೌಲ್ಯ ಖಾತೆ ಇರುವುದಿಲ್ಲ. ಈಗ ಪೂರ್ಣ ಮೊತ್ತದ ಕೀರ್ತಿಮೌಲ್ಯದ ಖಾತೆಯನ್ನು ಸೃಷ್ಟಿಸಬೇಕು. ಅವಶ್ಯಕ ರೋಜು ದಾಖಲೆಗಳನ್ನು ಬರೆಯಿರಿ.

**ಪರಿಹಾರ:**

**ಅಹುಜಾ ಮತ್ತು ಬರುವಾ ರವರ ಪುಸ್ತಕದಲ್ಲಿ**
**ರೋಜು ಪುಸ್ತಕ**

| ದಿನಾಂಕ | ವಿವರಗಳು | ಖಾ ಪಾ | ಖರ್ಚು ₹ | ಜಮೆ ₹ |
|---|---|---|---|---|
| 1 | ನಗದು ಖಾತೆ ಖರ್ಚು | | 16,000 | – |
| | ಚೌಧರಿಯ ಬಂಡವಾಳ ಖಾತೆಗೆ | | – | 16,000 |
| | (ಬಂಡವಾಳವೆಂದು ಹಣ ತಂದದ್ದು ) | | | |
| 2 | ಕೀರ್ತಿಮೌಲ್ಯ ಖಾತೆ ಖರ್ಚು | | 30,000 | – |
| | ಅಹುಜಾನ ಬಂಡವಾಳ ಖಾತೆಗೆ | | – | 18,000 |
| | ಬರುವಾನ ಬಂಡವಾಳ ಖಾತೆಗೆ | | – | 12,000 |
| | (ಪೂರ್ಣ ಮೊತ್ತದ ಕೀರ್ತಿಮೌಲ್ಯವನ್ನು ಹಳೆಯ ಅನುಪಾತದಲ್ಲಿ ಸೃಷ್ಟಿಸಿದ್ದು) | | | |

**ಟಿಪ್ಪಣಿ:** ಕೀರ್ತಿಮೌಲ್ಯವು ₹30,000 ಅಢಾವೆ ಪತ್ರಿಕೆಯಲ್ಲಿ ತೋರಿಸಬೇಕು.

ಕೆಲವು ಸಲ, ಪಾಲುದಾರನು ತನ್ನ ಪಾಲಿನ ಕೀರ್ತಿಮೌಲ್ಯದ ಭಾಗಶಃ ಹಣವನ್ನು ತರುವನು. ಅಂತಹ ಸಂದರ್ಭದಲ್ಲಿ ಹೊಸ ಪಾಲುದಾರನು ಕೀರ್ತಿಮೌಲ್ಯಕ್ಕಾಗಿ ತಂದಿರುವ ಹಣವನ್ನು ಹಳೆಯ ಪಾಲುದಾರರು ತಮ್ಮ ತ್ಯಾಗದ ಅನುಪಾತದಲ್ಲಿ ಹಂಚಿಕೊಳ್ಳುವರು. ಕೀರ್ತಿಮೌಲ್ಯದ ಬಾಕಿ ಮೊತ್ತಕ್ಕೆ ಕೀರ್ತಿಮೌಲ್ಯ ಖಾತೆಯನ್ನು ಪುಸ್ತಕದಲ್ಲಿ ಸೃಷ್ಟಿಸಲಾಗುವುದು. ಉದಾಹರಣೆಗೆ: ಪೂಜಾ ಮತ್ತು ಸಂದೀಪ ಇವರು ಪಾಲುದಾರರಿದ್ದು 3:3 ರ ಅನುಪಾತದಲ್ಲಿ ಲಾಭ ಹಂಚಿಕೊಳ್ಳುವರು. ಅವರು ತುಷಾರನನ್ನು 1/3 ಲಾಭದ ಪಾಲಿಗಾಗಿ ಹೊಸ ಪಾಲುದಾರನೆಂದು ಸೇರಿಸಿಕೊಂಡರು. ತುಷಾರನು ಕೀರ್ತಿಮೌಲ್ಯದ ತನ್ನ ಪಾಲಿಗಾಗಿ ₹30,000 ಗಳನ್ನು ತರಬೇಕಾಗಿದ್ದು ಕೀರ್ತಿಮೌಲ್ಯದ ಪೂರ್ಣ ಮೊತ್ತವು ₹90,000 ಎಂದು ನಿರ್ಧರಿಸಲಾಗಿದೆ. ಆದರೆ ಅವನು ಅರ್ಧದಷ್ಟು ಮೊತ್ತ ₹15,000/– ಗಳನ್ನು ತರುವನು. ಈ ಪ್ರಕರಣದಲ್ಲಿ ಪೂಜಾ ಮತ್ತು ಸಂದೀಪರವರ ಬಂಡವಾಳ ಖಾತೆಗಳಿಗೆ ಅವರ ತ್ಯಾಗದ ಅನುಪಾತದಲ್ಲಿ ₹15,000 ಗಳನ್ನು ಜಮಾ ಮಾಡಿ, ಇನ್ನುಳಿದ ₹45,000 ಮೊತ್ತಕ್ಕೆ ಹಳೆಯ ಲಾಭ ಹಂಚಿಕೆಯ ಅನುಪಾತದಲ್ಲಿ ಹಳೆ ಪಾಲುದಾರರ ಬಂಡವಾಳ ಖಾತೆಗಳಿಗೆ ಜಮೆ ನೀಡುವ ಮೂಲಕ ಕೀರ್ತಿಮೌಲ್ಯ ಖಾತೆಯನ್ನು ಸೃಷ್ಟಿಸಲಾಗುತ್ತದೆ.

[b] **ಕೀರ್ತಿಮೌಲ್ಯವು ಈಗಾಗಲೇ ಲೆಕ್ಕದ ಪುಸ್ತಕದಲ್ಲಿ ಇದ್ದಾಗ:**

ಒಂದು ವೇಳೆ ಕೀರ್ತಿಮೌಲ್ಯ ಖಾತೆಯು ಶಿಲ್ಕಿನೊಂದಿಗೆ ಲೆಕ್ಕ ಪುಸ್ತಕದಲ್ಲಿ ಇದ್ದರೆ, ಪರಸ್ಪರ ಒಪ್ಪಿದ ಒಟ್ಟು ಕೀರ್ತಿಮೌಲ್ಯದ ಮೊತ್ತ ಮತ್ತು ಈಗಾಗಲೇ ಪುಸ್ತಕದಲ್ಲಿರುವ ಕೀರ್ತಿಮೌಲ್ಯದ ಮೊತ್ತಗಳ ನಡುವಿನ ವ್ಯತ್ಯಾಸಕ್ಕೆ ಮಾತ್ರ ಹಳೆ ಪಾಲುದಾರರ ಬಂಡವಾಳ ಖಾತೆಗಳಲ್ಲಿ ಹೊಂದಾಣಿಕೆ ಮಾಡಲಾಗುತ್ತದೆ.

ಪುಸ್ತಕದಲ್ಲಿರುವ ಕೀರ್ತಿಮೌಲ್ಯವು ಪರಸ್ಪರ ಒಪ್ಪಿದ ಕೀರ್ತಿಮೌಲ್ಯದ ಮೊತ್ತಕ್ಕಿಂತ ಕಡಿಮೆ ಇರಬಹುದು ಅಥವಾ ಹೆಚ್ಚಿಗೆ ಇರಬಹುದು. ಒಂದು ವೇಳೆ ಒಪ್ಪಿದ ಕೀರ್ತಿಮೌಲ್ಯಕ್ಕಿಂತ ಅದು ಕಡಿಮೆಯಾಗಿದ್ದರೆ, ಒಪ್ಪಿದ ಕೀರ್ತಿಮೌಲ್ಯ ಮತ್ತು ಪುಸ್ತಕದಲ್ಲಿರುವ ಕೀರ್ತಿಮೌಲ್ಯಗಳ ನಡುವಿನ ವ್ಯತ್ಯಾಸವನ್ನು ಕೀರ್ತಿಮೌಲ್ಯ ಖಾತೆಗೆ ಖರ್ಚು ಹಾಕಬೇಕು ಮತ್ತು ಅದನ್ನು ಹಳೆಯ ಪಾಲುದಾರರಿಗೆ ಹಳೆ ಲಾಭ ಹಂಚಿಕೆಯ ಅನುಪಾತದಲ್ಲಿ ಹಂಚಿ, ಅವರ ಬಂಡವಾಳ ಖಾತೆಗಳಿಗೆ ಜಮಾ ಮಾಡುವುದು. ಒಂದು ವೇಳೆ ಅದು ಒಪ್ಪಿದ ಕೀರ್ತಿಮೌಲ್ಯಕ್ಕಿಂತ ಹೆಚ್ಚಾಗಿದ್ದರೆ ವ್ಯತ್ಯಾಸವನ್ನು ಹಳೆಯ ಪಾಲುದಾರರ ಬಂಡವಾಳ ಖಾತೆಗಳಿಗೆ ಹಳೆ ಲಾಭ ಹಂಚಿಕೆಯ ಅನುಪಾತದಲ್ಲಿ ಹಂಚಿ, ಅವರ ಬಂಡವಾಳ ಖಾತೆಗೆ ಖರ್ಚು ಹಾಕಬೇಕು ಮತ್ತು ಕೀರ್ತಿಮೌಲ್ಯದ ಖಾತೆಗೆ ಜಮೆ ತೆಗದುಕೊಳ್ಳಬೇಕು. ಆದ್ದರಿಂದ ರೋಜು ದಾಖಲೆಯು ಈ ಕೆಳಗಿನಂತಿರುವುದು.

a] **ಲೆಕ್ಕ ಪುಸ್ತಕದಲ್ಲಿರುವ ಕೀರ್ತಿಮೌಲ್ಯವು ಒಪ್ಪಿದ ಕೀರ್ತಿಮೌಲ್ಯಕ್ಕಿಂತ ಕಡಿಮೆ ಇದ್ದಾಗ:**

ಕೀರ್ತಿಮೌಲ್ಯ ಖಾತೆ ಖರ್ಚು

ಹಳೆ ಪಾಲುದಾರರ ಬಂಡವಾಳ ಖಾತೆಗಳಿಗೆ (ವೈಯಕ್ತಿಕವಾಗಿ)

(ಒಪ್ಪಿದ ಮೌಲ್ಯಕ್ಕೆ ಕೀರ್ತಿಮೌಲ್ಯ ಸೃಷ್ಟಿಸಿದ್ದು).

b] **ಲೆಕ್ಕದ ಪುಸ್ತಕದಲ್ಲಿರುವ ಕೀರ್ತಿಮೌಲ್ಯವು ಒಪ್ಪಿದ ಕೀರ್ತಿಮೌಲ್ಯಕ್ಕಿಂತ ಹೆಚ್ಚಾಗಿದ್ದಾಗ:**

ಹಳೆ ಪಾಲುಗಾರರ ಬಂಡವಾಳ ಖಾತೆಗಳಿಗೆ (ವೈಯಕ್ತಿಕವಾಗಿ) ಖರ್ಚು

ಕೀರ್ತಿಮೌಲ್ಯ ಖಾತೆಗೆ.

(ಕೀರ್ತಿಮೌಲ್ಯವನ್ನು ಒಪ್ಪಿದ ಮೌಲ್ಯಕ್ಕೆ ಇಳಿಸಿದ್ದು).

**ನಿದರ್ಶನ 20:**

ರಾಮ ಮತ್ತು ರಹೀಮ ರವರು ಒಂದು ಸಂಸ್ಥೆಯಲ್ಲಿ 3:2 ರ ಅನುಪಾತದಲ್ಲಿ ಲಾಭ–ನಷ್ಟವನ್ನು ಹಂಚಿಕೊಳ್ಳುವ ಪಾಲುದಾರರಾಗಿರುತ್ತಾರೆ. ರಾಹುಲ್‌ನನ್ನು ಲಾಭದಲ್ಲಿಯ 1/3 ಪಾಲಿಗಾಗಿ ಸಂಸ್ಥೆಗೆ ಸೇರಿಸಿಕೊಳ್ಳುತ್ತಾರೆ. ಅವನು ₹ 10,000 ಬಂಡವಾಳವೆಂದು ತರುವನು. ಅವನ ಪಾಲಿನ ಕೀರ್ತಿಮೌಲ್ಯವು ₹ 30,000 ಗಳೆಂದು ಮೌಲ್ಯೀಕರಿಸಿದೆ. ಆದರೆ ಅವನು ಕೀರ್ತಿಮೌಲ್ಯಕ್ಕಾಗಿ ಯಾವುದೇ ಮೊತ್ತವನ್ನು ತರುವ ಸ್ಥಿತಿಯಲ್ಲಿ ಇಲ್ಲ.

ಈ ಕೆಳಗಿನ ಪ್ರತಿಯೊಂದು ಸಂದರ್ಭಕ್ಕೆ ಸಂಬಂಧಿಸಿದಂತೆ ಅವಶ್ಯಕ ರೋಜು ನಮೂದುಗಳನ್ನು ಕೊಡಿರಿ.

a] ಸಂಸ್ಥೆಯ ಲೆಕ್ಕ ಪುಸ್ತಕದಲ್ಲಿ ಕೀರ್ತಿಮೌಲ್ಯವು ಇರದೇ ಇದ್ದಾಗ.

b] ಸಂಸ್ಥೆಯ ಲೆಕ್ಕ ಪುಸ್ತಕದಲ್ಲಿ ಕೀರ್ತಿಮೌಲ್ಯ ₹ 15,000 ಇದ್ದಾಗ.

c] ಸಂಸ್ಥೆಯ ಕೀರ್ತಿಮೌಲ್ಯದ ಮೊತ್ತವು ಲೆಕ್ಕ ಪುಸ್ತಕದಲ್ಲಿ ₹ 36,000 ಇದ್ದಾಗ.

**ಪರಿಹಾರ:**

**a] ಲೆಕ್ಕದ ಪುಸ್ತಕದಲ್ಲಿ ಕೀರ್ತಿಮೌಲ್ಯ ಇರದೇ ಇದ್ದಾಗ:**

**ರಾಮ ಮತ್ತು ರಹೀಮರ ಪುಸ್ತಕದಲ್ಲಿ**
**ರೋಜು ಪುಸ್ತಕ**

| ದಿನಾಂಕ | ವಿವರಗಳು | ಖಾ.ಪಾ | ಖರ್ಚು ₹ | ಜಮೆ ₹ |
|---|---|---|---|---|
| | ನಗದು ಖಾತೆ ಖರ್ಚು | | 10,000 | – |
| | ರಾಹುಲ್‌ನ ಬಂಡವಾಳ ಖಾತೆಗೆ | | – | 10,000 |
| | (ರಾಹುಲ್‌ನು ಬಂಡವಾಳಕ್ಕಾಗಿ ಹಣವನ್ನು ತಂದದ್ದು ) | | | |
| | ಕೀರ್ತಿಮೌಲ್ಯ ಖಾತೆ ಖರ್ಚು | | 30,000 | – |
| | ರಾಮನ ಬಂಡವಾಳ ಖಾತೆಗೆ | | – | 18,000 |
| | ರಹಿಮನ ಬಂಡವಾಳ ಖಾತೆಗೆ | | – | 12,000 |
| | (ಪೂರ್ಣ ಮೊತ್ತದ ವ್ಯತ್ಯಾಸದ ಕೀರ್ತಿಮೌಲ್ಯವನ್ನು ಹಳೆಯ ಲಾಭ ಹಂಚಿಕೆಯ ಅನುಪಾತದಲ್ಲಿ ಸೃಷ್ಟಿಸಿದ್ದು) | | | |

**b] ಲೆಕ್ಕ ಪುಸ್ತಕದಲ್ಲಿ ಕೀರ್ತಿಮೌಲ್ಯವು ₹ 15,000 ಇದ್ದಾಗ:**

**ರೋಜು ಪುಸ್ತಕ**

| ದಿನಾಂಕ | ವಿವರಗಳು | ಖಾ.ಪಾ | ಖರ್ಚು ₹ | ಜಮೆ ₹ |
|---|---|---|---|---|
| | ನಗದು ಖಾತೆ ಖರ್ಚು | | 10,000 | – |
| | ರಾಹುಲ್‌ನ ಬಂಡವಾಳ ಖಾತೆಗೆ | | – | 10,000 |
| | (ರಾಹುಲ್‌ನು ಬಂಡವಾಳವೆಂದು ಹಣತಂದದ್ದು | | | |
| | ಕೀರ್ತಿಮೌಲ್ಯ ಖಾತೆ ಖರ್ಚು | | 15,000 | – |
| | ರಾಮನ ಬಂಡವಾಳ ಖಾತೆಗೆ | | – | 9,000 |
| | ರಹಿಮನ ಬಂಡವಾಳ ಖಾತೆಗೆ | | – | 6,000 |
| | (ಕೀರ್ತಿಮೌಲ್ಯವನ್ನು ಒಪ್ಪಿದ ಮೊತ್ತಕ್ಕೆ ಸೃಷ್ಟಿಸಿದ್ದು) | | | |

**c] ಸಂಸ್ಥೆಯ ಪುಸ್ತಕದಲ್ಲಿ ಕೀರ್ತಿಮೌಲ್ಯವು ₹ 36,000 ಇದ್ದಾಗ:**

**ರೋಜು ಪುಸ್ತಕ**

| ದಿನಾಂಕ | ವಿವರಗಳು | | ಖಾ.ಪಾ | ಖರ್ಚು ₹ | ಜಮೆ ₹ |
|---|---|---|---|---|---|
| | ನಗದು ಖಾತೆ | ಖರ್ಚು | | 10,000 | – |
| | ರಾಹುಲ್‌ನ ಬಂಡವಾಳ ಖಾತೆಗೆ | | | – | 10,000 |
| | (ರಾಹುಲ್‌ನು ಬಂಡವಾಳವೆಂದು ಹಣ ತಂದದ್ದು) | | | | |
| | ರಾಮನ ಬಂಡವಾಳ ಖಾತೆ | ಖರ್ಚು | | 3,600 | – |
| | ರಹಿಮನ ಬಂಡವಾಳ ಖಾತೆ | ಖರ್ಚು | | 2,400 | – |
| | ಕೀರ್ತಿಮೌಲ್ಯ ಖಾತೆಗೆ | | | – | 6,000 |
| | (ಕೀರ್ತಿಮೌಲ್ಯದ ಮೊತ್ತವನ್ನು ಒಪ್ಪಿದ ಮೌಲ್ಯಕ್ಕೆ ಇಳಿಸಿದ್ದು) | | | | |

ಸಾಮಾನ್ಯವಾಗಿ ಕೀರ್ತಿಮೌಲ್ಯವನ್ನು ಲೆಕ್ಕದ ಪುಸ್ತಕದಲ್ಲಿ ಸೃಷ್ಟಿಸಿದಾಗ ಅದನ್ನು ಒಪ್ಪಿದ ಮೌಲ್ಯಕ್ಕೆ ಅಥಾವೆ ಪತ್ರಿಕೆಯಲ್ಲಿ ತೋರಿಸಲಾಗುತ್ತದೆ. ಆದಾಗ್ಯೂ ಹಳೆಯ ಪಾಲುದಾರರ ಬಂಡವಾಳ ಖಾತೆಗಳಲ್ಲಿ ಅವಶ್ಯಕ ಹೊಂದಾಣಿಕೆಗಳನ್ನು ಮಾಡಿದ ನಂತರ ಕೀರ್ತಿಮೌಲ್ಯವನ್ನು ಅಥಾವೆ ಪತ್ರಿಕೆಯಲ್ಲಿ ತೋರಿಸಬಾರದೆಂದು ಪಾಲುದಾರರು ನಿರ್ಧರಿಸಿದರೆ, ಆಗ ಅದನ್ನು ತೆಗೆದು ಹಾಕಬೇಕಾಗುತ್ತದೆ. ಅದಕ್ಕಾಗಿ ಕೀರ್ತಿಮೌಲ್ಯ ಖಾತೆಗೆ ಜಮೆ ಕೊಟ್ಟು ಹೊಸ ಪಾಲುದಾರನು ಸೇರಿದಂತೆ ಎಲ್ಲಾ ಪಾಲುದಾರರ ಬಂಡವಾಳ ಖಾತೆಗಳಿಗೆ ಹೊಸ ಲಾಭ ಹಂಚಿಕೆಯ ಅನುಪಾತದಲ್ಲಿ ಖರ್ಚು ಹಾಕಬೇಕಾಗುವದು. ಈ ರೀತಿ ಪರಿಗಣನೆ ಮಾಡುವದರ ಪ್ರಭಾವ ಏನಾಗುವದೆಂದರೆ ಹೊಸ ಪಾಲುದಾರನ ಬಂಡವಾಳ ಖಾತೆಗೆ ಕೀರ್ತಿಮೌಲ್ಯದಲ್ಲಿನ ಆತನ ಪಾಲಿನಷ್ಟು ಖರ್ಚು ಬೀಳುತ್ತದೆ ಮತ್ತು ಹಳೆ ಪಾಲುದಾರರ ಬಂಡವಾಳ ಖಾತೆಗಳಿಗೆ ಅವರ ತ್ಯಾಗದ ಅನುಪಾತದ ಪ್ರಮಾಣದಲ್ಲಿ ಜಮೆ ಆಗುತ್ತದೆ ಮತ್ತು ಕೀರ್ತಿಮೌಲ್ಯದ ಖಾತೆಯು ಶೂನ್ಯ ಶಿಲ್ಕುಗೊಳ್ಳುವುದು.

**ನಿದರ್ಶನ 21:**

A ಮತ್ತು B ಎಂಬ ಪಾಲುದಾರರು ಲಾಭ–ನಷ್ಟವನ್ನು ಸಮನಾಗಿ ಹಂಚಿಕೊಳ್ಳುವರು. ಅವರು C ಯನ್ನು ಪಾಲುದಾರಿಕೆಗೆ ಸೇರಿಸಿಕೊಂಡರು ಮತ್ತು ಹೊಸ ಅನುಪಾತವು 4:3:2 ಇರಬೇಕೆಂದು ನಿರ್ಧರಿಸಿರುವರು. C ಯು ಕೀರ್ತಿಮೌಲ್ಯಕ್ಕಾಗಿ ಯಾವುದೇ ಹಣವನ್ನು ತರಲು ಅಸಮರ್ಥನಾಗಿದ್ದು, ಬಂಡವಾಳಕ್ಕಾಗಿ ₹ 25,000 ಗಳನ್ನು ತಂದಿದ್ದಾನೆ. ಸಂಸ್ಥೆಯ ಕೀರ್ತಿಮೌಲ್ಯವು ₹ 18,000 ಎಂದು ಮೌಲೀಕರಿಸಲಾಗಿದೆ. ಪಾಲುದಾರರು ಅಥಾವೆ ಪತ್ರಿಕೆಯಲ್ಲಿ ಕೀರ್ತಿಮೌಲ್ಯವು ಕಾಣಿಸಿಕೊಳ್ಳಬಾರದೆಂದು ನಿರ್ಧರಿಸಿರುವರು ಎಂದು ಭಾವಿಸಿ ಅವಶ್ಯಕ ರೋಜು ನಮೂದುಗಳನ್ನು ನೀಡಿರಿ.

**ಪರಿಹಾರ:**

**A ಮತ್ತು B ರವರ ಪುಸ್ತಕ**
**ರೋಜು ಪುಸ್ತಕ**

| ದಿನಾಂಕ | ವಿವರಗಳು | ಖಾ.ಪಾ | ಖರ್ಚು ₹ | ಜಮೆ ₹ |
|---|---|---|---|---|
| | ನಗದು ಖಾತೆ ಖರ್ಚು | | 25,000 | – |
| | C ನ ಬಂಡವಾಳ ಖಾತೆಗೆ | | – | 25,000 |
| | (C ಯು ಬಂಡವಾಳವೆಂದು ಹಣತಂದದ್ದು) | | | |
| | ಕೀರ್ತಿಮೌಲ್ಯ ಖಾತೆ ಖರ್ಚು | | 18,000 | – |
| | A ನ ಬಂಡವಾಳ ಖಾತೆಗೆ | | – | 9,000 |
| | B ನ ಬಂಡವಾಳ ಖಾತೆಗೆ | | – | 9,000 |
| | (ಪೂರ್ಣ ಮೊತ್ತಕ್ಕೆ ಕೀರ್ತಿಮೌಲ್ಯ ಸೃಷ್ಟಿಸಿದ್ದು) | | | |
| | A ನ ಬಂಡವಾಳ ಖಾತೆ ಖರ್ಚು | | 8,000 | – |
| | B ನ ಬಂಡವಾಳ ಖಾತೆ ಖರ್ಚು | | 6,000 | – |
| | **C** ನ ಬಂಡವಾಳ ಖಾತೆ ಖರ್ಚು | | 4,000 | – |
| | ಕೀರ್ತಿಮೌಲ್ಯ ಖಾತೆಗೆ | | | 18,000 |
| | (ಕೀರ್ತಿಮೌಲ್ಯವನ್ನು ತೆಗೆದುಹಾಕಿದ್ದು) | | | |

ಮೇಲಿನ 2 ಮತ್ತು 3 ನೇ ನಮೂದುಗಳ ನಿವ್ವಳ ಪರಿಣಾಮವೇನಾಯಿತೆಂದರೆ, C ನ ಬಂಡವಾಳ ಖಾತೆಗೆ ₹ 4,000 ಖರ್ಚು ಬಿದ್ದಿದ್ದು ಮತ್ತು A ನ ಬಂಡವಾಳ ಖಾತೆ ಮತ್ತು B ನ ಬಂಡವಾಳ ಖಾತೆಗಳಿಗೆ ಅವರ ತ್ಯಾಗದ ಅನುಪಾತದಲ್ಲಿ ₹ 1,000 (ಜಮೆ ₹ 9,000 – ಖರ್ಚು ₹ 8,000) ಮತ್ತು ₹ 3,000 (ಜಮೆ ₹ 9,000 – ಖರ್ಚು ₹ 6,000) ಅನುಕ್ರಮವಾಗಿ ಜಮೆ ಬಿದ್ದಂತಾಯಿತು ಮತ್ತು ಕೀರ್ತಿಮೌಲ್ಯವು ಶೂನ್ಯ ಶೇಷಗೊಂಡಿತು.

ಕೆಲವು ಸಲ, ರೋಜು ಮತ್ತು ಖಾತೆ ಪುಸ್ತಕದಲ್ಲಿ ಕೀರ್ತಿಮೌಲ್ಯ ಖಾತೆಯು ಕಾಣಿಸಿಕೊಳ್ಳಬಾರದೆಂದು ಪಾಲುದಾರರು ನಿರ್ಧರಿಸುತ್ತಾರೆ. ಅಂತಹ ಪ್ರಕರಣದಲ್ಲಿ ಹೊಸ ಪಾಲುದಾರನ ಬಂಡವಾಳ ಖಾತೆಗೆ ಕೀರ್ತಿಮೌಲ್ಯದಲ್ಲಿನ ಅವನ ಪಾಲಿನಷ್ಟು ಮೊತ್ತಕ್ಕೆ ಖರ್ಚು ಹಾಕಿ, ಹಳೆ ಪಾಲುದಾರರ ಬಂಡವಾಳ ಖಾತೆಗಳಿಗೆ ಅವರ ತ್ಯಾಗದ ಅನುಪಾತದಲ್ಲಿ ಜಮೆ ನೀಡುವ ಒಂದೇ ಒಂದು ರೋಜು ದಾಖಲೆಯನ್ನು ಮಾಡುವ ಮೂಲಕ ಕೀರ್ತಿಮೌಲ್ಯವನ್ನು ಹೊಂದಾಣಿಕೆ ಮಾಡುವರು. ಒಂದು ವೇಳೆ ನಿದರ್ಶನ 21 ರಲ್ಲಿ ಈ ರೀತಿಯಾಗಿ ಕೀರ್ತಿಮೌಲ್ಯ ಪರಿಗಣನೆ ಮಾಡಬೇಕೆಂದರೆ ರೋಜು ದಾಖಲೆಯು ಈ ಕೆಳಗಿನಂತಾಗುವುದು:

| ದಿನಾಂಕ | ವಿವರಗಳು | ಖಾ.ಪಾ | ಖರ್ಚು ₹ | ಜಮೆ ₹ |
|---|---|---|---|---|
| | C ನ ಬಂಡವಾಳ ಖಾತೆ ಖರ್ಚು | | 4,000 | – |
| | A ನ ಬಂಡವಾಳ ಖಾತೆಗೆ | | – | 1,000 |
| | B ನ ಬಂಡವಾಳ ಖಾತೆಗೆ | | – | 3,000 |
| | (C ನ ಪಾಲಿನ ಕೀರ್ತಿಮೌಲ್ಯದ ಹೊಂದಾಣಿಕೆ) | | | |

ಮೇಲಿನ ರೋಜು ನಮೂದಿನ ಪರಿಣಾಮವೇ ಹಿಂದಿನ ರೋಜುದಾಖಲೆ 2 ಮತ್ತು 3 ರಲ್ಲಿ ಇದ್ದಂತೆಯೇ ಪಾಲುದಾರರ ಬಂಡವಾಳ ಖಾತೆಗಳ ಮೇಲಾಗುವದು.

**ಪೆಟ್ಟಿಗೆ (Box)-1**

"ಸ್ಥಿರ ಆಸ್ತಿಗಳಿಗೆ ಲೆಕ್ಕ ಬರಹ" ಇದಕ್ಕೆ ಸಂಬಂಧಿಸಿದ ಲೆಕ್ಕ ಬರಹ ಶಿಷ್ಟಗಳು 10 (AS–10) ರ ಪರಿಚ್ಛೇದ 16 ರಲ್ಲಿ ತಿಳಿಸಿರುವಂತೆ ಸಾಮಾನ್ಯವಾಗಿ, ಕೀರ್ತಿಮೌಲ್ಯಕ್ಕಾಗಿ ನಗದು ಅಥವಾ ನಗದು ಸಮಾನ ಪ್ರತಿಫಲವನ್ನು ಸಂದಾಯ ಮಾಡಿದ್ದರೆ ಮಾತ್ರ ಲೆಕ್ಕದ ಪುಸ್ತಕದಲ್ಲಿ ಕೀರ್ತಿಮೌಲ್ಯವನ್ನು ತೋರಿಸಬೇಕು ಎಂದು ತಿಳಿಸಲಾಗಿದೆ. ಆದಾಗ್ಯೂ ಬೆಲೆ ಸಂದಾಯ ಮಾಡಿ (ನಗದು ರೂಪದಲ್ಲಿ ಅಥವಾ ಶೇರುಗಳಲ್ಲಿ ಅಥವಾ ಇನ್ನಾವುದೇ ರೂಪದಲ್ಲಿ) ವ್ಯವಹಾರ ಸಂಸ್ಥೆಯನ್ನು ಖರೀದಿಸಿದಾಗ ಆ ಬೆಲೆಯು ಅದರ ನಿವ್ವಳ ಆಸ್ತಿ ಮೌಲ್ಯಕ್ಕಿಂತ ಹೆಚ್ಚಾಗಿದ್ದರೆ ಆ ಹೆಚ್ಚುವರಿ ಮೊತ್ತವನ್ನು ಕೀರ್ತಿಮೌಲ್ಯವೆಂದು ಪರಿಗಣಿಸಲಾಗುವುದು. ವ್ಯವಹಾರ ಸಂಪರ್ಕಗಳು, ವ್ಯಾಪಾರದ ಹೆಸರು ಅಥವಾ ಸಂಸ್ಥೆಯ ಒಳ್ಳೆಯ ಹೆಸರು ಅಥವಾ ಸಂಸ್ಥೆಯು ಹೊಂದಿರುವ ಅಗೋಚರ ಆಸ್ತಿಗಳ ಪ್ರಯೋಜನಗಳಿಂದಾಗಿ ಕೀರ್ತಿಮೌಲ್ಯವು ಉದ್ಭವಿಸುತ್ತದೆ.

ಹಣಕಾಸಿನ ಸ್ಥಿತ್ಯಂತರಕ್ಕಾಗಿ ಕೀರ್ತಿಮೌಲ್ಯವನ್ನು ಕಾಲಕ್ರಮೇಣದಲ್ಲಿ ತೆಗೆದು ಹಾಕುವರು. ಆದಾಗ್ಯೂ ಕೆಲವು ಸಂಸ್ಥೆಗಳು ಕೀರ್ತಿಮೌಲ್ಯವನ್ನು ತೆಗೆದು ಹಾಕವುದಿಲ್ಲ ಮತ್ತು ಅದನ್ನು ಒಂದು ಆಸ್ತಿಯೆಂದು ಹಾಗೇ ಉಳಿಸಿಕೊಳ್ಳುವರು.

ಲೆಕ್ಕ ಬರಹ ಶಿಷ್ಟಗಳು 10 (AS–10) ರ ಪರಿಚ್ಛೇದ 16 ರಲ್ಲಿ ಹೇಳಿರುವುದನ್ನು ಪರಿಗಣಿಸಿ, ಪಾಲುದಾರನ ಪ್ರವೇಶ, ನಿವೃತ್ತಿ ಅಥವಾ ಮರಣ ಅಥವಾ ಪಾಲುದಾರರ ಲಾಭ ಹಂಚಿಕೆ ಅನುಪಾತದಲ್ಲಿ ಬದಲಾವಣೆ ಮುಂತಾದ ಸಂದರ್ಭಗಳಲ್ಲಿ ಕೀರ್ತಿಮೌಲ್ಯವನ್ನು ಸಂಸ್ಥೆಯ ಪುಸ್ತಕದಲ್ಲಿ ಸೃಷ್ಟಿಸಬಾರದು ಮತ್ತು ಅಂತಹ ಸಂದರ್ಭಗಳಲ್ಲಿ ಕೀರ್ತಿಮೌಲ್ಯಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಪಾಲುದಾರರ ಬಂಡವಾಳ ಖಾತೆಗಳ ಮೂಲಕವೇ ದಾಖಲಿಸತಕ್ಕದ್ದು ಎಂದು ಪರಿಣಿತರು ಪ್ರತಿಪಾದಿಸುತ್ತಾರೆ. ಲೆಕ್ಕ ಬರಹ ಶಿಷ್ಟಗಳು 10 ಇದನ್ನು ಪ್ರತಿಪಾದಿಸುತ್ತದೆ. ಈ ಲೆಕ್ಕಬರಹ ಶಿಷ್ಟದ ತಾತ್ಪರ್ಯವೇನೆಂದರೆ **"ಸಂದಾಯ ಮಾಡದ ಹೊರತು ಕೀರ್ತಿಮೌಲ್ಯವನ್ನು ಲೆಕ್ಕದ ಪುಸ್ತಕದಲ್ಲಿ ತೆಗೆದುಕೊಳ್ಳಬಾರದು ಮತ್ತು ಒಂದು ವೇಳೆ ತೆಗೆದುಕೊಂಡಿದ್ದರೆ ಅದನ್ನು ಕಡ್ಡಾಯವಾಗಿ ಕಾಲಕ್ರಮೇಣದಲ್ಲಿ ತೆಗೆದು ಹಾಕತಕ್ಕದ್ದು"**. ಆದ್ದರಿಂದ ಹೊಸ ಪಾಲುದಾರನು ತನ್ನ ಪಾಲಿನ ಕೀರ್ತಿಮೌಲ್ಯಕ್ಕಾಗಿ ತಂದ ಮೊತ್ತಕ್ಕೆ ಕೀರ್ತಿಮೌಲ್ಯ ಖಾತೆಗೆ ಜಮೆ ಕೊಟ್ಟು ನಂತರ ಅದನ್ನು ಹಳೆ ಪಾಲುದಾರರ ಬಂಡವಾಳ ಖಾತೆಗಳಿಗೆ ವರ್ಗಾಯಿಸಲು ಕೀರ್ತಿ ಮೌಲ್ಯ ಖಾತೆಗೆ ಖರ್ಚು ಹಾಕುವುದು ಸಮಂಜಸವೆನಿಸುತ್ತದೆ. ಅದೇ ರೀತಿ ಒಳ ಬರುವ ಪಾಲುದಾರನು ತನ್ನ ಪಾಲಿನ ಕೀರ್ತಿ ಮೌಲ್ಯಕ್ಕಾಗಿ ಅವಶ್ಯಕ ಹಣ ತರಲು ಅಸಮರ್ಥನಾದಾಗ, ಒಪ್ಪಿದ ಕೀರ್ತಿ ಮೌಲ್ಯದ ಮೊತ್ತಕ್ಕೆ ಕೀರ್ತಿ ಮೌಲ್ಯದ ಖಾತೆಯನ್ನು ಸೃಷ್ಟಿಸಲು ಹಳೆ ಲಾಭ ಹಂಚಿಕೆಯ ಅನುಪಾತದಲ್ಲಿ ಹಳೆ ಪಾಲುದಾರರ ಬಂಡವಾಳ ಖಾತೆಗಳಿಗೆ ಜಮೆ ಕೊಡುವುದು ಮತ್ತು ನಂತರ ಹೊಸ ಪಾಲುದಾರನು ಸೇರಿದಂತೆ ಹೊಸ ಲಾಭ ಹಂಚಿಕೆ ಅನುಪಾತದಲ್ಲಿ ತಕ್ಷಣವೇ ಎಲ್ಲಾ ಪಾಲುದಾರರ ಬಂಡವಾಳ ಖಾತೆಗಳಿಗೆ ಖರ್ಚು ಕೊಡುವುದರ ಮೂಲಕ ಕೀರ್ತಿಮೌಲ್ಯ ತೆಗೆದುಹಾಕುವ ಕ್ರಮವು ಸಮಂಜಸವಾಗಿದೆ. ಇದರಿಂದ ಹೊಸ ಪಾಲುದಾರನ ಬಂಡವಾಳ ಖಾತೆಯ ಶಿಲ್ಕು ಕೀರ್ತಿಮೌಲ್ಯದಲ್ಲಿನ ಆತನ ಪಾಲಿನ ಮೊತ್ತದಷ್ಟು ಕಡಿಮೆಗೊಳ್ಳುವುದರಿಂದ ಆತ ತನ್ನ ಪಾಲಿನ ಕೀರ್ತಿಮೌಲ್ಯವನ್ನು ಖರೀದಿಸಿದಂತಾಗುವುದು. ಅಥಾವೆ ಪತ್ರಿಕೆಯಲ್ಲಿ ಈಗಾಗಲೇ ಕೀರ್ತಿಮೌಲ್ಯವು ಇದ್ದು ಅದನ್ನು ಒಪ್ಪಿದ ಮೌಲ್ಯಕ್ಕೆ ಸೃಷ್ಟಿಸಲು ಮಾಡುವ ಹೊಂದಾಣಿಕೆಗಳು ಇದೇ ತರ್ಕವನ್ನು ಅನುಸರಿಸಿದೆ. ಇಲ್ಲಿ ಅತಿ ಮುಖ್ಯವಾಗಿ ಗಮನಿಸಬೇಕಾದದ್ದು ಏನೆಂದರೆ ಸಾಮಾನ್ಯವಾಗಿ ಕೀರ್ತಿಮೌಲ್ಯವನ್ನು ಒಂದು ಆಸ್ತಿ ಎಂದು ಸೃಷ್ಟಿಸುವುದನ್ನು ಮಾಡತಕ್ಕದ್ದಲ್ಲ. ಒಂದು ವೇಳೆ ಕೀರ್ತಿಮೌಲ್ಯವನ್ನು ಪುಸ್ತಕದಲ್ಲಿ ಸೃಷ್ಟಿಸಿದ್ದೇ ಆದರೆ ಅದನ್ನು ಸಾಧ್ಯವಾದಷ್ಟು ಕಡಿಮೆ ಅವಧಿಯಲ್ಲಿ ತೆಗೆದು ಹಾಕತಕ್ಕದ್ದು.

**ನಿಮ್ಮ ತಿಳುವಳಿಕೆಯನ್ನು ಪರೀಕ್ಷಿಸಿಕೊಳ್ಳಿ – II**

**Test Your Understanding – II**

**ಸರಿಯಾದ ಉತ್ತರವನ್ನು ಆಯ್ಕೆ ಮಾಡಿರಿ.**

1. ಹೊಸ ಪಾಲುದಾರನ ಪ್ರವೇಶವಾದಾಗ ಹಳೆಯ ಅಢಾವೆ ಪತ್ರಿಕೆಯಲ್ಲಿ ಕಾಣಿಸಿದ ಸಾಮಾನ್ಯ ಮೀಸಲನ್ನು ಈ ಖಾತೆಗೆ ವರ್ಗಾಯಿಸುವರು.
   (a) ಎಲ್ಲ ಪಾಲುದಾರರ ಬಂಡವಾಳ ಖಾತೆಗಳು
   (b) ಹೊಸ ಪಾಲುದಾರನ ಬಂಡವಾಳ ಖಾತೆ
   (c) ಹಳೆ ಪಾಲುದಾರರ ಬಂಡವಾಳ ಖಾತೆಗಳು
   (d) ಮೇಲಿನವು ಯಾವುದೂ ಅಲ್ಲ.
2. ಆಶಾ ಮತ್ತು ನಿಶಾರವರು 2:1 ರ ಅನುಪಾತದಲ್ಲಿ ಲಾಭ ಹಂಚಿಕೊಳ್ಳುವ ಪಾಲುದಾರರಾಗಿರುತ್ತಾರೆ. ಆಶಾಳ ಮಗನಾದ ಆಶಿಸ್‌ನನ್ನು 1/4 ಪಾಲಿಗೆ ಸೇರಿಸಿಕೊಳ್ಳುವರು. ಅದನ್ನು ಅವನು ಆಶಾರಿಂದ 1/8 ದಷ್ಟು ಕೊಡುಗೆಯಾಗಿ ಪಡೆಯುವನು. ಇನ್ನುಳಿದ ಭಾಗವನ್ನು ನಿಶಾಳು ಕೊಡುವಳು. ಸಂಸ್ಥೆಯ ಕೀರ್ತಿಮೌಲ್ಯವು ₹ 40,000 ಎಂದು ಮೌಲ್ಯೀಕರಿಸಲಾಗಿದೆ. ಹಳೆಯ ಪಾಲುದಾರರ ಬಂಡವಾಳ ಖಾತೆಗಳಿಗೆ ಜಮೆ ನೀಡುವ ಕೀರ್ತಿ ಮೌಲ್ಯ ಎಷ್ಟಾಗಿರುವದು?
   (a) ಪ್ರತಿಯೊಬ್ಬರಿಗೆ ₹ 2,500
   (b) ಪ್ರತಿಯೊಬ್ಬರಿಗೆ ₹ 5,000
   (c) ಪ್ರತಿಯೊಬ್ಬರಿಗೆ ₹ 20,000
   (d) ಮೇಲಿನವು ಯಾವುದೂ ಅಲ್ಲ.
3. A, B ಮತ್ತು C ರವರು ಸಂಸ್ಥೆಯಲ್ಲಿ ಪಾಲುದಾರರಾಗಿರುತ್ತಾರೆ. D ಯನ್ನು ಹೊಸ ಪಾಲುದಾರನೆಂದು ಸೇರಿಸಿಕೊಂಡರೆ.
   (a) ಹಳೆ ಸಂಸ್ಥೆಯು ವಿಸರ್ಜನೆಯಾಗುವದು.
   (b) ಹಳೆ ಸಂಸ್ಥೆ ಮತ್ತು ಹಳೆ ಪಾಲುದಾರಿಕೆಯೂ ವಿಸರ್ಜನೆಯಾಗುವದು.
   (c) ಹಳೆ ಪಾಲುದಾರಿಕೆ ಪುನರ್‌ರಚನೆಯಾಗುವುದು.
   (d) ಮೇಲಿನವು ಯಾವುದೂ ಅಲ್ಲ.
4. ಹೊಸ ಪಾಲುದಾರನ ಪ್ರವೇಶವಾದ ಸಮಯದಲ್ಲಿ ಆಸ್ತಿಯ ಮೌಲ್ಯದಲ್ಲಿ ಹೆಚ್ಚಳವನ್ನು ಈ ಖಾತೆಗೆ ಖರ್ಚು ಹಾಕಲಾಗುವದು.
   (a) ಲಾಭ–ನಷ್ಟದ ಹೊಂದಾಣಿಕೆ ಖಾತೆ.
   (b) ಆಸ್ತಿಗಳ ಖಾತೆ
   (c) ಹಳೆ ಪಾಲುದಾರರ ಬಂಡವಾಳ ಖಾತೆಗಳು
   (d) ಮೇಲಿನವು ಯಾವುದೂ ಅಲ್ಲ.
5. ಹೊಸ ಪಾಲುದಾರನ ಪ್ರವೇಶವಾದಾಗ ಹಳೆ ಸಂಸ್ಥೆಯ ಅಢಾವೆ ಪತ್ರಿಕೆಯಲ್ಲಿನ ಹಂಚಿಕೆಯಾಗದ ಲಾಭವನ್ನು ಈ ಬಂಡವಾಳ ಖಾತೆಗಳಿಗೆ ವರ್ಗಾಯಿಸಬೇಕು.
   (a) ಹಳೆ ಪಾಲುದಾರರಿಗೆ ಅವರ ಹಳೆ ಲಾಭ ಹಂಚಿಕೆ ಅನುಪಾತದಲ್ಲಿ
   (b) ಹಳೆ ಪಾಲುದಾರರಿಗೆ ಅವರ ಹೊಸ ಲಾಭ ಹಂಚಿಕೆ ಅನುಪಾತದಲ್ಲಿ
   (c) ಎಲ್ಲಾ ಪಾಲುದಾರರಿಗೆ ಅವರ ಹೊಸ ಲಾಭ ಹಂಚಿಕೆ ಅನುಪಾತದಲ್ಲಿ
   (d) ಮೇಲಿನವು ಯಾವುದೂ ಅಲ್ಲ.

### 3.5.5.3: ಮರೆಮಾಚಿದ (ಸುಪ್ತ) ಕೀರ್ತಿಮೌಲ್ಯ : Hidden Goodwill

ಕೆಲವು ಸಲ, ಹೊಸ ಪಾಲುದಾರನ ಪ್ರವೇಶ ಸಮಯದಲ್ಲಿ ಕೀರ್ತಿಮೌಲ್ಯವನ್ನು ಕೊಟ್ಟಿರುವುದಿಲ್ಲ. ಅಂತಹ ಸಂದರ್ಭದಲ್ಲಿ ಹೊಸ ಪಾಲುದಾರನು ಒದಗಿಸಿದ ಬಂಡವಾಳ ಮತ್ತು ಹೊಸ ಲಾಭ ಹಂಚಿಕೆ ಅನುಪಾತಗಳಿಂದ ಕೀರ್ತಿಮೌಲ್ಯ ಎಷ್ಟು ಇರುವುದೆಂದು ಕಂಡುಕೊಳ್ಳಬೇಕಾಗುತ್ತದೆ. ಒಂದು ವೇಳೆ, A ಮತ್ತು B ಎಂಬ ಪಾಲುದಾರರು ತಲಾ ₹ 45,000 ಬಂಡವಾಳ ಒದಗಿಸಿದ್ದು ಲಾಭವನ್ನು ಸಮನಾಗಿ ಹಂಚಿಕೊಳ್ಳುತ್ತಿದ್ದಾರೆ. ಅವರು C ಯನ್ನು 1/3 ಲಾಭದ ಪಾಲಿಗೆ ಹೊಸ ಪಾಲುದಾರನೆಂದು ಸೇರಿಸಿಕೊಳ್ಳುವರು. C ಯು ₹ 60,000 ಗಳನ್ನು ಬಂಡವಾಳಕ್ಕಾಗಿ ತರುವನು. **C** ಯು ಬಂಡವಾಳಕ್ಕಾಗಿ ತಂದಿರುವ ಹಣ ಮತ್ತು ಲಾಭದಲ್ಲಿಯ ಅವನ ಪಾಲು ಆಧರಿಸಿ ನೋಡಲಾಗಿ, ಹೊಸ ಸಂಸ್ಥೆಯ ಒಟ್ಟು ಬಂಡವಾಳವು ₹ 1,80,000 (₹ 60,000 × 3) ಆಗುತ್ತದೆ. ಆದರೆ A, B ಮತ್ತು C ಇವರ ಒಟ್ಟು ಬಂಡವಾಳವು ₹ 1,50,000 (₹ 45,000 + ₹ 45,000 + ₹ 60,000) ಇರುತ್ತದೆ. ಆದ್ದರಿಂದ ಇವು ಎರಡರ ನಡುವಿನ ವ್ಯತ್ಯಾಸವು ₹ 30,000 (₹1,80,000 – ₹1,50,000) ಕೀರ್ತಿಮೌಲ್ಯವಾಗಿದೆ ಎಂದು ತಿಳಿಯಬಹುದು. ಇದನ್ನು A ಮತ್ತು B ರವರು ಸಮನಾಗಿ (ಹಳೆ ಅನುಪಾತದಲ್ಲಿ) ಹಂಚಿಕೊಳ್ಳುವರು. ಇದು ಅವರ ಬಂಡವಾಳ ಖಾತೆಯನ್ನು ತಲಾ ₹ 60,000ಕ್ಕೆ ಹೆಚ್ಚಿಸುತ್ತದೆ ಮತ್ತು ಸಂಸ್ಥೆಯ ಒಟ್ಟು ಬಂಡವಾಳವು ₹ 1,80,000 ಆಗುತ್ತದೆ. ಪರ್ಯಾಯವಾಗಿ, ಕೀರ್ತಿಮೌಲ್ಯ ಖಾತೆಯನ್ನು ಸೃಷ್ಟಿಸುವದಿಲ್ಲವೆಂದಾದರೆ, C ಯ ಬಂಡವಾಳ ಖಾತೆಗೆ ₹ 10,000 (ಕೀರ್ತಿಮೌಲ್ಯದಲ್ಲಿ ಅವನ ಪಾಲು) ಖರ್ಚು ಹಾಕಿ, A ಮತ್ತು B ಇವರ ಬಂಡವಾಳ ಖಾತೆಗಳಿಗೆ ತಲಾ ₹ 5,000 ಜಮೆ ನೀಡಬೇಕು ಮತ್ತು ಸಂಸ್ಥೆಯ ಒಟ್ಟು ಬಂಡವಾಳವು ₹ 1,50,000 ಗಳಾಗಿ ಉಳಿಯುವುದು.

**ನಿದರ್ಶನ 22:**

ಹೇಮ ಮತ್ತು ನೇಮ ಎಂಬ ಪಾಲುದಾರರು 3:2 ರ ಅನುಪಾತದಲ್ಲಿ ಲಾಭ ಹಂಚಿಕೆ ಮಾಡಿಕೊಳ್ಳುತ್ತಿದ್ದಾರೆ. ಅವರ ಬಂಡವಾಳವು ಅನುಕ್ರಮವಾಗಿ ₹ 80,000 ಮತ್ತು ₹ 50,000 ಇರುತ್ತದೆ. ಅವರು 01–01–2007 ರಂದು ಭವಿಷ್ಯದ ಲಾಭದಲ್ಲಿ 1/5 ಪಾಲಿಗಾಗಿ ಶ್ಯಾಮ ಎಂಬವನನ್ನು ಸಂಸ್ಥೆಗೆ ಸೇರಿಸಿಕೊಳ್ಳುವರು. ಶ್ಯಾಮನು ಬಂಡವಾಳವೆಂದು ₹ 60,000 ತಂದಿರುವನು. ಸಂಸ್ಥೆಯ ಕೀರ್ತಿಮೌಲ್ಯವನ್ನು ಲೆಕ್ಕ ಮಾಡಿರಿ ಮತ್ತು ಶ್ಯಾಮನ ಪ್ರವೇಶಕ್ಕೆ ಸಂಬಂಧಿಸಿದ ಅವಶ್ಯಕ ರೋಜು ನಮೂದುಗಳನ್ನು ಬರೆಯಿರಿ.

**ಪರಿಹಾರ:**

**ಸಂಸ್ಥೆಯ ಕೀರ್ತಿಮೌಲ್ಯವು:**

| | |
|---|---|
| ಶ್ಯಾಮನ ಬಂಡವಾಳ | = ₹ 60,000 |
| ಶ್ಯಾಮನ ಪಾಲು | = $\frac{1}{5}$ |
| ಹೊಸ ಸಂಸ್ಥೆಯ ಒಟ್ಟು ಬಂಡವಾಳ | = 5 × ₹ 60,000 = ₹ 3,00,000 |
| ಹೇಮ, ನೇಮ ಮತ್ತು ಶ್ಯಾಮರ.ಒಟ್ಟು ಬಂಡವಾಳ | = ₹ 80,000 + ₹ 50,000 + ₹ 60,000 |
| | = ₹ 1,90,000 |
| ಸಂಸ್ಥೆಯ ಕೀರ್ತಿಮೌಲ್ಯ | = ₹ 1,10,000 (₹ 3,00,000 – ₹ 1,90,000) |
| ಶ್ಯಾಮನ ಪಾಲು | = $\frac{1}{5}$ × ₹ 1,10,000 |
| | = ₹ 22,000 |

**ಹೇಮ, ನೇಮ ಮತ್ತು ಶ್ಯಾಮ ರವರ ಪುಸ್ತಕದಲ್ಲಿ**
**ರೋಜು ಪುಸ್ತಕ**

| ದಿನಾಂಕ 2007 | ವಿವರಗಳು | ಖಾ.ಪಾ | ಖರ್ಚು ₹ | ಜಮೆ ₹ |
|---|---|---|---|---|
| 1 | ಬ್ಯಾಂಕು ಖಾತೆ ಖರ್ಚು | | 60,000 | – |
| | ಶ್ಯಾಮನ ಬಂಡವಾಳ ಖಾತೆಗೆ | | – | 60,000 |
| | (ಸ್ಯಾಮನು ಬಂಡವಾಳಕ್ಕಾಗಿ ಹಣ ತಂದದ್ದು). | | | |
| 2 | ಕೀರ್ತಿಮೌಲ್ಯ ಖಾತೆ ಖರ್ಚು | | 1,10,000 | – |
| | ಹೇಮನ ಬಂಡವಾಳ ಖಾತೆಗೆ | | – | 66,000 |
| | ನೇಮನ ಬಂಡವಾಳ ಖಾತೆಗೆ | | – | 44,000 |
| | (ಶ್ಯಾಮನ ಪ್ರವೇಶವಾದಾಗ ಕೀರ್ತಿಮೌಲ್ಯಕ್ಕಾಗಿ ಹೇಮ ಮತ್ತು ನೇಮನ ಖಾತೆಗೆ ಜಮೆ ಕೊಟ್ಟಿದ್ದು) | | | |

ಪರ್ಯಾಯವಾಗಿ, ಕೀರ್ತಿಮೌಲ್ಯ ಖಾತೆಯನ್ನು ಸೃಷ್ಟಿಸದಿದ್ದರೆ ಕೀರ್ತಿಮೌಲ್ಯಕ್ಕಾಗಿ ಎರಡನೆಯ ರೋಜು ನಮೂದನ್ನು ಈ ಕೆಳಗಿನಂತೆ ಮಾಡಬೇಕಾಗುವದು.

| ದಿನಾಂಕ | ವಿವರಗಳು | ಖಾ.ಪಾ | ಖರ್ಚು ₹ | ಜಮೆ ₹ |
|---|---|---|---|---|
| | ಶ್ಯಾಮನ ಬಂಡವಾಳ ಖಾತೆ ಖರ್ಚು | | 22,000 | – |
| | ಹೇಮನ ಬಂಡವಾಳ ಖಾತೆಗೆ | | – | 13,200 |
| | ನೇಮನ ಬಂಡವಾಳ ಖಾತೆಗೆ | | – | 8,800 |
| | (ಕೀರ್ತಿಮೌಲ್ಯದಲ್ಲಿನ ಶ್ಯಾಮನ ಪಾಲನ್ನು ಹೇಮ ಮತ್ತು ನೇಮರಿಗೆ ಹಂಚಿ ಕೊಟ್ಟಿದ್ದು) | | | |

**ನೀವೇ ಮಾಡಿ (Do it Yourself):**

1. ಒಂದು ಸಂಸ್ಥೆಯ ಹಿಂದಿನ 3 ವರ್ಷಗಳ ಲಾಭವು ಕ್ರಮವಾಗಿ ₹ 5,00,000, ₹ 4,00,000 ಮತ್ತು ₹ 6,00,000 ಆಗಿರುತ್ತದೆ. 3 ವರ್ಷದ ಸರಾಸರಿ ಲಾಭದ 4 ವರ್ಷಗಳ ಖರೀದಿಯಂತೆ ಸಂಸ್ಥೆಯ ಕೀರ್ತಿಮೌಲ್ಯವನ್ನು ಲೆಕ್ಕಹಾಕಿರಿ

   **(ಉತ್ತರ: ₹ 20,00,000)**

2. ಸಂಸ್ಥೆಯ ಹಿಂದಿನ 5 ವರ್ಷಗಳ ಲಾಭವು ಕ್ರಮವಾಗಿ ₹ 20,000, ₹ 30,000, ₹ 40,000, ₹ 50,000 ಮತ್ತು ₹ 60,000 ಆಗಿರುತ್ತದೆ. ಅನುಕ್ರಮವಾಗಿ 1,2,3,4 ಮತ್ತು 5 ಗಳನ್ನು ತೂಕವಾಗಿ ಪರಿಗಣಿಸಿದ ತೂಕದ ಸರಾಸರಿ ಲಾಭದ 3 ವರ್ಷಗಳ ಖರೀದಿಯಂತೆ ಸಂಸ್ಥೆಯ ಕೀರ್ತಿಮೌಲ್ಯವನ್ನು ಲೆಕ್ಕ ಹಾಕಿರಿ.

   **(ಉತ್ತರ: 1,40,000).**

3. 2013, 2014, 2015 ಮತ್ತು 2016 ರಲ್ಲಿ ಸಂಸ್ಥೆಯ ಲಾಭವು ಕ್ರಮವಾಗಿ ₹ 16,000, ₹ 20,000, ₹ 24,000 ಮತ್ತು ₹ 32,000 ಆಗಿರುತ್ತದೆ. ಸಂಸ್ಥೆಯಲ್ಲಿ ಒಟ್ಟು ₹1,00,000 ಬಂಡವಾಳ ತೊಡಗಿಸಲಾಗಿದೆ. ಹೂಡಿಕೆ ಮೇಲೆ ನ್ಯಾಯೋಜಿತ ಪ್ರತಿಫಲ ದರವು ಶೇಕಡಾ 18 ಆಗಿರುವದು. ಕಳೆದ 4 ವರ್ಷಗಳ ಸರಾಸರಿ ಅಧಿಕಲಾಭದ 3 ವರ್ಷಗಳ ಖರೀದಿಯಂತೆ ಸಂಸ್ಥೆಯ ಕೀರ್ತಿಮೌಲ್ಯವನ್ನು ಲೆಕ್ಕ ಮಾಡಿರಿ.

   **(ಉತ್ತರ ₹ 15,000).**

4. ಮೇಲಿನ ಪ್ರಶ್ನೆಯಲ್ಲಿ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಅಧಿಕ ಲಾಭದ ಬಂಡವಾಳೀಕರಣ ವಿಧಾನದಲ್ಲಿ ಸಂಸ್ಥೆಯ ಕೀರ್ತಿಮೌಲ್ಯವನ್ನು ಲೆಕ್ಕಹಾಕಿರಿ. ಸರಾಸರಿ ಲಾಭದ ಬಂಡವಾಳೀಕರಣ ವಿಧಾನದಲ್ಲಿ ಲೆಕ್ಕಹಾಕಿದ ಕೀರ್ತಿಮೌಲ್ಯಕ್ಕಿಂತ ಇದು ಭಿನ್ನವಾಗಿರುವುದೇ? ನಿಮ್ಮ ಉತ್ತರವನ್ನು ಸಂಖ್ಯಾತ್ಮಕವಾಗಿ ಪರಿಶೀಲಿಸಿ ನೋಡಿರಿ.

5. ಗಿರಿ ಮತ್ತು ಶಾಂತಾ ಇವರು ಸಂಸ್ಥೆಯ ಪಾಲುದಾರರಿದ್ದು ಲಾಭವನ್ನು ಸಮನಾಗಿ ಹಂಚಿಕೊಳ್ಳುತ್ತಿರುವರು. ಅವರು ಕಚ್ರೂರನ್ನು ಲಾಭದ 1/5 ಪಾಲಿಗಾಗಿ ಹೊಸದಾಗಿ ಸೇರಿಸಿಕೊಂಡಿದ್ದು, ಅವನು ಅಗತ್ಯ ಬಂಡವಾಳದೊಂದಿಗೆ ₹ 20,000 ಗಳನ್ನು ಕೀರ್ತಿಮೌಲ್ಯಕ್ಕಾಗಿ ತಂದಿರುವನು. ಕೆಳಗಿನ ಸಂದರ್ಭಗಳಲ್ಲಿ ರೋಜು ನಮೂದು ನೀಡಿರಿ.

   [a] ಸಂಸ್ಥೆಯ ಪುಸ್ತಕದಲ್ಲಿ ಕೀರ್ತಿಮೌಲ್ಯವು ಇಲ್ಲದಿರುವಾಗ

   [b] ಸಂಸ್ಥೆಯ ಪುಸ್ತಕದಲ್ಲಿ ಕೀರ್ತಿಮೌಲ್ಯವು ₹ 40,000 ಇರುವಾಗ.

6. A ಮತ್ತು B ಇವರು ಸಂಸ್ಥೆಯ ಪಾಲುದಾರರಿದ್ದು, 3:2 ರ ಅನುಪಾತದಲ್ಲಿ ಲಾಭ ಹಂಚಿಕೊಳ್ಳುತ್ತಿರುವರು. ಅವರು 1/5 ಲಾಭದ ಪಾಲಿಗಾಗಿ C ಯನ್ನು ಸಂಸ್ಥೆಗೆ ಸೇರಿಸಿಕೊಂಡರು. ಸಂಸ್ಥೆಯ ಕೀರ್ತಿಮೌಲ್ಯವು ₹ 1,00,000 ಎಂದು ಮೌಲ್ಯೀಕರಿಸಿದೆ. ಅವನು ತನ್ನ ಪಾಲಿನ ಕೀರ್ತಿಮೌಲ್ಯಕ್ಕಾಗಿ ಹಣ ತರಲು ಅಸಮರ್ಥನಾಗಿರುವನು. ಕೆಳಗಿನ ಸಂದರ್ಭಗಳಲ್ಲಿ ರೋಜು ನಮೂದು ಹೇಗಿರುವುದು?

   [a] ಪೂರ್ಣ ಮೌಲ್ಯದ ಕೀರ್ತಿಮೌಲ್ಯವನ್ನು ಸೃಷ್ಟಿಸುವುದು ಮತ್ತು ಅದನ್ನು ತೆಗೆದು ಹಾಕುವುದು.

   [b] ಕೀರ್ತಿಮೌಲ್ಯವನ್ನು ಸೃಷ್ಟಿಸದೇ ಇರುವದು.

## 3.6. ಸಂಚಿತಗೊಂಡ ಲಾಭ ಮತ್ತು ನಷ್ಟಗಳ ಹೊಂದಾಣಿಕೆ : Adjustment for Accumulated Profits and Losses

ಕೆಲವು ಸಲ ಸಂಸ್ಥೆಯು ಪಾಲುದಾರರ ಬಂಡವಾಳ ಖಾತೆಗಳಿಗೆ ಲಾಭವನ್ನು ವರ್ಗಾಯಿಸದೇ ಸಂಚಿತಗೊಂಡ ಲಾಭವನ್ನು ಹೊಂದಿರಬಹುದು. ಅವು ಸಾಮಾನ್ಯವಾಗಿ ಸಾಮಾನ್ಯ ಮೀಸಲು, ಮೀಸಲು ನಿಧಿ ಮತ್ತು / ಅಥವಾ ಲಾಭ–ನಷ್ಟ ಖಾತೆ ಶಿಲ್ಕುಗಳ ರೂಪದಲ್ಲಿರಬಹುದು. ಅಂತಹ ಸಂಚಿತ ಲಾಭಗಳಲ್ಲಿ ಹೊಸ ಪಾಲುದಾರನು ಯಾವುದೇ ಪಾಲು ಪಡೆಯಲು ಅರ್ಹನಲ್ಲ. ಅವುಗಳನ್ನು ಹಳೆ ಲಾಭ ಹಂಚಿಕೆ ಅನುಪಾತದಲ್ಲಿ ಹಳೆ ಪಾಲುದಾರರ ಬಂಡವಾಳ ಖಾತೆಗಳಿಗೆ ವರ್ಗಾಯಿಸಬೇಕು. ಅದೇ ರೀತಿ ಅಢಾವೆ ಪತ್ರಿಕೆಯಲ್ಲಿ ತೋರಿಸಲಾದ ಲಾಭ–ನಷ್ಟ ಖಾತೆಯ ಖರ್ಚಿನ ಶಿಲ್ಕಿನ ರೂಪದಲ್ಲಿರುವ ಸಂಚಿತ ಹಾನಿಗಳು ಇದ್ದಿರಬಹುದು. ಹಾಗಿದ್ದಲ್ಲಿ ಅದನ್ನೂ ಕೂಡ ಹಳೆಯ ಪಾಲುದಾರರ ಬಂಡವಾಳ ಖಾತೆಗಳಿಗೆ ವರ್ಗಾಯಿಸಬೇಕು. (ನಿದರ್ಶನ 23 ನ್ನು ನೋಡಿ).

**ನಿದರ್ಶನ 23:**

ರಾಜೇಂದ್ರ ಮತ್ತು ಸುರೇಂದ್ರ ಇವರು ಸಂಸ್ಥೆಯ ಪಾಲುದಾರರಿದ್ದು, 4:1 ರ ಅನುಪಾತದಲ್ಲಿ ಲಾಭ ಹಂಚಿಕೊಳ್ಳುತ್ತಿರುವರು. ಅವರು ದಿ. 15–4–2015 ರಂದು ನರೇಂದ್ರನನ್ನು ಹೊಸ ಪಾಲುದಾರನನ್ನಾಗಿ ಸೇರಿಸಿಕೊಳ್ಳುವರು. ಆ ದಿನಾಂಕದಂದು ಸಂಸ್ಥೆಯು ಸಾಮಾನ್ಯ ಮೀಸಲು ₹ 20,000 ಮತ್ತು ಲಾಭ–ನಷ್ಟದ ಖಾತೆ ₹ 10,000 ಖರ್ಚಿನ ಶಿಲ್ಕು ಹೊಂದಿರುವದು.

ಸಂಚಿತ ಲಾಭ ಅಥವಾ ನಷ್ಟದ ಹೊಂದಾಣಿಕೆಗೆ ಸಂಬಂಧಿಸಿದ ಅವಶ್ಯಕ ರೋಜು ನಮೂದುಗಳನ್ನು ಬರೆಯಿರಿ.

**ಪರಿಹಾರ:**

**ರಾಜೇಂದರ್, ಸುರೇಂದರ್, ಮತ್ತು ನರೇಂದರ್ ಇವರ ಪುಸ್ತಕದಲ್ಲಿ**
**ರೋಜು ಪುಸ್ತಕ**

| ದಿನಾಂಕ 2015 | ವಿವರಗಳು | ಖಾ.ಪಾ | ಖರ್ಚು ₹ | ಜಮೆ ₹ |
|---|---|---|---|---|
| ಎಪ್ರೀಲ– 15 | ಸಾಮಾನ್ಯ ಮೀಸಲು ಖಾತೆ ಖರ್ಚು | | 20,000 | – |
| | ರಾಜೇಂದರ್‌ನ ಬಂಡವಾಳ ಖಾತೆಗೆ | | – | 16,000 |
| | ಸುರೇಂದರ್‌ನ ಬಂಡವಾಳ ಖಾತೆಗೆ | | – | 4,000 |
| | (ನರೇಂದರ್‌ನು ಪ್ರವೇಶವಾದಾಗ ಇರುವ ಸಾಮಾನ್ಯ ಮೀಸಲು ಖಾತೆ ಶಿಲ್ಕನ್ನು ರಾಜೇಂದರ್ ಮತ್ತು ಸುರೇಂದರ್ ಬಂಡವಾಳ ಖಾತೆಗಳಿಗೆ ವರ್ಗಾಯಿಸಿದ್ದು) | | | |
| | ರಾಜೇಂದರ್‌ನ ಬಂಡವಾಳ ಖಾತೆ ಖರ್ಚು | | 8,000 | – |
| | ಸುರೇಂದರ್‌ನ ಬಂಡವಾಳ ಖಾತೆ ಖರ್ಚು | | 2,000 | – |
| | ಲಾಭ ನಷ್ಟದ ಖಾತೆಗೆ | | – | 10,000 |
| | (ಲಾಭ ನಷ್ಟದ ಖಾತೆಯ ಖರ್ಚಿನ ಶಿಲ್ಕನ್ನು ಹಳೆಯ ಪಾಲುದಾರರ ಬಂಡವಾಳ ಖಾತೆಗಳಿಗೆ ವರ್ಗಾಯಿಸಿದ್ದು) | | | |

### 3.7: ಆಸ್ತಿಗಳ ಪುನರ್ ಮೌಲ್ಯ ಮತ್ತು ಜವಾಬ್ದಾರಿಗಳ ಪುನರ್‌ನಿರ್ಧರಣೆ:

**Revaluation of Assets and Reassessment of Liabilities**

ಸಂಸ್ಥೆಗೆ ಹೊಸ ಪಾಲುದಾರನ ಪ್ರವೇಶದ ಸಮಯದಲ್ಲಿ ಸಂಸ್ಥೆಯ ಆಸ್ತಿಗಳ ಚಾಲ್ತಿ ಮೌಲ್ಯವನ್ನು ಕಂಡುಹಿಡಿದು ಲೆಕ್ಕ ಪುಸ್ತಕದಲ್ಲಿ ತೋರಿಸಬೇಕು. ಈ ಸಂದರ್ಭದಲ್ಲಿ ಆಸ್ತಿಗಳ ಮೌಲ್ಯ ಹೆಚ್ಚಿಗೆ ಅಥವಾ ಕಡಿಮೆ ತೋರಿಸಿರಬಹುದು. ಅವುಗಳನ್ನು ಪುನರ್‌ಮೌಲ್ಯ ಮಾಡಬೇಕಾಗುತ್ತದೆ. ಅದರಂತೆ ಜವಾಬ್ದಾರಿಗಳನ್ನೂ ಸಹ ಪುನರ್‌ಮೌಲ್ಯ ಮಾಡಿ ಅವುಗಳ ನೈಜ ಬೆಲೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕು. ಈ ಸಮಯದಲ್ಲಿ ದಾಖಲೆಯಾಗದ ಆಸ್ತಿಗಳು ಮತ್ತು ಜವಾಬ್ದಾರಿಗಳೂ ಸಹ ಸಂಸ್ಥೆಯಲ್ಲಿ ಇರಬಹುದು. ಇವುಗಳನ್ನೂ ಸಹ ಸಂಸ್ಥೆಯ ಲೆಕ್ಕ ಪುಸ್ತಕಕ್ಕೆ ತೆಗೆದುಕೊಳ್ಳಲಾಗುತ್ತದೆ. ಈ ಉದ್ದೇಶಕ್ಕಾಗಿ ಸಂಸ್ಥೆಯು ಪುನರ್‌ಮೌಲ್ಯ ಖಾತೆಯನ್ನು ತಯಾರಿಸುತ್ತದೆ. ಆಸ್ತಿಗಳ ಮತ್ತು ಜವಾಬ್ದಾರಿಗಳ ಮೌಲ್ಯಗಳನ್ನು ಪುನರ್‌ಮೌಲ್ಯ ಮಾಡುವುದರ ಮೇಲೆ ಆಗುವ ಲಾಭ ಅಥವಾ ಹಾನಿಯನ್ನು ಇದೇ ಖಾತೆಗೆ ವರ್ಗಾಯಿಸಬೇಕು. ಅಂತಿಮವಾಗಿ ಅದರ ಶಿಲ್ಕನ್ನು ಹಳೆ ಪಾಲುದಾರರ ಬಂಡವಾಳ ಖಾತೆಗಳಿಗೆ ಅವರ ಹಳೆ ಲಾಭ ಹಂಚಿಕೆಯ ಅನುಪಾತದಲ್ಲಿ ವರ್ಗಾಯಿಸಬೇಕು. ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ, ಪ್ರತಿಯೊಂದು ಆಸ್ತಿಯ ಹೆಚ್ಚಾದ ಮೌಲ್ಯವನ್ನು ಆಸ್ತಿಗಳ ಪುನರ್‌ಮೌಲ್ಯ ಖಾತೆಗೆ ಜಮೆ ಹಾಕಬೇಕು. ಯಾಕೆಂದರೆ ಅದು ಆದಾಯವಾಗುತ್ತದೆ. ಕಡಿಮೆ ಆದ ಆಸ್ತಿಗಳ ಮೌಲ್ಯ ಮತ್ತು ಹೆಚ್ಚಾಗಿರುವ ಜವಾಬ್ದಾರಿಗಳ ಮೌಲ್ಯವನ್ನು ಪುನರ್‌ಮೌಲ್ಯ ಖಾತೆಗೆ ಖರ್ಚು ಹಾಕಬೇಕು. ಯಾಕೆಂದರೆ ಅದು ನಷ್ಟವಾಗಿರುತ್ತದೆ. ಅದರಂತೆ, ದಾಖಲೆಯಾಗದ ಆಸ್ತಿಗಳ ಮೊತ್ತವನ್ನು ಜಮೆ ಮತ್ತು ದಾಖಲೆಯಾಗದ ಜವಾಬ್ದಾರಿಗಳ ಮೊತ್ತವನ್ನು ಪುನರ್‌ಮೌಲ್ಯ ಖಾತೆಗೆ ಖರ್ಚು ಹಾಕಲಾಗುವುದು. ಅಂತಿಮವಾಗಿ ಪುನರ್‌ಮೌಲ್ಯ ಖಾತೆ ಜಮೆ ಶಿಲ್ಕು ತೋರಿಸಿದರೆ ಅದು ನಿವ್ವಳ ಲಾಭವನ್ನು ಸೂಚಿಸುತ್ತದೆ. ಒಂದು ವೇಳೆ ಖರ್ಚು ಶಿಲ್ಕು ತೋರಿಸಿದರೆ ಅದು ನಿವ್ವಳ ನಷ್ಟವನ್ನು ಸೂಚಿಸುತ್ತದೆ. ಆ ಶಿಲ್ಕನ್ನು ಹಳೆ ಪಾಲುದಾರರ ಬಂಡವಾಳ ಖಾತೆಗಳಿಗೆ ಅವರ ಹಳೆ ಅನುಪಾತದಲ್ಲಿ ವರ್ಗಾಯಿಸಬೇಕು.

ಆಸ್ತಿಗಳ ಮತ್ತು ಜವಾಬ್ದಾರಿಗಳನ್ನು ಪುನರ್‌ಮೌಲ್ಯ ಮಾಡುವುದಕ್ಕಾಗಿ ಈ ಕೆಳಗಿನ ರೋಜು ನಮೂದುಗಳನ್ನು ದಾಖಲೆ ಮಾಡಬೇಕು.

[i] ಆಸ್ತಿಯ ಮೌಲ್ಯದಲ್ಲಿ ಹೆಚ್ಚಳವಾದಾಗ (ಲಾಭ)

ಆಸ್ತಿ ಖಾತೆ ಖರ್ಚು

ಪುನರ್‌ಮೌಲ್ಯ ಖಾತೆಗೆ

[ii] ಆಸ್ತಿಯ ಮೌಲ್ಯದಲ್ಲಿ ಕಡಿಮೆಯಾದಾಗ (ನಷ್ಟ)

ಪುನರ್‌ಮೌಲ್ಯ ಖಾತೆ ಖರ್ಚು

ಆಸ್ತಿ ಖಾತೆಗೆ

[iii] ಜವಾಬ್ದಾರಿ ಮೌಲ್ಯದಲ್ಲಿ ಹೆಚ್ಚಳವಾದಾಗ (ನಷ್ಟ)

ಪುನರ್‌ಮೌಲ್ಯ ಖಾತೆ ಖರ್ಚು

ಜವಾಬ್ದಾರಿ ಖಾತೆಗೆ

[iv] ಜವಾಬ್ದಾರಿಯ ಮೌಲ್ಯದಲ್ಲಿ ಕಡಿಮೆಯಾದಾಗ (ಲಾಭ)

ಜವಾಬ್ದಾರಿಯ ಖಾತೆ ಖರ್ಚು

ಪುನರ್‌ಮೌಲ್ಯ ಖಾತೆಗೆ

[v] ದಾಖಲಾಗದ ಆಸ್ತಿಗಾಗಿ (ಲಾಭ)

ದಾಖಲಾಗದ ಆಸ್ತಿ ಖಾತೆ ಖರ್ಚು

ಪುನರ್‌ಮೌಲ್ಯ ಖಾತೆಗೆ

[vi] ದಾಖಲಾಗದ ಜವಾಬ್ದಾರಿಗಾಗಿ (ನಷ್ಟ)

ಪುನರ್‌ಮೌಲ್ಯ ಖಾತೆ ಖರ್ಚು

ದಾಖಲಾಗದ ಜವಾಬ್ದಾರಿ ಖಾತೆಗೆ

[vii] ಪುನರ್‌ಮೌಲ್ಯದ ಮೇಲಿನ ಲಾಭದ ವರ್ಗಾವಣೆ (ಜಮೆ ಶಿಲ್ಕು ಇದ್ದರೆ)

ಪುನರ್‌ಮೌಲ್ಯ ಖಾತೆ ಖರ್ಚು

ಹಳೆ ಪಾಲುದಾರರ ಬಂಡವಾಳ ಖಾತೆಗೆ (ವೈಯಕ್ತಿಕವಾಗಿ ಹಳೇ ಅನುಪಾತದಲ್ಲಿ)

[viii] ಪುನರ್‌ಮೌಲ್ಯದ ಮೇಲಿನ ನಷ್ಟದ ವರ್ಗಾವಣೆ (ಖರ್ಚಿನ ಶಿಲ್ಕು ಇದ್ದರೆ)

ಹಳೆ ಪಾಲುದಾರರ ಬಂಡವಾಳ ಖಾತೆ (ವೈಯಕ್ತಿಕವಾಗಿ ಹಳೇ ಅನುಪಾತದಲ್ಲಿ) ಖರ್ಚು

ಪುನರ್‌ಮೌಲ್ಯ ಖಾತೆಗೆ

**ಸೂಚನೆ:** (i), (ii), (iii), ಮತ್ತು (iv) ರೋಜು ನಮೂದುಗಳನ್ನು ಬರೆಯುವಾಗ ಆಸ್ತಿಗಳ ಮತ್ತು ಜವಾಬ್ದಾರಿಗಳ ಹೆಚ್ಚಾದ ಮತ್ತು ಕಡಿಮೆಯಾದ ಮೌಲ್ಯವನ್ನು ಮಾತ್ರ ತೆಗೆದುಕೊಳ್ಳಬೇಕು.

**ನಿದರ್ಶನ 24:**

A ಮತ್ತು B ರವರು 3:2 ರ ಅನುಪಾತದಲ್ಲಿ ಲಾಭ ಹಂಚಿಕೊಳ್ಳುವ ಪಾಲುದಾರರಾಗಿದ್ದು, ಅವರ ಅಢಾವೆ ಪತ್ರಿಕೆ ಕೆಳಗಿನಂತಿದೆ.

**A ಮತ್ತು B ರವರ ಏಪ್ರಿಲ್ 01, 2015 ರಂದಿನ ಅಢಾವೆ ಪತ್ರಿಕೆ**

| ಜವಾಬ್ದಾರಿಗಳು | | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|---|
| ಸಾಹುಕಾರರು | | 20,000 | ಕೈಯಲ್ಲಿ ನಗದು | 3,000 |
| ಬಂಡವಾಳ | | | ಸಾಲಗಾರರು | 12,000 |
| A | 30,000 | | ದಾಸ್ತಾನು | 15,000 |
| B | 20,000 | 50,000 | ಪೀಠೋಪಕರಣ | 10,000 |
| | | | ಸ್ಥಾವರ ಮತ್ತು ಯಂತ್ರೋಪಕರಣ | 30,000 |
| | | **70,000** | | **70,000** |

ಮೇಲಿನ ದಿನಾಂಕದಂದು C ಯನ್ನು ಈ ಕೆಳಗಿನ ಕರಾರುಗಳ ಮೇಲೆ ಪಾಲುದಾರಿಕೆ ಸಂಸ್ಥೆಗೆ ಪ್ರವೇಶ ನೀಡಲಾಯಿತು.

1. C ಯು 1/6 ಲಾಭದ ಪಾಲಿಗಾಗಿ ₹ 15,000 ಬಂಡವಾಳ ಮತ್ತು ₹ 5,000 ಗಳನ್ನು ಕೀರ್ತಿಮೌಲ್ಯಕ್ಕಾಗಿ ತರಬೇಕು.
2. ದಾಸ್ತಾನಿನ ಮೌಲ್ಯವನ್ನು ಶೇ. 10 ರಷ್ಟು ಕಡಿಮೆಗೊಳಿಸಬೇಕು. ಸ್ಥಾವರ ಮತ್ತು ಯಂತ್ರಗಳ ಮೌಲ್ಯವನ್ನು ಶೇ. 10 ರಷ್ಟು ಹೆಚ್ಚಿಸಬೇಕು.
3. ಪಿಠೋಪಕರಣಗಳನ್ನು ₹ 9,000 ಗಳಿಗೆ ಮೌಲ್ಯ ಕಟ್ಟಲಾಯಿತು.
4. ಸಾಲಗಾರರ ಮೇಲೆ ಶೇ. 5 ರಂತೆ ಸಂಶಯಾತ್ಮಕ ಸಾಲಗಳ ಕಾಯ್ದಿರಿಸುವಿಕೆಯನ್ನು ತೆಗೆಯಿರಿ. ಮತ್ತು ವಿದ್ಯುತ್ ಬಿಲ್ಲಿಗಾಗಿ ₹ 200 ಗಳನ್ನು ಒದಗಿಸಬೇಕು.
5. ಹೂಡಿಕೆಗಳ ಮೌಲ್ಯ (ಅಢಾವೆ ಪತ್ರಿಕೆಯಲ್ಲಿ ತಿಳಿಸಿರುವುದಿಲ್ಲ) ₹ 1,000 ಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕು.
6. ಸಾಹುಕಾರರಲ್ಲಿ ಸೇರಿಕೊಂಡ ₹ 100 ಅವನಿಗೆ ಕೊಡಬೇಕಾಗಿಲ್ಲ ಮತ್ತು ಅದನ್ನು ತೆಗೆದುಹಾಕಿರಿ.

ರೋಜು ನಮೂದು ಬರೆದು, ಪುನರ್‌ಮೌಲ್ಯ ಖಾತೆ ಮತ್ತು ಪಾಲುದಾರರ ಬಂಡವಾಳ ಖಾತೆಯನ್ನು ತಯಾರಿಸಿರಿ.

**ಪರಿಹಾರ:**

**A, B ಮತ್ತು C ರವರ ಪುಸ್ತಕದಲ್ಲಿ**
**ರೋಜು ಪುಸ್ತಕ**

| ದಿನಾಂಕ 2015 | ವಿವರಗಳು | ಖಾ.ಪಾ | ಖರ್ಚು ₹ | ಜಮೆ ₹ |
|---|---|---|---|---|
| ಎಪ್ರಿಲ್ 01 | ಬ್ಯಾಂಕ ಖಾತೆ ಖರ್ಚು | | 20,000 | – |
| | C ನ ಬಂಡವಾಳ ಖಾತೆಗೆ | | – | 15,000 |
| | ಕೀರ್ತಿಮೌಲ್ಯ ಖಾತೆಗೆ | | – | 5,000 |
| | (C ಯು ಬಂಡಹವಾಳ ಮತ್ತು ಕೀರ್ತಿಮೌಲ್ಯಕ್ಕಾಗಿ ನಗದು ತಂದದ್ದು.) | | | |
| 02 | ಕೀರ್ತಿಮೌಲ್ಯ ಖಾತೆ ಖರ್ಚು | | 5,000 | – |
| | A ನ ಬಂಡವಾಳ ಖಾತೆಗೆ | | – | 3,000 |
| | B ನ ಬಂಡವಾಳ ಖಾತೆಗೆ | | – | 2,000 |
| | (ಕೀರ್ತಿಮೌಲ್ಯವನ್ನು A ಮತ್ತು B ಇವರಲ್ಲಿ 3:2 ರ ತ್ಯಾಗದ ಅನುಪಾತದಲ್ಲಿ ಹಂಚಿದ್ದು) | | | |
| 03 | ಪುನರ್‌ಮೌಲ್ಯ ಖಾತೆ ಖರ್ಚು | | 3,100 | – |
| | ದಾಸ್ತಾನು ಖಾತೆಗೆ | | – | 1,500 |
| | ಪೀಠೋಪಕಣ ಖಾತೆಗೆ | | – | 1,000 |
| | ಸಂಶಯಾತ್ಮಕ ಸಾಲಗಳ ಕಾಯ್ದಿರಿಸುವಿಕೆ ಖಾತೆಗೆ | | – | 600 |
| | (ಆಸ್ತಿಗಳ ಮೌಲ್ಯವನ್ನು ಪುನರ್‌ಮೌಲ್ಯ ಮಾಡಿದ್ದು) | | | |
| 04 | ಸ್ಥಾವರ ಮತ್ತು ಯಂತ್ರೋಪಕರಣ ಖಾತೆ ಖರ್ಚು | | 3,000 | – |
| | ಹೂಡಿಕೆಗಳ ಖಾತೆ ಖರ್ಚು | | 1,000 | – |
| | ಪುನರ್‌ಮೌಲ್ಯ ಖಾತೆಗೆ | | – | 4,000 |
| | (ಪುನರ್‌ಮೌಲ್ಯ ಮಾಡಿದಾಗ ಆಸ್ತಿಗಳ ಮೌಲ್ಯದಲ್ಲಿ ಹೆಚ್ಚಳವಾಗಿದ್ದು) | | | |
| 05 | ಪುನರ್‌ಮೌಲ್ಯ ಖಾತೆ ಖರ್ಚು | | 200 | – |
| | ಕೊಡತಕ್ಕ ವಿದ್ಯುತ್‌ಬಿಲ್ಲು ಖಾತೆಗೆ | | – | 200 |
| | (ಕೊಡತಕ್ಕ ವಿದ್ಯುತ್ ಬಿಲ್ಲುಗಳಿಗಾಗಿ ಮೊತ್ತವನ್ನು ಒದಗಿಸಿದ್ದು) | | | |
| 06 | ಸಾಹುಕಾರರ ಖಾತೆ ಖರ್ಚು | | 100 | – |
| | ಪುನರ್‌ಮೌಲ್ಯ ಖಾತೆಗೆ | | – | 100 |
| | (ಸಾಹುಕಾರನಿಗೆ ಕೊಡಬೇಕಾದ ಮೊತ್ತವನ್ನು ಕೊಡಬೇಕಾಗಿಲ್ಲದಿರುವದರಿಂದ ತೆಗೆದುಹಾಕಿದ್ದು) | | | |
| 07 | ಪುನರ್‌ಮೌಲ್ಯ ಖಾತೆ ಖರ್ಚು | | 800 | – |
| | A ನ ಬಂಡವಾಳ ಖಾತೆಗೆ | | – | 480 |
| | B ನ ಬಂಡವಾಳ ಖಾತೆಗೆ | | – | 320 |
| | (ಪುನರ್‌ಮೌಲ್ಯ ಮಾಡಿದ ಆಸ್ತಿಗಳು ಮತ್ತು ಜವಾಬ್ದಾರಿಗಳ ಮೇಲಿನ ಲಾಭವನ್ನು A ಮತ್ತು B ಗೆ ಅವರ ಹಳೆ ಲಾಭ ಹಂಚಿಕೆ ಅನುಪಾತದಲ್ಲಿ ಬಂಡವಾಳ ಖಾತೆಗೆ ವರ್ಗಾಯಿಸಿದ್ದು.) | | | |

**ಖರ್ಚು** **ಪುನರ್‌ಮೌಲ್ಯ ಖಾತೆ** **ಜಮೆ**

| ವಿವರಗಳು | ಮೊತ್ತ ₹ | ವಿವರಗಳು | ಮೊತ್ತ ₹ |
|---|---|---|---|
| ದಾಸ್ತಾನು | 1,500 | ಸ್ಥಾವರ ಮತ್ತು ಯಂತ್ರೋಪಕರಣ | 3,000 |
| ಪೀಠೋಪಕರಣ | 1,000 | ಹೂಡಿಕೆಗಳು | 1,000 |
| ಸಂಶಯಾತ್ಮಕ ಸಾಲಗಳ ಕಾಯ್ದಿರಿಸುವಿಕೆ | 600 | ಸಾಹುಕಾರರು | 100 |
| ಕೊಡತಕ್ಕ ವಿದ್ಯುತ್ ಬಿಲ್ಲು | 200 | | |
| ಪುನರ್‌ಮೌಲ್ಯದ ಮೇಲಿನ ಲಾಭದ ವರ್ಗಾವಣೆ; | | | |
| A ನ ಬಂಡವಾಳ ಖಾತೆಗೆ 480 | | | |
| B ನ ಬಂಡವಾಳ ಖಾತೆಗೆ 320 | 800 | | |
| | **4,100** | | **4,100** |

**ಖರ್ಚು** **ಪಾಲುದಾರರ ಬಂಡವಾಳ ಖಾತೆಗಳು** **ಜಮೆ**

| ದಿನಾಂಕ 2015 | ವಿವರ | A ₹ | B ₹ | C ₹ | ದಿನಾಂಕ 2015 | ವಿವರ | A ₹ | B ₹ | C ₹ |
|---|---|---|---|---|---|---|---|---|---|
| ಎಪ್ರಿಲ್ 1 | ಮುಂದುವರಿದ ಶಿಲ್ಕು | 33,480 | 22,320 | 15,000 | ಎಪ್ರಿಲ್ 1 | ಹಿಂದಿನಿಂದ ಬಂದ ಶಿಲ್ಕು | 30,000 | 20,000 | – |
| | | | | | | ಬ್ಯಾಂಕ ಖಾತೆ | – | – | 15,000 |
| | | | | | | ಕೀರ್ತಿಮೌಲ್ಯ ಖಾತೆ | 3,000 | 2,000 | – |
| | | | | | | ಪುನರ್‌ಮೌಲ್ಯ ಖಾತೆ (ಲಾಭ) | 480 | 320 | – |
| | | **33,480** | **22,320** | **15,000** | | | **33,480** | **22,320** | **15,000** |

**ನಿದರ್ಶನ 25:**

A ಮತ್ತು B ಇವರು ಪಾಲುದಾರಿಕೆ ವ್ಯವಹಾರವನ್ನು ನಡೆಸುತ್ತಿದ್ದು, ಮಾರ್ಚ 31, 2015 ರಂದಿನ ಅಢಾವೆ ಪತ್ರಿಕೆಯನ್ನು ಕೆಳಗೆ ನೀಡಲಾಗಿದೆ. A ಮತ್ತು B ಇವರು 2:1 ರ ಅನುಪಾತದಲ್ಲಿ ಲಾಭವನ್ನು ಹಂಚಿಕೊಳ್ಳುತ್ತಿದ್ದಾರೆ.

**A ಮತ್ತು B ರವರ ಮಾರ್ಚ 31, 2015 ರಂದಿನ ಅಢಾವೆ ಪತ್ರಿಕೆ**

| ಜವಾಬ್ದಾರಿಗಳು | | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|---|
| ಕೊಡತಕ್ಕ ವಿನಿಮಯ ಪತ್ರಗಳು | | 10,000 | ಕೈಯಲ್ಲಿ ನಗದು | 10,000 |
| ಸಾಹುಕಾರರು | | 58,000 | ಬ್ಯಾಂಕಿನಲ್ಲಿ ನಗದು | 40,000 |
| ಕೊಡಬೇಕಾದ ಖರ್ಚುಗಳು | | 2,000 | ಸಾಲಗಾರರು | 60,000 |
| ಬಂಡವಾಳ | | | ದಾಸ್ತಾನು | 40,000 |
| A | 1,80,000 | | ಸ್ಥಾವರ ಮತ್ತು ಯಂತ್ರೋಪಕರಣ | 1,00,000 |
| B | 1,50,000 | 3,30,000 | ಕಟ್ಟಡ | 1,50,000 |
| | | **4,00,000** | | **4,00,000** |

ಈ ಕೆಳಗಿನ ಕರಾರುಗಳ ಮೇಲೆ ಅಢಾವೆ ಪತ್ರಿಕೆಯ ದಿನಾಂಕದಂದು C ಯನ್ನು ಪಾಲುದಾರನನ್ನಾಗಿ ಸೇರಿಸಿಕೊಂಡರು.

1. 1/4 ಪಾಲಿನ ಲಾಭಕ್ಕಾಗಿ C ಯು ₹ 1,00,000 ಬಂಡವಾಳ ಮತ್ತು ₹ 60,000 ಕೀರ್ತಿಮೌಲ್ಯಕ್ಕಾಗಿ ತರಬೇಕು.
2. ಸ್ಥಾವರ ಮತ್ತು ಯಂತ್ರೋಪಕರಣ ಮೌಲ್ಯವನ್ನು ₹ 1,20,000 ಗಳಿಗೆ ಹೆಚ್ಚಿಸಬೇಕು ಮತ್ತು ಕಟ್ಟಡ ಮೌಲ್ಯವನ್ನು ಶೇ. 10 ರಷ್ಟು ಹೆಚ್ಚಿಸಿರಿ.
3. ₹ 4,000 ದಷ್ಟು ದಾಸ್ತಾನಿನ ಮೌಲ್ಯವನ್ನು ಹೆಚ್ಚಿಗೆ ಮೌಲ್ಯೀಕರಿಸಿದ್ದು ಕಂಡುಬಂದಿದೆ.
4. ಸಾಲಗಾರರ ಮೇಲೆ ಶೇ. 5 ರಂತೆ ಸಂಶಯಾತ್ಮಕ ಸಾಲಗಳ ಕಾಯ್ದಿರಿಸುವಿಕೆಯನ್ನು ಒದಗಿಸಬೇಕು.
5. ದಾಖಲಾಗದ ಸಾಹುಕಾರರ ಮೌಲ್ಯ ₹ 1,000 ಇದೆ.

ಪುನರ್‌ಮೌಲ್ಯ ಖಾತೆ, ಪಾಲುದಾರರ ಬಂಡವಾಳ ಖಾತೆಗಳು ಮತ್ತು ಹೊಸ ಪಾಲುದಾರನ ಪ್ರವೇಶದ ನಂತರ ರಚನೆಗೊಂಡ ಸಂಸ್ಥೆಯ ಅಢಾವೆ ಪತ್ರಿಕೆಯನ್ನು ತಯಾರಿಸಿರಿ.

**ಪರಿಹಾರ:**

**A ಮತ್ತು B ರವರ ಪುಸ್ತಕದಲ್ಲಿ**

**ಖರ್ಚು ಪುನರ್‌ಮೌಲ್ಯ ಖಾತೆ. ಜಮೆ**

| ವಿವರಗಳು | | ಮೊತ್ತ ₹ | ವಿವರಗಳು | ಮೊತ್ತ ₹ |
|---|---|---|---|---|
| ಕೈಯಲ್ಲಿರುವ ದಾಸ್ತಾನು | | 4,000 | ಸ್ಥಾವರ ಮತ್ತು ಯಂತ್ರೋಪಕರಣ | 20,000 |
| ಸಂಶಯಾತ್ಮಕ ಸಾಲಗಳ ಕಾಯ್ದಿರಿಸುವಿಕೆ | | 3,000 | ಕಟ್ಟಡಗಳು | 15,000 |
| ಸಾಹುಕಾರರು | | 1,000 | | |
| ಪುನರ್‌ಮೌಲ್ಯದ ಮೇಲಿನ ಲಾಭವನ್ನು ಬಂಡವಾಳ ಖಾತೆಗೆ ವರ್ಗಾಯಿಸಿದ್ದು : | | | | |
| A | 18,000 | | | |
| B | 9,000 | 27,000 | | |
| | | **35,000** | | **35,000** |

ಖರ್ಚು **ಪಾಲುದಾರರ ಬಂಡವಾಳ ಖಾತೆಗಳು** ಜಮೆ

| ದಿನಾಂಕ 2015 | ವಿವರ | A ₹ | B ₹ | C ₹ | ದಿನಾಂಕ 2015 | ವಿವರ | A ₹ | B ₹ | C ₹ |
|---|---|---|---|---|---|---|---|---|---|
| ಮಾರ್ಚ 31 | ಮುಂದುವರಿದ ಶಿಲ್ಕು | 2,38,000 | 1,79,000 | 1,00,000 | ಮಾರ್ಚ್ 31 | ಹಿಂದಿನಿಂದ ಬಂದ ಶಿಲ್ಕು | 1,80,000 | 1,50,000 | – |
| | | | | | | ಬ್ಯಾಂಕ ಖಾತೆ | – | – | 1,00,000 |
| | | | | | | ಕೀರ್ತಿ ಮೌಲ್ಯ | 40,000 | 20,000 | – |
| | | | | | | ಪುನರ್ ಮೌಲ್ಯ ಖಾತೆ | 18,000 | 9,000 | – |
| | | **2,38,000** | **1,79,000** | **1,00,000** | | | **2,38,000** | **1,79,000** | **1,00,000** |

**A, B ಮತ್ತು C ರವರ ಮಾರ್ಚ 31, 2015 ರಂದಿನ ಅಢಾವೆ ಪತ್ರಿಕೆ**

| ಜವಾಬ್ದಾರಿಗಳು | | ಮೊತ್ತ ₹ | ಆಸ್ತಿಗಳು | | ಮೊತ್ತ ₹ |
|---|---|---|---|---|---|
| ಕೊಡತಕ್ಕ ವಿನಿಮಯ ಪತ್ರಗಳು | | 10,000 | ಕೈಯಲ್ಲಿ ನಗದು | | 10,000 |
| ಸಾಹುಕಾರರು | | 59,000 | ಬ್ಯಾಂಕಿನಲ್ಲಿ ನಗದು | | 2,00,000 |
| ಕೊಡಬೇಕಾದ ಖರ್ಚುಗಳು | | 2,000 | ಸಾಲಗಾರರು | 60,000 | |
| ಬಂಡವಾಳ | | | ಕಳೆ: ಸಂಶಯಾತ್ಮಕ ಸಾಲಗಳ ಕಾಯ್ದಿರುಸುವಿಕೆ | 3,000 | 57,000 |
| A | 2,38,000 | | ದಾಸ್ತಾನು | | 36,000 |
| B | 1,79,000 | | ಸ್ಥಾವರ ಮತ್ತು ಯಂತ್ರೋಪಕರಣ | | 1,20,000 |
| C | 1,00,000 | 5,17,000 | ಕಟ್ಟಡಗಳು | | 1,65,000 |
| | | **5,88,000** | | | **5,88,000** |

**ನೀವೇ ಮಾಡಿ (Do it Yourself)**

1. ಅಸ್ಲಾಮ, ಚಾಕಾಬ ಮತ್ತು ಹರಿ ಇವರು ಅನುಕ್ರಮವಾಘೀ ₹ 1,500, ₹ 1,750 ಮತ್ತು ₹ 2,000 ಬಂಡವಾಳದೊಂದಿಗೆ ಸಮನಾಗಿ ಲಾಭ ಹಂಚಿಕೊಳ್ಳುವ ಪಾಲುದಾರರಾಗಿರುತ್ತಾರೆ. ಸತ್ನಮ್ ಎಂಬವನನ್ನು ಸಮನಾದ ಪಾಲುದಾರನಾಗಿ ಸೇರಿಸಿಕೊಳ್ಳಲು ಅವರು ಒಪ್ಪಿಕೊಂಡರು. 1/4 ಪಾಲಿನ ಲಾಭಕ್ಕಾಗಿ ₹ 1500 ಕೀರ್ತಿಮೌಲ್ಯ ಮತ್ತು ₹ 1,800 ಅವನ ಬಂಡವಾಳಕ್ಕಾಗಿ ನಗದು ಪಾವತಿ ಮಾಡಬೇಕು. ಎರಡೂ ಮೊತ್ತಗಳು ಸಂಸ್ಥೆಯಲ್ಲಿಯೇ ಉಳಿಯಬೇಕು. ಹಳೆಯ ಸಂಸ್ಥೆಯ ಜವಾಬ್ದಾರಿಗಳು ₹ 3,000 ಮತ್ತು ಆಸ್ತಿಗಳು ನಗದು ಹೊರತು ಪಡಿಸಿ, ವಾಹನಗಳು ₹ 1,200, ಪಿಠೋಪಕರಣ ₹ 40, ಸ್ಥಾವರ ₹ 2,650, ಸಾಲಗಾರರು ₹ 3,780 ಒಳಗೊಂಡಿರುತ್ತವೆ. ವಾಹನಗಳನ್ನು ಮತ್ತು ಪೀಠೋಪಕರಣಗಳನ್ನು ಅನುಕ್ರಮವಾಗಿ ₹ 950 ಮತ್ತು ₹ 380 ಪುನರ್‌ಮೌಲ್ಯ ಕಟ್ಟಲಾಯಿತು. ಮತ್ತು ಸವಕಳಿಯನ್ನು ತೆಗೆದು ಹಾಕಬೇಕು. ಕೈಯಲ್ಲಿನ ನಗದನ್ನು ಕಂಡುಹಿಡಿಯಿರಿ ಮತ್ತು ಸತ್ನಮ್‌ನ ಪ್ರವೇಶದ ನಂತರ ಸಂಸ್ಥೆಯ ಅಢಾವೆ ಪತ್ರಿಕೆಯನ್ನು ತಯಾರಿಸಿರಿ.
2. ಬೆನು ಮತ್ತು ಸುನಿಲ್ ಎಪ್ರಿಲ್ 01, 2003 ರಂದು 3:2 ರ ಅನುಪಾತದಲ್ಲಿ ಲಾಭ ಹಂಚಿಕೊಳ್ಳುವ ಪಾಲುಗಾರರಾಗಿರುತ್ತಾರೆ. ಈನಾ ಎಂಬವವನನ್ನು 1/4 ಪಾಲಿನ ಲಾಭಕ್ಕಾಗಿ ಹೊಸ ಪಾಲುದಾರನನ್ನಾಗಿ ಸೇರಿಸಿಕೊಂಡರು. ಅದಕ್ಕಾಗಿ ಅವನು ₹ 2,00,000 ಬಂಡವಾಳ ಮತ್ತು ₹ 1,00,000 ಅಧಿಕ ಮೌಲ್ಯ(ಕೀರ್ತಿಮೌಲ್ಯ)ವನ್ನು ನಗದಾಗಿ ತರಬೇಕು. ಪ್ರವೇಶದ ಸಮಯದಲ್ಲಿ, ಸಾಮಾನ್ಯ ಮೀಸಲು ₹ 1,20,000 ಮತ್ತು ಲಾಭ–ನಷ್ಟದ ಖಾತೆ ಮೊತ್ತ ₹ 60,000 ಗಳು ಅಢಾವೆ ಪತ್ತಿಕೆಯ ಆಸ್ತಿಯ ಕಡೆ ಕಾಣಿಸಿಕೊಂಡಿದೆ. ಮೇಲಿನ ವಹಿವಾಟುಗಳಿಗೆ ಅವಶ್ಯಕವಾದ ರೋಜು ನಮೂದುಗಳನ್ನು ಮಾಡಿರಿ.
3. ಆಶೊ ಮತ್ತು ರಾಹುಲ್ 5:3 ರ ಅನುಪಾತದಲ್ಲಿ ಲಾಭ ಹಂಚಿಕೊಳ್ಳುವ ಪಾಲುದಾರರಾಗಿರುತ್ತಾರೆ. ಗೌರವನು 1/5 ಪಾಲಿಗಾಗಿ ಪ್ರವೇಶಿಸಲು ಒಪ್ಪಿಕೊಂಡಿದ್ದು, ಅವನಿಗೆ ₹4,000 ಅಧಿಕಮೌಲ್ಯ (ಕೀರ್ತಿಮೌಲ್ಯ) ಮತ್ತು ತನ್ನ ಪಾಲಿನ ಬಂಡವಾಳ ತರಲು ಕೇಳಿಕೊಳ್ಳಲಾಯಿತು. ಪುನರ್‌ಮೌಲ್ಯಕ್ಕೆ ಸಂಬಂಧಿಸಿದ ಎಲ್ಲ ಹೊಂದಾಣಿಕೆಗಳನ್ನು ಮಾಡಿದ ನಂತರ ಆಶೊ ಮತ್ತು ರಾಹುಲ್‌ರ ಬಂಡವಾಳ ಅನುಕ್ರಮವಾಗಿ ₹ 45,000 ಮತ್ತು ₹ 35,000 ಗಳಾಗಿರುತ್ತದೆ.

   ಹೊಸ ಲಾಭ ಹಂಚಿಕೆ ಅನುಪಾತವನ್ನು ಲೆಕ್ಕಹಾಕಿ, ಗೌರವನು ತರಬೇಕಾದ ಬಂಡವಾಳ ಕಂಡುಹಿಡಿಯಿರಿ ಮತ್ತು ಅವಶ್ಯಕವಾದ ರೋಜು ನಮೂದುಗಳನ್ನು ಬರೆಯಿರಿ.

### 3.8: ಬಂಡವಾಳದ ಹೊಂದಾಣಿಕೆ : Adjustment of Capital

ಕೆಲವು ಸಲ, ಹೊಸ ಪಾಲುದಾರನ ಪ್ರವೇಶದ ಸಮಯದಲ್ಲಿ ಪಾಲುದಾರರು ತಮ್ಮ ಬಂಡವಾಳಗಳನ್ನು ಅವರ ಲಾಭದ ಅನುಪಾತಕ್ಕನುಗುಣವಾಗಿ ಹೊಂದಾಣಿಕೆ ಮಾಡಿಕೊಳ್ಳಲು ಒಪ್ಪಿಕೊಂಡಿರುತ್ತಾರೆ. ಈ ಸಂದರ್ಭದಲ್ಲಿ, ಹೊಸ ಪಾಲುದಾರನ ಬಂಡವಾಳ ಕೊಟ್ಟಿದ್ದರೆ, ಅದನ್ನು ಆಧಾರವಾಗಿ ಇಟ್ಟುಕೊಂಡು ಹಳೆ ಪಾಲುದಾರರ ಹೊಸ ಬಂಡವಾಳವನ್ನು ಲೆಕ್ಕ ಹಾಕಬೇಕಾಗುತ್ತದೆ. ಹೀಗೆ ಕಂಡುಹಿಡಿದ ಬಂಡವಾಳವನ್ನು ಅವರ ಹಳೆ ಬಂಡವಾಳಗಳಿಗೆ ಹೋಲಿಕೆ ಮಾಡಬೇಕು. ಕೀರ್ತಿಮೌಲ್ಯ, ಮೀಸಲು ಮತ್ತು ಆಸ್ತಿ ಮತ್ತು ಜವಾಬ್ದಾರಿಗಳ ಪುನರ್‌ಮೌಲ್ಯದ ಮೇಲಿನ ಎಲ್ಲಾ ಹೊಂದಾಣಿಕೆಗಳನ್ನು ಮಾಡಿದ ನಂತರದ ಬಂಡವಾಳವನ್ನು ಪರಸ್ಪರ ಹೋಲಿಸಬೇಕು ಮತ್ತು ಯಾವ ಪಾಲುದಾರರ ಬಂಡವಾಳ ಕೊರತೆ ಬೀಳುತ್ತದೆಯೋ, ಅವರು ಅವಶ್ಯಕವಾದ ಮೊತ್ತವನ್ನು ತರಬೇಕು ಮತ್ತು ಯಾವ ಪಾಲುದಾರರ ಬಂಡವಾಳವು ಹೆಚ್ಚಿರುತ್ತದೆಯೋ ಅವರು ಹೆಚ್ಚಿನ ಮೊತ್ತವನ್ನು ಹಿಂತೆಗೆದುಕೊಳ್ಳುತ್ತಾರೆ.

(ನಿದರ್ಶನ 26 ನೋಡಿ).

**ನಿದರ್ಶನ 26:**

A ಮತ್ತು B ಇವರು 2:1 ರ ಅನುಪಾತದಲ್ಲಿ ಲಾಭ ಹಂಚಿಕೊಳ್ಳುವ ಪಾಲುದಾರರಾಗಿರುತ್ತಾರೆ. C ಯನ್ನು 1/4 ಪಾಲಿನ ಲಾಭಕ್ಕಾಗಿ ಸಂಸ್ಥೆಗೆ ಪಾಲುದಾರನನ್ನಾಗಿ ಸೇರಿಸಿಕೊಂಡರು. C ಯು ₹ 20,000 ಗಳನ್ನು ತನ್ನ ಪಾಲಿನ ಬಂಡವಾಳಕ್ಕಾಗಿ ತರುತ್ತಾನೆ. ಕೀರ್ತಿಮೌಲ್ಯ, ಆಸ್ತಿ / ಜವಾಬ್ದಾರಿಗಳ ಪುನರ್‌ಮೌಲ್ಯಕ್ಕೆ ಸಂಬಂಧಿಸಿದ ಎಲ್ಲಾ ಹೊಂದಾಣಿಕೆಗಳನ್ನು ಮಾಡಿದನಂತರ, ಹಳೆ ಪಾಲುದಾರರಾದ A ಮತ್ತು B ಇವರ ಬಂಡವಾಳವು ಅನುಕ್ರಮವಾಗಿ ₹ 45,000 ಮತ್ತು ₹ 15,000 ಇರುತ್ತವೆ. ಪಾಲುದಾರರು ತಮ್ಮ ಬಂಡವಾಳಗಳು ಹೊಸ ಲಾಭ ಹಂಚಿಕೆ ಪ್ರಮಾಣದಲ್ಲಿ ಇರಬೇಕೆಂದು ಒಪ್ಪಿಕೊಂಡಿರುವರು.

A ಮತ್ತು B ಇವರ ಹೊಸ ಬಂಡವಾಳವನ್ನು ನಿರ್ಧರಿಸಿದ ನಂತರ, ಯಾವ ಪಾಲುದಾರರ ಬಂಡವಾಳ ಕೊರತೆ ಬೀಳುತ್ತದೆಯೋ, ಅವರು ಕೊರತೆ ಮೊತ್ತವನ್ನು ತರುತ್ತಾರೆ ಮತ್ತು ಯಾವ ಪಾಲುದಾರರ ಮೊತ್ತ ಹೆಚ್ಚಾಗುವುದೋ ಅವರು ಹೆಚ್ಚಿನ ಮೊತ್ತವನ್ನು ಹಿಂತೆಗೆದುಕೊಳ್ಳುತ್ತಾರೆ ಎಂದು ಕಲ್ಪಿಸಿಕೊಂಡು ರೋಜು ನಮೂದುಗಳನ್ನು ದಾಖಲಿಸಿರಿ.

**ಪರಿಹಾರ:**

1. ಹೊಸ ಲಾಭ ಹಂಚಿಕೆ ಅನುಪಾತ ಲೆಕ್ಕಹಾಕುವದು :

   ಹೊಸ ಪಾಲುದಾರನಾದ C ಯು ತನ್ನ ಪಾಲಿನ ಲಾಭವನ್ನು A ಮತ್ತು B ಇವರಿಂದ ಅವರ ಹಳೆಯ ಲಾಭ ಹಂಚಿಕೆ ಅನುಪಾತವಾದ 2:1 ರಲ್ಲಿ ಪಡೆದುಕೊಳ್ಳುತ್ತಾನೆ.

   ಒಟ್ಟು ಪಾಲು $= 1$

   C ನ ಪಾಲು $= \frac{1}{4}$

   ಉಳಿದ ಪಾಲು $= 1-\frac{1}{4}=\frac{3}{4}$

   A ನ ಹೊಸ ಪಾಲು $= \frac{3}{4}\times\frac{2}{3}=\frac{6}{12}$

   B ನ ಹೊಸ ಪಾಲು $= \frac{3}{4}\times\frac{1}{3}=\frac{3}{12}$

   C ನ ಹೊಸ ಪಾಲು $= \frac{1}{4}\times\frac{3}{3}=\frac{3}{12}$

   ಆದ್ದರಿಂದ A, B ಮತ್ತು C ಇವರ ನಡುವಿನ ಹೊಸಲಾಭ ಹಂಚಿಕೆಯ ಅನುಪಾತವು 6:3:3 ಅಥವಾ 2:1:1.

2. A ಮತ್ತು B ರವರ ಅವಶ್ಯಕ ಬಂಡವಾಳ:

   C ನ ಬಂಡವಾಳ (1/4 ಪಾಲಿನ ಲಾಭಕ್ಕೆ) ₹ 20,000 ಇರುತ್ತದೆ. B ನ ಹೊಸ ಲಾಭ ಹಂಚಿಕೆಯ ಪಾಲು 1/4. ಆದ್ದರಿಂದ ಅವನ ಬಂಡವಾಳವೂ ಸಹ ₹ 20,000 ಆಗುತ್ತದೆ. A ನ ಹೊಸ ಲಾಭದ ಪಾಲು 2/4. ಇದು C ನ ಪಾಲಿನ ಎರಡು ಪಟ್ಟು ಇರುತ್ತದೆ. ಆದ್ದರಿಂದ ಅವನ ಬಂಡವಾಳವು ₹ 40,000.

   ಇನ್ನೊಂದು ರೀತಿಯಲ್ಲಿ C ನ ಬಂಡವಾಳದ ಆಧಾರದ ಮೇಲೆ ಸಂಸ್ಥೆಯ ಒಟ್ಟು ಬಂಡವಾಳವು ₹ 80,000 (4/1 × ₹ 20,000) ಆಗುತ್ತದೆ.

   ಆದ್ದರಿಂದ ಅವರ ಲಾಭದ ಪಾಲಿನ ಆಧಾರದ ಮೇಲೆ A ಮತ್ತು B ಗಳ ಬಂಡವಾಳ ಈ ರೀತಿಯಾಗಿದೆ.

   A ನ ಬಂಡವಾಳ = 2/4 × 80,000 = ₹ 40,000

   B ನ ಬಂಡವಾಳ = 1/4 × 80,000 = ₹ 20,000

ಎಲ್ಲಾ ಹೊಂದಾಣಿಕೆಗಳನ್ನು ಮಾಡಿದ ನಂತರ A ಮತ್ತು B ಗಳ ಬಂಡವಾಳ ಅನುಕ್ರವಾಗಿ ₹ 45,000 ಮತ್ತು ₹ 15,000 ಇರುತ್ತವೆ. ಆದ್ದರಿಂದ A ಯು ₹ 5,000 (₹ 45,000 – ₹ 40,000) ಸಂಸ್ಥೆಯಿಂದ ಹಿಂತೆಗೆದುಕೊಳ್ಳುತ್ತಾನೆ. ಆದರೆ B ಯು ₹ 5,000 (₹ 20,000– ₹ 15,000) ಹೆಚ್ಚುವರಿಯಾಗಿ ತಂದು ಕೊಡುತ್ತಾನೆ. ರೋಜು ನಮೂದುಗಳು ಈ ರೀತಿಯಾಗಿವೆ:

| ದಿನಾಂಕ | ವಿವರಗಳು | ಖಾ.ಪಾ | ಖರ್ಚು ₹ | ಜಮೆ ₹ |
|---|---|---|---|---|
| | A ನ ಬಂಡವಾಳ ಖಾತೆ ಖರ್ಚು | | 5,000 | – |
| | ನಗದು ಖಾತೆಗೆ | | – | 5,000 |
| | (ಹೆಚ್ಚಿನ ಬಂಡವಾಳವನ್ನು A ಯು ಹಿಂತೆಗೆದುಕೊಂಡಿದ್ದು) | | | |
| | ನಗದು ಖಾತೆ ಖರ್ಚು | | 5,000 | – |
| | B ನ ಬಂಡವಾಳ ಖಾತೆಗೆ | | – | 5,000 |
| | (ಕೊರತೆಯನ್ನು ಸರಿದೂಗಿಸಲು B ಯು ಹೆಚ್ಚುವರಿ ಮೊತ್ತವನ್ನು ತಂದದ್ದು) | | | |

ಕೆಲವು ಸಲ, ಸಂಸ್ಥೆಯ ಒಟ್ಟು ಬಂಡವಾಳದ ಬಗ್ಗೆ ಸ್ಪಷ್ಟವಾಗಿ ತಿಳಿಸಲಾಗಿರುತ್ತದೆ ಮತ್ತು ಪ್ರತಿಯೊಬ್ಬ ಪಾಲುದಾರನ ಬಂಡವಾಳ ಅವನ ಲಾಭದ ಪಾಲಿಗನುಗುಣವಾಗಿ ಇರಬೇಕು ಎಂದು ಒಪ್ಪಿಕೊಂಡಿರುತ್ತಾರೆ. ಈ ಸಂದರ್ಭದಲ್ಲಿ ಪ್ರತಿಯೊಬ್ಬ ಪಾಲುದಾರನ ಬಂಡವಾಳವನ್ನು (ಹೊಸ ಪಾಲುದಾರನು ತರುವ ಬಂಡವಾಳವನ್ನು ಒಳಗೊಂಡಿದೆ)ಅವನ ಲಾಭದ ಪಾಲಿನ ಆಧಾರದ ಮೇಲೆ ಲೆಕ್ಕ ಹಾಕಬೇಕು. ಹೆಚ್ಚಿಗೆ ಬಂಡವಾಳ ಇರುವವರು ಅದನ್ನು ಹಿಂಪಡೆಯುತ್ತಾರೆ ಮತ್ತು ಕೊರತೆ ಇರುವವರು ಹೆಚ್ಚುವರಿ ಬಂಡವಾಳವನ್ನು ತರುತ್ತಾರೆ. ಅದರಂತೆ ಪ್ರತಿಯೊಬ್ಬ ಪಾಲುದಾರನ ಅಂತಿಮ ಬಂಡವಾಳವು ಅಗತ್ಯ ಪ್ರಮಾಣದಲ್ಲಿರುವಂತೆ ನೋಡಿಕೊಳ್ಳುತ್ತಾರೆ.

ಹಳೆಯ ಪಾಲುದಾರರು ಪರಸ್ಪರ ಒಪ್ಪಿದ್ದಲ್ಲಿ, ಅವರು ಹಿಂಪಡೆಯಬೇಕಾದ ಹೆಚ್ಚುವರಿ ಬಂಡವಾಳ ಅಥವಾ ಒದಗಿಸಬೇಕಾದ ಕೊರತೆಯನ್ನು ಅವರ ಚಾಲ್ತಿ ಖಾತೆಗಳಿಗೆ ವರ್ಗಾಯಿಸಬಹುದು. (ನಿದರ್ಶನ 27ನ್ನು ನೋಡಿರಿ)

**ನಿದರ್ಶನ 27:**

A, B ಮತ್ತು C ಇವರು ಒಂದು ಸಂಸ್ಥೆಯಲ್ಲಿ 3:2:1ರ ಅನುಪಾತದಲ್ಲಿ ಲಾಭ ಹಂಚಿಕೊಳ್ಳುವ ಪಾಲುದಾರರಾಗಿರುತ್ತಾರೆ. ಅವರು D ಯನ್ನು 1/4 ಪಾಲಿಗಾಗಿ ಸಂಸ್ಥೆಗೆ ಹೊಸ ಪಾಲುದಾರನನ್ನಾಗಿ ಸೇರಿಸಿಕೊಂಡರು. ಅವನು A ನಿಂದ 1/8 ಮತ್ತು B ನಿಂದ 1/8 ಪಾಲನ್ನು ಪಡೆದುಕೊಳ್ಳುವನು. ಸಂಸ್ಥೆಯ ಒಟ್ಟು ಬಂಡವಾಳವು ₹1,20,000 ಇರಬೇಕೆಂದು ಒಪ್ಪಿಕೊಂಡಿರುವರು. D ಯು ತನ್ನ ಪಾಲಿನ 1/4ಕ್ಕೆ ಸಮನಾಗಿ ಬಂಡವಾಳವನ್ನು ತರುತ್ತಾನೆ. ಉಳಿದ ಪಾಲುದಾರರು ಅವರ ಲಾಭದ ಪಾಲಿನ ಪ್ರಮಾಣದಲ್ಲಿ ಬಂಡವಾಳದ ಹೊಂದಾಣಿಕೆ ಮಾಡಿಕೊಳ್ಳುವರು. ಎಲ್ಲಾ ಹೊಂದಾಣಿಕೆಗಳನ್ನು ಮಾಡಿದ ನಂತರ A, B ಮತ್ತು C ಇವರ ಬಂಡವಾಳಗಳು ಅನುಕ್ರಮವಾಗಿ ₹ 40,000, ₹ 35,000 ಮತ್ತು ₹ 30,000 ಇರುತ್ತವೆ. A, B ಮತ್ತು C ಇವರ ಹೊಸ ಬಂಡವಾಳಗಳನ್ನು ಲೆಕ್ಕಹಾಕಿ ಮತ್ತು ಅವಶ್ಯಕವಾದ ರೋಜು ನಮೂದು ಬರೆಯಿರಿ.

**ಪರಿಹಾರ:**

1. ಹೊಸ ಲಾಭ ಹಂಚಿಕೆ ಪ್ರಮಾಣ ಲೆಕ್ಕಹಾಕುವುದು:

$$A = \frac{1}{2} - \frac{1}{8} = \frac{3}{8}$$

$$B = \frac{1}{3} - \frac{1}{8} = \frac{5}{24}$$

C ಯು 1/6 ಪಾಲಿನ ಲಾಭವನ್ನು ಪಡೆದುಕೊಂಡು ಮುಂದುವರೆಯುತ್ತಾನೆ. A, B, C ಮತ್ತು D ಇವರ ನಡುವಿನ ಹೊಸ ಲಾಭ ಹಂಚಿಕೆ ಪ್ರಮಾಣ ಈ ಪ್ರಕಾರವಾಗಿದೆ.

$$\frac{3}{8} : \frac{5}{24} : \frac{1}{6} : \frac{1}{4}$$ ಅಥವಾ $$\frac{9}{24} : \frac{5}{24} : \frac{4}{24} : \frac{6}{24}$$ ಅಥವಾ 9:5:4:6

2. ಪಾಲುದಾರರು ತರಬೇಕಾದ ಬಂಡವಾಳ:

A ನ ಬಂಡವಾಳ $= ₹\,1{,}20{,}000 \times \frac{9}{24} = ₹\,45{,}000$

B ನ ಬಂಡವಾಳ $= ₹\,1{,}20{,}000 \times \frac{5}{24} = ₹\,25{,}000$

C ನ ಬಂಡವಾಳ $= ₹\,1{,}20{,}000 \times \frac{4}{24} = ₹\,20{,}000$

D ನ ಬಂಡವಾಳ $= ₹\,1{,}20{,}000 \times \frac{6}{24} = ₹\,30{,}000$

ಆದ್ದರಿಂದ A ₹ 5,000 (₹ 45,000 – ₹ 40,000)ಗಳನ್ನು ತರುತ್ತಾನೆ. B ₹ 10,000 (₹ 35,000 – ₹ 25,000) ಗಳನ್ನು ಹಿಂತೆಗೆದುಕೊಳ್ಳುತ್ತಾನೆ. C ಯು ₹ 10,000 (₹ 30,000 – ₹ 20,000) ಗಳನ್ನು ಹಿಂತೆಗೆದುಕೊಳ್ಳುವನು. D ₹ 30,000 ಗಳನ್ನು ತರುತ್ತಾನೆ. ಪರ್ಯಾಯವಾಗಿ ಚಾಲ್ತಿ ಖಾತೆಯನ್ನು ತೆರೆಯಬಹುದು ಮತ್ತು A, B ಮತ್ತು C ಇವರು ಸಂಸ್ಥೆಗೆ ತರುವ ಮತ್ತು ಹಿಂತೆಗೆದುಕೊಳ್ಳುವ ಮೊತ್ತವನ್ನು ಪಾಲುದಾರರು ಪರಸ್ಪರ ಒಪ್ಪಿಕೊಂಡಲ್ಲಿ ಅವರವರ ಚಾಲ್ತಿ ಖಾತೆಗಳಿಗೆ ವರ್ಗಾಯಿಸಬಹುದಾಗಿದೆ. ಇವುಗಳಿಗೆ ಸಂಬಂಧಿಸಿದ ರೋಜು ನಮೂದುಗಳನ್ನು ಈ ಕೆಳಗಿನಂತೆ ಬರೆಯಬೇಕು.

**A, B, C ಮತ್ತು D ಇವರ ಪುಸ್ತಕದಲ್ಲಿ**
**ರೋಜು ಪುಸ್ತಕ**

| ದಿನಾಂಕ | ವಿವರಗಳು | ಖಾ.ಪಾ | ಖರ್ಚು ₹ | ಜಮೆ ₹ |
|---|---|---|---|---|
| | ನಗದು ಖಾತೆ ಖರ್ಚು | | 5,000 | – |
| | A ನ ಬಂಡವಾಳ ಖಾತೆಗೆ | | – | 5,000 |
| | (A ನು ಕೊರತೆ ಇರುವ ಬಂಡವಾಳವನ್ನು ಸರಿದೂಗಿಸಲು ಹೆಚ್ಚುವರಿ ಮೊತ್ತ ತಂದದ್ದು) | | | |
| | B ನ ಬಂಡವಾಳ ಖಾತೆ ಖರ್ಚು | | 10,000 | – |
| | C ನ ಬಂಡವಾಳ ಖಾತೆ ಖರ್ಚು | | 10,000 | – |
| | ನಗದು ಖಾತೆಗೆ | | – | 20,000 |
| | (B ಮತ್ತು C ಹೆಚ್ಚಿನ ಬಂಡವಾಳ ಮೊತ್ತವನ್ನು ಹಿಂತೆಗೆದುಕೊಂಡದ್ದು) | | | |
| | ನಗದು ಖಾತೆ ಖರ್ಚು | | 30,000 | – |
| | D ನ ಬಂಡವಾಳ ಖಾತೆಗೆ | | – | 30,000 |
| | (D ಯು ತನ್ನ ಪಾಲಿನ ಬಂಡವಾಳವನ್ನು ತಂದದ್ದು.) | | | |

ಪರ್ಯಾಯವಾಗಿ ಮೇಲಿನ (2) ಮತ್ತು (3)ರ ಬದಲಾಗಿ ರೋಜು ನಮೂದು
**A, B, C ಮತ್ತು D ಪುಸ್ತಕದಲ್ಲಿ**
**ರೋಜು ಪುಸ್ತಕ**

| ದಿನಾಂಕ | ವಿವರಗಳು | ಖಾ.ಪಾ | ಖರ್ಚು ₹ | ಜಮೆ ₹ |
|---|---|---|---|---|
| | A ನ ಚಾಲ್ತಿ ಖಾತೆ ಖರ್ಚು | | 5,000 | – |
| | A ನ ಬಂಡವಾಳ ಖಾತೆಗೆ | | – | 5,000 |
| | (A ನ ಬಂಡವಾಳದ ಕೊರತೆ ಮೊತ್ತವನ್ನು A ನ ಚಾಲ್ತಿ ಖಾತೆಗೆ ವರ್ಗಾವಣೆ ಮಾಡಿದ್ದು.) | | | |
| | B ನ ಬಂಡವಾಳ ಖಾತೆ ಖರ್ಚು | | 10,000 | – |
| | C ನ ಬಂಡವಾಳ ಖಾತೆ ಖರ್ಚು | | 10,000 | – |
| | B ನ ಚಾಲ್ತಿ ಖಾತೆಗೆ | | – | 10,000 |
| | C ನ ಚಾಲ್ತಿ ಖಾತೆಗೆ | | – | 10,000 |
| | (B ಮತ್ತು C ಇವರ ಹೆಚ್ಚಿನ ಬಂಡವಾಳವನ್ನು ಅವರ ಚಾಲ್ತಿ ಖಾತೆಗೆ ವರ್ಗಾಯಿಸಿದ್ದು.) | | | |

**ನಿದರ್ಶನ 28:**

A ಮತ್ತು B ಇವರು ಒಂದು ಸಂಸ್ಥೆಯಲ್ಲಿ 2:1 ರ ಅನುಪಾತದಲ್ಲಿ ಲಾಭ ನಷ್ಟ ಹಂಚಿಕೊಳ್ಳುವ ಪಾಲುದಾರರಾಗಿರುತ್ತಾರೆ. 1/4 ಪಾಲಿನ ಲಾಭಕ್ಕಾಗಿ C ಯನ್ನು ಹೊಸ ಪಾಲುದಾರನೆಂದು ಸೇರಿಸಿಕೊಂಡರು. ಅವನು ₹ 30,000 ಬಂಡವಾಳವನ್ನು ತರುತ್ತಾನೆ ಮತ್ತು A ಮತ್ತು B ರವರ ಬಂಡವಾಳವನ್ನು ಅವರ ಲಾಭ ಹಂಚಿಕೆ ಅನುಪಾತದಲ್ಲಿ ಹೊಂದಾಣಿಕೆ ಮಾಡಿಕೊಳ್ಳುತ್ತಾರೆ. A ಮತ್ತು B ರವರ ಮಾರ್ಚ 31, 2013 ರಂದು (C ಪ್ರವೇಶವಾಗುವ ಮುಂಚೆ)ಅಢಾವೆ ಪತ್ರಿಕೆಯು ಈ ಕೆಳಗಿನಂತೆ ಇರುತ್ತದೆ.

**A ಮತ್ತು B ರವರ ಮಾರ್ಚ 31, 2013 ರಂದಿನ ಅಡಾವೆ ಪತ್ರಿಕೆ**

| ಜವಾಬ್ದಾರಿಗಳು | | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|---|
| ಸಾಹುಕಾರರು | | 8,000 | ಕೈಯಲ್ಲಿ ನಗದು | 2,000 |
| ಕೊಡತಕ್ಕ ವಿನಿಮಯ ಪತ್ರಗಳು | | 4,000 | ಬ್ಯಾಂಕಿನಲ್ಲಿ ನಗದು | 10,000 |
| ಸಾಮಾನ್ಯ ಮೀಸಲು | | 6,000 | ಸಾಲಗಾರರು | 8,000 |
| ಬಂಡವಾಳಗಳು: | | | ದಾಸ್ತಾನು | 10,000 |
| A | 50,000 | | ಪೀಠೋಪಕರಣ | 5,000 |
| B | 32,000 | 82,000 | ಯಂತ್ರೋಪಕರಣ | 25,000 |
| | | | ಕಟ್ಟಡ | 40,000 |
| | | **1,00,000** | | **1,00,000** |

ಒಪ್ಪಂದದ ಇತರ ಕರಾರುಗಳು ಈ ಕೆಳಗಿನಂತಿವೆ:

1. C ಯು ತನ್ನ ಪಾಲಿನ ಕೀರ್ತಿಮೌಲ್ಯಕ್ಕಾಗಿ ₹ 12,000 ಗಳನ್ನು ತರಬೇಕು.
2. ಕಟ್ಟಡವನ್ನು ₹ 45,000 ಗಳಿಗೆ ಮತ್ತು ಯಂತ್ರೋಪಕರಣವನ್ನು ₹ 23,000 ಗಳಿಗೆ ಮೌಲ್ಯೀಕರಿಸಲಾಯಿತು.
3. ಸಾಲಗಾರರ ಮೇಲೆ ಶೇ. 6 ರಷ್ಟು ಕರಡು ಸಾಲಗಳಿಗಾಗಿ ಕಾಯ್ದಿರಿಸುವಿಕೆಯನ್ನು ಮಾಡಿರಿ.
4. A ಮತ್ತು B ಪಾಲುದಾರರು ತಮ್ಮ ಚಾಲ್ತಿ ಖಾತೆಗಳನ್ನು ತೆರೆಯುವುದರ ಮೂಲಕ ಹೊಂದಾಣಿಕೆ ಮಾಡಿಕೊಳ್ಳಬೇಕು.

   ಅವಶ್ಯಕವಾದ ರೋಜು ನಮೂದುಗಳನ್ನು ಬರೆದು, ಖಾತೆಗಳನ್ನು ತೋರಿಸಿರಿ ಹಾಗೂ C ನ ಪ್ರವೇಶದ ನಂತರದ ಸಂಸ್ಥೆಯ ಅಢಾವೆ ಪತ್ರಿಕೆಯನ್ನು ತಯಾರಿಸಿರಿ.

**ಪರಿಹಾರ:**

**A, B ಮತ್ತು C ರವರ ಪುಸ್ತಕದಲ್ಲಿ**
**ರೋಜು ಪುಸ್ತಕ**

| ದಿನಾಂಕ 2013 | ವಿವರಗಳು | ಖಾ.ಪಾ | ಖರ್ಚು ₹ | ಜಮೆ ₹ |
|---|---|---|---|---|
| ಮಾರ್ಚ–31 | ನಗದು ಖಾತೆ ಖರ್ಚು | | 42,000 | – |
| | C ನ ಬಂಡವಾಳ ಖಾತೆಗೆ | | – | 30,000 |
| | ಕೀರ್ತಿಮೌಲ್ಯ ಖಾತೆಗೆ | | – | 12,000 |
| | (C ಯು ತನ್ನ ಪಾಲಿನ ಬಂಡವಾಳ ಮತ್ತು ಕೀರ್ತಿಮೌಲ್ಯಕ್ಕಾಗಿ ಹಣವನ್ನು ತಂದದ್ದು) | | | |
| ಮಾರ್ಚ–31 | ಕೀರ್ತಿಮೌಲ್ಯ ಖಾತೆ ಖರ್ಚು | | 12,000 | – |
| | A ನ ಬಂಡವಾಳ ಖಾತೆಗೆ | | – | 8,000 |
| | B ನ ಬಂಡವಾಳ ಖಾತೆಗೆ | | – | 4,000 |
| | (C ಯು ತಂದಿರುವ ಕೀರ್ತಿಮೌಲ್ಯವನ್ನು A ಮತ್ತು B ರವರ ಬಂಡವಾಳ ಖಾತೆಗಳಿಗೆ ಅವರ ತ್ಯಾಗದ ಅನುಪಾತದಲ್ಲಿ ವರ್ಗಾವಣೆ ಮಾಡಿದ್ದು.) | | | |
| ಮಾರ್ಚ–31 | ಪುನರ್ಮೌಲ್ಯ ಖಾತೆ ಖರ್ಚು | | 2,480 | – |
| | ಯಂತ್ರೋಪಕರಣ ಖಾತೆಗೆ | | – | 2,000 |
| | ಕರಡು ಸಾಲಗಳ ಕಾಯ್ದಿರಿಸುವಿಕೆ ಖಾತೆಗೆ | | – | 480 |
| | (ಯಂತ್ರೋಪಕರಣಗಳ ಮೌಲ್ಯ ಕಡಿಮೆಯಾಗಿದ್ದು ಮತ್ತು ಕರಡು ಸಾಲಗಳ ಕಾಯ್ದಿರಿಸುವಿಕೆಯನ್ನು ಸೃಷ್ಟಿಮಾಡಿದ್ದು) | | | |
| ಮಾರ್ಚ–31 | ಕಟ್ಟಡ ಖಾತೆ ಖರ್ಚು | | 5,000 | – |
| | ಪುನರ್ಮೌಲ್ಯ ಖಾತೆಗೆ | | – | 5,000 |
| | (ಕಟ್ಟಡದ ಹೆಚ್ಚಿನ ಮೌಲ್ಯವನ್ನು ಹೊಂದಾಣಿಕೆ ಮಾಡಿದ್ದು) | | | |
| ಮಾರ್ಚ–31 | ಪುನರ್ಮೌಲ್ಯ ಖಾತೆ ಖರ್ಚು | | 2,520 | – |
| | A ನ ಬಂಡವಾಳ ಖಾತೆಗೆ | | – | 1,680 |
| | B ನ ಬಂಡವಾಳ ಖಾತೆಗೆ | | – | 840 |
| | (ಪುನರ್ಮೌಲ್ಯಖಾತೆಯ ಲಾಭವನ್ನು A ಮತ್ತು B ಇವರ ನಡುವೆ ಹಂಚಿಕೆ ಮಾಡಿದ್ದು) | | | |
| ಮಾರ್ಚ–31 | ಸಾಮಾನ್ಯ ಮೀಸಲು ಖಾತೆ ಖರ್ಚು | | 6,000 | – |
| | A ನ ಬಂಡವಾಳ ಖಾತೆಗೆ | | – | 4,000 |
| | B ನ ಬಂಡವಾಳ ಖಾತೆಗೆ | | – | 2,000 |
| | (ಸಾಮಾನ್ಯ ಮೀಸಲನ್ನು A ಮತ್ತು B ಇವರ ಬಂಡವಾಳ ಖಾತೆಗೆ ವರ್ಗಾಯಿಸಿದ್ದು) | | | |

| | | | | |
|---|---|---|---|---|
| ಮಾರ್ಚ–31 | A ನ ಬಂಡವಾಳ ಖಾತೆ ಖರ್ಚು | | 3,680 | – |
| | A ನ ಚಾಲ್ತಿ ಖಾತೆಗೆ | | – | 3,680 |
| | (A ನ ಹೆಚ್ಚಿನ ಬಂಡವಾಳವನ್ನು ಅವನ ಚಾಲ್ತಿ ಖಾತೆಗೆ ವರ್ಗಾಯಿಸಿದ್ದು) | | | |
| ಮಾರ್ಚ–31 | B ನ ಬಂಡವಾಳ ಖಾತೆ ಖರ್ಚು | | 8,840 | – |
| | B ನ ಚಾಲ್ತಿ ಖಾತೆಗೆ | | – | 8,840 |
| | (B ನ ಹೆಚ್ಚಿನ ಬಂಡವಾಳವನ್ನು ಅವನ ಚಾಲ್ತಿ ಖಾತೆಗೆ ವರ್ಗಾಯಿಸಿದ್ದು) | | | |

**ಖರ್ಚು** **ಪುನರ್‌ಮೌಲ್ಯ ಖಾತೆ** **ಜಮೆ**

| ವಿವರಗಳು | | ಮೊತ್ತ ₹ | ವಿವರಗಳು | ಮೊತ್ತ ₹ |
|---|---|---|---|---|
| ಯಂತ್ರೋಪಕರಣ | | 2,000 | ಕಟ್ಟಡ | 5,000 |
| ಕರಡು ಸಾಲಗಳ ಕಾಯ್ದಿರಿಸುವಿಕೆ | | 480 | | |
| ಪುನರ್‌ಮೌಲ್ಯದ ಮೇಲಿನ ಲಾಭವನ್ನು ವರ್ಗಾಯಿಸಿದ್ದು | | | | |
| A ನ ಬಂಡವಾಳ ಖಾತೆಗೆ | 1,680 | | | |
| B ನ ಬಂಡವಾಳ ಖಾತೆಗೆ | 840 | 2520 | | |
| | | **5,000** | | **5,000** |

**ಖರ್ಚು** **ಪಾಲುದಾರರ ಬಂಡವಾಳ ಖಾತೆಗಳು** **ಜಮೆ**

| ದಿನಾಂಕ | ವಿವರಗಳು | A ₹ | B ₹ | C ₹ | ದಿನಾಂಕ | ವಿವರಗಳು | A ₹ | B ₹ | C ₹ |
|---|---|---|---|---|---|---|---|---|---|
| | ಚಾಲ್ತಿ ಖಾತೆಗಳು | 3,680 | 8,840 | – | | ಹಿಂದಿನಿಂದ ಬಂದ ಶಿಲ್ಕು | 50,000 | 32,000 | – |
| | ಮುಂದುವರಿದ ಶಿಲ್ಕು | 60,000 | 30,000 | 30,000 | | ನಗದು ಖಾತೆ | – | – | 30,000 |
| | | | | | | ಕೀರ್ತಿಮೌಲ್ಯ ಖಾತೆ | 8,000 | 4,000 | – |
| | | | | | | ಸಾಮಾನ್ಯ ಮೀಸಲು | 4,000 | 2,000 | – |
| | | | | | | ಪುನರ್‌ಮೌಲ್ಯ ಖಾತೆ (ಲಾಭದ ವರ್ಗಾವಣೆ) | 1,680 | 840 | – |
| | | **63,680** | **38,840** | **30,000** | | | **63,680** | **38,840** | **30,000** |

**ಖರ್ಚು** **ಪಾಲುದಾರರ ಚಾಲ್ತಿ ಖಾತೆಗಳು** **ಜಮೆ**

| ದಿನಾಂಕ 2013 | ವಿವರಗಳು | A ₹ | B ₹ | C ₹ | ದಿನಾಂಕ | ವಿವರಗಳು | A ₹ | B ₹ | C ₹ |
|---|---|---|---|---|---|---|---|---|---|
| ಮಾರ್ಚ್ 31 | ಮುಂದುವರಿದ ಶಿಲ್ಕು | 3,680 | 8,840 | – | ಮಾರ್ಚ್ 31 | ಬಂಡವಾಳ ಖಾತೆಗಳು | 3,680 | 8,840 | – |
| | | **3,680** | **8,840** | – | | | **3,680** | **8,840** | – |

**A, B ಮತ್ತು C ರವರ ಮಾರ್ಚ 31, 2013 ರಂದಿನ ಅಢಾವೆ ಪತ್ರಿಕೆ**

| ಜವಾಬ್ದಾರಿಗಳು | | | ಮೊತ್ತ ₹ | ಆಸ್ತಿಗಳು | | ಮೊತ್ತ ₹ |
|---|---|---|---|---|---|---|
| ಸಾಹುಕಾರರು | | | 8,000 | ಕೈಯಲ್ಲಿ ನಗದು | | 44,000 |
| ಕೊಡತಕ್ಕ ವಿನಿಮಯ ಪತ್ರಗಳು | | | 4,000 | ಬ್ಯಾಂಕಿನಲ್ಲಿ ನಗದು | | 10,000 |
| ಪಾಲುದಾರರ ಚಾಲ್ತಿ ಖಾತೆಗಳು: | | | | ಸಾಲಗಾರರು | 8,000 | |
| | A | 3,680 | | ಕಳೆ:ಕರಡು ಸಾಲಗಳ ಕಾಯ್ದಿರಿಸುವಿಕೆ | 480 | 7,520 |
| | B | 8,840 | 12,520 | ದಾಸ್ತಾನು | | 10,000 |
| ಬಂಡವಾಳಗಳು: | | | | ಪೀಠೋಪಕರಣ | | 5,000 |
| | A | 60,000 | | ಯಂತ್ರೋಪಕರಣ | 25,000 | |
| | B | 30,000 | | ಕಳೆ: ಸವಕಳಿ | 2,000 | 23,000 |
| | C | 30,000 | 1,20,000 | ಕಟ್ಟಡ | 40,000 | |
| | | | | ಕೂಡಿಸು: ಮೌಲ್ಯ ಹೆಚ್ಚಳ | 5,000 | 45,000 |
| | | | **1,44,520** | | | **1,44,520** |

**ಟಿಪ್ಪಣಿ: 1. ಹೊಸ ಲಾಭ ಹಂಚಿಕೆ ಅನುಪಾತ.**

A ಮತ್ತು B ಪಾಲುದಾರರಿಂದ C ಯು ಹೇಗೆ ಲಾಭದ ಪಾಲನ್ನು ಪಡೆದುಕೊಳ್ಳುತ್ತಾನೆ ಎಂಬುವುದನ್ನು ಕೊಟ್ಟಿಲ್ಲ. A ಮತ್ತು B ಪಾಲುದಾರರು ತಮ್ಮ ಹಳೆ ಲಾಭ ಹಂಚಿಕೆ ಅನುಪಾತದಲ್ಲಿಯೇ ಲಾಭ ಹಂಚಿಕೊಳ್ಳುತ್ತಾರೆ ಎಂದು ಭಾವಿಸೋಣ.

C ಯ ಲಾಭದ ಪಾಲು $= \frac{1}{4}$

ಉಳಿದ ಪಾಲು $= 1 - \frac{1}{4} = \frac{3}{4}$

A ನ ಹೊಸ ಪಾಲು $= \frac{3}{4}$ ರಲ್ಲಿ $\frac{2}{3} = \frac{6}{12} = \frac{1}{2} = \frac{2}{4}$

B ನ ಹೊಸ ಪಾಲು $= \frac{3}{4}$ ರಲ್ಲಿ $\frac{1}{3} = \frac{3}{12} = \frac{1}{4}$

ಆದ್ದರಿಂದ A, B ಮತ್ತು C ಇವರ ನಡುವಿನ ಹೊಸ ಲಾಭ ಹಂಚಿಕೆ ಅನುಪಾತವು 2:1:1

**2. A ಮತ್ತು B ಇವರ ಹೊಸ ಬಂಡವಾಳ.**

C ನ ಬಂಡವಾಳ ₹ 30,000 ಮತ್ತು ಅವನ ಲಾಭದ ಪಾಲು 1/4 ಇರುತ್ತದೆ.

C ನ ಬಂಡವಾಳದ ಆಧಾರದ ಮೇಲೆ ಸಂಸ್ಥೆಯ ಒಟ್ಟು ಬಂಡವಾಳವು ₹ 1,20,000 (4/1 × ₹30,000) ಆಗುತ್ತದೆ. ಮತ್ತು A ಮತ್ತು B ಇವರ ಬಂಡವಾಳ ಈ ಕೆಳಗಿನಂತಿವೆ.

A ನ ಬಂಡವಾಳ = ₹1,20,000 ರಲ್ಲಿ $\frac{2}{4}$ = ₹ 60,000

B ನ ಬಂಡವಾಳ = ₹1,20,000 ರಲ್ಲಿ $\frac{1}{4}$ = ₹ 30,000

**ನಿದರ್ಶನ 29:**

W ಮತ್ತು R ಇವರು 3:2 ರ ಅನುಪಾತದಲ್ಲಿ ಲಾಭ–ನಷ್ಟ ಹಂಚಿಕೊಳ್ಳುವ ಪಾಲುದಾರರಾಗಿದ್ದು, ಅವರ ಜನೇವರಿ 01, 2015 ರಂದಿನ ಅಢಾವೆ ಪತ್ರಿಕೆಯು ಕೆಳಗಿನಂತೆ ಇದೆ.

**W ಮತ್ತು R ರವರ ಜನೇವರಿ 01, 2015 ರಂದಿನ ಅಢಾವೆ ಪತ್ರಿಕೆ**

| ಜವಾಬ್ದಾರಿಗಳು | | ಮೊತ್ತ ₹ | ಆಸ್ತಿಗಳು | | ಮೊತ್ತ ₹ |
|---|---|---|---|---|---|
| ಸಾಹುಕಾರರು | | 20,000 | ಕೈಯಲ್ಲಿ ನಗದು | | 5,000 |
| ಪಾಲುಗಾರರ ಬಂಡವಾಳ | | | ಸಾಲಗಾರರು | 20,000 | |
| W | 40,000 | | ಕಳೆ:ಸಂಶಯಾತ್ಮಕ ಸಾಲಗಳ ಕಾಯ್ದಿರಿಸುವಿಕೆ | 700 | 19,300 |
| R | 30,000 | 70,000 | ದಾಸ್ತಾನು | | 25,000 |
| | | | ಸ್ಥಾವರ & ಯಂತ್ರೋಪಕರಣ | | 35,000 |
| | | | ಸ್ವಾಮ್ಯ ಸನ್ನದು | | 5,700 |
| | | **90,000** | | | **90,000** |

ಮೇಲಿನ ದಿನಾಂಕದಂದು ಈ ಕೆಳಗಿನ ಷರತ್ತುಗಳೊಂದಿಗೆ B ಎಂಬ ಹೊಸ ಪಾಲುಗಾರನನ್ನು ಸೇರಿಸಿಕೊಂಡರು.

1. ಅವನು 4/15 ಲಾಭದ ಪಾಲನ್ನು ಪಡೆಯುತ್ತಾನೆ.
2. ಅವನು ₹ 30,000 ಗಳನ್ನು ತನ್ನ ಪಾಲಿನ ಬಂಡವಾಳವೆಂದು ತರಬೇಕು.
3. ಹಿಂದಿನ ನಾಲ್ಕು ವರ್ಷಗಳ ಸರಾಸರಿ ಲಾಭದ $2\frac{1}{2}$ ವರ್ಷಗಳ ಖರೀದಿಯ ಆಧಾರದ ಮೇಲೆ ಕೀರ್ತಿಮೌಲ್ಯಕ್ಕಾಗಿ ಅವನು ನಗದು ತರಬೇಕು.

4. B ಯು ಕೀರ್ತಿಮೌಲ್ಯಕ್ಕಾಗಿ ತಂದಿರುವ ಮೊತ್ತದ ಅರ್ಧ ಹಣವನ್ನು W ಮತ್ತು R ಇವರು ಹಿಂತೆಗೆದುಕೊಳ್ಳುತ್ತಾರೆ.
5. ಆಸ್ತಿಗಳನ್ನು ಈ ರೀತಿಯಾಗಿ ಪುನರ್‌ಮೌಲ್ಯ ಮಾಡಲಾಯಿತು:

   ಪುಸ್ತಕದ ಬೆಲೆಯ ಸಾಲಗಾರರ ಶೇ. 5 ರಷ್ಟು ಕಡಿಮೆ ಮೌಲ್ಯ ಮಾಡಲಾಯಿತು.

   ದಾಸ್ತಾನು ₹ 20,000, ಸ್ಥಾವರ ಮತ್ತು ಯಂತ್ರೋಪಕರಣ ₹ 40,000 ಮತ್ತು ಸ್ವಾಮ್ಯ ಸನ್ನದು ₹ 12,000.
6. ಜವಾಬ್ದಾರಿಗಳನ್ನು ₹ 23,000 ಗಳಿಗೆ ಮೌಲ್ಯೀಕರಿಸಲಾಗಿದೆ. ಸರಕು ಖರೀದಿಸಿದ ಒಂದು ಬಿಲ್ಲನ್ನು ಲೆಕ್ಕ ಪುಸ್ತಕದಲ್ಲಿ ದಾಖಲೆ ಮಾಡುವುದನ್ನು ಕೈಬಿಡಲಾಗಿದೆ.
7. ಹಿಂದಿನ ನಾಲ್ಕು ವರ್ಷಗಳ ಲಾಭಗಳು ಇಂತಿವೆ:

| | | | |
|---|---|---|---|
| 2011 | ₹ 15,000 | 2013 | ₹ 14,000 |
| 2012 | ₹ 20,000 | 2014 | ₹ 17,000 |

ಮೇಲಿನವುಗಳಿಗೆ ಸಂಬಂಧಿಸಿದ ರೋಜು ನಮೂದುಗಳನ್ನು ಬರೆದು, ಅವಶ್ಯಕವಾದ ಖಾತೆಗಳನ್ನು ತೆರೆಯಿರಿ ಮತ್ತು B ನ ಪ್ರವೇಶದ ನಂತರದ ಅಢಾವೆ ಪತ್ರಿಕೆಯನ್ನು ತಯಾರಿಸಿರಿ.

**ಪರಿಹಾರ:**

ಸಂಸ್ಥೆಯ ಕೀರ್ತಿಮೌಲ್ಯವು ₹41,250 ಗಳೆಂದು ಈ ಕೆಳಗಿನಂತೆ ಕಂಡು ಹಿಡಿಯಲಾಗಿದೆ.

| **ವರ್ಷಗಳು** | **ಲಾಭ ₹** |
|---|---|
| 2011 | 15,000 |
| 2012 | 20,000 |
| 2013 | 14,000 |
| 2014 | 17,000 |
| **ಒಟ್ಟು** | **66,000** |

$$\text{ಸರಾಸರಿ ಲಾಭ} = \frac{₹66,000}{4} = ₹\,16,500$$

$$\text{ಕೀರ್ತಿಮೌಲ್ಯ } (2\ \frac{1}{2} \text{ ವರ್ಷಗಳ ಖರೀದಿ}) = ₹\,16,500 \times \frac{5}{2} = ₹\,41,250$$

$$\text{D ನ ಪಾಲಿನ ಕೀರ್ತಿಮೌಲ್ಯ} = ₹\,41,250 \times \frac{4}{15} = ₹\ 11,000$$

**W, R ಮತ್ತು B ಇವರ ಪುಸ್ತಕದಲ್ಲಿ**
**ರೋಜು ಪುಸ್ತಕ**

| ದಿನಾಂಕ 2015 | ವಿವರಗಳು | ಖಾ.ಪಾ | ಖರ್ಚು ₹ | ಜಮೆ ₹ |
|---|---|---|---|---|
| ಜನೇವರಿ 1 | ನಗದು ಖಾತೆ ಖರ್ಚು | | 41,000 | – |
| | B ನ ಬಂಡವಾಳ ಖಾತೆಗೆ | | – | 30,000 |
| | ಕೀರ್ತಿಮೌಲ್ಯ ಖಾತೆಗೆ | | – | 11,000 |
| | (B ಯು ತನ್ನ ಪಾಲಿನ ಬಂಡವಾಳ ಮತ್ತು 4/15 ಪಾಲಿನ ಕೀರ್ತಿಮೌಲ್ಯಕ್ಕಾಗಿ ಹಣ ತಂದದ್ದು). | | | |
| | ಕೀರ್ತಿಮೌಲ್ಯ ಖಾತೆ ಖರ್ಚು | | 11,000 | – |
| | W ನ ಬಂಡವಾಳ ಖಾತೆಗೆ | | – | 6,600 |
| | R ನ ಬಂಡವಾಳ ಖಾತೆಗೆ | | – | 4,400 |
| | (B ಯು ತಂದಿರುವ ಕೀರ್ತಿಮೌಲ್ಯವನ್ನು W ಮತ್ತು R ಇವರ ಬಂಡವಾಳ ಖಾತೆಗೆ ಅವರ ಹಳೆ ಲಾಭ ಹಂಚಿಕೆಯ ಅನುಪಾತ 3:2ರಲ್ಲಿ ಜಮೆ ಕೊಟ್ಟಿದ್ದು.) | | | |
| | W ನ ಬಂಡವಾಳ ಖಾತೆ ಖರ್ಚು | | 3,300 | – |
| | R ನ ಬಂಡವಾಳ ಖಾತೆ ಖರ್ಚು | | 2,200 | – |
| | ನಗದು ಖಾತೆಗೆ | | – | 5,500 |
| | (ಕೀರ್ತಿಮೌಲ್ಯದ ಅರ್ಧದಷ್ಟು ಮೊತ್ತವನ್ನು ಹಳೆ ಪಾಲುದಾರರು ಹಿಂತೆಗೆದುಕೊಂಡಿದ್ದು) | | | |
| | ಪುನರ್‌ಮೌಲ್ಯ ಖಾತೆ ಖರ್ಚು | | 5,300 | – |
| | ಸಂಶಯಾತ್ಮಕ ಸಾಲಗಳ ಕಾಯ್ದಿರಿಸುವಿಕೆ ಖಾತೆಗೆ | | – | 300 |
| | ದಾಸ್ತಾನು ಖಾತೆಗೆ | | – | 5,000 |
| | (ಸಂಶಯಾತ್ಮಕ ಸಾಲಗಳ ಕಾಯ್ದಿರಿಸುವಿಕೆ ಮೊತ್ತವು ₹1,000 ಕ್ಕೆ (5% × ₹20,000) ಹೆಚ್ಚಿದ್ದು, ದಾಸ್ತಾನು ಮೌಲ್ಯದಲ್ಲಿ ಕಡಿಮೆಯಾಗಿದ್ದನ್ನು ಹೊಂದಾಣಿಕೆ ಮಾಡಿದ್ದು. | | | |
| | ಸ್ಥಾವರ ಮತ್ತು ಯಂತ್ರೋಪಕರಣ ಖಾತೆ ಖರ್ಚು | | 5,000 | – |
| | ಸ್ವಾಮ್ಯ ಸನ್ನದು ಖಾತೆ ಖರ್ಚು | | 6,300 | – |
| | ಪುನರ್‌ಮೌಲ್ಯ ಖಾತೆಗೆ | | – | 11,300 |
| | (ಸ್ಥಾವರ ಮತ್ತು ಯಂತ್ರಗಳು ಹಾಗೂ ಸ್ವಾಮ್ಯ ಸನ್ನದು ಇವುಗಳ ಹೆಚ್ಚಾದ ಮೌಲ್ಯವನ್ನು ಹೊಂದಾಣಿಕೆ ಮಾಡಿದ್ದು) | | | |

| | | | | |
|---|---|---|---|---|
| | ಪುನರ್‌ಮೌಲ್ಯ ಖಾತೆ ಖರ್ಚು<br>ಸಾಹುಕಾರರ ಖಾತೆಗೆ<br>(ಜವಾಬ್ದಾರಿಗಳ ಮೌಲ್ಯ ಹೆಚ್ಚಾಗಿದ್ದು) | | 3,000<br>– | –<br>3,000 |
| | ಪುನರ್‌ಮೌಲ್ಯ ಖಾತೆಗೆ ಖರ್ಚು<br>W ನ ಬಂಡವಾಳ ಖಾತೆಗೆ<br>R ನ ಬಂಡವಾಳ ಖಾತೆಗೆ<br>(ಪುನರ್‌ಮೌಲ್ಯದ ಮೇಲಿನ ಲಾಭವನ್ನು ಪಾಲುದಾರರ ಬಂಡವಾಳ ಖಾತೆಗೆ ವರ್ಗಾಯಿಸಿದ್ದು) | | 3,000<br>–<br>– | –<br>1,800<br>1,200 |

ಖರ್ಚು **ನಗದು ಖಾತೆ** ಜಮೆ

| ದಿನಾಂಕ 2015 | ವಿವರಗಳು | ರೋ. ಪಾ | ಮೊತ್ತ ₹ | ದಿನಾಂಕ 2015 | ವಿವರಗಳು | ರೋ. ಪಾ | ಮೊತ್ತ ₹ |
|---|---|---|---|---|---|---|---|
| ಜನೇವರಿ1 | ಹಿಂದಿನಿಂದ ಬಂದ ಶಿಲ್ಕು | | 5,000 | ಜನೇವರಿ1 | W ನ ಬಂಡವಾಳ ಖಾತೆ | | 3,300 |
| | B ನ ಬಂಡವಾಳ ಖಾತೆ | | 30,000 | | R ನ ಬಂಡವಾಳ ಖಾತೆ | | 2,200 |
| | ಕೀರ್ತಿಮೌಲ್ಯ ಖಾತೆ | | 11,000 | | ಮುಂದುವರಿದ ಶಿಲ್ಕು | | 40,500 |
| | | | **46,000** | | | | **46,000** |

ಖರ್ಚು **B ನ ಬಂಡವಾಳ ಖಾತೆ** ಜಮೆ

| ದಿನಾಂಕ 2015 | ವಿವರಗಳು | ರೋ. ಪಾ | ಮೊತ್ತ ₹ | ದಿನಾಂಕ 2015 | ವಿವರಗಳು | ರೋ. ಪಾ | ಮೊತ್ತ |
|---|---|---|---|---|---|---|---|
| ಜನೇವರಿ1 | ಮುಂದುವರಿದ ಶಿಲ್ಕು | | 30,000 | ಜನೇವರಿ1 | ನಗದು ಖಾತೆ | | 30,000 |
| | | | **30,000** | | | | **30,000** |

ಖರ್ಚು **W ನ ಬಂಡವಾಳ ಖಾತೆ** ಜಮೆ

| ದಿನಾಂಕ 2015 | ವಿವರಗಳು | ರೋ. ಪಾ | ಮೊತ್ತ ₹ | ದಿನಾಂಕ 2015 | ವಿವರಗಳು | ರೋ. ಪಾ | ಮೊತ್ತ |
|---|---|---|---|---|---|---|---|
| ಜನೇವರಿ1 | ನಗದು | | 3,300 | ಜನೇವರಿ1 | ಹಿಂದಿನಿಂದ ಬಂದ ಶಿಲ್ಕು | | 40,000 |
| | ಮುಂದುವರಿದ ಶಿಲ್ಕು | | 45,100 | | ಕೀರ್ತಿಮೌಲ್ಯ | | 6,600 |
| | | | | | ಪುನರ್ ಮೌಲ್ಯ | | 1,800 |
| | | | **48,400** | | | | **48,400** |

**ಖರ್ಚು** **R ನ ಬಂಡವಾಳ ಖಾತೆ** **ಜಮೆ**

| ದಿನಾಂಕ 2015 | ವಿವರಗಳು | ಮೊತ್ತ ₹ | ದಿನಾಂಕ 2015 | ವಿವರಗಳು | ಮೊತ್ತ ₹ |
|---|---|---|---|---|---|
| ಜನೇವರಿ,1 | ನಗದು | 2,200 | ಜನೇವರಿ,1 | ಹಿಂದಿನಿಂದ ಬಂದ ಶಿಲ್ಕು | 30,000 |
| | ಮುಂದುವರಿದ ಶಿಲ್ಕು | 33,400 | | ಕೀರ್ತಿಮೌಲ್ಯ | 4,400 |
| | | | | ಪುನರ್‌ಮೌಲ್ಯ | 1,200 |
| | | **35,600** | | | **35,600** |

**ಖರ್ಚು** **ಪುನರ್‌ಮೌಲ್ಯ ಖಾತೆ** **ಜಮೆ**

| ವಿವರಗಳು | ಮೊತ್ತ ₹ | ವಿವರಗಳು | ಮೊತ್ತ ₹ |
|---|---|---|---|
| ಸಂಶಯಾತ್ಮಕ ಸಾಲಗಳ ಕಾಯ್ದಿರಿಸುವಿಕೆ | 300 | ಸ್ಥಾವರ ಮತ್ತು ಯಂತ್ರೋಪಕರಣ | 5,000 |
| ದಾಸ್ತಾನು | 5,000 | ಸ್ವಾಮ್ಯ ಸನ್ನದು | 6,300 |
| ಸಾಹುಕಾರರು | 3,000 | | |
| ಲಾಭವನ್ನು ವರ್ಗಾಯಿಸಿದ್ದು | | | |
| W=3/5 × ₹3000 = ₹1,800 | | | |
| R=2/5 × ₹3000 = ₹1,200 | 3,000 | | |
| | **11,300** | | **11,300** |

**W, R ಮತ್ತು B ರವರ ಜನೇವರಿ 01, 2015 ರಂದಿನ ಅಢಾವೆ ಪತ್ರಿಕೆ**

| ಜವಾಬ್ದಾರಿಗಳು | | ಮೊತ್ತ ₹ | ಆಸ್ತಿಗಳು | | ಮೊತ್ತ ₹ |
|---|---|---|---|---|---|
| ಸಾಹುಕಾರರು | | 23,000 | ಕೈಯಲ್ಲಿ ನಗದು | | 40,500 |
| ಬಂಡವಾಳಗಳು | | | ಸಾಲಗಾರರು | 20,000 | |
| W | 45,100 | | ಕಳೆ: ಸ.ಸಾ. ಕಾಯ್ದಿರಿಸುವಿಕೆ | 1,000 | 19,000 |
| R | 33,400 | | ದಾಸ್ತಾನು | 25,000 | |
| B | 30,000 | 1,08,500 | ಕಳೆ: ಕಡಿಮೆಯಾದ ಮೌಲ್ಯ | 5,000 | 20,000 |
| | | | ಸ್ಥಾವರ ಮತ್ತು ಯಂತ್ರೋಪಕರಣ | 35,000 | |
| | | | ಕೂಡಿಸು:ಅಧಿಕಗೊಂಡ ಮೌಲ್ಯ | 5,000 | 40,000 |
| | | | ಸ್ವಾಮ್ಯ ಸನ್ನದು | | 12,000 |
| | | **1,31,500** | | | **1,31,500** |

ಹೊಸ ಲಾಭ ಹಂಚಿಕೆಯ ಅನುಪಾತವು:

$$W = \left(1 - \frac{4}{15}\right) \times \frac{3}{5} = \frac{11}{15} \times \frac{3}{5} = \frac{33}{75}$$

$$R = \left(1 - \frac{4}{15}\right) \times \frac{2}{5} = \frac{11}{15} \times \frac{2}{5} = \frac{22}{75}$$

$$B = \frac{4}{15} = \frac{20}{75}$$

ಹೊಸ ಲಾಭ ಹಂಚಿಕೆ ಅನುಪಾತವು = 33 : 22 : 20.

## 3.9: ಅಸ್ತಿತ್ವದಲ್ಲಿರುವ ಪಾಲುಗಾರರ ಲಾಭ ಹಂಚಿಕೆಯ ಅನುಪಾತದಲ್ಲಿ ಬದಲಾವಣೆ :

**Change in Profit Sharing Ratio among the existing Partners**

ಕೆಲವು ಸಲ, ಸಂಸ್ಥೆಯ ಪಾಲುದಾರರು ಯಾವುದೇ ಹೊಸ ಪಾಲುದಾರನನ್ನು ಸೇರಿಸಿಕೊಳ್ಳದೇ ಅಥವಾ ಯಾವುದೇ ಪಾಲುದಾರ ನಿವೃತ್ತಿಯಾಗದೇ ಇದ್ದರೂ ಅಸ್ತಿತ್ವದಲ್ಲಿರುವ ತಮ್ಮ ಲಾಭ ಹಂಚಿಕೆಯ ಅನುಪಾತವನ್ನು ಬದಲಾಯಿಸಲು ನಿರ್ಧರಿಸುತ್ತಾರೆ. ಇದರ ಪರಿಣಾಮವಾಗಿ ಕೆಲವು ಪಾಲುದಾರರು ಭವಿಷ್ಯದ ಲಾಭದಲ್ಲಿ ಹೆಚ್ಚಿಗೆ ಪಾಲನ್ನು ಪಡೆದುಕೊಳ್ಳಬಹುದು. ಇಲ್ಲವೆ ತಮ್ಮ ನಷ್ಟದ ಸ್ವಲ್ಪ ಪಾಲನ್ನು ಇತರ ಪಾಲುದಾರ ಖಾತೆಗೆ ವರ್ಗಾಯಿಸಬಹುದು. ಉದಾ: A, B ಮತ್ತು C ಇವರು 8:5:3 ರ ಅನುಪಾತದಲ್ಲಿ ಲಾಭ–ನಷ್ಟವನ್ನು ಹಂಚಿಕೊಳ್ಳುವ ಪಾಲುದಾರರಾಗಿರುತ್ತಾರೆ. A ನು ಸಂಸ್ಥೆಯ ಆಡಳಿತದಲ್ಲಿ ಕ್ರೀಯಾಶೀಲವಾಗಿ ಭಾಗವಹಿಸಲು ಸಮರ್ಥನಾಗಿರುವದಿಲ್ಲ, ಆದ್ದರಿಂದ ಅವರು ದಿನಾಂಕ: 1–4–2007 ರಿಂದ ಭವಿಷ್ಯದಲ್ಲಿ ಲಾಭ–ನಷ್ಟವನ್ನು 5:6:5 ರ ಅನುಪಾತದಲ್ಲಿ ಹಂಚಿಕೊಳ್ಳಲು ನಿರ್ಧರಿಸಿದರು. ಇದರ ಪರಿಣಾಮವಾಗಿ A ಯು $\frac{3}{16}$ $\left(\frac{8}{16} - \frac{5}{16}\right)$ ಲಾಭದಲ್ಲಿ ಪಾಲನ್ನು ಕಳೆದುಕೊಳ್ಳುತ್ತಾನೆ. ಆಗ B ಮತ್ತು C ಇವರು $\frac{1}{16}$ $\left(\frac{6}{16} - \frac{5}{16}\right)$ ಮತ್ತು $\frac{2}{16}$ $\left(\frac{5}{16} - \frac{3}{16}\right)$ ರಷ್ಟು ಪ್ರಯೋಜನವನ್ನು ಪಡೆದುಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಮೊದಲನೆಯದಾಗಿ, ಕೀರ್ತಿಮೌಲ್ಯದಲ್ಲಿ ಆದ ಲಾಭ ಅಥವಾ ನಷ್ಟವನ್ನು ಹೊಂದಾಣಿಕೆ ಮಾಡಬೇಕು. ಹಳೆಯ ಲಾಭ ಹಂಚಿಕೆಯ ಅನುಪಾತದಲ್ಲಿ ಕೀರ್ತಿಮೌಲ್ಯವನ್ನು ಅದರ ಪೂರ್ಣ ಮೌಲ್ಯಕ್ಕೆ ಸೃಷ್ಟಿಸಿ, ನಂತರ ಹೊಸ ಲಾಭ ಹಂಚಿಕೆ ಅನುಪಾತದಲ್ಲಿ ಅದನ್ನು ತೆಗೆದುಹಾಕಲಾಗುತ್ತದೆ. ಇನ್ನೊಂದು ಅರ್ಥದಲ್ಲಿ, ಹಾನಿಗೊಳ್ಳುವ ಪಾಲುದಾರನ ಬಂಡವಾಳ ಖಾತೆಗೆ ಜಮೆ ಹಾಕಬೇಕು ಮತ್ತು ಪ್ರಯೋಜನ ಪಡೆಯುವ ಪಾಲುದಾರನ ಬಂಡವಾಳ ಖಾತೆಗೆ ಸಂಬಂಧಿಸಿದ ಮೊತ್ತವನ್ನು ಖರ್ಚು ಹಾಕಬೇಕು. ಕೀರ್ತಿಮೌಲ್ಯ ಖಾತೆಯನ್ನು ಲೆಕ್ಕ ಪುಸ್ತಕದಲ್ಲಿ ತೆಗೆದುಕೊಳ್ಳದೇ ಇದ್ದಾಗ ಈಗಾಗಲೇ ಹೊಸ ಪಾಲುದಾರನ ಪ್ರವೇಶ ಸಂದರ್ಭದಲ್ಲಿ ವಿವರಿಸಿದಂತೆ ಹಾನಿಗೊಳ್ಳುವ ಪಾಲುದಾರನ ಬಂಡವಾಳ ಖಾತೆಗೆ ಜಮೆ ಕೊಟ್ಟು ಮತ್ತು ಪ್ರಯೋಜನ ಪಡೆಯುವ ಪಾಲುದಾರನ ಬಂಡವಾಳ ಖಾತೆಗೆ ಖರ್ಚು ಹಾಕಬೇಕು.

ಲಾಭ ಹಂಚಿಕೆಯ ಅನುಪಾತದಲ್ಲಿ ಏನಾದರೂ ಬದಲಾವಣೆಯಾದರೆ ಪಾಲುದಾರನ ಪ್ರವೇಶದಂತೆ, ಆಸ್ತಿಗಳು ಮತ್ತು ಜವಾಬ್ದಾರಿಗಳ ಪುನರ್‌ಮೌಲ್ಯಕ್ಕೆ ಸಂಬಂಧಿಸಿದ ಹೊಂದಾಣಿಕೆಗಳನ್ನೂ ಸಹ ಮಾಡಬಹುದು. ಸಂಚಿತಗೊಂಡ ಲಾಭ ಮತ್ತು ನಷ್ಟಗಳನ್ನು ಪಾಲುದಾರರ ಬಂಡವಾಳ ಖಾತೆಗಳಿಗೆ ಹಳೆ ಲಾಭಹಂಚಿಕೆಯ ಅನುಪಾತದಲ್ಲಿ ವರ್ಗಾಯಿಸಬೇಕು ಮತ್ತು ಪಾಲುದಾರರ ಬಂಡವಾಳ ಖಾತೆಗಳನ್ನು ಹೊಂದಾಣಿಕೆ ಮಾಡಲು ತಿಳಿಸಿದ್ದರೆ, ಆಗ ಅವುಗಳನ್ನು ಹೊಸ ಲಾಭ ಹಂಚಿಕೆಯ ಅನುಪಾತದಲ್ಲಿ ಹೊಂದಾಣಿಕೆ ಮಾಡಬೇಕು. ಇವೆಲ್ಲವುಗಳನ್ನು ಪಾಲುದಾರನ ಪ್ರವೇಶದ ಸಂದರ್ಭದಲ್ಲಿ ಇರುವಂತೆಯೇ ಮಾಡಲಾಗುತ್ತದೆ.

**ನಿದರ್ಶನ 30:**

ದಿನೇಶ, ರಮೇಶ ಮತ್ತು ಸುರೇಶ ಇವರು ಒಂದು ಸಂಸ್ಥೆಯಲ್ಲಿ 3:3:2 ರ ಅನುಪಾತದಲ್ಲಿ ಲಾಭ ನಷ್ಟವನ್ನು ಹಂಚಿಕೊಳ್ಳುವ ಪಾಲುದಾರರಾಗಿರುತ್ತಾರೆ. ಎಪ್ರೀಲ್ 01,2015 ರಿಂದ ಅವರು ಲಾಭವನ್ನು ಸಮನಾಗಿ ಹಂಚಿಕೊಳ್ಳಲು ನಿರ್ಧರಿಸಿದರು. ಮಾರ್ಚ 31, 2015 ರಂದಿನ ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ.

| ಜವಾಬ್ದಾರಿಗಳು | | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|---|
| ಸಾಹುಕಾರರು | | 1,50,000 | ಬ್ಯಾಂಕಿನಲ್ಲಿ ನಗದು | 40,000 |
| ಸಾಮಾನ್ಯ ಮೀಸಲು | | 80,000 | ಬರತಕ್ಕ ವಿನಿಮಯ ಪತ್ರಗಳು | 50,000 |
| ಪಾಲುದಾರರ ಸಾಲ: | | | ಸಾಲಗಾರರು | 60,000 |
| ದಿನೇಶ | 40,000 | | ದಾಸ್ತಾನು | 1,20,000 |
| ರಮೇಶ | 30,000 | 70,000 | ಸ್ಥಿರ ಆಸ್ತಿಗಳು | 2,80,000 |
| ಪಾಲುದಾರರ ಬಂಡವಾಳ: | | | | |
| ದಿನೇಶ | 1,00,000 | | | |
| ರಮೇಶ | 80,000 | | | |
| ಸುರೇಶ | 70,000 | 2,50,000 | | |
| | | **5,50,000** | | **5,50,000** |

ಈ ಕೆಳಗಿನ ಅಂಶಗಳನ್ನೂ ನಿರ್ಧರಿಸಲಾಗಿದೆ;

1. ಸ್ಥಿರ ಆಸ್ತಿಗಳನ್ನು ₹ 3,31,000 ಗಳಿಗೆ ಮೌಲ್ಯೀಕರಿಸಿದೆ.
2. ಸಾಲಗಾರರ ಮೇಲೆ ಶೇ. 5 ರಂತೆ ಸಂಶಯಾತ್ಮಕ ಸಾಲಗಳ ಕಾಯ್ದಿರಸುವಿಕೆಯನ್ನು ಒದಗಿಸಿರಿ.
3. ಸಂಸ್ಥೆಯ ಕೀರ್ತಿಮೌಲ್ಯವನ್ನು ಕಳೆದ 5 ವರ್ಷಗಳ ನಿವ್ವಳ ಸರಾಸರಿ ಲಾಭದ $4\frac{1}{2}$ ವರ್ಷಗಳ ಖರೀದಿ ಆಧಾರದ ಮೇಲೆ ಬೆಲೆ ಕಟ್ಟಲಾಯಿತು. ಐದು ವರ್ಷಗಳ ಲಾಭಗಳು ಅನುಕ್ರಮವಾಗಿ ₹ 14,000, ₹ 17,000, ₹ 20,000, ₹ 22,000, ಮತ್ತು ₹ 27,000 ಇರುತ್ತವೆ.
4. ದಾಸ್ತಾನಿನ ಮೌಲ್ಯವನ್ನು ₹ 1,12,000 ಗಳಿಗೆ ಇಳಿಸಲಾಯಿತು.
5. ಕೀರ್ತಿಮೌಲ್ಯವನ್ನು ಲೆಕ್ಕ ಪುಸ್ತಕದಲ್ಲಿ ತೋರಿಸಬಾರದು.

ಅವಶ್ಯಕವಾದ ರೋಜು ನಮೂದುಗಳನ್ನು ಬರೆದು, ಸಂಸ್ಥೆಯ ಪರೀಷ್ಕೃತ ಅಢಾವೆ ಪತ್ರಿಕೆಯನ್ನು ತಯಾರಿಸಿ.

**ಪರಿಹಾರ:**

**ದಿನೇಶ, ರಮೇಶ ಮತ್ತು ಸುರೇಶರವರ ಪುಸ್ತಕದಲ್ಲಿ**
**ರೋಜು ಪುಸ್ತಕ**

| ದಿನಾಂಕ 2015 | ವಿವರಗಳು | ಖಾ ಪಾ | ಖರ್ಚು ₹ | ಜಮೆ ₹ |
|---|---|---|---|---|
| ಏಪ್ರೀಲ್, 1 | ಸ್ಥಿರ ಆಸ್ತಿಗಳ ಖಾತೆ ಖರ್ಚು | | 51,000 | – |
| | ಪುನರ್‌ಮೌಲ್ಯ ಖಾತೆಗೆ | | – | 51,000 |
| | (ಸ್ಥಿರ ಆಸ್ತಿಗಳ ಮೌಲ್ಯದಲ್ಲಿ ಹೆಚ್ಚಳವಾಗಿದ್ದು) | | | |
| | ಪುನರ್‌ಮೌಲ್ಯ ಖಾತೆ ಖರ್ಚು | | 11,000 | – |
| | ದಾಸ್ತಾನು ಖಾತೆಗೆ | | – | 8,000 |
| | ಸಂಶಯಾತ್ಮಕ ಸಾಲಗಳ ಕಾಯ್ದಿರಿಸುವಿಕೆ ಖಾತೆಗೆ | | – | 3,000 |
| | (ದಾಸ್ತಾನಿನ ಮೌಲ್ಯದಲ್ಲಿ ಕಡಿಮೆಯಾಗಿದ್ದು ಮತ್ತು ಸಂಶಯಾತ್ಮಕ ಸಾಲಗಳ ಕಾಯ್ದಿರಿಸುವಿಕೆ ಸೃಷ್ಟಿಸಿದ್ದು). | | | |
| | ಪುನರ್‌ಮೌಲ್ಯ ಖಾತೆ ಖರ್ಚು | | 40,000 | – |
| | ದಿನೇಶನ ಬಂಡವಾಳ ಖಾತೆಗೆ | | – | 15,000 |
| | ರಮೇಶನ ಬಂಡವಾಳ ಖಾತೆಗೆ | | – | 15,000 |
| | ಸುರೇಶನ ಬಂಡವಾಳ ಖಾತೆಗೆ | | – | 10,000 |
| | (ಪುನರ್‌ಮೌಲ್ಯದ ಮೇಲಿನ ಲಾಭವನ್ನು ಪಾಲುದಾರರ ಬಂಡವಾಳ ಖಾತೆಗಳಿಗೆ ಹಳೆ ಲಾಭ ಹಂಚಿಕೆ ಅನುಪಾತದಲ್ಲಿ ವರ್ಗಾಯಿಸಿದ್ದು) | | | |
| | ಸಾಮಾನ್ಯ ಮೀಸಲು ಖಾತೆ ಖರ್ಚು | | 80,000 | – |
| | ದಿನೇಶನ ಬಂಡವಾಳ ಖಾತೆಗೆ | | – | 30,000 |
| | ರಮೇಶನ ಬಂಡವಾಳ ಖಾತೆಗೆ | | – | 30,000 |
| | ಸುರೇಶನ ಬಂಡವಾಳ ಖಾತೆಗೆ | | – | 20,000 |
| | (ಸಾಮಾನ್ಯ ಮೀಸಲನ್ನು ಪಾಲುದಾರರ ಬಂಡವಾಳ ಖಾತೆಗಳಿಗೆ ಅವರ ಹಳೆ ಲಾಭ ಹಂಚಿಕೆ ಅನುಪಾತದಲ್ಲಿ ವರ್ಗಾಯಿಸಿದ್ದು) | | | |
| | ಸುರೇಶನ ಬಂಡವಾಳ ಖಾತೆ ಖರ್ಚು | | 7,500 | – |
| | ದಿನೇಶನ ಬಂಡವಾಳ ಖಾತೆಗೆ | | – | 3,750 |
| | ರಮೇಶನ ಬಂಡವಾಳ ಖಾತೆಗೆ | | – | 3,750 |
| | (ಕೀರ್ತಿಮೌಲ್ಯವನ್ನು ಪಾಲುದಾರರ ಬಂಡವಾಳ ಖಾತೆಗಳಿಗೆ ಅವರ ತ್ಯಾಗ/ ಗಳಿಕೆ ಅನುಪಾತದಲ್ಲಿ ಹೊಂದಾಣಿಕೆ ಮಾಡಿದ್ದು) | | | |

**ಟಿಪ್ಪಣಿಗಳು:**

1. ಪಾಲುದಾರರ ತ್ಯಾಗ ಮತ್ತು ಗಳಿಕೆಯ ಪ್ರಮಾಣ:

| **ವಿವರಗಳು** | **ದಿನೇಶ** | **ರಮೇಶ** | **ಸುರೇಶ** |
|---|---|---|---|
| ಹಳೆ ಪಾಲು | 3/8 | 3/8 | 2/8 |
| ಹೊಸ ಪಾಲು | 1/3 | 1/3 | 1/3 |
| ವ್ಯತ್ಯಾಸ | 1/24 | 1/24 | 2/24 |
| | (ತ್ಯಾಗ) | (ತ್ಯಾಗ) | (ಗಳಿಕೆ) |

2. ಕೀರ್ತಿಮೌಲ್ಯ:

ಒಟ್ಟು ಲಾಭ = ₹ 14,000 + ₹ 17,000 + ₹ 20,000 + ₹ 22,000 + ₹ 27,000

= ₹ 1,00,000

ಸರಾಸರಿ ಲಾಭ = $\frac{₹1,00,000}{5}$

= ₹ 20,000

ಕೀರ್ತಿಮೌಲ್ಯ = ₹ 20,000 × 4 $\frac{1}{2}$

= ₹ 90,000

ಸುರೇಶನ ಲಾಭದಲ್ಲಿನ ಗಳಿಕೆಯ ಪಾಲು 2/24 ಆಗಿರುವದರಿಂದ ಅವನು ತರಬೇಕಾದ ಮೊತ್ತ ₹ 7,500.

ದಿನೇಶನು ತ್ಯಾಗ ಮಾಡಿದ ಲಾಭದಲ್ಲಿನ ಪಾಲು 1/24 ಆಗಿರುವದರಿಂದ ಅವನು ಪಡೆದುಕೊಳ್ಳಬೇಕಾದ ಮೊತ್ತ ₹ 3,750.

ರಮೇಶನು ತ್ಯಾಗ ಮಾಡಿದ ಲಾಭದಲ್ಲಿನ ಪಾಲು 1/24 ಆಗಿರುವುದರಿಂದ ಅವನು ಪಡೆದುಕೊಳ್ಳಬೇಕಾದ ಮೊತ್ತ ₹ 3,750.

ಕೀರ್ತಿಮೌಲ್ಯ ಖಾತೆಯನ್ನು ನಾವು ಹಳೆ ಲಾಭ ಹಂಚಿಕೆ ಅನುಪಾತದಲ್ಲಿ ಸೃಷ್ಟಿ ಮಾಡಿ, ಹೊಸ ಲಾಭ ಹಂಚಿಕೆ ಅನುಪಾತದಲ್ಲಿ ತೆಗೆದು ಹಾಕಿದರೆ, ಅದರ ನಿವ್ವಳ ಪರಿಣಾಮವು ಒಂದೇಯಾಗಿರುತ್ತದೆ.

| | | | | |
|---|---|---|---|---|
| (a) | ಕೀರ್ತಿಮೌಲ್ಯ ಖಾತೆ ಖರ್ಚು | | 90,000 | – |
| | ದಿನೇಶನ ಬಂಡವಾಳ ಖಾತೆಗೆ | | – | 33,750 |
| | ರಮೇಶನ ಬಂಡವಾಳ ಖಾತೆಗೆ | | – | 33,750 |
| | ಸುರೇಶನ ಬಂಡವಾಳ ಖಾತೆಗೆ | | – | 22,500 |
| | (ಕೀರ್ತಿಮೌಲ್ಯವನ್ನು ಹಳೆ ಅನುಪಾತದಲ್ಲಿ ಸೃಷ್ಟಿಸಿದ್ದು) | | | |
| (b) | ದಿನೇಶನ ಬಂಡವಾಳ ಖಾತೆ ಖರ್ಚು | | 30,000 | – |
| | ರಮೇಶನ ಬಂಡವಾಳ ಖಾತೆ ಖರ್ಚು | | 30,000 | – |
| | ಸುರೇಶನ ಬಂಡವಾಳ ಖಾತೆ ಖರ್ಚು | | 30,000 | – |
| | ಕೀರ್ತಿಮೌಲ್ಯ ಖಾತೆಗೆ | | – | 90,000 |
| | (ಕೀರ್ತಿಮೌಲ್ಯವನ್ನು ಹೊಸ ಲಾಭ ಅನುಪಾತದಲ್ಲಿ ತೆಗೆದು ಹಾಕಿದ್ದು) | | | |

**ಖರ್ಚು** **ಬಂಡವಾಳ ಖಾತೆಗಳು** **ಜಮೆ**

| ದಿನಾಂಕ | ವಿವರ | ದಿನೇಶ ₹ | ರಮೇಶ ₹ | ಸುರೇಶ ₹ | ದಿನಾಂಕ | ವಿವರ | ದಿನೇಶ ₹ | ರಮೇಶ ₹ | ಸುರೇಶ ₹ |
|---|---|---|---|---|---|---|---|---|---|
| | ದಿನೇಶನ ಬಂಡವಾಳ ಖಾತೆ | – | – | 3,750 | | ಹಿಂದಿನಿಂದ ಬಂದ ಶಿಲ್ಕು | 1,00,000 | 80,000 | 70,000 |
| | ರಮೇಶನ ಬಂಡವಾಳಖಾತೆ | – | – | 3,750 | | ಪುನರ್ಮೌಲ್ಯದ ಮೇಲಿನಲಾಭ | 15,000 | 15,000 | 10,000 |
| | ಮುಂದುವರಿದ ಶಿಲ್ಕು | 1,48,750 | 1,28,750 | 92,500 | | ಸಾಮಾನ್ಯ ಮೀಸಲು | 30,000 | 30,000 | 20,000 |
| | | | | | | ಸುರೇಶನ ಬಂಡವಾಳ ಖಾತೆ | 3,750 | 3,750 | – |
| | | **1,48,750** | **1,28,750** | **1,00,000** | | | **1,48,750** | **1,28,750** | **1,00,000** |

**ಏಪ್ರಿಲ್ 01,2015 ರಂದಿನ ಅಢಾವೆ ಪತ್ರಿಕೆ**

| ಜವಾಬ್ದಾರಿಗಳು | | ಮೊತ್ತ ₹ | ಆಸ್ತಿಗಳು | | ಮೊತ್ತ ₹ |
|---|---|---|---|---|---|
| ಸಾಹುಕಾರರು | | 1,50,000 | ಬ್ಯಾಂಕಿನಲ್ಲಿ ನಗದು | | 40,000 |
| ಪಾಲುಗಾರರ ಸಾಲ: | | | ಬರತಕ್ಕ ವಿನಿಮಯ ಪತ್ರಗಳು | | 50,000 |
| ದಿನೇಶ | 40,000 | | ಸಾಲಗಾರರು | 60,000 | |
| ರಮೇಶ | 30,000 | 70,000 | ಕಳೆ:ಸ.ಸಾ.ಕಾಯ್ದಿರಿಸುವಿಕೆ | 3,000 | 57,000 |
| ಬಂಡವಾಳ: | | | ದಾಸ್ತಾನು | | 1,12,000 |
| ದಿನೇಶ | 1,48,750 | | ಸ್ಥಿರ ಆಸ್ತಿಗಳು | | 3,31,000 |
| ರಮೇಶ | 1,28,750 | | | | |
| ಸುರೇಶ | 92,500 | 3,70,000 | | | |
| | | **5,90,000** | | | **5,90,000** |

**ಈ ಅಧ್ಯಾಯದಲ್ಲಿ ಪರಿಚಯಿಸಲಾದ ಪದಗಳು : Terms Introduced in the Chapter**

1. ಪಾಲುದಾರಿಕೆ ಸಂಸ್ಥೆಯ ಪುನರ್ ರಚಿಸುವುದು.
2. ಆಸ್ತಿಗಳ ಪುನರ್ ಮೌಲ್ಯಮಾಪನ ಮಾಡುವುದು.
3. ಜವಾಬ್ದಾರಿಗಳ ಪುನರ್ ನಿರ್ಧರಣೆ.
4. ಹಂಚಿಕೆ ಮಾಡದ ಮತ್ತು ಸಂಚಿತಗೊಂಡ ಲಾಭ ಮತ್ತು ನಷ್ಟಗಳು.
5. ಸಂಚಿತಗೊಂಡ ನಷ್ಟಗಳು.
6. ಕೀರ್ತಿಮೌಲ್ಯ.
7. ಲಾಭ ಹಂಚಿಕೆ ಅನುಪಾತ.
8. ಮೀಸಲುಗಳು.
9. ಪುನರ್ಮೌಲ್ಯ ಖಾತೆ.
10. ತ್ಯಾಗದ ಅನುಪಾತ
11. ಲಾಭ ಹಂಚಿಕೆ ಅನುಪಾತದಲ್ಲಿಯ ಬದಲಾವಣೆ.

## ಸಾರಾಂಶ (Summary)

1. **ಹೊಸ ಪಾಲುದಾರನ ಪ್ರವೇಶದ ಸಮಯದಲ್ಲಿ ಹೊಂದಾಣಿಕೆ ಮಾಡಬೇಕಾದ ಅಂಶಗಳು:**

   ಹೊಸ ಪಾಲುದಾರನ ಪ್ರವೇಶದ ಸಮಯದಲ್ಲಿ ಹೊಂದಾಣಿಕೆ ಮಾಡಬೇಕಾದ ಅಂಶಗಳೆಂದರೆ;

   ಕೀರ್ತಿಮೌಲ್ಯ, ಆಸ್ತಿ ಮತ್ತು ಜವಾಬ್ದಾರಿಗಳ ಪುನರ್‌ಮೌಲ್ಯ, ಮೀಸಲು ಮತ್ತು ಸಂಚಿತಗೊಂಡ ಲಾಭ ಮತ್ತು ನಷ್ಟಗಳು ಮತ್ತು ಹಳೆ ಪಾಲುದಾರರು ಒಪ್ಪಿಕೊಂಡಲ್ಲಿ ಬಂಡವಾಳಗಳ ಹೊಂದಾಣಿಕೆ.

2. **ಹೊಸ ಲಾಭ ಹಂಚಿಕೆ ಅನುಪಾತವನ್ನು ನಿರ್ಧರಿಸುವದು ಮತ್ತು ತ್ಯಾಗದ ಅನುಪಾತವನ್ನು ಲೆಕ್ಕಹಾಕುವುದು:** ಹೊಸ ಪಾಲುದಾರನು ತನ್ನ ಲಾಭದ ಪಾಲನ್ನು ಹಳೆ ಪಾಲುದಾರರಿಂದ ಪಡೆಯುತ್ತಾನೆ. ಇದು ಹಳೆ ಪಾಲುದಾರರ ಲಾಭದ ಪಾಲನ್ನು ಕಡಿಮೆಗೊಳಿಸುತ್ತದೆ. ಆದ್ದರಿಂದ ಪುನರ್ ರಚಿತ ಸಂಸ್ಥೆಯಲ್ಲಿ ಹೊಸ ಲಾಭ ಹಂಚಿಕೆಯ ಅನುಪಾತವನ್ನು ನಿರ್ಧರಿಸುವ ಸಮಸ್ಯೆಯು, ಹೊಸ ಲಾಭ ಹಂಚಿಕೆಯಲ್ಲಿ ಹಳೆ ಪಾಲುದಾರರ ಪಾಲು ಎಷ್ಟೆಂದು ನಿರ್ಧರಿಸುವುದನ್ನು ಅವಲಂಬಿಸಿದೆ. ಹೊಸ ಪಾಲುದಾರನ ಪಾಲೆಷ್ಟು ಎಂಬುದು ಮತ್ತು ಅದನ್ನು ಅವನು ಹಳೆಯ ಪಾಲುದಾರರಿಂದ ಹೇಗೆ ಪಡೆದುಕೊಳ್ಳುತ್ತಾನೆಂಬುದನ್ನು ಕೊಡಲಾಗಿರುತ್ತದೆ. ಹಳೆಯ ಪಾಲುದಾರರ ಹೊಸ ಪಾಲನ್ನು ನಿರ್ಧರಿಸಲು ಅವರ ಹಳೆಯ ಪಾಲಿನಿಂದ ಅವರು ತ್ಯಾಗ ಮಾಡಿದ ಪ್ರಮಾಣವನ್ನು ಕಳೆದು ಕಂಡು ಹಿಡಿಯಲಾಗುತ್ತದೆ. ಹಳೆಯ ಪಾಲುದಾರರು ತಮ್ಮ ಪಾಲಿನ ಲಾಭದಲ್ಲಿನ ಎಷ್ಟು ಭಾಗವನ್ನು ಹೊಸ ಪಾಲುದಾರನಿಗೆ ಬಿಟ್ಟುಕೊಡುತ್ತಾರೋ ಅದನ್ನೇ ತ್ಯಾಗದ ಅನುಪಾತ ಎನ್ನುವರು. ಅದು ಸಾಮಾನ್ಯವಾಗಿ ಹಳೆಯ ಪಾಲು ಹಂಚಿಕೆ ಅನುಪಾತವೇ ಆಗಿರುತ್ತದೆ. ಆದಾಗ್ಯೂ ಹೊಸ ಒಪ್ಪಂದ ಪತ್ರದಲ್ಲಿ ನಿರ್ಧರಿಸಿದಂತೆ ಅದು ಭಿನ್ನವಾಗಿರಲೂಬಹುದು.

3. **ಕೀರ್ತಿಮೌಲ್ಯದ ಪರಿಗಣನೆ:** ಕೀರ್ತಿಮೌಲ್ಯವು ಅಗೋಚರ ಆಸ್ತಿಯಾಗಿರುತ್ತದೆ ಮತ್ತು ಅದು ಮಾಲೀಕರಿಗೆ ಸಂಬಂಧಿಸಿರುತ್ತದೆ. ಹೊಸ ಪಾಲುದಾರನ ಪ್ರವೇಶದ ಸಮಯದಲ್ಲಿ ಸಂಸ್ಥೆಯ ಕೀರ್ತಿಮೌಲ್ಯ ಹಳೆ ಪಾಲುದಾರರಿಗೆ ಸಂಬಂಧಿಸಿರುತ್ತದೆ. ಇದರ ಅರ್ಥವೇನೆಂದರೆ, ಹೊಸ ಪಾಲುದಾರನನ್ನು ಸೇರಿಸಿಕೊಳ್ಳುವ ಸಮಯದಲ್ಲಿ ಕೀರ್ತಿಮೌಲ್ಯಕ್ಕಾಗಿ ಹಳೆ ಪಾಲುದಾರರ ಬಂಡವಾಳ ಖಾತೆಗಳಲ್ಲಿ ಕೆಲವು ಹೊಂದಾಣಿಕೆಗಳನ್ನು ಮಾಡಲೇಬೇಕಾಗುತ್ತದೆ. ಕಾರಣ, ಹೊಸ ಪಾಲುದಾರನು ಕೀರ್ತಿಮೌಲ್ಯದಲ್ಲಿ ಯಾವುದೇ ಪಾಲನ್ನು ಪಡೆದುಕೊಳ್ಳಲು ಅರ್ಹನಲ್ಲ. ಯಾಕೆಂದರೆ ಅದರ ಕೀರ್ತಿಮೌಲ್ಯವನ್ನು ಸಂಸ್ಥೆಗೆ ಪಾಲುದಾರನು ಸೇರಿಕೊಳ್ಳುವ ಮುಂಚೆ ಯಾವುದೇ ಪಾವತಿ ಮಾಡದೇ ಗಳಿಸಲಾಗಿರುತ್ತದೆ. ಹೊಸ ಪಾಲುದಾರನು ತನ್ನ ಪಾಲಿನ ಕೀರ್ತಿಮೌಲ್ಯಕ್ಕಾಗಿ ಪಾವತಿ ಮಾಡಿದ ಮೊತ್ತವನ್ನು ಕೀರ್ತಿಮೌಲ್ಯ ಎಂದು ಕರೆಯುತ್ತಾರೆ. ಸಂಸ್ಥೆಯ ಲೆಕ್ಕದ ದೃಷ್ಟಿಯಿಂದ ಹೊಸ ಪಾಲುದಾರನ ಪ್ರವೇಶದ ಸಮಯದಲ್ಲಿ ಕೀರ್ತಿ ಮೌಲ್ಯವನ್ನು ಪರಿಗಣಿಸುವಾಗ ಸಂಸ್ಥೆಯು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಹೊಸ ಪಾಲುದಾರನು ಸಂಸ್ಥೆಗೆ ತಂದಿರುವ ಅಧಿಕ ಮೊತ್ತವನ್ನು ಹಳೆ ಪಾಲುದಾರರು ತ್ಯಾಗದ ಅನುಪಾತದಲ್ಲಿ ಹಂಚಿಕೊಳ್ಳುತ್ತಾರೆ. ಒಂದು ವೇಳೆ ಹೊಸ ಪಾಲುದಾರನು ತನ್ನ ಪಾಲಿನ ಕೀರ್ತಿಮೌಲ್ಯಕ್ಕಾಗಿ ಅಧಿಕ ಮೊತ್ತವನ್ನು ನಗದಾಗಿ ತರಲು ತಪ್ಪಿದರೆ, ಆತನ ಪಾಲಿನ ಕೀರ್ತಿಮೌಲ್ಯದ ಮೊತ್ತವನ್ನು ಆತನ ಬಂಡವಾಳ ಖಾತೆಗೆ ಖರ್ಚು ಹಾಕಿ, ಹಳೆ ಪಾಲುದಾರರ ಬಂಡವಾಳ ಖಾತೆಗಳಿಗೆ ತ್ಯಾಗದ ಅನುಪಾತದಲ್ಲಿ ಜಮೆ ಮಾಡುವ ಮೂಲಕ ಸರಿದೂಗಿಸಲಾಗುವುದು.

4. **ಆಸ್ತಿಗಳ ಪುನರ್ ಮೌಲ್ಯಮಾಪನ ಮತ್ತು ಹೊಣೆಗಾರಿಕೆಗಳ ಪುನರ್‌ನಿರ್ಧರಣೆಗೆ ಸಂಬಂಧಿಸಿದ ಹೊಂದಾಣಿಕೆಗಳು:** ಒಂದು ವೇಳೆ ಪಾಲುದಾರನ ಪ್ರವೇಶ ಸಂದರ್ಭದಲ್ಲಿ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಪುನರ್ ಮೌಲ್ಯ ಮಾಪನ ಅಥವಾ ಕೆಲವು ಆಸ್ತಿ/ ಹೊಣೆಗಾರಿಕೆಗಳ ದಾಖಲಿಸದಿರುವಿಕೆ, ಇತ್ಯಾದಿಗಳನ್ನು ಹೊಂದಾಣಿಕೆ ಮಾಡಲು ಪುನರ್‌ಮೌಲ್ಯ ಖಾತೆಯನ್ನು ತೆರೆಯಲಾಗುತ್ತದೆ. ಈ ಕ್ರಿಯೆಯಿಂದಾಗುವ ಲಾಭ ಅಥವಾ ಹಾನಿಯನ್ನು ಹಳೆಯ ಪಾಲುದಾರರಿಗೆ ಅವರ ಹಳೆಯ ಲಾಭ ಹಂಚಿಕೆ ಅನುಪಾತದಲ್ಲಿ ಹಂಚಲಾಗುತ್ತದೆ.

5. **ಮೀಸಲುಗಳು ಮತ್ತು ಕೂಡಿಟ್ಟ ಲಾಭ/ ಹಾನಿಗಳ ಕುರಿತ ಹೊಂದಾಣಿಕೆಗಳು:** ಹೊಸ ಪಾಲುದಾರನ ಸೇರ್ಪಡೆಯಾದಾಗ ಸಂಸ್ಥೆಯ ಲೆಕ್ಕ ಪುಸ್ತಕಗಳಲ್ಲಿ ಯಾವುದೇ ಮೀಸಲುಗಳು ಮತ್ತು ಕೂಡಿಟ್ಟ ಲಾಭ–ಹಾನಿಗಳು ಇದ್ದರೆ ಅವುಗಳನ್ನು ಹಳೆ ಲಾಭ ಹಂಚಿಕೆ ಅನುಪಾತದಲ್ಲಿ ಹಳೆಯ ಪಾಲುದಾರರ ಬಂಡವಾಳ / ಚಾಲ್ತಿ ಖಾತೆಗೆ ವರ್ಗಾಯಿಸಲಾಗುವುದು.

6. **ಪಾಲುದಾರರ ಬಂಡವಾಳವನ್ನು ನಿರ್ಧರಿಸುವುದು/ ಹೊಂದಾಣಿಕೆಗೊಳಿಸುವುದು:** ಒಂದು ವೇಳೆ ಪರಸ್ಪರ ಸಮ್ಮತಿ ಇದ್ದಲ್ಲಿ ಪಾಲುದಾರರ ಬಂಡವಾಳವು ಅವರ ಹೊಸ ಲಾಭ ಹಂಚಿಕೆ ಅನುಪಾತದ ಪ್ರಮಾಣದಲ್ಲಿರುವಂತೆ ಹೊಂದಾಣಿಕೆಗೊಳಿಸಲಾಗುವುದು. ಅಂತಹ ಪ್ರಕರಣಗಳಲ್ಲಿ ಸಾಮಾನ್ಯವಾಗಿ ಹಳೆಯ ಪಾಲುಗಾರರ ಹೊಸ ಬಂಡವಾಳ ಪ್ರಮಾಣವನ್ನು ನಿರ್ಧರಿಸಲು ಹೊಸ ಪಾಲುದಾರನ ಬಂಡವಾಳವನ್ನೇ ಆಧಾರವಾಗಿ ಇಟ್ಟುಕೊಳ್ಳಲಾಗುವುದು ಮತ್ತು ಅವಶ್ಯಕ ಹೊಂದಾಣಿಕೆಗಳನ್ನು ಪಾಲುದಾರರು ನಗದು ಪೂರೈಸುವ ಮೂಲಕ ಅಥವಾ ಚಾಲ್ತಿ ಖಾತೆಗೆ ವರ್ಗಾಯಿಸುವ ಮೂಲಕ ಮಾಡಲಾಗುವುದು. ಹೊಸ ಪಾಲುದಾರನ ಪ್ರವೇಶದ ನಂತರ ಎಲ್ಲಾ ಪಾಲುದಾರರ ಹೊಸ ಬಂಡವಾಳ ಪ್ರಮಾಣವನ್ನು ನಿರ್ಧರಿಸಲು ಬೇರೆ ಬೇರೆ ಆಧಾರಗಳು ಲಭ್ಯ ಇವೆ. ಉದಾರಹಣೆಗೆ: ಹೊಸ ಪಾಲುದಾರನ ಆಗಮನದ ನಂತರ ಸಂಸ್ಥೆಯು ಹೊಂದಬೇಕಾದ ಒಟ್ಟು ಬಂಡವಾಳ ಪ್ರಮಾಣವನ್ನು ನಿರ್ಧರಿಸಿ ಅದನ್ನು ಎಲ್ಲಾ ಪಾಲುದಾರರ ನಡುವೆ ಹಂಚಿಕೆ ಮಾಡುವ ವಿಧಾನವು ಇದೆ.

7. **ಲಾಭ ಹಂಚಿಕೆ ಅನುಪಾತದಲ್ಲಿ ಬದಲಾವಣೆ:** ಕೆಲವು ಸಲ ಪಾಲುದಾರರು ತಮ್ಮ ಪ್ರಸಕ್ತದ ಲಾಭ ಹಂಚಿಕೆ ಅನುಪಾತದಲ್ಲಿ ಬದಲಾವಣೆ ಮಾಡಲು ತೀರ್ಮಾನಿಸಬಹುದು. ಹಾಗಾದಾಗ, ಹೊಸ ಲಾಭ ಹಂಚಿಕೆ ಅನುಪಾತದಿಂದ ಕೆಲವು ಪಾಲುದಾರರಿಗೆ ಲಾಭವಾಗುವುದು ಮತ್ತು ಕೆಲವರಿಗೆ ಹಾನಿಯೂ ಆಗಬಹುದು. ಅಂತಹ ಸಂದರ್ಭದಲ್ಲಿ ಲಾಭ ಹೊಂದುವ ಪಾಲುದಾರನು ಹಾನಿಗೊಳಗಾಗುವ ಪಾಲುದಾರನ ಲಾಭ ಪ್ರಮಾಣವನ್ನು ಖರೀದಿಸುವ ಮೂಲಕ ಆತನ ಹಾನಿಯನ್ನು ಸರಿದೂಗಿಸುವನು. ಪರಿಹಾರಾರ್ಥವಾಗಿ ನಗದು ಸಂದಾಯ ಮಾಡುವುದಲ್ಲದೆ ಹಂಚಿಕೆ ಮಾಡದೇ ಕೂಡಿಟ್ಟ ಲಾಭಗಳು ಮತ್ತು ಮೀಸಲುಗಳು, ಆಸ್ತಿಗಳ ಪುನರ್ ಮೌಲ್ಯಮಾಪನ ಮತ್ತು ಹೊಣೆಗಾರಿಕೆಗಳ ಪುನರ್ ನಿರ್ಧರಣೆ, ಮುಂತಾದವುಗಳನ್ನು ಬಂಡವಾಳ ಖಾತೆಯಲ್ಲಿ ಹೊಂದಾಣಿಕೆ ಮಾಡಬೇಕಾಗುವುದು.

## ಅಭ್ಯಾಸಕ್ಕಾಗಿ ಪ್ರಶ್ನೆಗಳು Questions for Practice

### ಕಿರು ಉತ್ತರದ ಪ್ರಶ್ನೆಗಳು Short Answer Questions

1. ಹೊಸ ಪಾಲುದಾರನ ಪ್ರವೇಶ ಸಂದರ್ಭದಲ್ಲಿ ಮಾಡಬೇಕಾದ ವಿವಿಧ ಹೊಂದಾಣಿಕೆಗಳನ್ನು ಗುರ್ತಿಸಿರಿ.
2. ಹೊಸ ಪಾಲುದಾರನ ಪ್ರವೇಶವಾದಾಗ ಹಳೆಯ ಪಾಲುದಾರರಿಗೂ ಹೊಸ ಲಾಭ ಹಂಚಿಕೆ ಅನುಪಾತ ಕಂಡು ಹಿಡಿಯಬೇಕಾದ ಅವಶ್ಯಕತೆ ಏನಿದೆ?
3. ತ್ಯಾಗದ ಅನುಪಾತ ಎಂದರೇನು ? ಅದನ್ನು ಏಕೆ ಲೆಕ್ಕ ಹಾಕುವಿರಿ?
4. ತ್ಯಾಗದ ಅನುಪಾತವನ್ನು ಯಾವ ಸಂದರ್ಭದಲ್ಲಿ ಉಪಯೋಗಿಸುವಿರಿ?
5. ಲೆಕ್ಕದ ಪುಸ್ತಕದಲ್ಲಿ ಈಗಾಗಲೇ ಕೀರ್ತಿಮೌಲ್ಯ ಇದ್ದು ಹೊಸ ಪಾಲುದಾರನು ತನ್ನ ಪಾಲಿನ ಕೀರ್ತಿಮೌಲ್ಯಕ್ಕಾಗಿ ನಗದು ತಂದಾಗ ಪ್ರಸ್ತುತದಲ್ಲಿರುವ ಕೀರ್ತಿಮೌಲ್ಯವನ್ನು ಹೇಗೆ ಪರಿಗಣಿಸುವಿರಿ?
6. ಹೊಸ ಪಾಲುದಾರನ ಪ್ರವೇಶವಾದಾಗ ಆಸ್ತಿಗಳು ಮತ್ತು ಜವಾಬ್ದಾರಿಗಳ ಪುನರ್ ಮೌಲ್ಯಮಾಪನದ ಅವಶ್ಯಕತೆ ಏನಿದೆ?

### ದೀರ್ಘ ಉತ್ತರದ ಪ್ರಶ್ನೆಗಳು Long Answer Questions

1. ಹೊಸ ಪಾಲುದಾರನ ಪ್ರವೇಶವಾದಾಗ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಪುನರ್ಮೌಲ್ಯ ಮಾಪನ ಮಾಡಲೇಬೇಕೆಂದು ನೀವು ಸಲಹೆ ಕೊಡುವಿರಾ? ಹಾಗಿದ್ದರೆ, ಏಕೆ? ಲೆಕ್ಕದ ಪುಸ್ತಕದಲ್ಲಿ ಇದನ್ನು ಹೇಗೆ ಪರಿಗಣಿಸುವಿರಿ ಎಂಬುದನ್ನು ವಿವರಿಸಿ.
2. ಕೀರ್ತಿಮೌಲ್ಯ ಎಂದರೇನು? ಕೀರ್ತಿಮೌಲ್ಯದ ಮೇಲೆ ಪ್ರಭಾವ ಬೀರುವ ಅಂಶಗಳು ಯಾವವು?
3. ಕೀರ್ತಿಮೌಲ್ಯವನ್ನು ಮೌಲ್ಯೀಕರಿಸುವ ವಿವಿಧ ವಿಧಾನಗಳನ್ನು ವಿವರಿಸಿರಿ.
4. ಎಲ್ಲಾ ಪಾಲುದಾರರ ಬಂಡವಾಳವು ಅವರ ಹೊಸ ಲಾಭ ಹಂಚಿಕೆ ಅನುಪಾತದಲ್ಲಿಯೇ ಇರಬೇಕೆಂದು ನಿರ್ಧರಿಸಿರುವಾಗ ಪ್ರತಿ ಪಾಲುದಾರನ ಹೊಸ ಬಂಡವಾಳ ಪ್ರಮಾಣವನ್ನು ಹೇಗೆ ನಿರ್ಧರಿಸುವಿರಿ? ಉದಾಹರಣೆಗಳನ್ನು ಕೊಡಿರಿ. ಮತ್ತು ಅವಶ್ಯಕ ಹೊಂದಾಣಿಕೆಗಳನ್ನು ಹೇಗೆ ಮಾಡುವಿರಿ ಎಂದು ತಿಳಿಸಿರಿ.

5. ಹೊಸ ಪಾಲುದಾರನು ತನ್ನ ಪಾಲಿನ ಕೀರ್ತಿಮೌಲ್ಯಕ್ಕಾಗಿ ನಗದು ತರಲು ಅಸಮರ್ಥನಾದಾಗ ಕೀರ್ತಿಮೌಲ್ಯವನ್ನು ಹೇಗೆ ಪರಿಗಣಿಸುವಿರಿ ಎಂಬುದನ್ನು ವಿವರಿಸಿರಿ.
6. ಹೊಸ ಪಾಲುದಾರನ ಪ್ರವೇಶವಾದಾಗ ಕೀರ್ತಿಮೌಲ್ಯದ ಪರಿಗಣನೆಯ ವಿವಿಧ ವಿಧಾನಗಳನ್ನು ವಿವರಿಸಿರಿ.
7. ಹೊಸ ಪಾಲುದಾರನು ಪ್ರವೇಶವಾದಾಗ ಕೂಡಿಟ್ಟ ಲಾಭ–ನಷ್ಟಗಳು ಮತ್ತು ಮೀಸಲುಗಳನ್ನು ಹೇಗೆ ಪರಿಗಣಿಸುವಿರಿ?
8. ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಪುನರ್ ಮೌಲ್ಯಮಾಪನ ಮಾಡಿದ ಮೇಲೆ ಲೆಕ್ಕದ ಪುಸ್ತಕದಲ್ಲಿ ಅವು ಯಾವ ಮೌಲ್ಯವನ್ನು ಹೊಂದಿರುತ್ತವೆ ಎಂಬುದನ್ನು ಒಂದು ಕಾಲ್ಪನಿಕ ಅಥಾವೆ ಪತ್ರಿಕೆಯೊಂದಿಗೆ ತೋರಿಸಿರಿ.

**ಸಂಖ್ಯಾತ್ಮಕ ಪ್ರಶ್ನೆಗಳು Numerical Questions**

1. A ಮತ್ತು B ಒಂದು ಸಂಸ್ಥೆಯಲ್ಲಿ ಪಾಲುದಾರರಿದ್ದು, ಲಾಭ ಹಾನಿಗಳನ್ನು 3:2 ರ ಅನುಪಾತದಲ್ಲಿ ಹಂಚಿಕೊಳ್ಳುತ್ತಾರೆ. ಅವರು C ಎಂಬುವವರನ್ನು ಲಾಭದಲ್ಲಿ 1/6 ಪಾಲಿಗೆ ಹೊಸ ಪಾಲುದಾರನೆಂದು ಸೇರಿಸಿಕೊಳ್ಳುವರು. ಹೊಸ ಲಾಭ ಹಂಚಿಕೆ ಅನುಪಾತವನ್ನು ಲೆಕ್ಕಹಾಕಿರಿ. **(ಉತ್ತರ: 3 : 2 : 1)**
2. A, B ಮತ್ತು C ಎಂಬ ಪಾಲುದಾರರು 3:2:1 ರ ಅನುಪಾತದಲ್ಲಿ ಲಾಭ ಹಂಚಿಕೊಳ್ಳುತ್ತಿರುವರು. ಅವರು D ಎಂಬುವರನ್ನು ಶೇ 10 ಲಾಭದ ಪಾಲಿಗಾಗಿ ಸಂಸ್ಥೆಗೆ ಸೇರಿಸಿಕೊಂಡರು. ಹೊಸ ಲಾಭ ಹಂಚಿಕೆ ಅನುಪಾತವನ್ನು ಲೆಕ್ಕಹಾಕಿರಿ. **(ಉತ್ತರ: 9 : 6 : 3 : 2)**
3. X ಮತ್ತು Y ಎಂಬ ಪಾಲುದಾರರು 5:3 ರ ಅನುಪಾತದಲ್ಲಿ ಲಾಭ ಹಂಚಿಕೊಳ್ಳುತ್ತಿದ್ದು, Z ಎಂಬುವವರನ್ನು 1/10 ಪಾಲಿಗಾಗಿ ಸೇರಿಸಿಕೊಂಡಿದ್ದು, ಅದನ್ನು ಅವನು X ಮತ್ತು Y ರಿಂದ ಸಮನಾಗಿ ಪಡೆದುಕೊಳ್ಳುವನು. ಹೊಸ ಲಾಭ ಹಂಚಿಕೆ ಅನುಪಾತ ಲೆಕ್ಕ ಹಾಕಿರಿ. **(ಉತ್ತರ: 23 : 13 : 4)**
4. A, B ಮತ್ತು C ಎಂಬ ಪಾಲುದಾರರು ಲಾಭವನ್ನು 2:2:1 ರ ಅನುಪಾತದಲ್ಲಿ ಹಂಚಿಕೊಳ್ಳುತ್ತಿದ್ದು, D ಎಂಬವರನ್ನು 1/8 ಪಾಲಿಗಾಗಿ ಸೇರಿಸಿಕೊಂಡಿದ್ದು, ಅದನ್ನು ಅವನು ಸಂಪೂರ್ಣವಾಗಿ A ನಿಂದ ಪಡೆದುಕೊಳ್ಳುವನು. ಹೊಸ ಲಾಭ ಹಂಚಿಕೆ ಅನುಪಾತ ಕಂಡುಹಿಡಿಯಿರಿ. **(ಉತ್ತರ: 11 : 16 : 8 : 5)**
5. P ಮತ್ತು Q ಎಂಬ ಪಾಲುದಾರರು ಲಾಭವನ್ನು 2:1 ರ ಅನುಪಾತದಲ್ಲಿ ಹಂಚಿಕೊಳ್ಳುತ್ತಿರುವರು. ಅವರು R ಎಂಬುವವರನ್ನು 1/5 ಪಾಲಿಗಾಗಿ ಪಾಲುದಾರಿಕೆಗೆ ಸೇರಿಸಿಕೊಂಡಿದ್ದು, ಅದನ್ನು ಅವನು P ಮತ್ತು Q ಇವರಿಂದ 1:2 ರ ಅನುಪಾತದಲ್ಲಿ ಪಡೆದುಕೊಳ್ಳುವನು. ಹೊಸ ಲಾಭ ಹಂಚಿಕೆ ಅನುಪಾತವನ್ನು ಕಂಡುಹಿಡಿಯಿರಿ. **(ಉತ್ತರ: 3 : 1 : 1)**
6. A, B ಮತ್ತು C ಎಂಬ ಪಾಲುದಾರರು 3:2:2 ರ ಅನುಪಾತದಲ್ಲಿ ಲಾಭ ಹಂಚಿಕೊಳ್ಳುತ್ತಿರುವರು. ಅವರು D ಎಂಬುವರನ್ನು 1/5 ಪಾಲಿಗಾಗಿ ಹೊಸ ಪಾಲುದಾರನೆಂದು ಸೇರಿಸಿಕೊಂಡಿದ್ದು, ಅದನ್ನು ಅವನು A, B ಮತ್ತು C ಇವರಿಂದ ಅನುಕ್ರಮವಾಗಿ 2:2:1 ರ ಅನುಪಾತದಲ್ಲಿ ಪಡೆದುಕೊಳ್ಳುವನು. ಹೊಸ ಲಾಭ ಹಂಚಿಕೆ ಅನುಪಾತ ಕಂಡು ಹಿಡಿಯಿರಿ. **(ಉತ್ತರ: 61 : 36 : 43 : 35)**
7. A ಮತ್ತು B ಎಂಬ ಪಾಲುದಾರರು ಲಾಭವನ್ನು 3:2 ರ ಅನುಪಾತದಲ್ಲಿ ಹಂಚಿಕೊಳ್ಳುತ್ತಿರುವರು. ಅವರು C ಯನ್ನು 3/7 ಪಾಲಿಗಾಗಿ ಸಂಸ್ಥೆಗೆ ಸೇರಿಸಿಕೊಂಡಿದ್ದು, ಅದನ್ನು ಅವನು A ನಿಂದ 2/7 ಮತ್ತು B ನಿಂದ 1/7 ಪಡೆದುಕೊಳ್ಳುವನು. ಹೊಸ ಲಾಭ ಹಂಚಿಕೆ ಅನುಪಾತವನ್ನು ಕಂಡು ಹಿಡಿಯಿರಿ. **(ಉತ್ತರ: 11 : 9 : 15)**
8. A, B ಮತ್ತು C ಎಂಬ ಪಾಲುದಾರರು ಲಾಭವನ್ನು 3:3:2 ರ ಅನುಪಾತದಲ್ಲಿ ಹಂಚಿಕೊಳ್ಳುತ್ತಿರುವರು. ಅವರು D ಎಂಬುವವರನ್ನು 4/7 ಲಾಭದ ಪಾಲಿಗಾಗಿ ಹೊಸ ಪಾಲುದಾರನೆಂದು ಸಂಸ್ಥೆಗೆ ಸೇರಿಸಿಕೊಂಡರು. D ಯು ತನ್ನ ಪಾಲನ್ನು A ನಿಂದ 2/7 B ನಿಂದ 1/7 ಮತ್ತು C ನಿಂದ 1/7 ದಷ್ಟು ಪಡೆದುಕೊಳ್ಳುವನು. ಹೊಸ ಲಾಭ ಹಂಚಿಕೆ ಅನುಪಾತ ಕಂಡು ಹಿಡಿಯಿರಿ. **(ಉತ್ತರ: 5 : 13 : 6 : 32)**
9. ರಾಧಾ ಮತ್ತು ರುಕ್ಮಿಣಿ ಎಂಬ ಪಾಲುದಾರರು 3:2 ರ ಅನುಪಾತದಲ್ಲಿ ಲಾಭ ಹಂಚಿಕೊಳ್ಳುತ್ತಿರುವರು. ಅವರು ಗೋಪಿಯನ್ನು ಹೊಸ ಪಾಲುದಾರನಾಗಿ ಸೇರಿಸಿಕೊಂಡರು. ರಾಧಾಳು ತನ್ನ ಪಾಲಿನ 1/3 ರಷ್ಟನ್ನು ಮತ್ತು ರುಕ್ಮಿಣಿಯು ತನ್ನ ಪಾಲಿನ 1/4 ರಷ್ಟನ್ನು ಗೋಪಿಗಾಗಿ ಬಿಟ್ಟುಕೊಟ್ಟರು. ಹೊಸ ಲಾಭ ಹಂಚಿಕೆ ಅನುಪಾತ ಕಂಡು ಹಿಡಿಯಿರಿ. **(ಉತ್ತರ: 4 : 3 : 3)**

10. ಸಿಂಗ್, ಗುಪ್ತಾ ಮತ್ತು ಖಾನ್ ಎಂಬುವವರು 3:2:3 ರ ಅನುಪಾತದಲ್ಲಿ ಲಾಭ ಹಂಚಿಕೊಳ್ಳುತ್ತಿರುವ ಪಾಲುದಾರರಾಗಿದ್ದಾರೆ. ಅವರು ಜೈನ್ ಎಂಬುವವರನ್ನು ಹೊಸ ಪಾಲುದಾರನೆಂದು ಸೇರಿಸಿಕೊಂಡರು. ಸಿಂಗ್‌ನು ತನ್ನ ಪಾಲಿನ 1/3 ರಷ್ಟು, ಗುಪ್ತಾನು ತನ್ನ ಪಾಲಿನ 1/4 ರಷ್ಟನ್ನು ಮತ್ತು ಖಾನ್‌ನು ತನ್ನ ಪಾಲಿನ 1/5 ರಷ್ಟನ್ನು ಜೈನ್‌ನಿಗೆ ಬಿಟ್ಟು ಕೊಟ್ಟರು. ಹೊಸ ಲಾಭ ಹಂಚಿಕೆ ಅನುಪಾತ ಕಂಡು ಹಿಡಿಯಿರಿ.

**(ಉತ್ತರ: 20 : 15 : 24 : 21)**

11. ಸಂದೀಪ ಮತ್ತು ನವದೀಪ ಎಂಬುವವರು ಸಂಸ್ಥೆಯ ಪಾಲುದಾರರಿದ್ದು, 5:3 ರ ಅನುಪಾತದಲ್ಲಿ ಲಾಭ ಹಂಚಿಕೊಳ್ಳುತ್ತಿರುವರು. ಅವರು 'C' ಯನ್ನು ಸಂಸ್ಥೆಗೆ ಹೊಸದಾಗಿ ಪಾಲುದಾರನನ್ನಾಗಿ ಸೇರಿಸಿಕೊಂಡರು ಮತ್ತು ಹೊಸ ಲಾಭ ಹಂಚಿಕೆ ಅನುಪಾತವು 4:2:1 ಎಂದು ಒಪ್ಪಿಕೊಂಡಿರುವರು. ತ್ಯಾಗದ ಅನುಪಾತವನ್ನು ಕಂಡುಹಿಡಿಯಿರಿ. **(ಉತ್ತರ: 1 : 1)**

12. ರಾವ್ ಮತ್ತು ಸ್ವಾಮಿ ಸಂಸ್ಥೆಯ ಪಾಲುದಾರರಿದ್ದು, 3:2 ರ ಅನುಪಾತದಲ್ಲಿ ಲಾಭ-ನಷ್ಟವನ್ನು ಹಂಚಿಕೊಳ್ಳುತ್ತಿರುವರು. ಅವರು ರವಿ ಎಂಬುವವರನ್ನು 1/8 ಲಾಭದ ಪಾಲಿಗಾಗಿ ಹೊಸ ಪಾಲುದಾರನೆಂದು ಸೇರಿಸಿಕೊಂಡರು. ರಾವ್ ಮತ್ತು ಸ್ವಾಮಿರವರ ಹೊಸ ಲಾಭ ಹಂಚಿಕೆಯ ಅನುಪಾತವು 4:3 ಇರತಕ್ಕದ್ದೆಂದು ತೀರ್ಮಾನಿಸಲಾಗಿದೆ. ಹೊಸ ಲಾಭ ಹಂಚಿಕೆ ಅನುಪಾತ ಮತ್ತು ತ್ಯಾಗದ ಅನುಪಾತಗಳನ್ನು ಲೆಕ್ಕ ಹಾಕಿರಿ.

**(ಉತ್ತರ: ಹೊಸ ಲಾಭ ಹಂಚಿಕೆ ಅನುಪಾತ 4:3:1 ಮತ್ತು ತ್ಯಾಗದ ಅನುಪಾತ 4:1)**

13. ಹಿಂದಿನ 5 ವರ್ಷಗಳ ಸರಾಸರಿ ಲಾಭದ 4 ವರ್ಷಗಳ ಖರೀದಿ ಆಧಾರದಲ್ಲಿ ಕೀರ್ತಿ ಮೌಲ್ಯವನ್ನು ಕಂಡು ಹಿಡಿಯಿರಿ. ಹಿಂದಿನ 5 ವರ್ಷಗಳ ಲಾಭವು ಈ ಕೆಳಗಿನಂತೆ ಇರುತ್ತದೆ.

| ವರ್ಷ | ₹ |
|---|---|
| 2011 | 40,000 |
| 2012 | 50,000 |
| 2013 | 60,000 |
| 2014 | 50,000 |
| 2015 | 60,000 |

**(ಉತ್ತರ: ₹ 2,08,000)**

14. ವ್ಯವಹಾರದಲ್ಲಿ ತೊಡಗಿಸಿದ ಬಂಡವಾಳವು ₹ 2,00,000 ಆಗಿದೆ. ತೊಡಗಿಸಿದ ಬಂಡವಾಳದ ಮೇಲೆ ಸಾಮಾನ್ಯ ಪ್ರತಿಫಲದ ದರವು ಶೇ. 15 ಇರುತ್ತದೆ. 2015 ನೇ ವರ್ಷದಲ್ಲಿ ಸಂಸ್ಥೆಯು ₹ 48,000 ಲಾಭವನ್ನು ಗಳಿಸಿದೆ. ಅಧಿಕ ಲಾಭದ 3 ವರ್ಷಗಳ ಖರೀದಿ ಆಧರಿಸಿ ಕೀರ್ತಿ ಮೌಲ್ಯವನ್ನು ಕಂಡು ಹಿಡಿಯಿರಿ.

**(ಉತ್ತರ: ₹ 54,000)**

15. ರಾಮ ಮತ್ತು ಭರತರ ಪುಸ್ತಕವು ದಿನಾಂಕ 31-12-2016 ರಂದು ₹ 5,00,000 ಬಂಡವಾಳ ತೊಡಗಿಸಿರುವುದನ್ನು ತೋರಿಸುತ್ತದೆ. ಮತ್ತು ಕಳೆದ 5 ವರ್ಷಗಳ ಲಾಭವು : 2015 – ₹ 40,000, 2014 – ₹ 50,000, 2013 – ₹ 55,000, 2012– ₹ 70,000 ಮತ್ತು 2011 – ₹ 85,000 ಇರುತ್ತದೆ. ಸಾಮಾನ್ಯ ಪ್ರತಿಫಲದ ದರವು ಶೇ. 10 ಎಂದು ಊಹಿಸಿ ಕಳೆದ 5 ವರ್ಷಗಳ ಸರಾಸರಿ ಅಧಿಕ ಲಾಭದ ಮೂರು ವರ್ಷಗಳ ಖರೀದಿ ಆಧರಿಸಿ ಕೀರ್ತಿಮೌಲ್ಯವನ್ನು ಕಂಡು ಹಿಡಿಯಿರಿ. **(ಉತ್ತರ: ₹ 30,000)**

16. ರಾಜನ್ ಮತ್ತು ರಜನಿ ಇವರು ಒಂದು ಸಂಸ್ಥೆಯಲ್ಲಿ ಪಾಲುದಾರರಿದ್ದು, ಅವರ ಬಂಡವಾಳವು; ರಾಜನ್ ₹ 3,00,000, ರಜನಿ ₹ 2,00,000 ಇರುತ್ತದೆ. 2015ನೇ ವರ್ಷದಲ್ಲಿ ಸಂಸ್ಥೆಯು ₹ 1,50,000 ಲಾಭ ಗಳಿಸಿದೆ. ಸಾಮಾನ್ಯ ಪ್ರತಿಫಲದ ದರವು ಶೇ. 20 ಎಂದು ಭಾವಿಸಿ ಸಂಸ್ಥೆಯ ಕೀರ್ತಿ ಮೌಲ್ಯವನ್ನು ಕಂಡು ಹಿಡಿಯಿರಿ.

**(ಉತ್ತರ: ₹ 2,50,000)**

17. ಒಂದು ಸಂಸ್ಥೆಯು ಕಳೆದ ಕೆಲವು ವರ್ಷಗಳಲ್ಲಿ ಗಳಿಸಿದ ಸರಾಸರಿ ಲಾಭವು ₹ 1,00,000 ಇರುತ್ತದೆ. ಸಂಸ್ಥೆಯ ಆಸ್ತಿಗಳು ₹ 10,00,000 ಮತ್ತು ಅದರ ಬಾಹ್ಯ ಹೊಣೆಗಾರಿಕೆಗಳು ₹ 1,80,000 ಆಗಿದ್ದರೆ, ಸಾಮಾನ್ಯ

ಪ್ರತಿಫಲದ ದರವು ಶೇ.10 ಎಂದು ಭಾವಿಸಿ ಬಂಡವಾಳೀಕರಣ ವಿಧಾನದಲ್ಲಿ ಸಂಸ್ಥೆಯ ಕೀರ್ತಿಮೌಲ್ಯವನ್ನು ಕಂಡು ಹಿಡಿಯಿರಿ. **(ಉತ್ತರ: ₹ 1,80,000)**

18. ವರ್ಮಾ ಮತ್ತು ಶರ್ಮಾ ಇವರು ಒಂದು ಸಂಸ್ಥೆಯ ಪಾಲುದಾರರಿದ್ದು ಲಾಭ–ನಷ್ಟವನ್ನು 5:3 ರ ಅನುಪಾತದಲ್ಲಿ ಹಂಚಿಕೊಳ್ಳುತ್ತಿರುವರು. ಅವರು ಘೋಶ್ ಎಂಬುವವರನ್ನು 1/5 ಪಾಲಿಗಾಗಿ ಹೊಸ ಪಾಲುದಾರನೆಂದು ಸೇರಿಸಿಕೊಂಡರು. ಘೋಶ್‌ನು ಬಂಡವಾಳವೆಂದು ₹20,000 ಮತ್ತು ಕೀರ್ತಿಮೌಲ್ಯದ ತನ್ನ ಪಾಲಿಗಾಗಿ ₹ 4,000 ನಗದು ತಂದಿರುವನು. ಈ ಕೆಳಗಿನ ಸಂದರ್ಭಗಳಲ್ಲಿ ಅವಶ್ಯಕ ರೋಜು ದಾಖಲೆಗಳನ್ನು ನೀಡಿರಿ:

    [a] ಕೀರ್ತಿಮೌಲ್ಯದ ಹಣವನ್ನು ವ್ಯವಹಾರದಲ್ಲಿಯೇ ಉಳಿಸಿಕೊಂಡಾಗ;

    [b] ಕೀರ್ತಿಮೌಲ್ಯದ ಹಣವನ್ನು ಪೂರ್ತಿಯಾಗಿ ಹಿಂಪಡೆದಾಗ;

    [c] ಕೀರ್ತಿಮೌಲ್ಯದ ಶೇ. 50 ರಷ್ಟನ್ನು ಹಿಂಪಡೆದಾಗ;

    [d] ಕೀರ್ತಿಮೌಲ್ಯವನ್ನು ಖಾಸಗಿಯಾಗಿ ಸಂದಾಯ ಮಾಡಿದಾಗ;

19. A ಮತ್ತು B ಇವರು ಒಂದು ಸಂಸ್ಥೆಯಲ್ಲಿ ಪಾಲುದಾರರಿದ್ದು, ಲಾಭ–ನಷ್ಟವನ್ನು 3:2 ರ ಅನುಪಾತದಲ್ಲಿ ಹಂಚಿಕೊಳ್ಳುತ್ತಿರುವರು. ಅವರು ಲಾಭದ 1/4 ರಷ್ಟು ಪಾಲಿಗೆ 'C' ಎಂಬುವವರನ್ನು ಪಾಲುಗಾರಿಕೆಗೆ ಸೇರಿಸಿಕೊಂಡರು. 'C' ಯು ₹ 30,000 ಗಳನ್ನು ಬಂಡವಾಳವೆಂದು ಮತ್ತು ತನ್ನ ಪಾಲಿನ ಕೀರ್ತಿಮೌಲ್ಯಕ್ಕಾಗಿ ಅಗತ್ಯ ನಗದನ್ನು ತಂದಿರುವನು. ಸಂಸ್ಥೆಯ ಕೀರ್ತಿಮೌಲ್ಯ ₹20,000 ಎಂದು ಮೌಲ್ಯೀಕರಿಸಲಾಗಿದೆ. ಹೊಸ ಲಾಭ ಹಂಚಿಕೆಯ ಅನುಪಾತವು 2:1:1 ಆಗಿರುತ್ತದೆ. A ಮತ್ತು B ರವರು ಕೀರ್ತಿ ಮೌಲ್ಯದ ತಮ್ಮ ಪಾಲನ್ನು ಹಿಂಪಡೆದಿರುವರು. ಅವಶ್ಯಕ ರೋಜು ನಮೂದುಗಳನ್ನು ನೀಡಿರಿ.

20. ಆರತಿ ಮತ್ತು ಭಾರತಿ ಇವರು ಒಂದು ಸಂಸ್ಥೆಯಲ್ಲಿ ಪಾಲುದಾರರಿದ್ದು, 3:2 ರ ಅನುಪಾತದಲ್ಲಿ ಲಾಭವನ್ನು ಹಂಚಿಕೊಳ್ಳುತ್ತಿರುವರು. ಅವರು ಸಂಸ್ಥೆಯ ಲಾಭದ 1/4 ರಷ್ಟು ಪಾಲಿಗೆ ಸಾರಥಿಯವರನ್ನು ಸೇರಿಸಿಕೊಂಡರು. ಸಾರಥಿಯು ₹ 50,000 ಬಂಡವಾಳಕ್ಕಾಗಿ ಮತ್ತು ₹ 10,000 ಗಳನ್ನು ಕೀರ್ತಿಮೌಲ್ಯದ 1/4 ಪಾಲಿಗಾಗಿ ತಂದಿರುವನು. ಆರತಿ ಮತ್ತು ಭಾರತಿರವರ ಪುಸ್ತಕದಲ್ಲಿ ಈಗಾಗಲೇ ಕೀರ್ತಿಮೌಲ್ಯ ₹ 5,000 ಇರುತ್ತದೆ. ಆರತಿ, ಭಾರತಿ ಮತ್ತು ಸಾರಥಿ ಇವರುಗಳ ಹೊಸ ಲಾಭ ಹಂಚಿಕೆಯ ಅನುಪಾತವು 2:1:1 ಆಗಿರುತ್ತದೆ. ಹೊಸ ಸಂಸ್ಥೆಯ ಪುಸ್ತಕದಲ್ಲಿ ಅವಶ್ಯಕ ರೋಜು ದಾಖಲೆಗಳನ್ನು ಬರೆಯಿರಿ.

21. X ಮತ್ತು Y ರವರು ಸಂಸ್ಥೆಯ ಪಾಲುದಾರರಿದ್ದು, ಲಾಭ–ನಷ್ಟವನ್ನು 4:3 ರ ಅನುಪಾತದಲ್ಲಿ ಹಂಚಿಕೊಳ್ಳುತ್ತಿರುವರು. ಅವರು 1/8 ಪಾಲಿಗಾಗಿ Z ಎಂಬುವವರನ್ನು ಸೇರಿಸಿಕೊಂಡರು. Z ರವರು ₹ 20,000 ಗಳನ್ನು ಬಂಡವಾಳಕ್ಕಾಗಿ ಮತ್ತು ₹ 7,000 ಗಳನ್ನು 1/8 ಕೀರ್ತಿಮೌಲ್ಯದ ಪಾಲಿಗಾಗಿ ನಗದು ತಂದಿರುವರು. ತತ್ಪರಿಣಾಮವಾಗಿ X, Y ಮತ್ತು Z ರವರ ಪುಸ್ತಕದಲ್ಲಿ ಕೀರ್ತಿಮೌಲ್ಯ ₹ 40,000 ಎಂದು ತೋರಿಸಲು ನಿರ್ಧರಿಸಿರುವರು. X, Y ಮತ್ತು Z ರವರ ಪುಸ್ತಕದಲ್ಲಿ ಅವಶ್ಯಕ ರೋಜು ದಾಖಲೆಗಳನ್ನು ತೋರಿಸಿರಿ.

22. ಆದಿತ್ಯ ಮತ್ತು ಬಾಲನ್ ಎಂಬ ಪಾಲುದಾರರು 3:2 ರ ಅನುಪಾತದಲ್ಲಿ ಲಾಭ–ನಷ್ಟವನ್ನು ಹಂಚಿಕೊಳ್ಳುತ್ತಿರುವರು. ಅವರು ಕೃಷ್ಣೋಪರನನ್ನು ಇವರನ್ನು ಲಾಭದ 1/4 ಪಾಲಿಗಾಗಿ ಸೇರಿಸಿಕೊಂಡರು. ಹೊಸ ಲಾಭ ಹಂಚಿಕೆ ಅನುಪಾತವು 2:1:1 ಇರಬೇಕೆಂದು ಒಪ್ಪಿರುವರು. ಕೃಷ್ಣೋಪರನು ತನ್ನ ಬಂಡವಾಳಕ್ಕಾಗಿ ₹ 50,000 ಗಳನ್ನು ತಂದಿರುವನು. ಅವನ ಪಾಲಿನ ಕೀರ್ತಿಮೌಲ್ಯವು ₹ 15,000 ಎಂದು ಒಪ್ಪಿಕೊಳ್ಳಲಾಗಿದೆ. ಕೃಷ್ಣೋಪರನು ತನ್ನ ಪಾಲಿನ ಕೀರ್ತಿಮೌಲ್ಯದಲ್ಲಿ ಕೇವಲ ₹ 10,000 ಮಾತ್ರ ತರುವನು. ಸಂಸ್ಥೆಯ ಪುಸ್ತಕದಲ್ಲಿ ಅವಶ್ಯಕ ರೋಜು ದಾಖಲೆಗಳನ್ನು ತೋರಿಸಿರಿ.

23. ಅಮರ್ ಮತ್ತು ಸಮರ್ ಇವರು ಒಂದು ಸಂಸ್ಥೆಯಲ್ಲಿ ಪಾಲುದಾರರಿದ್ದು 3:1 ರ ಅನುಪಾತದಲ್ಲಿ ಲಾಭ–ನಷ್ಟವನ್ನು ಹಂಚಿಕೊಳ್ಳುತ್ತಿರುವರು. ಅವರು ಕನ್ವರನನ್ನು ಲಾಭದ 1/4 ಪಾಲಿಗಾಗಿ ಸೇರಿಸಿಕೊಂಡರು. ಕನ್ವರನು ತನ್ನ ಪಾಲಿನ ಕೀರ್ತಿಮೌಲ್ಯಕ್ಕಾಗಿ ಯಾವುದೇ ನಗದು ತಂದಿರುವುದಿಲ್ಲ. ಕನ್ವರನ ಪ್ರವೇಶವಾದಾಗ ಸಂಸ್ಥೆಯ ಕೀರ್ತಿಮೌಲ್ಯವು ₹ 80,000 ಎಂದು ಮೌಲ್ಯೀಕರಿಸಿದೆ. ಕನ್ವರನ ಪ್ರವೇಶವಾದಾಗ ಕೀರ್ತಿಮೌಲ್ಯಕ್ಕೆ ಸಂಬಂಧಿಸಿದ ಅವಶ್ಯಕ ರೋಜು ದಾಖಲೆಗಳನ್ನು ಬರೆಯಿರಿ.

24. ಮೋಹನ್‌ಲಾಲ ಮತ್ತು ಸೋಹನ್‌ಲಾಲ ಇವರು ಸಂಸ್ಥೆಯಲ್ಲಿ ಪಾಲುದಾರರಿದ್ದು, 3:2 ರ ಅನುಪಾತದಲ್ಲಿ ಲಾಭ–ನಷ್ಟವನ್ನು ಹಂಚಿಕೊಳ್ಳುತ್ತಿರುವರು. ಅವರು ದಿನಾಂಕ: 01–01–2013 ರಂದು 1/4 ಪಾಲಿಗಾಗಿ ರಾಮಲಾಲರನ್ನು ಸೇರಿಸಿಕೊಂಡರು. ಹಿಂದಿನ 4 ವರ್ಷಗಳ ಸರಾಸರಿ ಲಾಭದ 3 ವರ್ಷಗಳ ಖರೀದಿ ಆಧರಿಸಿ ಸಂಸ್ಥೆಯ ಕೀರ್ತಿಮೌಲ್ಯವನ್ನು ಮೌಲ್ಯೀಕರಿಸುವುದೆಂದು ಒಪ್ಪಿಕೊಂಡಿದ್ದು, ಹಿಂದಿನ ವರ್ಷಗಳ ಲಾಭವು; 2012 ರಲ್ಲಿ ₹ 50,000, 2011 ರಲ್ಲಿ ₹ 60,000, 2010 ರಲ್ಲಿ ₹ 90,000 ಮತ್ತು 2009 ರಲ್ಲಿ ₹ 70,000 ಇರುತ್ತದೆ. ರಾಮಲಾಲನು ತನ್ನ ಪಾಲಿನ ಕೀರ್ತಿಮೌಲ್ಯಕ್ಕಾಗಿ ಯಾವುದೇ ನಗದು ತಂದಿರುವುದಿಲ್ಲ. ರಾಮಲಾಲನ ಪ್ರವೇಶವಾದಾಗ ಸಂಸ್ಥೆಯ ಪುಸ್ತಕದಲ್ಲಿ ಕೆಳಗಿನ ಸಂದರ್ಭಗಳಲ್ಲಿ ದಾಖಲಿಸಬೇಕಾದ ರೋಜು ನಮೂದುಗಳನ್ನು ಬರೆಯಿರಿ.

[a] ಕೀರ್ತಿಮೌಲ್ಯ ಈಗಾಗಲೇ ಲೆಕ್ಕ ಪುಸ್ತಕದಲ್ಲಿ ₹ 2,02,500 ಎಂದು ತೋರಿಸಿದ್ದಾಗ;

[b] ಲೆಕ್ಕದ ಪುಸ್ತಕದಲ್ಲಿ ಕೀರ್ತಿಮೌಲ್ಯವು ₹ 2,500 ಎಂದು ತೋರಿಸಿದ್ದಾಗ;

[c] ಲೆಕ್ಕದ ಪುಸ್ತಕದಲ್ಲಿ ಕೀರ್ತಿಮೌಲ್ಯವು ₹ 2,05,000 ಎಂದು ತೋರಿಸಿದ್ದಾಗ;

25. ರಾಜೇಶ್ ಮತ್ತು ಮುಖೇಶರವರು ಒಂದು ಸಂಸ್ಥೆಯಲ್ಲಿ ಸಮಾನ ಪಾಲುದಾರರಾಗಿರುತ್ತಾರೆ. ಅವರು ಹರಿಯವರನ್ನು ಪಾಲುದಾರಿಕೆಗೆ ಸೇರಿಸಿಕೊಂಡರು ಮತ್ತು ರಾಜೇಶ್, ಮುಖೇಶ ಮತ್ತು ಹರಿ ಇವರ ಹೊಸ ಲಾಭ ಹಂಚಿಕೆ ಅನುಪಾತವು 4:3:2 ಆಗಿರುತ್ತದೆ. ಹರಿಯ ಪ್ರವೇಶವಾದಾಗ ಸಂಸ್ಥೆಯ ಕೀರ್ತಿಮೌಲ್ಯವು ₹ 36,000 ಎಂದು ಮೌಲ್ಯೀಕರಿಸಿದೆ. ಹರಿಯು ತನ್ನ ಪಾಲಿನ ಕೀರ್ತಿ ಮೌಲ್ಯಕ್ಕಾಗಿ ನಗದು ತರಲು ಅಸಮರ್ಥನಾಗಿರುವನು. ರಾಜೇಶ್, ಮುಖೇಶ ಮತ್ತು ಹರಿ ಇವರು ತಮ್ಮ ಅಢಾವೆ ಪತ್ರಿಕೆಯಲ್ಲಿ ಕೀರ್ತಿಮೌಲ್ಯವನ್ನು ತೋರಿಸಬಾರದೆಂದು ನಿರ್ಧರಿಸಿರುವರು. ಹರಿಯ ಪ್ರವೇಶವಾದಾಗ ಕೀರ್ತಿಮೌಲ್ಯದ ಪರಿಗಣನೆಗೆ ಸಂಬಂಧಿಸಿದ ಅವಶ್ಯಕ ರೋಜು ದಾಖಲೆಗಳನ್ನು ಬರೆಯಿರಿ.

26. ಅಮರ ಮತ್ತು ಅಕ್ಬರ ಇವರು ಒಂದು ಸಂಸ್ಥೆಯಲ್ಲಿ ಸಮಾನ ಪಾಲುದಾರರಾಗಿರುತ್ತಾರೆ. ಅವರು ಅಂಥೋನಿಯನ್ನು ಹೊಸ ಪಾಲುದಾರನನ್ನಾಗಿ ಸೇರಿಸಿಕೊಂಡರು ಮತ್ತು ಹೊಸ ಲಾಭ ಹಂಚಿಕೆ ಅನುಪಾತವು 4:3:2 ಆಗಿರುವದು. ಅಂಥೋನಿಯ ಪಾಲಿನ ಕೀರ್ತಿಮೌಲ್ಯ ₹ 45,000 ಆಗಿದ್ದರೂ ಅವನು ನಗದು ತಂದಿರುವುದಿಲ್ಲ. ಕೀರ್ತಿಮೌಲ್ಯ ಖಾತೆಯನ್ನು ತೆರೆಯಲಾರದೇ ಕೀರ್ತಿಮೌಲ್ಯವನ್ನು ಹೊಂದಾಣಿಕೆಗೊಳಿಸಲು ನಿರ್ಧರಿಸಲಾಗಿದೆ. ಕೀರ್ತಿ ಮೌಲ್ಯದ ಪರಿಗಣನೆಗೆ ಸಂಬಂಧಿಸಿದ ಅವಶ್ಯಕ ರೋಜು ದಾಖಲೆಗಳನ್ನು ಬರೆಯಿರಿ.

27. ಪಾಲುದಾರಿಕೆ ವ್ಯವಹಾರವನ್ನು ನಡೆಸುತ್ತಿರುವ A ಮತ್ತು B ಎಂಬುವವರ ದಿನಾಂಕ: 31–12–2006 ರಂದಿನ ಅಢಾವೆ ಪತ್ರಿಕೆಯನ್ನು ಈ ಕೆಳಗೆ ಕೊಡಲಾಗಿದೆ. A ಮತ್ತು B ರವರು ಲಾಭ–ನಷ್ಟವನ್ನು 2:1 ರ ಅನುಪಾತದಲ್ಲಿ ಹಂಚಿಕೊಳ್ಳುತ್ತಿರುವರು.

**A ಮತ್ತು B ರವರ ದಿನಾಂಕ: 31–12–2006ರಂದು ಇರುವ ಅಢಾವೆ ಪತ್ರಿಕೆ.**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|---|
| ಕೊಡತಕ್ಕ ಹುಂಡಿಗಳು | | 10,000 | ಕೈಯಲ್ಲಿ ನಗದು | 10,000 |
| ಸಾಹುಕಾರರು | | 58,000 | ಬ್ಯಾಂಕಿನಲ್ಲಿ ನಗದು | 40,000 |
| ಕೊಡಬೇಕಾದ ಖರ್ಚುಗಳು | | 2,000 | ಸಾಲಗಾರರು | 60,000 |
| ಬಂಡವಾಳಗಳು : | | | ದಾಸ್ತಾನು | 40,000 |
| A | 1,80,000 | | ಸ್ಥಾವರ | 1,00,000 |
| B | 1,50,000 | 3,30,000 | ಕಟ್ಟಡಗಳು | 1,50,000 |
| | | **4,00,000** | | **4,00,000** |

ಮೇಲಿನ ಅಢಾವೆ ಪತ್ರಿಕೆಯ ದಿನಾಂಕದಂದು ಈ ಕೆಳಗಿನ ಷರತ್ತುಗಳೊಂದಿಗೆ C ಯನ್ನು ಪಾಲುದಾರನೆಂದು ಸೇರಿಸಿಕೊಂಡರು.

(i) C ಯು ತನ್ನ ಬಂಡವಾಳಕ್ಕಾಗಿ ₹ 1,00,000 ಮತ್ತು 1/4 ಲಾಭದ ಪಾಲಿನ ಕೀರ್ತಿಮೌಲ್ಯಕ್ಕಾಗಿ ₹ 60,000 ನಗದು ತಂದಿರುವನು.

(ii) ಸ್ಥಾವರ ಮೌಲ್ಯವನ್ನು ₹ 1,20,000 ಕ್ಕೆ ಹೆಚ್ಚಿಸಬೇಕು. ಮತ್ತು ಕಟ್ಟಡಗಳ ಮೌಲ್ಯವನ್ನು ಶೇ. 10 ರಷ್ಟು ಹೆಚ್ಚಿಸಬೇಕು.

(iii) ದಾಸ್ತಾನು ಮೌಲ್ಯವು ₹ 4,000 ಅಧಿಕಗೊಂಡಿರುವದಾಗಿ ತಿಳಿದು ಬಂದಿದೆ.

(iv) ಸಾಲಗಾರರ ಮೇಲೆ ಶೇ.5 ರಂತೆ ಕರಡು ಮತ್ತು ಸಂಶಯಾತ್ಮಕ ಸಾಲಗಳ ಕಾಯ್ದಿರಿಸುವಿಕೆಯನ್ನು ಒದಗಿಸಬೇಕು.

(v) ದಾಖಲಾಗದ ಸಾಹುಕಾರರು ₹ 1,000 ರಷ್ಟು ಇದೆ.

ಅವಶ್ಯಕ ರೋಜು ನಮೂದುಗಳನ್ನು ಬರೆದು, ಪುನರ್‌ಮೌಲ್ಯ ಖಾತೆ ಮತ್ತು ಪಾಲುದಾರರ ಬಂಡವಾಳ ಖಾತೆಗಳನ್ನು ಹಾಗೂ C ಯ ಪ್ರವೇಶದ ನಂತರದ ಅಢಾವೆ ಪತ್ರಿಕೆಯನ್ನು ತಯಾರಿಸಿ.

**(ಉತ್ತರ: ಪುನರ್‌ಮೌಲ್ಯದ ಮೇಲಿನ ಲಾಭ ₹ 27,000, ಅಢಾವೆ ಪತ್ರಿಕೆಯ ಒಟ್ಟು ₹ 5,88,000)**

28. ಲೀಲಾ ಮತ್ತು ಮೀತಾ ಇವರು ಒಂದು ಸಂಸ್ಥೆಯಲ್ಲಿ ಪಾಲುದಾರರಿದ್ದು, 5:3 ರ ಅನುಪಾತದಲ್ಲಿ ಲಾಭ–ನಷ್ಟವನ್ನು ಹಂಚಿಕೊಳ್ಳುತ್ತಿರುವರು. ಅವರು ದಿನಾಂಕ: 01–01–2015 ರಂದು ಓಂ ರವರನ್ನು ಹೊಸ ಪಾಲುಗಾರನನ್ನಾಗಿ ಸೇರಿಸಿಕೊಂಡರು. ಓಂ ರವರ ಪ್ರವೇಶದ ದಿನಾಂಕದಂದು ಇರುವ ಲೀಲಾ ಮತ್ತು ಮೀತಾರ ಅಢಾವೆ ಪತ್ರಿಕೆಯು ಸಾಮಾನ್ಯ ಮೀಸಲು ₹ 16,000 ಮತ್ತು ಲಾಭ–ನಷ್ಟದ ಖಾತೆ ₹ 24,000 ( ಜಮೆ) ಶಿಲ್ಕನ್ನು ತೋರಿಸುತ್ತದೆ. ಓಂನ ಪ್ರವೇಶವಾದಾಗ ಇವುಗಳ ಪರಿಗಣನೆಗೆ ಸಂಬಂಧಿಸಿದ ಅವಶ್ಯಕ ರೋಜು ದಾಖಲೆಗಳನ್ನು ಬರೆಯಿರಿ. ಲೀಲಾ, ಮೀತಾ, ಮತ್ತು ಓಂರವರ ನಡುವಿನ ಹೊಸ ಲಾಭ ಹಂಚಿಕೆ ಅನುಪಾತವು 5:3:2 ಆಗಿರುತ್ತದೆ.

29. ಅಮಿತ್ ಮತ್ತು ವಿನಯ್ ಇವರು ಒಂದು ಸಂಸ್ಥೆಯಲ್ಲಿ ಪಾಲುದಾರರಿದ್ದು, 3:1 ರ ಅನುಪಾತದಲ್ಲಿ ಲಾಭ–ನಷ್ಟವನ್ನು ಹಂಚಿಕೊಳ್ಳುತ್ತಿರುವರು. ಅವರು ದಿನಾಂಕ: 01–01–2015 ರಂದು ರಂಜನ್‌ರವರನ್ನು ಪಾಲುದಾರನನ್ನಾಗಿ ಸೇರಿಸಿಕೊಂಡರು. ರಂಜನ್‌ನ ಪ್ರವೇಶವಾದಾಗ ಅಮಿತ್ ಮತ್ತು ವಿನಯ್‌ರ ಲಾಭ–ನಷ್ಟದ ಖಾತೆಯು ₹ 40,000 ಖರ್ಚಿನ ಶಿಲ್ಕು ತೋರಿಸುತ್ತದೆ. ಇದರ ಪರಿಗಣನೆಗೆ ಸಂಬಂಧಿಸಿದ ಅವಶ್ಯಕ ರೋಜು ದಾಖಲೆ ನೀಡಿರಿ.

30. A ಮತ್ತು B ಇವರು ಲಾಭವನ್ನು 3/4 ಮತ್ತು 1/4 ರ ಪ್ರಮಾಣದಲ್ಲಿ ಹಂಚಿಕೊಳ್ಳುತ್ತಿರುವರು. ದಿನಾಂಕ: 31–12–2015 ರಂದು ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ.

**ದಿನಾಂಕ: 31–12–2015 ರಂದು ಇರುವ A ಮತ್ತು B ರವರ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|
| ಸಾಹುಕಾರರು | 41,500 | ಬ್ಯಾಂಕಿನಲ್ಲಿ ನಗದು | 26,500 |
| ಮೀಸಲು ನಿಧಿ | 4,000 | ಬರತಕ್ಕ ಹುಂಡಿಗಳು | 3,000 |
| ಬಂಡವಾಳ ಖಾತೆಗಳು | | ಸಾಲಗಾರರು | 16,000 |
| A | 30,000 | ದಾಸ್ತಾನು | 20,000 |
| B | 16,000 | ಸ್ಥಿರೀಕರಣಗಳು | 1,000 |
| | | ಭೂಮಿ ಮತ್ತು ಕಟ್ಟಡ | 25,000 |
| | **91,500** | | **91,500** |

ಜನೇವರಿ 1, 2016 ರಂದು ಕೆಳಗಿನ ಷರತ್ತುಗಳೊಂದಿಗೆ C ಯನ್ನು ಪಾಲುಗಾರಿಕೆಗೆ ಸೇರಿಸಿಕೊಳ್ಳಲಾಗಿದೆ.

(a) 'C' ಯು ತನ್ನ ಬಂಡವಾಳಕ್ಕಾಗಿ ₹ 10,000 ತರಬೇಕು.

(b) 'C' ಯು ಕೀರ್ತಿ ಮೌಲ್ಯಕ್ಕಾಗಿ ₹ 5,000 ತರತಕ್ಕದ್ದು. ಇದರ ಅರ್ಧ ಮೊತ್ತವನ್ನು A ಮತ್ತು B ಇವರು ಹಿಂಪಡೆಯುವರು.

(c) ದಾಸ್ತಾನು ಮತ್ತು ಸ್ಥಿರೀಕರಣಗಳನ್ನು ಶೇ.10 ರಷ್ಟು ಕಡಿಮೆಗೊಳಿಸಿರಿ. ಸಾಲಗಾರರು ಮತ್ತು ಬರತಕ್ಕ ಹುಂಡಿಗಳ ಮೇಲೆ ಶೇ.5 ರಷ್ಟು ಸಂಶಯಾಸ್ಪದ ಸಾಲಕ್ಕಾಗಿ ಕಾಯ್ದಿರಿಸಿ.

(d) ಭೂಮಿ ಮತ್ತು ಕಟ್ಟಡದ ಮೌಲ್ಯವನ್ನು ಶೇ. 20 ರಷ್ಟು ಅಧಿಕಗೊಳಿಸಿರಿ.

(e) ಸಂಸ್ಥೆಯ ವಿರುದ್ಧ ನಷ್ಟ ಭರಿಸಲು ಹಕ್ಕು ಪ್ರತಿಪಾದಿತ ಹೊಣೆಗಾರಿಕೆಗಾಗಿ ₹ 1,000 ತೆಗೆದಿರಿಸಬೇಕು.

(f) ಸಾಹುಕಾರರ ಮೊತ್ತದಲ್ಲಿ ಕೂಡಿದ ₹ 650 ರ ಬಾಬನ್ನು ಪಡೆದುಕೊಳ್ಳುವ ಸಂಭವ ಇರುವದಿಲ್ಲ. ಆದ್ದರಿಂದ ಅದನ್ನು ತೆಗೆದು ಹಾಕಿರಿ.

A ಮತ್ತು B ರವರ ಲಾಭ ಹಂಚಿಕೆಯ ಅನುಪಾತದಲ್ಲಿ ಯಾವುದೇ ಬದಲಾವಣೆ ಇಲ್ಲವೆಂದು ಭಾವಿಸಿ ಮೇಲಿನ ವಹಿವಾಟುಗಳಿಗಾಗಿ ಸಂಸ್ಥೆಯ ಪುಸ್ತಕದಲ್ಲಿ ರೋಜು ದಾಖಲೆಗಳನ್ನು ಬರೆಯಿರಿ.

'C' ಯ ಪ್ರವೇಶದ ನಂತರದ ಹೊಸ ಅಢಾವೆ ಪತ್ರಿಕೆಯನ್ನು ತಯಾರಿಸಿ

**(ಉತ್ತರ: ಪುನರ್ ಮೌಲ್ಯದ ಲಾಭ ₹ 1,600; ಅಢಾವೆ ಪತ್ರಿಕೆಯ ಒಟ್ಟು ಮೊತ್ತ ₹ 1,05,950).**

31. A ಮತ್ತು B ಇವರು ಒಂದು ಸಂಸ್ಥೆಯಲ್ಲಿ ಪಾಲುದಾರರಿದ್ದು, 3:1 ರ ಅನುಪಾತದಲ್ಲಿ ಲಾಭ–ನಷ್ಟವನ್ನು ಹಂಚಿಕೊಳ್ಳುತ್ತಿರುವರು. ದಿನಾಂಕ: 01–01–2015 ರಂದು 1/4 ಲಾಭದ ಪಾಲಿಗಾಗಿ C ಯನ್ನು ಪಾಲುದಾರನನ್ನಾಗಿ ಸಂಸ್ಥೆಗೆ ಸೇರಿಸಿಕೊಂಡರು. ಅವನು 1/4 ಲಾಭದ ಪಾಲಿಗಾಗಿ ತನ್ನ ಬಂಡವಾಳವೆಂದು ₹ 20,000 ತಂದನು. ಕೀರ್ತಿಮೌಲ್ಯ, ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಪುನರ್‌ಮೌಲ್ಯ ಮಾಪನ ಮುಂತಾದ ಹೊಂದಾಣಿಕೆಗಳನ್ನು ಮಾಡಿದ ಮೇಲೆ A ನ ಬಂಡವಾಳ ₹ 50,000 ಮತ್ತು B ನ ಬಂಡವಾಳ ₹ 12,000 ಇರತಕ್ಕದ್ದೆಂದು ನಿರ್ಧರಿಸಲಾಗಿದೆ. ಪಾಲುದಾರರ ಬಂಡವಾಳಗಳು ಅವರ ಹೊಸ ಲಾಭ ಹಂಚಿಕೆ ಅನುಪಾತಕ್ಕೆ ಅನುಗುಣವಾಗಿ ಇರಬೇಕೆಂದು ಒಪ್ಪಿಕೊಳ್ಳಲಾಗಿದೆ. A ಮತ್ತು B ರವರ ಹೊಸ ಬಂಡವಾಳ ಪ್ರಮಾಣವನ್ನು ಲೆಕ್ಕಹಾಕಿರಿ. ಹೊಸ ಲಾಭ ಹಂಚಿಕೆ ಅನುಪಾತದ ಪ್ರಮಾಣದಲ್ಲಿ ಬಂಡವಾಳ ಇರುವುದಕ್ಕೆ A ಮತ್ತು B ರವರು ಅವಶ್ಯಕ ನಗದನ್ನು ಪೂರೈಸುವರು ಅಥವಾ ಹೆಚ್ಚುವರಿಯಾಗಿದ್ದಲ್ಲಿ ಹಿಂಪಡೆಯುವರು ಎಂದು ಭಾವಿಸಿ ಅವಶ್ಯಕ ರೋಜು ದಾಖಲೆಗಳನ್ನು ಬರೆಯಿರಿ.

32. ಪಿಂಕಿ, ಕುಮಾರ ಮತ್ತು ರೂಪಾ ಇವರು ಒಂದು ಸಂಸ್ಥೆಯಲ್ಲಿ ಪಾಲುದಾರರಿದ್ದು, ಲಾಭ–ನಷ್ಟಗಳನ್ನು 3:2:1 ರ ಅನುಪಾತದಲ್ಲಿ ಹಂಚಿಕೊಳ್ಳುತ್ತಿರುವರು. 1/4 ಲಾಭದ ಪಾಲಿಗಾಗಿ ಸೀಮಾಳನ್ನು ಹೊಸ ಪಾಲುದಾರಳೆಂದು ಸೇರಿಸಿಕೊಂಡರು. ಅದನ್ನು ಅವಳು ಪಿಂಕಿಯಿಂದ 1/8 ಮತ್ತು ಕುಮಾರ ಮತ್ತು ರೂಪಾರಿಂದ ತಲಾ 1/16 ಪಡೆದುಕೊಂಡಳು. ಸೀಮಾಳ ಪ್ರವೇಶದ ನಂತರ ಹೊಸ ಸಂಸ್ಥೆಯ ಒಟ್ಟು ಬಂಡವಾಳವು ₹ 2,40,000 ಇರತಕ್ಕದ್ದು. ಹೊಸ ಸಂಸ್ಥೆಯ ಒಟ್ಟು ಬಂಡವಾಳದ 1/4 ಕ್ಕೆ ಸಮನಾದ ಮೊತ್ತವನ್ನು ಸೀಮಾಳು ನಗದಾಗಿ ತರಬೇಕು. ಹಳೆಯ ಪಾಲುದಾರರ ಬಂಡವಾಳವು ಅವರ ಹೊಸ ಲಾಭ ಹಂಚಿಕೆ ಅನುಪಾತಕ್ಕೆ ಅನುಗುಣವಾಗಿ ಇರುವಂತೆ ಹೊಂದಾಣಿಕೆಗೊಳಿಸಬೇಕು. ಕೀರ್ತಿಮೌಲ್ಯ ಹಾಗೂ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಪುನರ್‌ಮೌಲ್ಯ ಮಾಪನಕ್ಕೆ ಸಂಬಂಧಿಸಿದ ಹೊಂದಾಣಿಕೆಗಳನ್ನು ಮಾಡಿದ ನಂತರ ಪಿಂಕಿಯ ಬಂಡವಾಳವು ₹ 80,000, ಕುಮಾರನ ಬಂಡವಾಳವು ₹ 30,000 ಮತ್ತು ರೂಪಾಳ ಬಂಡವಾಳವು ₹ 20,000 ಇರುತ್ತದೆ.

ಎಲ್ಲಾ ಪಾಲುದಾರರ ಬಂಡವಾಳ ಪ್ರಮಾಣವನ್ನು ಲೆಕ್ಕ ಹಾಕಿರಿ ಮತ್ತು ಪಾಲುದಾರರ ನಡುವಿನ ಒಪ್ಪಂದದಂತೆ ಬಂಡವಾಳದ ಹೊಂದಾಣಿಕೆಗಳನ್ನು ಮಾಡಿ ಅವಶ್ಯಕ ರೋಜು ದಾಖಲೆಗಳನ್ನು ಬರೆಯಿರಿ.

33. ಅನುಕ್ರಮವಾಗಿ $\frac{6}{14}:\frac{5}{14}:\frac{3}{14}$ ರ ಅನುಪಾತದಲ್ಲಿ ಲಾಭನಷ್ಟವನ್ನು ಹಂಚಿಕೊಳ್ಳುತ್ತಿರುವ ಅರುಣ, ಬಬ್ಲೂ ಮತ್ತು ಚೇತನ್ ಇವರ ಅಢಾವೆ ಪತ್ರಿಕೆಯು ಈ ಕೆಳಗಿನಂತಿರುತ್ತದೆ.

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|---|
| ಸಾಹುಕಾರರು | | 9,000 | ಭೂಮಿ ಮತ್ತು ಕಟ್ಟಡಗಳು | 24,000 |
| ಕೊಡತಕ್ಕ ಹುಂಡಿಗಳು | | 3,000 | ಪೀಠೋಪಕರಣ | 3,500 |
| ಬಂಡವಾಳ ಖಾತೆಗಳು : | | | ದಾಸ್ತಾನು | 14,000 |
| ಅರುಣ | 19,000 | | ಸಾಲಗಾರರು | 12,600 |
| ಬಬ್ಲೂ | 16,000 | | ನಗದು | 900 |
| ಚೇತನ | 8,000 | 43,000 | | |
| | | **55,000** | | **55,000** |

ಈ ಕೆಳಗಿನ ಶರತ್ತುಗಳ ಮೇರೆಗೆ 1/8 ಪಾಲು ಕೊಡಲು ಒಪಿಕೊಂಡು ದೀಪಕ್‌ನನ್ನು ಪಾಲುದಾರಿಕೆಗೆ ಸೇರಿಸಿಕೊಂಡರು.

(a) ದೀಪಕ್‌ನು ಕೀರ್ತಿ ಮೌಲ್ಯಕ್ಕಾಗಿ ₹ 4,200 ಮತ್ತು ತನ್ನ ಬಂಡವಾಳಕ್ಕಾಗಿ ₹ 7,000 ತರತಕ್ಕದ್ದು.

(b) ಪೀಠೋಪಕರಣಗಳ ಮೇಲೆ ಶೇ. 12 ರಂತೆ ಸವಕಳಿ ತೆಗೆಯಿರಿ.

(c) ದಾಸ್ತಾನನ್ನು ಶೇ. 10 ರಷ್ಟು ಕಡಿಮೆಗೊಳಿಸಿರಿ.

(d) ಶೇ 5 ರಷ್ಟು ಸಂಶಯಾತ್ಮಕ ಸಾಲಗಳ ಕಾಯ್ದಿರಿಸುವಿಕೆಯನ್ನು ಒದಗಿಸಿರಿ.

(e) ಭೂಮಿ ಮತ್ತು ಕಟ್ಟಡದ ಮೌಲ್ಯವನ್ನು ₹ 31,000 ಗಳಿಗೆ ಹೆಚ್ಚಿಸಬೇಕು.

(f) ಹಳೆಯ ಪಾಲುದಾರರು ತಮ್ಮ ಹಳೆಯ ಲಾಭ ಹಂಚಿಕೆ ಪ್ರಮಾಣದಲ್ಲಿಯೇ ಮುಂದುವರಿಯುವರೆಂದು ತಿಳಿದು ದೀಪಕ್‌ನ ಬಂಡವಾಳದ ಪ್ರಮಾಣ ಮತ್ತು ಅವನ ಲಾಭದ ಪಾಲು ಆಧರಿಸಿ ಬಂಡವಾಳ ಖಾತೆಗಳನ್ನು ಹೊಂದಾಣಿಕೆಗೊಳಿಸಬೇಕು. ಅದಕ್ಕಾಗಿ ಹಳೆಯ ಪಾಲುದಾರರು ಸಂದರ್ಭಾನುಸಾರ ಅಗತ್ಯ ನಗದು ತರಬೇಕು ಅಥವಾ ಹಿಂಪಡೆಯಬೇಕು. ನಗದು ಖಾತೆ, ಲಾಭ–ನಷ್ಟದ ಹೊಂದಾಣಿಕೆ ಖಾತೆ (ಪುನರ್‌ಮೌಲ್ಯ ಖಾತೆ) ಮತ್ತು ಹೊಸ ಸಂಸ್ಥೆಯ ಆರಂಭಿಕ ಅಢಾವೆ ಪತ್ರಿಕೆಯನ್ನು ಇವುಗಳನ್ನು ತಯಾರಿಸಿ.

**(ಉತ್ತರ: ಪುನರ್ ಮೌಲ್ಯದ ಲಾಭ ₹ 4,550, ಅಢಾವೆ ಪತ್ರಿಕೆಯ ಒಟ್ಟು ಮೊತ್ತ ₹ 68,000)**

34. ಆಜಾದ ಮತ್ತು ಬಬ್ಲಿ ಇವರು ಒಂದು ಸಂಸ್ಥೆಯಲ್ಲಿ ಪಾಲುದಾರರಿದ್ದು, 2:1 ರ ಅನುಪಾತದಲ್ಲಿ ಲಾಭ–ನಷ್ಟಗಳನ್ನು ಹಂಚಿಕೊಳ್ಳುತ್ತಿರುವರು. ಲಾಭದಲ್ಲಿ 1/4 ಪಾಲಿಗಾಗಿ ಚಿಂತನ್‌ನನ್ನು ಸಂಸ್ಥೆಗೆ ಸೇರಿಸಿಕೊಂಡರು. ಚಿಂತನ್‌ನು ತನ್ನ ಬಂಡವಾಳಕ್ಕಾಗಿ ₹ 30,000 ತಂದನು. ಆಜಾದ ಮತ್ತು ಬಬ್ಲಿ ಇವರ ಬಂಡವಾಳವು ಅವರ ಲಾಭ ಹಂಚಿಕೆ ಅನುಪಾತದಲ್ಲಿರುವಂತೆ ಹೊಂದಾಣಿಕೆ ಮಾಡಬೇಕು. ಚಿಂತನ್‌ನ ಪ್ರವೇಶಕ್ಕಿಂತ ಮೊದಲು ದಿನಾಂಕ: 31–12–2015 ರಂದು ಅಜಾದ ಮತ್ತು ಬಬ್ಲಿ ಇವರ ಅಢಾವೆ ಪತ್ರಿಕೆಯು ಈ ಕೆಳಗಿನಂತೆ ಇರುತ್ತದೆ.

**ದಿನಾಂಕ: 31–12–2015 ರಂದು ಇರುವ ಅಜಾದ ಮತ್ತು ಬಬ್ಲಿ ಇವರ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|---|
| ಸಾಹುಕಾರರು | | 8,000 | ಕೈಯಲ್ಲಿ ನಗದು | 2,000 |
| ಕೊಡತಕ್ಕ ಹುಂಡಿಗಳು | | 4,000 | ಬ್ಯಾಂಕಿನಲ್ಲಿ ನಗದು | 10,000 |
| ಸಾಮಾನ್ಯ ಮೀಸಲು | | 6,000 | ಸಾಲಗಾರರು | 8,000 |
| ಬಂಡವಾಳ ಖಾತೆಗಳು : | | | ದಾಸ್ತಾನು | 10,000 |
| ಅಜಾದ | 50,000 | | ಪೀಠೋಪಕರಣ | 5,000 |
| ಬಬ್ಲಿ | 32,000 | 82,000 | ಯಂತ್ರೋಪಕರಣ | 25,000 |
| | | | ಕಟ್ಟಡಗಳು | 40,000 |
| | | **1,00,000** | | **1,00,000** |

ಈ ಕೆಳಗಿನಂತೆ ಒಪ್ಪಿಕೊಳ್ಳಲಾಗಿದೆ.

(i) ಚಿಂತನನು ತನ್ನ ಪಾಲಿನ ಕೀರ್ತಿಮೌಲ್ಯಕ್ಕಾಗಿ ₹ 12,000 ತರಬೇಕು.

(ii) ಕಟ್ಟಡಗಳ ಮೌಲ್ಯವು ₹ 45,000 ಮತ್ತು ಯಂತ್ರೋಪಕರಣ ಮೌಲ್ಯವು ₹ 23,000 ಎಂದು ಮೌಲ್ಯೀಕರಿಸಿದೆ.

(iii) ಸಂಶಯಾತ್ಮಕ ಸಾಲಗಳ ಕಾಯ್ದಿರಿಸುವಿಕೆಗಾಗಿ ಸಾಲಗಾರರ ಮೇಲೆ ಶೇ.6 ರಷ್ಟು ತೆಗೆದಿರಿಸಬೇಕು.

(iv) ಚಾಲ್ತಿ ಖಾತೆಗಳನ್ನು ತೆರೆಯುವದರ ಮೂಲಕ ಆಜಾದ ಮತ್ತು ಬಬ್ಲಿ ಇವರ ಬಂಡವಾಳ ಖಾತೆಗಳನ್ನು ಹೊಂದಾಣಿಕೆಗೊಳಿಸಬೇಕು.

ಅವಶ್ಯಕ ರೋಜು ದಾಖಲೆಗಳನ್ನು ಬರೆದು, ಖಾತೆಗಳನ್ನು ತೋರಿಸಿರಿ ಮತ್ತು ಪಾಲುದಾರನ ಪ್ರವೇಶದ ನಂತರದ ಅಢಾವೆ ಪತ್ರಿಕೆಯನ್ನು ತಯಾರಿಸಿರಿ.

**(ಉತ್ತರ: ಪುನರ್‌ಮೌಲ್ಯದ ಲಾಭ ₹ 2,520, ಅಢಾವೆ ಪತ್ರಿಕೆ ಒಟ್ಟು ಮೊತ್ತ ₹ 1,44,520)**

35] ಆಶಿಶ್ ಮತ್ತು ದತ್ತಾ ಇವರು ಒಂದು ಸಂಸ್ಥೆಯಲ್ಲಿ ಪಾಲುದಾರರಾಗಿದ್ದು, 3:2 ರ ಅನುಪಾತದಲ್ಲಿ ಲಾಭ ಹಂಚಿಕೊಳ್ಳುತ್ತಿರುವರು. ದಿನಾಂಕ: 01–01–2015 ರಂದು ಲಾಭದಲ್ಲಿಯ 1/5 ಪಾಲಿಗಾಗಿ ವಿಮಲ್‌ರವರನ್ನು ಸಂಸ್ಥೆಗೆ ಸೇರಿಸಿಕೊಂಡರು. ದಿ: 01–01–2015 ರಂದು ಆಶಿಶ್ ಮತ್ತು ದತ್ತಾ ಇವರ ಅಢಾವೆ ಪತ್ರಿಕೆಯು ಈ ಕೆಳಗಿನಂತಿರುತ್ತದೆ.

**ದಿನಾಂಕ: 01–01–2015 ರಂದು ಇರುವ ಆಶಿಶ್ ಮತ್ತು ದತ್ತಾ ಇವರ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | ಮೊತ್ತ ₹ | ಆಸ್ತಿಗಳು | | ಮೊತ್ತ ₹ |
|---|---|---|---|---|
| ಸಾಹುಕಾರರು | 15,000 | ಭೂಮಿ ಮತ್ತು ಕಟ್ಟಡಗಳು | | 35,000 |
| ಕೊಡತಕ್ಕ ಹುಂಡಿಗಳು | 10,000 | ಸ್ಥಾವರ | | 45,000 |
| ಆಶಿಶ್ ಬಂಡವಾಳ | 80,000 | ಸಾಲಗಾರರು | 22,000 | |
| ದತ್ತಾನ ಬಂಡವಾಳ | 35,000 | ಕಳೆ: ಕಾಯ್ದಿರಿಸಿದ್ದು | 2,000 | 20,000 |
| | | ದಾಸ್ತಾನು | | 35,000 |
| | | ನಗದು | | 5,000 |
| | **1,40,000** | | | **1,40,000** |

ಕೆಳಗಿನಂತೆ ಒಪ್ಪಲಾಗಿದೆ

(i) ಭೂಮಿ ಮತ್ತು ಕಟ್ಟಡ ಮೌಲ್ಯವನ್ನು ₹ 15,000 ರಷ್ಟು ಹೆಚ್ಚಿಸಬೇಕು.

(ii) ಸ್ಥಾವರದ ಮೌಲ್ಯವನ್ನು ₹ 10,000 ದಷ್ಟು ಹೆಚ್ಚಿಸಬೇಕು.

(iii) ಸಂಸ್ಥೆಯ ಕೀರ್ತಿಮೌಲ್ಯವು ₹ 20,000 ಎಂದು ಮೌಲ್ಯೀಕರಿಸಿದೆ.

(iv) ಹೊಸ ಸಂಸ್ಥೆಯ ಒಟ್ಟು ಬಂಡವಾಳದ 1/5 ರಷ್ಟನ್ನು ವಿಮಲನು ತನ್ನ ಬಂಡವಾಳವೆಂದು ತರಬೇಕು. ಸಂಸ್ಥೆಯ ಒಟ್ಟು ಬಂಡವಾಳವು ₹ 2,00,000 ಇರಬೇಕು. ಅವಶ್ಯಕವಾದ ರೋಜು ದಾಖಲೆಗಳನ್ನು ಬರೆದು, ವಿಮಲ್‌ನ ಪ್ರವೇಶದ ನಂತರದ ಸಂಸ್ಥೆಯ ಆಢಾವೆ ಪತ್ರಿಕೆಯನ್ನು ತಯಾರಿಸಿ

**(ಉತ್ತರ: ಪುನರ್‌ಮೌಲ್ಯದ ಲಾಭ ₹ 25,000, ಅಢಾವೆ ಪತ್ರಿಕೆ ಒಟ್ಟು ₹ 2,25,000)**

**ನಿಮ್ಮ ತಿಳುವಳಿಕೆಯನ್ನು ಪರಿಕ್ಷಿಸಿಕೊಳ್ಳುವುದಕ್ಕೆ ಪರಿಶೀಲನಾ ಪಟ್ಟಿ**

**Check List to Check your understanding**

ನಿಮ್ಮ ತಿಳುವಳಿಕೆಯನ್ನು ಪರೀಕ್ಷಿಸಿಕೊಳ್ಳಿ – I

1 (a), 2 (a), 3 (b).

ನಿಮ್ಮ ತಿಳುವಳಿಕೆಯನ್ನು ಪರೀಕ್ಷಿಸಿಕೊಳ್ಳಿ – II

1 (c), 2 (b), 3 (c), 4 (b), 5 (b).

* * *

# ಪಾಲುದಾರಿಕೆ ಸಂಸ್ಥೆಯ ಪುನರ್‌ರಚನೆ – ಪಾಲುದಾರನ ನಿವೃತ್ತಿ / ನಿಧನ

# Reconstitution of a Partnership Firm - Retirement/Death of a Partner

# 4

**ಕಲಿಕಾ ಉದ್ದೇಶಗಳು**
**Learning Objectives**

**ಈ ಅಧ್ಯಾಯವನ್ನು ಅಭ್ಯಸಿಸಿದ ನಂತರ ನೀವು ಏನನ್ನು ತಿಳಿಯುತ್ತೀರೆಂದರೆ:**

- ಪಾಲುದಾರನ ನಿವೃತ್ತಿ / ನಿಧನದ ನಂತರ ಉಳಿದ ಪಾಲುದಾರರ ಗಳಿಕೆ ಅನುಪಾತ ಹಾಗೂ ಹೊಸ ಲಾಭ ಹಂಚಿಕೆಯ ಅನುಪಾತವನ್ನು ಲೆಕ್ಕ ಹಾಕುವುದು;
- ಪಾಲುದಾರನ ನಿವೃತ್ತಿ / ನಿಧನವಾದಾಗ ಕೀರ್ತಿ ಮೌಲ್ಯದ ಲೆಕ್ಕದ ಪರಿಗಣನೆಯನ್ನು ವರ್ಣಿಸುವಿರಿ;
- ಆಸ್ತಿಗಳ ಮತ್ತು ಹೊಣೆಗಾರಿಕೆಗಳ ಮರುಮೌಲ್ಯಮಾಪನದ ಲೆಕ್ಕದ ಪದ್ಧತಿಯ ಪರಿಗಣನೆಯನ್ನು ವಿವರಿಸುವಿರಿ;
- ದಾಖಲಾಗದ ಆಸ್ತಿಗಳು ಮತ್ತು ಹೊಣೆಗಾರಿಕೆಗಳಗೆ ಸಂಬಂಧಿಸಿದ ಅವಶ್ಯಕ ನಮೂದುಗಳನ್ನು ಮಾಡುವಿರಿ;
- ಸಂಚಯವಾದ ಲಾಭ ಅಥವಾ ನಷ್ಟಗಳಿಗೆ ಅವಶ್ಯಕ ಹೊಂದಾಣಿಕೆಗಳನ್ನು ಮಾಡುವಿರಿ;
- ನಿವೃತ್ತಿಯಾಗುತ್ತಿರುವ / ನಿಧನ ಹೊಂದುತ್ತಿರುವ ಪಾಲುದಾರನ ಸಂಸ್ಥೆಯ ಮೇಲಿನ ಹಕ್ಕು ಸಾಧನೆಯನ್ನು ಕಂಡು ಹಿಡಿಯುವಿರಿ ಮತ್ತು ಅದನ್ನು ಪಾವತಿಸುವ ಪದ್ಧತಿಯನ್ನು ವಿವರಿಸುವಿರಿ;
- ಅವಶ್ಯವಿದ್ದಲ್ಲಿ ನಿವೃತಿಯಾಗುತ್ತಿರುವ ಪಾಲುದಾರನ ಸಾಲದ ಖಾತೆಯನ್ನು ತಯಾರಿಸುವಿರಿ ಮತ್ತು
- ಪಾಲುದಾರನ ಮರಣದ ಸಂದರ್ಭದಲ್ಲಿ ಮೃತ ಪಾಲುದಾರನ ವಾರಸುದಾರರ ಖಾತೆ ಮತ್ತು ಪುನರ್ ರಚಿತ ಸಂಸ್ಥೆಯ ಅಢಾವೆ ಪತ್ರಿಕೆಯನ್ನು ತಯಾರಿಸುವಿರಿ.

ಪಾಲುದಾರನ ನಿವೃತ್ತಿ ಅಥವಾ ಮರಣವೂ ಕೂಡ ಪಾಲುದಾರಿಕೆ ಸಂಸ್ಥೆಯೊಂದರ ಪುನರ್ ರಚನೆಗೆ ಕಾರಣವಾಗುತ್ತದೆ ಎಂದು ನೀವು ಕಲಿತಿರುವಿರಿ. ಪಾಲುದಾರನ ನಿವೃತ್ತಿ ಅಥವಾ ಮರಣ ಹೊಂದಿದಾಗ, ಅಸ್ತಿತ್ವದಲ್ಲಿರುವ ಪಾಲುದಾರಿಕೆ ಒಪ್ಪಂದ ಪತ್ರವು ಕೊನೆಗೊಳುತ್ತದೆ ಮತ್ತು ಅದರ ಸ್ಥಳದಲ್ಲಿ ಹೊಸ ಪಾಲುದಾರಿಕೆ ಒಪ್ಪಂದ ಪತ್ರವನ್ನು ರಚಿಸುವ ಅವಶ್ಯಕತೆ ಉಂಟಾಗುತ್ತದೆ. ಆದ್ದರಿಂದ ಉಳಿದ ಪಾಲುದಾರರು ಬದಲಾದ ಶರತ್ತು ಮತ್ತು ನಿಬಂಧನೆಗಳಂತೆ ತಮ್ಮ ವ್ಯವಹಾರ ನಡೆಸುವುದನ್ನು ಮುಂದುವರೆಸುತ್ತಾರೆ. ನಿವೃತ್ತಿಯ ಸಮಯದಲ್ಲಿ ಅಥವಾ ನಿಧನದ ಘಟನೆಯಲ್ಲಿನ ಲೆಕ್ಕದ ಪರಿಗಣನೆಯಲ್ಲಿ ಅಷ್ಟೊಂದು ವ್ಯತ್ಯಾಸವಿರುವುದಿಲ್ಲ. ಎರಡೂ ಸಂದರ್ಭಗಳಲ್ಲಿ ನಾವು ಕೀರ್ತಿ ಮೌಲ್ಯ, ಆಸ್ತಿಗಳ ಮತ್ತು ಹೊಣೆಗಾರಿಕೆಗಳ ಮರು ಮೌಲ್ಯಮಾಪನ ಮತ್ತು ಸಂಚಿತ ಲಾಭ ಮತ್ತು ನಷ್ಟಗಳನ್ನು ವರ್ಗಾಯಿಸುವುದಕ್ಕೆ ಸಂಬಂಧಿಸಿದ ಅವಶ್ಯಕ ಹೊದಾಣಿಕೆಗಳನ್ನು ಮಾಡಿದ ನಂತರ ನಿವೃತ್ತಿ ಹೊಂದಿದ ಪಾಲುದಾರನಿಗೆ (ನಿವೃತ್ತಿಯ ಸಂದರ್ಭದಲ್ಲಿ) ಮತ್ತು ಕಾಯ್ದೆಬದ್ಧ ವಾರಸುದಾರರಿಗೆ (ಪಾಲುದಾರನ ಮರಣದ ಘಟನೆಯಲ್ಲಿ) ಪಾವತಿಸಬೇಕಾದ ಮೊತ್ತವನ್ನು ನಿರ್ಧರಿಸಬೇಕಾಗುತ್ತದೆ. ಇದಲ್ಲದೆ, ಉಳಿದ ಪಾಲದಾರರರ ಹೊಸ ಲಾಭ ಹಂಚಿಕೆಯ ಅನುಪಾತವನ್ನು ಮತ್ತು ಲಾಭಗಳಿಕೆಯ ಅನುಪಾತವನ್ನು ಕೂಡ ನಾವು ಲೆಕ್ಕ ಹಾಕಬೇಕಾಗುತ್ತದೆ. ಇದು ಈ ಎಲ್ಲ ವಿಷಯಗಳನ್ನು ವಿವರವಾಗಿ ಒಳಗೊಂಡಿರುತ್ತದೆ.

## 4.1 ನಿವೃತ್ತ / ನಿಧನ ಹೊಂದಿದ ಪಾಲುದಾರನಿಗೆ ಪಾವತಿಸಬೇಕಾದ ಮೊತ್ತವನ್ನು ಕಂಡು ಹಿಡಿಯುವುದು Ascertaining the amount due to Retiring/Deceased Partner

ನಿವೃತ್ತ ಪಾಲುದಾರನಿಗೆ(ನಿವೃತ್ತಿಯಾದಲ್ಲಿ) ಮತ್ತು / ಕಾಯ್ದೆಬದ್ಧ ವಾರಸುದಾರರಿಗೆ (ನಿಧನವಾದಲ್ಲಿ) ಪಾವತಿಬೇಕಾದ ಮೊತ್ತವು ಈ ಕೆಳಗಿನವುಗಳನ್ನು ಒಳಗೊಂಡಿರುತ್ತದೆ:

(i) ಆತನ ಬಂಡವಾಳ ಖಾತೆಯ ಜಮೆ ಶಿಲ್ಕು;

(ii) ಆತನ ಚಾಲ್ತಿ ಖಾತೆಯ ಜಮೆ ಶಿಲ್ಕು (ಇದ್ದಲ್ಲಿ);

(iii) ಕೀರ್ತಿ ಮೌಲ್ಯದಲ್ಲಿನ ಆತನ ಪಾಲು;

(iv) ಸಂಚಿತ ಲಾಭಗಳಲ್ಲಿನ (ಮೀಸಲುಗಳಲ್ಲಿನ) ಆತನ ಪಾಲು;

(v) ಆಸ್ತಿ ಮತ್ತು ಹೊಣೆಗಾರಿಕೆಗಳ ಮರು ಮೌಲ್ಯ ಮಾಪನದ ಲಾಭದಲ್ಲಿನ ಆತನ ಪಾಲು;

(vi) ನಿವೃತ್ತಿ / ಮರಣದ ದಿನಾಂಕದ ವರೆಗಿನ ಲಾಭದಲ್ಲಿನ ಆತನ ಪಾಲು;

(vii) ನಿವೃತ್ತಿ / ಮರಣದ ದಿನಾಂಕದ ವರೆಗೆ ಕೊಡಬೇಕಾಗಿದ್ದರೆ, ಆತನ ಬಂಡವಾಳದ ಮೇಲಿನ ಬಡ್ಡಿ ಮತ್ತು

(viii) ನಿವೃತ್ತಿ / ಮರಣದ ದಿನಾಂಕದ ವರೆಗೆ ಆತನಿಗೆ ಪಾವತಿಸಬೇಕಾದ ವೇತನ, ದಲ್ಲಾಳಿ, ಇದ್ದಲ್ಲಿ ಮಾತ್ರ

**ಆತನ ಪಾಲಿನಲ್ಲಿ, ಕೆಳಗಿನ ಅಂಶಗಳನ್ನು ಕಳೆಯಲಾಗುತ್ತದೆ (ಇದ್ದಲ್ಲಿ ಮಾತ್ರ).**

(i) ಆತನ ಚಾಲ್ತಿ ಖಾತೆಯ ಖರ್ಚು ಶಿಲ್ಕು (ಇದ್ದಲ್ಲಿ);

(ii) ತೆಗೆದು ಹಾಕಲಾಗುವ ಕೀರ್ತಿ ಮೌಲ್ಯದಲ್ಲಿನ ಆತನ ಪಾಲು (ಅವಶ್ಯವಿದ್ದಲ್ಲಿ);

(iii) ಸಂಚಿತ ನಷ್ಟಗಳಲ್ಲಿನ ಆತನ ಪಾಲು;

(iv) ಆಸ್ತಿ ಮತ್ತು ಹೊಣೆಗಾರಿಕೆಗಳ ಮರು ಮೌಲ್ಯ ಮಾಪನದ ನಷ್ಟದಲ್ಲಿನ ಆತನ ಪಾಲು;

(v) ನಿವೃತ್ತಿ / ನಿಧನದ ದಿನಾಂಕದ ವರೆಗಿನ ನಷ್ಟದಲ್ಲಿನ ಆತನ ಪಾಲು;

(vi) ನಿವೃತ್ತಿ / ನಿಧನದ ದಿನಾಂಕದ ವರೆಗಿನ ಆತನ ಹಿಂಪಡೆತಗಳು;

(vii) ನಿವೃತ್ತಿ / ನಿಧನದ ದಿನಾಂಕದ ವರೆಗಿನ ಆತನ ಹಿಂಪಡೆತಗಳ ಮೇಲಿನ ಬಡ್ಡಿ ;

**ಹೀಗಾಗಿ ಪಾಲುದಾರನ ಪ್ರವೇಶದಲ್ಲಿರುವಂತೆ ಪಾಲುದಾರನ ನಿವೃತ್ತಿ ಅಥವಾ ನಿಧನವಾದಾಗ ಲೆಕ್ಕ ಪತ್ರಗಳಲ್ಲಿ ಒಳಗೊಂಡಿರುವ ವಿವಿಧ ಅಂಶಗಳು ಈ ಕೆಳಗಿನಂತಿವೆ.**

1. ಹೊಸ ಲಾಭ ಹಂಚಿಕೆ ಪ್ರಮಾಣ ಮತ್ತು ಗಳಿಕೆ ಪ್ರಮಾಣ ಕಂಡುಹಿಡಿಯುವುದು;
2. ಕೀರ್ತಿ ಮೌಲ್ಯದ ಪರಿಗಣನೆ;
3. ಆಸ್ತಿ ಮತ್ತು ಹೊಣೆಗಾರಿಕೆಗಳ ಮರು ಮೌಲ್ಯಮಾಪನ;
4. ದಾಖಲಿಸದ ಆಸ್ತಿಗಳ ಮತ್ತು ಹೊಣೆಗಾರಿಗಳಿಗೆ ಸಂಬಂಧಿಸಿದ ಹೊಂದಾಣಿಕೆ;
5. ಸಂಚಿತ ಲಾಭ ಮತ್ತು ನಷ್ಟಗಳ ಹಂಚಿಕೆ;
6. ನಿವೃತ್ತ / ಮರಣದ ದಿನಾಂಕದ ವರೆಗಿನ ಲಾಭ ಅಥವಾ ನಷ್ಟದಲ್ಲಿನ ಪಾಲನ್ನು ಕಂಡುಹಿಡಿಯುವುದು;
7. ಅಗತ್ಯವಿದ್ದಲ್ಲಿ ಬಂಡವಾಳದ ಹೊಂದಾಣಿಕೆ;
8. ನಿವೃತ್ತ /ಮರಣ ಹೊಂದಿದ ಪಾಲುದಾರನಿಗೆ ಬಾಕಿಯಿರುವ ಮೊತ್ತವನ್ನು ಚುಕ್ತಾಗೊಳಿಸುವುದು.

## 4.2 ಹೊಸ ಲಾಭ ಹಂಚಿಕೆಯ ಅನುಪಾತ New Profit Sharing Ratio

ಯಾವುದೇ ಒಬ್ಬ ಪಾಲುದಾರನು ನಿವೃತ್ತಿಯಾದಾಗ ಅಥವಾ ಮರಣ ಹೊಂದಿದಾಗ ಉಳಿದ ಪಾಲುದಾರರು ಭವಿಷ್ಯತ್ತಿನ ಲಾಭವನ್ನು ಹಂಚಿಕೊಳ್ಳುವ ಅನುಪಾತವು ಹೊಸ ಲಾಭ ಹಂಚಿಕೆಯ ಅನುಪಾತವಾಗಿರುತ್ತದೆ. ಪ್ರತಿಯೊಬ್ಬ ಉಳಿದ ಪಾಲುದಾರರ ಹೊಸ ಪಾಲು, ಸಂಸ್ಥೆಯಲ್ಲಿನ ತನ್ನ ಸ್ವಂತ ಪಾಲು ಜೊತೆಗೆ ನಿವೃತ್ತ/ ಮರಣ ಹೊಂದಿದ ಪಾಲುದಾರನಿಂದ ಪಡೆದ ಪಾಲನ್ನು ಒಳಗೊಂಡಿರುತ್ತದೆ.

ಈ ಕೆಳಗಿನ ಸಂದರ್ಭಗಳನ್ನು ಪರಿಗಣಿಸಿರಿ:

(ಎ) ಸಾಮಾನ್ಯವಾಗಿ ಮುಂದುವರೆಯುವ ಪಾಲುದಾರರು ನಿವೃತ್ತಿಯಾದ ಅಥವಾ ಮರಣ ಹೊಂದಿದ ಪಾಲುದಾರರ ಲಾಭದ ಪಾಲನ್ನು ತಮ್ಮಲ್ಲಿನ ಹಳೆಯ ಲಾಭ ಹಂಚಿಕೆಯ ಅನುಪಾತದಲ್ಲಿ ಪಡೆಯುತ್ತಾರೆ ಮತ್ತು ಹೊಸ ಲಾಭ ಹಂಚಿಕೆಯ ಅನುಪಾತವನ್ನು ಕಂಡುಹಿಡಿಯುವ ಅವಶ್ಯಕತೆ ಇರುವುದಿಲ್ಲ. ಏಕೆಂದರೆ, ಹಳೆಯ ಲಾಭ

ಹಂಚಿಕೆಯ ಅನುಪಾತವೇ, ಹೊಸ ಲಾಭ ಹಂಚಿಕೆಯ ಅನುಪಾತ ಆಗಿರುತ್ತದೆ. ಒಂದು ವೇಳೆ, ಲಾಭ ಹಂಚಿಕೆಯ ಅನುಪಾತಕ್ಕೆ ಸಂಬಂಧಿಸಿದಂತೆ ಉಳಿದ ಪಾಲುದಾರರು ನಿವೃತ್ತಿ / ಮರಣ ಹೊಂದಿದ ಪಾಲುದಾರನ ಪಾಲನ್ನು ಪಡೆಯುವಿಕೆಯ ಕುರಿತು ಮಾಹಿತಿಯನ್ನು ನೀಡದೇ ಇದ್ದಾಗ, ಅವರು ತಮ್ಮ ಹಳೆಯ ಲಾಭದ ಅನುಪಾತದಲ್ಲೇ ಪಡೆದುಕೊಳ್ಳುತ್ತಾರೆಂದು ಊಹಿಸಲಾಗುತ್ತದೆ. ಆದ್ದರಿಂದ ಭವಿಷ್ಯತ್ತಿನ ಲಾಭವನ್ನು ತಮ್ಮ ಹಳೆಯ ಅನುಪಾತದಲ್ಲೇ ಹಂಚಿಕೊಳ್ಳುತ್ತಾರೆ. ಉದಾಹರಣೆಗೆ, ಆಶಾ, ದೀಪ್ತಿ ಮತ್ತು ನಿಶಾ ಇವರು ಒಂದು ಸಂಸ್ಥೆಯಲ್ಲಿನ ಪಾಲುಗಾರರಾಗಿದ್ದು 3:2:1 ರ ಅನುಪಾತದಲ್ಲಿ ಲಾಭ ಮತ್ತು ನಷ್ಟವನ್ನು ಹಂಚಿಕೊಳ್ಳುತ್ತಿದ್ದರು. ಒಂದು ವೇಳೆ ದೀಪ್ತಿ ನಿವೃತ್ತಿಯಾದರೆ, ಅವರಲ್ಲಿ ಬೇರೆ ಯಾವುದೇ ನಿರ್ಧಾರ ಇಲ್ಲವಾದಲ್ಲಿ, ಆಶಾ ಮತ್ತು ನಿಶಾ ಇವರ ನಡುವಿನ ಹೊಸ ಲಾಭ ಹಂಚಿಕೆಯ ಅನುಪಾತವು 3:1 ಆಗಿರುತ್ತದೆ.

(ಬಿ) ಮುಂದುವರೆಯುವ ಪಾಲುದಾರರು ನಿವೃತ್ತಿಯಾದ ಅಥವಾ ಮರಣ ಹೊಂದಿದ ಪಾಲುದಾರನ ಲಾಭದಲ್ಲಿನ ಪಾಲನ್ನು ತಮ್ಮ ಹಳೆಯ ಅನುಪಾತವಲ್ಲದೇ ಬೇರೊಂದು ಪ್ರಮಾಣದಲ್ಲಿ ಪಡೆಯುವಾಗ, ಆ ಸಂದರ್ಭದಲ್ಲಿ ತಮ್ಮಲ್ಲಿನ ಹೊಸ ಲಾಭ ಹಂಚಿಕೆಯ ಅನುಪಾತದ ಲೆಕ್ಕಾಚಾರದ ಅವಶ್ಯಕತೆ ಇರುತ್ತದೆ ಮತ್ತು ಅದು ತಮಗೆ ಸಂಬಂಧಿಸಿದ ಹಳೆಯ ಪಾಲು ಮತ್ತು ನಿವೃತ್ತಿಯಾದ / ಮರಣ ಹೊಂದಿದ ಪಾಲುದಾರನಿಂದ ಪಡೆದ ಪಾಲು ಇವುಗಳ ಮೊತ್ತಕ್ಕೆ ಸಮನಾಗಿರುವುದು. ಉದಾಹರಣೆಗೆ, ನವೀನ, ಸುರೇಶ, ಮತ್ತು ತರುಣ ಪಾಲುದಾರರು ಲಾಭ ಮತ್ತು ನಷ್ಟವನ್ನು 5:3:2 ರ ಅನುಪಾತದಲ್ಲಿ ಹಂಚಿಕೊಳ್ಳುತ್ತಿದ್ದರು. ಸುರೇಶನು ಸಂಸ್ಥೆಯಿಂದ ನಿವೃತ್ತಿಯಾದ ಮತ್ತು ಆತನ ಪಾಲನ್ನು ನವೀನ ಮತ್ತು ತರುಣ ಇವರು 2:1 ರ ಅನುಪಾತದಲ್ಲಿ ಪಡೆಯುತ್ತಾರೆ. ಇಂತಹ ಸಂದರ್ಭದಲ್ಲಿ ಈ ಮುಂದಿನಂತೆ ಹೊಸ ಲಾಭದ ಪಾಲನ್ನು ಲೆಕ್ಕಾಚಾರ ಮಾಡಬಹುದಾಗಿದೆ.

ಮುಂದುವರೆಯುವ ಪಾಲುದಾರನ ಹೊಸಪಾಲು = ಹಳೆಯ ಪಾಲು + ಹೊರ ಹೋಗುವ ಪಾಲುದಾರನಿಂದ ಪಡೆಯುವ ಪಾಲು

ಗಳಿಕೆಯ ಅನುಪಾತ 2 : 1

ನವೀನ ಪಡೆದ ಪಾಲು $= \frac{3}{10}$ ರಲ್ಲಿ $\frac{2}{3}$ ಭಾಗ

$= \frac{2}{3} \text{x} \frac{3}{10} = \frac{2}{10}$

ತರುಣನು ಪಡೆದ ಪಾಲು $= \frac{3}{10}$ ರಲ್ಲಿ $\frac{1}{3}$ ಭಾಗ

$= = \frac{1}{3} \text{x} \frac{3}{10} = \frac{1}{10}$

ನವೀನನ ಪಾಲು $= \frac{5}{10} + \frac{2}{10} = \frac{7}{10}$

ತರುಣನ ಪಾಲು $= \frac{2}{10} + \frac{1}{10} = \frac{3}{10}$

ಹಾಗಾಗಿ ನವೀನ ಮತ್ತು ತರುಣರ ಹೊಸ ಲಾಭ ಹಂಚಿಕೆಯ ಅನುಪಾತ = 7:3

(ಸಿ) ಮುಂದುವರೆಯುವ ಪಾಲುದಾರರು ಒಂದು ನಿರ್ದಿಷ್ಟವಾದ ಹೊಸ ಲಾಭ ಹಂಚಿಕೆಯ ಅನುಪಾತದ ಮೇಲೆ ಒಪ್ಪಿಕೊಂಡಾಗ, ಆ ಸಂದರ್ಭದಲ್ಲಿ ನಿರ್ದಿಷ್ಟಪಡಿಸಿದ ಅನುಪಾತವೇ ಹೊಸ ಲಾಭ ಹಂಚಿಕೆಯ ಅನುಪಾತವಾಗುತ್ತದೆ.

## 4.3 ಗಳಿಕೆ ಅನುಪಾತ Gaining Ratio

ಮುಂದುವರೆಯುವ ಪಾಲುದಾರರು ನಿವೃತ್ತ / ಮರಣ ಹೊಂದಿದ ಪಾಲುದಾರನಿಂದ ಪಡೆಯುವ ಪಾಲಿನ ಪ್ರಮಾಣಕ್ಕೆ ಗಳಕೆಯ ಅನುಪಾತ ಎನ್ನುವರು. ಸಾಮಾನ್ಯವಾಗಿ ಮುಂದುವರೆಯುವ ಪಾಲುದಾರರು ನಿವೃತ್ತ/ಮರಣ ಹೊಂದಿದ ಪಾಲುದಾರನ ಪಾಲನ್ನು ತಮ್ಮ ಹಳೆಯ ಲಾಭ ಹಂಚಿಕೆ ಪ್ರಮಾಣದಲ್ಲಿ ಪಡೆಯುತ್ತಾರೆ. ಆ ಸಂದರ್ಭದಲ್ಲಿ ಉಳಿದ ಪಾಲುದಾರರ ಗಳಿಕೆ ಅನುಪಾತ ತಮ್ಮ ಹಳೆಯ ಲಾಭ ಹಂಚಿಕೆಯ ಪ್ರಮಾಣವೇ ಆಗಿರುತ್ತದೆ ಮತ್ತು ಅಲ್ಲಿ ಗಳಿಕೆ ಪ್ರಮಾಣದ ಲೆಕ್ಕಾಚಾರದ ಅವಶ್ಯಕತೆ ಇರುವುದಿಲ್ಲ. ಅದರ ಬದಲಾಗಿ ನಿವೃತ್ತ / ಮರಣ ಹೊಂದಿದ ಪಾಲುದಾರನ ಪಾಲನ್ನು ಯಾವ ಅನುಪಾತದಲ್ಲಿ ಅವರು ಪಡೆಯುತ್ತಾರೆ ಎಂಬುದನ್ನು ಕೊಟ್ಟಿರಬಹುದು. ಆ ಸಂಧರ್ಭದಲ್ಲಿ ಪುನಃ ನಿವೃತ್ತ / ಮರಣ ಹೊದಿಂದ ಪಾಲುದಾರನ ಲಾಭದ ಪಾಲನ್ನು ಯಾವ ಪ್ರಮಾಣದಲ್ಲಿ ಅವರು ಪಡೆಯುತ್ತಾರೋ ಅದೇ ಗಳಿಕೆ ಪ್ರಮಾಣವಾಗುವುದರಿಂದ ಗಳಿಕೆ ಪ್ರಮಾಣ ಲೆಕ್ಕಚಾರದ ಅವಶ್ಯಕತೆ ಇರುವುದಿಲ್ಲ. ಮುಂದುವರೆಯುವ ಪಾಲುದಾರರ ಹೊಸ ಲಾಭ ಹಂಚಿಕೆ ಪ್ರಮಾಣವನ್ನು ಕೊಟ್ಟಾಗ ಗಳಿಕೆ ಅನುಪಾತವನ್ನು ಲೆಕ್ಕ ಹಾಕುವ ಪ್ರಶ್ನೆಯು ಮೂಲತಃ ಉದ್ಭವಿಸುತ್ತದೆ. ಅಂತಹ ಪರಿಸ್ಥಿಯಲ್ಲಿ ಪ್ರತಿಯೊಬ್ಬ ಮುಂದುವರೆಯುವ ಪಾಲುದಾರನ ಹಳೆ ಪಾಲು ಆತನ ಹೊಸ ಪಾಲಿನಿಂದ ಕಳೆಯುವುದರಿಂದ ಗಳಿಕೆ ಪ್ರಮಾಣವನ್ನು ಲೆಕ್ಕಾಚಾರ ಮಾಡಬೇಕು. ಉದಾಹರಣೆಗೆ, ಅಮಿತ್, ದಿನೇಶ್ ಮತ್ತು ಗಗನ್ ಪಾಲುದಾರರು 5:3:2 ರ ಪ್ರಮಾಣದಲ್ಲಿ ಲಾಭ ಹಂಚಿಕೊಳ್ಳುತ್ತಿರುತ್ತಾರೆ. ದಿನೇಶ್‌ನು ನಿವೃತ್ತಿಯಾದ ಅಮಿತ್ ಮತ್ತು ಗಗನ್ ಇವರು ಹೊಸ ಸಂಸ್ಥೆಯ ಲಾಭವನ್ನು 3 : 2 ರ ಪ್ರಮಾಣದಲ್ಲಿ ಹಂಚಿಕೊಳ್ಳಲು ನಿರ್ಧರಿಸುತ್ತಾರೆ. ಗಳಿಕೆ ಪ್ರಮಾಣವನ್ನು ಈ ಮುಂದಿನಂತೆ ಲೆಕ್ಕಾಚಾರ ಮಾಡಬಹುದು.

ಅಮಿತ್‌ನ ಗಳಿಕೆ ಪಾಲು = $\frac{3}{5} - \frac{5}{10} = \frac{6-5}{10} = \frac{1}{10}$

ಗಗನ್‌ನ ಗಳಿಕೆ ಪಾಲು = $\frac{2}{5} - \frac{2}{10} = \frac{4-2}{10} = \frac{2}{10}$

ಆದುದರಿಂದ ಅಮಿತ್ ಮತ್ತು ಗಗನ್ ಇವರ ಗಳಿಕೆ ಪ್ರಮಾಣ = 1:2

ಇದು ತಿಳಿಸುವುದೇನೆಂದರೆ, ದಿನೇಶ್‌ನ ಲಾಭದ ಪಾಲನ್ನು ಅಮೀತ್‌ನು $\frac{1}{3}$ ಗಳಿಕೆ ಮಾಡುತ್ತಾನೆ ಮತ್ತು ಗಗನ್‌ನು $\frac{2}{3}$ ಗಳಿಕೆ ಮಾಡುತ್ತಾನೆ.

**ಮುಂದುವರೆಯುವ ಪಾಲುದಾರನ ಗಳಿಕೆ ಪಾಲು = ಹೊಸ ಪಾಲು – ಹಳೆ ಪಾಲು**

### ನೀವೇ ಮಾಡಿ Do it yourself

ಈ ಕೆಳಗಿನ ಅಂಶಗಳ ಕುರಿತು ಗಳಿಕೆ ಪ್ರಮಾಣ ಮತ್ತು ತ್ಯಾಗದ ಪ್ರಮಾಣ ಇವುಗಳ ನಡುವಿನ ವ್ಯತ್ಯಾಸವನ್ನು ತಿಳಿಯಿರಿ:

1. ಅರ್ಥ
2. ಪಾಲುದಾರರ ಲಾಭದ ಭಾಗದ ಮೇಲೆ ಪರಿಣಾಮ
3. ಲೆಕ್ಕ ಹಾಕುವ ವಿಧಾನ
4. ಯಾವಾಗ ಲೆಕ್ಕ ಹಾಕಲಾಗುವುದು

**ನಿದರ್ಶನ – 1**

ಮಧು, ನೇಹಾ ಮತ್ತು ಟೀನಾ ಪಾಲದಾರರು 5:3:2 ರ ಅನುಪಾತದಲ್ಲಿ ಲಾಭ ಹಂಚಿಕೊಳ್ಳುತ್ತಿರುತ್ತಾರೆ. ಹೊಸ ಲಾಭ ಹಂಚಿಕೆಯ ಅನುಪಾತ ಮತ್ತು ಗಳಿಕೆ ಅನುಪಾತವನ್ನು ಈ ಕೆಳಗಿನ ಸಂದರ್ಭಗಳಲ್ಲಿ ಲೆಕ್ಕ ಹಾಕಿರಿ:

1. ಮಧು ನಿವೃತ್ತಿಯಾದಾಗ
2. ನೇಹಾ ನಿವೃತ್ತಿಯಾದಾಗ
3. ಟೀನಾ ನಿವೃತ್ತಿಯಾದಾಗ

**ಪರಿಹಾರ:**

ಮಧು : ನೇಹಾ : ಟೀನಾ ನಡುವಿನ ಹಳೆಯ ಅನುಪಾತ 5:3:2 ಎಂದು ಕೊಡಲಾಗಿದೆ.

1. ಮಧು ನಿವೃತ್ತಿಯಾದರೆ: ನೇಹಾ ಮತ್ತು ಟೀನಾರ ನಡುವಿನ ಹೊಸ ಲಾಭ ಹಂಚಿಕೆಯ ಅನುಪಾತವು
   ನೇಹಾ : ಟೀನಾ = 3:2 ಮತ್ತು ನೇಹಾ ಮತ್ತು ಟೀನಾರ ನಡುವಿನ ಗಳಿಕೆ ಅನುಪಾತ = 3 : 2
2. ನೇಹಾ ನಿವೃತ್ತಿಯಾದರೆ: ಮಧು ಮತ್ತು ಟೀನಾರ ನಡುವಿನ ಹೊಸ ಲಾಭ ಹಂಚಿಕೆಯ ಅನುಪಾತವು
   ಮಧು : ಟೀನಾ = 5:2
   ಮಧು ಮತ್ತು ಟೀನಾರ ಗಳಿಕೆ ಅನುಪಾತ = 5:2
3. ಟೀನಾ ನಿವೃತ್ತಿಯಾದರೆ: ಮಧು ಮತ್ತು ನೇಹಾರ ನಡುವಿನ ಹೊಸ ಲಾಭ ಹಂಚಿಕೆಯ ಅನುಪಾತವು
   ಮಧು : ನೇಹಾ = 5:3
   ಮಧು ಮತ್ತು ನೇಹಾರ ಗಳಿಕೆ ಅನುಪಾತ = 5:3

**ನಿದರ್ಶನ – 2**

ಅಲ್ಕಾ, ಹರಪ್ರೀತ್ ಮತ್ತು ಶ್ರೇಯಾ 3:2:1ರ ಅನುಪಾತದಲ್ಲಿ ಲಾಭ ಹಂಚಿಕೊಳ್ಳುವರು. ಅಲ್ಕಾ ನಿವೃತ್ತಳಾಗುತ್ತಾಳೆ. ಮತ್ತು ಅವಳ ಪಾಲನ್ನು ಹರ್‌ಪ್ರೀತ್ ಮತ್ತು ಶ್ರೇಯಾ 3:2ರ ಅನುಪಾತದಲ್ಲಿ ತೆಗೆದುಕೊಳ್ಳುತ್ತಾರೆ. ಹೊಸ ಲಾಭ ಹಂಚಿಕೆಯ ಅನುಪಾತವನ್ನು ಕಂಡು ಹಿಡಿಯಿರಿ.

**ಪರಿಹಾರ:**

ಗಳಿಕೆ ಅನುಪಾತ ಕೊಡಲಾಗಿ, ಹರ್‌ಪ್ರೀತ್ ಮತ್ತು ಶ್ರೇಯಾ ರ ಗಳಿಕೆ ಅನುಪಾತ = 3:2 = $\frac{3}{5}:\frac{2}{5}$

ಅಲ್ಕಾ, ಹರ್‌ಪ್ರೀತ್ ಮತ್ತು ಶೇಯಾರ ನಡುವಿನ ಹಳೆಯ ಲಾಭ ಹಂಚಿಕೆಯ ಅನುಪಾತ = 3:2:1 = $\frac{3}{6}:\frac{2}{6}:\frac{1}{6}$

ಹರ್‌ಪ್ರೀತ್‌ಳು ಪಡೆದ ಪಾಲು = $\frac{3}{6}$ ರಲ್ಲಿ $\frac{3}{5}$ = $\frac{9}{30}$

ಶ್ರೇಯಾಳು ಪಡೆದ ಪಾಲು = $\frac{3}{6}$ ರಲ್ಲಿ $\frac{2}{5}$ = $\frac{6}{30}$

ಹೊಸ ಪಾಲು = ಹಳೆ ಪಾಲು + ಪಡೆದ ಪಾಲು

ಹರ್‌ಪ್ರೀತಳ ಹೊಸ ಪಾಲು = $\frac{2}{6}+\frac{9}{30}=\frac{19}{30}$

ಶ್ರೇಯಾಳ ಹೊಸ ಪಾಲು = $\frac{1}{6}+\frac{6}{30}=\frac{11}{30}$

ಹರ್‌ಪ್ರೀತ್ ಮತ್ತು ಶ್ರೇಯಾರ ಹೊಸ ಲಾಭ ಹಂಚಿಕೆಯ ಅನುಪಾತ = 19:11

**ನಿದರ್ಶನ – 3**

ಮುರಳಿ, ನವೀನ ಮತ್ತು ಓಂಪ್ರಕಾಶ ಪಾಲುದಾರರು ಲಾಭವನ್ನು $\frac{3}{8},\frac{1}{2}$ ಮತ್ತು $\frac{1}{8}$ ರ ಅನುಪಾತದಲ್ಲಿ ಹಂಚಿಕೊಳ್ಳುತ್ತಿದ್ದರು.

ಮುರಳಿ ನಿವೃತ್ತನಾಗುತ್ತಾನೆ ಮತ್ತು ತನ್ನ ಪಾಲಿನ 2/3 ನ್ನು ನವೀನನ ಪರವಾಗಿ, ಉಳಿದ ಪಾಲನ್ನು ಓಂಪ್ರಕಾಶನ ಪರವಾಗಿ ವರ್ಗಾಯಿಸುತ್ತಾನೆ. ಹೊಸ ಲಾಭ ಹಂಚಿಕೆಯ ಮತ್ತು ಗಳಿಕೆ ಅನುಪಾತವನ್ನು ಕಂಡು ಹಿಡಿಯಿರಿ.

**ಪರಿಹಾರ:**

| | ನವೀನ | ಓಂ ಪ್ರಕಾಶ |
|---|---|---|
| (i) ಹಳೆಯ ಪಾಲು | $\frac{1}{2}$ | $\frac{1}{8}$ |
| (ii) ನವೀನ್ ಮತ್ತು ಓಂಪ್ರಕಾಶರವರು ಮುರಳಿಯಿಂದ ಪಡೆದ ಪಾಲು | $= \frac{3}{8}$ ರಲ್ಲಿ $\frac{2}{3} = \frac{2}{8}$ | $= \frac{3}{8}$ ರಲ್ಲಿ $\frac{1}{3} = \frac{1}{8}$ |
| (iii) ಹೊಸ ಪಾಲು = (i) + (ii) | $= \frac{1}{2}+\frac{2}{8}$ | $= \frac{1}{8}+\frac{1}{8}$ |
| | $= \frac{6}{8}$ ಅಥವಾ $\frac{3}{4}$ | $= \frac{2}{8}$ ಅಥವಾ $\frac{1}{4}$ |

ಹೀಗಾಗಿ, ಹೊಸ ಲಾಭ ಹಂಚಿಕೆ = $\frac{3}{4}:\frac{1}{4}$ ಅಥವಾ 3:1 ಮತ್ತು ಗಳಿಕೆ ಅನುಪಾತ = $\frac{2}{8}: \frac{1}{8}$ ಅಥವಾ 2:1 (ii) ರಲ್ಲಿ (ಕಂಡು ಹಿಡಿದಂತೆ)

**ನಿದರ್ಶನ – 4**

ಕುಮಾರ, ಲಕ್ಷಯಾ, ಮನೋಜ ಮತ್ತು ನರೇಶ ಪಾಲುದಾರರು 3:2:1:4 ರ ಅನುಪಾತದಲ್ಲಿ ಲಾಭವನ್ನು ಹಂಚಿಕೊಳ್ಳುತ್ತಿದ್ದರು. ಕುಮಾರನು ನಿವೃತ್ತನಾಗುತ್ತಾನೆ ಮತ್ತು ಈತನ ಪಾಲನ್ನು ಲಕ್ಷಯಾ ಮತ್ತು ಮನೋಜರು 3 : 2 ರ ಅನುಪಾತದಲ್ಲಿ ಪಡೆಯುತ್ತಾರೆ. ಉಳಿದ ಪಾಲುದಾರರ ಹೊಸ ಲಾಭ ಹಂಚಿಕೆಯ ಮತ್ತು ಗಳಿಕೆ ಅನುಪಾತವನ್ನು ಕಂಡು ಹಿಡಿಯಿರಿ.

**ಪರಿಹಾರ:**

| | ಲಕ್ಷಯಾ | ಮನೋಜ | ನರೇಶ |
|---|---|---|---|
| (i) ಹಳೆಯ ಪಾಲು | $\frac{2}{10}$ | $\frac{1}{10}$ | $\frac{4}{10}$ |
| (ii) ಕುಮಾರನಿಂದ ಪಡೆದ ಪಾಲು | $\frac{3}{10}$ ರಲ್ಲಿ $\frac{3}{5}$ | $\frac{3}{10}$ ರಲ್ಲಿ $\frac{2}{5}$ | ಇಲ್ಲ |
| | $= \frac{9}{50}$ | $= \frac{6}{50}$ | ಇಲ್ಲ |
| (iii) ಹೊಸ ಪಾಲು = (i) + (ii) | $= \frac{2}{10}+\frac{9}{50}$ | $= \frac{1}{10}+\frac{6}{50}$ | $= \frac{4}{10}$ ಇಲ್ಲ |
| | $= \frac{19}{50}$ | $= \frac{11}{50}$ | $= \frac{20}{50}$ |

ಹೊಸ ಲಾಭ ಹಂಚಿಕೆ ಅನುಪಾತವು 19 : 11 : 20

ಗಳಿಕೆ ಅನುಪಾತ 3 : 2 : 0

**ಟಿಪ್ಪಣಿಗಳು :**

1. ಲಕ್ಷಯಾ ಮತ್ತು ಮನೋಜರು ಕುಮಾರನ ಲಾಭದ ಪಾಲನ್ನು 3:2 ಅನುಪಾತದಲ್ಲಿ ಪಡೆಯುವುದರಿಂದ ಲಕ್ಷಯಾ ಮತ್ತು ಮನೋಜರ ನಡುವಿನ ಗಳಿಕೆ ಅನುಪಾತವು 3 : 2 ಆಗಿರುತ್ತದೆ.
2. ನರೇಶನು ತ್ಯಾಗವನ್ನೂ ಮಾಡಿಲ್ಲ; ಗಳಿಕೆಯನ್ನೂ ಮಾಡಿಲ್ಲ.

**ನಿದರ್ಶನ – 5**

ರಂಜನಾ, ಸಾಧನಾ ಮತ್ತು ಕಾಮನಾ ಪಾಲುದಾರರು ಲಾಭವನ್ನು 4 : 3 : 2 ರ ಅನುಪಾತದಲ್ಲಿ ಹಂಚಿಕೊಳ್ಳುತ್ತಿದ್ದರು. ರಂಜನಾಳು ನಿವೃತ್ತಳಾಗುತ್ತಾಳೆ. ಸಾಧನಾ ಮತ್ತು ಕಾಮನಾಳು ಭವಿಷ್ಯತ್ತಿನಲ್ಲಿ ಲಾಭವನ್ನು 5:3 ಅನುಪಾತದಲ್ಲಿ ಹಂಚಿಕೊಳ್ಳಲು ನಿರ್ಧರಿಸುತ್ತಾರೆ. ಗಳಿಕೆ ಅನುಪಾತವನ್ನು ಕಂಡು ಹಿಡಿಯಿರಿ.

**ಪರಿಹಾರ:**

ಗಳಿಕೆ ಪಾಲು = ಹೊಸ ಪಾಲು – ಹಳೆಯ ಪಾಲು

ಸಾಧನಾಳ ಗಳಿಕೆ ಪಾಲು $= \frac{5}{8}-\frac{3}{9}=\frac{45-24}{72} = \frac{21}{72}$

ಕಾಮನಾಳ ಗಳಿಕೆ ಪಾಲು $= \frac{3}{8} - \frac{2}{9} = \frac{27-16}{72} = \frac{11}{72}$

ಸಾಧನಾ ಮತ್ತು ಕಾಮನಾ ಇವರ ನಡುವಿನ ಗಳಿಕೆ ಅನುಪಾತ = 21 : 11

### ನೀವೇ ಮಾಡಿ Do it Yourself

1. ಅನಿತಾ, ಜಯಾ ಮತ್ತು ನಿಶಾ ಪಾಲುದಾರರು ಲಾಭ ಮತ್ತು ನಷ್ಟಗಳನ್ನು 1:1:1 ರ ಅನುಪಾತದಲ್ಲಿ ಹಂಚಿಕೊಳ್ಳುತ್ತಿದ್ದರು. ಜಯಾ ಸಂಸ್ಥೆಯಿಂದ ನಿವೃತ್ತಳಾಗುತ್ತಾಳೆ. ಅನಿತಾ ಮತ್ತು ನಿಶಾರು ಭವಿಷ್ಯತ್ತಿನ್ನಲ್ಲಿ ಲಾಭವನ್ನು 4:3 ರ ಅನುಪಾತದಲ್ಲಿ ಹಂಚಿಕೊಳ್ಳಲು ನಿರ್ಧರಿಸುತ್ತಾರೆ. ಗಳಿಕೆ ಪ್ರಮಾಣವನ್ನು ಕಂಡು ಹಿಡಿಯಿರಿ.
2. ಆರ್ಝಾದ್, ವಿಜಯ್ ಮತ್ತು ಅಮಿತ್ ಪಾಲುದಾರರು ಲಾಭ – ನಷ್ಟಗಳನ್ನು $\frac{1}{4}$, $\frac{1}{8}$ ಮತ್ತು $\frac{10}{16}$ ರ ಪ್ರಮಾಣದಲ್ಲಿ ಹಂಚಿಕೊಳ್ಳುತ್ತಿದ್ದರು. ಕೆಳಗಿನ ಮುಂದುವರೆಯುವ ಪಾಲುದಾರರ ನಡುವಿನ ಹೊಸ ಲಾಭ ಹಂಚಿಕೆಯ ಅನುಪಾತವನ್ನು ಕಂಡು ಹಿಡಿಯಿರಿ.

   (ಎ) ಆರ್ಝಾದ್ ನಿವೃತ್ತಿಯಾದಾಗ (ಬಿ) ವಿಜಯ್ ನಿವೃತ್ತಿಯಾದಾಗ

   (ಸಿ) ಅಮಿತ್ ನಿವೃತ್ತಿಯಾದಾಗ
3. ಮೇಲಿನ ಪ್ರತಿಯೊಂದು ಸಂದರ್ಭದಲ್ಲಿ ಗಳಿಕೆ ಅನುಪಾತವನ್ನು ಲೆಕ್ಕ ಹಾಕಿರಿ.
4. ಅನು, ಪ್ರಭಾ ಮತ್ತು ಮಿಲ್ಲಿ ಪಾಲುದಾರರಾಗಿರುತ್ತಾರೆ. ಅನು ನಿವೃತ್ತಳಾದಳು. ಮುಂದುವರೆಯುವ ಪಾಲುದಾರರು ಅವಳ ಪಾಲನ್ನು ಈ ಕೆಳಗಿನಂತೆ ಒಪ್ಪಿಕೊಂಡರೆ, ಅವರ ಭವಿಷ್ಯದಲ್ಲಿನ ಲಾಭ ಹಂಚಿಕೆ ಅನುಪಾತ ಮತ್ತು ಗಳಿಕೆ ಅನುಪಾತವನ್ನು ಕಂಡು ಹಿಡಿಯಿರಿ.

   (ಎ) 5 : 3 ರ ಅನುಪಾತದಲ್ಲಿ (ಬಿ) ಸಮನಾಗಿ
5. ರಾಹುಲ್, ರಾಬಿನ್ ಮತ್ತು ರಾಜೇಶ್ ಪಾಲುದಾರರು ಲಾಭವನ್ನು 3:2:1 ರ ಅನುಪಾತದಲ್ಲಿ ಹಂಚಿಕೊಳ್ಳುತ್ತಾರೆ. ಕೆಳಗಿನ ಸಂದರ್ಭಗಳಲ್ಲಿ ಉಳಿದ ಪಾಲುದಾರರ ಹೊಸ ಲಾಭ ಹಂಚಿಕೆಯ ಅನುಪಾತವನ್ನು ಕಂಡು ಹಿಡಿಯಿರಿ.

   (ಎ) ರಾಹುಲ್ ನಿವೃತ್ತಿಯಾದಾಗ (ಬಿ) ರಾಬಿನ್ ನಿವೃತ್ತಿ ಯಾದಾಗ

   (ಸಿ) ರಾಜೇಶ್ ನಿವೃತ್ತಿ ಯಾದಾಗ
6. ಪೂಜಾ, ಪ್ರೀಯಾ, ಪ್ರತಿಷ್ಠಾ ಪಾಲುದಾರರು 5:3:2ರ ಅನುಪಾತದಲ್ಲಿ ಲಾಭ ಮತ್ತು ನಷ್ಟಗಳನ್ನು ಹಂಚಿಕೊಳ್ಳುತ್ತಿದ್ದರು. ಪೂಜಾ ನಿವೃತ್ತಿಯಾಗುತ್ತಾಳೆ. ಪ್ರೀಯಾ ಮತ್ತು ಪ್ರತಿಷ್ಠಾ ಅವಳ ಪಾಲನ್ನು 2:1 ರ ಅನುಪಾತದಲ್ಲಿ ತೆಗೆದುಕೊಳ್ಳುತ್ತಾರೆ. ಹೊಸ ಲಾಭ ಹಂಚಿಕೆಯ ಅನುಪಾತವನ್ನು ಲೆಕ್ಕ ಹಾಕಿರಿ.
7. ಅಶೋಕ್, ಅನಿಲ್ ಮತ್ತು ಅಜಯ್ ಪಾಲುದಾರರು $\frac{1}{2}, \frac{3}{10}$ ಮತ್ತು $\frac{1}{5}$ ರ ಅನುಪಾತದಲ್ಲಿ ಲಾಭ ಮತ್ತು ನಷ್ಟಗಳನ್ನು ಹಂಚಿಕೊಳ್ಳುತ್ತಿದ್ದರು. ಅನಿಲನು ಸಂಸ್ಥೆಯಿಂದ ನಿವೃತ್ತನಾಗುತ್ತಾನೆ. ಭವಿಷ್ಯದ ಲಾಭ ಮತ್ತು ನಷ್ಟಗಳನ್ನು 3:2 ರ ಅನುಪಾತದಲ್ಲಿ ಹಂಚಿಕೊಳ್ಳಲು ಅಶೋಕ ಮತ್ತು ಅಜಯ ನಿರ್ಧರಿಸುತ್ತಾರೆ. ಗಳಿಕೆ ಅನುಪಾತವನ್ನು ಲೆಕ್ಕಹಾಕಿರಿ.

## 4.4 ಕೀರ್ತಿ ಮೌಲ್ಯದ ಪರಿಗಣನೆ Treatment of Goodwill

ನಿವೃತ್ತಿ ಅಥವಾ ನಿಧನನಾದ ಪಾಲುದಾರನು ನಿವೃತ್ತಿಯ / ನಿಧನದ ಸಂದರ್ಭದಲ್ಲಿ ತನ್ನ ಪಾಲಿನ ಕೀರ್ತಿಮೌಲ್ಯದ ಮೊತ್ತವನ್ನು ಪಡೆಯಲು ಅರ್ಹನಾಗಿರುತ್ತಾನೆ. ಏಕೆಂದರೆ, ಅಲ್ಲಿರುವ ಎಲ್ಲಾ ಪಾಲುದಾರರ ಪ್ರಯತ್ನದಿಂದ ಸಂಸ್ಥೆಯು ಕೀರ್ತಿಮೌಲ್ಯವನ್ನು ಗಳಿಸಿರುತ್ತದೆ. ಹಾಗಾಗಿ ಪಾಲುದಾರರನ ನಿವೃತ್ತಿ / ನಿಧನದ ಸಂದರ್ಭದಲ್ಲಿ ಕೀರ್ತಿ ಮೌಲ್ಯವನ್ನು ಪಾಲುದಾರರ ನಡುವಿನ ಒಪ್ಪಂದದ ಅನುಸಾರ ನಿರ್ಧರಿಸಿ ನಿವೃತ್ತ/ನಿಧನ ಹೊಂದಿದ ಪಾಲುದಾರನಿಗೆ ಕೀರ್ತಿಮೌಲ್ಯದ ಅವನ ಪಾಲನ್ನು ಮುಂದುವರೆಯುವ ಪಾಲುದಾರರು (ಯಾರು ನಿವೃತ್ತನಾದ / ನಿಧನ ಹೊದಿದ ಪಾಲುದಾರನಿಂದ ಲಾಭದ ಪಾಲನ್ನು ಪಡೆಯುವುದರಿಂದ ಗಳಿಕೆ ಮಾಡಿರುತ್ತಾರೆ) ಅವರ ಗಳಿಕೆ ಅನುಪಾತದಲ್ಲಿ ತುಂಬಿಕೊಡಬೇಕು.

ಅಂತಹ ಸಂದರ್ಭದಲ್ಲಿ ಕೀರ್ತಿಮೌಲ್ಯದ ಲೆಕ್ಕ ಪರಿಗಣನೆಯು ಕೀರ್ತಿಮೌಲ್ಯವನ್ನು ಈಗಾಗಲೇ ಸಂಸ್ಥೆಯ ಲೆಕ್ಕದ ಪುಸ್ತಕಗಳಲ್ಲಿ ತೋರಿಸಲಾಗಿದೆಯೇ ಅಥವಾ ಇಲ್ಲಾ ಎಂಬುದರ ಮೇಲೆ ಅವಲಂಬನೆಯಾಗಿರುತ್ತದೆ.

### 4.4.1 ಲೆಕ್ಕದ ಪುಸ್ತಕಗಳಲ್ಲಿ ಕೀರ್ತಿಮೌಲ್ಯವನ್ನು ತೋರಿಸದೇ ಇದ್ದಾಗ:

ಸಂಸ್ಥೆಯ ಲೆಕ್ಕದ ಪುಸ್ತಕಗಳಲ್ಲಿ ಕೀರ್ತಿಮೌಲ್ಯವನ್ನು ತೋರಿಸದೇ ಇದ್ದಾಗ, ನಿವೃತ್ತ ಪಾಲುದಾರನ ಕೀರ್ತಿಮೌಲ್ಯದಲ್ಲಿನ ಆತನ ಪಾಲಿನ ನಷ್ಟವನ್ನು ಆತನಿಗೆ ಅವಶ್ಯಕವಾದ ಜಮೆ ನೀಡಲು ನಾಲ್ಕು ವಿಧಾನಗಳಿವೆ. ಅವು ಈ ಕೆಳಗಿನಂತಿವೆ;

(ಎ) **ಕೀರ್ತಿಮೌಲ್ಯವನ್ನು ಅದರ ಪೂರ್ಣ ಪ್ರಮಾಣದಲ್ಲಿ ಸೃಷ್ಟಿಸಿ ವ್ಯವಹಾರದ ಲೆಕ್ಕದಲ್ಲಿ ಉಳಿಸಿಕೊಂಡಾಗ:** ಈ ಸಂದರ್ಭದಲ್ಲಿ, ಕೀರ್ತಿಮೌಲ್ಯದ ಖಾತೆಯನ್ನು ಅದರ ಪೂರ್ಣ ಮೌಲ್ಯಕ್ಕೆ ಖರ್ಚು ಬರೆಯಬೇಕು ಮತ್ತು ಎಲ್ಲಾ ಪಾಲುದಾರರ (ನಿವೃತ್ತ/ನಿಧನನಾದ ಪಾಲುದಾರರನ್ನು ಒಳಗೊಂಡತೆ) ಬಂಡವಾಳ ಖಾತೆಗಳಿಗೆ ಅವರ ಹಳೆ ಲಾಭ ಹಂಚಿಕೆಯ ಅನುಪಾತದಲ್ಲಿ ಜಮಾ ಬರೆಯಬೇಕು. ಕೀರ್ತಿಮೌಲ್ಯದ ಪೂರ್ಣ ಮೌಲ್ಯವನ್ನು ಪುನರ್ ಸ್ಥಾಪಿತ ಸಂಸ್ಥೆಯ ಅಢಾವೆ ಪತ್ರಿಕೆಯಲ್ಲಿ ತೋರಿಸಲಾಗುತ್ತದೆ.

(ಬಿ) **ಕೀರ್ತಿಮೌಲ್ಯವನ್ನು ಅದರ ಪೂರ್ಣ ಪ್ರಮಾಣದಲ್ಲಿ ಸೃಷ್ಟಿಸಿ ತಕ್ಷಣ ಅದನ್ನು ತೆಗೆದು ಹಾಕಿದಾಗ:** ಒಂದು ವೇಳೆ ಕೀರ್ತಿಮೌಲ್ಯವನ್ನು ಉಳಿಸಬಾರದು ಮತ್ತು ಪುನರ್ ಸ್ಥಾಪಿತ ಸಂಸ್ಥೆಯ ಅಢಾವೆ ಪತ್ರಿಕೆಯಲ್ಲಿ ತೋರಿಸಬಾರದು ಎಂದು ನಿರ್ಧರಿಸಿದರೆ, ಪೂರ್ಣ ಪ್ರಮಾಣದ ಕೀರ್ತಿ ಮೌಲ್ಯವನ್ನು ಎಲ್ಲ ಪಾಲುದಾರರ ನಿವೃತ್ತ/ನಿಧನನಾದ ಪಾಲುದಾರನನ್ನು ಒಳಗೊಂಡಂತೆ, ಅವರ ಬಂಡವಾಳ ಖಾತೆಗಳಿಗೆ ಜಮಾ ಬರೆಯುವ ಮೂಲಕ ಸೃಷ್ಟಿಸಿ ಕೊಡಲೇ ಅದನ್ನು ಉಳಿದ ಪಾಲುದಾರರಿಗೆ ಅವರ ಹೊಸ ಲಾಭ ಹಂಚಿಕೆಯ ಅನುಪಾತದಲ್ಲಿ ಖರ್ಚು ಬರೆಯುವ ಮೂಲಕ ತೆಗೆದು ಹಾಕಬೇಕು ಮತ್ತು ಕೀರ್ತಿಮೌಲ್ಯದ ಖಾತೆಗೆ ಅದರ ಪೂರ್ಣ ಪ್ರಮಾಣದ ಮೊತ್ತಕ್ಕೆ ಜಮಾ ಬರೆಯಬೇಕು.

(ಸಿ) **ಕೀರ್ತಿಮೌಲ್ಯವನ್ನು ಕೇವಲ ನಿವೃತ್ತ / ನಿಧನನಾದ ಪಾಲುದಾರನ ಪಾಲನ್ನು ಮಾತ್ರ ಸೃಷ್ಟಿಸಿ ತಕ್ಷಣ ಅದನ್ನು ತೆಗೆದು ಹಾಕಿದಾಗ:** ಈ ಸಂದರ್ಭದಲ್ಲಿ ಕೀರ್ತಿಮೌಲ್ಯದ ಖಾತೆಗೆ ನಿರ್ದಿಷ್ಟ ಪ್ರಮಾಣದ ಮೊತ್ತಕ್ಕೆ ಖರ್ಚು ಬರೆದು ಕೀರ್ತಿ ಮೌಲ್ಯವನ್ನು ಕೇವಲ ನಿವೃತ್ತ / ನಿಧನನಾದ ಪಾಲುದಾರನ ಪಾಲನ್ನು ಮಾತ್ರ ಸೃಷ್ಟಿಸಲಾಗುತ್ತದೆ. ಮತ್ತು ಕೇವಲ ನಿವೃತ್ತ / ನಿಧನನಾದ ಪಾಲುದಾರನ ಬಂಡವಾಳ ಖಾತೆಗೆ ಜಮಾ ಬರೆಯಲಾಗುತ್ತದೆ. ತದ ನಂತರ ಉಳಿದ ಪಾಲುದಾರರ ಬಂಡವಾಳ ಖಾತೆಗಳಲ್ಲಿ ಅವರ ಗಳಿಕೆ ಅನುಪಾತದಲ್ಲಿ ಖರ್ಚು ಬರೆದು ಮತ್ತು ಕೀರ್ತಿಮೌಲ್ಯ ಖಾತೆಯಲ್ಲಿ ಜಮಾ ಬರೆದು ಅದನ್ನು ತೆಗೆದು ಹಾಕಲಾಗುತ್ತದೆ.

(ಡಿ) **ಸಂಸ್ಥೆಯ ಲೆಕ್ಕ ಪುಸ್ತಗಳಲ್ಲಿ ಕೀರ್ತಿಮೌಲ್ಯ ಖಾತೆಯನ್ನು ಸೃಷ್ಟಿಸದೇ ಇದ್ದಾಗ:** ಕೀರ್ತಿಮೌಲ್ಯದ ಖಾತೆಯನ್ನು ಸಂಸ್ಥೆಯ ಲೆಕ್ಕ ಪುಸ್ತಕಗಳಲ್ಲಿ ತೋರಿಸಬಾರದೆಂದು ನಿರ್ಧರಿಸಿದರೆ, ಅಂತಹ ಸಂದರ್ಭದಲ್ಲಿ ಪಾಲುದಾರರ ಬಂಡವಾಳ ಖಾತೆಗಳ ಮೂಲಕ ಅದನ್ನು ಈ ಮುಂದಿನ ರೋಜು ದಾಖಲೆ ಬರೆಯುವುದರಿಂದ ನಿಚ್ಚಳವಾಗಿ ಹೊಂದಾಣಿಕೆ ಮಾಡಲಾಗುತ್ತದೆ.

| | | |
|---|---|---|
| ಮುಂದುವರೆಯುವ ಪಾಲುದಾರರ ಬಂಡವಾಳ ಖಾತೆಗಳ ಖರ್ಚು<br>(ವೈಯಕ್ತಿಕವಾಗಿ ತಮ್ಮ ಗಳಿಕೆ ಅನುಪಾತದಲ್ಲಿ) | xxx | ------ |
| ನಿವೃತ್ತ / ನಿಧನನಾದ ಪಾಲುದಾರನ ಬಂಡವಾಳ ಖಾತೆಗೆ | ------ | xxx |

(ನಿವೃತ್ತ / ನಿಧನನಾದವನಲ್ಲಿ ಉಳಿದ ಪಾಲುದಾರರ ಬಂಡವಾಳ ಖಾತೆಗಳೊಂದಿಗೆ ಅವರ ಗಳಿಕೆ ಅನುಪಾತದಲ್ಲಿ)

ಒಂದು ಉದಾಹರಣೆ ತೆಗೆದುಕೊಂಡು ಮೇಲಿನ ಎಲ್ಲಾ ಪರ್ಯಾಯಗಳನ್ನು ಬಳಸಿಕೊಂಡು ಪಾಲುದಾರನ ನಿವೃತ್ತಿಯ / ನಿಧನದ ಸಂದರ್ಭದಲ್ಲಿ ಕೀರ್ತಿಮೌಲ್ಯದ ಪರಿಗಣನೆಯನ್ನು ಸ್ಪಷ್ಟಪಡಿಸಬಹುದು. ಒಂದು ಸಂಸ್ಥೆಯಲ್ಲಿ A, B ಮತ್ತು C ಪಾಲುದಾರರು 3 : 2 : 1 ರ ಅನುಪಾತದಲ್ಲಿ ಲಾಭಗಳನ್ನು ಹಂಚಿಕೊಳ್ಳುತ್ತಾರೆ. B ಯು ನಿವೃತ್ತಿ ಹೊಂದುತ್ತಾನೆ ಸಂಸ್ಥೆಯ ಕೀರ್ತಿ ಮೌಲ್ಯವನ್ನು ₹ 60,000 ಕ್ಕೆ ಮೌಲೀಕರಸಲಾಗಿದೆ. A ಮತ್ತು C ಉಳಿದ ಪಾಲದಾರರು ಲಾಭಗಳನ್ನು 3 : 1 ರ ಅನುಪಾದಲ್ಲಿ ಹಂಚಿಕೊಳ್ಳುತ್ತಾ ಮುಂದುವರೆಯುತ್ತಾರೆ. ವಿವಿಧ ಪರ್ಯಾಯಗಳಲ್ಲಿ ಈ ಮುಂದಿನಂತೆ ರೋಜುದಾಖಲೆಗಳನ್ನು ಬರೆಯಬಹುದು;

(ಎ) ಕೀರ್ತಿಮೌಲ್ಯವನ್ನು ಪೂರ್ಣ ಪ್ರಮಾಣದಲ್ಲಿ ಸೃಷ್ಟಿಸಿ ಪುಸ್ತಕಗಳಲ್ಲಿ ಉಳಿಸಿಕೊಂಡರೆ:

| | | | |
|---|---|---|---|
| ಕೀರ್ತಿಮೌಲ್ಯದ ಖಾತೆ - - - - - - - | ಖರ್ಚು | 60,000 | —— |
| A ನ ಬಂಡವಾಳ ಖಾತೆಗೆ | | —— | 30,000 |
| B ನ ಬಂಡವಾಳ ಖಾತೆಗೆ | | —— | 20,000 |
| C ನ ಬಂಡವಾಳ ಖಾತೆಗೆ | | —— | 10,000 |

(ಕೀರ್ತಿಮೌಲ್ಯವನ್ನು ಪೂರ್ಣ ಪ್ರಮಾಣದಲ್ಲಿ ಸೃಷ್ಟಿಸಿ ಮತ್ತು ಎಲ್ಲಾ ಪಾಲುದಾರರ ಬಂಡವಾಳ ಖಾತೆಗೆ ಅವರ ಹಳೆಯ ಅನುಪಾತದಲ್ಲಿ ಜಮಾ ಮಾಡಲಾಗಿದೆ)

(ಬಿ) ಕೀರ್ತಿಮೌಲ್ಯವನ್ನು ಪೂರ್ಣಪ್ರಮಾಣದಲ್ಲಿ ಸೃಷ್ಟಿಸಿ ತಕ್ಷಣವೇ ತೆಗೆದು ಹಾಕಿದರೆ;

| | | | |
|---|---|---|---|
| (i) ಕೀರ್ತಿಮೌಲ್ಯದ ಖಾತೆ - - - - - - - | ಖರ್ಚು | 60,000 | —— |
| A ನ ಬಂಡವಾಳ ಖಾತೆಗೆ | | —— | 30,000 |
| B ನ ಬಂಡವಾಳ ಖಾತೆಗೆ | | —— | 20,000 |
| C ನ ಬಂಡವಾಳ ಖಾತೆಗೆ | | —— | 10,000 |

(ಕೀರ್ತಿಮೌಲ್ಯವನ್ನು ಪೂರ್ಣ ಪ್ರಮಾಣದಲ್ಲಿ ಸೃಷ್ಟಿಸಿ ಎಲ್ಲಾ ಪಾಲುದಾರರ ಬಂಡವಾಳ ಖಾತೆಗಳಿಗೆ ಅವರ ಹಳೆಯ ಅನುಪಾತದಲ್ಲಿ ಜಮಾ ಮಾಡುಲಾಗಿದೆ)

| | | | |
|---|---|---|---|
| (ii) A ನ ಬಂಡವಾಳ ಖಾತೆ - - - - - - | ಖರ್ಚು | 45,000 | —— |
| C ನ ಬಂಡವಾಳ ಖಾತೆ - - - - - - | ಖರ್ಚು | 15,000 | —— |
| ಕೀರ್ತಿಮೌಲ್ಯದ ಖಾತೆಗೆ | | —— | 60,000 |

(ಕೀರ್ತಿಮೌಲ್ಯವನ್ನು ಉಳಿದ ಪಾಲುದಾರರ ಬಂಡವಾಳ ಖಾತೆಗಳ ವಿರುದ್ಧ ಹೊಸ ಅನುಪಾತದಲ್ಲಿ ತೆಗೆದು ಹಾಕಿರುವುದು)

(ಸಿ) ಕೀರ್ತಿಮೌಲ್ಯವನ್ನು ಕೇವಲ ನಿವೃತ್ತ ಪಾಲುದಾರನ ಪಾಲನ್ನು ಮಾತ್ರ ಸೃಷ್ಟಿಸಿ ತಕ್ಷಣ ತೆಗೆದು ಹಾಕಿದಾಗ :

| | | | |
|---|---|---|---|
| (i) ಕೀರ್ತಿಮೌಲ್ಯದ ಖಾತೆ - - - - - - - | ಖರ್ಚು | 20,000 | —— |
| B ನ ಬಂಡವಾಳ ಖಾತೆಗೆ | | —— | 20,000 |

(B ನ ಪಾಲಿನ ಕೀರ್ತಿಮೌಲ್ಯವನ್ನು ಮಾತ್ರ ಸೃಷ್ಟಿಸಿದ್ದು)

| | | | |
|---|---|---|---|
| (ii) A ನ ಬಂಡವಾಳ ಖಾತೆ - - - - - - - | ಖರ್ಚು | 15,000 | —— |
| B ನ ಬಂಡವಾಳ ಖಾತೆ - - - - - - - | ಖರ್ಚು | 5,000 | —— |
| ಕೀರ್ತಿಮೌಲ್ಯದ ಖಾತೆಗೆ | | —— | 20,000 |

(ಕೀರ್ತಿಮೌಲ್ಯವನ್ನು ಉಳಿದ ಪಾಳುದಾರರ ಬಂಡವಾಳ ಖಾತೆಗಳಲ್ಲಿ ಗಳಿಕೆ ಅನುಪಾತದಲ್ಲಿ ಖರ್ಚು ಬರೆಯುವ ಮೂಲಕ ತೆಗೆದು ಹಾಕಿದ್ದು)

(ಡಿ) ಸಂಸ್ಥೆಯ ಲೆಕ್ಕ ಪುಸ್ತಕಗಳಲ್ಲಿ ಕೀರ್ತಿಮೌಲ್ಯವನ್ನು ತೋರಿಸದೇ ಇದ್ದಾಗ :

| | | | |
|---|---|---|---|
| A ನ ಬಂಡವಾಳ ಖಾತೆ - - - - - - - | ಖರ್ಚು | 15,000 | ----- |
| C ನ ಬಂಡವಾಳ ಖಾತೆ - - - - - - - | ಖರ್ಚು | 5,000 | ----- |
| B ನ ಬಂಡವಾಳ ಖಾತೆ | | ----- | 20,000 |

(B ನ ಪಾಲಿನ ಕೀರ್ತಿಮೌಲ್ಯವನ್ನು ಗಳಿಕೆ ಅನುಪಾತದಲ್ಲಿ ಉಳಿದ ಪಾಲುದಾರರ ಬಂಡವಾಳ ಖಾತೆಗಳಿಗೆ ಹೊಂದಾಣಿಕೆ ಮಾಡಿದ್ದು)

ಉಳಿದ ಪಾಲುದಾರರ ನಡುವಿನ ಹೊಸ ಲಾಭ ಹಂಚಿಕೆಯ ಮೇಲಿನ ನಿರ್ಧಾರದ ಪರಿಣಾಮದಿಂದಾಗಿ, ಮುಂದುವರೆಯುವ ಪಾಲುದಾರನೊಬ್ಬ ಕೂಡ ತನ್ನ ಭವಿಷ್ಯದ ಲಾಭಗಳಲ್ಲಿನ ಪಾಲನ್ನು ತ್ಯಾಗ ಮಾಡುವುದು ಆಗಬಹುದು ಅಂತಹ ಸಂದರ್ಭದಲ್ಲಿ ಆತನ ಬಂಡವಾಳ ಖಾತೆಯನ್ನೂ ಕೂಡ ನಿವೃತ್ತ/ನಿಧನ ಹೊಂದಿದ ಪಾಲುದಾರರ ಬಂಡವಾಳ ಖಾತೆಯ ಜೊತೆಗೆ ಆತನ ತ್ಯಾಗದ ಪ್ರಮಾಣದಂತೆ ಜಮಾ ಬರೆಯಲಾಗುತ್ತದೆ. ಮತ್ತು ಇತರ ಮುಂದುವರೆಯುವ ಪಾಲುದಾರರ ಬಂಡವಾಳ ಖಾತೆಗಳನ್ನು ಭವಿಷ್ಯದ ಲಾಭದ ಅನುಪಾತದಲ್ಲಿ ಅವರ ಗಳಿಕೆಯ ಆಧಾರದ ಮೇಲೆ ಖರ್ಚು ಹಾಕಲಾಗುತ್ತದೆ.

**ನಿದರ್ಶನ – 6**

ಕೇಶವ, ನಿರ್ಮಲ್ ಮತ್ತು ಪಂಕಜ ಪಾಲುದಾರರು 4:3:2 ರ ಅನುಪಾತದಲ್ಲಿ ಲಾಭ ಮತ್ತು ನಷ್ಟಗಳನ್ನು ಹಂಚಿಕೊಳ್ಳುತ್ತಿದ್ದರು. ನಿರ್ಮಲ ನಿವೃತ್ತಿಯಾದಳು ಮತ್ತು ಕೀರ್ತಿಮೌಲ್ಯವನ್ನು ₹ 72,000 ಕ್ಕೆ ಮೌಲ್ಯೀಕರಿಸಲಾಯಿತು. ಕೇಶವ ಮತ್ತು ಪಂಕಜ ಭವಿಷ್ಯದ ಲಾಭ ಮತ್ತು ನಷ್ಟಗಳನ್ನು 5:3 ರ ಅನುಪಾತದಲ್ಲಿ ಹಂಚಿಕೊಳ್ಳಲು ನಿರ್ಧರಿಸುತ್ತಾರೆ. ಕೆಳಗಿನ ಸಂದರ್ಭಗಳಲ್ಲಿ ಅವಶ್ಯಕ ರೋಜು ದಾಖಲೆಗಳನ್ನು ಬರೆಯಿರಿ.

(ಎ) ಕೀರ್ತಿಮೌಲ್ಯವನ್ನು ಪೂರ್ಣ ಪ್ರಮಾಣದಲ್ಲಿ ಸೃಷ್ಟಿಸಿ ತಕ್ಷಣವೇ ತೆಗೆದು ಹಾಕಿದಾಗ,

(ಬಿ) ಕೀರ್ತಿಮೌಲ್ಯವನ್ನು ಸಂಸ್ಥೆಯ ಲೆಕ್ಕ ಪುಸ್ತಕಗಳಲ್ಲಿ ತೋರಿಸದೇ ಇದ್ದಾಗ.

**ಪರಿಹಾರ:**

(ಎ) ಕೀರ್ತಿಮೌಲ್ಯಗಳನ್ನು ಸೃಷ್ಟಿಸಿದಾಗ ಮತ್ತು ತೆಗೆದು ಹಾಕಿದಾಗ:

**ರೋಜು ದಾಖಲೆ**

| ದಿನಾಂಕ | ವಿವರಗಳು | ಖಾ.ಪಾ. | ಖರ್ಚು ₹ | ಜಮಾ ₹ |
|---|---|---|---|---|
| (i) | ಕೀರ್ತಿಮೌಲ್ಯ ಖಾತೆ - - - - - - - - - - ಖರ್ಚು | | 72,000 | —— |
| | ಕೇಶವನ ಬಂಡವಾಳ ಖಾತೆಗೆ | | —— | 32,000 |
| | ನಿರ್ಮಲಳ ಬಂಡವಾಳ ಖಾತೆಗೆ | | —— | 24,000 |
| | ಪಂಕಜಳ ಬಂಡವಾಳ ಖಾತೆಗೆ | | —— | 16,000 |
| | (ಕೀರ್ತಿಮೌಲ್ಯವನ್ನು ಪೂರ್ಣ ಪ್ರಮಾಣದಲ್ಲಿ ಹಳೆಯ ಲಾಭ ಹಂಚಿಕೆಯ ಅನುಪಾತದಲ್ಲಿ ಸೃಷ್ಟಿಸಲಾಯಿತು) | | | |

| | | | | |
|---|---|---|---|---|
| (ii) | ಕೇಶವನ ಬಂಡವಾಳ ಖಾತೆ - - - - - - - - ಖರ್ಚು | | 45,000 | —— |
| | ಪಂಕಜಳ ಬಂಡವಾಳ ಖಾತೆ - - - - - - - - ಖರ್ಚು | | 27,000 | —— |
| | ಕೀರ್ತಿಮೌಲ್ಯ ಖಾತೆಗೆ | | —— | 72,000 |
| | (ಕೀರ್ತಿ ಮೌಲ್ಯವನ್ನು ಹೊಸ ಲಾಭ ಹಂಚಿಕೆಯ ಅನುಪಾತದಲ್ಲಿ ತೆಗೆದು ಹಾಕಲಾಯಿತು) | | | |

(ಬಿ) ಕೀರ್ತಿಮೌಲ್ಯವನ್ನು ಸಂಸ್ಥೆಯ ಲೆಕ್ಕ ಪುಸ್ತಕಗಳಲ್ಲಿ ತೋರಿಸದೇ ಇದ್ದಾಗ

**ರೋಜು ದಾಖಲೆ**

| ದಿನಾಂಕ | ವಿವರಗಳು | ಖಾ.ಪಾ. | ಖರ್ಚು ₹ | ಜಮಾ ₹ |
|---|---|---|---|---|
| | ಕೇಶವನ ಬಂಡವಾಳ ಖಾತೆ - - - - - - - - ಖರ್ಚು | | 13,000 | —— |
| | ಪಂಕಜಳ ಬಂಡವಾಳ ಖಾತೆ - - - - - - - - ಖರ್ಚು | | 11,000 | —— |
| | ನಿರ್ಮಲಳ ಬಂಡವಾಳ ಖಾತೆಗೆ | | —— | 24,000 |
| | (ಕೀರ್ತಿಮೌಲ್ಯದಲ್ಲಿನ ನಿರ್ಮಲಳ ಪಾಲನ್ನು ಕೇಶವ ಮತ್ತು ಪಂಕಜರಿಗೆ 13 : 11 ರ ಗಳಿಕೆ ಅನುಪಾತದಲ್ಲಿ ಹೊಂದಾಣಿಕೆ ಮಾಡಲಾಯಿತು) | | | |

**ಟಿಪ್ಪಣಿ :**

(1) ಕೀರ್ತಿಮೌಲ್ಯದಲ್ಲಿನ ನಿರ್ಮಲಳ ಪಾಲು = ₹ 72,000 $\times \frac{3}{9} =$ ₹ 24,000

(2) ಗಳಿಕೆ ಅನುಪಾತವನ್ನು ಲೆಕ್ಕ ಹಾಕುವುದು

ಗಳಿಕೆ ಪಾಲು = ಹೊಸ ಪಾಲು – ಹಳೆಪಾಲು

ಕೇಶವನ ಗಳಿಕೆ ಪಾಲು = $\frac{5}{8} - \frac{4}{9} = \frac{13}{72}$

ಪಂಕಜಳ ಗಳಿಕೆ ಪಾಲು = $\frac{3}{8} - \frac{2}{9} = \frac{11}{72}$

ಹೀಗಾಗಿ ಕೇಶವ ಮತ್ತು ಪಂಕಜಳ ನಡುವಿನ ಗಳಿಕೆ ಅನುಪಾತವು 13:11 ಆಗಿರುತ್ತದೆ. ಅದು $\frac{13}{24} : \frac{11}{24}$

**ನಿದರ್ಶನ – 7**

ಜಯಾ, ಕೀರ್ತಿ, ಏಕತಾ ಮತ್ತು ಶ್ವೇತಾ ಪಾಲುದಾರರು ಸಂಸ್ಥೆಯ ಲಾಭ ಮತ್ತು ನಷ್ಟವನ್ನು 2:1:2:1 ರ ಅನುಪಾತದಲ್ಲಿ ಹಂಚಿಕೋಳ್ಳುತ್ತಿದ್ದರು. ಜಯಾಳ ನಿವೃತ್ತಿಯಾದಾಗ, ಸಂಸ್ಥೆಯ ಕೀರ್ತಿಮೌಲ್ಯವನ್ನು ₹36,000 ಕ್ಕೆ ಮೌಲ್ಯೀಕರಿಸಲಾಯಿತು ಕೀರ್ತಿ, ಏಕತಾ ಮತ್ತು ಶ್ವೇತಾ ಭವಿಷ್ಯದ ಲಾಭವನ್ನು ಸಮನಾಗಿ ಹಂಚಿಕೊಳ್ಳಲು ನಿರ್ಧರಿಸಿದರು.

ಕೀರ್ತಿಮೌಲ್ಯ ಖಾತೆಯನ್ನು ತೆರೆಯದೇ ಕೀರ್ತಿಮೌಲ್ಯವನ್ನು ಪರಿಗಣನೆ ಮಾಡಲು ಅವಶ್ಯವಾದ ರೋಜು ದಾಖಲೆ ಬರೆಯಿರಿ

**ಪರಿಹಾರ:**

**ಕೀರ್ತಿ, ಏಕತಾ ಮತ್ತು ಶ್ವೇತಾರ ಪುಸ್ತಕದಲ್ಲಿ**

**ಖರ್ಚು** **ರೋಜು ದಾಖಲೆ** **ಜಮೆ**

| ದಿನಾಂಕ | ವಿವರಗಳು | ಖಾ.ಪಾ. | ಖರ್ಚು ₹ | ಜಮಾ ₹ |
|---|---|---|---|---|
| | ಕೀರ್ತಿಯ ಬಂಡವಾಳ ಖಾತೆ - - - - - - - - ಖರ್ಚು | | 6,000 | —— |
| | ಶ್ವೇತಾಳ ಬಂಡವಾಳ ಖಾತೆ - - - - - - - - ಖರ್ಚು | | 6,000 | —— |
| | ಜಯಾಳ ಬಂಡವಾಳ ಖಾತೆಗೆ | | —— | 12,000 |
| | (ಕೀರ್ತಿಮೌಲ್ಯದಲ್ಲಿನ ಜಯಾಳ ಪಾಲನ್ನು ಉಳಿದ ಪಾಲುದಾರಿಗೆ ಅವರ ಗಳಿಕೆ ಅನುಪಾತದಲ್ಲಿ ಹೊಂದಾಣಿಕೆ ಮಾಡಲಾಯಿತು) | | | |

**ಟಿಪ್ಪಣಿ :**

1. ಕೀರ್ತಿಮೌಲ್ಯದಲ್ಲಿನ ಜಯಾಳ ಪಾಲು = ₹ 36,000 $\times \frac{2}{6} =$ 12,000
2. ಗಳಿಕೆ ಅನುಪಾತದ ಲೆಕ್ಕಾಚಾರ

ಗಳಿಕೆ ಪಾಲು = ಹೊಸ ಪಾಲು – ಹಳೆಯ ಪಾಲು

ಕೀರ್ತಿಯ ಗಳಿಕೆ = $\frac{1}{3}-\frac{1}{6}=\frac{2-1}{6}=\frac{1}{6}$

ಏಕತಾಳ ಗಳಿಕೆ = $\frac{1}{3}-\frac{2}{6}=\frac{2-2}{6}=\frac{0}{6}$ (ಗಳಿಕೆಯೂ ಇಲ್ಲ; ತ್ಯಾಗವೂ ಇಲ್ಲ)

ಶ್ವೇತಾಳ ಗಳಿಕೆ = $\frac{1}{3}-\frac{1}{6}=\frac{2-1}{6}=\frac{1}{6}$

ಹೀಗಾಗಿ, ಕೀರ್ತಿ ಮತ್ತು ಶ್ವೇತಾಳ ನಡುವಿನ ಗಳಿಕೆ ಅನುಪಾತ = $\frac{1}{6}:\frac{1}{6}=1:1$

**ನಿದರ್ಶನ – 8**

ದೀಪಾ, ನೀರೂ ಮತ್ತು ಶಿಲ್ಪಾ ಸಂಸ್ಥೆಯೊಂದರ ಪಾಲುದಾರರಾಗಿದ್ದು ಲಾಭವನ್ನು 5:3:2 ರ ಅನುಪಾತದಲ್ಲಿ ಹಂಚಿಕೊಳುತ್ತಿದ್ದರು. ನೀರೂ ನಿವೃತ್ತಿಯಾಗುತ್ತಾಳೆ ಮತ್ತು ದೀಪಾ ಮತ್ತು ಶಿಲ್ಪಾರವರ ಹೊಸ ಲಾಭ ಹಂಚಿಕಯ ಅನುಪಾತವು 2:3 ಆಗಿರುತ್ತದೆ. ನೀರೂನನು ನಿವೃತ್ತಿಯಾದಾಗ ಸಂಸ್ಥೆಯ ಕೀರ್ತಿ ಮೌಲ್ಯವನ್ನು ₹ 1,20,000 ಕ್ಕೆ ಮೌಲೀಕರಿಸಿತು. ನೀರೂನ ನಿವೃತ್ತಿಯಾದಾಗ ಕೀರ್ತಿ ಮೌಲ್ಯದ ಪರಿಗಣನೆಗಾಗಿ ಅವಶ್ಯವಾದ ರೋಜು ದಾಖಲೆ ಬರೆಯಿರಿ.

**ಪರಿಹಾರ:**

**ದೀಪಾ ಮತ್ತು ಶಿಲ್ಪಾರ ಪುಸ್ತಕದಲ್ಲಿ**

**ರೋಜು ದಾಖಲೆ**

| ದಿನಾಂಕ | ವಿವರಗಳು | ಖಾ.ಪಾ. | ಖರ್ಚು ₹ | ಜಮಾ ₹ |
|---|---|---|---|---|
| | ಶಿಲ್ಪಾಳ ಬಂಡವಾಳ ಖಾತೆ - - - - - - - - ಖರ್ಚು | | 48,000 | —— |
| | ನೀರೂನ ಬಂಡವಾಳ ಖಾತೆ | | —— | 36,000 |
| | ದೀಪಾಳ ಬಂಡವಾಳ ಖಾತೆ | | —— | 12,000 |
| | (ಕೀರ್ತಿಮೌಲ್ಯದಲ್ಲಿನ ನೀರೂವ ಪಾಲಿಗೆ ಮತ್ತು ನೀರೂನ ನಿವೃತ್ತಿಯಾದಾಗ ದೀಪಾಳು ಮಾಡಿದ ತ್ಯಾಗಕ್ಕೆ ಶಿಲ್ಪಾಳು ಪರಿಹಾರ ನೀಡಿದಳು) | | | |

**ಲೆಕ್ಕಾಚಾರದ ಟಿಪ್ಪಣಿ :**

1. ಗಳಿಕೆ ಅನುಪಾತ ಕಂಡು ಹಿಡಿಯುವುದು.

   ಗಳಿಕೆ ಪಾಲು = ಹೊಸ ಪಾಲು – ಹಳೇ ಪಾಲು

   ದೀಪಾಳ ಗಳಿಕೆ ಪಾಲು $= \frac{2}{5} - \frac{5}{10} = \frac{4-5}{10}$

   $= \frac{-1}{10} = \left[\frac{1}{10}\right]$ ಇದು ತ್ಯಾಗವಾಗಿದೆ.

   ಶಿಲ್ಪಾಳ ಗಳಿಕೆ ಪಾಲು $= \frac{3}{5} - \frac{2}{10} = \frac{6-2}{10} = \frac{4}{10}$ ಇದು ಗಳಿಕೆಯಾಗಿದೆ.

2. ಹೀಗಾಗಿ ಈ ಕೆಳಗೆ ಬಿಡಿಸಿದಂತೆ ತಮ್ಮ ತ್ಯಾಗದ ಪ್ರಮಾಣದ ವರೆಗೆ ನೀರೂ (ನಿವೃತ್ತಿ ಪಾಲುದಾರ) ಮತ್ತು ದೀಪಾ (ಮುಂದುವರೆಯುವ ಪಾಲುದಾರ) ಇಬ್ಬರಿಗೂ ಶಿಲ್ಪಾಳು ಪರಿಹಾರ ನೀಡುವಳು.

   ದೀಪಾಳ ತ್ಯಾಗ = ಸಂಸ್ಥೆಯ ಕೀರ್ತಿ ಮೌಲ್ಯ × ತ್ಯಾಗದ ಪಾಲು

   $= ₹\,1{,}20{,}000 \times \frac{1}{10}$

   = ₹ 12,000

   ನೀರೂ (ನಿವೃತ್ತ ಪಾಲುದಾರ)ನ ತ್ಯಾಗ $= ₹\ 12{,}0000 \times \frac{3}{10}$

   = ₹ 36,000

**ನಿಮ್ಮ ತಿಳುವಳಿಕೆಯನ್ನು ಪರೀಕ್ಷಿಸಿಕೊಳ್ಳಿರಿ – I**

**Test Your Understanding - I**

**ಈ ಕೆಳಗಿನ ಪ್ರಶ್ನೆಗಳಲ್ಲಿ ಸರಿಯಾದುದನ್ನು ಆಯ್ಕೆ ಮಾಡಿ**

1. ಅಬಿಷೇಕ್, ರಜತ್, ಮತ್ತು ವಿವೇಕ ಪಾಲುದಾರರು ಲಾಭವನ್ನು 5:3:2 ರ ಅನುಪಾತದಲ್ಲಿ ಹಂಚಿಕೊಳ್ಳುತ್ತಿದ್ದರು. ವಿವೇಕನು ನಿವೃತ್ತನಾದರೆ, ಅಭಿಷೇಕ ಮತ್ತು ರಜತ್ ಇವರ ನಡುವಿನ ಹೊಸ ಲಾಭ ಹಂಚಿಕೆಯ ಅನುಪಾತವು

   (ಎ) 3 : 2  (ಬಿ) 5 : 3  (ಸಿ) 5 : 2  (ಡಿ) ಯಾವುದೂ ಅಲ್ಲ

2. ರಾಜೇಂದರ್, ಸತೀಶ ಮತ್ತು ತೇಜಪಾಲ್ ಇವರ ಹಳೇ ಲಾಭ ಹಂಚಿಕೆಯ ಅನುಪಾತವು 2 : 2 : 1 ಆಗಿರುತ್ತದೆ. ಸತೀಶನ ನಿವೃತ್ತಿಯ ನಂತರದಲ್ಲಿ ಹೊಸ ಲಾಭ ಹಂಚಿಕೆಯ ಅನುಪಾತವು 3 :2 ಇರುತ್ತದೆ. ಗಳಿಕೆ ಅನುಪಾತವು

   (ಎ) 3 : 2  (ಬಿ) 2 : 1  (ಸಿ) 1 : 1  (ಡಿ) 2 : 2

3. ಆನಂದ, ಬಹಾದ್ದೂರ ಮತ್ತು ಚಂದರ್ ಪಾಲುದಾರರು ಸಮನಾಗಿ ಲಾಭವನ್ನು ಹಂಚಿಕೊಳ್ಳುತ್ತಾರೆ. ಚಂದರ್‌ನು ನಿವೃತ್ತಿಯಾದಾಗ ಆತನ ಪಾಲನ್ನು 3 : 2 ರ ಅನುಪಾತದಲ್ಲಿ ಆನಂದ ಮತ್ತು ಬಹುದ್ದೂರ ಪಡೆಯುತ್ತಾರೆ. ಆನಂದ ಮತ್ತು ಬಹದ್ದೂರ ನಡುವಿನ ಹೊಸ ಲಾಭ ಹಂಚಿಕೆಯ ಅನುಪಾತವು

   (ಎ) 8 : 7  (ಬಿ) 4 : 5  (ಸಿ) 3 : 2  (ಡಿ) 2 : 3

4. ಉಳಿದ ಪಾಲುದಾರರು ನಿವೃತ್ತ/ನಿಧನನಾದ ಪಾಲುದಾರನ ಲಾಭದ ಪಾಲನ್ನು ಪಡೆಯುವ ಕುರಿತು ಯಾವುದೇ ಮಾಹಿತಿಯು ಇಲ್ಲವಾದಾಗ ಆತನ ಪಾಲನ್ನು ಅವರು ಈ ಕೆಳಗಿನಂತೆ ಪಡೆಯುತ್ತಾರೆಂದು ಊಹಿಸಲಾಗುತ್ತದೆ.

   (ಎ) ಹಳೇ ಲಾಭ ಹಂಚಿಕೆಯ ಅನುಪಾತ  (ಬಿ) ಹೊಸ ಲಾಭ ಹಂಚಿಕೆಯ ಅನುಪಾತ

   (ಸಿ) ಸಮನಾದ ಅನುಪಾತ  (ಡಿ) ಯಾವುದೂ ಅಲ್ಲ

**ನಿದರ್ಶನ – 9**

ಹನ್ನಿ, ಪಮ್ಮಿ ಮತ್ತು ಸನ್ನಿ ಪಾಲುದಾರರು 3 : 2: 1 ರ ಅನುಪಾತದಲ್ಲಿ ಲಾಭವನ್ನು ಹಂಚಿಕೊಳ್ಳುತ್ತಾರೆ ಲೆಕ್ಕ ಪುಸ್ತಕಗಳಲ್ಲಿ ಕೀರ್ತಿ ಮೌಲ್ಯವನ್ನು ₹60,000 ಕ್ಕೆ ತೋರಿಸಲಾಗಿದೆ.

ಪಮ್ಮಿ ನಿವೃತ್ತನಾಗುತ್ತಾನೆ ಮತ್ತು ಆತನ ನಿವೃತ್ತಿಯ ಸಮಯದಲ್ಲಿ ಕೀರ್ತಿಮೌಲ್ಯವನ್ನು ₹84,000 ಕ್ಕೆ ಮೌಲ್ಯೀಕರಿಸಲಾಗಿದೆ. ಭವಿಷ್ಯದ ಲಾಭವನ್ನು ಹನ್ನಿ ಮತ್ತು ಸನ್ನಿ 2 : 1 ರ ಅನುಪಾತದಲ್ಲಿ ಹಂಚಿಕೊಳ್ಳಲು ನಿರ್ಧರಿಸುತ್ತಾರೆ. ಅವಶ್ಯಕವಾದ ರೋಜು ದಾಖಲೆಗಳನ್ನು ದಾಖಲಿಸಿ.

**ಪರಿಹಾರ:**

**ಹನ್ನಿ ಮತ್ತು ಸನ್ನಿರವರ ಲೆಕ್ಕ ಪುಸ್ತಕದಲ್ಲಿ**
**ರೋಜು ದಾಖಲೆ**

| ದಿನಾಂಕ | ವಿವರಗಳು | ಖಾ.ಪಾ. | ಖರ್ಚು ₹ | ಜಮಾ ₹ |
|---|---|---|---|---|
| | ಹನ್ನಿನ ಬಂಡವಾಳ ಖಾತೆ - - - - - - - - ಖರ್ಚು | | 30,000 | —— |
| | ಪಮ್ಮಿನ ಬಂಡವಾಳ ಖಾತೆ - - - - - - - - ಖರ್ಚು | | 20,000 | —— |
| | ಸನ್ನಿನ ಬಂಡವಾಳ ಖಾತೆ - - - - - - - - - ಖರ್ಚು | | 10,000 | —— |
| | ಕೀರ್ತಿಮೌಲ್ಯ ಖಾತೆಗೆ | | | 60,000 |
| | (ಅಸ್ತಿತ್ವದಲ್ಲಿರುವ ಕೀರ್ತಿಮೌಲ್ಯವನ್ನು ಹಳೇ ಅನುಪಾತದಲ್ಲಿ ತೆಗೆದು ಹಾಕಲಾಗಿದೆ) | | | |

| | | | | |
|---|---|---|---|---|
| | ಹನ್ನಿನ ಬಂಡವಾಳ ಖಾತೆ - - - - - - - - ಖರ್ಚು | | 14,000 | —— |
| | ಸನ್ನಿನ ಬಂಡವಾಳ ಖಾತೆ - - - - - - - - ಖರ್ಚು | | 14,000 | —— |
| | ಪಮ್ಮಿನ ಬಂಡವಾಳ ಖಾತೆಗೆ | | —— | 28,000 |
| | (ಪಮ್ಮಿಯ ಕೀರ್ತಿಮೌಲ್ಯದ ಪಾಲನ್ನು ಹನ್ನಿ ಮತ್ತು ಸನ್ನಿಯ ಬಂಡವಾಳ ಖಾತೆಗೆ ಅವರ ಗಳಿಕೆ ಪ್ರಮಾಣದಲ್ಲಿ ಹೊಂದಾಣಿಕೆ ಮಾಡಿದೆ) | | | |

**ಲೆಕ್ಕಾಚಾರದ ಟಿಪ್ಪಣಿ :**

1. ಪಮ್ಮಿಯ ಕೀರ್ತಿಮೌಲ್ಯದಲ್ಲಿನ ಚಾಲ್ತಿ ಮೌಲ್ಯವನ್ನು ₹ 84000 ದಲ್ಲಿ $\frac{1}{3}$ = 84,000 × $\frac{1}{3}$ = ₹ 28,000
2. ಗಳಿಕೆ ಪಾಲು = ಹೊಸ ಪಾಲು – ಹಳೆಪಾಲು

   ಹನ್ನಿಯ ಗಳಿಕೆ ಪಾಲು = $\frac{2}{3}-\frac{3}{6}=\frac{1}{6}$

   ಸನ್ನಿಯ ಗಳಿಕೆ ಪಾಲು = $\frac{1}{3}-\frac{1}{6}=\frac{1}{6}$

   ಹನ್ನಿ ಮತ್ತು ಸನ್ನಿಯ ಗಳಿಕೆ ಅನುಪಾತವು $\frac{1}{6}:\frac{1}{6}=$ 1 : 1

### 4.4.2 ಕೀರ್ತಿಮೌಲ್ಯವನ್ನು ಈಗಾಗಲೇ ಪುಸ್ತಕಗಳಲ್ಲಿ ತೋರಿಸಿದಾಗ :

ಈಗಾಗಲೇ ಪುಸ್ತಕಗಳಲ್ಲಿ ತೋರಿಸಿದ ಕೀರ್ತಿಮೌಲ್ಯದ ಮೊತ್ತವು ಪ್ರಸ್ತುತ ಕೀರ್ತಿಮೌಲ್ಯಕ್ಕೆ ಸಮನಾದರೆ, ಸಾಮಾನ್ಯವಾಗಿ ಹೊಂದಾಣಿಕೆಯನ್ನು ಮಾಡಬೇಕಾಗಿಲ್ಲ. ಏಕೆಂದರೆ ನಿವೃತ್ತಿಯಾದ ಪಾಲುದಾರರನ್ನು ಒಳಗೊಂಡಂತೆ ಎಲ್ಲಾ ಪಾಲುದಾರರ ಖಾತೆಗಳಿಗೆ ಜಮೆ ಮಾಡಲಾಗಿರುತ್ತದೆ. ಒಂದು ವೇಳೆ ಕೀರ್ತಿಮೌಲ್ಯದ ಚಾಲ್ತಿ ಮೊತ್ತವು ಪುಸ್ತಕದ ಮೌಲ್ಯಕ್ಕಿಂತ ಭಿನ್ನವಾಗಿದ್ದರೆ ಒಂದು ಹೊಂದಾಣಿಕೆ ದಾಖಲೆಯನ್ನು, ಈಗಾಗಲೇ ತೋರಿಸಿದ ಮೊತ್ತಕ್ಕೆ (ಪುಸ್ತಕದ ಮೌಲ್ಯವೆಂದು ಕರೆಯುತ್ತಾರೆ) ಮತ್ತು ಪ್ರಸ್ತುತ ಮೌಲ್ಯಕ್ಕಿರುವ ವ್ಯತ್ಯಾಸಕ್ಕೆ ಬರೆಯಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ಎರಡು ಸಾಧ್ಯತೆಗಳಿವೆ.

(ಎ) ಕೀರ್ತಿಮೌಲ್ಯದ ಪುಸ್ತಕದ ಮೌಲ್ಯವು ಅದರ ಪ್ರಸ್ತುತ ಮೌಲ್ಯಕ್ಕಿಂತ ಕಡಿಮೆ ಇದ್ದರೆ ಮತ್ತು

(ಬಿ) ಪುಸ್ತಕದ ಮೌಲ್ಯವು ಪ್ರಸ್ತುತ ಮೌಲ್ಯಕ್ಕಿಂತ ಹೆಚ್ಚಾಗಿದ್ದರೆ. ಇವುಗಳನ್ನು ಈ ಮುಂದಿನಂತೆ ಚರ್ಚಿಸಲಾಗಿದೆ.

(ಎ) **ಕೀರ್ತಿಮೌಲ್ಯದ ಪುಸ್ತಕದ ಮೌಲ್ಯವು ಪ್ರಸ್ತುತ ಮೌಲ್ಯಕ್ಕಿಂತ ಕಡಿಮೆಯಾಗಿದ್ದರೆ.** ಈ ಸಂದರ್ಭದಲ್ಲಿ ಕೀರ್ತಿ ಮೌಲ್ಯವನ್ನು ಸದ್ಯದ ಮೌಲ್ಯಕ್ಕೆ ಸೃಷ್ಟಿಸಲಾಗುವುದು. ಪುಸ್ತಕ ಮೌಲ್ಯಕ್ಕಿಂತ ಅಧಿಕವಾಗಿರುವ ಪ್ರಸ್ತುತ ಕೀರ್ತಿ ಮೌಲ್ಯದ ಮೊತ್ತವನ್ನು ಕೀರ್ತಿಮೌಲ್ಯದ ಖಾತೆಗೆ ಖರ್ಚು ಹಾಕಿ, ಎಲ್ಲಾ ಪಾಲುದಾರರ ಬಂಡವಾಳ ಖಾತೆಗಳಿಗೆ ಜಮಾ ಮಾಡಲಾಗುವುದು.

**ಉದಾಹರಣೆ:** ದೀಪಕ್, ನಕುಲ್ ಮತ್ತು ರಾಜೇಶ್ ಪಾಲುದಾರರು 5:3:2 ರ ಅನುಪಾತದಲ್ಲಿ ಲಾಭವನ್ನು ಹಂಚಿಕೊಳ್ಳುತ್ತಿದ್ದರು. ಪುಸ್ತಕಗಳಲ್ಲಿ ಕೀರ್ತಿಮೌಲ್ಯದ ಮೊತ್ತವು ₹20,000 ಕ್ಕೆ ಕಂಡು ಬರುತ್ತದೆ. ನಕುಲ್‌ನು ನಿವೃತ್ತನಾಗುತ್ತಾನೆ ಮತ್ತು ನಕುಲ್‌ನ ನಿವೃತ್ತಿಯ ದಿನದಂದು ಕೀರ್ತಿಮೌಲ್ಯವನ್ನು ₹24,000 ಕ್ಕೆ ಮೌಲ್ಯೀಕರಿಸಲಾಯಿತು. ಈ ಸಂಧರ್ಭದಲ್ಲಿ ಈ ಕೆಳಗಿನ ರೋಜು ದಾಖಲೆಯನ್ನು ದಾಖಲಿಸಬಹುದು.

**ದೀಪಕ್, ನಕುಲ್ ಮತ್ತು ರಾಜೇಶ್‌ರ ಪುಸ್ತಕದಲ್ಲಿ**

**ರೋಜು ದಾಖಲೆ**

| ದಿನಾಂಕ | ವಿವರಗಳು | ಖಾ.ಪಾ | ಖರ್ಚು ₹ | ಜಮಾ ₹ |
|---|---|---|---|---|
| | ಕೀರ್ತಿಮಾಲ್ಯದ ಖಾತೆ ---- ---- ಖರ್ಚು | | 4,000 | |
| | ದೀಪಕ್‌ನ ಬಂಡವಾಳ ಖಾತೆಗೆ | | --- | 2,000 |
| | ನಕುಲ್‌ನ ಬಂಡವಾಳ ಖಾತೆಗೆ | | --- | 1,200 |
| | ರಾಜೇಶ್‌ನ ಬಂಡವಾಳ ಖಾತೆಗೆ | | --- | 800 |
| | (ಕೀರ್ತಿಮೌಲ್ಯದಲ್ಲಾದ ಹೆಚ್ಚಳವನ್ನು ಎಲ್ಲಾ ಪಾಲುದಾರರ ಬಂಡವಾಳ ಖಾತೆಗಳಿಗೆ ಅವರ 5:3:2 ರ ಹಳೇ ಅನುಪಾತದಲ್ಲಿ ಜಮಾ ಮಾಡಿತು) | | | |

(ಬಿ) **ಕೀರ್ತಿಮೌಲ್ಯದ ಪುಸ್ತಕದಲ್ಲಿನ ಮೊತ್ತವು ಅದರ ಪ್ರಸ್ತುತ ಮೊತ್ತಕ್ಕಿಂತ ಹೆಚ್ಚಾಗಿದ್ದರೆ:** ಇಂತಹ ಸಂದರ್ಭದಲ್ಲಿ ಕೀರ್ತಿ ಮೌಲ್ಯವು ಪುಸ್ತಕದ ಮೌಲ್ಯ ಮತ್ತು ಪ್ರಸ್ತುತ ಮೌಲ್ಯದಲ್ಲಿನ ವ್ಯತ್ಯಾಸವನ್ನು ಕೀರ್ತಿಮೌಲ್ಯದ ಖಾತೆಗೆ ಜಮಾ ಬರೆದು ಮತ್ತು ಎಲ್ಲಾ ಪಾಲುದಾರರ ಬಂಡವಾಳ ಖಾತೆಗಳಿಗೆ ಅವರ ಹಳೇ ಲಾಭ ಹಂಚಿಕೆಯ ಅನುಪಾತದಲ್ಲಿ ಖರ್ಚು ಹಾಕಲಾಗುವುದು.

**ಉದಾಹರಣೆ:** ಮೋಹನಲಾಲ್, ಗಿರ್ಧಾರಿಲಾಲ್ ಮತ್ತು ಶಾಮಲಾಲ್ ಪಾಲುದಾರರು 4:3:1 ರ ಅನುಪಾತದಲ್ಲಿ ಲಾಭವನ್ನು ಹಂಚಿಕೊಳ್ಳುತ್ತಾರೆ. ಸಂಸ್ಥೆಯಿಂದ ಪಾಲುದಾರನಾದ ಶಾಮಲಾಲ್‌ನು ನಿವೃತ್ತನಾಗುತ್ತಾನೆ. ಶಾಮಲಾಲ್‌ನು ನಿವೃತ್ತಿಯಾದಾಗ ಕೀರ್ತಿ ಮೌಲ್ಯವನ್ನು ₹ 52,000 ಕ್ಕೆ ಮೌಲ್ಯೀಕರಿಸಲಾಯಿತು. ಈಗಾಗಲೇ ಸಂಸ್ಥೆಯ ಪುಸ್ತಕದಲ್ಲಿ ಕೀರ್ತಿ ಮಾಲ್ಯದ ಖಾತೆಯು ₹ 60,000 ಎಂದು ಕಂಡು ಬರುತ್ತದೆ. ಈ ಸಂದರ್ಭದಲ್ಲಿ ಕೆಳಗಿನ ರೋಜು ದಾಖಲೆಯನ್ನು ಬರೆಯಲಾಗುತ್ತದೆ.

**ಮೋಹನಲಾಲ್, ಗಿರ್ಧಾರಿಲಾಲ್ ಮತ್ತು ಶಾಮಲಾಲ್ ಇವರ ಪುಸ್ತಕ**

**ರೋಜು ದಾಖಲೆ**

| ದಿನಾಂಕ | ವಿವರಗಳು | ಖಾ.ಪಾ | ಖರ್ಚು ₹ | ಜಮಾ ₹ |
|---|---|---|---|---|
| | ಮೋಹನಲಾಲ್‌ನ ಬಂಡವಾಳ ಖಾತೆ ---- ಖರ್ಚು | | 4,000 | —— |
| | ಗಿರ್ಧಾರಿಲಾಲ್‌ನ ಬಂಡವಾಳ ಖಾತೆ ---- ಖರ್ಚು | | 3,000 | —— |
| | ಶ್ಯಾಮಲಾಲ್‌ನ ಬಂಡವಾಳ ಖಾತೆ ---- ಖರ್ಚು | | 1,000 | —— |
| | ಕೀರ್ತಿಮೌಲ್ಯ ಖಾತೆಗೆ | | | 8,000 |
| | (ಕೀರ್ತಿಮೌಲ್ಯದಲ್ಲಿನ ಇಳಿಕೆಯನ್ನು ಎಲ್ಲಾ ಪಾಲುದಾರರ ಬಂಡವಾಳ ಖಾತೆಗಳಲ್ಲಿ ಅವರ ಹಳೆ ಲಾಭ ಹಂಚಿಕೆಯ ಅನುಪಾತದಲ್ಲಿ ಹೊಂದಾಣಿಕೆ ಮಾಡಲಾಯಿತು.) | | | |

ಇಲ್ಲಿ ಗಮನಿಸಬಹುದಾದುದು ಏನೆಂದರೆ, ಮೇಲಿನ ಪ್ರಸಂಗಗಳಲ್ಲಿ ಕೀರ್ತಿಮೌಲ್ಯವನ್ನು ಅದರ ಪೂರ್ಣ ಪ್ರಮಾಣದ ಮೌಲ್ಯಕ್ಕೆ ಅಥಾವೆ ಪತ್ರಿಕೆಯಲ್ಲಿ ತೋರಿಸಲಾಗುತ್ತದೆ. ಒಂದು ವೇಳೆ ಅದನ್ನು ಪೂರ್ಣವಾಗಿ ಅಥವಾ ಭಾಗಶಃ ತೆಗೆದು ಹಾಕಲು ಪಾಲುದಾರರು ನಿರ್ಧರಿಸಿದ್ದರೆ. ಸಂಬಂಧಿಸಿದ ಮೌಲ್ಯದೊಂದಿಗೆ ಉಳಿದ ಪಾಲುದಾರರ ಬಂಡವಾಳ ಖಾತೆಗಳಲ್ಲಿ ಹೊಸ ಲಾಭ ಹಂಚಿಕೆಯ ಅನುಪಾತದಲ್ಲಿ ಖರ್ಚು ಹಾಕಿ, ಕೀರ್ತಿಮೌಲ್ಯದ ಖಾತೆಗೆ ಜಮಾ ಬರೆಯಬೇಕು.

ಪರ್ಯಾಯವಾಗಿ, ಕೀರ್ತಿಮೌಲ್ಯವನ್ನು ಅದರ ಪೂರ್ಣ ಮೌಲ್ಯದೊಂದಿಗೆ ಸೃಷ್ಟಿಸಿ, ನಂತರ ತೆಗೆದು ಹಾಕುವುದರ ಬದಲು, ಪಾಲುದಾರರು ನಿರ್ಧರಿಸಿದಲ್ಲಿ, ಪುಸ್ತಕಗಳಲ್ಲಿ ಕಂಡುಬಂದಂತೆ ಕೀರ್ತಿಮೌಲ್ಯವನ್ನು ಎಲ್ಲ ಪಾಲುದಾರರ ಖಾತೆಗಳಿಗೆ ಅವರ ಹಳೆಯ ಲಾಭ ಹಂಚಿಕೆಯ ಅನುಪಾತದಲ್ಲಿ ಖರ್ಚು ಹಾಕುವ ಮೂಲಕ ಮೊದಲು ತೆಗೆದು ಹಾಕಿ ಮತ್ತು ನಂತರ, ನಿವೃತ್ತಿಯಾಗುತ್ತಿರುವ / ನಿಧನ ಹೊಂದಿದ ಪಾಲುದಾರನಿಗೆ ಅವಶ್ಯ ಜಮೆಯನ್ನು ಮಾಡುವುದು, ಮುಂದುವರೆಯುವ ಪಾಲುದಾರರಿಗೆ ಅವರ ಗಳಿಕೆಯ ಅನುಪಾತದಲ್ಲಿ ಖರ್ಚು ಬರೆಯುವುದು ಹಾಗೂ ನಿವೃತ್ತಿಯಾದ / ನಿಧನನಾದ ಪಾಲುದಾರನಿಗೆ ಅವನ ಪಾಲಿನ ಕೀರ್ತಿಮೌಲ್ಯವನ್ನು ಜಮಾ ಮಾಡುವುದು.

### 4.4.3 ಮರೆಮಾಚಿದ ಕೀರ್ತಿಮೌಲ್ಯ Hidden Goodwill

ಒಮ್ಮೆ ಸಂಸ್ಥೆಯ ನಿವೃತ್ತನಾದ ಅಥವಾ ನಿಧನನಾದ ಪಾಲುದಾರನಿಗೆ ಒಟ್ಟು ಮೊತ್ತವನ್ನು ಒಂದೇ ಕಂತಿನಲ್ಲಿ ಪಾವತಿಸುವ ಮೂಲಕ ಚುಕ್ತಾ ಮಾಡಲು ಒಪ್ಪಿಕೊಂಡಿದ್ದರೆ, ಅವಶ್ಯಕ ಹೊಂದಾಣಿಕೆಗಳಾದ ಸಂಚಿತ ಲಾಭಗಳು ಮತ್ತು ನಷ್ಟಗಳು ಮತ್ತು ಆಸ್ತಿ ಮತ್ತು ಹೊಣೆಗಾರಿಕೆಗಳ ಪುನರ್ ಮೌಲ್ಯ, ಮುಂತಾದವುಗಳನ್ನು ಮಾಡಿದ ನಂತರ ಆತನ ಬಂಡವಾಳ ಖಾತೆಯಲ್ಲಿ ಬಾಕಿಯಲ್ಲಿರುವ ಶಿಲ್ಕಗಿಂತ ಹೆಚ್ಚಿನ ಮೊತ್ತವನ್ನು ಪಾವತಿಸಿದ್ದನ್ನು ಕೀರ್ತಿಮೌಲ್ಯದಲ್ಲಿ ತನ್ನ ಪಾಲು (ಮರೆಮಾಚಿದ ಕೀರ್ತಿಮೌಲ್ಯ ಎನ್ನುವರು) ಎಂದು ಪರಿಗಣಿಸಲಾಗುವುದು. ಉದಾಹರಣೆಗೆ, ಸಂಸ್ಥೆಯೊಂದರಲ್ಲಿ P, Q ಮತ್ತು R ಪಾಲುದಾರರು 3:2:1 ರ ಅನುಪಾತದಲ್ಲಿ ಲಾಭವನ್ನು ಹಂಚಿಕೊಳ್ಳುತ್ತಾರೆ. R ನು ನಿವೃತ್ತನಾದನು ಮತ್ತು ಮೀಸಲುಗಳು, ಆಸ್ತಿ ಮತ್ತು ಹೊಣಿಗಾರಿಕೆಗಳ ಪುನರ್ ಮೌಲ್ಯ ಮಾಪನಕ್ಕೆ ಸಂಬಂಧಿಸಿದ ಎಲ್ಲಾ ಅವಶ್ಯಕ ಹೊಂದಾಣಿಕೆಗಳನ್ನು ಮಾಡಿದ ನಂತರ, ಆತನ ಬಂಡವಾಳ ಖಾತೆಯಲ್ಲಿನ ಶಿಲ್ಕನ್ನು ₹ 60,000 ಎಂದು ಲೆಕ್ಕ ಹಾಕಲಾಯಿತು. P ಮತ್ತು Q ಪಾಲುದಾರರು ಆತನಿಗೆ ಕೊಡಬೇಕಾದ ಮೊತ್ತ ₹ 75,000 ಎಂದು ಪೂರ್ಣ ಚುಕ್ತಾ ಮಾಡಲು ಒಪ್ಪಿಕೊಳ್ಳುತ್ತಾರೆ. ಅದು ತಿಳಿಸುವುದೇನೆಂದರೆ, R ನ ಸಂಸ್ಥೆಯಲ್ಲಿನ ಕೀರ್ತಿಮೌಲ್ಯದ ಪಾಲು ₹ 15,000, ಇದನ್ನು P ಮತ್ತು Q ಪಾಲುದಾರರ ಬಂಡವಾಳ ಖಾತೆಗಳಿಗೆ ಅವರ ಗಳಿಕೆ ಅನುಪಾತದಲ್ಲಿ ಖರ್ಚು ಬರೆದು (ತಮ್ಮ ಸ್ವಂತ ಲಾಭ ಹಂಚಿಕೆಯ ಅನುಪಾತದಲ್ಲಿ ಯಾವುದೇ ಬದಲಾವಣೆಯಾಗಿಲ್ಲ ಎಂದು ಭಾವಿಸಿ 3:2) ಮತ್ತು R ನ ಬಂಡವಾಳ ಖಾತೆಗೆ ಜಮಾ ಈ ಕೆಳಗಿನಂತೆ ಬರೆಯಲಾಗುವುದು.

| ದಿನಾಂಕ | ವಿವರಗಳು | ಖಾ.ಪಾ | ಖರ್ಚು<br>₹ | ಜಮೆ<br>₹ |
|---|---|---|---|---|
| | P ನ ಬಂಡವಾಳ ಖಾತೆ - - - - - - - - ಖರ್ಚು | | 9,000 | —— |
| | Q ನ ಬಂಡವಾಳ ಖಾತೆ - - - - - - - - ಖರ್ಚು | | 6,000 | —— |
| | R ನ ಬಂಡವಾಳ ಖಾತೆಗೆ | | —— | 15,000 |
| | (ಕೀರ್ತಿಮೌಲ್ಯದಲ್ಲಿನ R ನ ಪಾಲನ್ನು P & Q ರ ಬಂಡವಾಳ ಖಾತೆಗಳಲ್ಲಿ 3:2 ರ ಗಳಿಕೆ ಅನುಪಾತದಲ್ಲಿ ಹೊಂದಾಣಿಕೆ ಮಾಡಿತು) | | | |

**ನಿಮ್ಮ ತಿಳುವಳಿಕೆಯನ್ನು ಪರೀಕ್ಷಿಸಿಕೊಳ್ಳಿರಿ – II**

**Test Your Understanding - II**

**ಈ ಕೆಳಗಿನ ಪ್ರಶ್ನೆಗಳಲ್ಲಿ ಸರಿಯಾದುದನ್ನು ಆಯ್ಕೆ ಮಾಡಿ**

1. ಪಾಲುದಾರನು ನಿವೃತ್ತ / ನಿಧನನಾದಾಗ, ಕೆಳಗಿನ ಮೊತ್ತವನ್ನು ನಿವೃತ್ತ / ನಿಧನನಾದ ಪಾಲುದಾರನ ಖಾತೆಗೆ ಜಮಾ ಬರೆಯಲಾಗುವುದು.
   (ಎ) ಕೀರ್ತಿಮೌಲ್ಯದ ಆತನ/ಆತಳ ಪಾಲು
   (ಬಿ) ಸಂಸ್ಥೆಯ ಕೀರ್ತಿಮೌಲ್ಯ
   (ಸಿ) ಉಳಿದ ಪಾಲುದಾರರ ಕೀರ್ತಿಮೌಲ್ಯದಲ್ಲಿನ ಪಾಲುಗಳು
   (ಡಿ) ಯಾವುದು ಅಲ್ಲ
2. ಗೋವಿಂದ, ಹರಿ ಮತ್ತು ಪ್ರತಾಪ ಪಾಲುದಾರರಾಗಿದ್ದು, ಗೋವಿನಂದನ ನಿವೃತ್ತಿಯಾದಾಗ ₹ 24,000 ಕೀರ್ತಿಮೌಲ್ಯವು ಈಗಾಗಲೆ ಅಢಾವೆ ಪತ್ರಿಯಲ್ಲಿ ಕಂಡುಬರುತ್ತದೆ. ಈ ಕೆಳಗಿನಂತೆ ಕೀರ್ತಿಮೌಲ್ಯವನ್ನು ತೆಗೆದು ಹಾಕಲಾಗುತ್ತದೆ:
   (ಎ) ಎಲ್ಲಾ ಪಾಲುದಾರರ ಬಂಡವಾಳ ಖಾತೆಗಳನ್ನು ಅವರ ಹಳೆ ಲಾಭ ಹಂಚಿಕೆಯ ಅನುಪಾತದಲ್ಲಿ ಖರ್ಚು ಬರೆಯುವದರಿಂದ
   (ಬಿ) ಉಳಿದ ಪಾಲುದಾರರ ಬಂಡವಾಳ ಖಾತೆಗಳನ್ನು ಅವರ ಹೊಸ ಲಾಭ ಹಂಚಿಕೆಯ ಅನುಪಾತದಲ್ಲಿ ಖರ್ಚು ಹಾಕವುದರಿಂದ
   (ಸಿ) ನಿವೃತ್ತ ಪಾಲುದಾರನ ಬಂಡವಾಳ ಖಾತೆಯನ್ನು ಆತನ ಕೀರ್ತಿಮೌಲ್ಯದ ಪಾಲಿನಿಂದ ಖರ್ಚು ಬರೆಯುವುದರಿಂದ
   (ಡಿ) ಯಾವುದೂ ಅಲ್ಲ
3. ಚಮನ್, ರಾಮನ್, ಮತ್ತು ಸುಮನ್ ಪಾಲುದಾರರು 5:3:2 ರ ಅನುಪಾತದಲ್ಲಿ ಲಾಭವನ್ನು ಹಂಚಿಕೊಳ್ಳುತ್ತಾರೆ. ರಾಮನ್‌ನು ನಿವೃತ್ತನಾದ. ಚಮನ್ ಮತ್ತು ಸುಮನ್‌ರ ನಡುವಿನ ಹೊಸ ಲಾಭ ಹಂಚಿಕೆಯ ಅನುಪಾತವು 1:1 ಆಗಿರುತ್ತದೆ. ಸಂಸ್ಥೆಯ ಕೀರ್ತಿಮೌಲ್ಯವನ್ನು ₹1,00,000 ಕ್ಕೆ ಮೌಲ್ಯೀಕರಿಸಲಾಗಿದೆ. ಕೀರ್ತಿಮೌಲ್ಯದಲ್ಲಿನ ರಾಮನ್‌ನ ಪಾಲನ್ನು ಈ ಮುಂದಿನಂತೆ ಹೊಂದಾಣಿಕೆ ಮಾಡಬಹುದು.
   (ಎ) ಪ್ರತಿಯೊಬ್ಬನಿಗೆ ₹ 15,000ದೊಂದಿಗೆ ಚಮನ್‌ನ ಬಂಡವಾಳ ಖಾತೆಯನ್ನು ಮತ್ತು ಸುಮನ್‌ನ ಬಂಡವಾಳ ಖಾತೆಯನ್ನು ಖರ್ಚು ಬರೆಯುವುದರಿಂದ
   (ಬಿ) ಅನುಕ್ರಮವಾಗಿ ₹ 21,429 ಮತ್ತು ₹ 8,571 ನ್ನು ಚಮನ್ ಮತ್ತು ಸುಮನ್‌ರ ಬಂಡವಾಳ ಖಾತೆಗಳಲ್ಲಿ ಖರ್ಚು ಹಾಕುವುದರಿಂದ
   (ಸಿ) ₹ 30,000 ನೊಂದಿಗೆ ಸುಮನ್‌ಳ ಬಂಡವಾಳ ಖಾತೆಯನ್ನು ಮಾತ್ರ ಖರ್ಚು ಬರೆಯುವುದರಿಂದ
   (ಡಿ) ₹ 30,000 ನೊಂದಿಗೆ ರಾಮನ್‌ನ ಬಂಡವಾಳ ಖಾತೆಯನ್ನು ಖರ್ಚು ಹಾಕುವುದರಿಂದ
4. ಪಾಲುದಾರರು ನಿವೃತ್ತ/ ನಿಧನನಾದಾಗ ಲಾಭ ಹಂಚಿಕೆಯ ಅನುಪಾತದಲ್ಲಾದ ಬದಲಾವಣೆಯಿಂದ ಗಳಿಸಿರುವಂತಹ ಉಳಿದ ಪಾಲುದಾರನಿ(ರಿ)ಗೆ ಈ ಕೆಳಗಿನಂತೆ ಪರಿಹಾರ ಒದಗಿಸತಕ್ಕದ್ದು.
   (ಎ) ನಿವೃತ್ತನಾದ ಪಾಲುದಾರನು ಮಾತ್ರ
   (ಬಿ) ಉಳಿದ ಪಾಲುದಾರರು (ಯಾರು ತ್ಯಾಗ ಮಾಡುತ್ತಾರೆಯೊ ಅವರು) ಮತ್ತು ನಿವೃತ್ತ ಪಾಲುದಾರರೂ ಕೂಡ
   (ಸಿ) ಉಳಿದ ಪಾಲುದಾರರು ಮಾತ್ರ (ತ್ಯಾಗ ಮಾಡಿದವರು)
   (ಡಿ) ಯಾವುದೂ ಅಲ್ಲ.

## 4.5 ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಪುನರ್ ಮೌಲ್ಯಮಾಪನಕ್ಕಾಗಿ ಹೊಂದಾಣಿಕೆ: Adjustment for Revaluation of Assets and Liabilities

ಪಾಲುದಾರನ ನಿವೃತ್ತಿ ಅಥವಾ ನಿಧನದ ಸಮಯದಲ್ಲಿ, ಅವುಗಳ ಪ್ರಸ್ತುತ ಮೌಲ್ಯಕ್ಕೆ ತೋರಿಸದೇ ಇರುವ ಕೆಲವು ಆಸ್ತಿಗಳಿರಬಹುದು. ಅದೇ ರೀತಿಯಾಗಿ ಸಂಸ್ಥೆಯ ಪಾವತಿಸಬೇಕಾದ ಕೆಲವು ಹೊಣೆಗಾರಿಕೆಗಳನ್ನು ತೋರಿಸಿದ ಮೌಲ್ಯದಲ್ಲಿ ವ್ಯತ್ಯಾಸವಾಗಿರಲೂಬಹುದು. ಅಷ್ಟೇ ಅಲ್ಲದೇ ಲೆಕ್ಕ ಪುಸ್ತಕಗಳಲ್ಲಿ ದಾಖಲಿಸದೇ ಇರುವ ಕೆಲವು ಆಸ್ತಿಗಳನ್ನು ಮತ್ತು ಹೊಣೆಗಾರಿಕೆಗಳನ್ನು ಪುಸ್ತಕಗಳಲ್ಲಿ ತರುವ ಅವಶ್ಯಕತೆ ಇರಬಹುದು. ಪಾಲುದಾರನ ಆಗಮನದ ಸಂದರ್ಭದಲ್ಲಿ ಕಲಿತಿರುವಂತೆ ಆಸ್ತಿಗಳ ಮತ್ತು/ಅಥವಾ ಹೊಣೆಗಾರಿಕೆಗಳ ಪುನರ್ ಮೌಲ್ಯಮಾಪನ ಮತ್ತು ದಾಖಲಿಸದೇ ಇರುವ ವಸ್ತುಗಳನ್ನು ಲೆಕ್ಕ ಪುಸ್ತಕಗಳಲ್ಲಿ ತರುವ ಮೂಲಕ ಆದ ನಿವ್ವಳ ಲಾಭ (ಹಾನಿ)ಯನ್ನು ಕಂಡು ಹಿಡಿಯುವುದಕ್ಕಾಗಿ ಪುನರ್‌ಮೌಲ್ಯ ಮಾಪನ ಖಾತೆಯನ್ನು ತಯಾರಿಸಲಾಗುತ್ತದೆ ಮತ್ತು ಅದನ್ನು ನಿವೃತ್ತ/ನಿಧನನಾದ ಪಾಲುದಾರನನ್ನು ಒಳಗೊಂಡಂತೆ ಎಲ್ಲಾ ಪಾಲುದಾರರ ಬಂಡವಾಳ ಖಾತೆಗಳಿಗೆ ಅವರ ಹಳೇ ಲಾಭ ಹಂಚಿಕೆಯ ಅನುಪಾತದಲ್ಲಿ ವರ್ಗಾಯಿಸಲಾಗುತ್ತದೆ.

ಈ ಉದ್ದೇಶಕ್ಕಾಗಿ ದಾಖಲು ಮಾಡಲಾಗುವ ರೋಜು ದಾಖಲೆಗಳು ಮುಂದಿನಂತಿವೆ.

1. ಆಸ್ತಿಗಳ ಮೌಲ್ಯದಲ್ಲಿ ಉಂಟಾದ ಹೆಚ್ಚಳಕ್ಕಾಗಿ:

| | | |
|---|---|---|
| ಆಸ್ತಿಗಳ (ವೈಯಕ್ತಿಕವಾಗಿ) ಖಾತೆ --- ಖರ್ಚು | xxx | — |
| ಪುನರ್ ಮೌಲ್ಯ ಖಾತೆಗೆ | — | xxx |
| (ಆಸ್ತಿಗಳ ಮೌಲ್ಯದಲ್ಲಿ ಹೆಚ್ಚಳವಾದದ್ದು) | | |

2. ಆಸ್ತಿಗಳ ಮೌಲ್ಯದಲ್ಲಿ ಉಂಟಾದ ಇಳಿಕೆಗಾಗಿ:

| | | |
|---|---|---|
| ಪುನರ್ ಮೌಲ್ಯ ಖಾತೆ --- ಖರ್ಚು | xxx | — |
| ಆಸ್ತಿಗಳ (ವೈಯಕ್ತಿಕವಾಗಿ) ಖಾತೆಗಳಿಗೆ | — | xxx |
| (ಆಸ್ತಿಗಳ ಮೌಲ್ಯದಲ್ಲಿ ಇಳಿಕೆಯಾದದ್ದು) | | |

3. ಹೊಣೆಗಾರಿಕೆಗಳ ಮೊತ್ತದಲ್ಲಿ ಆದ ಹೆಚ್ಚಳಕ್ಕಾಗಿ:

| | | |
|---|---|---|
| ಪುನರ್ ಮೌಲ್ಯ ಖಾತೆ --- ಖರ್ಚು | xxx | — |
| ಹೊಣೆಗಾರಿಕೆಗಳ(ವೈಯಕ್ತಿಕವಾಗಿ) ಖಾತೆಗಳಿಗೆ | — | xxx |
| (ಹೊಣೆಗಾರಿಕೆಗಳ ಮೊತ್ತದಲ್ಲಿ ಹೆಚ್ಚಳವಾದದ್ದು) | | |

4. ಹೊಣೆಗಾರಿಕೆಗಳ ಮೊತ್ತದಲ್ಲಿ ಇಳಿಕೆಯಾದಾಗ:

| | | |
|---|---|---|
| ಹೊಣೆಗಾರಿಕೆಗಳ ಖಾತೆಗಳಿಗೆ (ವೈಯಕ್ತಿಕವಾಗಿ) --- ಖರ್ಚು | xxx | — |
| ಪುನರ್ ಮೌಲ್ಯ ಖಾತೆಗೆ | — | xxx |
| (ಹೊಣೆಗಾರಿಕೆಗಳ ಮೊತ್ತದಲ್ಲಿ ಇಳಿಕೆಯಾದದ್ದು) | | |

5. ದಾಖಲಿಸದೇ ಇರುವ ಆಸ್ತಿಗಾಗಿ:

| | | |
|---|---|---|
| ಆಸ್ತಿಯ ಖಾತೆ --- ಖರ್ಚು | xxx | — |
| ಪುನರ್ ಮೌಲ್ಯ ಮಾಪನದ ಖಾತೆಗೆ | — | xxx |
| (ದಾಖಲಿಸಲೇ ಇರುವ ಆಸ್ತಿಯನ್ನು ಲೆಕ್ಕ ಪುಸ್ತಕಗಳಲ್ಲಿ ತಂದದ್ದಕ್ಕಾಗಿ) | | |

6. ದಾಖಲಿಸದೇ ಇರುವ ಹೊಣೆಗಾರಿಕೆಗಾಗಿ:

| | | |
|---|---|---|
| ಪುನರ್ ಮೌಲ್ಯ ಖಾತೆ --- ಖರ್ಚು | xxx | — |
| ಹೊಣೆಗಾರಿಕೆಯ ಖಾತೆಗೆ | — | xxx |

(ದಾಖಲಿಸದೇ ಇರುವ ಹೊಣೆಗಾರಿಕೆಯನ್ನು ಪುಸ್ತಕದಲ್ಲಿ ತಂದಿದ್ದಕ್ಕಾಗಿ)

7. ಪುನರ್‌ಮೌಲ್ಯದಿಂದ ಆದ ಲಾಭ ಅಥವಾ ನಷ್ಟವನ್ನು ಹಂಚುವುದಕ್ಕಾಗಿ:

| | | |
|---|---|---|
| ಪುನರ್‌ಮೌಲ್ಯ ಮಾಪನ ಖಾತೆ --- ಖರ್ಚು | xxx | — |
| ಎಲ್ಲಾ ಪಾಲುದಾರರ ಬಂಡವಾಳ ಖಾತೆಗಳಿಗೆ (ವೈಯಕ್ತಿಕವಾಗಿ) | — | xxx |

(ಪುನರ್ ಮೌಲ್ಯ ಮಾಪನದಿಂದಾದ ಲಾಭವನ್ನು ಪಾಲುದಾರರ ಬಂಡವಾಳಕ್ಕೆ ವರ್ಗಾಯಿಸಿದ್ದು)

(ಅಥವಾ)

| | | |
|---|---|---|
| ಎಲ್ಲಾ ಪಾಲುದಾರರ ಬಂಡವಾಳ ಖಾತೆಗಳಿಗೆ (ವೈಯಕ್ತಿಕವಾಗಿ) - - - - ಖರ್ಚು | xxx | — |
| ಪುನರ್ ಮೌಲ್ಯ ಮಾಪನ ಖಾತೆಗೆ | — | xxx |

(ಪುನರ್ ಮೌಲ್ಯ ಮಾಪನದಿಂದಾದ ನಷ್ಟವನ್ನು ಪಾಲುದಾರರ ಬಂಡವಾಳ ಖಾತೆಗಳಿಗೆ ವರ್ಗಾಯಿಸಿದ್ದು)

**ನಿದರ್ಶನ – 10**

ಮಿತಲಿ, ಇಂದು ಮತ್ತು ಗೀತಾ ಪಾಲುದಾರರು ಕ್ರಮವಾಗಿ 3:2:1 ರ ಅನುಪಾತದಲ್ಲಿ ಲಾಭ ಮತ್ತು ನಷ್ಟಗಳನ್ನು ಹಂಚಿಕೊಳ್ಳುತ್ತಾರೆ. ಮಾರ್ಚ್ 31, 2015 ರಂದು ಅವರ ಅಢಾವೆ ಪತ್ರಿಕೆಯು ಈ ಕೆಳಗಿನಂತಿದೆ.

| ಹೊಣೆಗಾರಿಕೆಗಳು | | ₹ | ಆಸ್ತಿಗಳು | ₹ |
|---|---|---|---|---|
| ಒಟ್ಟು ಸಾಹುಕಾರರು | | 55,000 | ಕೀರ್ತಿ ಮೌಲ್ಯ | 25,000 |
| ಮೀಸಲು ನಿಧಿ | | 30,000 | ಕಟ್ಟಡಗಳು | 1,00,000 |
| ಬಂಡವಾಳ ಖಾತೆಗಳು: | | | ಹಕ್ಕುಗಳು | 30,000 |
| ಮಿತಲಿ | 1,50,000 | | ಯಂತ್ರೋಪಕರಣ | 1,50,000 |
| ಇಂದು | 1,25,000 | | ದಾಸ್ತಾನು | 50,000 |
| ಗೀತಾ | 75,000 | 3,50,000 | ಸಾಲಗಾರರು | 40,000 |
| | | | ನಗದು | 40,000 |
| | | **4,35,000** | | **4,35,000** |

ಮೇಲಿನ ದಿನಾಂಕದಂದು ಗೀತಾ ನಿವೃತ್ತಳಾದಾಗ ಅವರು ಹೀಗೆ ಒಪ್ಪಿಕೊಂಡಿದ್ದರು; ಯಂತ್ರೋಪಕರಣವನ್ನು ₹ 1,40,000 ಕ್ಕೆ. ಹಕ್ಕುಗಳನ್ನು ₹ 40,000 ಕ್ಕೆ ಮತ್ತು ಕಟ್ಟಡಗಳನ್ನು ₹ 1,25,000 ಕ್ಕೆ ಮೌಲ್ಯೀಕರಿಸುವುದು. ಅವಶ್ಯಕ ರೋಜು ದಾಖಲೆಗಳನ್ನು ಬರೆಯಿರಿ ಮತ್ತು ಪುನರ್ ಮೌಲ್ಯಮಾಪನ ಖಾತೆಯನ್ನು ತಯಾರಿಸಿರಿ.

**ಪರಿಹಾರ:**

**ಮಿತಲಿ ಮತ್ತು ಇಂದು ರವರ ಪುಸ್ತಕದಲ್ಲಿ**

**ರೋಜು ದಾಖಲೆ**

| ದಿನಾಂಕ | ವಿವರಗಳು | ಖಾ.ಪಾ | ಖರ್ಚು ₹ | ಜಮಾ ₹ |
|---|---|---|---|---|
| 2015 ಮಾರ್ಚ್ 31 | ಪುನರ್ ಮೌಲ್ಯ ಮಾಪನ ಖಾತೆ - - - - ಖರ್ಚು | | 10,000 | —— |
| | ಯಂತ್ರೋಪಕರಣ ಖಾತೆಗೆ | | —— | 10,000 |
| | (ಯಂತ್ರೋಪಕರಣದ ಮೌಲ್ಯದಲ್ಲಿನ ಇಳಿಕೆ) | | | |
| ,, | ಹಕ್ಕುಗಳ ಖಾತೆ - - - - - - - - ಖರ್ಚು | | 10,000 | —— |
| | ಕಟ್ಟಡಗಳ ಖಾತೆ - - - - - - - - ಖರ್ಚು | | 25,000 | —— |
| | ಪುನರ್ ಮೌಲ್ಯ ಮಾಪನ ಖಾತೆಗೆ | | —— | 35,000 |
| | (ಹಕ್ಕುಗಳ ಮತ್ತು ಕಟ್ಟಡಗಳ ಮೌಲ್ಯದಲ್ಲಿನ ಹೆಚ್ಚಳ) | | | |
| | ಪುನರ್ ಮೌಲ್ಯ ಮಾಪನ ಖಾತೆ - - - - - - ಖರ್ಚು | | 25,000 | —— |
| | ಮಿತಲಿಯ ಖಾತೆಗೆ | | —— | 12,500 |
| | ಇಂದುಳ ಖಾತೆಗೆ | | —— | 7,500 |
| | ಗೀತಾಳ ಖಾತೆಗೆ | | —— | 5,000 |
| | (ಪುನರ್ ಮೌಲ್ಯಮಾಪನ ಲಾಭವನ್ನು ಎಲ್ಲಾ ಪಾಲುದಾರರ ಬಂಡವಾಳ ಖಾತೆಗಳಿಗೆ ಅವರ ಹಳೇ ಲಾಭ ಹಂಚಿಕೆಯ ಅನುಪಾತದಲ್ಲಿ ವರ್ಗಾಯಿಸಿತು.) | | | |

**ಖರ್ಚು** **ಪುನರ್ ಮೌಲ್ಯ ಮಾಪನ ಖಾತೆ** **ಜಮೆ**

| ವಿವರಗಳು | | ₹ | ವಿವರಗಳು | ರೂ |
|---|---|---|---|---|
| ಯಂತ್ರೋಪಕರಣ | | 10,000 | ಹಕ್ಕುಗಳು | 10,000 |
| ಲಾಭ ವರ್ಗಾಯಿಸಿದ್ದು : | | | ಕಟ್ಟಡಗಳು | 25,000 |
| ಮಿತಲಿಯ ಬಂಡವಾಳ ಖಾತೆ | 12,500 | | | |
| ಇಂದುಳ ಬಂಡವಾಳ ಖಾತೆ | 7,500 | | | |
| ಗೀತಾಳ ಬಂಡವಾಳ ಖಾತೆ | 5,000 | 25,000 | | |
| | | 35,000 | | 35,000 |

### 4.6 ಸಂಚಿತ ಲಾಭ – ನಷ್ಟಗಳ ಹೊಂದಾಣಿಕೆ: Adjustment of Accumulated Profits and Losses

ಕೆಲವು ಸಂದರ್ಭಗಳಲ್ಲಿ ಸಾಮಾನ್ಯ ಮೀಸಲು ಅಥವಾ ಮೀಸಲು ನಿಧಿಯ ರೂಪದಲ್ಲಿ ಕ್ರೋಢಿಕೃತ ಲಾಭಗಳನ್ನು ಮತ್ತು/ಅಥವಾ ಲಾಭ ಮತ್ತು ನಷ್ಟ ಖಾತೆಯ ಖರ್ಚು ಶಿಲ್ಕಿನ ರೂಪದಲ್ಲಿ ಸಂಚಿತ ನಷ್ಟಗಳನ್ನು ಒಂದು ಸಂಸ್ಥೆಯ ಆಢಾವೆ ಪತ್ರಿಕೆಯಲ್ಲಿ ತೋರಿಸಬಹುದು. ಒಬ್ಬ ನಿವೃತ್ತ / ನಿಧನನಾದ ಪಾಲುದಾರರನು ಸಂಚಿತ ಲಾಭಗಳಲ್ಲಿನ ತನ್ನ ಪಾಲಿಗೆ ಅರ್ಹನಾಗುತ್ತಾನೆ/ಳೆ ಮತ್ತು ಅದರಂತೆ ಸಂಚಿತ ನಷ್ಟಗಳೇನಾದರು ಇದ್ದರೆ, ಅವುಗಳನ್ನು ಹಂಚಿಕೊಳ್ಳುತ್ತಾನೆ/ಳೆ. ಈ ಕ್ರೋಢಿಕೃತ ಲಾಭಗಳು ಅಥವಾ ಹಾನಿಗಳು ಎಲ್ಲಾ ಪಾಲುದಾರರಿಗೆ ಸಂಬಂಧಿಸಿವೆ ಮತ್ತು ಅವುಗಳನ್ನು ಎಲ್ಲಾ ಪಾಲುದಾರರ ಬಂಡವಾಳ ಖಾತೆಗಳಿಗೆ ಅವರ ಹಳೆ ಲಾಭ ಹಂಚಿಕೆಯ ಅನುಪಾತದಲ್ಲಿ ವರ್ಗಾಯಿಸಬೇಕಾಗುತ್ತದೆ. ಅದಕ್ಕಾಗಿ ಈ ಕೆಳಗಿನ ರೋಜು ದಾಖಲೆಗಳನ್ನು ಬರೆಯುತ್ತಾರೆ.

(i) ಸಂಚಿತ ಲಾಭಗಳ (ಮೀಸಲುಗಳ)ನ್ನು ವರ್ಗಾಯಿಸಲು:

| | | |
|---|---|---|
| ಮೀಸಲುಗಳ ಖಾತೆ --- --- ---- ---- ಖರ್ಚು | xxx | — |
| ಎಲ್ಲಾ ಪಾಲುದಾರರ ಬಂಡವಾಳ ಖಾತೆಗಳಿಗೆ (ವೈಯಕ್ತಿಕವಾಗಿ) | — | xxx |
| (ಎಲ್ಲಾ ಪಾಲುದಾರರ ಬಂಡವಾಳ ಖಾತೆಗಳಿಗೆ ಅವರ ಹಳೆ ಲಾಭ ಹಂಚಿಕೆಯ ಅನುಪಾತದಲ್ಲಿ ಮೀಸಲುಗಳನ್ನು ವರ್ಗಾಯಿಸಲಾಯಿತು) | | |

(ii) ಸಂಚಿತ ನಷ್ಟವನ್ನು ವರ್ಗಾಯಿಸಲು :

| | | |
|---|---|---|
| ಎಲ್ಲಾ ಪಾಲುದಾರರ ಬಂಡವಾಳ ಖಾತೆಗಳು (ವೈಯಕ್ತಿಕವಾಗಿ) --- ಖರ್ಚು | xxx | — |
| ಲಾಭ ಮತ್ತು ನಷ್ಟ ಖಾತೆಗೆ | — | xxx |
| (ಸಂಚಿತ ನಷ್ಟಗಳನ್ನು ಎಲ್ಲಾ ಪಾಲುದಾರರ ಬಂಡವಾಳ ಖಾತೆಗಳಿಗೆ ಅವರ ಹಳೇ ಲಾಭ ಹಂಚಿಕೆಯ ಅನುಪಾತದಲ್ಲಿ ವರ್ಗಾಯಿಸಲಾಯಿತು) | | |

**ಉದಾಹರಣೆ:** ಇಂದರ್, ಗಂಜೇಂದರ್ ಮತ್ತು ಹರಿಂದರ್ ಪಾಲುದಾರರು ಲಾಭ ಮತ್ತು ನಷ್ಟಗಳನ್ನು 3:2:1 ರ ಅನುಪಾತದಲ್ಲಿ ಹಂಚಿಕೊಳ್ಳುತ್ತಿದ್ದರು. ಇಂದರ್‌ನು ನಿವೃತ್ತನಾದ ಮತ್ತು ಆ ದಿನಾಂಕದಂದಿನ ಸಂಸ್ಥೆಯ ಆಢಾವೆ ಪತ್ರಿಕೆಯು ಈ ಮುಂದಿನಂತಿದೆ.

**ಇಂದರ್, ಗಜೇಂದರ್ ಮತ್ತು ಹರಿಂದರ್‌ರ ಪುಸ್ತಕದಲ್ಲಿ ಮಾರ್ಚ್ 31, 2015 ಕ್ಕೆ ಆಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | | ₹ | ಆಸ್ತಿಗಳು | ₹ |
|---|---|---|---|---|
| ಸಾಹುಕಾರರು | | 50,000 | ಭೂಮಿ ಮತ್ತು ಕಟ್ಟಡ | 3,00,000 |
| ಸಾಮಾನ್ಯ ಮೀಸಲು | | 90,000 | ದಾಸ್ತಾನು | 30,000 |
| ಬಂಡವಾಳ ಖಾತೆಗಳು | | | ಬ್ಯಾಂಕು | 10,000 |
| ಇಂದರ್ | 1,00,000 | | ನಗದು | 5,000 |
| ಗಂಜೆಂದರ್ | 55,000 | | | |
| ಹರಿಂದರ್ | 50,000 | 2,05,000 | | |
| | | **3,45,000** | | **3,45,000** |

ಸಾಮಾನ್ಯ ಮೀಸಲನ್ನು ದಾಖಲಿಸುವ ಪರಿಗಣನೆಗೆ ಬರೆಯುವ ರೋಜು ದಾಖಲೆ ಈ ಮುಂದಿನಂತಿದೆ.

**ಗಂಜೆಂದರ್ ಮತ್ತು ಹರಿಂದರ್‌ರ ಪುಸ್ತಕದಲ್ಲಿ**
**ರೋಜು ದಾಖಲೆ**

| ದಿನಾಂಕ | ವಿವರಗಳು | ಖಾ.ಪಾ | ಖರ್ಚು ₹ | ಜಮೆ ₹ |
|---|---|---|---|---|
| 2015 | ಸಾಮಾನ್ಯ ಮೀಸಲು ಖಾತೆ - - - - ಖರ್ಚು | | 90,000 | —— |
| ಮಾರ್ಚ್ | ಇಂದರ್‌ನ ಬಂಡವಾಳ ಖಾತೆಗೆ | | —— | 45,000 |
| 31 | ಗಜೆಂದರ್‌ನ ಬಂಡವಾಳ ಖಾತೆಗೆ | | —— | 30,000 |
| | ಹರಿಂದರ್‌ನ ಬಂಡವಾಳ ಖಾತೆಗೆ | | —— | 15,000 |
| | (ಇಂದರ್‌ನ ನಿವೃತ್ತಿಯಂದು ಸಾಮಾನ್ಯ ಮೀಸಲುಗಳನ್ನು ಎಲ್ಲಾ ಪಾಲುದಾರರ ಬಂಡವಾಳ ಖಾತೆಗಳಿಗೆ ಅವರ ಹಳೇ ಅನುಪಾತದಲ್ಲಿ ವರ್ಗಾಯಿಸಿತು) | | | |

### 4.7 ನಿವೃತ್ತ ಪಾಲುದಾರನಿಗೆ ನೀಡಬೇಕಾದ ಬಾಕಿ ಮೊತ್ತವನ್ನು ಚುಕ್ತಾ ಗೊಳಿಸುವುದು: Disposal of Amount Due to Retiring Partner

ಹೊರ ಹೋಗುತ್ತಿರುವ ಪಾಲುದಾರನ ಖಾತೆಯನ್ನು ಪಾಲುದಾರಿಕೆ ಒಪ್ಪಂದ ಪತ್ರಗಳ ಷರತ್ತುಗಳಂತೆ ಚುಕ್ತಾಗೊಳಿಸಲಾಗುತ್ತದೆ. ಅದು ಕೂಡಲೇ ಏಕ ಗಂಟಿನಲ್ಲಿ ಅಥವಾ ಒಪ್ಪಿಕೊಂಡಿರುವಂತೆ ಬಡ್ಡಿ ಸಹಿತ ಅಥವಾ ಬಡ್ಡಿ ರಹಿತ ವಿವಿಧ ಕಂತುಗಳಲ್ಲಿ ಅಥವಾ ಕೂಡಲೇ ಭಾಗಶಃ ನಗದು ರೂಪದಲ್ಲಿ ಮತ್ತು ಭಾಗಶಃ ಒಪ್ಪಿಕೊಂಡಿರುವಂತಹ ಅವಧಿಗಳಲ್ಲಿನ ಕಂತುಗಳಲ್ಲಿ, ಯಾವುದೇ ಒಪ್ಪಂದವು ಇಲ್ಲದಿರುವಾಗ, 1932 ನೇ ಭಾರತೀಯ ಪಾಲುಗಾರಿಕಾ ಕಾಯ್ದೆಯ ಕಲಂ 37 ನ್ನು ಅನ್ವಯಿಸಲಾಗುತ್ತದೆ. ಅದು ತಿಳಿಸುವುದೇನೆಂದರೆ, ಹೊರ ಹೋಗುತ್ತಿರುವ ಪಾಲುದಾರನು, ಪಾವತಿಸುವ ದಿನಾಂಕದವರೆಗೆ ವಾರ್ಷಿಕ ಶೇ. 6 ರ ಬಡ್ಡಿಯನ್ನು ಅಥವಾ ತನ್ನ ಬಂಡವಾಳದ ಸಹಾಯದಿಂದ ಗಳಿಸಿರುವ ಲಾಭಗಳಲ್ಲಿನ ಪಾಲನ್ನು (ಅದು ಬಂಡವಾಳದ ಅನುಪಾತದ ಆಧಾರದಲ್ಲಿ) ಪಡೆಯುವ ಆಯ್ಕೆಯನ್ನು ಹೊಂದಿರುತ್ತಾನೆ. ಹೀಗಾಗಿ, ಎಲ್ಲಾ ಹೊಂದಾಣಿಕೆಗಳನ್ನು ಮಾಡಿದ ನಂತರ, ನಿವೃತ್ತ ಪಾಲುದಾರನಿಗೆ ಪಾವತಿಸಬೇಕಾದ ಒಟ್ಟು ಬಾಕಿ ಮೊತ್ತವನ್ನು ಸಂಸ್ಥೆಯು ಕೂಡಲೇ ಪಾವತಿಸಲು ಸಾಧ್ಯವಾಗದೇ ಇದ್ದಾಗ, ಕೊಡಬೇಕಾದ ಮೊತ್ತವನ್ನು ನಿವೃತ್ತ ಪಾಲುದಾರನ ಸಾಲದ ಖಾತೆಗೆ ವರ್ಗಾಯಿಸಲಾಗುತ್ತದೆ ಮತ್ತು ಆಗಾಗ ಪಾವತಿ ಮಾಡಿದ್ದನ್ನು ಆತನ ಖಾತೆಗೆ ಖರ್ಚು ಬರೆಯಲಾಗುತ್ತದೆ. ಅವಶ್ಯಕ ರೋಜು ದಾಖಲೆಗಳು ಈ ಮುಂದಿನಂತಿವೆ:

1. ನಿವೃತ್ತ ಪಾಲುದಾರನಿಗೆ ಪೂರ್ಣಪ್ರಮಾಣದಲ್ಲಿ ನಗದನ್ನು ಪಾವತಿಸಿದಾಗ:

| | | |
|---|---|---|
| ನಿವೃತ್ತ ಪಾಲುದಾರನ ಬಂಡವಾಳ ಖಾತೆ - - - - ಖರ್ಚು | xxx | — |
| ನಗದು/ಬ್ಯಾಂಕು ಖಾತೆಗೆ | — | xxx |

2. ನಿವೃತ್ತ ಪಾಲುದಾರನ ಎಲ್ಲಾ ಮೊತ್ತವನ್ನು ಸಾಲವೆಂದು ಪರಿಗಣಿಸಿದಾಗ:

| | | |
|---|---|---|
| ನಿವೃತ್ತ ಪಾಲುದಾರನ ಬಂಡವಾಳ ಖಾತೆಗೆ - - - - ಖರ್ಚು | xxx | — |
| ನಿವೃತ್ತ ಪಾಲುದಾರನ ಸಾಲದ ಖಾತೆಗೆ | — | xxx |

3. ನಿವೃತ್ತ ಪಾಲುದಾರನಿಗೆ ಭಾಗಶಃ ನಗದಿನಲ್ಲಿ ಪಾವತಿಸಿ ಮತ್ತು ಉಳಿದ ಮೊತ್ತವನ್ನು ಸಾಲವೆಂದು ಪರಿಗಣಿಸಿದಾಗ:

| | | |
|---|---|---|
| ನಿವೃತ್ತ ಪಾಲುದಾರನ ಬಂಡವಾಳ ಖಾತೆ - - - - ಖರ್ಚು (ಒಟ್ಟು ಬಾಕಿ ಮೊತ್ತ) | xxx | — |
| ನಗದು/ಬ್ಯಾಂಕು ಖಾತೆಗೆ (ಪಾವತಿಸಿದ ಮೊತ್ತ) | — | xxx |
| ನಿವೃತ್ತ ಪಾಲುದಾರನ ಸಾಲದ ಖಾತೆಗೆ (ಸಾಲದ ಮೊತ್ತ) | — | xxx |

4. ಅಸಲು ಮತ್ತು ಬಡ್ಡಿಯನ್ನು ಒಳಗೊಂಡಿರುವ ಕಂತಿನಲ್ಲಿ ಪಾವತಿಸಿ ಸಾಲದ ಖಾತೆಯನ್ನು ಚುಕ್ತಾಗೊಳಿಸಿದಾಗ

(ಎ) ಸಾಲದ ಮೇಲಿನ ಬಡ್ಡಿಗಾಗಿ:

| | | | |
|---|---|---|---|
| ಬಡ್ಡಿಯ ಖಾತೆ - - - - - - - - | ಖರ್ಚು | xxx | — |
| ನಿವೃತ್ತ ಪಾಲುದಾರನ ಸಾಲದ ಖಾತೆಗೆ | | — | xxx |

(ಬಿ) ಕಂತನ್ನು ಪಾವತಿಸಿದ್ದಕ್ಕೆ:

| | | | |
|---|---|---|---|
| ನಿವೃತ್ತ ಪಾಲುದಾರನ ಸಾಲದ ಖಾತೆ - - - - | ಖರ್ಚು | xxx | — |
| ನಗದು / ಬ್ಯಾಂಕು ಖಾತೆಗೆ | | — | xxx |

**ಟಿಪ್ಪಣಿ :**

1. ನಿವೃತ್ತ ಪಾಲುದಾರನ ಸಾಲದ ಖಾತೆಯನ್ನು ಚುಕ್ತಾ ಮಾಡುವವರೆಗೆ ಅಢಾವೆ ಪತ್ರಿಕೆಯ ಹೊಣೆಗಾರಿಕೆಗಳ ಬದಿಯಲ್ಲಿ ತೋರಿಸಬೇಕಾಗುತ್ತದೆ.
2. ಸಾಲವನ್ನು ಪೂರ್ಣವಾಗಿ ಪಾವತಿಸುವವರೆಗೆ ರೋಜು ದಾಖಲೆ ಸಂಖ್ಯೆ (ಎ) ಮತ್ತು (ಬಿ) ಗಳನ್ನು ಪುನರಾವರ್ತಿಸಲಾಗುತ್ತದೆ.

**ನಿದರ್ಶನ – 11**

ಒಂದು ಸಂಸ್ಥೆಯಲ್ಲಿ ಅಮರಿಂದರ್, ಮಹಿಂದರ್ ಮತ್ತು ಜೋಗಿಂದರ್ ಪಾಲುದಾರರಾಗಿರುತ್ತಾರೆ. ಮಹಿಂದರ್ ನಿವೃತ್ತನಾಗುತ್ತಾನೆ. ಆತನ ನಿವೃತ್ತಿಯ ದಿನಾಂಕದಂದು ಆತನಿಗೆ ₹60,000ನ್ನು ಕೊಡಬೇಕಾದ ಬಾಕಿ ಮೊತ್ತವನ್ನು ಅಮರಿಂದರ್ ಮತ್ತು ಜೋಗಿಂದರ್‌ರವರು ಪ್ರತಿ ವರ್ಷದ ಕೊನೆಗೆ ಕಂತುಗಳಲ್ಲಿ ಪಾವತಿಸಲು ಒಪ್ಪಿಕೊಂಡಿರುತ್ತಾರೆ. ಈ ಮುಂದಿನ ಸಂದರ್ಭಗಳಲ್ಲಿ ಮಹಿಂದರ್‌ನ ಸಾಲದ ಖಾತೆಯನ್ನು ತಯಾರಿಸಿರಿ.

1. ಬಾಕಿ ಮೊತ್ತದ ಮೇಲೆ ವಾರ್ಷಿಕ ಶೇಕಡಾ 12ರ ಬಡ್ಡಿಯನ್ನು ವಾರ್ಷಿಕ 4 ಕಂತುಗಳಲ್ಲಿ ಪಾವತಿ ಮಾಡಿದಾಗ;
2. ಮೊದಲಿನ ಮೂರು ವರ್ಷಗಳ ಬಾಕಿ ಮೊತ್ತದ ಶಿಲ್ಕಿನ ಮೇಲೆ ವಾರ್ಷಿಕ ಶೇಕಡಾ 12 ರ ಬಡ್ಡಿಯನ್ನು ₹ 20,000 ಮೂರು ವಾರ್ಷಿಕ ಕಂತುಗಳಲ್ಲಿ ಸೇರಿಸಿ ಪಾವತಿಸಲು ಅವರು ಒಪ್ಪಿದಾಗ ಮತ್ತು 4ನೇ ವರ್ಷದಲ್ಲಿ ಬಡ್ಡಿಯನ್ನು ಒಳಗೊಂಡ ಶಿಲ್ಕನ್ನು ಪಾವತಿಸಿದಾಗ;
3. ಪಾವತಿಸದ ಬಾಕಿ ಮೊತ್ತದ ಮೇಲೆ ವಾರ್ಷಿಕ ಶೇ. 12ರ ಬಡ್ಡಿ ಸೇರಿಸಿ 4 ಸಮನಾದ ವಾರ್ಷಿಕ ಕಂತುಗಳಲ್ಲಿ ಪಾವತಿ ಮಾಡಿದಾಗ.

**ಪರಿಹಾರ:**

(ಎ) ನಾಲ್ಕು ವಾರ್ಷಿಕ ಕಂತುಗಳು + ಬಡ್ಡಿ ಪಾವತಿಸಿದಾಗ :

**ಅಮರಿಂದರ್, ಮಹಿಂದರ್ ಮತ್ತು ಜೊಗಿಂದರ್‌ರ ಪುಸ್ತಕ**

**ಖರ್ಚು ಮಹಿಂದರ್‌ನ ಸಾಲದ ಖಾತೆ ಜಮೆ**

| ದಿನಾಂಕ | ವಿವರಗಳು | ರೊ. ಪಾ | ₹ | ದಿನಾಂಕ | ವಿವರಗಳು | ರೊ. ಪಾ | ₹ |
|---|---|---|---|---|---|---|---|
| 1ನೇ ವರ್ಷ | ಬ್ಯಾಂಕು (15,000+7,200) | | 22,200 | 1ನೇ ವರ್ಷ | ಮಹಿಂದರನ ಬಂಡವಾಳ | | 60,000 |
| | ಮುಂದುವರೆದ ಶಿಲ್ಕು | | 45,000 | | ಬಡ್ಡಿ | | 7,200 |
| | | | **67,200** | | | | **67,200** |

| | | | | | | | |
|---|---|---|---|---|---|---|---|
| 2ನೇ ವರ್ಷ | ಬ್ಯಾಂಕು (15,000+5,400) | | 20,400 | 2ನೇ ವರ್ಷ | ಹಿಂದಿನಿಂದ ಬಂದ ಶಿಲ್ಕು | | 45,000 |
| | | | | | ಬಡ್ಡಿ | | 5,400 |
| | ಮುಂದುವರೆದ ಶಿಲ್ಕು | | 30,000 | | | | |
| | | | **50,400** | | | | **50,400** |
| 3ನೇ ವರ್ಷ | ಬ್ಯಾಂಕು (15,000+3,600) | | 18,600 | 3ನೇ ವರ್ಷ | ಹಿಂದಿನಿಂದ ಬಂದ ಶಿಲ್ಕು | | 30,000 |
| | | | | | ಬಡ್ಡಿ | | 3,600 |
| | ಮುಂದುವರೆದ ಶಿಲ್ಕು | | 15,000 | | | | |
| | | | **33,600** | | | | **33,600** |
| 4ನೇ ವರ್ಷ | ಬ್ಯಾಂಕು (15,000+1,800) | | 16,800 | 4ನೇ ವರ್ಷ | ಹಿಂದಿನಿಂದ ಬಂದ ಶಿಲ್ಕು | | 15,000 |
| | | | | | ಬಡ್ಡಿ | | 1,800 |
| | | | **16,800** | | | | **16,800** |

(ಬಿ) ಬಡ್ಡಿ ಸೇರಿಸಿ ಪ್ರತಿ ಕಂತು ₹20,000 ದಂತೆ 3 ವಾರ್ಷಿಕ ಕಂತುಗಳನ್ನು ಪಾವತಿ ಮಾಡಿದಾಗ:

**ಅಮರಿಂದರ್ ಮತ್ತು ಜೋಗಿಂದರ್‌ರವರ ಪುಸ್ತಕ**

**ಖರ್ಚು** **ಮಹಿಂದರ್‌ನ ಸಾಲದ ಖಾತೆ** **ಜಮೆ**

| ದಿನಾಂಕ | ವಿವರಗಳು | ರೊ. ಪಾ | ₹ | ದಿನಾಂಕ | ವಿವರಗಳು | ರೊ. ಪಾ | ₹ |
|---|---|---|---|---|---|---|---|
| 1ನೇ ವರ್ಷ | ಬ್ಯಾಂಕು | | 20,000 | 1ನೇ ವರ್ಷ | ಮಹಿಂದರನ ಬಂಡವಾಳ | | 60,000 |
| | ಮುಂದುವರೆದ ಶಿಲ್ಕು | | 47,200 | | ಬಡ್ಡಿ | | 7,200 |
| | | | **67,200** | | | | **67,200** |
| 2ನೇ ವರ್ಷ | ಬ್ಯಾಂಕು | | 20,000 | 2ನೇ ವರ್ಷ | ಹಿಂದಿನಿಂದ ಬಂದ ಶಿಲ್ಕು | | 47,200 |
| | ಮುಂದುವರೆದ ಶಿಲ್ಕು | | 32,864 | | ಬಡ್ಡಿ | | 5,664 |
| | | | **52,864** | | | | **52,864** |
| 3ನೇ ವರ್ಷ | ಬ್ಯಾಂಕು | | 20,000 | 3ನೇ ವರ್ಷ | ಹಿಂದಿನಿಂದ ಬಂದ ಶಿಲ್ಕು | | 32,864 |
| | ಮುಂದುವರೆದ ಶಿಲ್ಕು | | 16,808 | | ಬಡ್ಡಿ | | 3,944 |
| | | | **36,808** | | | | **36,808** |
| 4ನೇ ವರ್ಷ | ಬ್ಯಾಂಕು | | 18,825 | 4ನೇ ವರ್ಷ | ಹಿಂದಿನಿಂದ ಬಂದ ಶಿಲ್ಕು | | 16,808 |
| | | | | | ಬಡ್ಡಿ | | 2,017 |
| | | | **18,825** | | | | **18,825** |

(ಸಿ) ನಾಲ್ಕು ವಾರ್ಷಿಕ ಸಮ ಕಂತುಗಳಲ್ಲಿ ಶೇ. 12 ರ ಬಡ್ಡಿ (ವರ್ಷಕ್ಕೆ) ಸೇರಿಸಿ ಪಾವತಿ ಮಾಡಿದಾಗ:

**ಅಮರಿಂದರ್, ಮಹಿಂದರ್ ಮತ್ತು ಜೊಗಿಂದರ್‌ರ ಪುಸ್ತಕ**

**ಖರ್ಚು** **ಮಹಿಂದರ್‌ನ ಸಾಲದ ಖಾತೆ** **ಜಮೆ**

| ದಿನಾಂಕ | ವಿವರಣೆ | ರೊ. ಪಾ | ₹ | ದಿನಾಂಕ | ವಿವರಣೆ | ರೊ. ಪಾ | ₹ |
|---|---|---|---|---|---|---|---|
| 1ನೇ ವರ್ಷ | ಬ್ಯಾಂಕು<br>ಮುಂದುವರೆದ ಶಿಲ್ಕು | | 19,754<br>47,446 | 1ನೇ ವರ್ಷ | ಮಹಿಂದರನ ಬಂಡವಾಳ<br>ಬಡ್ಡಿ | | 60,000<br>7,200 |
| | | | 67,200 | | | | 67,200 |
| 2ನೇ ವರ್ಷ | ಬ್ಯಾಂಕು<br>ಮುಂದುವರೆದ ಶಿಲ್ಕು | | 19,754<br>33386 | 2ನೇ ವರ್ಷ | ಹಿಂದಿನಿಂದ ಬಂದ ಶಿಲ್ಕು<br>ಬಡ್ಡಿ | | 47,446<br>5,694 |
| | | | 53,140 | | | | 53,140 |
| 3ನೇ ವರ್ಷ | ಬ್ಯಾಂಕು<br>ಮುಂದುವರೆದ ಶಿಲ್ಕು | | 19,754<br>17,638 | 3ನೇ ವರ್ಷ | ಹಿಂದಿನಿಂದ ಬಂದ ಶಿಲ್ಕು<br>ಬಡ್ಡಿ | | 33,386<br>4,006 |
| | | | 37,392 | | | | 37,392 |
| 4ನೇ ವರ್ಷ | ಬ್ಯಾಂಕು | | 19,754 | 4ನೇ ವರ್ಷ | ಹಿಂದಿನಿಂದ ಬಂದ ಶಿಲ್ಕು<br>ಬಡ್ಡಿ | | 17,638<br>2,116 |
| | | | 19,754 | | | | 19,754 |

**ಟಿಪ್ಪಣಿ:**

ವಾರ್ಷಿಕ ಪಾವತಿಯ ಕಂತು 4 ವರ್ಷಗಳಲ್ಲಿ ಶೇ. 12 ರಂತೆ ಬಡ್ಡಿ ₹19,754 ಲೆಕ್ಕಾಚಾರ ಆಗುತ್ತದೆ. (ವಾರ್ಷಿಕ ಟೇಬಲ್ ಪ್ರಕಾರ ವಾರ್ಷಿಕ ₹ 0.329234 × 60,000)

ಇಲ್ಲಿ ಗಮನಿಸುವುದೇನೆಂದರೆ, ನಿವೃತ್ತ ಪಾಲುದಾರನ ಮತ್ತು ನಿಧನನಾದ ಪಾಲುದಾರನ ಬಾಕಿ ಮೊತ್ತವನ್ನು ಚುಕ್ತಾಗೊಳಿಸುವ ಲೆಕ್ಕಪತ್ರ ಪರಿಗಣನೆಯಲ್ಲಿ ಒಂದೇ ರೀತಿಯಾಗಿದ್ದು, ಕೇವಲ ವ್ಯತ್ಯಾಸವೆಂದರೆ, ನಿಧನದ ಸಂದರ್ಭದಲ್ಲಿ ಆತನಿಗೆ / ಆತಳಿಗೆ ಜಮೆ ಬರೆದಿರುವ ಮೊತ್ತವನ್ನು ಆತನ ವಾರಸುದಾರರ ಖಾತೆಗೆ ವರ್ಗಾಯಿಸಲಾಗುತ್ತದೆ ಮತ್ತು ಅವನಿಗೆ / ಅವಳಿಗೆ ಪಾವತಿ ಮಾಡಲಾಗುತ್ತದೆ. ಇದನ್ನು ಈ ಅಧ್ಯಾಯದ ಕೊನೆಯಲ್ಲಿ ತೆಗೆದುಕೊಳ್ಳಲಾಗುವುದು.

## ನೀವೇ ಮಾಡಿ Do it yourself

ವಿಜಯ, ಅಜಯ ಮತ್ತು ಮೋಹನರು ಗೆಳೆಯರು ಅವರು ಬಿ.ಕಾಂ(ಹಾನ್ಸ) ಪದವಿಯನ್ನು ದೆಹಲಿ ವಿಶ್ವವಿದ್ಯಾಲಯದಿಂದ ಜೂನ 2013 ರಲ್ಲಿ ಉತ್ತೀರ್ಣರಾದರು ಗಣಕಯಂತ್ರದ ಹಾರ್ಡವೇರ್ ವ್ಯವಹಾರವನ್ನು ಆರಂಭಿಸಬೇಕೆಂದು ನಿರ್ಧರಿಸಿದರು.

1ನೇ ಅಗಸ್ಟ 2013 ರಂದು ಅವರು ಅನುಕ್ರಮವಾಗಿ ₹ 50,000, ₹ 30,000 ಮತ್ತು ₹ 20,000 ಬಂಡವಾಳ ತೊಡಗಿಸಿದರು ಮತ್ತು ಪಾಲುದಾರಿಕೆಯಲ್ಲಿ ವ್ಯವಹಾರವನ್ನು ದೆಹಲಿಯಲ್ಲಿ ಪ್ರಾರಂಭಿಸಿದರು. ಅಲ್ಲಿ ಅವರ ನಡುವಿನ ಲಾಭ ಹಂಚಿಕೆಯ ಅನುಪಾತವು 4:2:1 ಆಗಿದೆ. ವ್ಯವಹಾರವನ್ನು ಯಶಸ್ವಿಯಾಗಿ ನಡೆಸಲಾಗುತ್ತಿತ್ತು. ಆದರೆ 1ನೇ ಫೆಬ್ರುವರಿ 2016 ರಂದು ಕೆಲವು ಅನಿವಾರ್ಯ ಕಾರಣಗಳಿಂದ ಮತ್ತು ಕುಟುಂಬದ ಘಟನೆಗಳಿಂದಾಗಿ ಅಜಯನು ಪುಣೆಯಲ್ಲಿ ವಾಸಿಸಲು ನಿರ್ಧರಿಸುತ್ತಾನೆ ಮತ್ತು ಎಲ್ಲಾ ಪಾಲುದಾರರ ಒಪ್ಪಿಗೆಯಂತೆ ದಿನಾಂಕ 31ನೇ ಮಾರ್ಚ್ 2017 ರಂದು ಪಾಲುದಾರಿಕೆಯಿಂದ ನಿವೃತ್ತನಾಗಲು ನಿರ್ಧರಿಸುತ್ತಾನೆ. ಆಸ್ತಿಗಳ ಮತ್ತು ಹೊಣೆಗಾರಿಕೆಗಳ ಸ್ಥಿತಿಯು ಈ ಕೆಳಗಿನಂತಿದೆ.

**ದಿನಾಂಕ 31ನೇ ಮಾರ್ಚ್ 2017 ರಂದು ವಿಜಯ, ಅಜಯ ಮತ್ತು ಮೋಹನ್‌ರವರ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | | ₹ | ಆಸ್ತಿಗಳು | ₹ |
|---|---|---|---|---|
| ಬಂಡವಾಳ ಖಾತೆಗಳು | | | ಕೀರ್ತಿ ಮೌಲ್ಯ | 56,000 |
| ವಿಜಯ | 1,80,000 | | ದಾಸ್ತಾನು | 90,000 |
| ಅಜಯ | 1,20,000 | | ಸಾಲಗಾರರು | 66,000 |
| ಮೋಹನ | 1,00,000 | 4,00,000 | ಭೂಮಿ ಮತ್ತು ಕಟ್ಟಡಗಳು | 1,20,000 |
| ಕೊಡತಕ್ಕ ಹುಂಡಿಗಳು | | 12,000 | ಯಂತ್ರೋಪಕರಣ | 1,59,000 |
| ಸಾಮಾನ್ಯ ಮೀಸಲು | | 42,000 | ಮೋಟಾರ ವಾಹನ | 31,000 |
| ಸಾಹುಕಾರರು | | 90,000 | ಬ್ಯಾಂಕಿನಲ್ಲಿ ನಗದು | 22,000 |
| | | 5,44,000 | | 5,44,000 |

ನಿವೃತ್ತಿಯ ದಿನಾಂಕದಂದು ಈ ಕೆಳಗಿನ ಹೊಂದಾಣಿಕೆಗಳನ್ನು ಮಾಡಲಾಗುತ್ತದೆ.

1. ಸಂಸ್ಥೆಯ ಕೀರ್ತಿ ಮೌಲ್ಯವನ್ನು ₹ 1,48,000 ಕ್ಕೆ ಮೌಲ್ಯೀಕರಿಸಿತು.
2. ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಮೌಲ್ಯವು ಕೆಳಗಿನಂತಿವೆ :

   ದಾಸ್ತಾನು ₹ 72,000; ಭೂಮಿ ಮತ್ತು ಕಟ್ಟಡಗಳು ₹ 1,35,600; ಸಾಲಗಾರರು ₹ 63,000 ; ಯಂತ್ರೋಪರಣ ₹ 1,50,000 ಮತ್ತು ಸಾಹುಕಾರರು ₹ 84,000.
3. ವಿಜಯನು ₹ 1,20,000 ಮತ್ತು ಮೋಹನನು ₹ 30,000 ಹೆಚ್ಚಿನ ಬಂಡವಾಳವನ್ನು ತರಬೇಕು.

   ಅಜಯನಿಗೆ ಕೂಡಲೇ ನಗದು ₹ 97,200ನ್ನು ಪಾವತಿಸಬೇಕಾಗುತ್ತದೆ. ಮತ್ತು ಅವನ ಬಂಡವಾಳ ಖಾತೆಯ ಉಳಿದ ಶಿಲ್ಕನ್ನು ಅವನ ಸಾಲದ ಖಾತೆಗೆ ವರ್ಗಾಯಿಸಲಾಗುತ್ತದೆ. ಅಜಯನಿಗೆ ಪಾವತಿಸಬೇಕಾದ ಬಾಕಿ ಮೊತ್ತವನ್ನು ಕಂಡು ಹಿಡಿಯಿರಿ ಮತ್ತು ಅವನ ಖಾತೆಯನ್ನು ಹೇಗೆ ಚುಕ್ತಾಗೊಳಿಸುತ್ತೀರಿ ಎಂಬುದನ್ನು ತೋರಿಸಿರಿ.

**ನಿದರ್ಶನ – 12**

ಅಶಿಷ್, ಸುರೇಶ್ ಮತ್ತು ಲೋಕೇಶ ರವರು 5:3:2 ರ ಅನುಪಾತದಲ್ಲಿ ಲಾಭವನ್ನು ಹಂಚಿಕೊಳ್ಳುತ್ತಾರೆ ಮತ್ತು ಅವರ ಅಢಾವೆ ಪತ್ರಿಕೆ ದಿನಾಂಕ ಮಾರ್ಚ್ 31., 2015 ರಂದು ಈ ಕೆಳಗಿನಂತಿದೆ.

**ಅಶಿಷ್, ಸುರೇಶ ಮತ್ತು ಲೋಕೇಶ ರವರ ಮಾರ್ಚ್ 31 2015 ರಂದಿನ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | | ₹ | ಆಸ್ತಿಗಳು | ₹ |
|---|---|---|---|---|
| ಬಂಡವಾಳಗಳು | | | ಭೂಮಿ | 4,00,000 |
| ಆಶಿಷ್ | 7,20,000 | | ಕಟ್ಟಡ | 3,80,000 |
| ಸುರೇಶ್ | 4,15,000 | | ಸ್ಥಾವರ ಮತ್ತು ಯಂತ್ರೋಪಕರಣಗಳು | 4,65,000 |
| ಲೋಕೇಶ್ | 3,45,000 | 14,80,000 | ಪೀಠೋಪಕರಣಗಳು ಮತ್ತು ಸ್ಥಿರಿಕರಣಗಳು | 77,000 |
| ಮೀಸಲು ನಿಧಿ | | 1,80,000 | ದಾಸ್ತಾನು | 1,85,000 |
| ಸಾಹುಕಾರರು | | 1,24,000 | ಸಾಲಗಾರರು | 1,72,000 |
| ಬಾಕಿ ವೆಚ್ಚಗಳು | | 16,000 | ಕೈಯಲ್ಲಿನ ನಗದು | 1,21,000 |
| | | **18,00,000** | | **18,00,000** |

ಮೇಲಿನ ದಿನಾಂಕದಂದು ಸುರೇಶನು ನಿವೃತ್ತನಾಗುತ್ತಾನೆ ಮತ್ತು ಅವನ ನಿವೃತ್ತಿಯಾದಾಗ ಈ ಕೆಳಗಿನ ಹೊಂದಾಣಿಕೆಗಳನ್ನು ಒಪ್ಪಿಕೊಳ್ಳಲಾಗುತ್ತದೆ.

1. ದಾಸ್ತಾನನ್ನು ₹ 1,72,000 ಗೆ ಮೌಲ್ಯ ಮಾಡಲಾಗಿದೆ.
2. ಪೀಠೋಪಕರಣ ಮತ್ತು ಸ್ಥಿರಿಕರಣಗಳನ್ನು ₹ 80,000 ಕ್ಕೆ ಮೌಲ್ಯ ಮಾಡಲಾಗಿದೆ.
3. ಸಾಲಗಾರನಾದ ದೀಪಕ್‌ನಿಂದ ಬಾಕಿ ಸಾಲ ₹ 10,000 ಅನುಮಾನಾಸ್ಪದವಾಗಿದ್ದು ಮತ್ತು ಅದಕ್ಕಾಗಿ ಕಾಯ್ದಿರಿಸುವಿಕೆಯ ಅವಶ್ಯಕತೆ ಇರುತ್ತದೆ.
4. ಸಂಸ್ಥೆಯ ಕೀರ್ತಿಮೌಲ್ಯವನ್ನು ₹2,00,000 ಕ್ಕೆ ಮೌಲ್ಯ ಮಾಡಲಾಯಿತು ಮತ್ತು ಕೀರ್ತಿಮೌಲ್ಯವನ್ನು ಲೆಕ್ಕಪುಸ್ತಕಗಳಲ್ಲಿ ತೋರಿಸಬಾರದೆಂದು ನಿರ್ಧರಿಸಲಾಯಿತು.
5. ಸುರೇಶನಿಗೆ, ನಿವೃತ್ತಿಯಂದು ಕೂಡಲೇ ₹40,000 ನ್ನು ಪಾವತಿಸುವದು ಮತ್ತು ಬಾಕಿ ಮೊತ್ತವನ್ನು ಅವನ ಸಾಲದ ಖಾತೆಗೆ ವರ್ಗಾಯಿಸಿತು.
6. ಭವಿಷ್ಯದ ಲಾಭವನ್ನು 3:2 ರ ಅನುಪಾತದಲ್ಲಿ ಆಶಿಷ್ ಮತ್ತು ಲೋಕೇಶರು ಹಂಚಿಕೊಳ್ಳುತ್ತಾರೆ.

   ತಯಾರಿಸಿ: ಪುನರ್ ಮೌಲ್ಯ ಮಾಪನ ಖಾತೆ, ಬಂಡವಾಳ ಖಾತೆ ಮತ್ತು ಮರು ಸ್ಥಾಪಿತ ಸಂಸ್ಥೆಯ ಅಢಾವೆ ಪತ್ರಿಕೆ.

**ಪರಿಹಾರ:**

## ಅಶಿಷ್ ಮತ್ತು ಲೋಕೇಶರವರ ಪುಸ್ತಕಗಳು

**ಖರ್ಚು** **ಮರುಮೌಲ್ಯ ಮಾಪನದ ಖಾತೆ** **ಜಮೆ**

| ವಿವರಣೆ | ₹ | ವಿವರಣೆ | | ₹ |
|---|---|---|---|---|
| ದಾಸ್ತಾನು | 13,000 | ಪೀಠೋಪಕರಣ | | 3,000 |
| ಸಂಶಯಾಸ್ಪದ | | ಆಶಿಷ್‌ನ ಬಂಡವಾಳ | 10,000 | |
| ಸಾಲದ ಕಾಯ್ದಿರಿಸುವಿಕೆ | 10,000 | ಸರೇಶನ ಬಂಡವಾಳ | 6,000 | |
| | | ಲೊಕೇಶನ ಬಂಡವಾಳ | 4,000 | 20,000 |
| | | (ಮರು ಮೌಲ್ಯ ಮಾಪನದ ನಷ್ಟವನ್ನು ವರ್ಗಾಯಿಸಿದ್ದು) | | |
| | 23,000 | | | 23,000 |

**ಖರ್ಚು** **ಪಾಲುದಾರರ ಬಂಡವಾಳ ಖಾತೆಗಳು** **ಜಮೆ**

| ದಿನಾಂಕ 2015 | ವಿವರಣೆ | ರೊ. ಪಾ | ಆಶಿಷ್ ₹ | ಸುರೇಶ ₹ | ಲೋಕೇಶ ₹ | ದಿನಾಂಕ 2015 | ವಿವರಣೆ | ರೊ. ಪಾ | ಆಶಿಷ್ ₹ | ಸುರೇಶ ₹ | ಲೋಕೆಶ ₹ |
|---|---|---|---|---|---|---|---|---|---|---|---|
| ಮಾರ್ಚ್ 31 | ಮರುಮೌಲ್ಯ ಮಾಪನ (ನಷ್ಟ) | | 10,000 | 6,000 | 4,000 | ಮಾರ್ಚ್ 31 | ಹಿಂದಿನಿಂದ ಬಂದ ಶಿಲ್ಕು | | 7,20,000 | 4,15,000 | 3,45,000 |
| ,, | ಸುರೇಶನನ ಬಂಡವಾಳ (ಕೀರ್ತಿ ಮೌಲ್ಯ) | | 20,000 | | 40,000 | ,, | ಮೀಸಲು ನಿಧಿ | | 90,000 | 54,000 | 36,000 |
| | ನಗದು | | | 40,000 | | | ಆಶಿಷ್‌ನ ಬಂಡವಾಳ | | | 20,000 | |
| | ಸುರೇಶನ ಸಾಲ | | | 4,83,000 | | | ಲೋಕೆಶ್‌ನ ಬಂಡವಾಳ | | | 40,000 | |
| | ಮುಂದುವರಿದ ಶಿಲ್ಕು | | 7,80000 | | 3,37,000 | | | | | | |
| | | | **8,10,000** | **5,29,000** | **3,81,000** | | | | **8,10,000** | **5,29,000** | **3,81,000** |

**ದಿನಾಂಕ ಎಪ್ರೀಲ್ 01, 2015 ರಂದು ಆಶಿಷ್ ಮತ್ತು ಲೋಕೇಶ ರವರ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | | ₹ | ಆಸ್ತಿಗಳು | | ₹ |
|---|---|---|---|---|---|
| ಬಂಡವಾಳಗಳು : | | | ಭೂಮಿ | | 4,00,000 |
| ಆಶಿಷ್ | 7,80,000 | | ಕಟ್ಟಡಗಳು | | 3,80,000 |
| ಲೋಕೇಶ | 3,37,000 | 11,17,000 | ಸ್ಥಾವರ ಮತ್ತು | | |
| ಸುರೇಶನ ಸಾಲ | | 4,83,000 | ಯಂತ್ರೋಪಕರಣ | | 4,65,000 |
| ಸಾಹುಕಾರರು | | 1,24,000 | ಪೀಠೋಪಕರಣ | | 80,000 |
| ಬಾಕಿ ಖರ್ಚುಗಳು | | 16,000 | ದಾಸ್ತಾನು | | 1,72,000 |
| | | | ಸಾಲಗಳು | 1,72,000 | |
| | | | ಕರಡು ಸಾಲದ | | |
| | | | ಕಾಯ್ದಿರಿಸುವಿಕೆ | 10,000 | 1,62,000 |
| | | | ನಗದು (₹ 121000 – 40000) | | 81,000 |
| | | 17,40,000 | | | 17,40,000 |

**ಟಿಪ್ಪಣಿ:**

1. ಗಳಿಕೆ ಪಾಲು = ಹೊಸ ಪಾಲು – ಹಳೇ ಪಾಲು

   ಆಶಿಷ್‌ನ ಗಳಿಕೆ $= \frac{3}{5} - \frac{5}{10} = \frac{6-5}{10} = \frac{1}{10}$

   ಲೋಕೇಶನ ಗಳಿಕೆ $= \frac{2}{5} - \frac{2}{10} = \frac{4-2}{10} = \frac{2}{10}$

   ಆಶಿಷ್ ಮತ್ತು ಲೋಕೇಶ ರವರ ನಡುವಿನ ಗಳಿಕೆ ಅನುಪಾತ = 1 : 2

2. ಕೀರ್ತಿ ಮೌಲ್ಯದಲ್ಲಿ ಸುರೇಶನ ಪಾಲು = $\frac{3}{10} \times$ ₹ 200000 = ₹ 60,000

**ನಿದರ್ಶನ – 13**

ಶಾಮ್, ಗಗನ್ ಮತ್ತು ರಾಮ್ ಪಾಲುದಾರರು 2 : 2 : 1 ರ ಅನುಪಾತದಲ್ಲಿ ಲಾಭ ಹಂಚಿಕೊಳ್ಳುತ್ತಾರೆ.

**ದಿನಾಂಕ 31 ಮಾರ್ಚ್, 2015 ರಂದು ಅವರ ಅಢಾವೆ ಪತ್ರಿಕೆಯು ಈ ಕೆಳಗಿನಂತಿದೆ.**

| ಹೊಣೆಗಾರಿಕೆಗಳು | | ₹ | ಆಸ್ತಿಗಳು | ₹ |
|---|---|---|---|---|
| ಸಾಹುಕಾರರು | | 49,000 | ನಗದು | 8,000 |
| ಮೀಸಲುಗಳು | | 14,500 | ಸಾಲಗಾರರು | 19,000 |
| ಬಂಡವಾಳ | | | ದಾಸ್ತಾನು | 42,000 |
| ಶಾಮ್ | 80,000 | | ಯಂತ್ರೋಪಕರಣ | 85,000 |
| ಗಗನ್ | 62,500 | | ಕಟ್ಟಡ | 1,22,000 |
| ರಾಮ್ | 75,000 | 2,17,500 | ಹಕ್ಕುಗಳು | 9,000 |
| ನೌಕರರ ಭವಿಷ್ಯ ನಿಧಿ | | 4,000 | | |
| | | 2,85,000 | | 2,85,000 |

ಗಗನ್‌ನು ಒಂದು MNC ಯಲ್ಲಿ ಉತ್ತಮ ಅವಕಾಶ ಪಡೆದುದರಿಂದ, ಆ ದಿನಾಂಕದಂದು ನಿವೃತ್ತಿ ಹೊಂದಲು ನಿರ್ಧರಿಸುತ್ತಾನೆ ಮತ್ತು ಶಾಮ್ ಮತ್ತು ರಾಮ್ ರವರು ಭವಿಷ್ಯದ ಲಾಭಗಳನ್ನು 5:3 ರ ಅನುಪಾತದಲ್ಲಿ ಹಂಚಿಕೊಳ್ಳಲು ನಿರ್ಧರಿಸಿದರು.

ಕೀರ್ತಿಮೌಲ್ಯವನ್ನು ₹ 70,000 ಕ್ಕೆ ಮೌಲ್ಯ ಮಾಡಿತು. ಯಂತ್ರೋಪಕರಣವನ್ನು ₹ 78,000 ಕ್ಕೆ, ಕಟ್ಟಡಗಳನ್ನು ₹1,52,000 ಕ್ಕೆ, ದಾಸ್ತಾನು ₹ 30,000 ಕ್ಕೆ ಮತ್ತು ₹1,550 ರ ಮೊತ್ತದ ಕರಡು ಸಾಲವನ್ನು ತೆಗೆದು ಹಾಕಲಾಯಿತು.

ಸಂಸ್ಥೆಯ ಪುಸ್ತಕಗಳಲ್ಲಿ ರೋಜು ದಾಖಲೆಗಳನ್ನು ಬರೆಯಿರಿ ಮತ್ತು ಹೊಸ ಸಂಸ್ಥೆಯ ಅಢಾವೆ ಪತ್ರಿಕೆಯನ್ನು ತಯಾರಿಸಿರಿ.

**ಪರಿಹಾರ:**

**ಶಾಮ್, ರಾಮ್ ಮತ್ತು ಗಗನ್ ರವರ ಪುಸ್ತಕಗಳಲ್ಲಿ**
**ರೋಜು ದಾಖಲೆಗಳು**

| ದಿನಾಂಕ | ವಿವರಗಳು | ಖಾ.ಪಾ | ಖರ್ಚು<br>₹ | ಜಮಾ<br>₹ |
|---|---|---|---|---|
| 2015 | ಪುನರ್ ಮೌಲ್ಯ ಮಾಪನ ಖಾತೆ ---- ಖರ್ಚು | | 20,550 | —— |
| ಮಾರ್ಚ್ | ಯಂತ್ರೋಪಕರಣಗಳ ಖಾತೆಗೆ | | —— | 7,000 |
| 31 | ದಾಸ್ತಾನು ಖಾತೆಗೆ | | —— | 12,000 |
| | ಸಾಲಗಾರರ ಖಾತೆಗೆ | | —— | 1,550 |
| | (ಗಗನ್‌ನ ನಿವೃತ್ತಿಯಂದು ಆಸ್ತಿಗಳ ಪುನರ್ ಮೌಲ್ಯ ಮಾಪನದ ನಷ್ಟವನ್ನು ಬರೆಯಲಾಯಿತು) | | | |
| ,, | ಕಟ್ಟಡ ಖಾತೆ ------------- ಖರ್ಚು | | 30,000 | —— |
| | ಪುನರ್ ಮೌಲ್ಯಮಾಪನ ಖಾತೆಗೆ | | —— | 30,000 |
| | (ಗಗನ್‌ನ ನಿವೃತ್ತಿಯಂದು ಕಟ್ಟಡದ ಮೌಲ್ಯದಲ್ಲಿ ಆದ ಹೆಚ್ಚಳ) | | | |
| ,, | ಪುನರ್ ಮೌಲ್ಯ ಮಾಪನ ಖಾತೆ - --- ಖರ್ಚು | | 9,450 | —— |
| | ಶ್ಯಾಮನ ಬಂಡವಾಳ ಖಾತೆಗೆ | | —— | 3,780 |
| | ಗಗನನ ಬಂಡವಾಳ ಖಾತೆಗೆ | | —— | 3,780 |
| | ರಾಮನ ಬಂಡವಾಳ ಖಾತೆಗೆ | | —— | 1,890 |
| | (ಪುನರ್ ಮೌಲ್ಯಮಾಪನದ ಲಾಭವನ್ನು 2:2:1 ರ ಅನುಪಾತದಲ್ಲಿ ಪಾಲುದಾರರ ಬಂಡವಾಳ ಖಾತೆಗಳಿಗೆ ವರ್ಗಾಯಿಸಲಾಯಿತು) | | | |
| ,, | ಮೀಸಲು ಖಾತೆ ------------- ಖರ್ಚು | | 14,500 | —— |
| | ಶ್ಯಾಮನ ಬಂಡವಾಳ ಖಾತಗೆ | | —— | 5,800 |
| | ಗಗನ್‌ನ ಬಂಡವಾಳ ಖಾತೆಗೆ | | —— | 5,800 |
| | ರಾಮನ ಬಂಡವಾಳ ಖಾತೆಗೆ | | —— | 2,900 |
| | (ಮೀಸಲನ್ನು ಪಾಲುದಾರರ ಬಂಡವಾಳ ಖಾತೆಗಳಿಗೆ ವರ್ಗಾಯಿಸಿತು) | | | |

| | | | | |
|---|---|---|---|---|
| ,, | ಶ್ಯಾಮ್‌ನ ಬಂಡವಾಳ ಖಾತೆ - --- - - ಖರ್ಚು | | 15,750 | —— |
| | ರಾಮನ್ ಬಂಡವಾಳ ಖಾತೆ - - - - - - ಖರ್ಚು | | 12,250 | —— |
| | ಗಗನ್‌ನ ಬಂಡವಾಳ ಖಾತೆಗೆ | | —— | 28,000 |
| | (ಕೀರ್ತಿಮೌಲ್ಯದಲ್ಲಿನ ಗಗನ್‌ನ ಪಾಲನ್ನು 9:7 ರ ಗಳಿಕೆ ಅನುಪಾತದಲ್ಲಿ ಶಾಮ್ ಮತ್ತು ರಾಮ್‌ರವರಿಗೆ ಹೊಂದಾಣಿಕೆ ಮಾಡಿತು) | | | |
| ,, | ಗಗನ್‌ನ ಬಂಡವಾಳ ಖಾತೆ - - - - - - ಖರ್ಚು | | 1,00,080 | —— |
| | ಗಗನ್‌ನ ಸಾಲದ ಖಾತೆಗೆ | | —— | 1,00,080 |
| | (ನಿವೃತ್ತ ಪಾಲುದಾರನಿಗೆ ಪಾವತಿಸಬೇಕಾದ ಮೊತ್ತವನ್ನು ಆತನ ಸಾಲದ ಖಾತೆಗೆ ವರ್ಗಾಯಿಸಿತು) | | | |

**ದಿನಾಂಕ 31 ಮಾರ್ಚ್ 2015 ರಂದು ಶಾಮ್ ಮತ್ತು ರಾಮ್ ರವರ**

**ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | | ₹ | ಆಸ್ತಿಗಳು | ₹ |
|---|---|---|---|---|
| ಸಾಹುಕಾರರು | | 49,000 | ನಗದು | 8,000 |
| ನೌಕರರ ಭವಿಷ್ಯ ನಿಧಿ | | 4,000 | ಸಾಲಗಾರರು | 17,450 |
| ಬಂಡವಾಳ | | | ದಾಸ್ತಾನು | 30,000 |
| ಶ್ಯಾಮ್ | 73,830 | | ಯಂತ್ರೋಪಕರಣ | 78,000 |
| ರಾಮ್ | 67,540 | 1,41,370 | ಕಟ್ಟಡ | 1,52,000 |
| ಗಗನನ ಸಾಲ | | 1,00,080 | ಹಕ್ಕುಗಳು | 9,000 |
| | | **2,94,450** | | **2,94,450** |

**ಟಿಪ್ಪಣಿ :**

ಗಳಿಕೆ ಪಾಲು = ಹೊಸ ಪಾಲು – ಹಳೆ ಪಾಲು

ಶ್ಯಾಮ್‌ನ ಗಳಿಕೆ ಪಾಲು = $\frac{5}{8}-\frac{2}{5}=\frac{25-16}{40}=\frac{9}{40}$

ರಾಮ್‌ನ ಗಳಿಕೆ ಪಾಲು = $\frac{3}{8}-\frac{1}{5}=\frac{15-8}{40}=\frac{7}{40}$

ಆದ್ದರಿಂದ ಶ್ಯಾಮ ಮತ್ತು ರಾಮ್‌ರವರ ಗಳಿಕೆ ಅನುಪಾತ = 9:7

**ಖರ್ಚು** **ಪುನರ್ ಮೌಲ್ಯ ಮಾಪನ ಖಾತೆ** **ಜಮೆ**

| ವಿವರಣೆ | | ₹ | ವಿವರಣೆ | ₹ |
|---|---|---|---|---|
| ಯಂತ್ರೋಪಕರಣ | | 7,000 | ಕಟ್ಟಡ | 30,000 |
| ದಾಸ್ತಾನು | | 12,000 | | |
| ಸಾಲಗಾರರು | | 1,550 | | |
| ಪುನರ್ ಮೌಲ್ಯಮಾಪನದ ಲಾಭವನ್ನು ಬಂಡವಾಳ ಖಾತೆಗಳಿಗೆ ವರ್ಗಾಸಿಯಿದ್ದು | | | | |
| ಶ್ಯಾಮ್ | 3,780 | | | |
| ಗಗನ್ | 3,780 | | | |
| ರಾಮ್ | 1,890 | 9,450 | | |
| | | 30,000 | | 30,000 |

**ಖರ್ಚು** **ಪಾಲುದಾರರ ಬಂಡವಾಳ ಖಾತೆಗಳು** **ಜಮೆ**

| ದಿನಾಂಕ 2015 | ವಿವರಣೆ | ಖಾ ಪಾ | ಶ್ಯಾಮ್ ₹ | ಗಗನ್ ₹ | ರಾಮ್ ₹ | ದಿನಾಂಕ 2015 | ವಿವರಣೆ | ಖಾ ಪಾ | ಶ್ಯಾಮ್ ₹ | ಗಗನ್ ₹ | ರಾಮ್ ₹ |
|---|---|---|---|---|---|---|---|---|---|---|---|
| ಮಾರ್ಚ್ 31 | ಗಗನ್ ಬಂಡವಾಳ | | 15,750 | — | 12,500 | | ಹಿಂದಿನಿಂದ ಬಂದ ಶಿಲ್ಕು | | 80,000 | 62,500 | 75,000 |
| | ಗಗನನ ಸಾಲ | | | 1,00,080 | | | | | | | |
| | ಮುಂದುವರೆದ ಶಿಲ್ಕು | | 73,830 | | 67,540 | | ಪುನರ್ ಮೌಲ್ಯ ಮಾಪನ ಲಾಭ | | 3,780 | 3,780 | 1,890 |
| | | | | | | | ಮೀಸಲು | | 5,800 | 5,800 | 2,900 |
| | | | | | | | ಶ್ಯಾಮನ ಬಂಡವಾಳ | | | 15,750 | — |
| | | | | | | | ರಾಮನ ಬಂಡವಾಳ | | | 12,250 | — |
| | | | **89,580** | **1,00,080** | **79,790** | | | | **89,580** | **1,00,080** | **79,790** |

**ಟಿಪ್ಪಣಿ:**

ಗಗನ್‌ನ ಬಾಕಿ ಮೊತ್ತವನ್ನು ಪಾವತಿಸಲು ಸಾಕಷ್ಟು ಶಿಲ್ಕು ಲಭ್ಯವಿಲ್ಲದಿರುವುದರಿಂದ, ಆತನ ಬಂಡವಾಳ ಖಾತೆಯಲ್ಲಿನ ಶಿಲ್ಕನ್ನು ಆತನ ಸಾಲದ ಖಾತೆಗೆ ವರ್ಗಾಯಿಸಲಾಗಿದೆ.

## 4.8 ಪಾಲುದಾರರ ಬಂಡವಾಳದ ಹೊಂದಾಣಿಕೆ Adjustment of Partners' Capital

ಪಾಲುದಾರನ ನಿವೃತ್ತಿ ಅಥವಾ ನಿಧನದ ಸಮಯದಲ್ಲಿ ಉಳಿದ ಪಾಲುದಾರರು, ತಮ್ಮ ಬಂಡವಾಳ ವಂತಿಗೆಗಳನ್ನು ತಮ್ಮ ಲಾಭ ಹಂಚಿಕೆಯ ಅನುಪಾತದಲ್ಲಿ ಹೊಂದಾಣಿಕೆ ಮಾಡಿಕೊಳ್ಳಲು ನಿರ್ಧರಿಸಬಹುದು. ನಿರ್ದಿಷ್ಟವಾಗಿ ಸ್ಪಷ್ಟವಾಗಿ ತಿಳಿಸದಿರುವ ಹೊರತು, ಅಂತಹ ಸಂಧರ್ಭದಲ್ಲಿ ಮುಂದುವರೆಯುವ ಪಾಲುದಾರರ ಬಂಡವಾಳಗಳ ಮೊತ್ತವನ್ನು ಹೊಸ ಸಂಸ್ಥೆಯ ಒಟ್ಟು ಬಂಡವಾಳ ಎಂದು ಪರಿಗಣಿಸಲಾಗುವುದು. ನಂತರ, ಮುಂದುವರೆಯುವ ಪಾಲುದಾರರ ಹೊಸ ಬಂಡವಾಳವನ್ನು ಕಂಡು ಹಿಡಿಯಲು, ಸಂಸ್ಥೆಯ ಒಟ್ಟು ಬಂಡವಾಳವನ್ನು ಹೊಸ ಲಾಭ ಹಂಚಿಕೆಯ ಅನುಪಾತದಲ್ಲಿ ಉಳಿದ ಪಾಲುದಾರರ ನಡುವೆ ಹಂಚಿಕೆ ಮಾಡಲಾಗುತ್ತದೆ ಮತ್ತು ಪಾಲುದಾರರ ವೈಯಕ್ತಿಕ ಖಾತೆಗಳಲ್ಲಿನ ಬಂಡವಾಳದ

ಹೆಚ್ಚುವರಿ ಅಥವಾ ಕೊರತೆಯ ಮೊತ್ತವನ್ನು ಕಂಡು ಹಿಡಿಯಬಹುದಾಗಿದೆ. ಅಂತಹ ಹೆಚ್ಚುವರಿ ಅಥವಾ ಕೊರತೆಯನ್ನು ನಗದು ಮೂಲಕ ಹಿಂಪಡೆಯಬಹುದು ಅಥವಾ ಸಂಸ್ಥೆಗೆ ನೀಡಬಹುದು ಅದಕ್ಕಾಗಿ ಈ ಕೆಳಗಿನ ರೋಜು ದಾಖಲೆಯನ್ನು ಬರೆಯಲಾಗುತ್ತದೆ.

(i) ಪಾಲುದಾರನು ಹೆಚ್ಚುವರಿ ಬಂಡವಾಳನ್ನು ಹಿಂಪಡೆದಾಗ :

| | | |
|---|---|---|
| ಪಾಲುದಾರನ ಬಂಡವಾಳ ಖಾತೆ ---------- ಖರ್ಚು | xxx | — |
| ನಗದು/ಬ್ಯಾಂಕ್ ಖಾತೆಗೆ | — | xxx |

(ii) ಪಾಲುದಾರನು ಬಂಡವಾಳದ ಮೊತ್ತವನ್ನು ತಂದಾಗ:

| | | |
|---|---|---|
| ನಗದು/ಬ್ಯಾಂಕ ಖಾತೆಗೆ ---- ---------- ಖರ್ಚು | xxx | — |
| ಪಾಲುದಾರನ ಬಂಡವಾಳ ಖಾತೆಗೆ | — | xxx |

**ಕೆಳಗಿನ ಸಂದರ್ಭಗಳನ್ನು ಪರಿಗಣಿಸಿ:**

ಮುಂದುವರಿಯುವ ಪಾಲುದಾರರ ಬಂಡವಾಳಗಳ ಹೊಂದಾಣಿಕೆಯು ಈ ಮುಂದೆ ನಿದರ್ಶಿಸಿದ ಮೂರು ಮಾರ್ಗಗಳಲ್ಲಿ ಒಂದನ್ನು ಒಳಗೊಂಡಿರಬಹುದು.

**1. ಪಾಲುದಾರರು ನಿರ್ಧರಿಸಿದಂತೆ ಹೊಸ ಸಂಸ್ಥೆಯ ಬಂಡವಾಳವನ್ನು ನಿರ್ದಿಷ್ಟ ಪಡಿಸಿದಾಗ :**

**ನಿದರ್ಶನ – 14**

ಒಂದು ಸಂಸ್ಥೆಯಲ್ಲಿ ಮೋಹಿತ್, ನೀರಜ್ ಮತ್ತು ಸೋಹನ್ ಪಾಲುದಾರರು 2 : 1 : 1 ರ ಅನುಪಾತದಲ್ಲಿ ಲಾಭವನ್ನು ಹಂಚಿಕೊಳ್ಳುತ್ತಾರೆ. ನೀರಜ್‌ನು ನಿವೃತ್ತನಾದನು ಹೊಸ ಸಂಸ್ಥೆಯ ಬಂಡವಾಳವನ್ನು ಮೊಹಿತ್ ಮತ್ತು ಸೊಹನ್‌ರು ₹ 1,20,000 ಕ್ಕೆ ನಿರ್ಧರಿಸುವರು ಮೋಹಿತ್ ಮತ್ತು ಸೋಹಿನ್‌ರವರ ಬಂಡವಾಳ ಖಾತೆಗಳು ಎಲ್ಲಾ ಹೊಂದಾಣಿಕೆಗಳನ್ನು ಮಾಡಿದ ನಂತರ ಕ್ರಮವಾಗಿ ₹ 82,000 ಮತ್ತು ₹ 41,000 ಜಮೆಯ ಶಿಲ್ಕುಗಳನ್ನು ತೋರಿಸುತ್ತವೆ.

ಮುಂದುವರೆಯುವ ಪಾಲುದಾರರರಿಗೆ ಸಂದಾಯಗೊಳಿಸುವ ಅಥವಾ ಅವರು ತರಲಾಗುವ ನಿಜವಾದ ನಗದನ್ನು ಕಂಡು ಹಿಡಿಯಿರಿ ಮತ್ತು ಅವಶ್ಯಕ ರೋಜು ದಾಖಲೆಗಳನ್ನು ಬರೆಯಿರಿ.

**ಪರಿಹಾರ:**

ಮೋಹಿತ್ ಮತ್ತು ಸೋಹನ್‌ರ ನಡುವಿನ ಹೊಸ ಲಾಭ ಹಂಚಿಕೆಯ ಅನುಪಾತ = 2 : 1

| | **ಮೋಹಿತ್** | **ಸೋಹನ್** |
|---|---|---|
| ಹೊಸ ಅನುಪಾತದ ಆಧಾರದ ಪ್ರಕಾರ ಹೊಸ ಬಂಡವಾಳ | 80,000 | 40,000 |
| ಪ್ರಸ್ತುತ ಬಂಡವಾಳ (ಹೊಂದಾಣಿಕೆಯ ನಂತರ) | 82,000 | 41,000 |
| ತರಬೇಕಾದ ಅಥವಾ (ಪಾವತಿಸಬೇಕಾದ) ನಗದು | (2,000) | (1,000) |

**ಮೋಹಿತ್ ಮತ್ತು ಸೊಹನ್‌ರ ಪುಸ್ತಕಗಳಲ್ಲಿ**

**ರೋಜು ದಾಖಲೆ**

| ದಿನಾಂಕ | ವಿವರಣೆ | ಖಾ.ಪಾ. | ಖರ್ಚು ₹ | ಜಮಾ ₹ |
|---|---|---|---|---|
| | ಮೋಹಿತ್‌ನ ಬಂಡವಾಳ ಖಾತೆ - - - - - - - - - ಖರ್ಚು | | 2,000 | —— |
| | ಸೋಹನ್‌ನ ಬಂಡವಾಳ ಖಾತೆ - - - - - - - - - ಖರ್ಚು | | 1,000 | —— |
| | ನಗದು ಖಾತೆಗೆ | | —— | 3,000 |
| | (ಮೋಹಿತ್ ಮತ್ತು ಸೋಹನ್‌ರು ಹೆಚ್ಚಿನ ಬಂಡವಾಳವನ್ನು ಹಿಂಪಡೆದದ್ದು) | | | |

**2. ಹೊಸ ಸಂಸ್ಥೆಯ ಒಟ್ಟು ಬಂಡವಾಳವನ್ನು ನಿರ್ದಿಷ್ಟವಾಗಿ ಕೊಡದೇ ಇದ್ದಾಗ:**

**ನಿದರ್ಶನ – 15**

ಒಂದು ಸಂಸ್ಥೆಯಲ್ಲಿ ಆಶಾ, ದೀಪಾ ಮತ್ತು ಲತಾ ಪಾಲುದಾರರರು 3:2:1 ರ ಅನುಪಾತದಲ್ಲಿ ಲಾಭವನ್ನು ಹಂಚಿಕೊಳ್ಳುತ್ತಿರುತ್ತಾರೆ. ದೀಪಾಳು ನಿವೃತ್ತಳಾದಳು. ಪುನರ್‌ಮೌಲ್ಯ ಮಾಪನ, ಕೀರ್ತಿ ಮೌಲ್ಯ ಮತ್ತು ಸಂಚಯಿತ ಲಾಭ ಇತ್ಯಾದಿಗಳಿಗೆ ಸಂಬಂಧಿಸಿದ ಎಲ್ಲಾ ಹೊಂದಾಣಿಕೆಗಳನ್ನು ಮಾಡಿದ ನಂತರ ಆಶಾ ಮತ್ತು ಲತಾ ರವರ ಬಂಡವಾಳ ಖಾತೆಗಳು ಕ್ರಮವಾಗಿ ₹ 1,60,000 ಮತ್ತು ₹ 80,000 ಜಮೆ ಶಿಲ್ಕುಗಳನ್ನು ತೋರಿಸುತ್ತವೆ. ಆಶಾ ಮತ್ತು ಲತಾ ರವರ ಬಂಡವಾಳಗಳನ್ನು ಅವರ ಹೊಸ ಲಾಭ ಹಂಚಿಕೆಯ ಅನುಪಾತದಲ್ಲಿ ಹೊಂದಾಣಿಕೆ ಮಾಡಲು ನಿರ್ಧರಿಸಲಾಯಿತು. ನೀವು ಪಾಲುದಾರರ ಹೊಸ ಬಂಡವಾಳಗಳನ್ನು ಲೆಕ್ಕ ಹಾಕಬೇಕಾಗುತ್ತದೆ ಮತ್ತು ಒಳಗೊಂಡಿರುವ ಅವಶ್ಯಕ ಮೊತ್ತಗಳನ್ನು ತರುವ ಮತ್ತು ಹಿಂಪಡೆಯುವದಕ್ಕಾಗಿ ಅವಶ್ಯಕ ರೋಜು ದಾಖಲೆಗಳನ್ನು ಬರೆಯಿರಿ

**ಪರಿಹಾರ:**

(ಎ) ಅಸ್ತಿತ್ವದಲ್ಲಿರುವ ಪಾಲುದಾರರ ಹೊಸ ಬಂಡವಾಳದ ಲೆಕ್ಕಾಚಾರ

ಆಶಾಳ ಬಂಡವಾಳ ಖಾತೆಯಲ್ಲಿನ ಶಿಲ್ಕು = 1,60,000

ಲತಾಳ ಬಂಡವಾಳ ಶಿಲ್ಕು = 80,000

ಹೊಸ ಸಂಸ್ಥೆಯ ಒಟ್ಟು ಬಂಡವಾಳ = 2,40,000

2 : 1 ರ ಹೊಸ ಲಾಭ ಹಂಚಿಕೆಯ ಅನುಪಾತದ ಆಧಾರದ ಮೇಲೆ

ಆಶಾಳ ಹೊಸ ಬಂಡವಾಳ = ₹ 2,40,000 $\times \frac{3}{4}$ = 1,80,000

ಲತಾಳ ಹೊಸ ಬಂಡವಾಳ = ₹ 2,40,000 $\times \frac{1}{4}$ = 60,000

**ಟಿಪ್ಪಣಿ :** ಮುಂದುವರೆಯುವ ಪಾಲುದಾರರ ಬಂಡವಾಳ ಖಾತೆಗಳಲ್ಲಿನ ಶಿಲ್ಕುಗಳ ಒಟ್ಟು ಮೊತ್ತದ ಆಧಾರದ ಮೇಲೆ ಹೊಸ ಸಂಸ್ಥೆಯ ಒಟ್ಟು ಬಂಡವಾಳವನ್ನು ತೆಗೆದುಕೊಳ್ಳಲಾಗಿದೆ.

(ಬಿ) ಮುಂದುವರೆಯುವ ಪಾಲುದಾರರು ತರಬೇಕಾದ ಅಥವಾ ಹಿಂಪಡೆಯಬೇಕಾದ ನಗದಿನ ಲೆಕ್ಕಾಚಾರ:

| | ಆಶಾ ₹ | ಲತಾ ₹ |
|---|---|---|
| ಹೊಸ ಬಂಡವಾಳ | 1,80,000 | 60,000 |
| ಅಸ್ತಿತ್ವದಲ್ಲಿರುವ ಬಂಡವಾಳ | 1,60,000 | 80,000 |
| ತರಬೇಕಾದ ನಗದು (ಪಾವತಿಸಬೇಕಾದದ್ದು) | 20,000 | (20,000) |

**ಆಶಾ ಮತ್ತು ಲತಾರವರ ಪುಸ್ತಕಗಳಲ್ಲಿ**

**ರೋಜು ದಾಖಲೆ**

| ದಿನಾಂಕ | ವಿವರಗಳು | ಖಾ.ಪಾ | ಖರ್ಚು ₹ | ಜಮೆ ₹ |
|---|---|---|---|---|
| | ನಗದು ಖಾತೆ - - - - - - - ಖರ್ಚು | | 20,000 | —— |
| | ಆಶಾಳ ಬಂಡವಾಳ ಖಾತೆಗೆ | | —— | 20,000 |
| | (ಆಶಾಳು ತಂದ ನಗದು) | | | |
| | ಲತಾಳ ಬಂಡವಾಳ ಖಾತೆ - - - - - - - ಖರ್ಚು | | 20,000 | —— |
| | ನಗದು ಖಾತೆಗೆ | | —— | 20,000 |
| | (ಲತಾಳ ಹಿಂಪಡೆದ ಹೆಚ್ಚಿನ ಬಂಡವಾಳ) | | | |

**3. ತಮ್ಮ ಬಂಡವಾಳದ ಮೊತ್ತಗಳು ಅವರ ಹೊಸ ಲಾಭ ಹಂಚಿಕೆಯ ಅನುಪಾತಕ್ಕೆ ಹೊಂದಾಣಿಕೆಯಾಗುವಂತೆ ಮುಂದುವರೆಯುವ ಪಾಲುದಾರರು ನಿವೃತ್ತ ಪಾಲುದಾರನಿಗೆ ಪಾವತಿಸಬೇಕಾದ ಮೊತ್ತವನ್ನು ನೀಡಿದಾಗ :**

**ನಿದರ್ಶನ – 16**

ಲಲಿತ, ಪಂಕಜ ಮತ್ತು ರಾಹುಲ್ ಎಂಬ ಪಾಲುದಾರರು 4 : 3 : 3 ರ ಅನುಪಾತದಲ್ಲಿ ಲಾಭ ಹಂಚಿಕೊಳ್ಳುತ್ತಿರುತ್ತಾರೆ. ಲಲಿತನು ನಿವೃತ್ತಿಯಾದಾಗ, ಸಾಮಾನ್ಯ ಮೀಸಲು, ಕೀರ್ತಿಮೌಲ್ಯ ಮತ್ತು ಪುನರ್‌ಮೌಲ್ಯ, ಮುಂತಾದ ಎಲ್ಲಾ ಹೊಂದಾಣಿಕೆಗಳ ನಂತರ ಅವರ ಬಂಡವಾಳ ಖಾತೆಗಳಲ್ಲಿ ಕ್ರಮವಾಗಿ ₹ 70,000 ₹ 60,000 ಮತ್ತು ₹ 50,000 ಶಿಲ್ಕುಗಳಿರುತ್ತವೆ. ಲಲಿತನಿಗೆ ಪಾವತಿಸಬೇಕಾದ ಮೊತ್ತವನ್ನು, ತಮ್ಮ ಬಂಡವಾಳ ಖಾತೆಗಳು ಲಾಭ ಹಂಚಿಕೆಯ ಅನುಪಾತದಲ್ಲಿ ಆಗುವಂತೆ, ಪಂಕಜ ಮತ್ತು ರಾಹುಲ ತರಲು ನಿರ್ಧರಿಸುತ್ತಾರೆ.

ಪಂಕಜ ಮತ್ತು ರಾಹುಲ್‌ರು ತರಬೇಕಾದ ಮೊತ್ತವನ್ನು ಕಂಡುಹಿಡಿಯಿರಿ ಮತ್ತು ಅದಕ್ಕಾಗಿ ಅವಶ್ಯಕ ರೋಜು ದಾಖಲೆಗಳನ್ನು ಬರೆಯಿರಿ. ಲಲಿತನಿಗೆ ಪಾವತಿಸುವುದಕ್ಕಾಗಿಯೂ ಅವಶ್ಯಕ ರೋಜು ದಾಖಲೆಯನ್ನು ನೀಡಿರಿ.

ಲಲಿತನ ನಿವೃತ್ತಿಯ ನಂತರ ಪಂಕಜ ಮತ್ತು ರಾಹುಲ್‌ರ ನಡುವಿನ ಹೊಸ ಲಾಭ ಹಂಚಿಕೆಯ ಅನುಪಾತವು 3:3 ಅಂದರೆ 1:1 ಅಗಿರುತ್ತದೆ.

**ಪರಿಹಾರ:**

(ಎ) ಹೊಸ ಸಂಸ್ಥೆಯ ಒಟ್ಟು ಬಂಡವಾಳದ ಲೆಕ್ಕಾಚಾರ.

| | | |
|---|---|---|
| ಪಂಕಜನ ಬಂಡವಾಳ ಖಾತೆಯಲ್ಲಿನ ಶಿಲ್ಕು (ಹೊಂದಾಣಿಕೆ ನಂತರ) | = | 60,000 |
| ರಾಹುಲ್‌ನ ಬಂಡವಾಳ ಖಾತೆಯಲ್ಲಿನ ಶಿಲ್ಕು (ಹೊಂದಾಣಿಕೆ ನಂತರ) | = | 50,000 |
| ಲಲಿತನಿಗೆ ಪಾವತಿಸಬೇಕಾದ ಮೊತ್ತು (ನಿವೃತ್ತ ಪಾಲುದಾರ) | = | 70,000 |
| ಹೊಸ ಸಂಸ್ಥೆಯ ಒಟ್ಟು ಬಂಡವಾಳ | = | 1,80,000 |

(ಬಿ) ಮುಂದುವರೆಯುವ ಪಾಲುದಾರರ ಹೊಸ ಬಂಡವಾಳ ಲೆಕ್ಕಾಚಾರ.

ಪಂಕಜನ ಹೊಸ ಬಂಡವಾಳ = 1,80,000 × $^1/_2$ = ₹ 90,000

ರಾಹುಲ್‌ನ ಹೊಸ ಬಂಡವಾಳ = 1,80,000 × $^1/_2$ = ₹ 90,000

(ಸಿ) ಮುಂದುವರೆಯುವ ಪಾಲುದಾರರು ಸಂಸ್ಥೆಗೆ ನೀಡಬೇಕಾದ ಅಥವಾ ಹಿಂಪಡೆಯಲಾಗುವ ಮೊತ್ತಗಳನ್ನು ಕಂಡುಹಿಡಿಯುವುದು.

| | ಪಂಕಜ ₹ | ರಾಹುಲ್ ₹ |
|---|---|---|
| ಹೊಸ ಬಂಡವಾಳ (₹ 180000 1:1 ರ ಅನುಪಾತದಲ್ಲಿ) | 90,000 | 90,000 |
| ಪ್ರಸ್ತುತ ಬಂಡವಾಳ (ಹೊಂದಾಣಿಕೆಗಳ ನಂತರ) | 60,000 | 50,000 |
| ಸಂಸ್ಥೆಗೆ ನೀಡಬೇಕಾದ ಬಂಡವಾಳ | 30,000 | 40,000 |

**ಪಂಕಜ ಮತ್ತು ರಾಹುಲ್‌ರವರ ಪುಸ್ತಕಗಳು**
**ರೋಜು ಪುಸ್ತಕ**

| ದಿನಾಂಕ | ವಿವರಣೆ | ಖಾ. ಪಾ | ಖರ್ಚು ₹ | ಜಮೆ ₹ |
|---|---|---|---|---|
| | ನಗದು ಖಾತೆ - - - - - - - - - - - - - - - - - - - - ಖರ್ಚು | | 70,000 | —— |
| | ಪಂಕಜನ ಬಂಡವಾಳ ಖಾತೆಗೆ | | —— | 30,000 |
| | ರಾಹುಲ್‌ನ ಬಂಡವಾಳ ಖಾತೆಗೆ | | —— | 40,000 |
| | (ಪಂಕಜ ಮತ್ತು ರಾಹುಲ್‌ರು ಸಂಸ್ಥೆಗೆ ನೀಡಿದ ಮೊತ್ತಗಳು) | | | |
| | ಲಲಿತನ ಬಂಡವಾಳ ಖಾತೆ - - - - - - - - - - - - - - ಖರ್ಚು | | 70,000 | —— |
| | ನಗದು ಖಾತೆಗೆ | | —— | 70,000 |
| | (ನಿವೃತ್ತಿಯಂದು ಲಲಿತನಿಗೆ ಪಾವತಿಸಿದ ಮೊತ್ತ) | | | |

**ನಿದರ್ಶನ – 17**

ತಮ್ಮ ಬಂಡವಾಳಗಳ ಅನುಪಾತದಲ್ಲಿ ಲಾಭ ಹಂಚಿಕೊಳ್ಳುತ್ತಿರುವ, ಸಂಸ್ಥೆಯೊಂದರಲ್ಲಿನ ಮೋಹಿತ್, ನೀರಜ್ ಮತ್ತು ಸೋಹನ್ ಪಾಲುದಾರರ ದಿನಾಂಕ 31 ಮಾರ್ಚ್, 2015 ರಂದಿನ ಅಢಾವೆ ಪತ್ರಿಕೆಯು ಈ ಕೆಳಗಿನಂತಿದೆ.

| ಹೊಣೆಗಾರಿಕೆಗಳು | ಮೊತ್ತ ₹ | ಆಸ್ತಿಗಳು | | ಮೊತ್ತ ₹ |
|---|---|---|---|---|
| ಸಾಹುಕಾರರು | 21,000 | ಕಟ್ಟಡಗಳು | | 1,00,000 |
| ಮೋಹಿತ್‌ನ ಬಂಡವಾಳ | 80,000 | ಯಂತ್ರೋಪಕರಣ | | 50,000 |
| ನೀರಜ್‌ನ ಬಂಡವಾಳ | 40,000 | ದಾಸ್ತಾನು | | 18,000 |
| ಸೋಹನ್‌ನ ಬಂಡವಾಳ | 40,000 | ಸಾಲಗಾರರು | 20,000 | |
| ಸಾಮಾನ್ಯ ಮೀಸಲು | 20,000 | ಕರಡು ಸಾಲ | | |
| | | ಕಾಯ್ದಿರಿಸಿದ್ದು | 1,000 | 19,000 |
| | | ಬ್ಯಾಂಕಿನಲ್ಲಿ ನಗದು | | 14,000 |
| | **2,01,000** | | | **2,01,000** |

ಆ ದಿನಾಂಕದಂದು ನೀರಜ್‌ನು ಸಂಸ್ಥೆಯಿಂದ ನಿವೃತ್ತಿಯಾಗಲು ನಿರ್ಧರಿಸುತ್ತಾನೆ ಮತ್ತು ಕೆಳಗಿನ ಶರತ್ತುಗಳಂತೆ ಸಂಸ್ಥೆಯಲ್ಲಿನ ಆತನ ಪಾಲನ್ನು ಪಾವತಿಸಲಾಗುವುದು.

(1) ಕಟ್ಟಡಗಳ ಮೌಲ್ಯವನ್ನು ಶೇ. 20 ರಿಂದ ಹೆಚ್ಚಿಸುವುದು.

(2) ಕರಡು ಸಾಲ ಕಾಯ್ದಿರಿಸುವಿಕೆಯನ್ನು ಸಾಲಗಳ ಮೇಲೆ ಶೇ. 15 ರವರೆಗೆ ಹೆಚ್ಚಿಸುವುದು.

(3) ಯಂತ್ರೋಪಕರಣಗಳನ್ನು ಶೇ. 20 ರಿಂದ ಸವಕಳಿ ಮಾಡುವುದು.

(4) ಸಂಸ್ಥೆಯ ಕೀರ್ತಿಮೌಲ್ಯವನ್ನು ₹72,000 ಕ್ಕೆ ಮೌಲ್ಯೀಕರಿಸುವುದು ಮತ್ತು ನಿವೃತ್ತ ಪಾಲುದಾರನ ಪಾಲನ್ನು ಉಳಿದ ಪಾಲುದಾರರ ಬಂಡವಾಳ ಖಾತೆಗಳ ಮೂಲಕ ಹೊಂದಾಣಿಕೆ ಮಾಡುವುದು.

(5) ಹೊಸ ಸಂಸ್ಥೆಯ ಬಂಡವಾಳವನ್ನು ₹1,20,000 ಕ್ಕೆ ನಿಗದಿಪಡಿಸಲಾಯಿತು.

ಪುನರ್ ಮೌಲ್ಯಮಾಪನದ ಖಾತೆ, ಪಾಲುದಾರರ ಬಂಡವಾಳ ಖಾತೆಗಳು ಮತ್ತು ನೀರಜ್‌ನ ನಿವೃತಿ ನಂತರದ ಅಢಾವೆ ಪತ್ರಿಕೆಯನ್ನು ತಯಾರಿಸಿ.

**ಪರಿಹಾರ:**

**ಖರ್ಚು** **ಪುನರ್ ಮೌಲ್ಯ ಮಾಪನ ಖಾತೆ** **ಜಮೆ**

| ವಿವರಗಳು | | ₹ | ವಿವರಗಳು | ₹ |
|---|---|---|---|---|
| ಕರಡು ಸಾಲ ಕಾಯ್ದಿರಿಸುವಿಕೆ | | 2,000 | ಕಟ್ಟಡ | 20,000 |
| ಯಂತ್ರೋಪಕರಣ | | 10,000 | | |
| ಬಂಡವಾಳ ಖಾತೆ (ಪುನರ್‌ಮೌಲ್ಯ ಮಾಪನದ ಲಾಭ) | | | | |
| ಮೋಹಿತ್ | 4,000 | | | |
| ನೀರಜ್ | 2,000 | | | |
| ಸೋಹನ್ | 2,000 | 8,000 | | |
| | | **20,000** | | **20,000** |

**ಖರ್ಚು ಪಾಲುದಾರರ ಬಂಡವಾಳ ಖಾತೆಗಳು ಜಮೆ**

| ದಿನಾಂಕ 2015 | ವಿವರಗಳು | ರೊ. ಪಾ | ಮೋಹಿತ್ ₹ | ನೀರಜ್ ₹ | ಸೋಹನ್ ₹ | ದಿನಾಂಕ 2015 | ವಿವರಗಳು | ರೊ. ಪಾ | ಮೋಹಿತ್ ₹ | ನೀರಜ್ ₹ | ಸೋಹನ್ ₹ |
|---|---|---|---|---|---|---|---|---|---|---|---|
| ಮಾರ್ಚ್ 31 | ನೀರಜ್‌ನ ಬಂಡವಾಳ | | 12,000 | — | 6,000 | ಮಾರ್ಚ್ 31 | ಆರಂಭದ ಶಿಲ್ಕು | | 80000 | 40,000 | 40,000 |
| | ಕೊನೆಯ ಶಿಲ್ಕು | | 82,000 | 65,000 | 41,000 | | ಸಾಮಾನ್ಯ ಮೀಸಲು | | 10,000 | 5,000 | 5,000 |
| | | | | | | | ಪುನರ್ಮೌಲ್ಯ (ಲಾಭ) | | 4,000 | 2,000 | 2,000 |
| | | | | | | | ಮೋಹಿತ್‌ನ ಬಂಡವಾಳ | | — | 12,000 | — |
| | | | | | | | ಸೋಹನ್‌ನ ಬಂಡವಾಳ | | — | 6,000 | — |
| | | | **94,000** | **65,000** | **47,000** | | | | **94,000** | **65,000** | **47,000** |
| | ಬ್ಯಾಂಕ್ | | — | 65,000 | — | | ಆರಂಭದ ಶಿಲ್ಕು | | 82,000 | 65,000 | 41,000 |
| | ಬ್ಯಾಂಕ್ | | 2,000 | — | 1,000 | | | | | | |
| | ಕೊನೆಯ ಶಿಲ್ಕು | | 80,000 | — | 40,000 | | | | | | |
| | | | **82,000** | **65,000** | **41,000** | | | | **82,000** | **65,000** | **41,000** |

**ದಿನಾಂಕ 31 ಮಾರ್ಚ್, 2015 ರಂದಿನ ಅಢಾವೆ ಪತ್ರಿಕೆ.**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | | ಮೊತ್ತ ₹ |
|---|---|---|---|---|---|
| ಸಾಹುಕಾರರು | | 21,000 | ಕಟ್ಟಡ | | 1,20,000 |
| ಬ್ಯಾಂಕ್ ಮೀರೆಳೆತ | | 54,000 | ಯಂತ್ರೋಪಕರಣ | | 40,000 |
| ಬಂಡವಾಳ | | | ದಾಸ್ತಾನು | | 18,000 |
| ಮೋಹಿತ್ | 80,000 | | ಸಾಲಗಾರರು | 20,000 | |
| ಸೋಹನ್ | 40,000 | 1,20,000 | ಕರಡು ಸಾಲ ಕಾಯ್ದಿರಿಸಿದ್ದು (1000+2000) | 3000 | 17,000 |
| | | **1,95,000** | | | **1,95,000** |

**ಟಿಪ್ಪಣಿ:**

1.

**ಖರ್ಚು ಬ್ಯಾಂಕ್ ಖಾತೆ ಜಮೆ**

| ದಿನಾಂಕ | ವಿವರಗಳು | ರೊ. ಪಾ | ಮೊತ್ತ ₹ | ದಿನಾಂಕ | ವಿವರಗಳು | ರೊ. ಪಾ | ಮೊತ್ತ ₹ |
|---|---|---|---|---|---|---|---|
| | ಆರಂಭಿಕ ಶಿಲ್ಕು | | 14,000 | | ಮೋಹಿತ್‌ನ ಬಂಡವಾಳ | | 2,000 |
| | ಕೊನೆಯ ಶಿಲ್ಕು | | 54,000 | | ಸೋಹನ್‌ನ ಬಂಡವಾಳ | | 1,000 |
| | | | | | ನೀರಜ್‌ನ ಬಂಡವಾಳ | | 65,000 |
| | | | 68,000 | | | | 68,000 |

2. ನಿವೃತ್ತ ಪಾಲುದಾರನಿಗೆ ಪಾವತಿ ಮಾಡುವುದಕ್ಕಾಗಿ ಬ್ಯಾಂಕ್ ಮೀರೆಳೆತವನ್ನು ತೆಗೆದುಕೊಳ್ಳಲಾಗಿದೆ ಎಂದು ಊಹಿಸಲಾಯಿತು.

3. ಮೋಹಿತ್ ಮುತ್ತು ಸೋಹನ್‌ರು ನೀಡಿದ ನಗದು ಅಥವಾ ಹಿಂಪಡೆದ ನಗದು:

| | | ಮೋಹಿತ್ ₹ | ಸೋಹನ್ ₹ |
|---|---|---|---|
| (a) | ಹೊಸ ಬಂಡವಾಳಗಳು (2:1 ರ ಅನುಪಾತದಲ್ಲಿ ₹ 1,20,000) | 80,000 | 40,000 |
| | ಪ್ರಸ್ತುತ ಬಂಡವಾಳ (ಹೊಂದಾಣಿಕೆಗಳ ನಂತರ ಲೆಕ್ಕ ಮಾಡಿದಂತೆ) | 82,000 | 41,000 |
| (b) | ನೀಡಬೇಕಾದ ನಗದು (ಪಾವತಿ ಮಾಡಿದ್ದು) | (2,000) | (1,000) |

**ನೀವೇ ಮಾಡಿ Do it Yourself**

1. ತಮ್ಮ ಬಂಡವಾಳಗಳ ಅನುಪಾತದಲ್ಲಿ ಲಾಭ ಹಂಚಿಕೊಳ್ಳುತ್ತಿರುವ, A, B ಮತ್ತು C ರವರ, ದಿನಾಂಕ : 31 ಮಾರ್ಚ್ 2015 ರಂದಿನ ಅಢಾವೆ ಪತ್ರಿಕೆ

**ದಿನಾಂಕ : 31 ಮಾರ್ಚ್ 2015 ರಂದಿನ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | | ಮೊತ್ತ ₹ |
|---|---|---|---|---|---|
| ಕೊಡತಕ್ಕ ಹುಂಡಿಗಳು | | 6,250 | ಭೂಮಿ ಮತ್ತು ಕಟ್ಟಡ | | 12,000 |
| ವಿವಿಧ ಸಾಹುಕಾರರು | | 10,000 | ಸಾಲಗಾರರು | 10,500 | |
| ಮೀಸಲು ನಿಧಿ | | 2,750 | ಕರಡು ಸಾಲ ಕಾಯ್ದಿರಿಸಿದ್ದು | 500 | 10,000 |
| ಬಂಡವಾಳಗಳು: | | | ಬರತಕ್ಕ ಹುಂಡಿಗಳು | | 7,000 |
| A | 20,000 | | ದಾಸ್ತಾನು | | 15,500 |
| B | 15,000 | | ಸ್ಥಾವರ ಮತ್ತು ಯಂತ್ರೋಪಕರಣ | | 11,500 |
| C | 15,000 | 50,000 | ಬ್ಯಾಂಕಿನಲ್ಲಿನ ನಗದು | | 13,000 |
| | | **69,000** | | | **69,000** |

ಅಢಾವೆ ಪತ್ರಿಕೆಯ ದಿನಾಂಕದಂದು B ನಿವೃತ್ತನಾದನು ಮತ್ತು ಈ ಕೆಳಗಿನ ಹೊಂದಾಣಿಕೆಗಳನ್ನು ಮಾಡಲಾಯಿತು.

(ಎ) ದಾಸ್ತಾನನ್ನು ಶೇ. 10 ರಷ್ಟು ಸವಕಳಿ ಮಾಡಿತು.

(ಬಿ) ಕಾರ್ಖಾನೆ ಕಟ್ಟಡವನ್ನು ಶೇ. 12 ರಷ್ಟು ಹೆಚ್ಚಳ ಮಾಡಿತು.

(ಸಿ) ಶೇ 5 ರವರೆಗೆ ಕರಡು ಸಾಲ ಕಾಯ್ದಿರಿಸುವಿಕೆಯನ್ನು ಸೃಷ್ಟಿಸುವುದು.

(ಡಿ) ಕಾನೂನು ಖರ್ಚುಗಳಿಗೆ ಕಾಯ್ದಿರಿಸುವಿಕೆಯನ್ನು ₹ 265 ಕ್ಕೆ ಮಾಡುವುದು.

(ಇ) ಸಂಸ್ಥೆಯ ಕೀರ್ತಿಮೌಲ್ಯವನ್ನು ₹ 10,000 ಕ್ಕೆ ನಿಗದಿಪಡಿಸುವುದು.

(ಎಫ್) ಹೊಸ ಸಂಸ್ಥೆಯ ಬಂಡವಾಳವನ್ನು ₹ 30,000 ಕ್ಕೆ ನಿಗದಿಪಡಿಸುವುದು. ಮುಂದುವರೆಯುವ ಪಾಲದಾರರು ಅವರ ಬಂಡವಾಳಗಳನ್ನು 3:2 ರ ಹೊಸ ಲಾಭ ಹಂಚಿಕೆಯ ಅನುಪಾತದಲ್ಲಿ ಇಡಲು ನಿರ್ಧರಿಸಿದರು.

ಸಂಸ್ಥೆಯ ಬಂಡವಾಳವನ್ನು ಖಾತೆಗಳಲ್ಲಿನ ಕೊನೆಯ ಶಿಲ್ಕುಗಳನ್ನು ಮತ್ತು ತಮ್ಮ ಬಂಡವಾಳಗಳನ್ನು ಹೊಸ ಲಾಭ ಹಂಚಿಕೆಯ ಅನುಪಾತದಲ್ಲಿ ಮಾಡಿದ ನಂತರ A ಮತ್ತು C ರವರು ಸಂಸ್ಥೆಗೆ ನೀಡಿದ ಮತ್ತು / ಅಥವಾ ಹಿಂಪಡೆದ ಮೊತ್ತಗಳನ್ನು ಕಂಡುಹಿಡಿಯಿರಿ.

**2. R. S. ಮತ್ತು M ರವರು ಪಾಲುದಾರಿಕೆಯಲ್ಲಿ ವ್ಯವಹಾರವನ್ನು ನಡೆಸುತ್ತಾ ಕ್ರಮವಾಗಿ 3:2:1 ರ ಅನುಪಾತದಲ್ಲಿ ಲಾಭವನ್ನು ಹಂಚಿಕೊಳ್ಳುತ್ತಿದ್ದಾರೆ**

**ಮಾರ್ಚ್ 31. 2015 ರಂದು ಸಂಸ್ಥೆಯ ಅಢಾವೆ ಪತ್ರಿಕೆಯು ಈ ಮುಂದಿನಂತಿದೆ.**

**ಮಾರ್ಚ್ 31. 2015 ರಂದಿನ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | | ಮೊತ್ತ (₹) | ಆಸ್ತಿಗಳು | ಮೊತ್ತ (₹) |
|---|---|---|---|---|
| ವಿವಿಧ ಸಾಹುಕಾರರು | | 16,000 | ಕಟ್ಟಡ | 23,000 |
| ಬಂಡವಾಳಗಳು : | | | ಸಾಲಗಾರರು | 7,000 |
| R | 20,000 | | ದಾಸ್ತಾನು | 12,000 |
| S | 7,500 | | ಹಕ್ಕು ಸ್ವಾಮ್ಯ | 8,000 |
| M | 12,500 | 40,000 | ಬ್ಯಾಂಕ | 6,000 |
| | | **56,000** | | **56,000** |

ಮೇಲೆ ತಿಳಿಸಿದ ಅಢಾವೆ ಪತ್ರಿಕೆಯ ದಿನಾಂಕದಂದು, ಕೆಳಗಿನ ಷರತ್ತುಗಳೊಂದಿಗೆ S ನು ನಿವೃತ್ತನಾಗುತ್ತಾನೆ.

(ಎ) ಕಟ್ಟಡವನ್ನು ₹ 8,800 ರಿಂದ ಹೆಚ್ಚಿಸುವುದು.

(ಬಿ) ಸಾಲಗಾರರ ಮೇಲೆ ಶೇ. 5 ಕ್ಕೆ ಕರಡು ಸಾಲ ಕಾಯ್ದಿರಿಸುವಿಕೆಯನ್ನು ಮಾಡುವುದು.

(ಸಿ) ಸಂಸ್ಥೆಯ ಕೀರ್ತಿ ಮೌಲ್ಯವನ್ನು ₹ 9,000 ಕ್ಕೆ ಮೌಲ್ಯೀಕರಿಸುವುದು.

(ಡಿ) S ನಿಗೆ ಕೂಡಲೇ ₹ 5,000 ನ್ನು ಪಾವತಿಸುವುದು ಮತ್ತು ಆತನ ಉಳಿದ ಬಾಕಿ ಮೊತ್ತವನ್ನು ವಾರ್ಷಿಕ ಶೇ. 6 ರ ಬಡ್ಡಿಯ ಸಾಲವೆಂದು ಪರಿಗಣಿಸುವುದು. ಪುನರ್‌ರಚಿತ ಸಂಸ್ಥೆಯ ಅಢಾವೆ ಪತ್ರಿಕೆಯನ್ನು ತಯಾರಿಸಿರಿ.

## 4.9. ಪಾಲುದಾರನ ನಿಧನ Death of a Partner

ಈ ಮುಂಚೆ ಹೇಳಿದ ಹಾಗೆ ಪಾಲುದಾರರ ನಿವೃತ್ತಿ ಮತ್ತು ಪಾಲುದಾರರ ನಿಧನ ಎರಡೂ ಸಂದರ್ಭದಲ್ಲಿ ಅನುಸರಿಸುವ ಕ್ರಮಾನುಗತಿ ಒಂದೇ ಆಗಿರುತ್ತದೆ. ಪಾಲುದಾರನು ನಿಧನ ಹೊಂದಿದಾಗ ಸಂದಾಯ ಮಾಡಬೇಕಾದ ಮೊತ್ತವನ್ನು ವಾರಸುದಾರರ ಖಾತೆಗೆ ವರ್ಗಾಯಿಸಿದಂತೆ ನಿವೃತ್ತಿಯಾದ ಪಾಲುದಾರನ ಖಾತೆಯನ್ನು ಚುಕ್ತಾ ಮಾಡಲಾಗುತ್ತದೆ. ಆದಾಗ್ಯೂ ಒಂದು ಪ್ರಮುಖ ವ್ಯತ್ಯಾಸವೆಂದರೆ ಪಾಲುದಾರನ ನಿವೃತ್ತಿಯಲ್ಲಿ ಸಾಮಾನ್ಯವಾಗಿ ಪಾಲುದಾರನು ವರ್ಷದ ಕೊನೆಯಲ್ಲಿ ನಿವೃತ್ತಿ ಹೊಂದುತ್ತಾನೆ. ಆದರೆ, ಪಾಲುದಾರನ ನಿಧನವು ಅನಿಶ್ಚಿತವಾಗಿದ್ದು ಯಾವುದೇ ಸಮಯದಲ್ಲಿ ಸಂಭವಿಸಬಹುದು. ಆದ್ದರಿಂದ, ನಿಧನ ಹೊಂದಿದ ಪಾಲುದಾರನಿಗೆ ಪಾವತಿಸಬೇಕಾದ ಮೊತ್ತವು ಹಿಂದಿನ ಅಢಾವೆ ಪತ್ರಿಕೆಯ ದಿನಾಂಕದಿಂದ ನಿಧನದ ದಿನಾಂಕದ ವರೆಗೆ ಅವನ ಪಾಲಿನ ಲಾಭ ಅಥವಾ ನಷ್ಟ, ಬಂಡವಾಳದ ಮೇಲಿನ ಬಡ್ಡಿ, ಹಿಂಪಡೆತಗಳ ಮೇಲಿನ ಬಡ್ಡಿ (ಇದ್ದರೆ) ಒಳಗೊಂಡಿರುತ್ತದೆ. ಮಧ್ಯದ ಅವಧಿಯಲ್ಲಿ (ಹಿಂದಿನ ಅಡಾವೆ ಪತ್ರಿಕೆ ದಿನಾಂಕದಿಂದ ನಿಧನದ ವರೆಗೆ) ಗಳಿಸಿದ ಲಾಭದ ಲೆಕ್ಕ ಮಾಡುವದು ಕಠಿಣದಾಯಕವಾಗುವುದು. ನಿಧನ ಹೊಂದಿದ ಪಾಲುದಾರನ ಪಾಲಿನ ಲಾಭವನ್ನು ಹಿಂದಿನ ವರ್ಷದ (ಅಥವಾ ಹಲವು ವರ್ಷಗಳ ಸರಾಸರಿ ಲಾಭದ) ಆಧಾರದ ಮೇಲೆ ಅಥವಾ ಮಾರಾಟದ ಆಧಾರದ ಮಾಲೆ ಲೆಕ್ಕ ಮಾಡಬಹುದಾಗಿದೆ.

ಉದಾಹರಣೆಗೆ : ಬಕುಲ್, ಚಂಪಕ ಮತ್ತು ದರ್ಶನ್ ಪಾಲುದಾರಿಕೆ ಸಂಸ್ಥೆಯ ಪಾಲುದಾರರಾಗಿದ್ದು, ಲಾಭ–ನಷ್ಟಗಳನ್ನು 5:4:1 ರ ಅನುಪಾತದಂತೆ ಹಂಚಿಕೊಳ್ಳುತ್ತಾರೆ. 31 ಮಾರ್ಚ್ 2015 ರಂದು ಕೊನೆಗೊಳ್ಳುವ ವರ್ಷದಲ್ಲಿ

ಸಂಸ್ಥೆಯ ಲಾಭವು ₹ 1,00,000 ಇದೆ. 30 ಜೂನ 2015 ರಂದು ಚಂಪಕನು ನಿಧನ ಹೊಂದಿದನು. ಎಪ್ರಿಲ್ 1 ರಿಂದ 30 ಜೂನ 2015 ರ ವರೆಗಿನ ಚಂಪಕನ ಪಾಲಿನ ಲಾಭವನ್ನು ಈ ಕೆಳಗಿನಂತೆ ಲೆಕ್ಕ ಮಾಡಬಹುದು.

31 ಮಾರ್ಚ್ 2015 ರಂದು ಕೊನೆಗೊಳ್ಳುವ ವರ್ಷದ ಲಾಭ = ₹ 1,00,000

ಚಂಪಕನ ಪಾಲಿನ ಲಾಭ : ಹಿಂದಿನ ವರ್ಷದ ಲಾಭ x ಪ್ರಮಾಣದ ಅವಧಿ x ನಿಧನ ಹೊಂದಿದ ಪಾಲುದಾರನ ಪಾಲು $= ₹\,1{,}00{,}000 \times \frac{3}{12} \times \frac{4}{10} = ₹\,10{,}000$

ರೋಜು ದಾಖಲೆ ಇಂತಿದೆ.

ಅಮಾನತ್ ಲಾಭ ಮತ್ತು ನಷ್ಟ ಖಾತೆ ಖರ್ಚು ₹ 10,000

ಚಂಪಕನ ಖಾತೆಗೆ ₹ 10,000

(ಚಂಪಕನ ಪಾಲಿನ ಲಾಭವನ್ನು ಅವನ ಬಂಡವಾಳ ಖಾತೆಗೆ ವರ್ಗಾಯಿಸಿದೆ.)

ಪರ್ಯಾಯವಾಗಿ, ಚಂಪಕನ ಪಾಲಿನ ಲಾಭವನ್ನು ಕಳೆದ ಮೂರು ವರ್ಷಗಳ ಸರಾಸರಿ ಲಾಭದ ಆಧಾರದ ಮೇಲೆ ಲೆಕ್ಕ ಮಾಡಬೇಕಾದಾಗ 3 ವರ್ಷಗಳ ಲಾಭಗಳು ಇಂತಿವೆ. 2012–13 ₹ 1,36,000, 2013–14 ₹ 1,54,000, ಮತ್ತು 2014–15 ₹ 1,00,000 ಎಪ್ರಿಲ್ 1, 2015 ರಿಂದ 30 ಜೂನ 2015 ರ ವರೆಗೆ ಚಂಪಕನ ಪಾಲಿನ ಲಾಭವನ್ನು ಕಳೆದ ಮೂರು ವರ್ಷಗಳ ಸರಾಸರಿ ಲಾಭದ ಆಧಾರದ ಮೇಲೆ ಈ ಕೆಳಗಿನಂತೆ ಲೆಕ್ಕ ಮಾಡಬಹುದು.

$$\text{ಸರಾಸರಿ ಲಾಭ} = \frac{\text{ಒಟ್ಟು ಲಾಭ}}{\text{ವರ್ಷಗಳ ಸಂಖ್ಯೆ}} = \frac{₹1{,}36{,}000 + ₹\ 1{,}54{,}000 + ₹1{,}00{,}000}{3}$$

$$= \frac{₹3{,}90{,}000}{3} = ₹\ 1{,}30{,}000$$

$$\text{ಚಂಪಕನ ಪಾಲಿನ ಲಾಭ} = ₹1{,}30{,}000 \times \frac{3\ \text{ತಿಂಗಳು}}{12\ \text{ತಿಂಗಳು}} \times \frac{4}{10} = ₹13{,}000$$

ಒಂದು ವೇಳೆ, ನಿಧನ ಹೊಂದಿದ ಪಾಲುದಾರನ ಲಾಭದ ಪಾಲನ್ನು ಮಾರಾಟದ ಮೊತ್ತದ ಆಧಾರದ ಮೇಲೆ ತೆಗೆಯಲು ಒಪ್ಪಂದವಾದಾಗ ಮತ್ತು 2014–15ನೇ ಸಾಲಿನ ಮಾರಾಟವು ₹ 8,00,000 ಮತ್ತು ಎಪ್ರಿಲ್ 1, 2015 ರಿಂದ ಜೂನ್ 30, 2015ರ ವರೆಗೆ ಮಾರಾಟ ₹ 1,50,000 ಎಂದು ನಿರ್ದಿಷ್ಟವಾಗಿ ಹೇಳಿದಾಗ ಎಪ್ರಿಲ್ 1, 2015 ರಿಂದ ಜೂನ್ 30, 2015ರ ವರೆಗಿನ ಚಂಪಕನ ಲಾಭದಲ್ಲಿನ ಪಾಲನ್ನು ಈ ರೀತಿ ಲೆಕ್ಕ ಮಾಡಬಹುದು.

ಒಂದು ವೇಳೆ ₹8,00,000 ಮಾರಾಟವಾದರೆ ಲಾಭ = ₹ 1,00,000.

ಒಂದು ವೇಳೆ ₹ 1 ಮಾರಾಟವಾದರೆ, ಲಾಭ $= \frac{₹\,1{,}00{,}000}{₹\,8{,}00{,}000}$

ಒಂದು ವೇಳೆ ₹ 1,50,000 ಮಾರಾಟ ಮಾಡಿದರೆ, ಲಾಭ $= \frac{₹\,1{,}00{,}000}{₹\,8{,}00{,}000} \times ₹\,1{,}50{,}000 = ₹\,18{,}700$

ಚಂಪಕನ ಲಾಭದ ಪಾಲು $= ₹\ 18{,}750 \times \frac{4}{10} = ₹\,7{,}500$

ಕಳೆದ ವರ್ಷದ ಅಢಾವೆ ಪತ್ರಿಕೆಯ ದಿನಾಂಕದಿಂದ ಪಾಲುದಾರನ ನಿಧನದ ವರೆಗಿನ ಅವಧಿಯ ನಿಧನಹೊಂದಿದ ಪಾಲುದಾರನ ಲಾಭದ ಪಾಲನ್ನು ರೋಜು ದಾಖಲೆಯಲ್ಲಿ ಈ ರೀತಿ ನಮೂದಿಸಬಹುದಾಗಿದೆ.

**ಲಾಭ ಮತ್ತು ನಷ್ಟ ಖಾತೆ**

| | | | |
|---|---|---|---|
| ಲಾಭ ಮತ್ತು ನಷ್ಟ (ಅಮಾನತ್) ಖಾತೆ - - - - - - - - | ಖರ್ಚು | xxx | — |
| ನಿಧನ ಹೊಂದಿದ ಪಾಲುದಾರನ ಖಾತೆಗೆ | | — | xxx |
| (ನಿಧನ ಹೊಂದಿದ ದಿನಾಂಕದ ವರೆಗಿನ ಲಾಭದಲ್ಲಿನ ಪಾಲು) | | | |

**ನಿದರ್ಶನ – 18**

ಅನಿಲ್, ಭಾನು, ಮತ್ತು ಚಂದು ಪಾಲುದಾರರು ಲಾಭ ನಷ್ಟಗಳನ್ನು 5 : 3 : 2 ರ ಅನುಪಾತದಲ್ಲಿ ಹಂಚಿಕೊಳ್ಳುತ್ತಾರೆ. ಅವರ ಅಢಾವೆ ಪತ್ರಿಕೆ ದಿ. 31 ಮಾರ್ಚ್ 2014 ರಂದು ಈ ಕೆಳಗಿನಂತಿದೆ.

**ಅನಿಲ್, ಭಾನು ಮತ್ತು ಚಂದು ಇವರ ಪುಸ್ತಕಗಳು**
**ದಿನಾಂಕ 31 ಮಾರ್ಚ್ 2014 ರ ಅಢಾವೆ ಪತ್ರಿಕೆ.**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|---|
| ಸಾಹುಕಾರರು | | 11,000 | ಕಟ್ಟಡಗಳು | 20,000 |
| ಕಾಯ್ದಿಟ್ಟ ನಿಧಿ | | 6,000 | ಯಂತ್ರೋಪಕರಣ | 30,000 |
| ಅನಿಲ್‌ನ ಬಂಡವಾಳ | 30,000 | | ದಾಸ್ತಾನು | 10,000 |
| ಭಾನುನ ಬಂಡವಾಳ | 25,000 | | ಸ್ವಾಮ್ಯ ಸನ್ನದು | 11,000 |
| ಚಂದುನ ಬಂಡವಾಳ | 15,000 | 70,000 | ಸಾಲಗಾರರು | 8,000 |
| | | | ನಗದು | 8,000 |
| | | **87,000** | | **87,000** |

ಅಕ್ಟೋಬರ 1, 2014 ರಂದು ಅನಿಲ್‌ನು ನಿಧನ ಹೊಂದಿದನು. ಅವನ ವಾರಸುದಾರರು ಮತ್ತು ಉಳಿದ ಪಾಲುದಾರರ ಮಧ್ಯ ಈ ರೀತಿ ಒಪ್ಪಂದಗಳಾಗಿವೆ.

(a) ಹಿಂದಿನ ನಾಲ್ಕು ವರ್ಷಗಳ ಸರಾಸರಿ ಲಾಭದ $2\frac{1}{2}$ ವರ್ಷಗಳ ಖರೀದಿಗೆ ಸಮ ಎಂದು ಕೀರ್ತಿಮೌಲ್ಯದ ಬೆಲೆಯನ್ನು ಪರಿಗಣಿಸಿದೆ. ಹಿಂದಿನ ನಾಲ್ಕು ವರ್ಷಗಳ ಲಾಭ ಇಂತಿವೆ: 2009–10 ₹ 13,000, 2010–11 ₹ 12,000, 2011–12 ₹ 20,000, 2012–13 ₹ 15,000.

(b) ಸ್ವಾಮ್ಯ ಸನ್ನದು ಹಕ್ಕಿನ ಮೌಲ್ಯ ₹ 8,000, ಯಂತ್ರೋಪಕರಣ ಮೌಲ್ಯ ₹ 28,000 ಮತ್ತು ಕಟ್ಟಡದ ಮೌಲ್ಯ ₹ 25,000 ಗಳಷ್ಟು ಮರು ಮೌಲ್ಯ ಮಾಡಲಾಗಿದೆ.

(c) 2013–14 ನೇ ಸಾಲಿನ ಸಂಭವನೀಯ ಲಾಭವು ಹಿಂದಿನ ವರ್ಷದ ಲಾಭಕ್ಕೆ ಸಮನಾಗಿರುವುದು.

(d) ಬಂಡವಾಳದ ಮೇಲಿನ ಬಡ್ಡಿ ವಾರ್ಷಿಕ ಶೇ. 10.

(e) ಅನಿಲ್‌ನಿಗೆ ಕೊಡಬೇಕಾದ ಹಣದಲ್ಲಿ ಅರ್ಧ ಮೊತ್ತವನ್ನು ಈ ಕೂಡಲೇ ಪಾವತಿಸಬೇಕು.

ಅನಿಲ್‌ನ ಬಂಡವಾಳ ಖಾತೆ ಹಾಗೂ ಅನಿಲ್‌ನ ವಾರಸುದಾರನ ಖಾತೆಯನ್ನು ಅಕ್ಟೋಬರ್ 1, 2014 ರಂದು ತಯಾರಿಸಿರಿ.

**ಪರಿಹಾರ:**

**ಅನಿಲ್, ಭಾನು ಮತ್ತು ಚಂದುರವರ ಪುಸ್ತಕಗಳು**

**ಖರ್ಚು** **ಅನಿಲ್‌ನ ಬಂಡವಾಳ ಖಾತೆ** **ಜಮೆ**

| ದಿನಾಂಕ | ವಿವರಗಳು | ರೊ. ಪಾ. | ಮೊತ್ತ ₹ | ದಿನಾಂಕ | ವಿವರಗಳು | ರೊ. ಪಾ. | ಮೊತ್ತ ₹ |
|---|---|---|---|---|---|---|---|
| 2013 ಅಕ್ಟೋಬರ್ 1 | ಅನಿಲ್‌ನ ವಾರಸುದಾರರು | | 57,000 | 2013 ಎಪ್ರಿಲ್ 1 | ಹಿಂದಿನಿಂದ ಬಂದಶಿಲ್ಕು | | 30,000 |
| | | | | ಅಕ್ಟೋಬರ್ 1 | ಕಾಯ್ದಿಟ್ಟ ನಿಧಿ | | 3,000 |
| | | | | | ಭಾನುವಿನ ಬಂಡವಾಳ | | 11,250 |
| | | | | ” | ಚಂದ್ರುನ ಬಂಡವಾಳ | | 7,500 |
| | | | | ” | ಲಾಭ ಮತ್ತು ನಷ್ಟ (ಅಮಾನತು) | | 3,750 |
| | | | | ” | ಬಂಡವಾಳ ಮೇಲಿನ ಬಡ್ಡಿ | | 1,500 |
| | | | 57,000 | | | | 57,000 |

**ಖರ್ಚು** **ಅನಿಲ್‌ನ ವಾರಸುದಾರರ ಖಾತೆ** **ಜಮೆ**

| ದಿನಾಂಕ | ವಿವರಗಳು | ರೊ. ಪಾ. | ಮೊತ್ತ ₹ | ದಿನಾಂಕ | ವಿವರಗಳು | ರೊ. ಪಾ. | ಮೊತ್ತ ₹ |
|---|---|---|---|---|---|---|---|
| 2013 | ಬ್ಯಾಂಕು | | 28,500 | 2013 | ಅನಿಲ್‌ನ ಬಂಡವಾಳ | | 57,000 |
| ಅಕ್ಟೋಬರ್ 1 | ಮುಂದುವರೆದ ಶಿಲ್ಕು | | 28,500 | ಅಕ್ಟೋಬರ್ 1 | | | |
| | | | **57,000** | | | | **57,000** |

**ಲೆಕ್ಕಾಚಾರದ ಟಿಪ್ಪಣಿಗಳು:**

(1)

**ಖರ್ಚು** **ಪುನರ್ ಮೌಲ್ಯಮಾಪನ ಖಾತೆ** **ಜಮೆ**

| ದಿನಾಂಕ | ವಿವರಗಳು | ರೊ ಪಾ | ಮೊತ್ತ ₹ | ದಿನಾಂಕ | ವಿವರಗಳು | ರೊ ಪಾ | ಮೊತ್ತ ₹ |
|---|---|---|---|---|---|---|---|
| | ಸ್ವಾಮ್ಯ ಸನ್ನದು | | 3,000 | | ಕಟ್ಟಡ | | 5,000 |
| | ಯಂತ್ರೋಪಕರಣ | | 2,000 | | | | |
| | | | **5,000** | | | | **5,000** |

(2) ಕೀರ್ತಿ ಮೌಲ್ಯ = $2\frac{1}{2}$ ವರ್ಷಗಳ ಖರೀದಿ × ಸರಾಸರಿ ಲಾಭ

$$\text{ಸರಾಸರಿ ಲಾಭ} = \frac{₹13,000 + ₹12,000 + ₹20,000 + ₹15,000}{4} = \frac{₹\ 60,000}{4} = ₹\ 15,000$$

ಕೀರ್ತಿಮೌಲ್ಯ $= \frac{5}{2} \times$ ₹ 15,000 = ₹37,500

ಅನಿಲ್‌ನ ಕೀರ್ತಿಮೌಲ್ಯದ ಪಾಲು $= \frac{5}{10} \times$ ₹ 37,500 = ₹ 18,750

(3) ಹಿಂದಿನ ವರ್ಷದ ಆಢಾವೆ ಪತ್ರಿಕೆ ದಿನಾಂಕದಿಂದ ನಿಧನದ ದಿನಾಂಕದ ವರೆಗಿನ ಲಾಭ

(ಎಪ್ರೀಲ್ 1, 2014 ರಿಂದ ಅಕ್ಟೋಬರ್ 1, 2014ರವರೆಗೆ) = 6 ತಿಂಗಳುಗಳು.

6 ತಿಂಗಳುಗಳ ಲಾಭ = ₹ 15,000 $\times \frac{6}{12}$ = ₹ 7,500

ಲಾಭದಲ್ಲಿ ಅನಿಲ್‌ನ ಪಾಲು = ₹ 7,500 $\times \frac{5}{10}$ = ₹ 3,750

(4) ಬಂಡವಾಳದ ಮೇಲಿನ ಬಡ್ಡಿ

(ಎಪ್ರೀಲ್ 1, 2014 ರಿಂದ ಅಕ್ಟೋಬರ್ 1, 2014 ರ ವರೆಗೆ)

= ₹30,000 $\times \frac{10}{100} \times \frac{6}{12}$ = ₹ 1,500

**ನಿದರ್ಶನ – 19**

ಮೋಹಿತ್, ಸೋಹನ್ ಮತ್ತು ರಾಹುಲ್ ಪಾಲುದಾರರಾಗಿರುವ ಸಂಸ್ಥೆಯ ಲಾಭ–ನಷ್ಟವನ್ನು 2:2:1 ರ ಪ್ರಮಾಣದಲ್ಲಿ ಹಂಚಿಕೊಳ್ಳುತ್ತಾರೆ. ಅವರ ಆಢಾವೆ ಪತ್ರಿಕೆಯು ದಿನಾಂಕ : 31 ಮಾರ್ಚ್ 2014 ರಂದು ಈ ಕೆಳಗಿನಂತಿದೆ.

**ಮೋಹಿತ್, ಸೋಹನ್ ಮತ್ತು ರಾಹುಲ್ ಇವರ ಪುಸ್ತಕಗಳು**

**ದಿನಾಂಕ 31 ಮಾರ್ಚ್ 2014 ರಂದು ಆಢಾವೆ ಪತ್ರಿಕೆ.**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|---|
| ಸಾಹುಕಾರರು | | 40,000 | ಕೀರ್ತಿಮೌಲ್ಯ | 30,000 |
| ಕಾಯ್ದಿಟ್ಟ ನಿಧಿ | | 25,000 | ಸ್ಥಿರ ಆಸ್ತಿಗಳು | 60,000 |
| ಬಂಡವಾಳಗಳು: | | | ದಾಸ್ತಾನು | 10,000 |
| ಮೋಹಿತ್ | 30,000 | | ಒಟ್ಟು ಸಾಲಗಾರರು | 20,000 |
| ಸೋಹನ್ | 25,000 | | ಬ್ಯಾಂಕಿನಲ್ಲಿ ನಗದು | 15,000 |
| ರಾಹುಲ್ | 15,000 | 70,000 | | |
| | | **1,35,000** | | **1,35,000** |

ಜೂನ್ 15, 2014 ರಂದು ಸೋಹನ್ ನಿಧನ ಹೊಂದಿದನು. ಪಾಲುದಾರಿಕಾ ಕರಾರು ಪತ್ರದ ಪ್ರಕಾರ ಅವನ ವಾರಸುದಾರರು ಈ ಕೆಳಗಿನವುಗಳನ್ನು ಪಡೆಯಲು ಅರ್ಹರಿದ್ದಾರೆ.

(a) ಬಂಡವಾಳ ಖಾತೆಯಲ್ಲಿನ ಶಿಲ್ಕು.

(b) ಕಳೆದ ನಾಲ್ಕು ವರ್ಷಗಳ ಸರಾಸರಿ ಲಾಭದ ಮೂರು ಪಟ್ಟಿನಷ್ಟು ಕೀರ್ತಿಮೌಲ್ಯದಲ್ಲಿನ ಅವನ ಪಾಲು.

(c) ಕಳೆದ ನಾಲ್ಕು ವರ್ಷಗಳ ಸರಾಸರಿ ಲಾಭದ ಆಧಾರದ ಮೇಲೆ ನಿಧನ ಹೊಂದಿದ ದಿನಾಂಕದ ವರೆಗಿನ ಲಾಭದಲ್ಲಿನ ಪಾಲು.

(d) ಬಂಡವಾಳದ ಮೇಲಿನ ಬಡ್ಡಿ ವಾರ್ಷಿಕ ಶೇ 12.

ಮಾರ್ಚ್ 31, 2010, 2011, 2012, 2013 ನೇ ಸಾಲಿನ ಲಾಭಗಳು ಕ್ರಮವಾಗಿ ₹ 15,000, ₹ 17,000, ₹ 19,000, ಮತ್ತು ₹ 13,000 ಇವೆ.

ಸಂಸ್ಥೆಯು ₹ 1,25,000 ಸಂಯುಕ್ತ ಜೀವ ವಿಮಾ ಪಾಲಸಿಯನ್ನು ತಗೆದುಕೊಂಡಿದ್ದು, ಅದರ ವಾರ್ಷಿಕ ಕಂತಿನ ಹಣವನ್ನು ಲಾಭ–ಹಾನಿ ಖಾತೆಗೆ ಪ್ರತಿ ವರ್ಷ ಖರ್ಚು ಹಾಕುತ್ತದೆ.

ಸೋಹನ್‌ನ ವಾರಸುದಾರರಿಗೆ ಕೊಡಬೇಕಾದ ಬಾಕಿ ಮೊತ್ತವನ್ನು ನೀಡಬೇಕಾಗಿದೆ. ಮೊಹಿತ್ ಹಾಗೂ ರಾಹುಲ್ ಮುಂದುವರೆಯುವ ಪಾಲುದಾರರು ಸೋಹನ್‌ನ ಪಾಲನ್ನು ಸಮನಾಗಿ ಹಂಚಿಕೊಳ್ಳುತ್ತಾರೆ.

ಸೋಹನ್‌ನ ವಾರಸುದಾರರಿಗೆ ಕೊಡಬೇಕಾದ ಮೊತ್ತವನ್ನು ಕಂಡು ಹಿಡಿಯಿರಿ.

**ಪರಿಹಾರ:**

**ಮೋಹಿತ್, ಸೋಹನ್ ಮತ್ತು ರಾಹುಲ್ ಇವರ ಪುಸ್ತಕಗಳು.**

**ಖರ್ಚು** **ಸೋಹನ್‌ನ ಬಂಡವಾಳ ಖಾತೆ.** **ಜಮೆ**

| ದಿನಾಂಕ | ವಿವರಗಳು | ರೊ. ಪಾ. | ಮೊತ್ತ ₹ | ದಿನಾಂಕ | ವಿವರಗಳು | ರೊ. ಪಾ. | ಮೊತ್ತ ₹ |
|---|---|---|---|---|---|---|---|
| 2015 | ಕೀರ್ತಿಮೌಲ್ಯ | | 12,000 | 2014 | ಹಿಂದಿನಿಂದ ಬಂದ ಶಿಲ್ಕು | | 25,000 |
| ಜೂನ್ 15 | ಸೋಹನನ ವಾರಸುದಾರರು | | 94,158 | ಎಪ್ರಿಲ್ 1 | | | |
| | | | | ಜೂನ 15 | ಕಾಯ್ದಿಟ್ಟ ನಿಧಿ | | 10,000 |
| | | | | ” | ಮೋಹಿತನ ಬಂಡವಾಳ | | 9,600 |
| | | | | ” | ರಾಹುಲ್‌ನ ಬಂಡವಾಳ | | 9,600 |
| | | | | ” | ಲಾಭ–ನಷ್ಟ (ಅನುಮಾನಾಸ್ಪದ) | | 1,333 |
| | | | | ” | ಸಂಯುಕ್ತ ಜೀವ ವಿಮಾ ಪಾಲಿಸಿ | | 50,000 |
| | | | | ” | ಬಂಡವಾಳದ ಮೇಲಿನ ಬಡ್ಡಿ | | 625 |
| | | | **1,06,158** | | | | **1,06,158** |

**ಲೆಕ್ಕಾಚಾರದ ಟಿಪ್ಪಣಿಗಳು :**

1. ಸೋಹನ್‌ನ ಪಾಲಿನ ಕೀರ್ತಿಮೌಲ್ಯ = ಸಂಸ್ಥೆಯ ಕೀರ್ತಿಮೌಲ್ಯ $\times \frac{2}{5}$

$$= ₹\,48{,}000 \times \frac{2}{5} = ₹\,19{,}200$$

ಸಂಸ್ಥೆಯ ಕೀರ್ತಿಮೌಲ್ಯ = 3 × ಸರಾಸರಿ ಲಾಭ

$$= 3 \times \frac{₹\,64{,}000}{4} = ₹\,48{,}000$$

2. ಲಾಭ – ನಷ್ಟ (ಅಮಾನತ್)
(ಕಳೆದ ನಾಲ್ಕು ವರ್ಷದ ಸರಾಸರಿ ಲಾಭದ ಆಧಾರದ ಮೇಲೆ ಕೊನೆಯ ಆಢಾವೆ ಪತ್ರಿಕೆ ದಿನದಿಂದ ನಿಧನ ಹೊಂದಿದ ದಿನಾಂಕದ ವರೆಗಿನ $2\frac{1}{2}$ ತಿಂಗಳುಗಳಳ ಲಾಭದಲ್ಲಿನ ಅವನ ಪಾಲು).

$$= \frac{₹\,64{,}000}{4} \times \frac{2}{5} \times \frac{2.5}{12} = ₹\,1{,}333$$

3. ಸಂಯುಕ್ತ ವಿಮಾ ಪಾಲಸಿ = ₹ 1,25,000

ಸೋಹನ್‌ನ ಪಾಲು $= \frac{2}{5} \times ₹\,1{,}25{,}000 = ₹\,50{,}000$

4. ಬಂಡವಾಳದ ಮೇಲಿನ ಬಡ್ಡಿ = ₹ 25,000 $= \frac{12}{100} \times \frac{2.5}{12} = ₹\,625$

**ನೀವೇ ಮಾಡಿ Do it Yourself**

**ಪಿಂಕಿ, ಕುರೇಶಿ ಮತ್ತು ರಾಕೇಶ ರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ.**

**31–12–2015 ರಂದು ಅಡಾವೆ ಪತ್ರಿಕೆ**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|---|
| ಒಟ್ಟು ಸಾಹುಕಾರರು | | 25,000 | ಕಟ್ಟಡಗಳು | 26,000 |
| ಕಾಯ್ದಿಟ್ಟ ನಿಧಿ | | 20,000 | ಹೂಡಿಕೆಗಳು | 15,000 |
| ಬಂಡವಾಳಗಳು: | | | ಸಾಲಗಾರರು | 15,000 |
| ಪಿಂಕಿ | 15,000 | | ಬರತಕ್ಕ ಹುಂಡಿಗಳು | 6,000 |
| ಕುರೇಶಿ | 10,000 | | ದಾಸ್ತಾನು | 12,000 |
| ರಾಕೇಶ | 10,000 | 35,000 | ನಗದು | 6,000 |
| | | **80,000** | | **80,000** |

ಪಾಲುದಾರಿಕೆ ಕರಾರಿನ ಪ್ರಕಾರ 2:1:1 ರ ಅನುಪಾತದಲ್ಲಿ ಲಾಭವನ್ನು ಹಂಚಿಕೊಳ್ಳುತ್ತಾರೆ ಮತ್ತು ಪಾಲುದಾರನು ನಿಧನ ಹೊಂದಿದಾಗ ಅವನ ವಾರಸುದಾರರಿಗೆ ಕೊಡಬೇಕಾದವುಗಳು ಇಂತಿವೆ.

a) ಹಿಂದಿನ ಅಢಾವೆ ಪತ್ರಿಕೆಯಲ್ಲಿನ ಅವನ ಬಂಡವಾಳ ಖಾತೆಯಲ್ಲಿನ ಜಮೆ ಹಣ.

b) ಹಿಂದಿನ ಅಢಾವೆ ಪತ್ರಿಕೆಯಲ್ಲಿನ ಕಾಯ್ದಿಟ್ಟ ನಿಧಿಯಲ್ಲಿನ ಅವನ ಪಾಲು.

c) ಕಳೆದ ಮೂರು ಪೂರ್ಣಗೊಂಡ ವರ್ಷಗಳ ಸರಾಸರಿ ಲಾಭದಲ್ಲಿ ಅವನ ನಿಧನ ಹೊಂದಿದ ದಿನಾಂಕದ ವರೆಗಿನ ಲಾಭದಲ್ಲಿನ ಅವನ ಪಾಲು, ಅಧಿಕ ಶೇ. 10.

d) ಅವನ ಪಾಲಿನ ಕೀರ್ತಿಮೌಲ್ಯ. ಕಳೆದ ಮೂರು ವರ್ಷಗಳ ಒಟ್ಟು ಲಾಭದಷ್ಟು ಸಂಸ್ಥೆಯ ಕೀರ್ತಿಮೌಲ್ಯವಿದೆ.

ಕಳೆದ 3 ವರ್ಷಗಳ ನಿವ್ವಳ ಲಾಭಗಳು ಇಂತಿವೆ.

2013 – ₹ 16,000, 2014 – ₹ 16,000, 2015 – ₹ 15,400

ರಾಕೇಶನು ಎಪ್ರೀಲ್ 1, 2015 ರಂದು ನಿಧನ ಹೊಂದಿದನು. ನಿಧನ ಹೊಂದಿದ ದಿನಾಂಕದ ವರೆಗೆ ₹5,000 ಹಣವನ್ನು ಸ್ವಂತಕ್ಕಾಗಿ ಪಡೆದಿದ್ದಾನೆ. ಹೂಡಿಕೆಗಳನ್ನು ಮುಖ ಬೆಲೆಗೆ ಮಾರಲಾಗಿದೆ ಮತ್ತು ರಾಕೇಶನ ವಾರಸುದಾರರಿಗೆ ಕೊಡಬೇಕಾದ ಹಣವನ್ನು ಪಾವತಿಸಲಾಗಿದೆ.

ರಾಕೇಶನ ಬಂಡವಾಳ ಖಾತೆ ಮತ್ತು ಅವನ ವಾರಸುದಾರರ ಖಾತೆಯನ್ನು ತಯಾರಿಸಿರಿ.

**ಈ ಅಧ್ಯಾಯದಲ್ಲಿ ಪರಿಚಯಿಸಲಾದ ಪದಗಳು**

- ಪಾಲುದಾರನ ನಿವೃತ್ತಿ
- ಪಾಲುದಾರನ ನಿಧನ
- ಗಳಿಕೆ ಪ್ರಮಾಣ
- ನಿಧನ ಹೊಂದಿದ ಪಾಲುದಾರನ ವಾರಸುದಾರ
- ವಾರಸುದಾರನ ಖಾತೆ

## ಸಾರಾಂಶ SUMMARY

1. **ಹೊಸ ಲಾಭ ನಷ್ಟದ ಅನುಪಾತ:** ಯಾವುದೇ ಒಬ್ಬ ಪಾಲುದಾರನು ನಿವೃತ್ತಿ ಅಥವಾ ನಿಧನವಾದಾಗ ಉಳಿದ ಪಾಲುದಾರರು ಭವಿಷ್ಯತ್ತಿನಲ್ಲಿ ಹಂಚಿಕೊಳ್ಳುವ ಲಾಭ–ನಷ್ಟದ ಅನುಪಾತವನ್ನು ಹೊಸ ಲಾಭ–ನಷ್ಟದ ಅನುಪಾತ ಎನುತ್ತಾರೆ.

   ಹೊಸ ಪಾಲು = ಹಳೆಯ ಪಾಲು + ಹೊರಹೋಗುವ ಪಾಲುದಾರನಿಂದ ಪಡೆದ ಪಾಲು

2. **ಗಳಿಕೆಯ ಅನುಪಾತ:** ನಿವೃತ್ತಿಯಾಗುತ್ತಿರುವ ಪಾಲುದಾರನ ನಿವೃತ್ತಿ / ನಿಧನದ ಸಂದರ್ಭದಲ್ಲಿ ಉಳಿದ ಪಾಲುದಾರರು ಅವನ ಲಾಭದಿಂದ ಪಡೆಯುವ ಗಳಿಕೆ ಲಾಭದ ಪ್ರಮಾಣವನ್ನು ಗಳಿಕೆಯ ಅನುಪಾತ ಎನ್ನುವರು.

3. **ಕೀರ್ತಿಮೌಲ್ಯದ ಪರಿಗಣನೆ:** ನಿವೃತ್ತಿ ಪಾಲುದಾರನು ನಿವೃತ್ತಿ ಸಂದರ್ಭದಲ್ಲಿ ತನ್ನ ಪಾಲಿನ ಕೀರ್ತಿಮೌಲ್ಯದ ಮೊತ್ತವನ್ನು ಪಡೆಯುತ್ತಾನೆ. ಉಳಿದ ಪಾಲುದಾರರು ಅವರ ಗಳಿಕೆ ಅನುಪಾತದಲ್ಲಿ ನಿವೃತ್ತ ಪಾಲುದಾರನಿಗೆ ತುಂಬಿ ಕೊಡಬೇಕಾದುದು ಮೂಲ ನಿಯಮವಾಗಿದೆ.

   ಒಂದು ವೇಳೆ ಕೀರ್ತಿಮೌಲ್ಯ ಸಂಸ್ಥೆಯ ಪುಸ್ತಕದಲ್ಲಿದ್ದರೆ ಅದನ್ನು ಎಲ್ಲ ಪಾಲುದಾರರ ಖಾತೆಗೆ ಹಳೆಯ ಲಾಭ–ನಷ್ಟದ ಪ್ರಮಾಣದಲ್ಲಿ ಖರ್ಚು ಹಾಕುವುದರ ಮೂಲಕ ತೆಗೆದು ಹಾಕಲಾಗುವುದು.

4. **ಆಸ್ತಿಗಳ ಮತ್ತು ಹೊಣೆಗಾರಿಕೆಗಳ ಪುನರ್‌ಮೌಲ್ಯಮಾಪನ:** ಪಾಲುದಾರನ ನಿವೃತ್ತಿ/ನಿಧನದ ಸಂದರ್ಭದಲ್ಲಿ, ಸಂಸ್ಥೆಯ ಕೆಲ ಆಸ್ತಿಗಳು ಚಾಲ್ತಿ ಬೆಲೆಯನ್ನು ತೋರಿಸುವುದಿಲ್ಲ. ಅದೇ ರೀತಿಯಲ್ಲಿ ಕೆಲ ಹೊಣೆಗಾರಿಕೆಗಳು ಚಾಲ್ತಿ ಕೊಡತಕ್ಕ ಮೊತ್ತವನ್ನು ತೋರಿಸುವುದಿಲ್ಲ.

ಅಲ್ಲದೆ, ದಾಖಲಾಗದ ಆಸ್ತಿಗಳು ಮತ್ತು ಹೊಣೆಗಾರಿಕೆಗಳು ಇದ್ದಲ್ಲಿ ಅವುಗಳನ್ನು ದಾಖಲು ಮಾಡುವುದಕ್ಕೆ ಪುನರ್ ಮೌಲ್ಯಮಾಪನ ಖಾತೆಯನ್ನು ತಯಾರಿಸುತ್ತಾರೆ.

5. **ಸಂಚಿತ ಲಾಭ ಅಥವಾ ನಷ್ಟಗಳು:** ಮೀಸಲುಗಳು ಮತ್ತು ಹಂಚಿಕೆಯಾಗದ ಲಾಭ–ನಷ್ಟಗಳ ಮೊತ್ತವನ್ನು ಎಲ್ಲಾ ಪಾಲುದಾರರ ಬಂಡವಾಳ ಖಾತೆಗಳಿಗೆ ವರ್ಗಾಯಿಸಬೇಕು.

6. **ನಿವೃತ್ತಿ / ನಿಧನರಾದ** ಪಾಲುದಾರರಿಗೆ ಕೊಡಬೇಕಾದ ಮೊತ್ತವನ್ನು ಒಂದೇ ಕಂತಿನಲ್ಲಿ ಅಥವಾ ಬಡ್ಡಿಯ ಜೊತೆಗೆ ಹಲವಾರು ಕಂತುಗಳಲ್ಲಿ ಪಾವತಿಸಬಹುದಾಗಿದೆ.

7. **ಪಾಲುದಾರರ ನಿವೃತ್ತಿ** / ನಿಧನದ ನಂತರ ಉಳಿದ ಪಾಲುದಾರರು ತಮ್ಮ ಬಂಡವಾಳವನ್ನು ಲಾಭ–ನಷ್ಟದ ಪ್ರಮಾಣದಂತೆ ಹೊಂದಾಣಿಕೆ ಮಾಡಿಕೊಳ್ಳಲು ನಿರ್ಧರಿಸಬಹುದಾಗಿದೆ.

## ಅಭ್ಯಾಸಕ್ಕಾಗಿ ಪ್ರಶ್ನೆಗಳು QUESTIONS FOR PRACTICE

### ಕಿರು ಉತ್ತರದ ಪ್ರಶ್ನೆಗಳು: (Short Answer Questions)

1. ಪಾಲುದಾರರು ನಿವೃತ್ತಿಯಾಗುವ ವಿವಿಧ ಸಂದರ್ಭಗಳಾವವು ?
2. ಪಾಲುದಾರರ ನಿವೃತ್ತಿಗೆ ಸಂಬಂಧಿಸಿದ ವಿವಿಧ ಹೊಂದಾಣಿಕೆಗಳನ್ನು ಬರೆಯಿರಿ.
3. ತ್ಯಾಗದ ಪ್ರಮಾಣ ಮತ್ತು ಗಳಿಕೆಯ ಪ್ರಮಾಣದಲ್ಲಿನ ವ್ಯತ್ಯಾಸಗಳನ್ನು ಬರೆಯಿರಿ.
4. ಪಾಲುದಾರರ ನಿವೃತ್ತಿ ಮತ್ತು ನಿಧನದ ವೇಳೆಯಲ್ಲಿ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ಪುನರ್ ಮೌಲ್ಯಮಾಪನವನ್ನು ಏಕೆ ಮಾಡುತ್ತಾರೆ ?
5. ಕೀರ್ತಿಮೌಲ್ಯದ ಪಾಲನ್ನು ನಿವೃತ್ತಿ/ನಿಧನ ಹೊಂದಿದ ಪಾಲುದಾರನು ಏಕೆ ಪಡೆಯುತ್ತಾನೆ ?

### ದೀರ್ಘ ಉತ್ತರದ ಪ್ರಶ್ನೆಗಳು (Long Answer Questions)

1. ನಿವೃತ್ತಿ ಹೊಂದಿದ ಪಾಲುದಾರರಿಗೆ ನೀಡುವ ಬಾಕಿ ಮೊತ್ತದ ವಿವಿಧ ವಿಧಾನಗಳನ್ನು ವಿವರಿಸಿರಿ.
2. ನಿಧನ ಹೊಂದಿದ ಪಾಲುದಾರನಿಗೆ ಕೊಡಬೇಕಾದ ಮೊತ್ತವನ್ನು ಹೇಗೆ ಕಂಡು ಹಿಡಿಯುವಿರಿ ?
3. ಪಾಲುದಾರನ ನಿವೃತ್ತಿ ಅಥವಾ ನಿಧನದ ಸಂದರ್ಭದಲ್ಲಿ ಕೀರ್ತಿಮೌಲ್ಯವನ್ನು ಯಾವ ರೀತಿ ಪರಿಗಣಿಸುವಿರಿ ?
4. ನಿಧನ ಹೊಂದಿದ ಪಾಲುದಾರನು ಗಳಿಸಿದ ಲಾಭ–ನಷ್ಟದ ಲೆಕ್ಕ ಮಾಡುವ ವಿವಿಧ ಪದ್ಧತಿಗಳನ್ನು ಚರ್ಚಿಸಿರಿ.

### ಸಂಖ್ಯಾತ್ಮಕ ಪ್ರಶ್ನೆಗಳು (Numerical Questions)

1. ಅಪರ್ಣಾ, ಮನಿಷಾ ಮತ್ತು ಸೋನಿಯಾ ಪಾಲುದಾರರು 3:2:1 ರ ಪ್ರಮಾಣದಂತೆ ಲಾಭ–ನಷ್ಟಗಳನ್ನು ಹಂಚಿಕೊಳ್ಳುತ್ತಾರೆ. ಮನಿಷಾ ನಿವೃತ್ತಿಯಾಗುತ್ತಾರೆ. ಸಂಸ್ಥೆಯ ಕೀರ್ತಿಮೌಲ್ಯವನ್ನು ₹ 1,80,000 ಗೆ ನಿಗದಿಪಡಿಸಿದೆ. ಭವಿಷತ್ತಿನಲ್ಲಿ ಅಪರ್ಣಾ ಮತ್ತು ಸೋನಿಯಾ ತಮ್ಮ ಲಾಭವನ್ನು 3:2 ಅನುಪಾತದಂತೆ ಹಂಚಿಕೊಳ್ಳಲು ನಿರ್ಧರಿಸಿದ್ದಾರೆ. ಅವಶ್ಯವಿರುವ ರೋಜು ದಾಖಲಿಸಿರಿ.

   (ಉತ್ತರ. ಅಪರ್ಣಾ ಬಂಡವಾಳ ಖಾತೆಗೆ ಖರ್ಚು ₹ 18,000, ಸೋನಿಯಾ ಬಂಡವಾಳ ಖಾತೆಗೆ ಖರ್ಚು ₹ 42000, ಮನಿಷಾ ಬಂಡವಾಳ ಖಾತೆಗೆ ಖರ್ಚು ₹ 60,000.)

2. ಸಂಗೀತ, ಸರೋಜ ಮತ್ತು ಶಾಂತಿ ಪಾಲುದಾರರು 2:3:5 ಅನುಪಾತದಲ್ಲಿ ಲಾಭ–ನಷ್ಟ ಹಂಚಿಕೊಳ್ಳುತ್ತಾರೆ. ಸಂಸ್ಥೆಯ ಪುಸ್ತಕದಲ್ಲಿರುವ ಕೀರ್ತಿಮೌಲ್ಯದ ಬೆಲೆ ₹ 60,000. ಸಂಗೀತ ನಿವೃತ್ತಿಯಾದರು ಮತ್ತು ಮೌಲ್ಯ ಮಾಡಿದ ಕೀರ್ತಿಮೌಲ್ಯ ₹ 90,000. ಭವಿಷತ್ತಿನಲ್ಲಿ ಸರೋಜ ಮತ್ತು ಶಾಂತಿ ತಮ್ಮ ಲಾಭವನ್ನು ಸಮಾನ ಪ್ರಮಾಣದಲ್ಲಿ ಹಂಚಿಕೊಳ್ಳಲು ನಿರ್ಧರಿಸಿದ್ದಾರೆ. ಅವಶ್ಯವಿರುವ ರೋಜು ದಾಖಲಿಸಿರಿ.

3. ಹಿಮಾನ್ಸು, ಗಗನ್ ಮತ್ತು ನಮನ್ ಪಾಲುದಾರರು 3:2:1 ರ ಅನುಪಾತದಲ್ಲಿ ಲಾಭ ಹಂಚಿಕೊಳ್ಳುತ್ತಾರೆ. ಮಾರ್ಚ್ 31, 2007 ರಂದು ನಮನ್ ನಿವೃತ್ತನಾಗುತ್ತಾನೆ. ಅದೇ ದಿನಾಂಕದಂದು ಸಂಸ್ಥೆಯ ಆಸ್ತಿಗಳು ಮತ್ತು ಹೊಣೆಗಾರಿಕೆಗಳು ಈ ಕೆಳಗಿನಂತಿವೆ:

   ನಗದು ₹ 10,000, ಕಟ್ಟಡ ₹ 1,00,000, ಸ್ಥಾವರ ಮತ್ತು ಯಂತ್ರೋಪಕರಣಗಳು ₹ 40,000, ದಾಸ್ತಾನು ₹ 20,000, ಸಾಲಗಾರರು ₹ 20,000 ಮತ್ತು ಹೂಡಿಕೆಗಳು ₹ 30,000. ನಮನ್ ನಿವೃತ್ತಿಯಾದಾಗ ಪಾಲುಗಾರರು ಈ ಕೆಳಗಿನವುಗಳಿಗೆ ಒಪ್ಪಿರುತ್ತಾರೆ.

   (i) ಕಟ್ಟಡ ಮೌಲ್ಯ ಶೇ. 20 ರಷ್ಟು ಹೆಚ್ಚಿಸುವದು.

   (ii) ಸ್ಥಾವರ ಮತ್ತು ಯಂತ್ರೋಪಕರಣವನ್ನು ಶೇ 10 ರಷ್ಟು ಸವಕಳಿ ಮಾಡುವದು.

   (iii) ಸಾಲಗಾರರ ಮೇಲೆ ಶೇ. 5 ರಂತೆ ಕರಡು ಮತ್ತು ಸಂಶಯಾಸ್ಪದ ಸಾಲಕ್ಕಾಗಿ ತಗೆದಿರಿಸಿರಿ.

   (iv) ದಾಸ್ತಾನು ₹ 18,000 ಮತ್ತು ಹೂಡಿಕೆಯನ್ನು ₹ 35,000 ಕ್ಕೆ ಮರು ಮೌಲ್ಯಮಾಪನ ಮಾಡಲಾಗಿದೆ. ಅವಶ್ಯವಿರುವ ರೋಜು ದಾಖಲಿಸಿರಿ ಮತ್ತು ಮರು ಮೌಲ್ಯಮಾಪನ ಖಾತೆಯನ್ನು ತಯಾರಿಸಿರಿ.

4. ನರೇಶ, ರಾಜಕುಮಾರ ಮತ್ತು ಬಿಸ್ವಜೀತ ಪಾಲುದಾರರು ಸಮಾನವಾಗಿ ಲಾಭ–ನಷ್ಟವನ್ನು ಹಂಚಿಕೊಳ್ಳುತ್ತಾರೆ. ರಾಜಕುಮಾರ ನಿವೃತ್ತಿಯಾಗಲು ನಿರ್ಧರಿಸಿದನು. ನಿವೃತ್ತಿ ದಿನಾಂಕದಂದು, ಅಢಾವೆ ಪತ್ರಿಕೆಯಲ್ಲಿ ಈ ಕೆಳಗಿನವುಗಳನ್ನು ತೋರಿಸಲಾಗಿದೆ. ಸಾಮಾನ್ಯ ಮೀಸಲು ₹ 36,000 ಮತ್ತು ಲಾಭ–ನಷ್ಟ ಖಾತೆ (ಖರ್ಚು) ₹ 15,000. ಅವಶ್ಯವಿರುವ ರೋಜು ದಾಖಲಿಸಿರಿ.

5. ದಿಗ್ವಿಜಯ್, ಬ್ರಿಜೇಶ್ ಮತ್ತು ಪರಕರಾಮ್ ಸಂಸ್ಥೆಯೊಂದರ ಪಾಲುದಾರರಾಗಿದ್ದು 2:2:1 ರ ಅನುಪಾತದಲ್ಲಿ ಲಾಭ–ನಷ್ಟವನ್ನು ಹಂಚಿಕೊಳ್ಳುತ್ತಾರೆ. ಮಾರ್ಚ್ 31, 2015 ರಂದು ಅಢಾವೆ ಪತ್ರಿಕೆ ಈ ಕೆಳಗಿನಂತಿದೆ.

| ಹೊಣೆಗಾರಿಕೆಗಳು | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|
| ಸಾಹುಕಾರರು | 49,000 | ನಗದು | 8,000 |
| ಮೀಸಲು | 18,500 | ಸಾಲಗಾರರು | 19,000 |
| ದಿಗ್ವಿಜಯ್‌ನ ಬಂಡವಾಳ | 82,000 | ದಾಸ್ತಾನು | 42,000 |
| ಬ್ರಿಜೇಶನ ಬಂಡವಾಳ | 60,000 | ಕಟ್ಟಡಗಳು | 2,07,000 |
| ಪರಕರಾಮ್‌ನ ಬಂಡವಾಳ | 75.500 | ಸ್ವಾಮ್ಯ ಸನ್ನದು | 9,000 |
| | **2,85,000** | | **2,85,000** |

   ಮಾರ್ಚ್ 31, 2015 ಕ್ಕೆ ಬ್ರಿಜೇಶ್ ನಿವೃತ್ತಿಯಾದನು. ಕೆಳಕಂಡಂತೆ ಕರಾರುಗಳನ್ನು ಮಾಡಲಾಯಿತು.

   (i) ಸಂಸ್ಥೆಯ ಕೀರ್ತಿಮೌಲ್ಯವನ್ನು ₹ 70,000 ಎಂದು ಮೌಲ್ಯ ಮಾಡಲಾಯಿತು ಮತ್ತು ಅದನ್ನು ಪುಸ್ತಕದಲ್ಲಿ ತೋರಿಸಲಾಗಿಲ್ಲ.

   (ii) ಕರಡು ಸಾಲದ ಮೊತ್ತ ₹ 2,000 ತೆಗೆದು ಹಾಕಿದೆ.

   (iii) ಸ್ವಾಮ್ಯ ಸನ್ನದು ಬೆಲೆ ಕಳೆದುಕೊಂಡಿದೆ.

   ಪುನರ್ ಮೌಲ್ಯಮಾಪನ ಖಾತೆ, ಪಾಲುದಾರರ ಬಂಡವಾಳ ಖಾತೆಗಳು ಮತ್ತು ಬ್ರಿಜೇಶನ ನಿವೃತ್ತಿ ನಂತರ ದಿಗ್ವಿಜಯ್ ಮತ್ತು ಪರಕರಾಮ್‌ರ ಅಢಾವೆ ಪತ್ರಿಕೆಯನ್ನು ತಯಾರಿಸಿ

(ಉತ್ತರ: ಪುನರ್ ಮೌಲ್ಯ ಮಾಪನ ನಷ್ಟ ₹ 11,000, ಬಂಡವಾಳ ಖಾತೆಗಳ ಶಿಲ್ಕು: ದಿಗ್ವಿಜಯ್ ₹ 66,333 ಮತ್ತು ಪರಕರಾಮ್ ₹ 67,667. ಅಢಾವೆ ಪತ್ರಿಕೆಯ ಒಟ್ಟು ₹ 2,74,000)

6. ರಾಧಾ, ಶೀಲಾ ಮತ್ತು ಮೀನಾ ಪಾಲುದಾರರು 3:2:1 ರ ಅನುಪಾತದಂತೆ ಲಾಭ–ನಷ್ಟವನ್ನು ಹಂಚಿಕೊಳ್ಳುತ್ತಾರೆ. ಎಪ್ರಿಲ್ 1, 2015 ರಂದು ಶೀಲಾ ನಿವೃತ್ತಿಯಾಗುತ್ತಾರೆ. ಆ ದಿನದಂದು ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ.

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|---|
| ವ್ಯಾಪಾರ ಸಾಹುಕಾರರು | | 3,000 | ಕೈಯಲ್ಲಿ ನಗದು | 1,500 |
| ಕೊಡತಕ್ಕ ಹುಂಡಿ | | 4,500 | ಬ್ಯಾಂಕಿನಲ್ಲಿ ನಗದು | 7,500 |
| ಕೊಡಬೇಕಾದ ಖರ್ಚುಗಳು | | 4,500 | ಸಾಲಗಾರರು | 15,000 |
| ಸಾಮಾನ್ಯ ಮೀಸಲು | | 13,500 | ದಾಸ್ತಾನು | 12,000 |
| ಬಂಡವಾಳಗಳು : | | | ಕಾರ್ಖಾನೆಯ ಆವರಣ | 22,500 |
| ರಾಧಾ | 15,000 | | ಯಂತ್ರೋಪಕರಣ | 8,000 |
| ಶೀಲಾ | 15,000 | | ಬಿಡಿ ಉಪಕರಣಗಳು | 4,000 |
| ಮೀನಾ | 15,000 | 45,000 | | |
| | | 70,500 | | 70,500 |

**ಕರಾರುಗಳು ಇಂತಿವೆ :**

(a) ಸಂಸ್ಥೆಯ ಕೀರ್ತಿಮೌಲ್ಯವನ್ನು ₹ 13,000 ಮೌಲ್ಯ ಮಾಡಲಾಗಿದೆ.

(b) ಕೊಡಬೇಕಾದ ಖರ್ಚುಗಳನ್ನು ₹ 3,750 ಕ್ಕೆ ಇಳಿಸಲಾಗಿದೆ.

(c) ಯಂತ್ರೋಪಕರಣ ಮತ್ತು ಬಿಡಿ ಉಪಕರಣಗಳ ಮೌಲ್ಯವನ್ನು ಪುಸ್ತಕದ ಬೆಲೆಗಿಂತ ಶೇ 10 ರಷ್ಟು ಕಡಿಮೆ ಮಾಡುವುದು.

(d) ಕಾರ್ಖಾನೆ ಆವರಣ ₹ 24,300 ಬೆಲೆಗೆ ಪುನರ್ ಮೌಲ್ಯಮಾಪನ ಮಾಡಲಾಗಿದೆ.

**ತಯಾರಿಸಿರಿ :**

1. ಪುನರ್ ಮೌಲ್ಯಮಾಪನ ಖಾತೆ.
2. ಪಾಲುದಾರರ ಬಂಡವಾಳ ಖಾತೆಗಳು ಮತ್ತು
3. ಶೀಲಾಳ ನಿವೃತ್ತಿ ನಂತರದ ಅಢಾವೆ ಪತ್ರಿಕೆ.

(ಉತ್ತರ: ಪುನರ್ ಮೌಲ್ಯಮಾಪನ ಲಾಭ ₹ 1,350, ಬಂಡವಾಳ ಖಾತೆಗಳ ಶಿಲ್ಕುಗಳು: ರಾಧಾ ₹ 19,050 ಮತ್ತು ₹ 16,350, ಅಢಾವೆ ಪತ್ರಿಕೆಯ ಒಟ್ಟು ₹ 71,100)

7. ಪಂಕಜ್, ನರೇಶ ಮತ್ತು ಸೌರಭ ಪಾಲುದಾರರು 3:2:1 ರ ಅನುಪಾತದಂತೆ ಲಾಭ ನಷ್ಟ ಹಂಚಿಕೊಳ್ಳುತ್ತಾರೆ. ಅನಾರೋಗ್ಯದ ನಿಮಿತ್ಯ ನರೇಶನು ನಿವೃತ್ತಿಯಾದನು. ಆ ದಿನಾಂಕದಂದು ಸಂಸ್ಥೆಯ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ.

**ಪಂಕಜ್, ನರೇಶ ಮತ್ತು ಸೌರಭ ಇವರ ಪುಸ್ತಕಗಳು**

**ಮಾರ್ಚ್ 31, 2015ರಂದು ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | | ಮೊತ್ತ ₹ |
|---|---|---|---|---|---|
| ಸಾಮಾನ್ಯ ಮೀಸಲು | | 12,000 | ಬ್ಯಾಂಕ್ | | 7,600 |
| ಒಟ್ಟು ಸಾಹುಕಾರರು | | 15,000 | ಸಾಲಗಾರರು | 6000 | |
| ಕೊಡತಕ್ಕ ಹುಂಡಿ | | 12,000 | –ಸಂಶಯಾಸ್ಪದ ಕರಡು | | |
| ಕೊಡಬೇಕಾದ ವೇತನ | | 2,200 | ಸಾಲಕ್ಕಾಗಿ ತೆಗೆದಿರುವಿಕೆ | 400 | 5,600 |
| ಕಾನೂನಾತ್ಮಕ ಹಾನಿಗಳಿಗೆ ತೆಗೆದಿರಿಸುವಿಕೆ | | | ದಾಸ್ತಾನು | | 9,000 |
| ಬಂಡವಾಳಗಳು : | | 6,000 | ಪೀಠೋಪಕರಣ | | 41,000 |
| ಪಂಕಜ್ | 46,000 | | ಆವರಣ | | 80,000 |
| ನರೇಶ | 30,000 | | | | |
| ಸೌರಭ | 20,000 | | | | |
| | | 96,000 | | | |
| | | 1,43,200 | | | 1,43,200 |

**ಹೆಚ್ಚಿನ ಮಾಹಿತಿ :**

(i) ಆವರಣದ ಮೌಲ್ಯವನ್ನು ಶೇ. 20ರಷ್ಟು ಹೆಚ್ಚಿಸಿರಿ. ದಾಸ್ತಾನು ಮೌಲ್ಯದಲ್ಲಿ ಶೇ. 10 ಸವಕಳಿ ಮಾಡಿರಿ ಮತ್ತು ಸಂಶಯಾಸ್ಪದ ಕರಡು ಸಾಲಕ್ಕಾಗಿ ತೆಗೆದಿರಿಸುವಿಕೆಯನ್ನು ಶೇ. 5 ರಷ್ಟು ಮಾಡಿರಿ. ಅಲ್ಲದೆ, ಕಾನೂನಾತ್ಮಕ ಹಾನಿಗಳಿಗೆ ₹ 1,200 ತೆಗೆದಿರಿಸಿರಿ ಮತ್ತು ಪೀಠೋಪಕರಣದ ಬೆಲೆಯನ್ನು ₹ 45,000 ಗೆ ತನ್ನಿರಿ.

(ii) ಕೀರ್ತಿಮೌಲ್ಯವನ್ನು ₹ 42,000 ಗೆ ಮೌಲ್ಯ ಮಾಡಲಾಗಿದೆ.

(iii) ನರೇಶನ ಬಂಡವಾಳ ಖಾತೆಯಿಂದ ₹ 26,000 ಅವನ ಸಾಲದ ಖಾತೆಗೆ ವರ್ಗಾಯಿಸಿದೆ ಮತ್ತು ಬಾಕಿ ಮೊತ್ತವನ್ನು ಬ್ಯಾಂಕಿನಿಂದ ಕೊಡುವುದು. ಅವಶ್ಯಕತೆ ಇದ್ದರೆ ಬ್ಯಾಂಕಿನಿಂದ ಸಾಲವನ್ನು ಪಡೆಯುವುದು.

(iv) ಪಂಕಜ್ ಮತ್ತು ಸೌರಭರ ಹೊಸ ಲಾಭ–ನಷ್ಟ ಹಂಚಿಕೆಯ ಪ್ರಮಾಣ 5 : 1 ಇದೆ.

ಅವಶ್ಯವಿರುವ ಖಾತೆಗಳನ್ನು ತಯಾರಿಸಿರಿ ಮತ್ತು ನರೇಶನ ನಿವೃತ್ತಿ ನಂತರದ ಅಢಾವೆ ಪತ್ರಿಕೆಯನ್ನು ತಯಾರಿಸಿರಿ.

(ಉತ್ತರ: ಪುನರ್ ಮೌಲ್ಯಮಾಪನ ಲಾಭ ₹ 18,000, ಬಂಡವಾಳ ಖಾತೆಗಳ ಶಿಲ್ಕು, ಪಂಕಜ್ ₹ 47,000 ಮತ್ತು ಸೌರಭ ₹ 25,000, ನರೇಶನ ಬಂಡವಾಳ ಖಾತೆ ಒಟ್ಟು ಜಮೆ ₹ 54,000, ಅಢಾವೆ ಪತ್ರಿಕೆ ಒಟ್ಟು ₹ 1,54,800)

8. ಪುನೀತ್, ಪಂಕಜ ಮತ್ತು ಪಮ್ಮಿ ಪಾಲುದಾರರಾಗಿದ್ದು, ಲಾಭ–ನಷ್ಟಗಳನ್ನು 2:2:1 ರ ಪ್ರಮಾಣದಂತೆ ಕ್ರಮವಾಗಿ ಹಂಚಿಕೊಳ್ಳುತ್ತಾರೆ. ಮಾರ್ಚ್ 31, 2015ರಂದು ಅವರ ಅಢಾವೆ ಪತ್ರಿಕೆಯು ಈ ಕೆಳಗಿನಂತಿದೆ.

**ಪುನೀತ್, ಪಂಕಜ ಮತ್ತು ಪಮ್ಮಿ ಇವರ ಪುಸ್ತಕಗಳು**
**ಮಾರ್ಚ್ 31, 2015ರಂದು ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|---|
| ಒಟ್ಟು ಸಾಹುಕಾರರು | | 1,00,000 | ಬ್ಯಾಂಕಿನಲ್ಲಿ ನಗದು | 20,000 |
| ಬಂಡವಾಳ ಖಾತೆಗಳು: | | | ದಾಸ್ತಾನು | 30,000 |
| ಪುನೀತ್ | 60,000 | | ಒಟ್ಟು ಸಾಲಗಾರರು | 80,000 |
| ಪಂಕಜ | 1,00,000 | | ಹೂಡಿಕೆಗಳು | 70,000 |
| ಪಮ್ಮಿ | 40,000 | 2,00,000 | ಪೀಠೋಪಕರಣ | 35,000 |
| ಮೀಸಲು | | 50,000 | ಕಟ್ಟಡಗಳು | 1,15,000 |
| | | 3,50,000 | | 3,50,000 |

ಸಪ್ಟೆಂಬರ 30, 2015 ರಂದು ಪಮ್ಮಿ ನಿಧನರಾದರು. ಪಾಲುದಾರಿಕೆಯ ಒಪ್ಪಂದ ಈ ಕೆಳಗಿನ ಅಂಶಗಳನ್ನು ಒದಗಿಸಿದೆ.

(i) ಹಿಂದಿನ ವರ್ಷದ ಲಾಭದ ಆಧಾರದ ಮೇಲೆ ಮರಣ ಹೊಂದಿದ ದಿನಾಂಕದ ವರೆಗಿನ ಸಂಸ್ಥೆಯ ಲಾಭದಲ್ಲಿ ಅವನ ಪಾಲನ್ನು ಪಡೆಯಲು ಹಕ್ಕುಳ್ಳವನಾಗಿರುತ್ತಾನೆ.

(ii) ಹಿಂದಿನ 4 ವರ್ಷಗಳ ಸರಾಸರಿ ಲಾಭದ 3 ವರ್ಷಗಳ ಖರೀದಿಗೆ ಸಮನಾದ ಸಂಸ್ಥೆಯ ಒಟ್ಟು ಕೀರ್ತಿ ಮೌಲ್ಯದಲ್ಲಿ ತನ್ನ ಪಾಲನ್ನು ಪಡೆಯಲು ಹಕ್ಕುಳ್ಳವನಾಗಿರುತ್ತಾನೆ. ಕಳೆದ 4 ವರ್ಷಗಳ ಲಾಭಗಳು ಇಂತಿವೆ.

2010–2011 ₹ 80,000 ; 2011–2012 ₹ 50,000 ; 2012–2013 ₹ 40,000 ; 2013–2014 ₹ 30,000

ನಿಧನ ಹೊಂದಿದ ಪಾಲುದಾರನು ನಿಧನದ ದಿನಾಂಕದ ವರೆಗೆ ₹ 10,000 ಸ್ವಂತಕ್ಕಾಗಿ ಪಡೆದಿದ್ದಾನೆ. ಬಂಡವಾಳದ ಮೇಲಿನ ಬಡ್ಡಿ ವಾರ್ಷಿಕ ಶೇ.12 ಇದೆ.ಬದುಕಿ ಉಳಿದ ಪಾಲುದಾರರು ವಾರಸುದಾರರಿಗೆ ₹ 15,400ನ್ನು ಕೊಡಲೇ ಕೊಡಬೇಕು ಮತ್ತು ಉಳಿದ ಮೊತ್ತವನ್ನು ನಾಲ್ಕು ವರ್ಷಗಳಲ್ಲಿ ಸಮಾನ ಕಂತುಗಳ ಮೂಲಕ ವಾರ್ಷಿಕ ಶೇ.12 ರಂತೆ ಬಡ್ಡಿ ಸೇರಿಸಿ ಕೊಡಬೇಕು.

ಪಮ್ಮಿಯ ಬಂಡವಾಳ ಖಾತೆ ಮತ್ತು ಅವರ ವಾರಸುದಾರರ ಖಾತೆಯನ್ನು ಬಾಕಿ ಚುಕ್ತಾ ಆಗುವ ವರೆಗೂ ತೋರಿಸಿರಿ.

(ಉತ್ತರ: ಕೊಡಬೇಕಾದ ಒಟ್ಟು ಮೊತ್ತ ₹ 75,400)

9. ಪ್ರತೀಕ್, ರಾಖಿ ಮತ್ತು ಕುಶಾಲ್ ಪಾಲುದಾರರ ಅಢಾವೆ ಪತ್ರಿಕೆ ಮಾರ್ಚ್ 31, 2015ರಂದು ಈ ಕೆಳಗಿನಂತಿದೆ.

**ಪ್ರತೀಕ್, ರಾಖಿ ಮತ್ತು ಕುಶಾಲ್ – ಇವರ ಪುಸ್ತಕಗಳು**

**ಮಾರ್ಚ್ 31, 2015ರ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|---|
| ಒಟ್ಟು ಸಾಹುಕಾರರು | | 16,000 | ಬರತಕ್ಕ ಹುಂಡಿ | 16,000 |
| ಸಾಮಾನ್ಯ ಮೀಸಲು | | 16,000 | ಪೀಠೋಪಕರಣ | 22,600 |
| ಬಂಡವಾಳ ಖಾತೆಗಳು: | | | ದಾಸ್ತಾನು | 20,400 |
| ಪ್ರತೀಕ್ | 30,000 | | ಒಟ್ಟು ಸಾಲಗಾರರು | 22,000 |
| ರಾಖಿ | 20,000 | | ಬ್ಯಾಂಕಿನಲ್ಲಿ ನಗದು | 18,000 |
| ಕುಶಾಲ್ | 20,000 | 70,000 | ಕೈಯಲ್ಲಿ ನಗದು | 3,000 |
| | | **1,02,000** | | **1,02,000** |

ಜೂನ್ 30, 2015 ರಂದು ರಾಖಿ ನಿಧನರಾದರು.

ಪಾಲುದಾರರ ಒಡಂಬಡಿಕೆಯಂತೆ ನಿಧನರಾದ ಪಾಲುದಾರನ ವಾರಸುದಾರನು ಈ ಕೆಳಗಿನವುಗಳನ್ನು ಪಡೆಯಲು ಹಕ್ಕುಳ್ಳವರಾಗಿರುತ್ತಾರೆ.

(a) ಬಂಡವಾಳ ಖಾತೆಯ ಜಮೆ ಹಣ.

(b) ಬಂಡವಾಳದ ಮೇಲಿನ ಬಡ್ಡಿ ವಾರ್ಷಿಕ ಶೇ. 5 ರಂತೆ.

(c) ಕಳೆದ ಮೂರು ವರ್ಷದ ಸರಾಸರಿ ಲಾಭದ ಎರಡು ಪಟ್ಟು ಕೀರ್ತಿಮೌಲ್ಯದಲ್ಲಿ ಅವನ ಪಾಲು.

(d) ಹಿಂದಿನ ಹಣಕಾಸಿನ ವರ್ಷದ ಕೊನೆಯ ದಿನಾಂಕದಿಂದ ಪಾಲುದಾರನ ನಿಧನದ ದಿನಾಂಕದ ವರೆಗಿನ ಸಂಸ್ಥೆಯ ಲಾಭವು ಹಿಂದಿನ ವರ್ಷದ ಲಾಭದಷ್ಟಿದ್ದು, ಅದರಲ್ಲಿ ಅವನ ಪಾಲು.

ಮಾರ್ಚ್ 31 2013, ಮಾರ್ಚ್ 31 2014, ಮತ್ತು ಮಾರ್ಚ್ 31 2015 ರ ಲಾಭಗಳು ಕ್ರಮವಾಗಿ ₹ 12,000, ₹ 16,000 ಮತ್ತು ₹ 14,000 ಇರುತ್ತವೆ. ಬಂಡವಾಳದ ಪ್ರಮಾಣದಂತೆ ಅವರು ಲಾಭ–ನಷ್ಟಗಳನ್ನು ಹಂಚಿಕೊಳ್ಳುತ್ತಾರೆ.

ರೋಜು ದಾಖಲಿಸಿರಿ ಮತ್ತು ರಾಖಿಯ ಬಂಡವಾಳ ಖಾತೆಯನ್ನು ತಯಾರಿಸಿರಿ.

(ಉತ್ತರ: ರಾಖಿಯ ವಾರಸುದಾರರ ಖಾತೆ ಹಣ ₹ 33,821)

10. ನಾರಂಗ, ಸೂರಿ ಮತ್ತು ಬಜಾಜ್ ಪಾಲುದಾರರು ಲಾಭ–ನಷ್ಟಗಳನ್ನು $\frac{1}{2}$, $\frac{1}{6}$, $\frac{1}{3}$ ಪ್ರಮಾಣದಂತೆ ಕ್ರಮವಾಗಿ ಹಂಚಿಕೊಳ್ಳುತ್ತಾರೆ. ಎಪ್ರಿಲ್ 1, 2015ರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ.

**ನಾರಂಗ, ಸೂರಿ ಮತ್ತು ಬಜಾಜ್ ಇವರ ಪುಸ್ತಕಗಳು**
**ಎಪ್ರಿಲ್ 01, 2007 ರಂದು ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | | ಮೊತ್ತ ₹ |
|---|---|---|---|---|---|
| ಕೊಡತಕ್ಕ ಹುಂಡಿಗಳು | | 12,000 | ಋಣ ಮುಕ್ತ ಆವರಣ | | 40,000 |
| ಒಟ್ಟು ಸಾಹುಕಾರರು | | 18,000 | ಯಂತ್ರೋಪಕರಣ | | 30,000 |
| ಮೀಸಲುಗಳು | | 12,000 | ಪೀಠೋಪಕರಣ | | 12,000 |
| ಬಂಡವಾಳ ಖಾತೆಗಳು: | | | ದಾಸ್ತಾನು | | 22,000 |
| ನಾರಂಗ | 40,000 | | ಒಟ್ಟು ಸಾಲಗಾರರು | 20,000 | |
| ಸೂರಿ | 20,000 | | – ಕರಡುಸಾಲಕ್ಕಾಗಿ | | |
| ಬಜಾಜ್ | 28,000 | 88,000 | ಕಾಯ್ದಿರಿಸುವಿಕೆ | 1,000 | 19,000 |
| | | | ನಗದು | | 7,000 |
| | | **1,30,000** | | | **1,30,000** |

ಬಜಾಜ್ ಸಂಸ್ಥೆಯಿಂದ ನಿವೃತ್ತಿ ಹೊಂದಿದನು ಮತ್ತು ಪಾಲುದಾರರು ಈ ಕೆಳಕಂಡವುಗಳಿಗೆ ಒಪ್ಪಿರುತ್ತಾರೆ.

(a) ಋಣಮುಕ್ತ ಆವರಣ ಮತ್ತು ದಾಸ್ತಾನುಗಳ ಮೌಲ್ಯವನ್ನು ಕ್ರಮವಾಗಿ ಶೇ. 20 ಮತ್ತು ಶೇ. 15 ರಷ್ಟು ಹೆಚ್ಚಿಸಬೇಕು.

(b) ಯಂತ್ರೋಪಕರಣ ಮತ್ತು ಪೀಠೋಪಕರಣಗಳಿಗೆ ಕ್ರಮವಾಗಿ ಶೇ. 10 ಮತ್ತು ಶೇ. 7 ರಷ್ಟು ಸವಕಳಿ ತೆಗೆಯಿರಿ.

(c) ಕರಡು ಸಾಲಕ್ಕಾಗಿ ಕಾಯ್ದಿರಿಸುವಿಕೆಯನ್ನು ₹ 1,500ಕ್ಕೆ ಹೆಚ್ಚಿಸಿರಿ.

(d) ಬಜಾಜ್‌ರ ನಿವೃತ್ತಿಯ ವೇಳೆಯಲ್ಲಿ ಕೀರ್ತಿ ಮೌಲ್ಯವನ್ನು ₹ 21,000ಕ್ಕೆ ಮೌಲ್ಯ ಮಾಡಲಾಗಿದೆ.

(e) ಬಜಾಜ್‌ರ ನಿವೃತ್ತಿಯ ನಂತರ ಮುಂದುವರೆದ ಪಾಲುದಾರರು ಬಂಡವಾಳವನ್ನು ಹೊಸ ಲಾಭ ನಷ್ಟ ಪ್ರಮಾಣದಲ್ಲಿ ಹೊಂದಾಣಿಕೆ ಮಾಡಿಕೊಳ್ಳಲು ನಿರ್ಧರಿಸಿದ್ದಾರೆ. ಬಂಡವಾಳ ಖಾತೆಯ ಉಳಿಕೆ/ಕೊರತೆ ಹಣವನ್ನು ಚಾಲ್ತಿ ಖಾತೆಗಳ ಮೂಲಕ ಹೊಂದಾಣಿಕೆ ಮಾಡಿರಿ.

ಅವಶ್ಯವಿರುವ ಖಾತೆಗಳನ್ನು ತಯಾರಿಸಿರಿ ಮತ್ತು ಹೊಸ ಸಂಸ್ಥೆಯ ಅಢಾವೆ ಪತ್ರಿಕೆಯನ್ನು ರಚಿಸಿರಿ.

(ಉತ್ತರ: ಪುನರ್ ಮೌಲ್ಯಮಾಪನ ಲಾಭ ₹ 6,960; ಬಂಡವಾಳ ಖಾತೆಗಳ ಶಿಲ್ಕು, ನಾರಂಗ ₹ 49,230; ಮತ್ತು ಸೂರಿ ₹ 16,410, ಬಜಾಜ್ ಬಂಡವಾಳ ಖಾತೆ ಜಮೆ ₹ 41,320)

11. ರಾಜೇಶ, ಪ್ರಮೋದ ಮತ್ತು ನಿಶಾಂತ ಪಾಲುದಾರರು ಬಂಡವಾಳದ ಪ್ರಮಾಣದಂತೆ ಲಾಭ–ನಷ್ಟವನ್ನು ಹಂಚಿಕೊಳ್ಳುತ್ತಾರೆ. ಮಾರ್ಚ್ 31, 2015ರ ಅಢಾವೆ ಪತ್ರಿಕೆ ಇಂತಿದೆ.

**ರಾಜೇಶ, ಪ್ರಮೋದ ಮತ್ತು ನಿಶಾಂತ ಇವರ ಪುಸ್ತಕಗಳು**

**ಮಾರ್ಚ್ 31, 2015 ರಂದು ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | | ಮೊತ್ತ₹ |
|---|---|---|---|---|---|
| ಕೊಡತಕ್ಕ ಹುಂಡಿಗಳು | | 6,250 | ಕಾರ್ಖಾನೆ ಕಟ್ಟಡ | | 12,000 |
| ಒಟ್ಟು ಸಾಹುಕಾರರು | | 10,000 | ಸಾಲಗಾರರು | 10,500 | |
| ಮೀಸಲು ನಿಧಿ | | 2,750 | – ಕಾಯ್ದಿರಿಸುವಿಕೆ | 500 | 10,000 |
| ಬಂಡವಾಳ ಖಾತೆಗಳು: | | | ಬರತಕ್ಕ ಹುಂಡಿ | | 7,000 |
| ರಾಜೇಶ | 20,000 | | ದಾಸ್ತಾನು | | 15,500 |
| ಪ್ರಮೋದ | 15,000 | | ಸ್ಥಾವರ & ಯಂತ್ರೋಪಕರಣ | | 11,500 |
| ನಿಶಾಂತ | 15,000 | 50,000 | ಬ್ಯಾಂಕಿನ ಶಿಲ್ಕು | | 13,000 |
| | | 69,000 | | | 69,000 |

ಅಢಾವೆ ಪತ್ರಿಕೆಯ ದಿನಾಂಕದಂದು ಪ್ರಮೋದ ನಿವೃತ್ತಿಯಾದನು.ಈ ಕೆಳಗಿನ ಹೊಂದಾಣಿಕೆಗಳನ್ನು ಮಾಡಲಾಯಿತು.

(a) ದಾಸ್ತಾನಿನ ಬೆಲೆಯನ್ನು ಪುಸ್ತಕದ ಬೆಲೆಗಿಂತ ಶೇ. 10 ಕಡಿಮೆ ಮಾಡುವುದು.

(b) ಕಾರ್ಖಾನೆ ಕಟ್ಟಡದ ಬೆಲೆಯನ್ನು ಶೇ. 12 ರಷ್ಟು ಹೆಚ್ಚಿಸಲಾಗಿದೆ.

(c) ಸಂಶಯಾಸ್ಪದ ಸಾಲಕ್ಕಾಗಿ ಶೇ. 5ರ ವರೆಗೆ ಕಾಯ್ದಿರಿಸಿದೆ.

(d) ಕಾನೂನಿನ ಖರ್ಚಿಗಾಗಿ ₹ 265 ನ್ನು ಕಾಯ್ದಿರಿಸಿರಿ.

(e) ಸಂಸ್ಥೆಯ ಕೀರ್ತಿಮೌಲ್ಯ ₹ 10,000ಕ್ಕೆ ನಿಗದಿಗೊಳಿಸಲಾಗಿದೆ.

(f) ಹೊಸ ಸಂಸ್ಥೆಯ ಒಟ್ಟು ಬಂಡವಾಳ ₹ 30,000 ಎಂದು ನಿಗದಿಗೊಳಿಸಲಾಗಿದೆ. ಮುಂದುವರೆಯುವ ಪಾಲುದಾರರ ಬಂಡವಾಳವು ಅವರ ಹೊಸ ಅನುಪಾತ 3:2 ರ ಪ್ರಕಾರ ಇರಬೇಕು.

ರೋಜು ದಾಖಲಿಸಿರಿ ಮತ್ತು ಪ್ರಮೋದನ ಬಂಡವಾಳ ಖಾತೆಯ ಶಿಲ್ಕನ್ನು ಅವನ ಸಾಲದ ಖಾತೆಗೆ ವರ್ಗಾಯಿಸಿ, ಪುನರ್‌ರಚಿತ ಸಂಸ್ಥೆಯ ಅಢಾವೆ ಪತ್ರಿಕೆಯನ್ನು ತಯಾರಿಸಿರಿ.

(ಉತ್ತರ: ಪುನರ್ ಮೌಲ್ಯಮಾಪನ ನಷ್ಟ ₹ 400; ಬಂಡವಾಳಗಳ ಶಿಲ್ಕು ರಾಜೇಶ ₹ 18,940; ನಿಶಾಂತ ₹ 14,705; ಪ್ರಮೋದನ ಸಾಲ ₹ 18,705; ಅಢಾವೆ ಪತ್ರಿಕೆ ಒಟ್ಟು ₹ 65,220)

12. 2015 ರ ಮಾರ್ಚ್ 31 ರ ಈ ಕೆಳಗಿನ ಅಢಾವೆ ಪತ್ರಿಕೆಯು ಜೈನ್, ಗುಪ್ತಾ ಮತ್ತು ಮಲಿಕ್ ಪಾಲುದಾರರದ್ದಾಗಿದೆ.

**ಜೈನ್, ಗುಪ್ತಾ ಮತ್ತು ಮಲಿಕ್ ಇವರ ಪುಸ್ತಕಗಳು**

**ಮಾರ್ಚ್ 31, 2015ರ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|---|
| ಒಟ್ಟು ಸಾಹುಕಾರರು | | 19,800 | ಭೂಮಿ ಮತ್ತು ಕಟ್ಟಡ | 26,000 |
| ಕೊಡಬೇಕಾದ ದೂರವಾಣಿ ಬಿಲ್ | | 300 | ಕರಾರು ಪತ್ರಗಳು | 14,370 |
| ಕೊಡತಕ್ಕ ಹುಂಡಿ | | 8,950 | ನಗದು | 5,500 |
| ಸಂಚಿತ ಲಾಭ | | 16,750 | ಬರತಕ್ಕ ಹುಂಡಿ | 23,450 |
| ಬಂಡವಾಳಗಳು: | | | ಒಟ್ಟು ಸಾಲಗಾರರು | 26,700 |
| ಜೈನ್ | 40,000 | | ದಾಸ್ತಾನು | 18,100 |
| ಗುಪ್ತಾ | 60,000 | | ಕಛೇರಿ ಪೀಠೋಪಕರಣ | 18,250 |
| ಮಲಿಕ್ | 20,000 | 1,20,000 | ಸ್ಥಾವರ & ಯಂತ್ರೋಪಕರಣ | 20,230 |
| | | | ಗಣಕಯಂತ್ರ | 13,200 |
| | | **1,65,800** | | **1,65,800** |

ಪಾಲುದಾರರು 5:3:2 ರ ಅನುಪಾತದಲ್ಲಿ ಲಾಭ–ನಷ್ಟಗಳನ್ನು ಹಂಚಿಕೊಳ್ಳುತ್ತಾರೆ. ಮಲಿಕ್ ಎಪ್ರಿಲ್ 1, 2015 ರಂದು ನಿವೃತ್ತಿಯಾಗಲು ನಿರ್ಧರಿಸಿದನು. ವ್ಯವಹಾರದಲ್ಲಿನ ಅವನ ಪಾಲನ್ನು ಲೆಕ್ಕ ಹಾಕುವುದಕ್ಕೆ ಈ ಕೆಳಕಂಡಂತೆ ಆಸ್ತಿ ಮತ್ತು ಹೊಣೆಗಾರಿಕೆಗಳ ಪುನರ್ ಮೌಲ್ಯಮಾಪನ ಮಾಡಲಾಯಿತು:

ದಾಸ್ತಾನು ₹ 20,000 ; ಕಛೇರಿ ಪೀಠೋಪಕರಣ ₹ 14,250 : ಸ್ಥಾವರ ಮತ್ತು ಯಂತ್ರೋಪಕರಣ ₹ 23,530; ಭೂಮಿ ಮತ್ತು ಕಟ್ಟಡ ₹ 20,000.

ಸಂಶಯಾಸ್ಪದ ಸಾಲಗಳಿಗಾಗಿ ತೆಗೆದಿರಿಸಿದ ಹಣ ₹ 1,700, ಕೀರ್ತಿ ಮೌಲ್ಯ ₹ 9,000 ಎಂದು ಮೌಲ್ಯೀಕರಿಸಲಾಯಿತು.

ಮುಂದುವರೆಯುವ ಪಾಲುದಾರರು 3:2 ರ ಅನುಪಾತದಂತೆ ವಂತಿಗೆ ಮಾಡಿ ನಿವೃತ್ತಿ ಹೊಂದಿದ ಮಲಿಕ್ ಪಾಲುದಾರನಿಗೆ ₹ 16,500ನ್ನು ಕೊಡಲು ಒಪ್ಪಿದ್ದಾರೆ. ಉಳಿದ ಬಾಕಿ ಹಣವನ್ನು ಸಾಲವೆಂದು ಪರಿಗಣಿಸಿದೆ.

ಪುನರ್ ಮೌಲ್ಯಮಾಪನ ಖಾತೆ, ಬಂಡವಾಳ ಖಾತೆಗಳು ಮತ್ತು ಪುನರ್‌ರಚಿತ ಸಂಸ್ಥೆಯ ಅಢಾವೆ ಪತ್ರಿಕೆಯನ್ನು ತಯಾರಿಸಿರಿ.

13. ಆರತಿ, ಭಾರತಿ ಮತ್ತು ಸೀಮಾ ಇವರು ಪಾಲುಗಾರರಾಗಿದ್ದು ಲಾಭ–ನಷ್ಟಗಳನ್ನು 3:2:1 ಪ್ರಮಾಣದಂತೆ ಹಂಚಿಕೊಳ್ಳುತ್ತಾರೆ. ಮಾರ್ಚ್ 31, 2016 ರಂದು ಅಢಾವೆ ಪತ್ರಿಕೆ ಈ ಕೆಳಗಿನಂತಿದೆ.

**ಆರತಿ, ಭಾರತಿ ಮತ್ತು ಸೀಮಾ ಇವರ ಪುಸ್ತಕಗಳು**

**ಮಾರ್ಚ್ 31 2016 ರಂದು ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|---|
| ಕೊಡತಕ್ಕ ಹುಂಡಿ | | 12,000 | ಕಟ್ಟಡಗಳು | 21,000 |
| ಸಾಹುಕಾರರು | | 14,000 | ಕೈಯಲ್ಲಿಯ ನಗದು | 12,000 |
| ಸಾಮಾನ್ಯ ಮೀಸಲು | | 12,000 | ಬ್ಯಾಂಕ | 13,700 |
| ಬಂಡವಾಳಗಳು: | | | ಸಾಲಗಾರರು | 12,000 |
| ಆರತಿ | 20,000 | | ಬರತಕ್ಕ ಹುಂಡಿ | 4,300 |
| ಭಾರತಿ | 12,000 | | ದಾಸ್ತಾನು | 1,750 |
| ಸೀಮಾ | 8,000 | 40,000 | ಹೂಡಿಕೆಗಳು | 13,250 |
| | | **78,000** | | **78,000** |

ಭಾರತಿ ಜೂನ್ 1, 2016 ರಂದು ನಿಧನರಾದರು ಮತ್ತು ಪಾಲುದಾರಿಕೆಯ ಒಪ್ಪಂದದ ಪ್ರಕಾರ ಅವರ ವಾರಸುದಾರರು ಈ ಕೆಳಗಿನವುಗಳನ್ನು ಪಡೆಯಲು ಅರ್ಹರಾಗಿದ್ದಾರೆ.

(a) ನಿಧನ ದಿನಾಂಕದಂದು ಇದ್ದ ಅವಳ ಬಂಡವಾಳ ಖಾತೆಯ ಶಿಲ್ಕು ಮತ್ತು ವಾರ್ಷಿಕ ಶೇ. 10ರಂತೆ ಅದರ ಮೇಲಿನ ಬಡ್ಡಿ.

(b) ಪ್ರಮಾಣಕ್ಕನುಗುಣವಾಗಿ ಅವಳ ಪಾಲಿನ ಸಾಮಾನ್ಯ ಮೀಸಲು.

(c) ನಿಧನ ಹೊಂದಿದ ದಿನಾಂಕದ ವರೆಗಿನ ಮಾರಾಟದ ಆಧಾರದ ಮೇಲೆ ತೆಗೆಯಲಾದ ಸಂಸ್ಥೆಯ ಒಟ್ಟು ಲಾಭದಲ್ಲಿ ಅವಳ ಪಾಲು. ಆ ಅವಧಿಯಲ್ಲಿನ ಒಟ್ಟು ಮಾರಾಟ ₹ 1,00,000 ಇರುತ್ತದೆ. ಕಳೆದ ಮೂರು ವರ್ಷಗಳಲ್ಲಿನ ಲಾಭದ ದರವು ಮಾರಾಟದ ಮೇಲೆ ಶೇ. 10ರಷ್ಟು ಇರುತ್ತದೆ.

(d) ಕಳೆದ ಮೂರು ವರ್ಷದ ಸರಾಸರಿ ಲಾಭದ ಎರಡು ಪಟ್ಟಿನಲ್ಲಿ ಶೇ. 20 ರಷ್ಟನ್ನು ಕಳೆದು, ಕೀರ್ತಿ ಮೌಲ್ಯವನ್ನು ಕಂಡುಹಿಡಿದು, ಅದರಲ್ಲಿ ಅವಳ ಪಾಲನ್ನು ಕೊಡುವರು. ಕಳೆದ ಮೂರು ವರ್ಷದ ಲಾಭಗಳು ಇಂತಿವೆ:

2014 – ₹ 8,200

2015 – ₹ 9,000

2016 – ₹ 9,800

ಹೂಡಿಕೆಗಳನ್ನು ₹ 16,200 ಕ್ಕೆ ಮಾರಲಾಗಿದೆ ಮತ್ತು ವಾರಸುದಾರರಿಗೆ ಹಣವನ್ನು ಪಾವತಿಸಲಾಗಿದೆ. ಅವಶ್ಯಕವಿರುವ ರೋಜು ದಾಖಲಿಸಿ ಮತ್ತು ಭಾರತಿ ಅವರ ವಾರಸುದಾರರ ಖಾತೆಯನ್ನು ತೆಗೆಯಿರಿ.

14. ನಿತ್ಯಾ, ಸತ್ಯಾ ಮತ್ತು ಮಿತ್ಯಾ ಒಂದು ಸಂಸ್ಥೆಯಲ್ಲಿ ಪಾಲುದಾರರಾಗಿದ್ದು, ಲಾಭ–ನಷ್ಟಗಳನ್ನು 5:3:2 ರ ಅನುಪಾತದಂತೆ ಹಂಚಿಕೊಳ್ಳುವರು. ಡಿಸೆಂಬರ 31, 2015 ರಂದು ಅವರ ಅಢಾವೆ ಪತ್ರಿಕೆ ಈ ಕೆಳಗಿನಂತೆ ಇದೆ.

**ನಿತ್ಯಾ, ಸತ್ಯಾ ಮತ್ತು ಮಿತ್ಯಾ ಇವರ ಪುಸ್ತಕಗಳು**
**ಡಿಸೆಂಬರ 31, 2014 ರಂದು ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|---|
| ಸಾಹುಕಾರರು | | 14,000 | ಹೂಡಿಕೆಗಳು | 10,000 |
| ಮೀಸಲು ನಿಧಿ | | 6,000 | ಕೀರ್ತಿ ಮೌಲ್ಯ | 5,000 |
| ಬಂಡವಾಳಗಳು: | | | ಆವರಣ | 20,000 |
| ನಿತ್ಯಾ | 30,000 | | ಹಕ್ಕು ಸ್ವಾಮ್ಯ | 6,000 |
| ಸತ್ಯಾ | 30,000 | | ಯಂತ್ರೋಪಕರಣ | 30,000 |
| ಮಿತ್ಯಾ | 20,000 | 80,000 | ದಾಸ್ತಾನು | 13,000 |
| | | | ಸಾಲಗಾರರು | 8,000 |
| | | | ಬ್ಯಾಂಕು | 8,000 |
| | | **1,00,000** | | **1,00,000** |

ಮೇ 1, 2015 ರಂದು ಮಿತ್ಯಾ ನಿಧನನಾದನು. ಮಿತ್ಯಾನ ವಾರಸುದಾರರು ಮತ್ತು ಪಾಲುದಾರರ ಮಧ್ಯ ಆದ ಒಡಂಬಡಿಕೆಗಳು ಈ ಕೆಳಗಿನಂತೆ ಇವೆ:

(a) 4 ವರ್ಷಗಳ ಸರಾಸರಿ ಲಾಭದ $2\frac{1}{2}$ ಪಟ್ಟು ಹೆಚ್ಚಿಸಿ ಕೀರ್ತಿ ಮೌಲ್ಯವನ್ನು ಮೌಲ್ಯೀಕರಿಸಿದೆ. 4 ವರ್ಷಗಳ ಲಾಭ ಇಂತಿವೆ: 2011 – ₹13000 ; 2012 – ₹ 12000 ; 2013 – ₹ 16000 ಮತ್ತು 2014 – ₹15000.

(b) ಹಕ್ಕು ಸ್ವಾಮ್ಯವನ್ನು ₹ 8,000ಕ್ಕೆ, ಯಂತ್ರೋಪಕರಣ ₹ 25,000 ಮತ್ತು ಆವರಣ ₹ 25,000 ಗಳಿಗೆ ಮೌಲ್ಯೀಕರಿಸಿದೆ.

(c) ಮಿತ್ಯಾನ ಲಾಭದ ಪಾಲನ್ನು 2014 ರಲ್ಲಿ ಆದ ಲಾಭದ ಆಧಾರದ ಮೇಲೆ ಲೆಕ್ಕ ಹಾಕಲಾಗಿದೆ.

(d) ವಾರಸುದಾರರಿಗೆ ತಕ್ಷಣ ₹ 4,200 ಗಳನ್ನು ಪಾವತಿಸಿರಿ ಮತ್ತು ಉಳಿದ ಶಿಲ್ಕು ಹಣವನ್ನು ನಾಲ್ಕು ಅರ್ಧವಾರ್ಷಿಕ ಸಮಾನ ಕಂತುಗಳ ಮೂಲಕ ವಾರ್ಷಿಕ ಶೇ. 10 ರಂತೆ ಬಡ್ಡಿ ಸಮೇತ ಪಾವತಿಸಿರಿ.

ಅವಶ್ಯವಿರುವ ರೋಜು ದಾಖಲಿಸಿರಿ ಮತ್ತು ಪೂರ್ಣ ಹಣ ಸಂದಾಯವಾಗುವ ವರೆಗೂ ವಾರಸುದಾರರ ಖಾತೆಯನ್ನು ತಯಾರಿಸಿರಿ. ಅಲ್ಲದೆ, ಹೊಂದಾಣಿಕೆಗಳನ್ನು ಪರಿಗಣಿಸಿ ನಿತ್ಯಾ ಮತ್ತು ಸತ್ಯಾರ ಅಢಾವೆ ಪತ್ರಿಕೆಯನ್ನು ಮೇ 1, 2015ರಂದು ತಯಾರಿಸಿರಿ.

## ನಿಮ್ಮ ತಿಳುವಳಿಕೆಯನ್ನು ಪರೀಕ್ಷಿಸುವುದಕ್ಕೆ ಪರಿಶೀಲನಾ ಪಟ್ಟಿ: Checklist to Test Your Understanding

### ನಿಮ್ಮ ತಿಳುವಳಿಕೆಯನ್ನು ಪರೀಕ್ಷಿಸಿಕೊಳ್ಳಿ – I

1. (ಬಿ), 2. (ಸಿ), 3. (ಬಿ), 4. (ಎ)

### ನಿಮ್ಮ ತಿಳುವಳಿಕೆಯನ್ನು ಪರೀಕ್ಷಿಸಿಕೊಳ್ಳಿ – II

1 (ಎ), 2. (ಎ), 3. (ಸಿ), 4. (ಬಿ)

* * *

# ಪಾಲುದಾರಿಕೆ ಸಂಸ್ಥೆಯ ವಿಸರ್ಜನೆ
# Dissolution of Partnership Firm

5

**ಕಲಿಕಾ ಉದ್ದೇಶಗಳು**
**(Learning Objectives)**

ಈ ಅಧ್ಯಾಯವನ್ನು ಅಭ್ಯಸಿಸಿದ ನಂತರ ನೀವು ಏನನ್ನು ತಿಳಿಯುತ್ತೀರೆಂದರೆ:

- ಪಾಲುದಾರಿಕೆ ಸಂಸ್ಥೆ ವಿಸರ್ಜನೆಯ ಅರ್ಥ.
- ಪಾಲುದಾರಿಕೆ ವಿಸರ್ಜನೆ ಮತ್ತು ಪಾಲುದಾರಿಕೆ ಸಂಸ್ಥೆ ವಿಸರ್ಜನೆಯ ನಡುವಿನ ವ್ಯತ್ಯಾಸಗಳು.
- ಪಾಲುದಾರಿಕೆ ಸಂಸ್ಥೆ ವಿಸರ್ಜನೆಯ ವಿವಿಧ ಪ್ರಕಾರಗಳನ್ನು ವಿವರಿಸುವುದು.
- ಪಾಲುದಾರರ ಕ್ಲೈಮುಗಳನ್ನು ಇತ್ಯರ್ಥ ಮಾಡುವುದಕ್ಕೆ ಸಂಬಂಧಿಸಿದ ನಿಯಮಗಳನ್ನು ವಿವರಿಸುವುದು.
- ವಿಲೇವಾರಿ ಖಾತೆ ತಯಾರಿಸುವುದು.

ಪಾಲುದಾರನೊಬ್ಬನ ಪ್ರವೇಶ, ನಿವೃತ್ತಿ ಅಥವಾ ನಿಧನದಿಂದಾಗಿ ಪಾಲುದಾರಿಕೆ ಸಂಸ್ಥೆ ಪುನರ್‌ರಚನೆ ಆಗುತ್ತದೆ ಎಂಬುದನ್ನು ನೀವು ಕಲಿತಿದ್ದೀರಿ. ಅಂತಹ ಸಂದರ್ಭದಲ್ಲಿ ಪ್ರಸ್ತುತ ಪಾಲುದಾರಿಕೆ ವಿಸರ್ಜನೆಯಾಗುತ್ತದೆ. ಪಾಲುದಾರರು ಬಯಸಿದರೆ ಅದೇ ಹೆಸರಿನಡಿಯಲ್ಲಿ ಸಂಸ್ಥೆ ಮುಂದುವರಿಯಬಹುದು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಅದು ಪಾಲುದಾರಿಕೆಯ ವಿಸರ್ಜನೆಗೆ ಕಾರಣವಾಗುತ್ತಯೇ ಹೊರತು ಪಾಲುದಾರಿಕೆ ಸಂಸ್ಥೆ ವಿಸರ್ಜನೆಗೆ ಅಲ್ಲ. ಪಾಲುದಾರಿಕೆ ಕಾಯ್ದೆ 1932ರ ಸೆಕ್ಷನ್ 39ರ ಪ್ರಕಾರ ಸಂಸ್ಥೆಯ ಎಲ್ಲಾ ಪಾಲುದಾರರ ನಡುವಿನ ಪಾಲುದಾರಿಕೆಯ ವಿಸರ್ಜನೆಯನ್ನು ಸಂಸ್ಥೆಯ ವಿಸರ್ಜನೆ ಎಂದು ಕರೆಯುತ್ತಾರೆ. ಅಂದರೆ, ಸಂಸ್ಥೆಯ ಎಲ್ಲಾ ಪಾಲುದಾರರ ನಡುವಿನ ಸಂಬಂಧ ಕಡಿತಗೊಳ್ಳುವುದರ ಮತ್ತು ಕೆಲವೇ ಪಾಲುದಾರರ ನಡುವಿನ ಸಂಬಂಧ ಕಡಿತಗೊಳ್ಳುವುದರ ವ್ಯತ್ಯಾಸವನ್ನು ಕಾಯ್ದೆ ಗುರುತಿಸಿದೆ. ಎಲ್ಲಾ ಪಾಲುದಾರರ ನಡುವಿನ ಸಂಬಂಧ ಕಡಿದು ಹೋಗುವುದಕ್ಕೆ ಪಾಲುದಾರಿಕೆ ಸಂಸ್ಥೆಯ ವಿಸರ್ಜನೆ ಎನ್ನುವರು. ಇದು ಸಂಸ್ಥೆಯ ಅಸ್ತಿತ್ವವನ್ನು ಕೊನೆಗೊಳಿಸುತ್ತದೆ ಮತ್ತು ವಿಸರ್ಜನೆ ನಂತರ, ಸಂಸ್ಥೆಯ ಆಸ್ತಿಗಳನ್ನು ಮಾರುವ, ಸಂಸ್ಥೆಯ ಹೊಣೆಗಾರಿಕೆಗಳನ್ನು ಪಾವತಿಸುವ ಮತ್ತು ಪಾಲುದಾರರ ಕ್ಲೈಮುಗಳನ್ನು ಇತ್ಯರ್ಥಪಡಿಸುವ ಚಟುವಟಿಕೆಗಳನ್ನು ಹೊರತುಪಡಿಸಿ ಇನ್ನಾವುದೇ ವ್ಯವಹಾರ ನಡೆಯುವುದಿಲ್ಲ.

## 5.1 ಪಾಲುದಾರಿಕೆಯ ವಿಸರ್ಜನೆ: Dissolution of Partnership

ಈ ಮೊದಲು ತಿಳಿಸಿರುವಂತೆ ಪಾಲುದಾರಿಕೆ ವಿಸರ್ಜನೆ ಪಾಲುದಾರರ ನಡುವಿನ ಪ್ರಸ್ತುತ ಸಂಬಂಧವನ್ನು ಬದಲಾಯಿಸುತ್ತದೆ. ಆದರೆ ಸಂಸ್ಥೆ ಹಿಂದಿನಂತೆ ತನ್ನ ವ್ಯವಹಾರವನ್ನು ಮುಂದುವರಿಸಬಹುದಾಗಿದೆ. ಪಾಲುದಾರಿಕೆ ವಿಸರ್ಜನೆ ಕೆಳಗಿನ ಯಾವುದಾದರೊಂದು ರೀತಿಯಲ್ಲಿ ಜರುಗಬಹುದಾಗಿದೆ;

1. ಪಾಲುದಾರರ ಪ್ರಸ್ತುತ ಲಾಭ ಹಂಚಿಕೆಯ ಅನುಪಾತದ ಬದಲಾವಣೆ.
2. ಹೊಸ ಪಾಲುದಾರನೊಬ್ಬನ ಪ್ರವೇಶ.
3. ಪಾಲುದಾರನೊಬ್ಬನ ನಿವೃತ್ತಿ.
4. ಪಾಲುದಾರನೊಬ್ಬನ ನಿಧನ.
5. ಪಾಲುದಾರನೊಬ್ಬನ ದಿವಾಳಿತನ.

6. ನಿರ್ದಿಷ್ಟ ಉದ್ದೇಶ ಈಡೇರಿದ್ದರೆ, ಪಾಲುದಾರಿಕೆಯನ್ನು ನಿರ್ದಿಷ್ಟ ಉದ್ದೇಶಕ್ಕೆ ಸ್ಥಾಪಿಸಿದ್ದಾಗ.
7. ಪಾಲುದಾರಿಕೆಯ ಅವಧಿ ಮುಗಿದಾಗ, ಪಾಲುದಾರಿಕೆಯನ್ನು ಒಂದು ನಿರ್ದಿಷ್ಟ ಅವಧಿಗೆ ಸ್ಥಾಪಿಸಿದ್ದರೆ.

## 5.2 ಸಂಸ್ಥೆಯ ವಿಸರ್ಜನೆ: Dissolution of a Firm:

ಪಾಲುದಾರಿಕೆ ಸಂಸ್ಥೆಯ ವಿಸರ್ಜನೆ ನ್ಯಾಯಾಲಯದ ಮಧ್ಯ ಪ್ರವೇಶಿಸುವಿಕೆ ಇಲ್ಲದೆ ಅಥವಾ ಈ ಅಧ್ಯಾಯದಲ್ಲಿ ಮುಂದೆ ತಿಳಿಸಿರುವ ರೀತಿಗಳಲ್ಲಿ ನ್ಯಾಯಾಲಯದ ಆದೇಶದ ಮೇಲೆ ಜರುಗಬಹುದಾಗಿದೆ. ಪಾಲುದಾರಿಕೆ ಸಂಸ್ಥೆಯ ವಿಸರ್ಜನೆ ಪಾಲುದಾರಿಕೆಯ ವಿಸರ್ಜನೆಗೂ ಕಾರಣವಾಗುತ್ತದೆ ಎಂಬುದನ್ನು ಇಲ್ಲಿ ಗಮನಿಸಬಹುದಾಗಿದೆ.

ಪಾಲುದಾರಿಕೆ ಸಂಸ್ಥೆಯ ವಿಸರ್ಜನೆ ಈ ಕೆಳಗಿನ ಯಾವುದೇ ರೀತಿಗಳಲ್ಲಿ ಜರುಗಬಹುದಾಗಿದೆ;

1. ಒಪ್ಪಂದದಿಂದಾಗಿ ವಿಸರ್ಜನೆ: ಪಾಲುದಾರಿಕಾ ಸಂಸ್ಥೆಯನ್ನು :
   (ಎ) ಎಲ್ಲಾ ಪಾಲುದಾರರ ಒಪ್ಪಿಗೆ ಪಡೆದು ಅಥವಾ
   (ಬಿ) ಪಾಲುದಾರರ ನಡುವಿನ ಕರಾರಿಗೆ ಅನುಗುಣವಾಗಿ ವಿಸರ್ಜಿಸಲಾಗುವುದು.
2. ಕಡ್ಡಾಯ ವಿಸರ್ಜನೆ: ಸಂಸ್ಥೆಯನ್ನು ಈ ಕೆಳಗಿನ ಸಂದರ್ಭಗಳಲ್ಲಿ ಕಡ್ಡಾಯವಾಗಿ ವಿಸರ್ಜಿಸಲಾಗುವುದು:
   (ಎ) ಎಲ್ಲಾ ಪಾಲುದಾರರು ಅಥವಾ ಎಲ್ಲಾ ಪಾಲುದಾರರು ಒಬ್ಬನನ್ನು ಬಿಟ್ಟು ದಿವಾಳಿಯಾಗಿ, ಒಪ್ಪಂದಕ್ಕೆ ಸಹಿ ಮಾಡಲು ಅರ್ಹತೆ ಇಲ್ಲದ ಸ್ಥಿತಿಗೆ ತಲುಪಿದಾಗ,
   (ಬಿ) ಸಂಸ್ಥೆಯ ವ್ಯವಹಾರ ಕಾನೂನುಬಾಹಿರವಾದಾಗ,
   (ಸಿ) ಯಾವುದಾದರೊಂದು ಘಟನೆ ಜರುಗಿ, ಪಾಲುದಾರರು ಪಾಲುದಾರಿಕೆಯಲ್ಲಿ ವ್ಯವಹಾರ ನಡೆಸುವುದು ಕಾನೂನುಬಾಹಿರವಾದಾಗ, ಉದಾಹರಣೆಗೆ, ಬೇರೇ ದೇಶದ ನಾಗರೀಕನಾಗಿದ್ದ ಪಾಲುದಾರ, ಭಾರತ ಮತ್ತು ಆ ದೇಶದ ನಡುವೆ ಯುದ್ಧ ಘೋಷಣೆಯಾಗಿ, ಶತೃವಾದಾಗ.
3. ಕೆಲವು ಅನಿಶ್ಚಿತ ಘಟನೆಗಳು ಜರುಗಿದಾಗ: ಅನ್ಯ ಒಪ್ಪಂದ ಇಲ್ಲದಿದ್ದಾಗ ಸಂಸ್ಥೆಯು ಈ ಕೆಳಗಿನ ಘಟನೆಗಳಿಂದಾಗಿ ವಿಸರ್ಜನೆಯಾಗುತ್ತದೆ:
   (ಎ) ನಿರ್ದಿಷ್ಟ ಅವಧಿಗಾಗಿ ಸ್ಥಾಪಿತವಾಗಿದ್ದರೆ, ಆ ಅವಧಿ ಮುಕ್ತಾಯವಾದಾಗ.
   (ಬಿ) ನಿರ್ದಿಷ್ಟ ಉದ್ದೇಶಕ್ಕೆ ಸ್ಥಾಪಿತವಾಗಿದ್ದರೆ, ಆ ಉದ್ದೇಶ ಈಡೇರಿದಾಗ.
   (ಸಿ) ಪಾಲುದಾರನೊಬ್ಬ ಮರಣ ಹೊಂದಿದಾಗ.
   (ಡಿ) ಪಾಲುದಾರನೊಬ್ಬನನ್ನು ದಿವಾಳಿಯೆಂದು ಘೋಷಿಸಿದಾಗ.
4. ನೋಟಿಸಿನ ಮೂಲಕ ವಿಸರ್ಜನೆ: ಇಚ್ಛಾನುಸಾರ ಪಾಲುದಾರಿಕೆಗಳಲ್ಲಿ ಪಾಲುದಾರನೊಬ್ಬ, ಸಂಸ್ಥೆಯನ್ನು ವಿಸರ್ಜಿಸಬೇಕೆಂಬ ತನ್ನ ಅಪೇಕ್ಷೆಯನ್ನು ನೋಟಿಸಿನ ಮೂಲಕ ಇತರ ಪಾಲುದಾರರಿಗೆ ತಿಳಿಸಿದಾಗ ಪಾಲುದಾರಿಕೆ ಸಂಸ್ಥೆಯನ್ನು ವಿಸರ್ಜಿಸಬಹುದಾಗಿದೆ.
5. ನ್ಯಾಯಾಲಯದಿಂದ ವಿಸರ್ಜನೆ: ಪಾಲುದಾರನೊಬ್ಬ ನ್ಯಾಯಾಲಯಕ್ಕೆ ದೂರು ನೀಡಿದಾಗ, ನ್ಯಾಯಾಲಯ ಈ ಕೆಳಗಿನ ಕಾರಣಗಳ ಆಧಾರದ ಮೇಲೆ ಸಂಸ್ಥೆಯನ್ನು ವಿಸರ್ಜಿಸಲು ಅದೇಶ ನೀಡಬಹುದಾಗಿದೆ;
   (ಎ) ಪಾಲುದಾರನೊಬ್ಬ ಮತಿಭ್ರಮಣೆಗೆ ಒಳಗಾದರೆ.
   (ಬಿ) ಪಾಲುದಾರನೊಬ್ಬ ಶಾಶ್ವತವಾಗಿ ಪಾಲುದಾರನಾಗಿ ತನ್ನ ಕರ್ತವ್ಯ ನಿರ್ವಹಿಸಲು ಅಸಮರ್ಥನಾದರೆ.
   (ಸಿ) ಪಾಲುದಾರನೊಬ್ಬನ ಕೆಟ್ಟ ನಡವಳಿಕೆಯಿಂದಾಗಿ ಸಂಸ್ಥೆಯ ವ್ಯವಹಾರಕ್ಕೆ ಧಕ್ಕೆ ಉಂಟಾದರೆ.
   (ಡಿ) ಪಾಲುದಾರನೊಬ್ಬ ಉದ್ದೇಶ ಪೂರ್ವಕವಾಗಿ ಪಾಲುದಾರಿಕೆಯ ಕರಾರನ್ನು ಪದೇ ಪದೇ ಉಲ್ಲಂಘಿಸಿದರೆ.
   (ಇ) ಪಾಲುದಾರನೊಬ್ಬ ಇತರೆ ಪಾಲುದಾರರ ಅನುಮತಿ ಇಲ್ಲದೆ ಸಂಸ್ಥೆಯಲ್ಲಿನ ತನ್ನ ಪಾಲನ್ನು ಅನ್ಯ ವ್ಯಕ್ತಿಗೆ ವರ್ಗಾಯಿಸಿದರೆ.

(ಎಫ್) ಸಂಸ್ಥೆಯ ವ್ಯವಹಾರವನ್ನು ನಷ್ಟದಿಂದಲ್ಲದೆ ನಡೆಸುವುದು ಅಸಾಧ್ಯವಾದರೆ.

(ಜಿ) ಇನ್ನಾವುದೇ ಆಧಾರದ ಮೇಲೆ ಸಂಸ್ಥೆಯನು ವಿಸರ್ಜಿಸುವುದು ನ್ಯಾಯೋಚಿತ ಮತ್ತು ಸೂಕ್ತ ಎಂದು ನ್ಯಾಯಾಲಯ ಪರಿಗಣಿಸಿದರೆ.

**ಪಾಲುದಾರಿಕೆಯ ವಿಸರ್ಜನೆ ಮತ್ತು ಪಾಲುದಾರಿಕೆ ಸಂಸ್ಥೆ ವಿಸರ್ಜನೆ ನಡುವಿನ ವ್ಯತ್ಯಾಸಗಳು.**

| | ಆಧಾರ | ಪಾಲುದಾರಿಕೆ ವಿಸರ್ಜನೆ | ಪಾಲುದಾರಿಕೆ ಸಂಸ್ಥೆ ವಿಸರ್ಜನೆ |
|---|---|---|---|
| 1. | ವ್ಯವಹಾರ ಸ್ಥಗಿತ | ವ್ಯವಹಾರ ಸ್ಥಗಿತವಾಗುವುದಿಲ್ಲ. | ವ್ಯವಹಾರ ಸ್ಥಗಿತವಾಗುತ್ತದೆ. |
| 2. | ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಇತ್ಯರ್ಥ | ಆಸ್ತಿಗಳನ್ನು ಮತ್ತು ಹೊಣೆಗಾರಿಕೆಗಳನ್ನು ಮರುಮೌಲ್ಯಮಾಪನ ಮಾಡಲಾಗುತ್ತದೆ ಮತ್ತು ಹೊಸ ಅಢಾವೆ ಪತ್ರಿಕೆ ತಯಾರಿಸಲಾಗುತ್ತದೆ. | ಆಸ್ತಿಗಳನ್ನು ಮಾರಲಾಗುತ್ತದೆ ಮತ್ತು ಹೊಣೆಗಾರಿಕೆಗಳನ್ನು ಪಾವತಿಸಲಾಗುತ್ತದೆ. |
| 3. | ನ್ಯಾಯಾಲಯದ ಮಧ್ಯ ಪ್ರವೇಶ | ನ್ಯಾಯಾಲಯ ಮಧ್ಯ ಪ್ರವೇಶ ಮಾಡುವುದಿಲ್ಲ ಏಕೆಂದರೆ ಪಾಲುದಾರಿಕೆ ಪರಸ್ಪರ ಒಪ್ಪಂದದಿಂದಾಗಿ ವಿಸರ್ಜನೆಯಾಗುತ್ತದೆ. | ನ್ಯಾಯಾಲಯದ ಮಧ್ಯ ಪ್ರವೇಶದಿಂದ ಸಂಸ್ಥೆಯ ವಿಸರ್ಜನೆ ಆಗಬಹುದು. |
| 4. | ಆರ್ಥಿಕ ಸಂಬಂಧ | ಬದಲಾದ ಸ್ವರೂಪದಲ್ಲಿ ಪಾಲುದಾರರ ನಡುವಿನ ಆರ್ಥಿಕ ಸಂಬಂಧ ಮುಂದುವರೆಯುತ್ತದೆ. | ಪಾಲುದಾರರ ನಡುವಿನ ಆರ್ಥಿಕ ಸಂಬಂಧ ಕೊನೆಗೊಳ್ಳುತ್ತದೆ. |
| 5. | ಪುಸ್ತಕಗಳ ಮುಚ್ಚುವಿಕೆ/ ಕೊನೆಗೊಳಿಸುವಿಕೆ. | ಅಗತ್ಯವಿಲ್ಲ ಏಕೆಂದರೆ ವ್ಯವಹಾರವನ್ನು ಕೊನೆಗೊಳಿಸಿಲ್ಲ. | ಲೆಕ್ಕ ಪುಸ್ತಕಗಳನ್ನು ಕೊನೆಗೊಳಿಸಲಾಗುವುದು. |
| 6. | ಇತರೆ ವಿಸರ್ಜನೆ | ಇದು ಸಂಸ್ಥೆಯ ವಿಸರ್ಜನೆಯನ್ನು ಒಳಗೊಳ್ಳಬಹುದು ಅಥವಾ ಒಳಗೊಳ್ಳದೇ ಇರಬಹುದು. | ಇದು ಅವಶ್ಯಕವಾಗಿ ಪಾಲುದಾರಿಕೆ ವಿಸರ್ಜನೆಯನ್ನು ಒಳಗೊಂಡಿರುತ್ತದೆ. |

**ನಿಮ್ಮ ತಿಳುವಳಿಕೆಯನ್ನು ಪರೀಕ್ಷಿಸಿಕೊಳ್ಳಿರಿ –I : Test Your Understanding -I**

**ಕಾರಣ ನೀಡುವುದರ ಮೂಲಕ ಈ ಕೆಳಕಂಡ ಹೇಳಿಕೆಗಳಲ್ಲಿ ಯಾವುದು ಸರಿ ಅಥವಾ ತಪ್ಪು ತಿಳಿಸಿ:**

1. ಪಾಲುದಾರಿಕೆ ವಿಸರ್ಜನೆ ಪಾಲುದಾರಿಕೆ ಸಂಸ್ಥೆಯ ವಿಸರ್ಜನೆಗಿಂತ ಭಿನ್ನವಾಗಿದೆ.
2. ಪಾಲುದಾರನೊಬ್ಬ ಮರಣ ಹೊಂದಿದಾಗ ಪಾಲುದಾರಿಕೆ ವಿಸರ್ಜನೆಯಾಗುತ್ತದೆ.
3. ಎಲ್ಲಾ ಪಾಲುದಾರರು ಒಪ್ಪಿಗೆ ನೀಡಿದಾಗ ಒಂದು ಸಂಸ್ಥೆ ವಿಸರ್ಜನೆಯಾಗುತ್ತದೆ.
4. ಒಬ್ಬ ಪಾಲುದಾರ ನಿವೃತ್ತಿಯಾಗಲು ನಿರ್ಧರಿಸಿದಾಗ ಒಂದು ಸಂಸ್ಥೆ ಕಡ್ಡಾಯವಾಗಿ ವಿಸರ್ಜನೆಯಾಗುತ್ತದೆ.
5. ಸಂಸ್ಥೆಯ ವಿಸರ್ಜನೆ ಅವಶ್ಯಕವಾಗಿ ಪಾಲುದಾರಿಕೆ ವಿಸರ್ಜನೆಯನ್ನು ಒಳಗೊಂಡಿರುತ್ತದೆ.
6. ಎಲ್ಲಾ ಪಾಲುದಾರರು ಅಥವಾ ಒಬ್ಬನನ್ನು ಬಿಟ್ಟು ಉಳಿದ ಎಲ್ಲಾ ಪಾಲುದಾರರು ದಿವಾಳಿಯಾದರೆ ಸಂಸ್ಥೆಯು ಕಡ್ಡಾಯವಾಗಿ ವಿಸರ್ಜನೆಯಾಗುತ್ತದೆ.
7. ಪಾಲುದಾರನೊಬ್ಬ ಮತಿಭ್ರಮಣೆಗೆ ಒಳಗಾದರೆ ನ್ಯಾಯಾಲಯ ಸಂಸ್ಥೆಯ ವಿಸರ್ಜನೆಗೆ ಆದೇಶ ನೀಡಬಹುದಾಗಿದೆ.
8. ನ್ಯಾಯಾಲಯದ ಮಧ್ಯಪ್ರವೇಶ ಇಲ್ಲದೆ ಪಾಲುದಾರಿಕೆ ವಿಸರ್ಜನೆ ಜರುಗುವುದಿಲ್ಲ.

## 5.3 ಲೆಕ್ಕಗಳನ್ನು ಇತ್ಯರ್ಥಪಡಿಸುವುದು Settlement of Accounts:

ಪಾಲುದಾರಿಕೆ ಸಂಸ್ಥೆ ವಿಸರ್ಜನೆಯಾದರೆ ತನ್ನ ವ್ಯವಹಾರವನ್ನು ನಿಲ್ಲಿಸಬೇಕು ಮತ್ತು ಲೆಕ್ಕಗಳನ್ನು ಚುಕ್ತ ಮಾಡಬೇಕು/ ಇತ್ಯರ್ಥಪಡಿಸಬೇಕು. ಅದಕ್ಕಾಗಿ ಅದು ತನ್ನ ಆಸ್ತಿಗಳನ್ನು ಮಾರಬೇಕು ಮತ್ತು ಹೊಣೆಗಾರಿಕೆಗಳನ್ನು ಪಾವತಿಸಬೇಕು. ಇದಕ್ಕೆ ಸಂಬಂದಿಸಿದಂತೆ ತಿಳಿದುಕೊಳ್ಳಬೇಕಾದ ವಿಚಾರ ಏನೆಂದರೆ, ಪಾಲುದಾರರ ಒಪ್ಪಂದಕ್ಕೆ ಒಳಪಟ್ಟು, ಪಾಲುದಾರಿಕೆ ಕಾಯ್ದೆ 1932ರ ಸೆಕ್ಷನ್ 48ರಲ್ಲಿನ ಈ ಕೆಳಗಿನ ನಿಯಮಗಳು ಅನ್ವಯವಾಗುತ್ತವೆ:

(ಎ) **ನಷ್ಟಗಳ ಪರಿಗಣಿಸುವಿಕೆ:** ನಷ್ಟಗಳನ್ನು, ಬಂಡವಾಳದ ಕೊರತೆಯನ್ನು ಒಳಗೊಂಡಂತೆ, ಈ ಕೆಳಗಿನಂತೆ ಪಾವತಿಸಬೇಕು.

(1) ಮೊದಲು, ಲಾಭಗಳಿಂದ

(2) ನಂತರ, ಪಾಲುದಾರರ ಬಂಡವಾಳಗಳಿಂದ

(3) ಕೊನೆಯದಾಗಿ, ಅವಶ್ಯವೆನಿಸಿದರೆ ಪಾಲುದಾರರಿಂದ ವೈಯಕ್ತಿಕವಾಗಿ ಅವರ ಲಾಭ ಹಂಚಿಕೆಯ ಅನುಪಾತದಂತೆ.

(ಬಿ) **ಆಸ್ತಿಗಳ ಉಪಯೋಗಿಸುವಿಕೆ/ಅನ್ವಯಿಸುವಿಕೆ.:** ಪಾಲುದಾರಿಕೆ ಸಂಸ್ಥೆಯ ಆಸ್ತಿಗಳನ್ನು, ಬಂಡವಾಳದ ಕೊರತೆ ಸರಿಪಡಿಸಲು ಪಾಲುದಾರರು ತಂದ ಹಣ ಸೇರಿ, ಈ ಕೆಳಗಿನಂತೆ ಅನುಕ್ರಮವಾಗಿ ಉಪಯೋಗಿಸಬೇಕು.

(1) ಮೂರನೇ ವ್ಯಕ್ತಿಗಳಿಗೆ ಸಂಸ್ಥೆಯಿಂದ ಕೊಡಬೇಕಾದ ಸಾಲಗಳನ್ನು ಪಾವತಿಸಲು.

(2) ಸಂಸ್ಥೆಯಿಂದ ಪಾಲುದಾರನಿಗೆ ಬಾಕಿ ಇರುವ ಸಾಲದ ಬಾಬ್ತು (ಪ್ರಮಾಣಕ್ಕೆ ಅನುಗುಣವಾಗಿ) ಪಾವತಿಸಲು. (ಪಾಲುದಾರನ ಸಾಲ)

(3) ಪ್ರತೀ ಪಾಲುದಾರನಿಗೆ ಬಂಡವಾಳದ ಬಾಬ್ತು (ಪ್ರಮಾಣಕ್ಕೆ ಅನುಗುಣವಾಗಿ) ಪಾವತಿಸಲು.

(4) ಉಳಿದಿದ್ದನ್ನು ಇದ್ದರೆ, ಪಾಲುದಾರರಿಗೆ ಲಾಭ ಹಂಚಿಕೆಯ ಅನುಪಾತದಂತೆ ಹಂಚಬೇಕು.

ಅಂದರೆ ಪಾಲುದಾರರ ಕೊಡುಗೆ, ಅಗತ್ಯವಿದ್ದಾಗ ಹಾಗು ಆಸ್ತಿಗಳನ್ನು ಮಾರಿದ ಹಣವನ್ನು ಮೊದಲು ಸಂಸ್ಥೆಯ ಹೊರಗಿನ ಹೊಣೆಗಾರಿಕೆಗಳಾದ ಸಾಹುಕಾರರು, ಸಾಲಗಳು, ಬ್ಯಾಂಕು ಮೀರೆಳೆತ, ಕೊಡಬೇಕಾದ ಹುಂಡಿಗಳು ಇತ್ಯಾದಿಗಳನ್ನು ಪಾವತಿಸಲು ಉಪಯೋಗಿಸಬೇಕು. (ಭದ್ರತಾ ಸಾಲಗಳನ್ನು ಭದ್ರತೆ ಇಲ್ಲದಿರುವ ಸಾಲಗಳಿಗಿಂತ ಮೊದಲು ಪಾವತಿಸಬೇಕು ಎಂಬುದನ್ನು ಗಮನಿಸಬೇಕು); ಉಳಿದ ಹಣವನ್ನು ಸಂಸ್ಥೆಗೆ ಪಾಲುದಾರರು ನೀಡಿರುವ ಸಾಲಗಳನ್ನು ಮರುಪಾವತಿಸಲು ಬಳಸಬೇಕು. ಸಾಲಗಳನ್ನು ಪಾವತಿಸಲು ಸಾಕಷ್ಟು ಪ್ರಮಾಣದ ಹಣ ಇಲ್ಲದಿದ್ದರೆ, ಅವುಗಳನ್ನು ಸಾಲದ ಅನುಪಾತದಲ್ಲಿ (Proportionately) ಪಾವತಿಸಬೇಕು ಮತ್ತು ಹೆಚ್ಚುವರಿ ಹಣ ಇದ್ದರೆ ಎಲ್ಲಾ ಲಾಭ ಮತ್ತು ನಷ್ಟಗಳನ್ನು ಹೊಂದಾಣಿಕೆ ಮಾಡಿದ ಮೇಲೆ ಬಂದ ಬಂಡವಾಳ ಖಾತೆಗಳ ಶಿಲ್ಕುಗಳನ್ನು ಚುಕ್ತಾ ಮಾಡಬೇಕು.

**ಖಾಸಗಿ ಸಾಲಗಳು ಮತ್ತು ಸಂಸ್ಥೆಯ ಸಾಲಗಳು:** ಪಾಲುದಾರನಿಗೆ ಸಂಸ್ಥೆಯ ಸಾಲಗಳು ಮತ್ತು ಖಾಸಗಿ ಸಾಲಗಳು ಎರಡೂ ಇದ್ದರೆ, ಸೆಕ್ಷನ್ 49ರಲ್ಲಿ ತಿಳಿಸಿರುವ ಈ ಕೆಳಗಿನ ನಿಯಮಗಳನ್ನು ಅನ್ವಯ ಮಾಡಬೇಕು:

(ಎ) ಮೊದಲು ಸಂಸ್ಥೆಯ ಸ್ವತ್ತನ್ನು, ಸಂಸ್ಥೆಯ ಸಾಲಗಳನ್ನು ಪಾವತಿಸಲು ಬಳಸಬೇಕು ನಂತರ ಉಳಿದ ಹೆಚ್ಚುವರಿ ಹಣವನ್ನು ಪಾಲುದಾರರಿಗೆ ಅವರ ಕ್ಲೈಮುಗಳ ಅನುಸಾರ ಹಂಚಬೇಕು. ಅದನ್ನು ಅವರು ಖಾಸಗಿ ಹೊಣೆಗಾರಿಕೆಗಳನ್ನು ಪಾವತಿಸಲು ಬಳಸಬಹುದಾಗಿದೆ.

(ಬಿ) ಪಾಲುದಾರನ ಖಾಸಗಿ ಸ್ವತ್ತನ್ನು ಮೊದಲು ಅವನ ಖಾಸಗಿ ಸಾಲಗಳನ್ನು ಪಾವತಿಸಲು ಬಳಸಬೇಕು ಮತ್ತು ಸಂಸ್ಥೆಯ ಹೊಣೆಗಾರಿಕೆಗಳು ಸಂಸ್ಥೆಯ ಆಸ್ತಿಗಳಿಗಿಂತ ಅಧಿಕವಾಗಿದ್ದರೆ, ಉಳಿದ ಹೆಚ್ಚುವರಿ ಹಣವನ್ನು ಸಂಸ್ಥೆಯ ಸಾಲಗಳನ್ನು ಪಾವತಿಸಲು ಬಳಸಬೇಕು.

ಇಲ್ಲಿ ನೆನಪಿನಲ್ಲಿಡಬೇಕಾದ ಅಂಶ ಏನೆಂದರೆ ಪಾಲುದಾರನ ಖಾಸಗಿ ಸ್ವತ್ತು ಅವನ ಹೆಂಡತಿ ಮತ್ತು ಮಕ್ಕಳ ವೈಯಕ್ತಿಕ ಸ್ವತ್ತುಗಳನ್ನು ಒಳಗೊಂಡಿರುವುದಿಲ್ಲ. ಅಂದರೆ, ಸಂಸ್ಥೆಯ ಹೊಣೆಗಾರಿಕೆಗಳನ್ನು ಪಾವತಿಸಲು ಸಂಸ್ಥೆಯ ಆಸ್ತಿಗಳು ಸಾಕಾಗದೆ ಇದ್ದಾಗ ಪಾಲುದಾರರು ತಮ್ಮ ನಿವ್ವಳ ಆಸ್ತಿಗಳಿಂದ (ಖಾಸಗಿ ಆಸ್ತಿಗಳು – ಖಾಸಗಿ ಹೊಣೆಗಾರಿಕೆಗಳು) ಹಣ ತರಬೇಕಾಗುತ್ತದೆ.

**ಕೊರತೆಯನ್ನು ತುಂಬಲು ಪಾಲುದಾರನ ಅಸಮರ್ಥತೆ:**

ಪಾಲುದಾರರ ಲೆಕ್ಕಗಳನ್ನು/ಖಾತೆಗಳನ್ನು ಇತ್ಯರ್ಥಪಡಿಸುವಾಗ ಗಮನಿಸಬೇಕಾದ ಇನ್ನೊಂದು ಮುಖ್ಯವಾದ ವಿಚಾರ ಇದೆ. ಅದು ಏನೆಂದರೆ ಪಾಲುದಾರನು ಅವನ ಬಂಡವಾಳ ಖಾತೆಯ ಕೊರತೆಯನ್ನು ಸರಿಪಡಿಸಲು (ಬಂಡವಾಳ ಖಾತೆಯ ಅಂತಿಮ ಖರ್ಚು ಶಿಲ್ಕು), ಅಸಮರ್ಥನಾದರೆ ಅವನನ್ನು/ಅವಳನ್ನು ದಿವಾಳಿ ಎನ್ನಲಾಗುತ್ತದೆ ಮತ್ತು ಅವನಿಂದ/ಅವಳಿಂದ ವಸೂಲಿ ಮಾಡಲಾಗದ ಹಣವನ್ನು ಬಂಡವಾಳ ನಷ್ಟ ಎಂದು ಪರಿಗಣಿಸಬೇಕಾಗುತ್ತದೆ. ಇದಕ್ಕೆ ಸಂಬಂದಿಸಿದಂತೆ ಪಾಲುದಾರರ ನಡುವೆ ಅನ್ಯ ಒಪ್ಪಂದ ಇಲ್ಲದಿದ್ದಾಗ, ಅಂತಹ ಬಂಡವಾಳ ನಷ್ಟವನ್ನು ಉಳಿದ ಸ್ಥಿತಿವಂತ, ಪಾಲುದಾರರು ಗಾರ್ನರ್ Vs ಮುರ್ರೆ (Garner Vs Murray) ಪ್ರಕರಣದಲ್ಲಿ ತಿಳಿಸಿರುವ ನಿಯಮದಂತೆ ಭರಿಸಬೇಕಾಗುತ್ತದೆ. ಆ ನಿಯಮ ಏನೆಂದರೆ ಸ್ಥಿತಿವಂತ ಪಾಲುದಾರರು ಅಂತಹ ನಷ್ಟವನ್ನು ವಿಸರ್ಜನೆಯ ದಿನದಂದು ಇದ್ದಂತೆ ಬಂಡವಾಳಗಳ ಅನುಪಾತದ ಪ್ರಕಾರ ಭರಿಸಬೇಕು. ಆದರೆ ಪಾಲುದಾರಿಕೆ ಸಂಸ್ಥೆಯ ವಿಸರ್ಜನೆ ಸಂದರ್ಭದಲ್ಲಿ ಪಾಲುದಾರನೊಬ್ಬನ ದಿವಾಳಿತನಕ್ಕೆ ಸಂಬಂಧಿಸಿದ ಲೆಕ್ಕದ ಪರಿಗಣನೆಯನ್ನು ಈ ಹಂತದಲ್ಲಿ ತೆಗೆದುಕೊಂಡಿರುವುದಿಲ್ಲ.

## 5.4 ಲೆಕ್ಕಬರಹದ ಪರಿಗಣನೆ Accounting Treatment:

ಪಾಲುದಾರಿಕೆ ಸಂಸ್ಥೆಯನ್ನು ವಿಸರ್ಜಿಸಿದಾಗ ಅದರ ಲೆಕ್ಕ ಪುಸ್ತಕಗಳನ್ನು ಕೊನೆಗೊಳಿಸಬೇಕು ಮತ್ತು ಅದರ ಆಸ್ತಿಗಳನ್ನು ಮಾರಿ, ಹೊಣೆಗಾರಿಕೆಗಳನ್ನು ಪಾವತಿಸಿದ್ದರಿಂದ ಬಂದ ಲಾಭ ಅಥವಾ ನಷ್ಟವನ್ನು ಕಂಡುಹಿಡಿಯಬೇಕು. ಈ ಉದ್ದೇಶದಿಂದ, ವಿಲೇವಾರಿ ಖಾತೆಯನ್ನು ತಯಾರಿಸಿ, ಆಸ್ತಿಗಳನ್ನು ವಿಲೇವಾರಿ ಮಾಡಿ ಮತ್ತು ಹೊಣೆಗಾರಿಕೆಗಳನ್ನು ಪಾವತಿಸಿದ್ದರ ನಿವ್ವಳ ಪರಿಣಾಮ (ಲಾಭ ಅಥವಾ ನಷ್ಟ) ವನ್ನು ಲಾಭ ಹಂಚಿಕೆಯ ಪ್ರಮಾಣದಲ್ಲಿ ಪಾಲುದಾರರ ಬಂಡವಾಳ ಖಾತೆಗಳಿಗೆ ವರ್ಗಾವಣೆ ಮಾಡಲಾಗುತ್ತದೆ. ಆದ್ದರಿಂದ ಎಲ್ಲಾ ಆಸ್ತಿಗಳನ್ನು (ನಗದು, ಬ್ಯಾಂಕ್ ಶಿಲ್ಕು, ಕಲ್ಪಿತ ಆಸ್ತಿಗಳು, ಯಾವುದಾದರು ಇದ್ದರೆ, ಇವುಗಳನ್ನು ಹೊರತುಪಡಿಸಿ) ಮತ್ತು ಎಲ್ಲಾ ಹೊರಗಿನ ಹೊಣೆಗಾರಿಕೆಗಳನ್ನು ಈ ಖಾತೆಗೆ ವರ್ಗಾವಣೆ ಮಾಡಲಾಗುತ್ತದೆ. ಆಸ್ತಿಗಳನ್ನು ಮಾರಿದ್ದು, ಹೊಣೆಗಾರಿಕೆಗಳನ್ನು ಪಾವತಿಸಿದ್ದು ಮತ್ತು ವಿಲೇವಾರಿ ವೆಚ್ಚಗಳನ್ನು ಅದರಲ್ಲಿ ದಾಖಲುಮಾಡಲಾಗುತ್ತದೆ. ಈ ಖಾತೆಯ ಶಿಲ್ಕನ್ನು ವಿಲೇವಾರಿ ಲಾಭ ಅಥವಾ ನಷ್ಟ ಎಂದು ಪರಿಗಣಿಸಿ ಅದನ್ನು ಪಾಲುದಾರರ ಬಂಡವಾಳ ಖಾತೆಗಳಿಗೆ ಲಾಭ ಹಂಚಿಕೆಯ ಅನುಪಾತದಂತೆ ವರ್ಗಾಯಿಸಲಾಗುತ್ತದೆ. (ಚಿತ್ರ 5.1ನ್ನು ನೋಡಿ)

**ಖರ್ಚು** **ವಿಲೇವಾರಿ ಖಾತೆ** **ಜಮಾ**

| ವಿವರಗಳು | ಮೊತ್ತ ₹ | ವಿವರಗಳು | ಮೊತ್ತ ₹ |
|---|---|---|---|
| ಭೂಮಿ ಮತ್ತು ಕಟ್ಟಡ | xxx | ಸಾಹುಕಾರರು | xxx |
| ಸ್ಥಾವರ ಮತ್ತು ಯಂತ್ರಗಳು | xxx | ಕೊಡಬೇಕಾದ ಹುಂಡಿಗಳು | xxx |
| ಪೀಠೋಪಕರಣ ಮತ್ತು ಅಳವಡಿಕೆಗಳು | xxx | ಬ್ಯಾಂಕು ಮೀರೆಳೆತ | xxx |
| ಬರತಕ್ಕ ಹುಂಡಿಗಳು | xxx | ಕೊಡಬೇಕಾದ ವೆಚ್ಚಗಳು | xxx |
| ಸಾಲಗಾರರು | xxx | ಸಂಶಯಾಸ್ಪದ ಸಾಲಗಳಿಗೆ ತೆಗೆದಿರಿಸಿದ್ದು | xxx |
| ನಗದು / ಬ್ಯಾಂಕು (ಹೊಣೆಗಾರಿಕೆಗಳ ಪಾವತಿ) | xxx | ನಗದು / ಬ್ಯಾಂಕು (ಆಸ್ತಿಗಳ ಮಾರಾಟ) | xxx |
| ನಗದು / ಬ್ಯಾಂಕು | xxx | ಪಾಲುದಾರನ ಬಂಡವಾಳ ಖಾತೆ | xxx |
| (ದಾಖಲಿಸದ ಹೊಣೆಗಾರಿಕೆಗಳ ಪಾವತಿ) | xxx | (ಪಾಲುದಾರ ತೆಗೆದುಕೊಂಡಿರುವ ಆಸ್ತಿಗಳು) | |
| ಪಾಲುದಾರನ ಬಂಡವಾಳ ಖಾತೆ (ಪಾಲುದಾರ ವಹಿಸಿಕೊಂಡಿರುವ ಹೊಣೆಗಾರಿಕೆ) | xxx | ನಷ್ಟ (ಪಾಲುದಾರರ ಬಂಡವಾಳ ಖಾತೆಗಳಿಗೆ ವರ್ಗಾವಣೆ ಮಾಡಿದೆ) | xxx |
| ಲಾಭ (ಪಾಲುದಾರರ ಬಂಡವಾಳ ಖಾತೆಗಳಿಗೆ ಲಾಭ ಹಂಚಿಕೆಯ ಅನುಪಾತದಲ್ಲಿ ವರ್ಗಾವಣೆ ಮಾಡಿದೆ) | xxx | | |
| **ಒಟ್ಟು** | **xxx** | **ಒಟ್ಟು** | **xxx** |

**ಚಿತ್ರ 5.1 ವಿಲೇವಾರಿ ಖಾತೆಯ ಮಾದರಿ**

**ನಿದರ್ಶನ – 1**

ಸುಪ್ರಿಯಾ ಮತ್ತು ಮೋನಿಕಾ ಪಾಲುದಾರರಾಗಿದ್ದು 3:2 ಅನುಪಾತದಲ್ಲಿ ಲಾಭ ಹಂಚಿಕೊಳ್ಳುತ್ತಿದ್ದರು. ಅವರ ಅಢಾವೆ ಪತ್ರಿಕೆ ಮಾರ್ಚ್ 31, 2014ರಂದು ಈ ಕೆಳಗಿನಂತೆ ಇದೆ:

**ಸುಪ್ರಿಯಾ ಮತ್ತು ಮೋನಿಕಾ ಅವರ ಮಾರ್ಚ್ 31, 2014ರಂದು ಇದ್ದಂತೆ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | ಮೊತ್ತ ₹ | ಆಸ್ತಿಗಳು | | ಮೊತ್ತ ₹ |
|---|---|---|---|---|
| ಸುಪ್ರಿಯಾಳ ಬಂಡವಾಳ | 32,500 | ನಗದು ಮತ್ತು ಬ್ಯಾಂಕು | | 40,500 |
| ಮೋನಿಕಾಳ ಬಂಡವಾಳ | 11,500 | ದಾಸ್ತಾನು | | 7,500 |
| ಸಾಹುಕಾರರು | 48,000 | ಸಾಲಗಾರರು | 21,500 | |
| ಮೀಸಲು ನಿಧಿ | 13,500 | ಕಳೆ: ಸಂಶಯಾಸ್ಪದ ಸಾಲಗಳಿಗೆ ತೆಗೆದಿರಿಸಿದ್ದು | 500 | 21,000 |
| | | ಸ್ಥಿರ ಆಸ್ತಿಗಳು | | 36,500 |
| | **1,05,500** | | | **1,05,500** |

ಸಂಸ್ಥೆಯನ್ನು ಮಾರ್ಚ್ 31, 2014ರಂದು ವಿಸರ್ಜಿಸಲಾಯಿತು. ಸಂಸ್ಥೆಯ ಪುಸ್ತಕಗಳನ್ನು ಈ ಕೆಳಕಂಡ ಮಾಹಿತಿಯಿಂದ ಕೊನೆಗೊಳಿಸಿರಿ:

1. ಸಾಲಗಾರರನ್ನು 5% ಸೋಡಿಗೆ ವಿಲೇವಾರಿ ಮಾಡಲಾಯಿತು.
2. ದಾಸ್ತಾನು ₹7000ಕ್ಕೆ ವಿಲೇವಾರಿ ಆಗಿದೆ.
3. ಸ್ಥಿರ ಆಸ್ತಿಗಳು ₹42,000ಕ್ಕೆ ವಿಲೇವಾರಿ ಆಗಿದೆ.
4. ವಿಲೇವಾರಿ ವೆಚ್ಚಗಳು ₹1500
5. ಸಾಹುಕಾರರಿಗೆ ಪೂರ್ಣ ಹಣ ಪಾವತಿ ಮಾಡಿದೆ.

ಅವಶ್ಯಕ ಖಾತೆಗಳನ್ನು ತಯಾರಿಸಿ

**ಪರಿಹಾರ:**

**ಸುಪ್ರಿಯಾ ಮತ್ತು ಮೋನಿಕಾರವರ ಪುಸ್ತಕಗಳು**

**ಖರ್ಚು** **ವಿಲೇವಾರಿ ಖಾತೆ** **ಜಮಾ**

| ವಿವರಗಳು | | ಮೊತ್ತ ₹ | ವಿವರಗಳು | | ಮೊತ್ತ ₹ |
|---|---|---|---|---|---|
| ಆಸ್ತಿಗಳ ವರ್ಗಾವಣೆ: | | | ಸಂಶಯಾಸ್ಪದ ಸಾಲಗಳಿಗೆ ತೆಗೆದಿರಿಸಿದ್ದು | | 500 |
| ದಾಸ್ತಾನು | | 7,500 | ಸಾಹುಕಾರರು | | 48,000 |
| ಸಾಲಗಾರರು | | 21,500 | ಬ್ಯಾಂಕು | | |
| ಸ್ಥಿರ ಆಸ್ತಿಗಳು | | 36,500 | ಸಾಲಗಾರರು | 20,425 | |
| ಬ್ಯಾಂಕು | | | ದಾಸ್ತಾನು | 7,000 | |
| ಸಾಹುಕಾರರು | | 48,000 | ಸ್ಥಿರ ಆಸ್ತಿಗಳು | 42,000 | 69,425 |
| ವಿಲೇವಾರಿ ವೆಚ್ಚಗಳು | | 1,500 | | | |
| ಲಾಭ ವರ್ಗಾಯಿಸಿದೆ: | | | | | |
| ಸುಪ್ರಿಯಾ ಬಂಡವಾಳ | 1,755 | | | | |
| ಮೋನಿಕಾ ಬಂಡವಾಳ | 1,170 | 2,925 | | | |
| | | **1,17,925** | | | **1,17,925** |

ಖರ್ಚು ಪಾಲುದಾರರ ಬಂಡವಾಳ ಖಾತೆಗಳು ಜಮಾ

| ದಿನಾಂಕ | ವಿವರಗಳು | ರೋ. ಪಾ | ಸುಪ್ರಿಯಾ ₹ | ಮೋನಿಕಾ ₹ | ದಿನಾಂಕ | ವಿವರಗಳು | ರೋ. ಪಾ | ಸುಪ್ರಿಯಾ ₹ | ಮೋನಿಕಾ ₹ |
|---|---|---|---|---|---|---|---|---|---|
| | ಬ್ಯಾಂಕು | | 42,355 | 18,070 | | ಹಿಂದಿನಿಂದ ತಂದ ಶಿಲ್ಕು | | 32,500 | 11,500 |
| | | | | | | ಮೀಸಲು ನಿಧಿ | | 8,100 | 5,400 |
| | | | | | | ವಿಲೇವಾರಿ(ಲಾಭ) | | 1,755 | 1,170 |
| | | | **42,355** | **18,070** | | | | **42,355** | **18.070** |

ಖರ್ಚು ನಗದು ಮತ್ತು ಬ್ಯಾಂಕು ಖಾತೆ ಜಮಾ

| ದಿನಾಂಕ | ವಿವರಗಳು | ರೋ. ಪಾ | ಮೊತ್ತ ₹ | ದಿನಾಂಕ | ವಿವರಗಳು | ರೋ. ಪಾ | ಮೊತ್ತ ₹ |
|---|---|---|---|---|---|---|---|
| | ಹಿಂದಿನಿಂದ ತಂದ ಶಿಲ್ಕು | | 40,500 | | ವಿಲೇವಾರಿ | | 48,000 |
| | ವಿಲೇವಾರಿ | | 69,425 | | ವಿಲೇವಾರಿ | | 1,500 |
| | | | | | ಸುಪ್ರಿಯಾಳ ಬಂಡವಾಳ | | 42,355 |
| | | | | | ಮೋನಿಕಾಳ ಬಂಡವಾಳ | | 18,070 |
| | | | **1,09,925** | | | | **1,09,925** |

### 5.4.1 ರೋಜು ದಾಖಲೆಗಳು:

1. **ಆಸ್ತಿಗಳನ್ನು ವರ್ಗಾವಣೆ ಮಾಡಲು:** ನಗದು, ಬ್ಯಾಂಕು ಮತ್ತು ಕಲ್ಪಿತ ಆಸ್ತಿಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಆಸ್ತಿಗಳ ಖಾತೆಗಳನ್ನು ಅವುಗಳ ಪುಸ್ತಕ ಮೌಲ್ಯಗಳಲ್ಲಿ ವಿಲೇವಾರಿ ಖಾತೆಯ ಖರ್ಚಿನ ಬದಿಗೆ ವರ್ಗಾವಣೆ ಮಾಡುವ ಮೂಲಕ ಕೊನೆಗೊಳಿಸಬೇಕು. ಸಾಲಗಾರರನ್ನು ಅವರ ಒಟ್ಟು ಮೌಲ್ಯದಲ್ಲಿ ವರ್ಗಾವಣೆ ಮಾಡಬೇಕು ಮತ್ತು ಸಂಶಯಾಸ್ಪದ ಸಾಲಗಳಿಗೆ ತೆಗೆದಿರಿಸಿದ್ದನ್ನು ಹೊಣೆಗಾರಿಕೆಗಳೊಂದಿಗೆ ವಿಲೇವಾರಿ ಖಾತೆಯ ಜಮಾ ಬದಿಗೆ ವರ್ಗಾವಣೆ ಮಾಡಬೇಕು, ಎಂಬುದನ್ನು ನೆನಪಿಡಬೇಕು. ಸವಕಳಿಗಾಗಿ ತೆಗೆದಿರಿಸಿದ ಖಾತೆಯನ್ನು ನಿರ್ವಹಣೆ ಮಾಡಿದ್ದಾಗ, ಸ್ಥಿರ ಆಸ್ತಿಗಳಿಗೂ ಇದನ್ನೇ ಅನ್ವಯ ಮಾಡಲಾಗುತ್ತದೆ.

   ವಿಲೇವಾರಿ ಖಾತೆ – – – – ಖರ್ಚು

   ಆಸ್ತಿಗಳ (ವ್ಯಕ್ತಿಗತ) ಖಾತೆಗೆ

2. **ಹೊಣೆಗಾರಿಕೆಗಳನ್ನು ವರ್ಗಾವಣೆ ಮಾಡಲು:** ಮೀಸಲುಗಳು ಒಳಗೊಂಡಂತೆ, ಎಲ್ಲಾ ಹೊರಗಿನ ಹೊಣೆಗಾರಿಕೆಗಳ ಖಾತೆಗಳನ್ನು ವಿಲೇವಾರಿ ಖಾತೆಯ ಜಮಾ ಬದಿಗೆ ವರ್ಗಾವಣೆ ಮಾಡುವ ಮೂಲಕ ಮುಕ್ತಾಯ ಮಾಡಲಾಗುತ್ತದೆ:

   ಹೊಣೆಗಾರಿಕೆಗಳ (ವ್ಯಕ್ತಿಗತ) ಖಾತೆ – – – – ಖರ್ಚು

   ವಿಲೇವಾರಿ ಖಾತೆಗೆ

3. **ಆಸ್ತಿಗಳನ್ನು ಮಾರಾಟ ಮಾಡಲು:**

   ಬ್ಯಾಂಕು ಖಾತೆ – – – – ಖರ್ಚು

   ವಿಲೇವಾರಿ ಖಾತೆಗೆ

4. **ಪಾಲುದಾರನೊಬ್ಬ ಆಸ್ತಿಯನ್ನು ತೆಗೆದುಕೊಂಡರೆ:**

   ಪಾಲುದಾರನ ಬಂಡವಾಳ ಖಾತೆ – – – – ಖರ್ಚು

   ವಿಲೇವಾರಿ ಖಾತೆಗೆ

**5. ಹೊಣೆಗಾರಿಕೆಗಳನ್ನು ಪಾವತಿ ಮಾಡಲು:**

| | | |
|---|---|---|
| ವಿಲೇವಾರಿ ಖಾತೆ | – – – – | ಖರ್ಚು |
| ಬ್ಯಾಂಕು ಖಾತೆಗೆ | | |

**6. ಪಾಲುದಾರನು ಒಂದು ಹೊಣೆಗಾರಿಕೆಯನ್ನು ವಹಿಸಿಕೊಂಡಾಗ:**

| | | |
|---|---|---|
| ವಿಲೇವಾರಿ ಖಾತೆ | – – – – | ಖರ್ಚು |
| ಪಾಲುದಾರನ ಬಂಡವಾಳ ಖಾತೆಗೆ | | |

**7. ಆಸ್ತಿಗಳನ್ನು ವರ್ಗಾವಣೆ ಮಾಡುವ ಮೂಲಕ ಸಾಹುಕಾರರ ಖಾತೆಯನ್ನು ಇತ್ಯರ್ಥ ಮಾಡಲು:** ಒಬ್ಬ ಸಾಹುಕಾರನು ತನ್ನ ಖಾತೆಯನ್ನು ಸಂಪೂರ್ಣ ಇತ್ಯರ್ಥ ಪಡಿಸಲು ಆಸ್ತಿಯೊಂದನ್ನು ತೆಗೆದುಕೊಳ್ಳಲು ಒಪ್ಪಿದಾಗ ರೋಜು ದಾಖಲೆ ನೀಡಬೇಕಾದ ಅಗತ್ಯ ಇಲ್ಲ. ಆದರೆ ಅವನ ಖಾತೆಯ ಭಾಗಶ: ಇತ್ಯರ್ಥಕ್ಕೆ ಆಸ್ತಿಯೊಂದನ್ನು ಒಪ್ಪಿದರೆ, ನಗದು ಪಾವತಿ ಮಾಡಿದ್ದಕ್ಕೆ ಮಾತ್ರ ರೋಜು ದಾಖಲೆ ನೀಡಬೇಕು. ಉದಾ: ಸಾಹುಕಾರನೊಬ್ಬನಿಗೆ ₹10,000 ನೀಡಬೇಕಾಗಿದೆ, ಅವನು ₹8,000 ಬೆಲೆಯ ಕಛೇರಿ ಉಪಕರಣ ಪಡೆಯಲು ಒಪ್ಪಿದರೆ ₹2,000 ನಗದು ಪಾವತಿ ಮಾಡಲಾಗುತ್ತದೆ. ₹2,000 ನಗದು ಪಾವತಿಸಿದ್ದಕ್ಕೆ ಈ ಕೆಳಗಿನ ರೋಜು ದಾಖಲೆ ಮಾಡಲಾಗುತ್ತದೆ.

| | | |
|---|---|---|
| ವಿಲೇವಾರಿ ಖಾತೆ | – – – – | ಖರ್ಚು |
| ಬ್ಯಾಂಕು ಖಾತೆಗೆ | | |

ಆದರೆ, ಸಾಹುಕಾರನೊಬ್ಬ ಅವನಿಗೆ ಕೊಡಬೇಕಾಗಿರುವ ಹಣಕ್ಕಿಂತ ಅಧಿಕ ಮೌಲ್ಯದ ಆಸ್ತಿಯೊಂದನ್ನು ಪಡೆಯಲು ಒಪ್ಪಿದರೆ, ಅವನು ವ್ಯತ್ಯಾಸದ ಹಣವನ್ನು ಸಂಸ್ಥೆಗೆ ಕೊಡಬೇಕಾಗುತ್ತದೆ, ಅದಕ್ಕೆ ಸಂಬಂದಿಸಿದಂತೆ ನೀಡಲಾಗುವ ರೋಜು ದಾಖಲೆ ಈ ಕೆಳಗಿನಂತಿದೆ.

| | | |
|---|---|---|
| ಬ್ಯಾಂಕುಖಾತೆ | – – – – | ಖರ್ಚು |
| ವಿಲೇವಾರಿ ಖಾತೆಗೆ | | |

**8. ವಿಲೇವಾರಿ ವೆಚ್ಚವನ್ನು ಪಾವತಿ ಮಾಡಲು:**

(ಎ) ಆಸ್ತಿಗಳನ್ನು ವಿಲೇವಾರಿ ಮಾಡಿ ಹೊಣೆಗಾರಿಕೆಗಳನ್ನು ಪಾವತಿ ಮಾಡುವ ಪ್ರಕ್ರಿಯೆಯಲ್ಲಿ ಸಂಸ್ಥೆ ಕೆಲವು ವೆಚ್ಚಗಳನ್ನು ಭರಿಸಿದಾಗ ಮತ್ತು ಪಾವತಿಸಿದಾಗ:

| | | |
|---|---|---|
| ವಿಲೇವಾರಿ ಖಾತೆ | – – – – | ಖರ್ಚು |
| ಬ್ಯಾಂಕು ಖಾತೆಗೆ | | |

(ಬಿ) ಸಂಸ್ಥೆಯ ಪರವಾಗಿ ಪಾಲುದಾರನು ವಿಲೇವಾರಿ ವೆಚ್ಚಗಳನ್ನು ಪಾವತಿಸಿದಾಗ:

| | | |
|---|---|---|
| ವಿಲೇವಾರಿ ಖಾತೆ | – – – – | ಖರ್ಚು |
| ಪಾಲುದಾರನ ಬಂಡವಾಳ ಖಾತೆಗೆ | | |

(ಸಿ) ಸಂಭಾವನೆಗಾಗಿ ಪಾಲುದಾರನು ವಿಸರ್ಜನೆ ಕಾರ್ಯ ಕೈಗೊಳ್ಳಲು ಒಪ್ಪಿ ವಿಲೇವಾರಿ ವೆಚ್ಚಗಳನ್ನು ಭರಿಸಿದಾಗ:

1. ವಿಲೇವಾರಿ ವೆಚ್ಚಗಳನ್ನು ಸಂಸ್ಥೆ ಪಾವತಿಸಿದರೆ:

| | | |
|---|---|---|
| ಪಾಲುದಾರನ ಬಂಡವಾಳ ಖಾತೆ | – – – – | ಖರ್ಚು |
| ಬ್ಯಾಂಕು ಖಾತೆಗೆ | | |

2. ಸ್ವತ: ಪಾಲುದಾರನೇ ವಿಲೇವಾರಿ ವೆಚ್ಚಗಳನ್ನು ಪಾವತಿಸಿದರೆ, ರೋಜು ದಾಖಲೆಯ ಅಗತ್ಯ ಇಲ್ಲ.
3. ಪಾಲುದಾರನಿಗೆ ನೀಡಬೇಕಾಗಿರುವ ನಿಗಧಿತ ವೇತನಕ್ಕಾಗಿ:

| | | |
|---|---|---|
| ವಿಲೇವಾರಿ ಖಾತೆ | – – – – | ಖರ್ಚು |
| ಪಾಲುದಾರನ ಬಂಡವಾಳ ಖಾತೆಗೆ | | |

**9. ದಾಖಲಿಸದ ಆಸ್ತಿಗಳನ್ನು ಕೀರ್ತಿ ಮೌಲ್ಯ ಸೇರಿದಂತೆ, ಯಾವುದಾದರೂ ಇದ್ದರೆ, ವಿಲೇವಾರಿ ಮಾಡಿದಾಗ:**

ಬ್ಯಾಂಕು ಖಾತೆ – – – – ಖರ್ಚು

ವಿಲೇವಾರಿ ಖಾತೆಗೆ.

10. ಯಾವುದಾದರು ದಾಖಲಿಸದ ಹೊಣೆಗಾರಿಕೆಗಳನ್ನು ಇತ್ಯರ್ಥ ಮಾಡಿದ್ದಕ್ಕೆ:

ವಿಲೇವಾರಿ ಖಾತೆ – – – – ಖರ್ಚು

ಬ್ಯಾಂಕು ಖಾತೆಗೆ

**11. ವಿಲೇವಾರಿಯಿಂದ ಬಂದ ಲಾಭ ಅಥವಾ ನಷ್ಟ ವರ್ಗಾವಣೆ ಮಾಡಿದಕ್ಕೆ:**

(ಎ) ವಿಲೇವಾರಿಯಿಂದ ಲಾಭ ಬಂದಾಗ:

ವಿಲೇವಾರಿ ಖಾತೆ – – – – ಖರ್ಚು

ಪಾಲುದಾರರ ಬಂಡವಾಳ (ವ್ಯಕ್ತಿಗತ) ಖಾತೆಗೆ

(ಬಿ) ವಿಲೇವಾರಿಯಿಂದ ನಷ್ಟವಾಗಿದ್ದರೆ:

ಪಾಲುದಾರರ ಬಂಡವಾಳ (ವ್ಯಕ್ತಿಗತ) ಖಾತೆ – – – – ಖರ್ಚು

ವಿಲೇವಾರಿ ಖಾತೆಗೆ

**12. ಮೀಸಲು ನಿಧಿ ಅಥವಾ ಸಾಮಾನ್ಯ ಮೀಸಲು ರೂಪಗಳಲ್ಲಿ ಸಂಚಯಗೊಂಡ ಲಾಭಗಳನ್ನು ವರ್ಗಾವಣೆ ಮಾಡಿದ್ದಕ್ಕೆ:**

ಮೀಸಲು ನಿಧಿ/ಸಾಮಾನ್ಯ ಮೀಸಲು ಖಾತೆ – – – – ಖರ್ಚು

ಪಾಲುದಾರರ ಬಂಡವಾಳ (ವ್ಯಕ್ತಿಗತ) ಖಾತೆಗೆ

**13. ಕಲ್ಪಿತ ಆಸ್ತಿಗಳು ಯಾವುದಾದರು ಇದ್ದರೆ, ಪಾಲುದಾರರ ಬಂಡವಾಳ ಖಾತೆಗಳಿಗೆ ಲಾಭ ಹಂಚಿಕೆಯ ಅನುಪಾತದಲ್ಲಿ ವರ್ಗಾವಣೆ ಮಾಡಿದ್ದಕ್ಕೆ:**

ಪಾಲುದಾರರ ಬಂಡವಾಳ ಖಾತೆ (ವ್ಯಕ್ತಿಗತ) – – – – ಖರ್ಚು

ಕಲ್ಪಿತ ಆಸ್ತಿಗಳ ಖಾತೆಗೆ

**14. ಪಾಲುದಾರರಿಗೆ ಕೊಡಬೇಕಾಗಿರುವ ಸಾಲಗಳನ್ನು ಪಾವತಿ ಮಾಡಲು:**

ಪಾಲುದಾರನ ಸಾಲದ ಖಾತೆ – – – – ಖರ್ಚು

ಬ್ಯಾಂಕು ಖಾತೆಗೆ

**15. ಪಾಲುದಾರರ ಖಾತೆಗಳನ್ನು ಇತ್ಯರ್ಥಪಡಿಸಲು:** ಪಾಲುದಾರನ ಖಾತೆ ಖರ್ಚಿನ ಶಿಲ್ಕು ತೋರಿಸಿದರೆ, ಅವನು ಅಗತ್ಯ ನಗದನ್ನು ತರಬೇಕಾಗುತ್ತದೆ, ಅದಕ್ಕೆ ನೀಡಬೇಕಾಗಿರುವ ರೋಜು ದಾಖಲೆ:

ಬ್ಯಾಂಕು ಖಾತೆ – – – – ಖರ್ಚು

ಪಾಲುದಾರನ ಬಂಡವಾಳ ಖಾತೆಗೆ

ಯಾವ ಪಾಲುದಾರರ ಬಂಡವಾಳ ಖಾತೆ ಜಮಾ ಶಿಲ್ಕು ತೋರಿಸುತ್ತದೆ, ಅವರಿಗೆ ಶಿಲ್ಕನ್ನು ಪಾವತಿಸಲಾಗುತ್ತದೆ ಮತ್ತು ಕೆಳಗಿನ ರೋಜು ದಾಖಲೆಯನ್ನು ಮಾಡಬೇಕಾಗುತ್ತದೆ:

ಪಾಲುದಾರರ ಬಂಡವಾಳ ಖಾತೆಗಳು (ವ್ಯಕ್ತಿಗತ) – – – – ಖರ್ಚು

ಬ್ಯಾಂಕು ಖಾತೆಗೆ

ಅಂತಿಮವಾಗಿ ಪಾಲುದಾರರಿಗೆ ಕೊಡಬೇಕಾಗಿರುವ ಒಟ್ಟು ಮೊತ್ತ, ನಗದು ಮತ್ತು ಬ್ಯಾಂಕು ಖಾತೆಗಳಲ್ಲಿರುವ ಮೊತ್ತಕ್ಕೆ ಸಮನಾಗಿರಬೇಕು ಎಂಬುದನ್ನು ಇಲ್ಲಿ ಗಮನಿಸಬಹುದಾಗಿದೆ. ಇದರಿಂದಾಗಿ, ಸಂಸ್ಥೆಯ ಎಲ್ಲಾ ಖಾತೆಗಳು ವಿಸರ್ಜನೆಯ ಸಂದರ್ಭದಲ್ಲಿ ಮುಕ್ತಾಯವಾಗುತ್ತವೆ.

**ನಿಮ್ಮ ತಿಳುವಳಿಕೆಯನ್ನು ಪರೀಕ್ಷಿಸಿಕೊಳ್ಳಿರಿ –II Test Your Understanding -II**

**ಸರಿಯಾದ ಉತ್ತರಕ್ಕೆ ಗುರುತು (✓) ಹಾಕಿ:**

1. ಸಂಸ್ಥೆಯು ವಿಸರ್ಜನೆಯಾದಾಗ, ಬ್ಯಾಂಕು ಮೀರೆಳೆತವನ್ನು ಈ ಖಾತೆಗೆ ವರ್ಗಾವಣೆ ಮಾಡಲಾಗುತ್ತದೆ:
   (ಎ) ನಗದು ಖಾತೆ (ಬಿ) ಬ್ಯಾಂಕು ಖಾತೆ (ಸಿ) ವಿಲೇವಾರಿ ಖಾತೆ
2. ಸಂಸ್ಥೆಯು ವಿಸರ್ಜನೆಯಾದಾಗ ಪಾಲುದಾರನ ಸಾಲದ ಖಾತೆಯನ್ನು ಈ ಖಾತೆಗೆ ವರ್ಗಾವಣೆ ಮಾಡಲಾಗುತ್ತದೆ:
   (ಎ) ವಿಲೇವಾರಿ ಖಾತೆ (ಬಿ) ಪಾಲುದಾರನ ಬಂಡವಾಳ ಖಾತೆ
   (ಸಿ) ಪಾಲುದಾರನ ಚಾಲ್ತಿ ಖಾತೆ (ಡಿ) ಮೇಲಿನ ಯಾವುದೂ ಅಲ್ಲ
3. ಹೊಣೆಗಾರಿಕೆಗಳಾದ ಸಾಹುಕಾರರು ಮತ್ತು ಕೊಡಬೇಕಾದ ಹುಂಡಿಗಳು ಇತ್ಯಾದಿಗಳನ್ನು ವಿಲೇವಾರಿ ಖಾತೆಗೆ ವರ್ಗಾವಣೆ ಮಾಡಿದ ಮೇಲೆ, ಅವುಗಳ ಪಾವತಿಗೆ ಸಂಬಂಧಿಸಿದಂತೆ ಯಾವುದೇ ಮಾಹಿತಿ ಇಲ್ಲದಿದ್ದಾಗ, ಅಂತಹ ಹೊಣೆಗಾರಿಕೆಗಳನ್ನು ಈ ರೀತಿ ಪರಿಗಣಿಸಬಹುದು:
   (ಎ) ಪಾವತಿ ಮಾಡಿಲ್ಲ (ಬಿ) ಪೂರ್ತಿ ಪಾವತಿ ಮಾಡಿದೆ.
   (ಸಿ) ಭಾಗಶ: ಪಾವತಿಸಿದೆ. (ಡಿ) ಮೇಲಿನ ಯಾವುದೂ ಅಲ್ಲ
4. ಪಾಲುದಾರನ ಪರವಾಗಿ ಸಂಸ್ಥೆಯು ವಿಲೇವಾರಿ ವೆಚ್ಚಗಳನ್ನು ಪಾವತಿಸಿದಾಗ ಅಂತಹ ಖರ್ಚುಗಳನ್ನು ಈ ಖಾತೆಗೆ ಖರ್ಚು ಹಾಕಲಾಗುವುದು:
   (ಎ) ವಿಲೇವಾರಿ ಖಾತೆ (ಬಿ) ಪಾಲುದಾರನ ಬಂಡವಾಳ ಖಾತೆ
   (ಸಿ) ಪಾಲುದಾರನ ಸಾಲದ ಖಾತೆ (ಡಿ) ಮೇಲಿನ ಯಾವುದೂ ಅಲ್ಲ
5. ದಾಖಲಿಸದ ಆಸ್ತಿಗಳನ್ನು ಪಾಲುದಾರನೊಬ್ಬ ತೆಗೆದುಕೊಂಡಾಗ, ಈ ಖಾತೆಯಲ್ಲಿ ತೋರಿಸಲಾಗುವುದು:
   (ಎ) ವಿಲೇವಾರಿ ಖಾತೆಯ ಖರ್ಚಿನ ಬದಿ (ಬಿ) ಬ್ಯಾಂಕು ಖಾತೆಯ ಖರ್ಚಿನ ಬದಿ
   (ಸಿ) ವಿಲೇವಾರಿ ಖಾತೆಯ ಜಮಾ ಬದಿ (ಡಿ) ಬ್ಯಾಂಕು ಖಾತೆಯ ಜಮಾ ಬದಿ
6. ದಾಖಲಿಸದ ಹೊಣೆಗಾರಿಕೆಗಳನ್ನು ಪಾವತಿಸಿದಾಗ, ಇಲ್ಲಿ ತೋರಿಸಲಾಗುವುದು:
   (ಎ) ವಿಲೇವಾರಿ ಖಾತೆಯ ಖರ್ಚಿನ ಬದಿ (ಬಿ) ಬ್ಯಾಂಕು ಖಾತೆಯ ಖರ್ಚಿನ ಬದಿ
   (ಸಿ) ವಿಲೇವಾರಿ ಖಾತೆಯ ಜಮಾ ಬದಿ (ಡಿ) ಬ್ಯಾಂಕು ಖಾತೆಯ ಜಮಾ ಬದಿ
7. ಸಂಚಿತಗೊಂಡ ಲಾಭಗಳನ್ನು ಮತ್ತು ಮೀಸಲುಗಳನ್ನು ಈ ಖಾತೆಗೆ ವರ್ಗಾವಣೆ ಮಾಡಲಾಗುವುದು:
   (ಎ) ವಿಲೇವಾರಿ ಖಾತೆ (ಬಿ) ಪಾಲುದಾರರ ಬಂಡವಾಳ ಖಾತೆಗಳು
   (ಸಿ) ಬ್ಯಾಂಕು ಖಾತೆ (ಡಿ) ಮೇಲಿನ ಯಾವುದೂ ಅಲ್ಲ
8. ಸಂಸ್ಥೆಯು ವಿಸರ್ಜನೆಯಾದಾಗ, ಪಾಲುದಾರರ ಬಂಡವಾಳ ಖಾತೆಗಳನ್ನು ಈ ಖಾತೆಯ ಮೂಲಕ ಮುಕ್ತಾಯಗೊಳಿಸಲಾಗುವುದು:
   (ಎ) ವಿಲೇವಾರಿ ಖಾತೆ (ಬಿ) ಸ್ವಂತ ವೆಚ್ಚದ ಖಾತೆ
   (ಸಿ) ಬ್ಯಾಂಕು ಖಾತೆ (ಡಿ) ಸಾಲದ ಖಾತೆ

**ನಿದರ್ಶನ – 2**

ಸೀತಾ, ರೀಟಾ ಮತ್ತು ಮೀಟಾ ಅವರು 2:2:1 ಅನುಪಾತದಲ್ಲಿ ಲಾಭ ಮತ್ತು ನಷ್ಟ ಹಂಚಿಕೊಳ್ಳುವ ಪಾಲುದಾರರಾಗಿದ್ದರು. ಮಾರ್ಚ್ 31, 2015ರಂದು ಇದ್ದಂತೆ ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ:

**ಮಾರ್ಚ್ 31, 2015ರಂದು ಇದ್ದಂತೆ ಸೀತಾ, ರೀಟಾ ಮತ್ತು ಮೀಟಾ ಅವರ ಅಢಾವೆ ಪತ್ರಿಕೆ.**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|---|
| ಮೀಸಲು ನಿಧಿ | | 2,500 | ಬ್ಯಾಂಕಿನಲ್ಲಿ ನಗದು | 2,500 |
| ಸಾಹುಕಾರರು | | 2,000 | ದಾಸ್ತಾನು | 2,500 |
| ಬಂಡವಾಳಗಳು: | | | ಪೀಠೋಪಕರಣ | 1,000 |
| ಸೀತಾ | 5,000 | | ಸಾಲಗಾರರು | 2,000 |
| ರೀಟಾ | 2,000 | | ಸ್ಥಾವರ ಮತ್ತು ಯಂತ್ರಗಳು | 4,500 |
| ಮೀಟಾ | 1,000 | 8,000 | | |
| | | **2,500** | | **12,500** |

ವ್ಯವಹಾರವನ್ನು ಸ್ಥಗಿತಗೊಳಿಸಲು ಅವರು ನಿರ್ಧರಿಸಿದರು. ವಿಲೇವಾರಿಯಿಂದ ಈ ಕೆಳಗಿನಂತೆ ಹಣ ಬಂದಿದೆ;

ಸ್ಥಾವರ ಮತ್ತು ಯಂತ್ರಗಳು ₹4250, ದಾಸ್ತಾನು ₹3,500, ಸಾಲಗಾರರು ₹1,850, ಪೀಠೋಪಕರಣ ₹750. ಎಲ್ಲಾ ವಿಲೇವಾರಿ ವೆಚ್ಚಗಳನ್ನು ಭರಿಸಲು ಸೀತಾ ಒಪ್ಪಿದರು. ಸೀತಾ ಅವರ ಈ ಸೇವೆಗೆ ₹60 ಪಾವತಿಸಿದೆ. ನೈಜ ವಿಲೇವಾರಿ ವೆಚ್ಚಗಳು ₹450. ಸಾಹುಕಾರರಿಗೆ 2% ಕಡಿಮೆ ಪಾವತಿಸಿದೆ. ₹250ರ ದಾಖಲಿಸದ ಒಂದು ಆಸ್ತಿ ಇದೆ, ಅದನ್ನು ರೀಟಾ ಅವರು ₹200ಗಳಿಗೆ ತೆಗೆದುಕೊಂಡಿದ್ದಾರೆ. ಸಂಸ್ಥೆ ಪುಸ್ತಕಗಳನ್ನು ಕೊನೆಗೊಳಿಸಲು ಅವಶ್ಯಕ ಖಾತೆಗಳನ್ನು ತಯಾರಿಸಿರಿ.

**ಪರಿಹಾರ:**

**ಸೀತಾ, ರೀಟಾ ಮತ್ತು ಮೀಟಾ ಅವರ ಪುಸ್ತಕಗಳು**

**ಖರ್ಚು** **ವಿಲೇವಾರಿ ಖಾತೆ** **ಜಮಾ**

| ವಿವರಗಳು | | ಮೊತ್ತ ₹ | ವಿವರಗಳು | | ಮೊತ್ತ ₹ |
|---|---|---|---|---|---|
| ದಾಸ್ತಾನು | | 2,500 | ಸಾಹುಕಾರರು | | 2,000 |
| ಪೀಠೋಪಕರಣ | | 1,000 | ರೀಟಾಳ ಬಂಡವಾಳ (ದಾಖಲಿಸದ ಆಸ್ತಿ) | | 200 |
| ಸಾಲಗಾರರು | | 2,000 | ಬ್ಯಾಂಕು (ಆಸ್ತಿಗಳನ್ನು ವಿಲೇವಾರಿ ಮಾಡಿದ್ದು) | | |
| ಸ್ಥಾವರ ಮತ್ತು ಯಂತ್ರಗಳು | | 4.500 | ಸ್ಥಾವರ ಮತ್ತು ಯಂತ್ರಗಳು | 4,250 | |
| ಬ್ಯಾಂಕು (ಸಾಹುಕಾರರು) | | 1,960 | ಸಾಲಗಾರರು | 1,850 | |
| ಸೀತಾಳ ಬಂಡವಾಳ (ವಿಲೇವಾರಿ ವೆಚ್ಚಗಳು) | | 60 | ದಾಸ್ತಾನು | 3,500 | |
| ಲಾಭ ವರ್ಗಾವಣೆ ಮಾಡಿದೆ: | | 530 | ಪೀಠೋಪಕರಣ | 750 | 10,350 |
| ಸೀತಾಳ ಬಂಡವಾಳ | 212 | | | | |
| ರೀಟಾಳ ಬಂಡವಾಳ | 212 | | | | |
| ಮೀಟಾಳ ಬಂಡವಾಳ | 106 | | | | |
| | | **12,550** | | | **12,550** |

**ಖರ್ಚು** **ಪಾಲುದಾರರ ಬಂಡವಾಳ ಖಾತೆಗಳು** **ಜಮಾ**

| ದಿನಾಂಕ | ವಿವರಗಳು | ರೋ. ಪಾ | ಸೀತಾ ₹ | ರೀಟಾ ₹ | ಮೀಟಾ ₹ | ದಿನಾಂಕ | ವಿವರಗಳು | ರೋ. ಪಾ | ಸೀತಾ ₹ | ರೀಟಾ ₹ | ಮೀಟಾ ₹ |
|---|---|---|---|---|---|---|---|---|---|---|---|
| | ಬ್ಯಾಂಕು | | 450 | – | – | | ಹಿಂದಿನಿಂದ ತಂದ ಶಿಲ್ಕು | | 5,000 | 2,000 | 1,000 |
| | ವಿಲೇವಾರಿ (ಆಸ್ತಿ) | | – | 200 | – | | ಮೀಸಲು ನಿಧಿ | | 1,000 | 1,000 | 500 |
| | ಬ್ಯಾಂಕು | | 5,822 | 3,012 | 1,606 | | ವಿಲೇವಾರಿ (ಲಾಭ) | | 212 | 212 | 106 |
| | | | | | | | ವಿಲೇವಾರಿ (ವೆಚ್ಚಗಳು) | | 60 | – | – |
| | | | **6,272** | **3,212** | **1,606** | | | | **6,272** | **3,212** | **1,606** |

**ಖರ್ಚು** **ಬ್ಯಾಂಕು ಖಾತೆ** **ಜಮಾ**

| ದಿನಾಂಕ | ವಿವರಗಳು | ರೋ. ಪಾ | ಮೊತ್ತ ₹ | ದಿನಾಂಕ | ವಿವರಗಳು | ರೋ. ಪಾ | ಮೊತ್ತ ₹ |
|---|---|---|---|---|---|---|---|
| | ಹಿಂದಿನಿಂದ ತಂದ ಶಿಲ್ಕು | | 2,500 | | ವಿಲೇವಾರಿ(ಸಾಹುಕಾರರು) | | 1,960 |
| | ವಿಲೇವಾರಿ (ಆಸ್ತಿಗಳನ್ನು ವಿಲೇವಾರಿ ಮಾಡಿದ್ದು) | | 10,350 | | ಸೀತಾಳ ಬಂಡವಾಳ (ವೆಚ್ಚಗಳು) | | 450 |
| | | | | | ಸೀತಾಳ ಬಂಡವಾಳ | | 5,822 |
| | | | | | ರೀಟಾಳ ಬಂಡವಾಳ | | 3,012 |
| | | | | | ಮೀಟಾಳ ಬಂಡವಾಳ | | 1,606 |
| | | | **12,850** | | | | **12,850** |

**ನಿದರ್ಶನ – 3**

ನಯನ ಮತ್ತು ಅರುಷಿ ಸಮವಾಗಿ ಲಾಭಗಳನ್ನು ಹಂಚಿಕೊಳ್ಳುವ ಪಾಲುದಾರಾಗಿದ್ದರು. ಮಾರ್ಚ್ 31, 2015ರಂದು ಇದ್ದಂತೆ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ:

**ಮಾರ್ಚ್ 31, 2015ರಂದು ಇದ್ದಂತೆ ನಯನ ಮತ್ತು ಅರುಷಿ ಅವರ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|---|
| ಬಂಡವಾಳಗಳು: | | | ಬ್ಯಾಂಕು | 30,000 |
| ನಯನ | 1,00,000 | | ಸಾಲಗಾರರು | 25,000 |
| ಅರುಷಿ | 50,000 | 1,50,000 | ದಾಸ್ತಾನು | 35,000 |
| ಸಾಹುಕಾರರು | | 20,000 | ಪೀಠೋಪಕರಣ | 40,000 |
| ಅರುಷಿಯ ಚಾಲ್ತಿ ಖಾತೆ | | 10,000 | ಯಂತ್ರೋಪಕರಣ | 60,000 |
| ಕಾರ್ಮಿಕರ ಪರಿಹಾರ ನಿಧಿ | | 15,000 | ನಯನಳ ಚಾಲ್ತಿ ಖಾತೆ | 10,000 |
| ಬ್ಯಾಂಕು ಮೀರೆಳೆತ | | 5,000 | | |
| | | **2,00,000** | | **2,00,000** |

ಮೇಲ್ಕಂಡ ದಿನಾಂಕದಂದು ಸಂಸ್ಥೆಯನ್ನು ವಿಸರ್ಜಿಸಲಾಯಿತು:

1. ನಯನ, ದಾಸ್ತಾನಿನ 50% ಅನ್ನು ಪುಸ್ತಕದ ಮೌಲ್ಯಕ್ಕಿಂತ 10% ಕಡಿಮೆಗೆ ತೆಗೆದುಕೊಂಡಳು ಮತ್ತು ಉಳಿದ ದಾಸ್ತಾನನ್ನು 15% ಲಾಭಕ್ಕೆ ಮಾರಲಾಯಿತು. ಪೀಠೋಪಕರಣ ಮತ್ತು ಯಂತ್ರೋಪಕರಣವನ್ನು ₹30,000 ಮತ್ತು ₹50,000ಕ್ಕೆ ಕ್ರಮವಾಗಿ ವಿಲೇವಾರಿ ಮಾಡಿದೆ.
2. ದಾಖಲಿಸದ ಹೂಡಿಕೆ ಇದ್ದು, ಅದನ್ನು ₹25,000ಕ್ಕೆ ಮಾರಲಾಯಿತು.
3. ಸಾಲಗಾರರಿಂದ 90% ಮಾತ್ರ ವಸೂಲಾಗಿದೆ ಮತ್ತು ಹಿಂದಿನ ವರ್ಷ ತೆಗೆದುಹಾಕಿದ್ದ ಕರಡು ಸಾಲ ₹1200 ವಸೂಲಿಯಾಗಿದೆ.
4. ಕೊಡಬೇಕಾಗಿದ್ದ ರಿಪೇರಿ ಬಿಲ್ಲು ₹2000 ಬಾಕಿ ಇದೆ.

ಅವಶ್ಯಕ ರೋಜು ದಾಖಲೆಗಳನ್ನು ಮಾಡಿ ಮತ್ತು ಸಂಸ್ಥೆಯ ಪುಸ್ತಕಗಳನ್ನು ಮುಕ್ತಾಯಗೊಳಿಸಲು ಖಾತೆಗಳನ್ನು ತಯಾರಿಸಿ.

**ಪರಿಹಾರ:**

**ನಯನ ಮತ್ತು ಅರುಷಿರವರ ಪುಸ್ತಕಗಳು**

**ಖರ್ಚು ರೋಜು ಪುಸ್ತಕ ಜಮಾ**

| ದಿನಾಂಕ | ವಿವರಗಳು | ಖಾ. ಪಾ. | ಖರ್ಚು ಮೊತ್ತ ₹ | ಜಮಾ ಮೊತ್ತ ₹ |
|---|---|---|---|---|
| | ವಿಲೇವಾರಿ ಖಾತೆ – – – – ಖರ್ಚು | | 1,60,000 | —— |
| | ಸಾಲಗಾರರ ಖಾತೆಗೆ | | —— | 25,000 |
| | ದಾಸ್ತಾನು ಖಾತೆಗೆ | | —— | 35,000 |
| | ಪೀಠೋಪಕರಣ ಖಾತೆಗೆ | | —— | 40,000 |
| | ಯಂತ್ರೋಪಕರಣ ಖಾತೆಗೆ | | —— | 60,000 |
| | (ಆಸ್ತಿಗಳನ್ನು ವಿಲೇವಾರಿ ಖಾತೆಗೆ ವರ್ಗಾಯಿಸಿದೆ) | | | |
| | ಸಾಹುಕಾರರ ಖಾತೆ – – – – ಖರ್ಚು | | 20,000 | —— |
| | ಬ್ಯಾಂಕು ಮೀರೆಳೆತ ಖಾತೆ – – – – ಖರ್ಚು | | 5,000 | —— |
| | ವಿಲೇವಾರಿ ಖಾತೆಗೆ | | —— | 25,000 |
| | (ಹೊಣೆಗಾರಿಕೆಗಳನ್ನು ವಿಲೇವಾರಿ ಖಾತೆಗೆ ವರ್ಗಾಯಿಸಿದೆ) | | | |
| | ವಿಲೇವಾರಿ ಖಾತೆ – – – – ಖರ್ಚು | | 27,000 | —— |
| | ಬ್ಯಾಂಕು ಖಾತೆಗೆ | | —— | —— |
| | (ಸಾಹುಕಾರರು, ಬ್ಯಾಂಕು ಮೀರೆಳೆತ, ರಿಪೇರಿ ಬಿಲ್ಲು ಬಾಕಿ ಪಾವತಿಸಿದೆ) | | | 27,000 |
| | ಬ್ಯಾಂಕು ಖಾತೆ – – – – ಖರ್ಚು | | 1,57,825 | —— |
| | ವಿಲೇವಾರಿ ಖಾತೆಗೆ | | —— | —— |
| | (ಆಸ್ತಿಗಳನ್ನು ಮಾರಿದೆ ಮತ್ತು ಕರಡು ಸಾಲ ವಸೂಲಿಯಾಗಿದೆ) | | | 1,57,825 |
| | ನಯನಾಳ ಬಂಡವಾಳ ಖಾತೆ – – – – ಖರ್ಚು | | 15,750 | —— |
| | ವಿಲೇವಾರಿ ಖಾತೆಗೆ | | —— | —— |
| | (ನಯನ ಅರ್ಧ ದಾಸ್ತಾನನ್ನು 10% ಕಡಿಮೆಗೆ ತೆಗೆದುಕೊಂಡಿದ್ದಾರೆ) | | | 15,750 |

| | | | | |
|---|---|---|---|---|
| | ವಿಲೇವಾರಿ ಖಾತೆ – – – – ಖರ್ಚು | | 15,575 | —— |
| | ನಯನಾಳ ಚಾಲ್ತಿ ಖಾತೆಗೆ | | —— | 5,788 |
| | ಅರುಷಿಯ ಚಾಲ್ತಿ ಖಾತೆಗೆ | | —— | 5,787 |
| | (ವಿಲೇವಾರಿ ಲಾಭವನ್ನು ಪಾಲುದಾರರ ಚಾಲ್ತಿ ಖಾತೆಗಳಿಗೆ ವರ್ಗಾಯಿಸಿದೆ) | | | |
| | ಕಾರ್ಮಿಕರ ಪರಿಹಾರ ನಿಧಿ ಖಾತೆ – – – – – ಖರ್ಚು | | 15,000 | —— |
| | ನಯಾನಾಳ ಚಾಲ್ತಿ ಖಾತೆಗೆ | | —— | 7,500 |
| | ಅರುಷಿಯ ಚಾಲ್ತಿ ಖಾತೆಗೆ | | —— | 7,500 |
| | (ಪರಿಹಾರ ನಿಧಿಯನ್ನು ಪಾಲುದಾರರ ಚಾಲ್ತಿ ಖಾತೆಗಳಿಗೆ ವರ್ಗಾಯಿಸಿದೆ) | | | |
| | ಅರುಷಿಯ ಚಾಲ್ತಿ ಖಾತೆ – – – – – ಖರ್ಚು | | 23,289 | —— |
| | ಅರುಷಿಯ ಬಂಡವಾಳ ಖಾತೆಗೆ | | —— | 23,289 |
| | (ಚಾಲ್ತಿ ಖಾತೆ ಶಿಲ್ಕನ್ನು ಬಂಡವಾಳ ಖಾತೆಗೆ ವರ್ಗಾಯಿಸಿದೆ) | | | |
| | ನಯನಾಳ ಬಂಡವಾಳ ಖಾತೆ – – – – ಖರ್ಚು | | 12,462 | —— |
| | ನಯಾನಾಳ ಚಾಲ್ತಿ ಖಾತೆಗೆ | | —— | 12,462 |
| | (ಚಾಲ್ತಿ ಖಾತೆ ಶಿಲ್ಕನ್ನು ಬಂಡವಾಳ ಖಾತೆಗೆ ವರ್ಗಾಯಿಸಿದೆ) | | | |
| | ನಯಾನಾಳ ಬಂಡವಾಳ ಖಾತೆ – – – – – ಖರ್ಚು | | 87,538 | —— |
| | ಅರುಷಿಯ ಬಂಡವಾಳ ಖಾತೆ ಖರ್ಚು | | 73,287 | —— |
| | ಬ್ಯಾಂಕು ಖಾತೆಗೆ | | | 1,60,825 |
| | (ಪಾಲುದಾರರಿಗೆ ಬಾಕಿ ಇರುವ ಅಂತಿಮ ಮೊತ್ತ ಪಾವತಿಸಿದೆ) | | | |

**ಖರ್ಚು** **ವಿಲೇವಾರಿ ಖಾತೆ** **ಜಮಾ**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | | ಮೊತ್ತ ₹ |
|---|---|---|---|---|---|
| ಸಾಲಗಾರರು | 25,000 | | ಸಾಹುಕಾರರು | | 20,000 |
| ದಾಸ್ತಾನು | 35,000 | | ಬ್ಯಾಂಕು ಮೀರೆಳೆತ | | 5,000 |
| ಪೀಠೋಪಕರಣ | 40,000 | | ಬ್ಯಾಂಕು: | | |
| ಯಂತ್ರೋಪಕರಣ | 60,000 | 1,60,000 | ಹೂಡಿಕೆಗಳು | 25,000 | |
| ಬ್ಯಾಂಕು: | | | ಪೀಠೋಪಕರಣ | 30,000 | |
| ಸಾಹುಕಾರರು | 20,000 | | ಯಂತ್ರೋಪಕರಣ | 50,000 | |
| ಬ್ಯಾಂಕು ಮೀರೆಳೆತ | 5,000 | | ಸಾಲಗಾರರು(90%) | 31,500 | |
| ಬಾಕಿ ರಿಪೇರಿ ಬಿಲ್ಲು | 2,000 | 27,000 | ದಾಸ್ತಾನು | 20,125 | |
| ಲಾಭ ವರ್ಗಾಯಿಸಿದೆ: | | | ವಸೂಲಿಯಾದ ಕರಡು ಸಾಲ | 1,200 | 1,57,825 |
| ನಯನಾಳ ಬಂಡವಾಳ | 5,788 | | ನಯನಾಳ ಬಂಡವಾಳ | | 15,750 |
| ಅರುಷಿಯ ಬಂಡವಾಳ | 5,787 | 11,575 | (ದಾಸ್ತಾನು ತೆಗೆದುಕೊಂಡಿರುವುದು) | | |
| | | **1,98,575** | | | **1,98,575** |

**ಖರ್ಚು** **ಪಾಲುದಾರರ ಚಾಲ್ತಿ ಖಾತೆಗಳು** **ಜಮಾ**

| ದಿನಾಂಕ | ವಿವರಗಳು | ರೋ. ಪಾ | ನಯನ ₹ | ಅರುಷಿ ₹ | ದಿನಾಂಕ | ವಿವರಗಳು | ರೋ. ಪಾ | ನಯನ ₹ | ಅರುಷಿ ₹ |
|---|---|---|---|---|---|---|---|---|---|
| | ಹಿಂದಿನಿಂದ ತಂದ ಶಿಲ್ಕು | | 10,000 | | | ಹಿಂದಿನಿಂದ ತಂದ ಶಿಲ್ಕು | | — | 10,000 |
| | ವಿಲೇವಾರಿ | | 15,750 | | | ಕಾರ್ಮಿಕರ ಪರಿಹಾರ ನಿಧಿ | | 7,500 | 7,500 |
| | ಅರುಷಿಯ ಬಂಡವಾಳ | | — | 23,287 | | ವಿಲೇವಾರಿ (ಲಾಭ) | | 5,788 | 5,787 |
| | | | | | | ನಯನಾಳ ಬಂಡವಾಳ | | 12,462 | — |
| | | | **25,750** | **23,287** | | | | **25,750** | **23,287** |

**ಖರ್ಚು** **ಪಾಲುದಾರರ ಬಂಡವಾಳ ಖಾತೆಗಳು** **ಜಮಾ**

| ದಿನಾಂಕ | ವಿವರಗಳು | ರೋ. ಪಾ | ನಯನ ₹ | ಅರುಷಿ ₹ | ದಿನಾಂಕ | ವಿವರಗಳು | ರೋ. ಪಾ | ನಯನ ₹ | ಅರುಷಿ ₹ |
|---|---|---|---|---|---|---|---|---|---|
| | ನಯನಾಳ ಚಾಲ್ತಿ ಖಾತೆ | | 12,462 | | | ಹಿಂದಿನಿಂದ ತಂದ ಶಿಲ್ಕು | | 1,00,000 | 50,000 |
| | ಬ್ಯಾಂಕು | | 87,538 | 73,287 | | ಅರುಷಿಯ ಚಾಲ್ತಿ ಖಾತೆ | | | 23,287 |
| | | | **1,00,000** | **73,287** | | | | **1,00,000** | **73,287** |

**ಖರ್ಚು** **ಬ್ಯಾಂಕು ಖಾತೆ** **ಜಮಾ**

| ದಿನಾಂಕ | ವಿವರಗಳು | ರೋ. ಪಾ | ಮೊತ್ತ ₹ | ದಿನಾಂಕ | ವಿವರಗಳು | ರೋ. ಪಾ | ಮೊತ್ತ ₹ |
|---|---|---|---|---|---|---|---|
| | ಹಿಂದಿನಿಂದ ತಂದ ಶಿಲ್ಕು | | 30,000 | | ವಿಲೇವಾರಿ | | 27,000 |
| | ವಿಲೇವಾರಿ | | 1,57,825 | | ನಯನಾಳ ಬಂಡವಾಳ | | 87,538 |
| | | | | | ಅರುಷಿಯ ಬಂಡವಾಳ | | 73,287 |
| | | | **1,87,825** | | | | **1,87,825** |

**ನಿಮ್ಮ ತಿಳುವಳಿಕೆಯನ್ನು ಪರೀಕ್ಷಿಸಿಕೊಳ್ಳಿರಿ –III : Test Your Understanding -III**

**ಸರಿಯಾದ ಪದ / ಪದಗಳಿಂದ ಭರ್ತಿ ಮಾಡಿ:**

1. ಎಲ್ಲಾ ಆಸ್ತಿಗಳನ್ನು (ನಗದು/ಬ್ಯಾಂಕು ಮತ್ತು ಕಲ್ಪಿತ ಆಸ್ತಿಗಳನ್ನು ಹೊರತುಪಡಿಸಿ) ______ ಖಾತೆಯ(ವಿಲೇವಾರಿ/ಬಂಡವಾಳ) ______ (ಖರ್ಚು/ಜಮಾ) ಬದಿಗೆ ವರ್ಗಾವಣೆ ಮಾಡಲಾಗುತ್ತದೆ.
2. ಎಲ್ಲಾ ______ (ಒಳಗಿನ/ಹೊರಗಿನ) ಹೊಣೆಗಾರಿಕೆಗಳನ್ನು ______ (ಬ್ಯಾಂಕು/ವಿಲೇವಾರಿ) ಖಾತೆಯ ______ (ಖರ್ಚು/ಜಮಾ) ಬದಿಗೆ ವರ್ಗಾವಣೆ ಮಾಡಲಾಗುತ್ತದೆ.
3. ಸಂಚಿತಗೊಂಡ ನಷ್ಟಗಳನ್ನು ______ (ಸಮ ಅನುಪಾತ/ಲಾಭ ಹಂಚಿಕೆಯ ಅನುಪಾತ) ದಲ್ಲಿ ______ (ಚಾಲ್ತಿ/ಬಂಡವಾಳ ಖಾತೆಗಳಿಗೆ) ವರ್ಗಾವಣೆ ಮಾಡಲಾಗುತ್ತದೆ.
4. ಒಬ್ಬ ಪಾಲುದಾರನು ಹೊಣೆಗಾರಿಕೆಯೊಂದನ್ನು ವಹಿಸಿಕೊಂಡರೆ, ಅಂತಹ ಪಾಲುದಾರನ ಬಂಡವಾಳ ಖಾತೆಯನ್ನು ______ (ಖರ್ಚು/ಜಮಾ) ಮಾಡಲಾಗುತ್ತದೆ.
5. ಒಬ್ಬ ಪಾಲುದಾರನು ಆಸ್ತಿಯೊಂದನ್ನು ತೆಗೆದುಕೊಂಡರೆ, ಅಂತಹ ಪಾಲುದಾರನ ಬಂಡವಾಳ ಖಾತೆಯನ್ನು ______ (ಖರ್ಚು/ಜಮಾ) ಮಾಡಲಾಗುತ್ತದೆ.
6. ಅವನಿಗೆ ಕೊಡಬೇಕಾದ ಬಾಕಿ ಹಣಕ್ಕಾಗಿ ______ (ಪಾಲುದಾರ/ಸಾಹುಕಾರ) ಸ್ಥಿರ ಆಸ್ತಿಯನ್ನು ಒಪ್ಪಿಕೊಂಡರೆ ಯಾವುದೇ ದಾಖಲೆಯನ್ನು ಮಾಡುವ ಅಗತ್ಯವಿಲ್ಲ.
7. ಸಾಹುಕಾರ ತನಗೆ ಬರಬೇಕಾದ ಹಣಕ್ಕಿಂತ ಹೆಚ್ಚಿನ ಮೌಲ್ಯದ ಒಂದು ಸ್ಥಿರ ಆಸ್ತಿಯನ್ನು ಒಪ್ಪಿಕೊಂಡರೆ, ಅವನು ______ (ಪಾವತಿಸುವ/ಪಾವತಿಸದ) ಹೆಚ್ಚುವರಿ ಹಣವನ್ನು ______ (ಅವನ/ವಿಲೇವಾರಿ) ಖಾತೆಗೆ ಜಮಾ ಮಾಡಲಾಗುತ್ತದೆ.
8. ಸಂಸ್ಥೆ ಪಾಲುದಾರನಿಗೆ ವಿಲೇವಾರಿ ಕಾರ್ಯಕ್ಕಾಗಿ, ಖರ್ಚು ಮಾಡಿದ ನೈಜ ಮೊತ್ತವನ್ನು ಪರಿಗಣಿಸದೆ ಒಂದು ನಿಗಧಿತ ಮೊತ್ತ ಕೊಡಲು ಒಪ್ಪಿದ್ದರೆ, ಅಂತಹ ಮೊತ್ತವನ್ನು ______ (ವಿಲೇವಾರಿ/ಬಂಡವಾಳ) ಖಾತೆಗೆ ಖರ್ಚು ಹಾಕಲಾಗುತ್ತದೆ ಮತ್ತು ______ (ಬಂಡವಾಳ/ಬ್ಯಾಂಕು) ಖಾತೆಗೆ ಜಮಾ ಮಾಡಲಾಗುತ್ತದೆ.
9. ಪಾಲುದಾರನ ಸಾಲವನ್ನು ವಿಲೇವಾರಿ ಖಾತೆಯಲ್ಲಿ ______ (ದಾಖಲಿಸಲಾಗುತ್ತದೆ/ದಾಖಲಿಸುವುದಿಲ್ಲ).
10. ಪಾಲುದಾರರ ಚಾಲ್ತಿ ಖಾತೆಗಳನ್ನು ಸಂಬಂಧಿಸಿದ ಪಾಲುದಾರರ ______ (ಸಾಲ/ಬಂಡವಾಳ) ಖಾತೆಗಳಿಗೆ ವರ್ಗಾವಣೆ ಮಾಡಲಾಗುತ್ತದೆ.

**ನಿದರ್ಶನ – 4**

ಮಾರ್ಚ್ 31, 2014ರಂದು ಇದ್ದಂತೆ ಅಶ್ವಾನಿ ಮತ್ತು ಭರತ್ ರವರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ:

**ಮಾರ್ಚ್ 31, 2014ರಂದು ಇದ್ದಂತೆ ಅಶ್ವಾನಿ ಮತ್ತು ಭರತ್ ರವರ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | | ಮೊತ್ತ ₹ |
|---|---|---|---|---|---|
| ಸಾಹುಕಾರರು | | 76,000 | ಬ್ಯಾಂಕಿನಲ್ಲಿನ ನಗದು | | 17,000 |
| ಶ್ರೀಮತಿ ಅಶ್ವಾನಿಯ ಸಾಲ | | 10,000 | ದಾಸ್ತಾನು | | 10,000 |
| ಶ್ರೀಮತಿ ಭರತ್ ರವರ ಸಾಲ | | 20,000 | ಹೂಡಿಕೆಗಳು | | 20,000 |
| ಹೂಡಿಕೆ ಏರಿಳಿತ ನಿಧಿ | | 2,000 | ಸಾಲಗಾರರು | 40,000 | |
| ಮೀಸಲು ನಿಧಿ | | 20,000 | ಕಳೆ: ಸಂಶಯಾಸ್ಪದ | | |
| ಬಂಡವಾಳಗಳು: | | | ಸಾಲಕ್ಕೆ ತೆಗೆದಿರಿಸಿದ್ದು | 4,000 | 36,000 |
| ಅಶ್ವಾನಿ | 20,000 | | ಕಟ್ಟಡಗಳು | | 70,000 |
| ಭರತ್ | 20,000 | 40,000 | ಕೀರ್ತಿ ಮೌಲ್ಯ | | 15,000 |
| | | **1,68,000** | | | **1,68,000** |

ಸಂಸ್ಥೆಯನ್ನು ಮೇಲಿನ ದಿನಾಂಕದಂದು ವಿಸರ್ಜಿಸಲಾಯಿತು. ಈ ಕೆಳಗಿನ ಒಪ್ಪಿದ ವಹಿವಾಟುಗಳು ಜರುಗಿದವು:

1. ಅಶ್ವಾನಿ, ಶ್ರೀಮತಿ ಅಶ್ವಾನಿಯ ಸಾಲ ಪಾವತಿಸುವುದಾಗಿ ಒಪ್ಪಿಕೊಂಡನು ಮತ್ತು ದಾಸ್ತಾನನ್ನು ₹8000ಕ್ಕೆ ತೆಗೆದುಕೊಂಡನು.
2. ಭರತ್ ಹೂಡಿಕೆಗಳ ಅರ್ಧದಷ್ಟನ್ನು 10% ಕಡಿಮೆಗೆ ತೆಗೆದುಕೊಂಡನು. ಸಾಲಗಾರರಿಂದ ₹38,000 ವಸೂಲಾಯಿತು. ಸಾಹುಕಾರರಿಗೆ ₹380 ಕಡಿಮೆ ಪಾವತಿಸಲಾಯಿತು. ಕಟ್ಟಡಗಳನ್ನು ₹1,30,000ಕ್ಕೆ ವಿಲೇವಾರಿ ಮಾಡಲಾಯಿತು. ಕೀರ್ತಿ ಮೌಲ್ಯವನ್ನು ₹12,000 ಮತ್ತು ಉಳಿದ ಹೂಡಿಕೆಗಳನ್ನು ₹9,000ಕ್ಕೆ ಮಾರಲಾಯಿತು. ದಾಖಲಿಸದ ಒಂದು ಹಳೆಯ ಬೆರಳಚ್ಚು ಯಂತ್ರವನ್ನು ಭರತ್ ₹600ಕ್ಕೆ ತೆಗೆದುಕೊಂಡನು. ವಿಲೇವಾರಿ ವೆಚ್ಚಗಳು ₹ 2,000. ವಿಲೇವಾರಿ ಖಾತೆ, ಪಾಲುದಾರರ ಬಂಡವಾಳ ಖಾತೆಗಳು ಮತ್ತು ಬ್ಯಾಂಕು ಖಾತೆಯನ್ನು ತಯಾರಿಸಿ.

**ಪರಿಹಾರ:**

**ಖರ್ಚು ವಿಲೇವಾರಿ ಖಾತೆ ಜಮಾ**

| ವಿವರಗಳು | | ಮೊತ್ತ ₹ | ವಿವರಗಳು | | ಮೊತ್ತ ₹ |
|---|---|---|---|---|---|
| ಹೂಡಿಕೆ | 20,000 | | ಸಂಶಯಾಸ್ಪದ ಸಾಲಕ್ಕೆ ತೆಗೆದಿರಿಸಿದ್ದು | | 4,000 |
| ಸಾಲಗಾರರು | 40,000 | | ಸಾಹುಕಾರರು | | 76,000 |
| ಕಟ್ಟಡಗಳು | 70,000 | | ಶ್ರೀಮತಿ ಅಶ್ವಾನಿಯ ಸಾಲ | | 10,000 |
| ದಾಸ್ತಾನು | 10,000 | | ಶ್ರೀಮತಿ ಭರತ್‌ರವರ ಸಾಲ | | 20,000 |
| ಕೀರ್ತಿ ಮೌಲ್ಯ | 15,000 | 1,55,000 | ಹೂಡಿಕೆ ಏರಿಳಿತ ನಿಧಿ | | 2,000 |
| ಅಶ್ವಾನಿಯ ಬಂಡವಾಳ (ಶ್ರೀಮತಿ ಅಶ್ವಾನಿಯ ಸಾಲ) | | 10,000 | ಅಶ್ವಾನಿಯ ಬಂಡವಾಳ(ದಾಸ್ತಾನು) | | 8,000 |
| ಬ್ಯಾಂಕು(ಶ್ರೀಮತಿ ಭರತ್‌ರವರ ಸಾಲ) | | 20,000 | ಭರತ್‌ನ ಬಂಡವಾಳ (ಬೆರಳಚ್ಚು ಯಂತ್ರ) | | 600 |
| ಬ್ಯಾಂಕು (ಸಾಹುಕಾರರು) | | 75,620 | ಭರತ್‌ನ ಬಂಡವಾಳ (ಹೂಡಿಕೆ) | | 9,000 |
| ಬ್ಯಾಂಕು (ವಿಲೇವಾರಿ ವೆಚ್ಚಗಳು) | | 2,000 | ಬ್ಯಾಂಕು: | | |
| ಲಾಭ ವರ್ಗಾಯಿಸಿದೆ: | | | ಹೂಡಿಕೆ | 9,000 | |
| | | | ಸಾಲಗಾರರು | 38,000 | |
| ಅಶ್ವಾನಿಯ ಬಂಡವಾಳ | 27,990 | | ಕಟ್ಟಡಗಳು | 1,30,000 | |
| ಭರತ್‌ನ ಬಂಡವಾಳ | 27,990 | 55,980 | ಕೀರ್ತಿ ಮೌಲ್ಯ | 12,000 | 1,89,000 |
| | | **3,18,600** | | | **3,18,600** |

**ಖರ್ಚು ಪಾಲುದಾರರ ಬಂಡವಾಳ ಖಾತೆಗಳು ಜಮಾ**

| ದಿನಾಂಕ | ವಿವರಗಳು | ರೋ. ಪಾ | ಅಶ್ವಾನಿ ₹ | ಭರತ್ ₹ | ದಿನಾಂಕ | ವಿವರಗಳು | ರೋ. ಪಾ | ಅಶ್ವಾನಿ ₹ | ಭರತ್ ₹ |
|---|---|---|---|---|---|---|---|---|---|
| | ವಿಲೇವಾರಿ (ದಾಸ್ತಾನು) | | 8,000 | — | | ಹಿಂದಿನಿಂದ ತಂದ ಶಿಲ್ಕು | | 20,000 | 20,000 |
| | ವಿಲೇವಾರಿ (ಬೆರಳಚ್ಚು ಯಂತ್ರ ತೆಗೆದುಕೊಂಡಿದ್ದು) | | — | 600 | | ಮೀಸಲು ನಿಧಿ | | 10,000 | 10,000 |
| | ವಿಲೇವಾರಿ(ಹೂಡಿಕೆ) | | — | 9,000 | | ವಿಲೇವಾರಿ (ಶ್ರೀಮತಿ ಅಶ್ವಾನಿ ಸಾಲ) | | 10,000 | — |
| | ಬ್ಯಾಂಕು | | 59,990 | 48,390 | | ವಿಲೇವಾರಿ (ಲಾಭ) | | 27,990 | 27,990 |
| | | | **67,990** | **57,990** | | | | **67,990** | **57,990** |

**ಖರ್ಚು** **ಬ್ಯಾಂಕು ಖಾತೆ** **ಜಮಾ**

| ದಿನಾಂಕ | ವಿವರಗಳು | ರೋ. ಪಾ | ಮೊತ್ತ ₹ | ದಿನಾಂಕ | ವಿವರಗಳು | ರೋ. ಪಾ | ಮೊತ್ತ ₹ |
|---|---|---|---|---|---|---|---|
| | ಹಿಂದಿನಿಂದ ತಂದ ಶಿಲ್ಕು | | 17,000 | | ವಿಲೇವಾರಿ (ಸಾಹುಕಾರರು) | | 75,620 |
| | ವಿಲೇವಾರಿ | | 1,89,000 | | ವಿಲೇವಾರಿ (ವೆಚ್ಚಗಳು) | | 2,000 |
| | | | | | ವಿಲೇವಾರಿ (ಶ್ರೀಮತಿ ಭರತ್ ಸಾಲ) | | 20,000 |
| | | | | | ಅಶ್ವಾನಿಯ ಬಂಡವಾಳ | | 59,990 |
| | | | | | ಭರತ್‌ನ ಬಂಡವಾಳ | | 48,390 |
| | | | **2,60,000** | | | | **1,87,825** |

**ನೀವೇ ಮಾಡಿ**

ಈ ಕೆಳಗಿನವುಗಳಿಗೆ ಒಂದು ಪಾಲುದಾರಿಕೆ ಸಂಸ್ಥೆ ವಿಸರ್ಜನೆಯಾದಾಗ ನೀಡಲಾಗುವ ರೋಜು ದಾಖಲೆ(ಗಳನ್ನು) ಕೊಡಿ.

1. ಆಸ್ತಿಗಳ ಖಾತೆಗಳನ್ನು ಕೊನೆಗೊಳಿಸಲು/ಮುಕ್ತಾಯಗೊಳಿಸಲು.
2. ಹೊಣೆಗಾರಿಕೆಗಳ ಖಾತೆಗಳನ್ನು ಕೊನೆಗೊಳಿಸಲು/ಮುಕ್ತಾಯಗೊಳಿಸಲು.
3. ಆಸ್ತಿಗಳನ್ನು ಮಾರಿದ್ದಕ್ಕೆ.
4. ಸ್ಥಿರ ಆಸ್ತಿಯನ್ನು ವರ್ಗಾವಣೆ ಮಾಡಿ ಸಾಹುಕಾರರ ಖಾತೆ ಚುಕ್ತಾ ಮಾಡಲು.
5. ವಿಲೇವಾರಿ ವೆಚ್ಚಗಳಿಗೆ, ನೈಜ ವೆಚ್ಚಗಳನ್ನು ಸಂಸ್ಥೆಯ ಪರವಾಗಿ ಪಾಲುದಾರನು ಪಾವತಿಸಿದಾಗ.
6. ಸಂಸ್ಥೆಯ ಹೊಣೆಗಾರಿಕೆಯನ್ನು ಪಾಲುದಾರನು ಪಾವತಿಸಿದಾಗ.
7. ಪಾಲುದಾರನ ಸಾಲ ಪಾವತಿಸಿದ್ದಕ್ಕೆ.
8. ಬಂಡವಾಳ ಖಾತೆಗಳನ್ನು ಚುಕ್ತಾ/ಇತ್ಯರ್ಥಪಡಿಸಿದ್ದಕ್ಕೆ.

**ನಿದರ್ಶನ – 5**

ಸೋನಿಯಾ, ರೋಹಿತ್ ಮತ್ತು ಉದಿತ್‌ರವರು 5:3:2ರ ಅನುಪಾತದಲ್ಲಿ ಲಾಭಗಳನ್ನು ಹಂಚಿಕೊಳ್ಳುವ ಪಾಲುದಾರರಾಗಿ ಇದ್ದರು. ಮಾರ್ಚ್ 31, 2014ರಂದು ಇದ್ದಂತೆ ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ:

ಮಾರ್ಚ್ 31, 2014ರಂದು ಇದ್ದಂತೆ ಸೋನಿಯಾ, ರೋಹಿತ್ ಮತ್ತು ಉದಿತ್‌ರವರ ಅಢಾವೆ ಪತ್ರಿಕೆ

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|---|
| ಸಾಹುಕಾರರು | | 30,000 | ಕಟ್ಟಡಗಳು | 2,00,000 |
| ಕೊಡತಕ್ಕ ಹುಂಡಿಗಳು | | 30,000 | ಯಂತ್ರೋಪಕರಣ | 40,000 |
| ಬ್ಯಾಂಕು ಸಾಲ | | 1,20,000 | ದಾಸ್ತಾನು | 1,60,000 |
| ಸೋನಿಯಾ ಗಂಡನ ಸಾಲ | | 1,30,000 | ಬರತಕ್ಕ ಹುಂಡಿಗಳು | 1,20,000 |
| ಸಾಮಾನ್ಯ ಮೀಸಲು | | 80,000 | ಪೀಠೋಪಕರಣ | 80,000 |
| ಬಂಡವಾಳಗಳು: | | | ಬ್ಯಾಂಕಿನಲ್ಲಿ ನಗದು | 60,000 |
| ಸೋನಿಯಾ | 70,000 | | | |
| ರೋಹಿತ್ | 90,000 | | | |
| ಉದಿತ್ | 1,10,000 | 2,70,000 | | |
| | | **6,60,000** | | **6,60,000** |

ಸಂಸ್ಥೆಯನ್ನು ಅದೇ ದಿನ ವಿಸರ್ಜಿಸಲಾಯಿತು. ಈ ಕೆಳಗಿನ ಮಾಹಿತಿಯಿಂದ ಸಂಸ್ಥೆಯ ಪುಸ್ತಕಗಳನ್ನು ಕೊನೆಗೊಳಿಸಿರಿ:

1. ಕಟ್ಟಡಗಳು ₹1,90,000ಕ್ಕೆ ವಿಲೇವಾರಿಯಾಯಿತು, ಬರತಕ್ಕ ಹುಂಡಿಗಳು ₹1,10,000ಕ್ಕೆ ವಿಲೇವಾರಿಯಾದವು, ದಾಸ್ತಾನು ₹1,50,000ಕ್ಕೆ ವಿಲೇವಾರಿಯಾಯಿತು, ಮತ್ತು ಯಂತ್ರೋಪಕರಣವನ್ನು ₹48,000ಕ್ಕೆ ವಿಕ್ರಯ ಮಾಡಿದೆ ಮತ್ತು ಪೀಠೋಪಕರಣವನ್ನು ₹75,000ಕ್ಕೆ ಮಾರಲಾಯಿತು.
2. ಬ್ಯಾಂಕು ಸಾಲವನ್ನು ₹1,30,00 0ಕ್ಕೆ ಇತ್ಯರ್ಥಪಡಿಸಲಾಯಿತು. ಸಾಹುಕಾರರು ಮತ್ತು ಕೊಡತಕ್ಕ ಹುಂಡಿಗಳನ್ನು 10% ಸೋಡಿಗೆ ಚುಕ್ತಾ ಮಾಡಲಾಯಿತು.
3. ರೋಹಿತ್, ವಿಲೇವಾರಿ ವೆಚ್ಚಗಳು ₹10,000 ಪಾವತಿಸಿದ್ದಾನೆ, ಮತ್ತು ವಿಸರ್ಜನಾ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ್ದಕ್ಕೆ ₹12,000 ಸಂಭಾವನೆ ಪಡೆಯಲಿದ್ದಾನೆ.

   ಅವಶ್ಯಕ ಖಾತೆಗಳನ್ನು ತಯಾರಿಸಿ:

**ಪರಿಹಾರ:**

**ಸೋನಿಯಾ, ರೋಹಿತ್ ಮತ್ತು ಉದಿತ್‌ರವರ ಪುಸ್ತಕಗಳು**

**ಖರ್ಚು ವಿಲೇವಾರಿ ಖಾತೆ ಜಮಾ**

| ವಿವರಗಳು | | ಮೊತ್ತ ₹ | ವಿವರಗಳು | | ಮೊತ್ತ ₹ |
|---|---|---|---|---|---|
| ಕಟ್ಟಡಗಳು | 2,00,000 | | ಸಾಹುಕಾರರು | | 30,000 |
| ಯಂತ್ರೋಪಕರಣ | 40,000 | | ಕೊಡತಕ್ಕ ಹುಂಡಿಗಳು | | 30,000 |
| ದಾಸ್ತಾನು | 1,60,000 | | ಬ್ಯಾಂಕು ಸಾಲ | | 1,20,000 |
| ಬರತಕ್ಕ ಹುಂಡಿಗಳು | 1,20,000 | | ಸೋನಿಯಾ ಗಂಡನ ಸಾಲ | | 1,30,000 |
| ಪೀಠೋಪಕರಣ | 80,000 | 6,00,000 | ಬ್ಯಾಂಕು: | | |
| ಬ್ಯಾಂಕು (ಬ್ಯಾಂಕು ಸಾಲ) | | 1,30,000 | ಕಟ್ಟಡಗಳು | 1,90,000 | |
| ಬ್ಯಾಂಕು (ಸಾಹುಕಾರರು ಮತ್ತು ಕೊಡತಕ್ಕ ಹುಂಡಿಗಳು) | | 54,000 | ಬರತಕ್ಕ ಹುಂಡಿಗಳು | 1,10,000 | |
| | | | ದಾಸ್ತಾನು | 1,50,000 | |
| ಬ್ಯಾಂಕು (ಸೋನಿಯಾ ಗಂಡನ ಸಾಲ) | | 1,30,000 | ಯಂತ್ರೋಪಕರಣ | 48,000 | |
| | | | ಪೀಠೋಪಕರಣ | 75,000 | 5,73,000 |
| ರೋಹಿತ್‌ನ ಬಂಡವಾಳ (ವಿಲೇವಾರಿ ವೆಚ್ಚಗಳು) | | 12,000 | ಬಂಡವಾಳ ಖಾತೆಗಳಿಗೆ ನಷ್ಟ ವರ್ಗಾಯಿಸಿದೆ: | | |
| | | | ಸೋನಿಯಾ | 21,500 | |
| | | | ರೋಹಿತ್ | 12,900 | |
| | | | ಉದಿತ್ | 8,600 | 43,000 |
| | | **9,26,000** | | | **9,26,000** |

**ಖರ್ಚು ಪಾಲುದಾರರ ಬಂಡವಾಳ ಖಾತೆಗಳು ಜಮಾ**

| ದಿನಾಂಕ | ವಿವರಗಳು | ರೋ. ಪಾ | ಸೋನಿಯಾ ₹ | ರೋಹಿತ್ ₹ | ಉದಿತ್ ₹ | ದಿನಾಂಕ | ವಿವರಗಳು | ರೋ. ಪಾ | ಸೋನಿಯಾ ₹ | ರೋಹಿತ್ ₹ | ಉದಿತ್ ₹ |
|---|---|---|---|---|---|---|---|---|---|---|---|
| | ವಿಲೇವಾರಿ (ನಷ್ಟ) | | 21,500 | 12,900 | 8,600 | | ಹಿಂದಿನಿಂದ ತಂದ ಶಿಲ್ಕು | | 70,000 | 90,000 | 1,10,000 |
| | ಬ್ಯಾಂಕು | | 88,500 | 1,13,100 | 1,17,400 | | ವಿಲೇವಾರಿ(ವೆಚ್ಚಗಳು) | | – | 12,000 | – |
| | | | | | | | ಸಾಮಾನ್ಯ (ವೆಚ್ಚಗಳು) | | 40,000 | 24,000 | 16,000 |
| | | | **1,10,000** | **1,26,000** | **1,26,000** | | | | **1,10,000** | **1,26,000** | **1,26,000** |

**ಖರ್ಚು ಬ್ಯಾಂಕು ಖಾತೆ ಜಮಾ**

| ದಿನಾಂಕ | ವಿವರಗಳು | ರೋ. ಪಾ | ಮೊತ್ತ ₹ | ದಿನಾಂಕ | ವಿವರಗಳು | ರೋ. ಪಾ | ಮೊತ್ತ ₹ |
|---|---|---|---|---|---|---|---|
| | ಹಿಂದಿನಿಂದ ತಂದ ಶಿಲ್ಕು | | 60,000 | | ವಿಲೇವಾರಿ(ಬ್ಯಾಂಕು ಸಾಲ) | | 1,30,000 |
| | ವಿಲೇವಾರಿ (ಆಸ್ತಿಗಳ ವಿಲೇವಾರಿ) | | 5,73,000 | | ವಿಲೇವಾರಿ (ಸಾಹುಕಾರರು ಮತ್ತು ಕೊಡತಕ್ಕ ಹುಂಡಿಗಳು) | | 54,000 |
| | | | | | ವಿಲೇವಾರಿ (ಸೋನಿಯ ಗಂಡನ ಸಾಲ) | | 1,30,000 |
| | | | | | ಸೋನಿಯಾಳ ಬಂಡವಾಳ | | 88,500 |
| | | | | | ರೋಹಿತ್‌ನ ಬಂಡವಾಳ | | 1,13,100 |
| | | | | | ಉದಿತ್‌ನ ಬಂಡವಾಳ | | 1,17,400 |
| | | | 6,33,000 | | | | 6,33,000 |

**ಟಿಪ್ಪಣಿ:** ರೋಹಿತ್ ಪಾವತಿಸಿರುವ ನೈಜ ವಿಲೇವಾರಿ ವೆಚ್ಚಗಳನ್ನು ಸಂಸ್ಥೆಯ ಪುಸ್ತಕಗಳಲ್ಲಿ ದಾಖಲೆ ಮಾಡಿಲ್ಲ. ಏಕೆಂದರೆ ಅವನು ಪಡೆಯುವ ₹12,000 ಸಂಭಾವನೆಯನ್ನು ಲೆಕ್ಕದಲ್ಲಿ ಪರಿಗಣಿಸಲಾಗಿದೆ.

**ನಿದರ್ಶನ – 6**

ರಮೇಶ್ ಮತ್ತು ಭವನ್‌ರವರು ಪಾಲುದಾರರಾಗಿದ್ದು 3 : 2ರ ಅನುಪಾತದಲ್ಲಿ ಲಾಭ ಮತ್ತು ನಷ್ಟ ಹಂಚಿಕೊಳ್ಳುತ್ತಿದ್ದಾರೆ. ಮಾರ್ಚ್ 31, 2014ರಂದು ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ:

**ಮಾರ್ಚ್ 31, 2014ರಂದು ಇದ್ದಂತೆ ರಮೇಶ್ ಮತ್ತು ಭವನ್‌ರವರ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|---|
| ಬ್ಯಾಂಕು ಸಾಲ | | 60,000 | ಬ್ಯಾಂಕಿನಲ್ಲಿ ನಗದು | 30,000 |
| ಸಾಹುಕಾರರು | | 80,000 | ಸಾಲಗಾರರು | 70,000 |
| ಕೊಡತಕ್ಕ ಹುಂಡಿಗಳು | | 40,000 | ದಾಸ್ತಾನು | 2,00,000 |
| ಭವನ್‌ರವರ ಸಾಲ | | 20,000 | ಹೂಡಿಕೆಗಳು | 1,40,000 |
| ಬಂಡವಾಳಗಳು: | | | ಕಟ್ಟಡಗಳು | 60,000 |
| ರಮೇಶ್ | 1,00,000 | | | |
| ಭವನ್ | 2,00,000 | 3,00,000 | | |
| | | 5,00,000 | | 5,00,000 |

ಅವರು ಸಂಸ್ಥೆಯನ್ನು ವಿಸರ್ಜಿಸಲು ನಿರ್ಧರಿಸಿದರು. ಈ ಕೆಳಗಿನ ಮಾಹಿತಿ ಲಭ್ಯ ಇದೆ:

1. ಸಾಲಗಾರರಿಂದ 5% ಕಡಿಮೆ ವಸೂಲಾಗಿದೆ. ದಾಸ್ತಾನು ಪುಸ್ತಕದ ಮೌಲ್ಯಕ್ಕೆ ವಿಲೇವಾರಿಯಾಗಿದೆ ಮತ್ತು ಕಟ್ಟಡಗಳನ್ನು ₹51,000ಕ್ಕೆ ಮಾರಲಾಗಿದೆ.
2. ₹10,000 ಮೌಲ್ಯದ ದಾಖಲಿಸಿದ ಹೂಡಿಕೆ ಇರುವುದು ಕಂಡು ಬಂದಿದೆ. ಅದನ್ನು ಅದೇ ಬೆಲೆಗೆ ಸಾಹುಕಾರನೊಬ್ಬ ತೆಗೆದುಕೊಳ್ಳಲು ಒಪ್ಪಿದ್ದಾನೆ, ಮತ್ತು ಇತರ ಸಾಹುಕಾರರಿಗೆ 10% ಸೋಡಿಯಲ್ಲಿ ಪಾವತಿ ಮಾಡಲಾಗಿದೆ. ಕೊಡತಕ್ಕ ಹುಂಡಿಗಳನ್ನು ಪೂರ್ತಿಯಾಗಿ ಪಾವತಿಸಿದೆ.

3. ರಮೇಶನು ಕೆಲವು ಹೂಡಿಕೆಗಳನ್ನು ₹8,100ಕ್ಕೆ (ಪುಸ್ತಕದ ಮೌಲ್ಯಕ್ಕಿಂತ 10% ಕಡಿಮೆ) ತೆಗೆದುಕೊಂಡಿದ್ದಾನೆ. ಉಳಿದ ಹೂಡಿಕೆಗಳನ್ನು ಭವನ್ ಪುಸ್ತಕ ಮೌಲ್ಯದ 90% – ₹900 ಸೋಡಿಗೆ ತೆಗೆದುಕೊಂಡಿದ್ದಾನೆ.
4. ಭವನ್ ಬ್ಯಾಂಕು ಸಾಲವನ್ನು ವಾರ್ಷಿಕ 6%, ಒಂದು ವರ್ಷದ ಬಡ್ಡಿಯೊಂದಿಗೆ ಪಾವತಿಸಿದ್ದಾನೆ.
5. ದಾಖಲಿಸದ ಹೊಣೆಗಾರಿಕೆಗೆ ₹5,000 ಪಾವತಿಸಲಾಗಿದೆ. ಸಂಸ್ಥೆಯ ಪುಸ್ತಕಗಳನ್ನು ಮುಕ್ತಾಯಗೊಳಿಸಿ ಮತ್ತು ಅವಶ್ಯಕ ಖಾತೆಗಳನ್ನು ತಯಾರಿಸಿ.

**ಪರಿಹಾರ:**

**ರಮೇಶ್ ಮತ್ತು ಭವನ್ ಪುಸ್ತಕಗಳು**

**ಖರ್ಚು** **ವಿಲೇವಾರಿ ಖಾತೆ** **ಜಮಾ**

| ವಿವರಗಳು | | ಮೊತ್ತ ₹ | ವಿವರಗಳು | | ಮೊತ್ತ ₹ |
|---|---|---|---|---|---|
| ಸಾಲಗಾರರು | 70,000 | | ಬ್ಯಾಂಕು ಸಾಲ | | 60,000 |
| ದಾಸ್ತಾನು | 2,00,000 | | ಸಾಹುಕಾರರು | | 80,000 |
| ಹೂಡಿಕೆಗಳು | 1,40,000 | | ಕೊಡತಕ್ಕ ಹುಂಡಿಗಳು | | 40,000 |
| ಕಟ್ಟಡಗಳು | 60,000 | 4,70,000 | ರಮೇಶ್‌ನ ಬಂಡವಾಳ (ಹೂಡಿಕೆ) | | 8,100 |
| ಬ್ಯಾಂಕು (ಕೊಡತಕ್ಕ ಹುಂಡಿಗಳು) | | 40,000 | ಭವನ್‌ನ ಬಂಡವಾಳ (ಹೂಡಿಕೆ) | | 1,17,000 |
| ಬ್ಯಾಂಕು (ಸಾಹುಕಾರರು) | | 63,000 | ಬ್ಯಾಂಕು: | | |
| ಭವನ್ ಬಂಡವಾಳ | | 63,600 | ಸಾಲಗಾರರು | 66,500 | |
| (ಸಾಲ ಬಡ್ಡಿಯೊಂದಿಗೆ) | | | ದಾಸ್ತಾನು | 2,00,000 | |
| ಬ್ಯಾಂಕು | | 5,000 | ಕಟ್ಟಡಗಳು | 51,000 | 3,17,500 |
| (ದಾಖಲಿಸದ ಹೊಣೆಗಾರಿಕೆಗಳು) | | | ನಷ್ಟ ವರ್ಗಾಯಿಸಿದೆ: | | |
| | | | ರಮೇಶನ ಬಂಡವಾಳ | 11,400 | |
| | | | ಭವನ್‌ನ ಬಂಡವಾಳ | 7,600 | 19,000 |
| | | **6,41,600** | | | **6,41,600** |

**ಖರ್ಚು** **ಪಾಲುದಾರರ ಬಂಡವಾಳ ಖಾತೆಗಳು** **ಜಮಾ**

| ದಿನಾಂಕ | ವಿವರಗಳು | ರೋ. ಪಾ | ರಮೇಶ್ ₹ | ಭವನ್ ₹ | ದಿನಾಂಕ | ವಿವರಗಳು | ರೋ. ಪಾ | ರಮೇಶ್ ₹ | ಭವನ್ ₹ |
|---|---|---|---|---|---|---|---|---|---|
| | ವಿಲೇವಾರಿ (ಹೂಡಿಕೆ) | | 8,100 | 1,17,000 | | ಹಿಂದಿನಿಂದ ತಂದ ಶಿಲ್ಕು | | 1,00,000 | 2,00,000 |
| | ವಿಲೇವಾರಿ (ನಷ್ಟ) | | 11,400 | 7,600 | | ವಿಲೇವಾರಿ (ಬ್ಯಾಂಕು ಸಾಲ) | | | 63,600 |
| | ಬ್ಯಾಂಕು | | 80,500 | 1,39,000 | | | | | |
| | | | **1,00,000** | **2,63,600** | | | | **1,00,000** | **2,63,600** |

**ಖರ್ಚು** **ಬ್ಯಾಂಕು ಖಾತೆ** **ಜಮಾ**

| ದಿನಾಂಕ | ವಿವರಗಳು | ರೋ. ಪಾ | ಮೊತ್ತ ₹ | ದಿನಾಂಕ | ವಿವರಗಳು | ರೋ. ಪಾ | ಮೊತ್ತ ₹ |
|---|---|---|---|---|---|---|---|
| | ಹಿಂದಿನಿಂದ ತಂದ ಶಿಲ್ಕು | | 30,000 | | ವಿಲೇವಾರಿ (ಸಾಹುಕಾರರು) | | 63,000 |
| | ವಿಲೇವಾರಿ (ಆಸ್ತಿಗಳ ವಿಲೇವಾರಿ ಮಾಡಿದ್ದು) | | 3,17,500 | | ವಿಲೇವಾರಿ (ದಾಖಲಿಸದ ಹೊಣೆಗಾರಿಕೆ) | | 5,000 |
| | | | | | ಭವನ್‌ನ ಸಾಲ | | 20,000 |
| | | | | | ವಿಲೇವಾರಿ (ಕೊಡತಕ್ಕ ಹುಂಡಿಗಳು) | | 40,500 |
| | | | | | ರಮೇಶ್‌ನ ಬಂಡವಾಳ | | 80,500 |
| | | | | | ಭವನ್‌ನ ಬಂಡವಾಳ | | 1,39,000 |
| | | | 3,47,500 | | | | 3,47,500 |

**ಟಿಪ್ಪಣಿ:** ಭಾಗಶಃ ಪಾವತಿಗಾಗಿ ಸಾಹುಕಾರನು ದಾಖಲಿಸದ ಹೂಡಿಕೆಗಳನ್ನು ತೆಗೆದುಕೊಳ್ಳಲು ಒಪ್ಪಿದ್ದರ ಬಗ್ಗೆ ನಿಯಮಗಳ ಪ್ರಕಾರ ಯಾವುದೇ ದಾಖಲೆಯನ್ನು ಮಾಡಿರುವುದಿಲ್ಲ.

**ನಿದರ್ಶನ – 7**

ಸೋನು ಮತ್ತು ಆಶು 3:1 ಅನುಪಾತದಲ್ಲಿ ಲಾಭಗಳನ್ನು ಹಂಚಿಕೊಳ್ಳುತ್ತಿದ್ದರು ಮತ್ತು ಅವರು ವಿಸರ್ಜನೆಗೆ ತೀರ್ಮಾನಿಸಿದರು. ಮಾರ್ಚ್ 31, 2014ರಂದು ಇದ್ದಂತೆ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ.

**ಮಾರ್ಚ್ 31, 2014ರಂದು ಇದ್ದಂತೆ ಸೋನು ಮತ್ತು ಆಶು ಅವರ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|---|
| ಸಾಲ | | 12,000 | ಬ್ಯಾಂಕಿನಲ್ಲಿ ನಗದು | 25,000 |
| ಸಾಹುಕಾರರು | | 18,000 | ದಾಸ್ತಾನು | 45,000 |
| ಬಂಡವಾಳ | | | ಪೀಠೋಪಕರಣ | 16,000 |
| ಸೋನು | 1,10,000 | | ಸಾಲಗಾರರು | 70,000 |
| ಆಶು | 68,000 | 1,78,000 | ಸ್ಥಾವರ ಮತ್ತು ಯಂತ್ರೋಪಕರಣ | 52,000 |
| | | 2,08,000 | | 2,08,000 |

ಸೋನು ಸ್ಥಾವರ ಮತ್ತು ಯಂತ್ರೋಪಕರಣವನ್ನು ಒಪ್ಪಿಕೊಂಡ ಮೌಲ್ಯ ₹60,000ಕ್ಕೆ ತೆಗೆದುಕೊಂಡಿದ್ದಾನೆ. ದಾಸ್ತಾನು ಮತ್ತು ಪೀಠೋಪಕರಣಗಳನ್ನು ಕ್ರಮವಾಗಿ ₹42,000 ಮತ್ತು ₹13,900ಕ್ಕೆ ಮಾರಲಾಗಿದೆ. ಸಾಲಗಾರರನ್ನು ಆಶು ₹69,000ಕ್ಕೆ ತೆಗೆದುಕೊಂಡಿದ್ದಾರೆ. ಸಾಹುಕಾರರನ್ನು ₹900 ಸೋಡಿಗೆ ಪಾವತಿಸಲಾಗಿದೆ. ಸೋನು ಸಾಲಗಳನ್ನು ಪಾವತಿಸಲು ಒಪ್ಪಿದ್ದಾರೆ. ವಿಲೇವಾರಿ ವೆಚ್ಚಗಳು ₹1600.

ವಿಲೇವಾರಿ ಖಾತೆ, ಬ್ಯಾಂಕು ಖಾತೆ ಮತ್ತು ಪಾಲುದಾರರ ಬಂಡವಾಳ ಖಾತೆಗಳನ್ನು ತಯಾರಿಸಿ.

**ಪರಿಹಾರ:**

**ಸೋನು ಮತ್ತು ಆಶುರವರ ಪುಸ್ತಕಗಳು**

**ಖರ್ಚು ವಿಲೇವಾರಿ ಖಾತೆ ಜಮಾ**

| ವಿವರಗಳು | | ಮೊತ್ತ ₹ | ವಿವರಗಳು | | ಮೊತ್ತ ₹ |
|---|---|---|---|---|---|
| ದಾಸ್ತಾನು | | 45,000 | ಸಾಲ | | 12,000 |
| ಪೀಠೋಪಕರಣ | | 16,000 | ಸಾಹುಕಾರರು | | 18,000 |
| ಸಾಲಗಾರರು | | 70,000 | ಸೋನುರವರ ಬಂಡವಾಳ | | 60,000 |
| ಸ್ಥಾವರ ಮತ್ತು ಯಂತ್ರೋಪಕರಣ | | 52,000 | (ಸ್ಥಾವರ ಮತ್ತು ಬಂಡವಾಳ) | | |
| ಬ್ಯಾಂಕು (ಸಾಹುಕಾರರು) | | 17,100 | ಆಶುರವರ ಬಂಡವಾಳ (ಸಾಲಗಾರರು) | | 69,000 |
| ಸೋನುರವರ ಬಂಡವಾಳ (ಸಾಲ) | | 12,000 | ಬ್ಯಾಂಕು: | | |
| ಬ್ಯಾಂಕು (ವಿಲೇವಾರಿ ವೆಚ್ಚಗಳು) | | 1,600 | ದಾಸ್ತಾನು | 42,000 | |
| ಲಾಭ ವರ್ಗಾಯಿಸಿದೆ: | | | ಪೀಠೋಪಕರಣ | 13,900 | 55,900 |
| ಸೋನುರವರ ಬಂಡವಾಳ | 900 | | | | |
| ಆಶುರವರ ಬಂಡವಾಳ | 300 | 1,200 | | | |
| | | **2,14,900** | | | **2,14,900** |

**ಖರ್ಚು ಪಾಲುದಾರರ ಬಂಡವಾಳ ಖಾತೆಗಳು ಜಮಾ**

| ದಿನಾಂಕ | ವಿವರಗಳು | ರೋ. ಪಾ | ಸೋನು ₹ | ಆಶು ₹ | ದಿನಾಂಕ | ವಿವರಗಳು | ರೋ. ಪಾ | ಸೋನು ₹ | ಆಶು ₹ |
|---|---|---|---|---|---|---|---|---|---|
| | ವಿಲೇವಾರಿ (ಸ್ಥಾವರ ಮತ್ತು ಯಂತ್ರೋಪಕರಣ) | | 60,000 | – | | ಹಿಂದಿನಿಂದ ತಂದ ಶಿಲ್ಕು | | 1,10,000 | 68,000 |
| | | | | | | ವಿಲೇವಾರಿ(ಸಾಲ) | | 12,000 | – |
| | ವಿಲೇವಾರಿ (ಸಾಲಗಾರರು) | | – | 69,000 | | ವಿಲೇವಾರಿ(ಲಾಭ) | | 900 | 300 |
| | | | | | | ಬ್ಯಾಂಕು | | – | 700 |
| | ಬ್ಯಾಂಕು | | 62,900 | | | | | | |
| | | | **1,22,900** | **69,000** | | | | **1,22,900** | **69,000** |

**ಖರ್ಚು ಬ್ಯಾಂಕು ಖಾತೆ ಜಮಾ**

| ದಿನಾಂಕ | ವಿವರಗಳು | ರೋ. ಪಾ | ಮೊತ್ತ ₹ | ದಿನಾಂಕ | ವಿವರಗಳು | ರೋ. ಪಾ | ಮೊತ್ತ ₹ |
|---|---|---|---|---|---|---|---|
| | ಹಿಂದಿನಿಂದ ತಂದ ಶಿಲ್ಕು | | 25,000 | | ವಿಲೇವಾರಿ (ಸಾಹುಕಾರರು) | | 17,100 |
| | ವಿಲೇವಾರಿ (ಆಸ್ತಿಗಳನ್ನು ವಿಲೇವಾರಿ ಮಾಡಿದ್ದು) | | 55,900 | | ವಿಲೇವಾರಿ (ವೆಚ್ಚಗಳು) | | 1,600 |
| | | | | | ಸೋನುರವರ ಬಂಡವಾಳ | | 62,900 |
| | ಆಶುರವರ ಬಂಡವಾಳ | | 700 | | | | |
| | | | **81,600** | | | | **81,600** |

**ನಿದರ್ಶನ – 8**

ಅಂಜು, ಮಂಜು ಮತ್ತು ಸಂಜು 3:1:1 ಅನುಪಾತದಲ್ಲಿ ಲಾಭ ಹಂಚಿಕೊಳ್ಳುತ್ತಿದ್ದು, ಅವರ ಸಂಸ್ಥೆಯನ್ನು ವಿಸರ್ಜಿಸಲು ನಿರ್ಧರಿಸಿದರು. 31 ಮಾರ್ಚ್, 2014 ರಂದು ಅವರ ಸ್ಥಿತಿ ಈ ಕೆಳಗಿನಂತಿದೆ:

**31 ಮಾರ್ಚ್, 2014 ರಂದು ಇದ್ದಂತೆ ಅಂಜು, ಮಂಜು ಮತ್ತು ಸಂಜುರವರ ಅಢಾವೆ ಪತ್ರಿಕೆ:**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | | ಮೊತ್ತ ₹ |
|---|---|---|---|---|---|
| ಸಾಹುಕಾರರು | | 60,000 | ಬ್ಯಾಂಕಿನಲ್ಲಿ ನಗದು | | 35,000 |
| ಸಾಲ | | 15,000 | ದಾಸ್ತಾನು | | 83,000 |
| ಬಂಡವಾಳಗಳು: | | | ಪೀಠೋಪಕರಣ | | 12,000 |
| ಅಂಜು | 2,75,000 | | ಸಾಲಗಾರರು | 2,42,000 | |
| ಮಂಜು | 1,10,000 | | ಕಳೆ: ಸಂಶಯಾಸ್ಪದ | | |
| ಸಂಜು | 1,00,000 | 4,85,000 | ಸಾಲಕ್ಕೆ ತೆಗೆದಿರಿಸಿದ್ದು | 12,000 | 2,30,000 |
| | | | ಕಟ್ಟಡಗಳು | | 2.00,000 |
| | | **5,60,000** | | | **5,60,000** |

**ಈ ಕೆಳಗಿನಂತೆ ಒಪ್ಪಂದ ಏರ್ಪಟ್ಟಿದೆ:**

1. ಅಂಜು ಪೀಠೋಪಕರಣಗಳನ್ನು ₹10,000ಕ್ಕೆ ತೆಗೆದುಕೊಂಡಿದ್ದಾರೆ ಮತ್ತು ₹2,00,000 ಮೌಲ್ಯದ ಸಾಲಗಾರರನ್ನು ₹1,85,000ಕ್ಕೆ ಪಡೆದುಕೊಂಡಿದ್ದಾರೆ. ಅಂಜು ಅವರು ಸಾಹುಕಾರರಿಗೆ ಪಾವತಿ ಮಾಡುವುದಾಗಿ ಸಹ ಒಪ್ಪಿಕೊಂಡಿದ್ದಾರೆ.
2. ಮಂಜು ದಾಸ್ತಾನನ್ನು ಪುಸ್ತಕದ ಮೌಲ್ಯಕ್ಕೆ ತೆಗೆದುಕೊಂಡಿದ್ದಾರೆ ಮತ್ತು ಕಟ್ಟಡಗಳನ್ನು ಪುಸ್ತಕದ ಮೌಲ್ಯಕ್ಕಿಂತ 10% ಕಡಿಮೆಗೆ ತೆಗೆದುಕೊಂಡಿರುತ್ತಾರೆ.
3. ಸಂಜುರವರು ಉಳಿದಿರುವ ಸಾಲಗಾರರನ್ನು ಪುಸ್ತಕದ ಮೌಲ್ಯದ 80%ಗೆ ತೆಗೆದುಕೊಂಡಿದ್ದಾರೆ ಮತ್ತು ಸಾಲ ಪಾವತಿಸುವ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ.
4. ವಿಸರ್ಜನೆಯ ವೆಚ್ಚಗಳು ₹2,200 ಆಗಿರುತ್ತದೆ.

ವಿಲೇವಾರಿ ಖಾತೆ, ಬ್ಯಾಂಕು ಖಾತೆ ಮತ್ತು ಪಾಲುದಾರರ ಬಂಡವಾಳ ಖಾತೆಗಳನ್ನು ತಯಾರಿಸಿ.

**ಪರಿಹಾರ:**

**ಅಂಜು, ಮಂಜು ಮತ್ತು ಸಂಜುರವರ ಪುಸ್ತಕಗಳು**

**ಖರ್ಚು ವಿಲೇವಾರಿ ಖಾತೆ ಜಮಾ**

| ವಿವರಗಳು | | ಮೊತ್ತ ₹ | ವಿವರಗಳು | | ಮೊತ್ತ ₹ |
|---|---|---|---|---|---|
| ದಾಸ್ತಾನು | 83,000 | | ಸಂಶಯಾಸ್ಪದ ಸಾಲಕ್ಕೆ ತೆಗೆದಿರಿಸಿದ್ದು | | 12,000 |
| ಪೀಠೋಪಕರಣ | 12,000 | | ಸಾಹುಕಾರರು | | 60,000 |
| ಸಾಲಗಾರರು | 2,42,000 | | ಸಾಲ | | 15,000 |
| ಕಟ್ಟಡಗಳು | 2,00,000 | 5,37,000 | ಅಂಜುರವರ ಬಂಡವಾಳ: | | |
| ಅಂಜುರವರ ಬಂಡವಾಳ (ಸಾಹುಕಾರರು) | | 60,000 | ಪೀಠೋಪಕರಣ | 10,000 | |
| | | | ಸಾಲಗಾರರು | 1,85,000 | 1,95,000 |
| ಸಂಜುರವರ ಬಂಡವಾಳ (ಸಾಲ) | | 15,000 | ಮಂಜುರವರ ಬಂಡವಾಳ: | | |
| ಬ್ಯಾಂಕು (ವಿಲೇವಾರಿ ವೆಚ್ಚಗಳು) | | 2,200 | ದಾಸ್ತಾನು | 83,000 | |
| | | | ಕಟ್ಟಡಗಳು | 1,80,000 | 2,63,000 |
| | | | ಸಂಜುರವರ ಬಂಡವಾಳ: (ಉಳಿದ ಸಾಲಗಾರರು–ಪುಸ್ತಕ ಮೌಲ್ಯದ 20%) | | 33,600 |
| | | | ನಷ್ಟ ವರ್ಗಾಯಿಸಿದೆ: | | |
| | | | ಅಂಜುರವರ ಬಂಡವಾಳ | 21,360 | |
| | | | ಮಂಜುರವರ ಬಂಡವಾಳ | 7,120 | |
| | | | ಸಂಜುರವರ ಬಂಡವಾಳ | 7,120 | 35,600 |
| | | **6,14,200** | | | **6,14,200** |

**ಖರ್ಚು ಪಾಲುದಾರರ ಬಂಡವಾಳ ಖಾತೆಗಳು ಜಮಾ**

| ದಿನಾಂಕ | ವಿವರಗಳು | ರೋ. ಪಾ | ಅಂಜು ₹ | ಮಂಜು ₹ | ಸಂಜು ₹ | ದಿನಾಂಕ | ವಿವರಗಳು | ರೋ. ಪಾ | ಅಂಜು ₹ | ಮಂಜು ₹ | ಸಂಜು ₹ |
|---|---|---|---|---|---|---|---|---|---|---|---|
| | ವಿಲೇವಾರಿ (ಆಸ್ತಿಗಳು) | | 1,95,000 | 2,63,000 | 33,600 | | ಹಿಂದಿನಿಂದ ತಂದ ಶಿಲ್ಕು | | 2,75,000 | 1,10,000 | 1,00,000 |
| | ವಿಲೇವಾರಿ (ನಷ್ಟ) | | 21,360 | 7,120 | 7,120 | | ವಿಲೇವಾರಿ(ಸಾಹುಕಾರ) | | 60,000 | – | – |
| | ಬ್ಯಾಂಕು | | 1,18,640 | – | 74,280 | | ವಿಲೇವಾರಿ (ಸಾಲ) | | – | – | 15,000 |
| | | | | | | | ಬ್ಯಾಂಕು | | – | 1,60,120 | – |
| | | | **3,35,000** | **2,70,120** | **1,15,000** | | | | **3,35,000** | **2,70,120** | **1,15,000** |

**ಖರ್ಚು** **ಬ್ಯಾಂಕು ಖಾತೆ** **ಜಮಾ**

| ದಿನಾಂಕ | ವಿವರಗಳು | ರೋ. ಪಾ | ಮೊತ್ತ ₹ | ದಿನಾಂಕ | ವಿವರಗಳು | ರೋ. ಪಾ | ಮೊತ್ತ ₹ |
|---|---|---|---|---|---|---|---|
| | ಹಿಂದಿನಿಂದ ತಂದ ಶಿಲ್ಕು | | 35,000 | | ವಿಲೇವಾರಿ (ವೆಚ್ಚಗಳು) | | 2,200 |
| | ಮಂಜುರವರ ಬಂಡವಾಳ | | 1,60,120 | | ಅಂಜುರವರ ಬಂಡವಾಳ | | 1,18,640 |
| | | | | | ಸಂಜುರವರ ಬಂಡವಾಳ | | 74,280 |
| | | | **1,95,120** | | | | **1,95,120** |

**ನಿದರ್ಶನ – 9**

ಅಮಿತ್, ಸುಮಿತ್ ಮತ್ತು ವಿನಿತ್ 5 : 3 : 2 ಅನುಪಾತದಲ್ಲಿ ಲಾಭ ಹಂಚಿಕೊಳ್ಳುವ ಪಾಲುದಾರರಾಗಿದ್ದಾರೆ. ಮಾರ್ಚ್ 31, 2015ರಂದು ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿತ್ತು:

**ಮಾರ್ಚ್ 31, 2015ರಂದು ಇದ್ದಂತೆ ಅಮಿತ್, ಸುಮಿತ್ ಮತ್ತು ವಿನಿತ್‌ರವರ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|---|
| ಬಂಡವಾಳಗಳು: | | | ಯಂತ್ರೋಪಕರಣ | 80,000 |
| ಅಮಿತ್ | 40,000 | | ಹೂಡಿಕೆಗಳು | 1,50,000 |
| ಸುಮಿತ್ | 50,000 | | ದಾಸ್ತಾನು | 10,000 |
| ವಿನಿತ್ | 60,000 | 1,50,000 | ಸಾಲಗಾರರು | 35,000 |
| ಲಾಭ ಮತ್ತು ನಷ್ಟ | | 10,000 | ಬ್ಯಾಂಕಿನಲ್ಲಿ ನಗದು | 15,000 |
| ಶ್ರೀಮತಿ ಅಮಿತ್‌ರ ಸಾಲ | | 40,000 | | |
| ಸಾಹುಕಾರರು | | 90,000 | | |
| | | 2,90,000 | | 2,90,000 |

ಮೇಲಿನ ದಿನಾಂಕದಂದು ಸಂಸ್ಥೆಯನ್ನು ವಿಸರ್ಜಿಸಲಾಯಿತು. ಅಮಿತ್ ತನ್ನ ಹೆಂಡತಿಯ ಸಾಲ ವಹಿಸಿಕೊಂಡನು. ಒಬ್ಬ ಸಾಹುಕಾರ ₹2,600ನ್ನು ಕೇಳಿರುವುದಿಲ್ಲ. ಉಳಿದ ಆಸ್ತಿಗಳನ್ನು ಈ ಕೆಳಗಿನಂತೆ ವಿಲೇವಾರಿ ಮಾಡಲಾಯಿತು:

1. ಯಂತ್ರೋಪಕರಣವನ್ನು ₹70,000ಕ್ಕೆ ಮಾರಲಾಯಿತು.
2. ₹1,00,000 ಪುಸ್ತಕ ಮೌಲ್ಯದ ಹೂಡಿಕೆಗಳನ್ನು ಸಾಹುಕಾರರಿಗೆ ಅವರ ಲೆಕ್ಕ ಚುಕ್ತ ಮಾಡುವ ಸಲುವಾಗಿ ನೀಡಲಾಯಿತು. ಉಳಿದ ಹೂಡಿಕೆಗಳನ್ನು ವಿನಿತ್‌ರವರು ₹45000ಗೆ ಪಡೆದುಕೊಂಡರು.
3. ದಾಸ್ತಾನನ್ನು ₹11,000ಕ್ಕೆ ಮಾರಲಾಯಿತು ಮತ್ತು ಸಾಲಗಾರರಲ್ಲಿ ₹3,000 ಕರಡು ಸಾಲ ಎಂದು ಸಾಬೀತಾಯಿತು.
4. ವಿಲೇವಾರಿ ವೆಚ್ಚಗಳು ₹1,500 ಆಗಿದೆ.

ಸಂಸ್ಥೆಯ ಪುಸ್ತಕಗಳನ್ನು ಮುಕ್ತಾಯಗೊಳಿಸಲು ಅವಶ್ಯಕ ಖಾತೆಗಳನ್ನು ತಯಾರಿಸಿ.

**ಪರಿಹಾರ:**

**ಅಮಿತ್, ಸುಮಿತ್ ಮತ್ತು ವಿನಿತ್‌ರವರ ಪುಸ್ತಕಗಳು**

**ಖರ್ಚು ವಿಲೇವಾರಿ ಖಾತೆ ಜಮಾ**

| ವಿವರಗಳು | | ಮೊತ್ತ ₹ | ವಿವರಗಳು | | ಮೊತ್ತ ₹ |
|---|---|---|---|---|---|
| ಯಂತ್ರೋಪಕರಣ | 80,000 | | ಸಾಹುಕಾರರು | | 90,000 |
| ಹೂಡಿಕೆಗಳು | 1,50,000 | | ಶ್ರೀಮತಿ ಅಮಿತ್ ಸಾಲ | | 40,000 |
| ದಾಸ್ತಾನು | 10,000 | | ಬ್ಯಾಂಕು: | | |
| ಸಾಲಗಾರರು | 35,000 | 2,75,000 | ಯಂತ್ರೋಪಕರಣ | 70,000 | |
| ಅಮಿತ್‌ರವರ ಬಂಡವಾಳ (ಹೆಂಡತಿ ಸಾಲ) | | 40,000 | ದಾಸ್ತಾನು | 11,000 | |
| ಬ್ಯಾಂಕು (ವಿಲೇವಾರಿ ವೆಚ್ಚಗಳು) | | 1,500 | ಸಾಲಗಾರರು | 32,000 | 1,13,000 |
| | | | ವಿನಿತ್‌ರ ಬಂಡವಾಳ (ಹೂಡಿಕೆಗಳು) | | 45,000 |
| | | | ನಷ್ಟ ವರ್ಗಾಯಿಸಿದೆ: | | |
| | | | ಅಮಿತ್‌ರವರ ಬಂಡವಾಳ | 14,250 | |
| | | | ಸುಮಿತ್‌ರವರ ಬಂಡವಾಳ | 8,550 | |
| | | | ವಿನಿತ್‌ರವರ ಬಂಡವಾಳ | 5,700 | 28,500 |
| | | **3,16,500** | | | **3,16,500** |

**ಖರ್ಚು ಪಾಲುದಾರರ ಬಂಡವಾಳ ಖಾತೆಗಳು ಜಮಾ**

| ದಿನಾಂಕ | ವಿವರಗಳು | ರೋ. ಪಾ | ಅಮಿತ್ ₹ | ಸುಮಿತ್ ₹ | ವಿನಿತ್ ₹ | ದಿನಾಂಕ | ವಿವರಗಳು | ರೋ. ಪಾ | ಅಮಿತ್ ₹ | ಸುಮಿತ್ ₹ | ವಿನಿತ್ ₹ |
|---|---|---|---|---|---|---|---|---|---|---|---|
| | ವಿಲೇವಾರಿ (ಆಸ್ತಿಗಳು) | | – | – | 45,000 | | ಹಿಂದಿನಿಂದ ತಂದ ಶಿಲ್ಕು | | 40,000 | 50,000 | 60,000 |
| | ವಿಲೇವಾರಿ (ನಷ್ಟ) | | 14,250 | 8,550 | 5,700 | | ವಿಲೇವಾರಿ (ಶ್ರೀಮತಿ ಅಮಿತ್‌ರ ಸಾಲ) | | 40,000 | – | – |
| | ಬ್ಯಾಂಕು | | 70,750 | 44,450 | 11,300 | | ಲಾಭ ಮತ್ತು ನಷ್ಟ | | 5,000 | 3,000 | 2,000 |
| | | | **85,000** | **53,000** | **62,000** | | | | **85,000** | **53,000** | **62,000** |

**ಖರ್ಚು ಬ್ಯಾಂಕು ಖಾತೆ ಜಮಾ**

| ದಿನಾಂಕ | ವಿವರಗಳು | ರೋ. ಪಾ | ಮೊತ್ತ ₹ | ದಿನಾಂಕ | ವಿವರಗಳು | ರೋ. ಪಾ | ಮೊತ್ತ ₹ |
|---|---|---|---|---|---|---|---|
| | ಹಿಂದಿನಿಂದ ತಂದ ಶಿಲ್ಕು | | 15,000 | | ವಿಲೇವಾರಿ (ವೆಚ್ಚಗಳು) | | 1,500 |
| | ವಿಲೇವಾರಿ (ಆಸ್ತಿಗಳನ್ನು ವಿಲೇವಾರಿ ಮಾಡಿದೆ) | | 1,13,000 | | ಅಮಿತ್‌ರ ಬಂಡವಾಳ | | 70,750 |
| | | | | | ಸುಮಿತ್‌ರ ಬಂಡವಾಳ | | 44,450 |
| | | | | | ವಿನಿತ್‌ರ ಬಂಡವಾಳ | | 11,300 |
| | | | **1,28,000** | | | | **1,28,000** |

**ಟಿಪ್ಪಣಿ:** ನಿಯಮಗಳ ಪ್ರಕಾರ ಸಾಹುಕಾರರು ಹೂಡಿಕೆಗಳನ್ನು ತೆಗೆದುಕೊಂಡಿದ್ದಕ್ಕೆ ಯಾವುದೇ ದಾಖಲೆಯನ್ನು ಮಾಡಿರುವುದಿಲ್ಲ.

**ನಿದರ್ಶನ – 10**

ಮೀನಾ ಮತ್ತು ಟೀನಾ ಒಂದು ಸಂಸ್ಥೆಯಲ್ಲಿ 3:2ರ ಅನುಪಾತದಲ್ಲಿ ಲಾಭ ಹಂಚಿಕೊಳ್ಳುವ ಪಾಲುದಾರರು. ಅವರು ಮಾರ್ಚ್ 31, 2014ರಂದು ಅವರ ಸಂಸ್ಥೆಯನ್ನು ವಿಸರ್ಜಿಸಲು ತೀರ್ಮಾನಿಸಿದರು. ಆ ದಿನ ಅವರ ಆಢಾವೆ ಪತ್ರಿಕೆ ಈ ಕೆಳಗಿನಂತಿತ್ತು:

**ಮೀನಾ ಮತ್ತು ಟೀನಾರವರ ಆಢಾವೆ ಪತ್ರಿಕೆ ಮಾರ್ಚ್ 31, 2014ರಂದು ಇದ್ದಂತೆ.**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|---|
| ಬಂಡವಾಳಗಳು: | | | ಯಂತ್ರೋಪಕರಣ | 70,000 |
| ಮೀನಾ | 90,000 | | ಹೂಡಿಕೆಗಳು | 50,000 |
| ಟೀನಾ | 80,000 | 1,70,000 | ದಾಸ್ತಾನು | 22,000 |
| ಸಾಹುಕಾರರು | | 60,000 | ಸಾಲಗಾರರು | 1,03,000 |
| ಕೊಡತಕ್ಕ ಹುಂಡಿಗಳು | | 20,000 | ಬ್ಯಾಂಕಿನಲ್ಲಿ ನಗದು | 5,000 |
| | | **2,50,000** | | **2,50,000** |

ಆಸ್ತಿಗಳನ್ನು ಮತ್ತು ಹೊಣೆಗಾರಿಕೆಗಳನ್ನು ಈ ಕೆಳಗಿನಂತೆ ವಿಲೇವಾರಿ ಮಾಡಿದೆ.

(ಎ) ಯಂತ್ರೋಪಕರಣವನ್ನು ಸಾಹುಕಾರರಿಗೆ ಕೊಟ್ಟು ಅವರ ಲೆಕ್ಕ ಚುಕ್ತಾ ಮಾಡಿದೆ ಮತ್ತು ದಾಸ್ತಾನನ್ನು ಕೊಡತಕ್ಕ ಹುಂಡಿಗಳಿಗೆ ಕೊಟ್ಟು ಅವರ ಲೆಕ್ಕ ಚುಕ್ತಾ ಮಾಡಿದೆ.

(ಬಿ) ಹೂಡಿಕೆಗಳನ್ನು ಟೀನಾ ಪುಸ್ತಕದ ಮೌಲ್ಯಕ್ಕೆ ಪಡೆದುಕೊಂಡರು. ₹50,000 ಪುಸ್ತಕ ಮೌಲ್ಯದ ಸಾಲಗಾರರನ್ನು ಮೀನಾ 10% ಕಡಿಮೆಗೆ ಪಡೆದುಕೊಂಡರು ಮತ್ತು ಉಳಿದ ಸಾಲಗಾರರಿಂದ ₹51,000 ಹಣ ಬಂದಿದೆ.

(ಸಿ) ವಿಲೇವಾರಿ ವೆಚ್ಚಗಳು ₹2000 ಆಗಿದೆ.

ಸಂಸ್ಥೆಯ ಪುಸ್ತಕಗಳನ್ನು ಮುಕ್ತಾಯ ಮಾಡಲು, ಅವಶ್ಯಕ ಖಾತೆಗಳನ್ನು ತಯಾರಿಸಿ.

**ಪರಿಹಾರ:**

**ಮೀನಾ ಮತ್ತು ಟೀನಾರವರ ಪುಸ್ತಕಗಳು**

**ಖರ್ಚು** **ವಿಲೇವಾರಿ ಖಾತೆ** **ಜಮಾ**

| ವಿವರಗಳು | | ಮೊತ್ತ ₹ | ವಿವರಗಳು | | ಮೊತ್ತ ₹ |
|---|---|---|---|---|---|
| ಆಸ್ತಿಗಳನ್ನು ವರ್ಗಾಯಿಸಿದೆ: | | | ಸಾಹುಕಾರರು | | 60,000 |
| ಯಂತ್ರೋಪಕರಣ | 70,000 | | ಕೊಡತಕ್ಕ ಹುಂಡಿಗಳು | | 20,000 |
| ಹೂಡಿಕೆಗಳು | 50,000 | | ಟೀನಾಳ ಬಂಡವಾಳ (ಹೂಡಿಕೆ) | | 50,000 |
| ದಾಸ್ತಾನು | 22,000 | | ಮೀನಾಳ ಬಂಡವಾಳ (ಸಾಲಗಾರರು, ಪುಸ್ತಕದ ಮೌಲ್ಯ 50000–10%) | | 45,000 |
| ಸಾಲಗಾರರು | 1,03,000 | 2,45,000 | ಬ್ಯಾಂಕು: | | |
| ಬ್ಯಾಂಕು (ವಿಲೇವಾರಿ ವೆಚ್ಚಗಳು) | | 2,000 | ಸಾಲಗಾರರು | | 51,000 |
| | | | ನಷ್ಟ ವರ್ಗಾಯಿಸಿದೆ: | | |
| | | | ಮೀನಾಳ ಬಂಡವಾಳ | 12,600 | |
| | | | ಟೀನಾಳ ಬಂಡವಾಳ | 8,400 | 21,000 |
| | | **2,47,000** | | | **2,47,000** |

**ಖರ್ಚು ಪಾಲುದಾರರ ಬಂಡವಾಳ ಖಾತೆಗಳು ಜಮಾ**

| ದಿನಾಂಕ | ವಿವರಗಳು | ರೋ. ಪಾ | ಮೀನಾ ₹ | ಟೀನಾ ₹ | ದಿನಾಂಕ | ವಿವರಗಳು | ರೋ. ಪಾ | ಮೀನಾ ₹ | ಟೀನಾ ₹ |
|---|---|---|---|---|---|---|---|---|---|
| | ವಿಲೇವಾರಿ(ಹೂಡಿಕೆ) | | – | 50,000 | | ಹಿಂದಿನಿಂದ ತಂದ ಶಿಲ್ಕು | | 90,000 | 80,000 |
| | ವಿಲೇವಾರಿ (ಸಾಲಗಾರರು) | | 45,000 | – | | | | | |
| | ವಿಲೇವಾರಿ (ನಷ್ಟ) | | 12,600 | 8,400 | | | | | |
| | ಬ್ಯಾಂಕು | | 32,400 | 21,600 | | | | | |
| | | | **90,000** | **80,000** | | | | **90,000** | **80,000** |

**ಖರ್ಚು ಬ್ಯಾಂಕು ಖಾತೆ ಜಮಾ**

| ದಿನಾಂಕ | ವಿವರಗಳು | ರೋ. ಪಾ | ಮೊತ್ತ ₹ | ದಿನಾಂಕ | ವಿವರಗಳು | ರೋ. ಪಾ | ಮೊತ್ತ ₹ |
|---|---|---|---|---|---|---|---|
| | ಹಿಂದಿನಿಂದ ತಂದ ಶಿಲ್ಕು | | 5,000 | | ವಿಲೇವಾರಿ (ವೆಚ್ಚಗಳು) | | 2,000 |
| | ವಿಲೇವಾರಿ (ಆಸ್ತಿಗಳನ್ನು ವಿಲೇವಾರಿ ಮಾಡಿದೆ) | | 51,000 | | ಮೀನಾಳ ಬಂಡವಾಳ | | 32,400 |
| | | | | | ಟೀನಾಳ ಬಂಡವಾಳ | | 21,600 |
| | | | **56,000** | | | | **56,000** |

**ಈ ಅಧ್ಯಾಯದಲ್ಲಿ ಪರಿಚಯಿಸಲಾದ ಪದಗಳು:**

1. ಪಾಲುದಾರಿಕೆಯ ವಿಸರ್ಜನೆ.
2. ಪಾಲುದಾರಿಕೆ ಸಂಸ್ಥೆಯ ವಿಸರ್ಜನೆ.
3. ಇಚ್ಛಾನುಸಾರ ಪಾಲುದಾರಿಕೆ.
4. ಕಡ್ಡಾಯ ವಿಸರ್ಜನೆ
5. ನೋಟೀಸಿನ ಮೂಲಕ ವಿಸರ್ಜನೆ
6. ವಿಲೇವಾರಿ ವೆಚ್ಚಗಳು
7. ವಿಲೇವಾರಿ ಖಾತೆ.

## ಸಾರಾಂಶ Summary

1. **ಪಾಲುದಾರಿಕೆ ಸಂಸ್ಥೆಯ ವಿಸರ್ಜನೆ:** ಸಂಸ್ಥೆಯ ವಿಸರ್ಜನೆ, ಪಾಲುದಾರಿಕೆ ವ್ಯವಹಾರ ಸ್ಥಗಿತವಾಗುವುದನ್ನು ಮತ್ತು ಪಾಲುದಾರರ ನಡುವಿನ ಆರ್ಥಿಕ ಸಂಬಂಧಗಳು ಬೇರ್ಪಡುವುದನ್ನು ತಿಳಿಸುತ್ತದೆ. ಒಂದು ಸಂಸ್ಥೆ ವಿಸರ್ಜನೆಯಾದಾಗ, ಅದು ತನ್ನೆಲ್ಲಾ ವ್ಯವಹಾರಗಳನ್ನು ಮುಕ್ತಾಯಗೊಳಿಸುತ್ತದೆ ಮತ್ತು ತನ್ನ ಎಲ್ಲಾ ಆಸ್ತಿಗಳನ್ನು ವಿಲೇವಾರಿ ಮಾಡುತ್ತದೆ ಮತ್ತು ತನ್ನ ಎಲ್ಲಾ ಹೊಣೆಗಾರಿಕೆಗಳನ್ನು ಪಾವತಿಸುತ್ತದೆ. ಆಸ್ತಿಗಳನ್ನು ವಿಲೇವಾರಿ ಮಾಡಿ ಬಂದ ಹಣದಲ್ಲಿ ಮೊದಲು ಸಾಹುಕಾರರಿಗೆ ಪಾವತಿ ಮಾಡಲಾಗುತ್ತದೆ ಮತ್ತು ಅಗತ್ಯ ಬಂದರೆ, ಪಾಲುದಾರರು ಅವರ ಲಾಭ ಹಂಚಿಕೆಯ ಅನುಪಾತದಲ್ಲಿ ತಂದ ಹಣದಿಂದ ಪಾವತಿಸಲಾಗುತ್ತದೆ. ಎಲ್ಲಾ ಖಾತೆಗಳನ್ನು ಚುಕ್ತಾ ಮಾಡಿದ ಮೇಲೆ ಅಂತಿಮವಾಗಿ ಪಾಲುದಾರರಿಗೆ ಕೊಡಬೇಕಾಗಿರುವ ಮೊತ್ತವನ್ನು ಪಾವತಿಸಿ, ಸಂಸ್ಥೆಯ ಪುಸ್ತಕಗಳನ್ನು ಮುಕ್ತಾಯಗೊಳಿಸಲಾಗುತ್ತದೆ.
2. **ಪಾಲುದಾರಿಕೆಯ ವಿಸರ್ಜನೆ:** ಪಾಲುದಾರನ ಪ್ರವೇಶ, ನಿವೃತ್ತಿ, ಮರಣ ಇತ್ಯಾದಿಗಳ ಸಂದರ್ಭದಲ್ಲಿ ಪಾಲುದಾರಿಕೆ ವಿಸರ್ಜನೆಯಾಗುತ್ತದೆ. ಇದರಿಂದ ಸಂಸ್ಥೆಯ ವಿಸರ್ಜನೆ ಆಗಬೇಕು ಎಂದೇನಿಲ್ಲ.
3. **ವಿಲೇವಾರಿ ಖಾತೆ:** ವಿಲೇವಾರಿ ಖಾತೆಯನ್ನು, ಆಸ್ತಿಗಳ ಮಾರಾಟ ಮತ್ತು ವಿಲೇವಾರಿ ಮತ್ತು ಸಾಹುಕಾರರ ಲೆಕ್ಕ ಇತ್ಯರ್ಥಪಡಿಸುವುದಕ್ಕೆ ಸಂಬಂಧಿಸಿದ ವಹಿವಾಟುಗಳನ್ನು ಬರೆಯಲು ತಯಾರಿಸಲಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಯಾವುದೇ ಲಾಭ ಅಥವಾ ನಷ್ಟ ಬಂದರೆ ಅದನ್ನು ಪಾಲುದಾರರು ಲಾಭ ಹಂಚಿಕೆಯ ಅನುಪಾತದಲ್ಲಿ ಹಂಚಿಕೊಳ್ಳುವರು. ಪಾಲುದಾರರ ಖಾತೆಗಳನ್ನೂ ಸಹ ಚುಕ್ತಾ ಮಾಡಲಾಗುವುದು ಮತ್ತು ನಗದು ಅಥವಾ ಬ್ಯಾಂಕು ಖಾತೆಯನ್ನು ಕೊನೆಗೊಳಿಸಲಾಗುವುದು.

## ಅಭ್ಯಾಸದ ಪ್ರಶ್ನೆಗಳು Questions for Practice

### ಕಿರು ಉತ್ತರದ ಪ್ರಶ್ನೆಗಳು Short Answer Questions.

1. ಪಾಲುದಾರಿಕೆ ವಿಸರ್ಜನೆ ಮತ್ತು ಪಾಲುದಾರಿಕೆ ಸಂಸ್ಥೆಯ ವಿಸರ್ಜನೆಯ ನಡುವಿನ ವ್ಯತ್ಯಾಸವನ್ನು ತಿಳಿಸಿ.
2. ಇವುಗಳ ಲೆಕ್ಕದ ಪರಿಗಣನೆಯನ್ನು ತಿಳಿಸಿ:
   (ಎ) ದಾಖಲಿಸದ ಆಸ್ತಿಗಳು
   (ಬಿ) ದಾಖಲಿಸದ ಹೊಣೆಗಾರಿಕೆಗಳು
3. ವಿಸರ್ಜನೆಯ ಸಮಯದಲ್ಲಿ, ಪಾಲುದಾರನ ಸಾಲವನ್ನು ಹೇಗೆ ಪರಿಗಣಿಸುವಿರಿ:
   (ಎ) ಅಢಾವೆ ಪತ್ರಿಕೆಯ ಆಸ್ತಿಗಳ ಬದಿಯಲ್ಲಿ ಇದ್ದರೆ.
   (ಬಿ) ಅಢಾವೆ ಪತ್ರಿಕೆಯ ಹೊಣೆಗಾರಿಕೆಗಳ ಬದಿಯಲ್ಲಿ ಇದ್ದರೆ.
4. ಸಂಸ್ಥೆಯ ಸಾಲಗಳು ಮತ್ತು ಪಾಲುದಾರನ ಖಾಸಗಿ ಸಾಲಗಳ ನಡುವಿನ ವ್ಯತ್ಯಾಸ ತಿಳಿಸಿ.
5. ವಿಸರ್ಜನೆಯ ವೇಳೆ ಲೆಕ್ಕಗಳನ್ನು ಇತ್ಯರ್ಥ ಮಾಡುವ ಕ್ರಮವನ್ನು ತಿಳಿಸಿ.
6. ಮರುಮೌಲ್ಯಮಾಪನ ಖಾತೆಯಿಂದ ವಿಲೇವಾರಿ ಖಾತೆ ಯಾವ ರೀತಿ ಭಿನ್ನವಾಗಿದೆ?

### ದೀರ್ಘ ಉತ್ತರ ಪ್ರಶ್ನೆಗಳು Long Answer Questions.

1. ಪಾಲುದಾರಿಕೆ ಸಂಸ್ಥೆ ವಿಸರ್ಜನೆ ಎಂದರೇನು?
2. ವಿಲೇವಾರಿ ಖಾತೆ ಎಂದರೇನು?
3. ವಿಲೇವಾರಿ ಖಾತೆಯ ಮಾದರಿಯನ್ನು ಬರೆಯಿರಿ.
4. ಸಾಹುಕಾರರ ಕೊರತೆಯನ್ನು ಹೇಗೆ ಪಾವತಿಸಲಾಗುತ್ತದೆ?

### ಸಂಖ್ಯಾತ್ಮಕ ಪ್ರಶ್ನೆಗಳು Numerical Questions.

1. ವಿಲೇವಾರಿ ವೆಚ್ಚಗಳಿಗೆ ಸಂಬಂಧಿಸಿದ ಈ ಕೆಳಗಿನ ವಹಿವಾಟುಗಳಿಗೆ ರೋಜು ದಾಖಲೆಗಳನ್ನು ಕೊಡಿ:
   (ಎ) ವಿಲೇವಾರಿ ವೆಚ್ಚಗಳು ₹ 2,500 ಆಗಿದೆ.
   (ಬಿ) ವಿಲೇವಾರಿ ವೆಚ್ಚಗಳು ₹ 3,000ಗಳನ್ನು ಪಾಲುದಾರರಲ್ಲಿ ಒಬ್ಬನಾದ ಅಶೋಕನು ಪಾವತಿಸಿದ್ದಾನೆ.
   (ಸಿ) ವಿಲೇವಾರಿ ವೆಚ್ಚಗಳಾದ ₹2,300ನ್ನು ತರುಣ್ ವೈಯಕ್ತಿಕವಾಗಿ ಭರಿಸಿದ್ದಾನೆ.
   (ಡಿ) ಆಸ್ತಿಗಳನ್ನು ವಿಲೇವಾರಿ ಮಾಡಲು ₹ 4,000ಕ್ಕೆ ಪಾಲುದಾರನಾದ ಅಮಿತ್‌ನನ್ನು ನೇಮಿಸಿದೆ. ನಿಜವಾದ ವಿಲೇವಾರಿ ವೆಚ್ಚ ₹ 3,000 ಆಗಿರುತ್ತದೆ.
2. ಈ ಕೆಳಗಿನ ಸಂದರ್ಭಗಳಿಗೆ ಸಂಬಂದಿಸಿದ ಅಗತ್ಯ ರೋಜು ದಾಖಲೆಗಳನ್ನು ಬರೆಯಿರಿ.
   (ಎ) ₹ 85,000 ಮೌಲ್ಯದ ಸಾಹುಕಾರರು ಅವರ ಲೆಕ್ಕ ಪೂರ್ತಿ ಚುಕ್ತ ಮಾಡಲು ₹ 40,000 ನಗದು ಮತ್ತು ₹ 43,000 ಮೌಲ್ಯದ ಹೂಡಿಕೆಗಳನ್ನು ಪಡೆದರು.

(ಬಿ) ಸಾಹುಕಾರರು ₹ 16,000 ಅವರು ತಮ್ಮ ಲೆಕ್ಕ ಚುಕ್ತ ಮಾಡಲು ₹ 18,000 ಮೌಲ್ಯದ ಯಂತ್ರೋಪಕರಣವನ್ನು ಪಡೆದುಕೊಂಡರು.

(ಸಿ) ಸಾಹುಕಾರರು ₹ 90,000, ಅವರು ₹ 1,20,000 ಮೌಲ್ಯದ ಕಟ್ಟಡಗಳನ್ನು ಪಡೆದುಕೊಂಡರು ಮತ್ತು ₹ 30,000 ನಗದನ್ನು ಸಂಸ್ಥೆಗೆ ಪಾವತಿಸಿದರು.

3. ಒಂದು ಹಳೇ ಗಣಕಯಂತ್ರ ಇತ್ತು, ಅದನ್ನು ಹಿಂದಿನ ವರ್ಷದ ಲೆಕ್ಕದ ಪುಸ್ತಗಳಿಂದ ತೆಗೆದುಹಾಕಲಾಗಿತ್ತು. ಅದನ್ನು ಪಾಲುದಾರರಲ್ಲಿ ಒಬ್ಬನಾದ ನಿತಿನ್ ₹ 3,000 ತೆಗೆದುಕೊಂಡನು. ಸಂಸ್ಥೆಯನ್ನು ವಿಸರ್ಜಿಸಿದೆ ಎಂದು ಭಾವಿಸಿ, ರೋಜು ದಾಖಲೆಯನ್ನು ಬರೆಯಿರಿ.

4. ಸಂಸ್ಥೆಯೊಂದು ವಿಸರ್ಜನೆಯಾದಾಗ ಈ ಕೆಳಗಿನ ವಹಿವಾಟುಗಳಿಗೆ ಯಾವ ರೋಜು ದಾಖಲೆಗಳನ್ನು ಬರೆಯುವಿರಿ:

(ಎ) ದಾಖಲಿಸದ ಹೊಣೆಗಾರಿಕೆಗಳು ₹ 3,200 ಪಾವತಿಸಿದ್ದಕ್ಕೆ.

(ಬಿ) ₹ 7,500 ಮೌಲ್ಯದ ದಾಸ್ತಾನನ್ನು ಪಾಲುದಾರನಾದ ರೋಹಿತ್ ತೆಗೆದುಕೊಂಡಿದ್ದಕ್ಕೆ.

(ಸಿ) ವಿಲೇವಾರಿಯಿಂದ ಬಂದ ಲಾಭ ₹ 18,000ವನ್ನು ಪಾಲುದಾರರಾದ ಆಶಿಶ್ ಮತ್ತು ತರುಣ್‌ರವರಿಗೆ 5:7 ಅನುಪಾತದಲ್ಲಿ ಹಂಚಿದ್ದಕ್ಕೆ.

(ಡಿ) ಒಂದು ದಾಖಲಿಸದ ಆಸ್ತಿಯನ್ನು ₹5,500ಕ್ಕೆ ವಿಲೇವಾರಿ ಮಾಡಿದ್ದಕ್ಕೆ.

5. ಈ ಕೆಳಗಿನ ವ್ಯವಹಾರಗಳಿಗೆ ರೋಜು ದಾಖಲೆಗಳನ್ನು ನೀಡಿ:

(ಎ) ವಿವಿಧ ಆಸ್ತಿಗಳನ್ನು ಮತ್ತು ಹೊಣೆಗಾರಿಕೆಗಳನ್ನು ವಿಲೇವಾರಿ ಮಾಡಿದ್ದನ್ನು ದಾಖಲಿಸಲು.

(ಬಿ) ಒಂದು ಸಂಸ್ಥೆ ₹ 1,60,000 ಮೌಲ್ಯದ ದಾಸ್ತಾನು ಹೊಂದಿದೆ. ಆಶಿಶ್ ಎಂಬ ಪಾಲುದಾರ ದಾಸ್ತಾನಿನ 50%ನ್ನು 20% ಸೋಡಿಗೆ ಪಡೆದನು.

(ಸಿ) ಉಳಿದ ದಾಸ್ತಾನನ್ನು 30% ಲಾಭಕ್ಕೆ ಮಾರಲಾಗಿದೆ.

(ಡಿ) ಭೂಮಿ ಮತ್ತು ಕಟ್ಟಡ (ಪುಸ್ತಕದ ಮೌಲ್ಯ ₹ 1,60,000) ₹ 3,00,000ಕ್ಕೆ ದಲ್ಲಾಳಿ ಮೂಲಕ ಮಾರಲಾಗಿದೆ, ದಲ್ಲಾಳಿ 2% ಕಮಿಷನ್ ವಿಧಿಸಿದ್ದಾನೆ.

(ಇ) ಸ್ಥಾವರ ಮತ್ತು ಯಂತ್ರವನ್ನು (ಪುಸ್ತಕದ ಮೌಲ್ಯ ₹ 60,000) ಒಪ್ಪಂದಂತೆ ಸಾಹುಕಾರನೊಬ್ಬನಿಗೆ ಪುಸ್ತಕದ ಮೌಲ್ಯಕ್ಕಿಂತ 10% ಕಡಿಮೆಗೆ ಕೊಡಲಾಗಿದೆ.

(ಎಫ್) ₹ 4,000 ಮುಖ ಬೆಲೆಯ ಹೂಡಿಕೆಯನ್ನು 50%ಗೆ ವಿಲೇವಾರಿ ಮಾಡಿದೆ.

6. ರಶ್ಮಿ ಮತ್ತು ಬಿಂದಿಯಾರವರ ಸಂಸ್ಥೆಗೆ ಸಂಬಂಧಿಸಿದ ವಿಲೇವಾರಿ ವೆಚ್ಚಗಳನ್ನು ಈ ಕೆಳಗಿನ ಸಂದರ್ಭಗಳಲ್ಲಿ ಹೇಗೆ ಪರಿಗಣಿಸುವಿರಿ:

(ಎ) ವಿಲೇವಾರಿ ವೆಚ್ಚಗಳು ₹ 1,00,000 ಆಗಿರುತ್ತದೆ.

(ಬಿ) ವಿಲೇವಾರಿ ವೆಚ್ಚಗಳು ₹ 30,000 ಗಳನ್ನು ಪಾಲುದಾರಳಾದ ರಶ್ಮಿ ಪಾವತಿಸಿದಳು.

(ಸಿ) ವಿಲೇವಾರಿ ವೆಚ್ಚಗಳನ್ನು ರಶ್ಮಿ ಪಾವತಿಸಬೇಕು, ಅದಕ್ಕೆ ಸಂಬಂದಿಸಿದಂತೆ ವಿಸರ್ಜನೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಅವಳಿಗೆ ₹ 70,000 ಸಂಭಾವನೆ ಕೊಡಲಾಗುತ್ತದೆ. ರಶ್ಮಿಯವರು ಭರಿಸಿದ ನಿಜವಾದ ವೆಚ್ಚಗಳು ₹ 1,20,000 ಆಗಿದೆ.

7. ವಿಲೇವಾರಿ ಖಾತೆಗೆ ವರ್ಗಾವಣೆ ಮಾಡಿದ ಆಸ್ತಿಗಳ (ನಗದು ಮತ್ತು ಬ್ಯಾಂಕು ಹೊರತುಪಡಿಸಿ) ಪುಸ್ತಕದ ಮೌಲ್ಯ ₹ 1,00,000. ಆಸ್ತಿಗಳ 50%ನ್ನು ಅತುಲ್ ಎಂಬ ಪಾಲುದಾರ 20% ಸೋಡಿಗೆ ತೆಗೆದುಕೊಂಡನು, ಉಳಿದ ಆಸ್ತಿಗಳ 40%ನ್ನು 30% ಲಾಭಕ್ಕೆ ಮಾರಲಾಗಿದೆ, ಉಳಿದಿದ್ದರಲ್ಲಿ 5% ಬಳಕೆಗೆ ಯೋಗ್ಯವಲ್ಲ, ಅದು ಯಾವುದೇ ಹಣಕ್ಕೆ ವಿಲೇವಾರಿಯಾಗಿಲ್ಲ ಮತ್ತು ಉಳಿದ ಆಸ್ತಿಗಳನ್ನು ಒಬ್ಬ ಸಾಹುಕಾರನಿಗೆ, ಅವನ ಲೆಕ್ಕ ಪೂರ್ತಿ ಚುಕ್ತಾ ಮಾಡುವ ಸಲುವಾಗಿ ಕೊಡಲಾಯಿತು. ಆಸ್ತಿಗಳ ವಿಲೇವಾರಿಗೆ ಸಂಬಂಧಿಸಿದ ರೋಜು ದಾಖಲೆಗಳನ್ನು ನೀಡಿರಿ.

8. ಪರಾಸ್ ಮತ್ತು ಪ್ರಿಯಾ ಅವರ ಪುಸ್ತಕಗಳಲ್ಲಿ ಈ ಕೆಳಗಿನ ದಾಖಲಿಸದ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ದಾಖಲಿಸಲು ಅವಶ್ಯಕವಾದ ರೋಜು ದಾಖಲೆಗಳನ್ನು ನೀಡಿ:

   (ಎ) ಸಂಸ್ಥೆಯಲ್ಲಿ ಒಂದು ಹಳೆಯ ಪೀಠೋಪಕರಣ ಇತ್ತು, ಅದನ್ನು ಪೂರ್ತಿಯಾಗಿ ಪುಸ್ತಕಗಳಿಂದ ತೆಗೆದುಹಾಕಲಾಗಿತ್ತು. ಅದನ್ನು ₹ 3,000ಕ್ಕೆ ಮಾರಿದೆ.

   (ಬಿ) ಹಳೆಯ ಗ್ರಾಹಕನಿಂದ ಬರಬೇಕಾಗಿದ್ದ ₹1,000ವನ್ನು ಕರಡು ಸಾಲ ಎಂದು ಹಿಂದಿನ ವರ್ಷ ಕಳೆಯಲಾಗಿತ್ತು. ಅವನು 60% ಹಣವನ್ನು ಪಾವತಿಸಿದನು.

   (ಸಿ) ಪರಾಸ್, ಸಂಸ್ಥೆಯ ಕೀರ್ತಿ ಮೌಲ್ಯವನ್ನು (ಸಂಸ್ಥೆಯ ಪುಸ್ತಕಗಳಲ್ಲಿ ದಾಖಲಿಸಿಲ್ಲ) ₹ 30,000ಕ್ಕೆ ತೆಗೆದುಕೊಳ್ಳಲು ಒಪ್ಪಿದ್ದಾನೆ.

   (ಡಿ) ಒಂದು ಹಳೆಯ ಬೆರಳಚ್ಚು ಯಂತ್ರ ಇತ್ತು ಅದನ್ನು ಪುಸ್ತಕಗಳಿಂದ ಸಂಪೂರ್ಣವಾಗಿ ತೆಗೆದುಹಾಕಲಾಗಿತ್ತು. ಅದು ₹ 400ಕ್ಕೆ ವಿಲೇವಾರಿಯಾಗಬಹುದು ಎಂದು ಅಂದಾಜಿಸಲಾಗಿದೆ. ಪ್ರಿಯ ಅದನ್ನು ಅಂದಾಜಿಸಿದ ಬೆಲೆಗಿಂತ 25% ಕಡಿಮೆ ಬೆಲೆಗೆ ಪಡೆದುಕೊಂಡಳು.

   (ಇ) ಸ್ಟಾರ್ ಲಿಮಿಟೆಡ್‌ನ ₹ 10 ಮುಖ ಬೆಲೆಯ 100 ಶೇರುಗಳಿದ್ದವು, ಅವುಗಳನ್ನು ₹2000 ವೆಚ್ಚಕ್ಕೆ ಖರೀದಿಸಲಾಗಿತ್ತು ಮತ್ತು ಅವುಗಳನ್ನು ಪುಸ್ತಕಗಳಿಂದ ಸಂಪೂರ್ಣ ತೆಗೆದುಹಾಕಲಾಗಿತ್ತು. ಈ ಶೇರುಗಳನ್ನು ಪ್ರತಿ ಶೇರಿಗೆ ₹6ರಂತೆ ಮೌಲ್ಯ ನಿಗಧಿ ಮಾಡಿದೆ ಮತ್ತು ಪಾಲುದಾರರಿಗೆ ಅವರ ಲಾಭ ಹಂಚಿಕೆಯ ಅನುಪಾತದಂತೆ ಹಂಚಲಾಗಿದೆ.

9. ಎಲ್ಲಾ ಪಾಲುದಾರರು ಸಂಸ್ಥೆಯನ್ನು ವಿಸರ್ಜಿಸಲು ಅಪೇಕ್ಷಿಸಿದ್ದಾರೆ. ಯಾಸ್ತಿನ್, ಒಬ್ಬ ಪಾಲುದಾರಳು ತನ್ನ ಸಾಲ ₹ 2,00,000ವನ್ನು ಪಾಲುದಾರರಿಗೆ ಬಂಡವಾಳಗಳನ್ನು ಪಾವತಿಸುವುದಕ್ಕಿಂತ ಮೊದಲು ಪಾವತಿಸಬೇಕೆಂದು ಬಯಸಿದ್ದಾಳೆ ಆದರೆ ಅಮಾರ್ಟ್, ಇನ್ನೊಬ್ಬ ಪಾಲುದಾರ, ಯಾಸ್ತಿನ್‌ಗೆ ಸಾಲ ಪಾವತಿಸುವುದಕ್ಕೆ ಮೊದಲು, ಬಂಡವಾಳಗಳನ್ನು ಪಾವತಿಸಿಬೇಕು ಎನ್ನುತ್ತಾನೆ. ಕಾರಣಗಳನ್ನು ನೀಡಿ, ಬಿನ್ನಾಭಿಪ್ರಾಯವನ್ನು ಪರಿಹರಿಸುವಂತೆ ನಿಮ್ಮನ್ನು ಕೇಳಲಾಗಿದೆ.

10. ಸಂಸ್ಥೆಯ ವಿಸರ್ಜನೆಯ ವೇಳೆ ವಿವಿಧ ಆಸ್ತಿಗಳನ್ನು (ನಗದು ಹೊರತುಪಡಿಸಿ) ಮತ್ತು ಮೂರನೇ ವ್ಯಕ್ತಿಗಳ ಹೊಣೆಗಾರಿಕೆಗಳನ್ನು ವಿಲೇವಾರಿ ಖಾತೆಗೆ ವರ್ಗಾವಣೆ ಮಾಡಿದ ಮೇಲೆ, ಈ ಕೆಳಗಿನ ವಹಿವಾಟುಗಳಿಗೆ ಯಾವ ರೋಜು ದಾಖಲೆಗಳನ್ನು ಬರೆಯುವಿರಿ:

    1. ಆರತಿಯವರು ₹ 80,000 ಪುಸ್ತಕ ಮೌಲ್ಯದ ದಾಸ್ತಾನನ್ನು ₹ 68,000ಕ್ಕೆ ಪಡೆದುಕೊಂಡರು.
    2. ಒಂದು ದಾಖಲಿಸದ ಬೈಕು ₹ 40,000 ಇದ್ದು, ಅದನ್ನು ಕರೀಂ ಅವರು ತೆಗೆದುಕೊಂಡರು.
    3. ಸಂಸ್ಥೆ ಕಾರ್ಮಿಕರಿಗೆ ₹ 40,000 ಪರಿಹಾರ ಪಾವತಿಸಿತು.
    4. ₹ 36,000ದ ಸಾಹುಕಾರರನ್ನು 15% ಸೋಡಿಗೆ ಇತ್ಯರ್ಥಪಡಿಸಲಾಯಿತು.
    5. ವಿಲೇವಾರಿಯಿಂದ ಉಂಟಾದ ನಷ್ಟ ₹ 42,000ವನ್ನು ಪಾಲುದಾರರಾದ ಆರತಿ ಮತ್ತು ಕರೀಂ ರವರಿಗೆ 3:4 ಅನುಪಾತದಲ್ಲಿ ಹಂಚಲಾಯಿತು.

11. ರೋಸ್ ಮತ್ತು ಲಿಲ್ಲಿ 2 : 3 ಅನುಪಾತದಲ್ಲಿ ಲಾಭ ಹಂಚಿಕೊಳ್ಳುವ ಪಾಲುದಾರರಾಗಿದ್ದರು. ಮಾರ್ಚ್ 31, 2014ರಂದು ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿತ್ತು:

**ಮಾರ್ಚ್ 31, 2014ರಂದು ಇದ್ದಂತೆ ರೋಸ್ ಮತ್ತು ಲಿಲ್ಲಿ ಅವರ ಅಢಾವೆ ಪತ್ರಿಕೆ;**

| ಹೊಣೆಗಾರಿಕೆಗಳು | ಮೊತ್ತ ₹ | ಆಸ್ತಿಗಳು | | ಮೊತ್ತ ₹ |
|---|---|---|---|---|
| ಸಾಹುಕಾರರು | 40,000 | ನಗದು | | 16,000 |
| ಲಿಲ್ಲಿಯ ಸಾಲ | 32,000 | ಸಾಲಗಾರರು | 80,000 | |
| ಲಾಭ ಮತ್ತು ನಷ್ಟ | 50,000 | ಸಂಶಯಾಸ್ಪದ ಸಾಲಗಳಿಗೆ | | |
| ಬಂಡವಾಳಗಳು: | | ತೆಗೆದಿರಿಸಿದ್ದು | 3,600 | 76,400 |
| ಲಿಲ್ಲಿ | 1,60,000 | ದಾಸ್ತಾನು | | 1,09,600 |
| ರೋಸ್ | 2,40,000 | ಬರತಕ್ಕ ಹುಂಡಿಗಳು | | 40,000 |
| | | ಕಟ್ಟಡಗಳು | | 2,80,000 |
| | **5,22,000** | | | **5,22,000** |

ಮೇಲಿನ ದಿನಾಂಕದಂದು ಸಂಸ್ಥೆಯನ್ನು ವಿಸರ್ಜಿಸಿಬೇಕೆಂದು ರೋಸ್ ಮತ್ತು ಲಿಲ್ಲಿ ನಿರ್ಧರಿಸಿದರು. ಆಸ್ತಿಗಳು (ಬರಬೇಕಾದ ಹುಂಡಿಗಳನ್ನು ಹೊರತುಪಡಿಸಿ) ₹ 4,84,000ಕ್ಕೆ ವಿಲೇವಾರಿಯಾದವು. ಬರಬೇಕಾದ ಹುಂಡಿಗಳನ್ನು ರೋಸ್ ₹ 30,000ಕ್ಕೆ ತೆಗೆದುಕೊಂಡರು. ಸಾಹುಕಾರರು ₹ 38,000 ಪಡೆಯಲು ಒಪ್ಪಿದರು. ವಿಲೇವಾರಿ ವೆಚ್ಚ ₹ 2,400 ಸಂಸ್ಥೆಯ ಹಣದಿಂದ ಖರೀದಿಸಿದ್ದ ಒಂದು ಮೋಟಾರ್ ಸೈಕಲ್ ಇದೆ, ಆದರೆ ಸಂಸ್ಥೆಯ ಪುಸ್ತಕಗಳಲ್ಲಿ ಅದನ್ನು ತೋರಿಸಿಲ್ಲ. ಅದನ್ನು ₹ 10,000ಕ್ಕೆ ಮಾರಲಾಯಿತು. ಬಾಕಿ ವಿದ್ಯುತ್ ಬಿಲ್ಲಿಗೆ ಸಂಬಂಧಿಸಿದ ಒಂದು ₹5,000ದ ಅನಿಶ್ಚಿತ ಹೊಣೆಗಾರಿಕೆ ಇದೆ. ಬರತಕ್ಕ ಹುಂಡಿಗಳನ್ನು ರೋಸ್‌ರವರು ₹ 33,000ಕ್ಕೆ ತೆಗೆದುಕೊಂಡರು.

ವಿಲೇವಾರಿ ಖಾತೆ, ಪಾಲುದಾರರ ಬಂಡವಾಳ ಖಾತೆ ಸಾಲದ ಖಾತೆ ಮತ್ತು ನಗದು ಖಾತೆಗಳನ್ನು ತೋರಿಸಿ.

(**ಉತ್ತರ**: ವಿಲೇವಾರಿ ಲಾಭ ₹ 15,600. ನಗದು ಖಾತೆಯ ಒಟ್ಟು ₹ 5,10,000).

12. ಶಿಲ್ಪ, ಮೀನಾ ಮತ್ತು ನಂದ ಅವರ ಪಾಲುದಾರಿಕೆಯನ್ನು ಮಾರ್ಚ್ 31, 2014ರಂದು ವಿಸರ್ಜಿಸಿಲು ನಿರ್ಧರಿಸಿದರು. ಅವರ ಲಾಭ ಹಂಚಿಕೆಯ ಅನುಪಾತ 3 : 2: 1 ಮತ್ತು ಅಢಾವೆ ಪತ್ರಿಕೆ ಈ ಕೆಳಗಿನಂತಿತ್ತು:

**ಮಾರ್ಚ್ 31, 2014ರಂದು ಇದ್ದಂತೆ ಶಿಲ್ಪ, ಮೀನಾ ಮತ್ತು ನಂದಾ ಅವರ ಅಢಾವೆ ಪತ್ರಿಕೆ;**

| ಹೊಣೆಗಾರಿಕೆಗಳು | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|
| ಬಂಡವಾಳಗಳು: | | ಭೂಮಿ | 81,000 |
| ಶಿಲ್ಪ | 80,000 | ದಾಸ್ತಾನು | 56,760 |
| ಮೀನಾ | 40,000 | ಸಾಲಗಾರರು | 18,600 |
| ಬ್ಯಾಂಕು ಸಾಲ | 20,000 | ನಂದಾ ಅವರ ಬಂಡವಾಳ | 23,000 |
| ಸಾಹುಕಾರರು | 37,000 | ನಗದು | 10,840 |
| ಸಂಶಯಾಸ್ಪದ ಸಾಲಗಳಿಗೆ ತೆಗೆದಿರಿಸಿದ್ದು | 1,200 | | |
| ಸಾಮಾನ್ಯ ಮೀಸಲು | 12,000 | | |
| | 1,90,200 | | 1,90,200 |

₹ 41,660 ಮೌಲ್ಯದ ದಾಸ್ತಾನನ್ನು ಶಿಲ್ಪ ₹ 35,000ಕ್ಕೆ ತೆಗೆದುಕೊಂಡರು ಮತ್ತು ಬ್ಯಾಂಕು ಸಾಲ ಪಾವತಿಸುವುದಾಗಿ ವಹಿಸಿಕೊಂಡರು. ಉಳಿದ ದಾಸ್ತಾನನ್ನು ₹ 14,000ಕ್ಕೆ ಮಾರಲಾಯಿತು ಮತ್ತು ₹ 10,000ಮೌಲ್ಯದ ಸಾಲಗಾರರಿಂದ ₹ 8,000 ಬಂದಿದೆ. ಭೂಮಿಯನ್ನು ₹ 1,10,000ಕ್ಕೆ ಮಾರಲಾಗಿದೆ. ಉಳಿದ ಸಾಲಗಾರರು ಪುಸ್ತಕ ಮೌಲ್ಯದ 50%ಗೆ ವಿಲೇವಾರಿಯಾಗಿದೆ. ವಿಲೇವಾರಿ ವೆಚ್ಚ ₹ 1,200 ಆಗಿದೆ. ಪುಸ್ತಕಗಳಲ್ಲಿ ದಾಖಲಿಸಿಲ್ಲದ ₹ 6,000 ಮೌಲ್ಯದ ಒಂದು ಬೆರಳಚ್ಚು ಯಂತ್ರ ಇತ್ತು, ಅದನ್ನು ಒಬ್ಬ ಸಾಹುಕಾರ ಅದೇ ಮೌಲ್ಯಕ್ಕೆ ತೆಗೆದುಕೊಂಡನು. ಈ ಮೇಲಿನ ವಿವರಗಳಿಂದ ವಿಲೇವಾರಿ ಖಾತೆ, ಪಾಲುದಾರರ ಬಂಡವಾಳ ಖಾತೆ ಮತ್ತು ನಗದು ಖಾತೆಯನ್ನು ತಯಾರಿಸಿ.

(**ಉತ್ತರ:** ವಿಲೇವಾರಿಯಿಂದ ಲಾಭ ₹ 20,940, ನಗದು ಖಾತೆಯ ಒಟ್ಟು ₹ 1,64,650)

13. ಸುರ್ಜಿತ್ ಮತ್ತು ರಾಹಿ 3:2 ಅನುಪಾತದಲ್ಲಿ ಲಾಭ (ನಷ್ಟಗಳನ್ನು) ಹಂಚಿಕೊಳ್ಳುತ್ತಿದ್ದರು. ಮಾರ್ಚ್ 31, 2014 ರಂದು ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ:

**ಸುರ್ಜಿತ್ ಮತ್ತು ರಾಹಿ ಅವರ ಅಢಾವೆ ಪತ್ರಿಕೆ; ಮಾರ್ಚ್ 31, 2014 ರಂದು ಇದ್ದಂತೆ**

| ಹೊಣೆಗಾರಿಕೆಗಳು | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|
| ಸಾಹುಕಾರರು | 38,000 | ಬ್ಯಾಂಕು | 11,500 |
| ಶ್ರೀಮತಿ ಸುರ್ಜಿತ್‌ರ ಸಾಲ | 10,000 | ದಾಸ್ತಾನು | 6,000 |
| ಮೀಸಲು | 15,000 | ಸಾಲಗಾರರು | 19,000 |
| ರಾಹಿರವರ ಸಾಲ | 5,000 | ಪೀಠೋಪಕರಣ | 4,000 |
| ಬಂಡವಾಳಗಳು: | | ಸ್ಥಾವರ | 28,000 |
| ಸುರ್ಜಿತ್ | 10,000 | ಹೂಡಿಕೆ | 10,000 |
| ರಾಹಿ | 8,000 | ಲಾಭ ಮತ್ತು ನಷ್ಟ | 7,500 |
| | 86,000 | | 86,000 |

**ಮಾರ್ಚ್ 31, 2014ರಂದು, ಈ ಕೆಳಗಿನ ನಿಬಂಧನೆಗಳಂತೆ ಸಂಸ್ಥೆಯನ್ನು ವಿಸರ್ಜಿಸಲಾಯಿತು;**

1. ಸುರ್ಜಿತ್‌ರವರು ಹೂಡಿಕೆಗಳನ್ನು ₹ 8,000 ತೆಗೆದುಕೊಳ್ಳಲು ಒಪ್ಪಿದನು ಮತ್ತು ಶ್ರೀಮತಿ ಸುರ್ಜಿತ್‌ರ ಸಾಲ ಪಾವತಿಸುವುದಾಗಿ ಒಪ್ಪಿದನು.
2. ಇತರೆ ಆಸ್ತಿಗಳು ಈ ಕೆಳಗಿನಂತೆ ವಿಲೇವಾರಿ ಆದವು:

| | |
|---|---|
| ದಾಸ್ತಾನು | ₹ 5,000 |
| ಸಾಲಗಾರರು | ₹ 18,500 |
| ಪೀಠೋಪಕರಣ | ₹ 4,500 |
| ಸ್ಥಾವರ | ₹ 25,000 |

3. ವಿಲೇವಾರಿ ಖರ್ಚುಗಳು ₹ 1,600
4. ಸಾಹುಕಾರರು, ಅಂತಿಮ ಇತ್ಯರ್ಥಕ್ಕಾಗಿ ₹ 37,000 ಪಡೆಯಲು ಒಪ್ಪಿದರು.

ವಿಲೇವಾರಿ ಖಾತೆ, ಪಾಲುದಾರರ ಬಂಡವಾಳ ಖಾತೆ ಮತ್ತು ಬ್ಯಾಂಕು ಖಾತೆಯನ್ನು ತಯಾರಿಸಿ.

(**ಉತ್ತರ:** ವಿಲೇವಾರಿಯಿಂದ ನಷ್ಟ ₹ 6,600, ಬ್ಯಾಂಕು ಖಾತೆಯ ಒಟ್ಟು ₹ 64,500)

14. ರೀಟಾ, ಗೀತಾ ಮತ್ತು ಆಶಿಶ್ 3 : 2 : 1 ಅನುಪಾತದಲ್ಲಿ ಲಾಭ/ನಷ್ಟಗಳನ್ನು ಹಂಚಿಕೊಳ್ಳುತ್ತಿದ್ದ ಪಾಲುದಾರರಾಗಿದ್ದರು. ಮಾರ್ಚ್ 31, 2014ರಂದು ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿತ್ತು:

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|---|
| ಬಂಡವಾಳಗಳು: | | | ನಗದು | 22,500 |
| ರೀಟಾ | 80,000 | | ಸಾಲಗಾರರು | 52,300 |
| ಗೀತಾ | 50,000 | | ದಾಸ್ತಾನು | 36,000 |
| ಆಶಿಶ್ | 30,000 | 1,60,000 | ಹೂಡಿಕೆ | 69,000 |
| ಸಾಹುಕಾರರು | | 65,000 | ಸ್ಥಾವರ | 91,200 |
| ಕೊಡತಕ್ಕ ಹುಂಡಿಗಳು | | 26,000 | | |
| ಸಾಮಾನ್ಯ ಮೀಸಲು | | 20,000 | | |
| | | **2,71,000** | | **2,71,000** |

ಮೇಲೆ ತಿಳಿಸಿದ ದಿನಾಂಕದಂದು ಸಂಸ್ಥೆಯನ್ನು ವಿಸರ್ಜಿಸಲಾಯಿತು:

1. ಆಸ್ತಿಗಳನ್ನು ವಿಲೇವಾರಿ ಮಾಡಲು ರೀಟಾ ಅವರನ್ನು ನೇಮಿಸಲಾಯಿತು. ರೀಟಾ ಅವರು ಆಸ್ತಿಗಳ (ನಗದು ಹೊರತುಪಡಿಸಿ) ಮಾರಾಟ ಬೆಲೆಯ ಮೇಲೆ 5% ಕಮಿಷನ್ ಪಡೆದರು ಮತ್ತು ಎಲ್ಲಾ ವಿಲೇವಾರಿ ಖರ್ಚುಗಳನ್ನು ಭರಿಸಿದರು.
2. ಆಸ್ತಿಗಳು ಈ ಕೆಳಗಿನಂತೆ ವಿಲೇವಾರಿ ಆದವು:

   ಸಾಲಗಾರರು ₹ 30,000

   ದಾಸ್ತಾನು ₹ 26,000

   ಸ್ಥಾವರ ₹ 42,750
3. ಹೂಡಿಕೆಗಳು ಪುಸ್ತಕ ಮೌಲ್ಯದ 85% ಗೆ ವಿಲೇವಾರಿ ಆದವು.
4. ವಿಲೇವಾರಿ ಖರ್ಚುಗಳು ₹ 4100.
5. ಸಂಸ್ಥೆ ಬಾಕಿ ಸಂಬಳ ₹ 7200 ಕೊಡಬೇಕಾಗಿತ್ತು. ಅದಕ್ಕಾಗಿ ಯಾವುದೇ ಮೀಸಲನ್ನು ಈ ಹಿಂದೆ ಒದಗಿಸಿರಲಿಲ್ಲ.
6. ಬ್ಯಾಂಕಿನಲ್ಲಿ ಸೋಡಿಕರಿಸಿದ್ದ ಹುಂಡಿಗಳಿಗೆ ಸಂಬಂದಿಸಿದ ಒಂದು ಅನಿಶ್ಚಿತ ಹೊಣೆಗಾರಿಕೆ ₹ 9,800 ಪಾವತಿಸಲಾಯಿತು. ವಿಲೇವಾರಿ ಖಾತೆ, ಪಾಲುದಾರರ ಬಂಡವಾಳ ಖಾತೆ ಮತ್ತು ನಗದು ಖಾತೆಯನ್ನು ತಯಾರಿಸಿ.

(**ಉತ್ತರ:** ವಿಲೇವಾರಿಯಿಂದ ನಷ್ಟ ₹ 1,29,455, ನಗದು ಖಾತೆಯ ಒಟ್ಟು ಮೊತ್ತ ₹ 1,65,705)

15. ಅನೂಪ್ ಮತ್ತು ಸುಮಿತ್ ಒಂದು ಪಾಲುದಾರಿಕೆ ಸಂಸ್ಥೆಯಲ್ಲಿ ಸಮ ಪಾಲುದಾರರಾಗಿದ್ದರು. ಅವರು ಡಿಸೆಂಬರ್ 31, 2014ರಂದು ಪಾಲುದಾರಿಕೆಯನ್ನು ವಿಸರ್ಜಿಸಲು ನಿರ್ಧರಿಸಿದರು. ಅಂದು ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ:

**ಡಿಸೆಂಬರ್ 31, 2014ರಂದು ಇದ್ದಂತೆ ಅನೂಪ್ ಮತ್ತು ಸುಮಿತ್ ರವರ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|---|
| ಸಾಹುಕಾರರು | | 27,000 | ಬ್ಯಾಂಕಿನಲ್ಲಿ ನಗದು | 11,000 |
| ಮೀಸಲು ನಿಧಿ | | 10,000 | ಸಾಲಗಾರರು | 12,000 |
| ಸಾಲ | | 40,000 | ಸ್ಥಾವರ | 47,000 |
| ಬಂಡವಾಳ: | | | ದಾಸ್ತಾನು | 42,000 |
| ಅನೂಪ್ | 60,000 | | ಗೇಣಿಯಮೇಲೆ ಪಡೆದ ಭೂಮಿ | 60,000 |
| ಸುಮಿತ್ | 60,000 | 1,20,000 | ಪೀಠೋಪಕರಣ | 25,000 |
| | | **1,97,000** | | **1,97,000** |

ಆಸ್ತಿಗಳನ್ನು ಈ ಕೆಳಗಿನಂತೆ ವಿಲೇವಾರಿ ಮಾಡಿದೆ:

| | |
|---|---|
| ಗೇಣಿಮೇಲೆ ಪಡೆದ ಭೂಮಿ | ₹ 72,000 |
| ಪೀಠೋಪಕರಣ | ₹ 22,500 |
| ದಾಸ್ತಾನು | ₹ 40,500 |
| ಸ್ಥಾವರ | ₹ 48,000 |
| ಸಾಲಗಾರರು | ₹ 10,500 |

ಸಾಹುಕಾರರಿಗೆ ₹25,500 ಪಾವತಿಸಿ, ಪೂರ್ತಿ ಇತ್ಯರ್ಥಪಡಿಸಲಾಯಿತು. ವಿಲೇವಾರಿ ಖರ್ಚುಗಳು ₹2,500. ವಿಲೇವಾರಿ ಖಾತೆ, ಬ್ಯಾಂಕು ಖಾತೆ, ಪಾಲುದಾರರ ಬಂಡವಾಳ ಖಾತೆಗಳನ್ನು ತಯಾರಿಸಿ ಸಂಸ್ಥೆಯ ಪುಸ್ತಕಗಳನ್ನು ಕೊನೆಗೊಳಿಸಿ.

(**ಉತ್ತರ:** ವಿಲೇವಾರಿ ಲಾಭ ₹ 46,500)

16. ಆಶು ಮತ್ತು ಹರೀಶ್ 3:2 ಅನುಪಾತದಲ್ಲಿ ಲಾಭ ಮತ್ತು ನಷ್ಟಗಳನ್ನು ಹಂಚಿಕೊಳ್ಳುವ ಪಾಲುದಾರರಾಗಿದ್ದಾರೆ. ಅವರು ಸಂಸ್ಥೆಯನ್ನು ಡಿಸೆಂಬರ್ 31, 2014ರಂದು ವಿಸರ್ಜಿಸಲು ನಿರ್ಧರಿಸಿದರು. ಮೇಲಿನ ದಿನಾಂಕದಂದು ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ.

**ಆಶು ಮತ್ತು ಹರೀಶ್‌ರವರ ಅಢಾವೆ ಪತ್ರಿಕೆ ಡಿಸೆಂಬರ್ 31, 2014ರಂದು ಇದ್ದಂತೆ**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|---|
| ಬಂಡವಾಳಗಳು: | | | ಕಟ್ಟಡ | 80,000 |
| ಆಶು | 1,08,000 | | ಯಂತ್ರೋಪಕರಣ | 70,000 |
| ಹರೀಶ್ | 54,000 | 1,62,000 | ಪೀಠೋಪಕರಣ | 14,000 |
| ಸಾಹುಕಾರರು | | 88,000 | ದಾಸ್ತಾನು | 20,000 |
| ಬ್ಯಾಂಕು ಮೀರೆಳೆತ | | 50,000 | ಹೂಡಿಕೆಗಳು | 60,000 |
| | | | ಸಾಲಗಾರರು | 48,000 |
| | | | ಕೈಯಲ್ಲಿ ನಗದು | 8,000 |
| | | **3,00,000** | | **3,00,000** |

ಆಶು ಕಟ್ಟಡಗಳನ್ನು ₹ 95,000ಕ್ಕೆ ತೆಗೆದುಕೊಂಡನು ಮತ್ತು ಯಂತ್ರೋಪಕರಣ ಹಾಗೂ ಪೀಠೋಕರಣವನ್ನು ಹರೀಶ್ ₹ 80,000ಕ್ಕೆ ತೆಗೆದುಕೊಂಡನು. ಆಶುರವರು ಸಾಹುಕಾರರಿಗೆ ಪಾವತಿಸುವುದಾಗಿ ಒಪ್ಪಿಕೊಂಡಿದ್ದಾರೆ ಮತ್ತು ಹರೀಶ್ ಬ್ಯಾಂಕ್ ಮೀರೆಳೆತವನ್ನು ಪಾವತಿಸುವುದಾಗಿ ಒಪ್ಪಿದ್ದಾರೆ. ದಾಸ್ತಾನು ಮತ್ತು ಹೂಡಿಕೆಗಳನ್ನು ಪಾಲುದಾರರಿಬ್ಬರೂ ಲಾಭ ಹಂಚಿಕೆಯ ಅನುಪಾತದಲ್ಲಿ ತೆಗೆದುಕೊಂಡಿದ್ದಾರೆ. ಸಾಲಗಾರರಿಂದ ₹ 46,000 ವಸೂಲಾಗಿದೆ. ವಿಲೇವಾರಿ ವೆಚ್ಚಗಳು ₹ 3,000. ಅವಶ್ಯಕ ಖಾತೆಗಳನ್ನು ತಯಾರಿಸಿ.

(**ಉತ್ತರ:** ವಿಲೇವಾರಿಯಿಂದ ನಷ್ಟ ₹ 14,000, ನಗದು/ಬ್ಯಾಂಕು ಒಟ್ಟು ₹ 59,600)

17. ಸಂಜಯ್, ತರುಣ್ ಮತ್ತು ವಿನೀತ್ 3:2:1 ಅನುಪಾತದಲ್ಲಿ ಲಾಭ ಹಂಚಿಕೊಳ್ಳುವ ಪಾಲುದಾರರು, ಡಿಸೆಂಬರ್ 31, 2012ರಂದು ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ:

**ಡಿಸೆಂಬರ್ 31, 2012ರಂದು ಇದ್ದಂತೆ ಸಂಜಯ್, ತರುಣ್ ಮತ್ತು ವಿನೀತ್‌ರವರ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|---|
| ಬಂಡವಾಳಗಳು: | | | ಸ್ಥಾವರ | 90,000 |
| ಸಂಜಯ್ | 1,00,000 | | ಸಾಲಗಾರರು | 60,000 |
| ತರುಣ್ | 1,00,000 | | ಪೀಠೋಪಕರಣ | 32,000 |
| ವಿನೀತ್ | 70,000 | 2,70,000 | ದಾಸ್ತಾನು | 60,000 |
| ಸಾಹುಕಾರರು | | 80,000 | ಹೂಡಿಕೆಗಳು | 70,000 |
| ಕೊಡತಕ್ಕ ಹುಂಡಿಗಳು | | 30,000 | ಬರತಕ್ಕ ಹುಂಡಿಗಳು | 36,000 |
| | | | ಕೈಯಲ್ಲಿ ನಗದು | 32,000 |
| | | **3,80,000** | | **3,80,000** |

ಈ ದಿನಾಂಕದಂದು ಸಂಸ್ಥೆಯನ್ನು ವಿಸರ್ಜಿಸಲಾಯಿತು. ಆಸ್ತಿಗಳನ್ನು ವಿಲೇವಾರಿ ಮಾಡಲು ಸಂಜಯ್‌ನನ್ನು ನೇಮಿಸಲಾಯಿತು. ಸಂಜಯ್ ಆಸ್ತಿಗಳ (ನಗದು ಹೊರತುಪಡಿಸಿ) ಮಾರಾಟದ ಮೇಲೆ 6% ಕಮಿಷನ್ ಪಡೆದನು ಮತ್ತು ಎಲ್ಲಾ ವಿಲೇವಾರಿ ಖರ್ಚುಗಳನ್ನು ಭರಿಸಿದನು.

ಸಂಜಯ್ ಆಸ್ತಿಗಳನ್ನು ಈ ಕೆಳಗಿನಂತೆ ವಿಸರ್ಜಿಸಿದನು:

ಸ್ಥಾವರ ₹ 72,000, ಸಾಲಗಾರರು ₹ 54,000, ಪೀಠೋಪಕರಣ ₹ 18,000, ದಾಸ್ತಾನು ಪುಸ್ತಕ ಮೌಲ್ಯದ 90% ಹೂಡಿಕೆಗಳು ₹ 76,000 ಮತ್ತು ಬರತಕ್ಕ ಹುಂಡಿಗಳು ₹ 31,000 ವಿಲೇವಾರಿ ವೆಚ್ಚಗಳು ₹ 4,500. ವಿಲೇವಾರಿ ಖಾತೆ, ಬಂಡವಾಳ ಖಾತೆಗಳು ಮತ್ತು ನಗದು ಖಾತೆ ತಯಾರಿಸಿ.

(**ಉತ್ತರ:** ವಿಲೇವಾರಿಯಿಂದ ನಷ್ಟ ₹ 61,300, ನಗದು ಖಾತೆಯ ಒಟ್ಟು ₹ 3,37,000)

18. ಡಿಸೆಂಬರ್ 31, 2014ರಂದು ಇದ್ದಂತೆ ಗುಪ್ತಾ ಮತ್ತು ಶರ್ಮರವರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ:

**ಡಿಸೆಂಬರ್ 31, 2014ರಂದು ಇದ್ದಂತೆ ಗುಪ್ತಾ ಮತ್ತು ಶರ್ಮರವರ ಅಢಾವೆ ಪತ್ರಿಕೆ:**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|---|
| ಸಾಹುಕಾರರು: | | 38,000 | ಬ್ಯಾಂಕಿನಲ್ಲಿ ನಗದು | 12,500 |
| ಶ್ರೀಮತಿ ಗುಪ್ತಾರವರ ಸಾಲ | | 20,000 | ಸಾಲಗಾರರು | 55,000 |
| ಶ್ರೀಮತಿ ಶರ್ಮಾರವರ ಸಾಲ | | 30,000 | ದಾಸ್ತಾನು | 44,000 |
| ಮೀಸಲು ನಿಧಿ | | 6,000 | ಬರತಕ್ಕ ಹುಂಡಿಗಳು | 19,000 |
| ಸಂಶಯಾಸ್ಪದ ಸಾಲಗಳಿಗೆ | | | ಯಂತ್ರೋಪಕರಣ | 52,000 |
| ತೆಗೆದಿರಿಸಿದ್ದು | | 4,000 | ಹೂಡಿಕೆ | 38,500 |
| ಬಂಡವಾಳಗಳು: | | | ಸ್ಥಿರ ಅಳವಡಿಕೆಗಳು | 27,000 |
| ಗುಪ್ತ | 90,000 | | | |
| ಶರ್ಮಾ | 60,000 | 1,50,000 | | |
| | | **2,48,000** | | **2,48,000** |

18. ಡಿಸೆಂಬರ್ 31, 2014ರಂದು ಸಂಸ್ಥೆಯನ್ನು ವಿಸರ್ಜಿಸಲಾಯಿತು ಮತ್ತು ಕೆಳಗಿನಂತೆ ಆಸ್ತಿಗಳನ್ನು ವಿಲೇವಾರಿ ಮಾಡಲಾಯಿತು ಮತ್ತು ಹೊಣೆಗಾರಿಕೆಗಳನ್ನು ಇತ್ಯರ್ಥಪಡಿಸಲಾಯಿತು:

(ಎ) ಆಸ್ತಿಗಳ ವಿಲೇವಾರಿ ಈ ಕೆಳಗಿನಂತಿದೆ:

| | |
|---|---|
| ಸಾಲಗಾರರು | ₹ 52,000 |
| ದಾಸ್ತಾನು | ₹ 42,000 |
| ಬರತಕ್ಕ ಹುಂಡಿಗಳು | ₹ 16,000 |
| ಯಂತ್ರೋಪಕರಣ | ₹ 49,000 |

(ಬಿ) ಗುಪ್ತಾರವರು ಹೂಡಿಕೆಗಳನ್ನು ₹ 36,000ಕ್ಕೆ ತೆಗೆದುಕೊಂಡರು ಮತ್ತು ಶ್ರೀಮತಿ ಗುಪ್ತಾರವರ ಸಾಲ ಪಾವತಿಸಲು ಒಪ್ಪಿದರು.

(ಸಿ) ಸಾಹುಕಾರರಿಗೆ 3% ಸೋಡಿಯನ್ನು ಕಳೆದು ಪಾವತಿಸಲಾಯಿತು.

(ಡಿ) ಖರ್ಚಾದ ವಿಲೇವಾರಿ ವೆಚ್ಚಗಳು ₹ 1200.

ವಿಸರ್ಜನೆಯ ವೇಳೆ ಮಾಡಬೇಕಾದ ರೋಜು ದಾಖಲೆಗಳನ್ನು ಬರೆಯಿರಿ ಮತ್ತು ವಿಲೇವಾರಿ ಖಾತೆ, ಬ್ಯಾಂಕು ಖಾತೆ ಮತ್ತು ಪಾಲುದಾರರ ಬಂಡವಾಳ ಖಾತೆಗಳನ್ನು ತಯಾರಿಸಿ.

(**ಉತ್ತರ:** ವಿಲೇವಾರಿಯಿಂದ ಲಾಭ ₹ 19,660, ನಗದು ಖಾತೆಯ ಒಟ್ಟು ಮೊತ್ತ ₹ 1,88,500)

19. ಅಶೋಕ್, ಬಾಬು ಮತ್ತು ಚೇತನ್‌ರವರು ಕ್ರಮವಾಗಿ $\frac{1}{2}, \frac{1}{3}, \frac{1}{6}$ ಪ್ರಮಾಣದಲ್ಲಿ ಲಾಭ ಹಂಚಿಕೊಳ್ಳುವ ಪಾಲುದಾರಿಕೆಯಲ್ಲಿದ್ದರು.ಅವರು ಪಾಲುದಾರಿಕೆಯನ್ನು ಡಿಸೆಂಬರ್ 31, 2014ರಂದು ವಿಸರ್ಜಿಸಿದರು, ಆ ದಿನದಂದು ಸಂಸ್ಥೆಯ ಅಢಾವೆ ಪತ್ರಿಕೆ ಈ ಕೆಳಗಿನಂತಿತ್ತು:

**ಡಿಸೆಂಬರ್ 31, 2014ರಂದು ಇದ್ದಂತೆ ಅಶೋಕ್, ಬಾಬು ಮತ್ತು ಚೇತನ್‌ರವರ ಅಢಾವೆ ಪತ್ರಿಕೆ:**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|---|
| ಸಾಹುಕಾರರು | | 20,000 | ಬ್ಯಾಂಕು | 7,500 |
| ಕೊಡತಕ್ಕ ಹುಂಡಿಗಳು | | 25,500 | ಸಾಲಗಾರರು | 58,000 |
| ಬಾಬುರವರ ಸಾಲ | | 30,000 | ದಾಸ್ತಾನು | 39,500 |
| ಬಂಡವಾಳಗಳು: | | | ಯಂತ್ರೋಪಕರಣ | 48,000 |
| ಅಶೋಕ್ | 70,000 | | ಹೂಡಿಕೆಗಳು | 42,000 |
| ಬಾಬು | 55,000 | | ನಿರಾಪೇಕ್ಷ ಸ್ವತ್ತು | 50,500 |
| ಚೇತನ್ | 27,000 | 1,52,000 | | |
| ಚಾಲ್ತಿ ಖಾತೆಗಳು: | | | | |
| ಅಶೋಕ್ | 10,000 | | | |
| ಬಾಬು | 5,000 | | | |
| ಚೇತನ್ | 3,000 | 18,000 | | |
| | | **2,45,500** | | **2,45,500** |

ಯಂತ್ರೋಪಕರಣವನ್ನು ಬಾಬು ₹ 45,000ಕ್ಕೆ ತೆಗೆದುಕೊಂಡನು. ಅಶೋಕ್ ಹೂಡಿಕೆಗಳನ್ನು ₹ 40,000ಕ್ಕೆ ತೆಗೆದುಕೊಂಡನು ಮತ್ತು ನಿರಾಪೇಕ್ಷ ಸ್ವತ್ತನ್ನು ₹ 55,000ಕ್ಕೆ ಚೇತನ್ ತೆಗೆದುಕೊಂಡನು, ಉಳಿದ ಆಸ್ತಿಗಳನ್ನು ಈ ಕೆಳಗಿನಂತೆ ವಿಲೇವಾರಿ ಮಾಡಿದೆ:

ಸಾಲಗಾರರು ₹ 56,500 ಮತ್ತು ದಾಸ್ತಾನು ₹ 36,500, ಸಾಹುಕಾರರನ್ನು 7% ಸೋಡಿಗೆ ಚುಕ್ತಾ ಮಾಡಿದೆ.

ಪುಸ್ತಕಗಳಲ್ಲಿ ದಾಖಲಿಸಿಲ್ಲದ ಒಂದು ಕಛೇರಿ ಗಣಕಯಂತ್ರ ₹ 9,000ಕ್ಕೆ ವಿಲೇವಾರಿ ಆಯಿತು. ವಿಲೇವಾರಿ ಖರ್ಚುಗಳು ₹ 3000 ಆಯಿತು.

ವಿಲೇವಾರಿ ಖಾತೆ, ಪಾಲುದಾರರ ಬಂಡವಾಳ ಖಾತೆ, ಬ್ಯಾಂಕು ಖಾತೆ ತಯಾರಿಸಿ.

(**ಉತ್ತರ:** ವಿಲೇವಾರಿಯಿಂದ ಲಾಭ ₹ 1200, ನಗದು ಖಾತೆಯ ಒಟ್ಟು ಮೊತ್ತ ₹ 1.34,100)

20. ಡಿಸೆಂಬರ್ 31, 2014ರಂದು, 5 : 3 ಅನುಪಾತದಲ್ಲಿ ಲಾಭ ಮತ್ತು ನಷ್ಟಗಳನ್ನು ಹಂಚಿಕೊಳ್ಳುತ್ತಿದ್ದ ತನು ಮತ್ತು ಮನುರವರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ:

**ಡಿಸೆಂಬರ್ 31, 2014ರಂದು ಇದ್ದಂತೆ, ತನು ಮತ್ತು ಮನುರವರ ಅಢಾವೆ ಪತ್ರಿಕೆ.**

| ಹೊಣೆಗಾರಿಕೆಗಳು | | ಮೊತ್ತ ₹ | ಆಸ್ತಿಗಳು | ಮೊತ್ತ ₹ |
|---|---|---|---|---|
| ಸಾಹುಕಾರರು | | 62,000 | ಬ್ಯಾಂಕಿನಲ್ಲಿ ನಗದು | 16,000 |
| ಕೊಡತಕ್ಕ ಹುಂಡಿಗಳು | | 32,000 | ಸಾಲಗಾರರು | 55,000 |
| ಬ್ಯಾಂಕು ಸಾಲ | | 50,000 | ದಾಸ್ತಾನು | 75,000 |
| ಮೀಸಲು ನಿಧಿ | | 16,000 | ಮೋಟಾರು ಕಾರು | 90,000 |
| ಬಂಡವಾಳಗಳು: | | | ಯಂತ್ರೋಪಕರಣ | 45,000 |
| ತನು | 1,10,000 | | ಹೂಡಿಕೆಗಳು | 70,000 |
| ಮನು | 90,000 | 2,00,000 | ಸ್ಥಿರ ಅಳವಡಿಕೆಗಳು | 9,000 |
| | | **3,60,000** | | **3,60,000** |

ಮೇಲ್ಕಂಡ ದಿನಾಂಕದಂದು ಸಂಸ್ಥೆಯನ್ನು ವಿಸರ್ಜಿಸಲಾಯಿತು ಮತ್ತು ಈ ಕೆಳಗಿನಂತೆ ಒಪ್ಪಂದ ಮಾಡಿಕೊಂಡಿದೆ: ತನು ಬ್ಯಾಂಕ್ ಸಾಲ ತೀರಿಸಲು ಒಪ್ಪಿದರು ಮತ್ತು ಸಾಲಗಾರರನ್ನು ತೆಗೆದುಕೊಂಡರು. ಸಾಹುಕಾರರು ದಾಸ್ತಾನು ಪಡೆದುಕೊಳ್ಳಲು ಒಪ್ಪಿಕೊಂಡರು ಮತ್ತು ಸಂಸ್ಥೆಗೆ ₹ 10,000 ಪಾವತಿಸಿದರು. ಮನು ಯಂತ್ರವನ್ನು ₹40,000ಕ್ಕೆ ತೆಗೆದುಕೊಂಡನು ಮತ್ತು ಕೊಡತಕ್ಕ ಹುಂಡಿಗಳನ್ನು 5% ಸೋಡಿಯಲ್ಲಿ ಪಾವತಿಸಲು ಒಪ್ಪಿದನು. ಮೋಟಾರು ಕಾರನ್ನು ತನು ₹ 60,000ಕ್ಕೆ ಪಡೆದುಕೊಂಡನು. ಹೂಡಿಕೆಗಳನ್ನು ₹ 76,000ಕ್ಕೆ ವಿಲೇವಾರಿ ಮಾಡಿದೆ ಮತ್ತು ಸ್ಥಿರ ಅಳವಡಿಕೆಗಳು ₹ 4,000ಕ್ಕೆ ವಿಲೇವಾರಿಯಾಗಿವೆ. ವಿಸರ್ಜನಾ ಖರ್ಚುಗಳು ₹ 2,200 ಆಗಿದೆ.

ವಿಲೇವಾರಿ ಖಾತೆ, ಬ್ಯಾಂಕು ಖಾತೆ, ಮತ್ತು ಪಾಲುದಾರರ ಬಂಡವಾಳ ಖಾತೆಗಳನ್ನು ತಯಾರಿಸಿ.

(**ಉತ್ತರ:** ವಿಲೇವಾರಿಯಿಂದ ನಷ್ಟ ₹ 37,600, ನಗದು ಖಾತೆಯ ಒಟ್ಟು ಮೊತ್ತ ₹ 1,06,000)

## ನಿಮ್ಮ ತಿಳುವಳಿಕೆಯ ಪರೀಕ್ಷೆಗೆ ಪರಿಶೀಲನಾ ಪಟ್ಟಿ

### ನಿಮ್ಮ ತಿಳುವಳಿಕೆಯನ್ನು ಪರೀಕ್ಷಿಸಿಕೊಳ್ಳಿ –I

1. ಸರಿ 2. ಸರಿ 3. ಸರಿ 4. ತಪ್ಪು 5. ಸರಿ 6. ಸರಿ 7. ಸರಿ 8. ತಪ್ಪು

### ನಿಮ್ಮ ತಿಳುವಳಿಕೆಯನ್ನು ಪರೀಕ್ಷಿಸಿಕೊಳ್ಳಿ – II

1. (ಸಿ) 2. (ಡಿ) 3. (ಬಿ) 4. (ಡಿ) 5. (ಸಿ) 6. (ಎ) 7. (ಬಿ) 8. (ಸಿ)

### ನಿಮ್ಮ ತಿಳುವಳಿಕೆಯನ್ನು ಪರೀಕ್ಷಿಸಿಕೊಳ್ಳಿ – III

1. ವಿಲೇವಾರಿ, ಖರ್ಚು
2. ಹೊರಗಿನ, ವಿಲೇವಾರಿ, ಜಮಾ,
3. ಲಾಭ ಹಂಚಿಕೆ ಅನುಪಾತ, ಬಂಡವಾಳ ಖಾತೆಗಳು,
4. ಜಮಾ
5. ಖರ್ಚು
6. ಸಾಹುಕಾರ,
7. ಪಾವತಿಸುವ, ವಿಲೇವಾರಿ
8. ವಿಲೇವಾರಿ, ಬಂಡವಾಳ
9. ದಾಖಲಿಸುವುದಿಲ್ಲ,
10. ಬಂಡವಾಳ

* * *